ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೬

ಅಶ್ವಮೇಧಖಂಡ

(ಅಧ್ಯಾಯಗಳು ೧—೩೭)

ಆಸ್ಥಾನ ಮಹಾವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು:

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೮

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೬

ಅಶ್ವಮೇಧಖಂಡ

(ಅಧ್ಯಾಯಗಳು ೧—೩೭)

ಆಸ್ಥಾನ ಮಹಾವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು :

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೮

ಪೀಠಿಕೆ

ಹತ್ತನೆಯದಾದ ಅಶ್ವಮೇಧಖಂಡವು ಗಾರ್ಗ್ಯಸಂಹಿತೆಯಲ್ಲಿ ಕೊನೆಯ ಖಂಡವಾಗಿರುವುದು. ಇದು ದೊಡ್ಡ ಖಂಡವಾದ್ದರಿಂದ ಎರಡು ಭಾಗಗಳಲ್ಲಿ ಮುದ್ರಿಸಲ್ಪಟ್ಟಿರುವುದು. ಇದರಲ್ಲಿ ಯಾದವೇಶ್ವರನಾದ ಉಗ್ರಸೇನಮಹಾರಾಜನು ಮಾಡಿದ ಅಶ್ವಮೇಧಯಾಗದ ವಿವರಣೆಯನ್ನೂ ಆ ಯಾಗದ ಪೂರ್ವಭಾವಿಯಾಗಿ ಪ್ರದ್ಯುಮ್ನಪುತ್ರನಾದ ಅನಿರುದ್ಧನು ಕೈಗೊಂಡ ದಿಗ್ವಿಜಯವರ್ಣನೆಯನ್ನೂ ವಿಸ್ತಾರವಾಗಿ ವಿವರಿಸಲಾಗಿದೆ. ಅಲ್ಲಲ್ಲಿ ಕೆಲವು ಉಪಾಖ್ಯಾನಗಳೂ ಇವೆ. ಕೃಷ್ಣಲೀಲಾವಿನೋದಗಳೂ, ರಾಸಕ್ರೀಡಾವರ್ಣನೆಯೂ ಹೃದಯಂಗಮವಾಗಿ ವರ್ಣಿತವಾಗಿವೆ. ಈ ಖಂಡದಲ್ಲಿ ಹೇಳಿರುವ ಶ್ರೀಕೃಷ್ಣಸಹಸ್ರನಾಮವನ್ನು ಅರ್ಥಸಹಿತವಾಗಿಯೂ, ಪೂಜಾಕಾಲಗಳಲ್ಲಿ ಪಠನಮಾಡಲು ಅನುಕೂಲವಾಗುವಂತೆ ಸಹಸ್ರನಾಮಾವಳಿಯನ್ನೂ ಸೇರಿಸಲಾಗಿದೆ. ಒಟ್ಟಿನಲ್ಲಿ ಈ ಗ್ರಂಥದ ಶೈಲಿಯು ಸರಳವಾಗಿಯೂ, ವಿಷಯನಿರೂಪಣೆಯು ಭಕ್ತಿಜನಕವಾಗಿಯೂ. ಹೃದಯಂಗಮವಾಗಿಯೂ ಇದೆ. ಈ ಗ್ರಂಥಪಠನದಿಂದ ಶ್ರೀಕೃಷ್ಣನ ಮಹಿಮೆಯು ಚೆನ್ನಾಗಿ ಮನದಟ್ಟಾಗುವುದಲ್ಲದೆ ಶ್ರೀಕೃಷ್ಣನಲ್ಲಿ ಭಕ್ತಿಯುಂಟಾಗಿ ಪರಮಾತ್ಮನ ಅನುಗ್ರಹವುಂಟಾಗುವುದರಲ್ಲಿ ಸಂದೇಹವಿಲ್ಲ.

ಇಂತಹ ಉತ್ಕೃಷ್ಟಗ್ರಂಥವನ್ನು ಸರ್ವಜನೋಪಯೋಗವಾಗುವಂತೆ ಸರಳವಾದ ಕನ್ನಡ ಭಾಷೆಗೆ ಪರಿವರ್ತನೆಮಾಡಿಸಿ ಶ್ರೀಕೃಷ್ಣಪರಮಾತ್ಮನ ಅನುಗ್ರಹವು ಸರ್ವರಿಗೂ ಲಭಿಸುವಂತೆ ಸಕಲ ವಿಧವಾದ ಪ್ರೋತ್ಸಾಹವನ್ನಿತ್ತು ತಮ್ಮ ಪ್ರಜೆಗಳನ್ನು ಸಲಹುತ್ತಿರುವ ಕರ್ನಾಟಕ ಸಿಂಹಾಸನಾಧೀಶ್ವರರೂ, ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ. ಪ್ರಜಾವತ್ಸಲರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುವರ್ಯರಿಗೂ ಅವರನ್ನಾಶ್ರಯಿಸಿರುವ ಸಮಸ್ತ ಪ್ರಜಾವರ್ಗಕ್ಕೂ ಶ್ರೀಕೃಷ್ಣಪರಮಾತ್ಮನು ಆಯುರಾರೋಗ್ಯ ಪುತ್ರಸಂತಾನಾದಿ ಸಕಲಸಂಪತ್ತನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಸರ್ವಧಾರಿ ಸಂ॥ ಶ್ರಾವಣ ಬ॥ ಅಷ್ಟಮಿ,
ತಾ॥ 27—8—48,
ಮೈಸೂರು.

ಆಸ್ಥಾನ ಮಹಾವಿದ್ವಾನ್
ಹೆಚ್. ಪಿ. ವೆಂಕಟರಾವ್,
ಅನುವಾದಕ.

ವಿಷಯಾನುಕ್ರಮಣಿಕೆ

ಅಶ್ವಮೇಧಖಂಡ

ಅಧ್ಯಾಯ ವಿಷಯ ಪುಟ

ಮೊದಲನೆಯ ಅಧ್ಯಾಯವು—

ವಜ್ರನಾಭಿಮಹಾರಾಜನು, ಉಗ್ರಸೇನನು ಮಾಡಿದ ಅಶ್ವಮೇಧ ಯಾಗದ ವರ್ಣನೆಯನ್ನು ಹೇಳಬೇಕೆಂದು ಗರ್ಗಮುನಿಯನ್ನು ಪ್ರಶ್ನೆಮಾಡುವುದು. 1

ಎರಡನೆಯ ಅಧ್ಯಾಯವು—

ಕೃಷ್ಣಲೀಲಾ ವರ್ಣನೆ. 12

ಮೂರನೆಯ ಅಧ್ಯಾಯವು—

ಕೃಷ್ಣಕಥಾ ವರ್ಣನೆ. 23

ನಾಲ್ಕನೆಯ ಮತ್ತು ಐದನೆಯ ಅಧ್ಯಾಯಗಳು—

ಪಾರಿಜಾತಹರಣವೃತ್ತಾಂತ ವರ್ಣನೆ. 32-41

ಆರನೆಯ ಅಧ್ಯಾಯವು—

ಕೃಷ್ಣಚರಿತ್ರ ವರ್ಣನೆ. 54

ಏಳನೆಯ ಅಧ್ಯಾಯವು—

ಅಶ್ವಮೇಧಯಜ್ಞಕ್ಕಾಗಿ ಸಿದ್ಧತೆಗಳು, ಮತ್ತು ಯಜ್ಞಾರಂಭ. 60

ಎಂಟನೆಯ ಅಧ್ಯಾಯವು—

ಯಜ್ಞಾಶ್ವ ಪರೀಕ್ಷೆ. 73

ಒಂಭತ್ತನೆಯ ಅಧ್ಯಾಯವು—

ಗರ್ಗಮುನಿಯ ಆಗಮನವು. ದಿಗ್ವಿಜಯಕ್ಕಾಗಿ ವೀರಪರೀಕ್ಷಣವು. ಅನಿರುದ್ಧನು ತಾನು ದಿಗ್ವಿಜಯಕ್ಕಾಗಿ ಹೊರಡುವೆನೆಂದು ಪ್ರತಿಜ್ಞೆಮಾಡುವುದು. 79

ಅಧ್ಯಾಯ	ವಿಷಯ	ಪುಟ
ಹತ್ತನೆಯ ಅಧ್ಯಾಯವು—	ಉಗ್ರಸೇನನೂ ಅವನ ಪತ್ನಿಯಾದ ರುಚಿಮತಿಯೂ ಹಿಂದೆ ಮೃತರಾದ ತಮ್ಮ ಮಕ್ಕಳನ್ನು ನೋಡಬೇಕೆಂದು ಶ್ರೀಕೃಷ್ಣನನ್ನು ಪ್ರಾರ್ಥಿಸುವುದು. ಯಜ್ಞಾನಂತರದಲ್ಲಿ ಪುತ್ರದರ್ಶನ ಮಾಡಿಸುವೆನೆಂದು ಶ್ರೀಕೃಷ್ಣನು ಪ್ರತಿಜ್ಞೆಮಾಡುವುದು.	91
ಹನ್ನೊಂದನೆಯ ಅಧ್ಯಾಯವು—	ಅಶ್ವಮೇಧಯಜ್ಞದ ಪೂರ್ವಾಂಗವಾದ ಅಶ್ವಪೂಜೆ ಮತ್ತು ವಿಮೋಚನೆ.	101
ಹನ್ನೆರಡನೆಯ ಅಧ್ಯಾಯವು—	ದಿಗ್ವಿಜಯಕ್ಕಾಗಿ ಹೊರಟಿರುವ ಅನಿರುದ್ಧನ ಸೈನ್ಯಾಧಿಪತ್ಯ ಪಟ್ಟಾಭಿಷೇಕ ವರ್ಣನೆ.	112
ಹದಿಮೂರನೆಯ ಅಧ್ಯಾಯವು—	ದಿಗ್ವಿಜಯಕ್ಕಾಗಿ ಯದುಸೈನ್ಯವು ಹೊರಡುವ ವಿವರಣೆ.	118
ಹದಿನಾಲ್ಕನೆಯ ಅಧ್ಯಾಯವು—	ಅನಿರುದ್ಧ ಪ್ರಯಾಣ ವರ್ಣನೆ.	132
ಹದಿನೈದನೆಯ ಅಧ್ಯಾಯವು—	ವಿಜಯಾರ್ಥಿಯಾಗಿ ಹೊರಟಿರುವ ಅನಿರುದ್ಧನಿಗೆ ಇಂದ್ರನೀಲನು ಮಾಡಿದ ಸತ್ಕಾರ ವರ್ಣನೆ.	143
ಹದಿನಾರನೆಯ ಅಧ್ಯಾಯವು—	ಚಂಪಾವತೀ ವಿಜಯ ವರ್ಣನೆ.	152
ಹದಿನೇಳನೆಯ ಅಧ್ಯಾಯವು—	ಸ್ತ್ರೀರಾಜ್ಯ ವಿಜಯ ವರ್ಣನೆ.	165
ಹದಿನೆಂಟನೆಯ ಅಧ್ಯಾಯವು—	ಉಪಲಂಕಾಗಮನಕ್ಕಾಗಿ ವಿಮಾನವನ್ನು ಹತ್ತಿ ಪ್ರಯಾಣ ಮಾಡುವುದು.	179

ಅಧ್ಯಾಯ	ವಿಷಯ	ಪುಟ
ಹತ್ತೊಂಭತ್ತನೆಯ ಅಧ್ಯಾಯವು—		
	ರಾಕ್ಷಸರೊಡನೆ ಯುದ್ಧವು, ಬಕಾಸುರಾಗಮನವು.	186
ಇಪ್ಪತ್ತನೆಯ ಅಧ್ಯಾಯವು—		
	ಉಪಲಂಕಾ ವಿಜಯ ವರ್ಣನೆ.	195
ಇಪ್ಪತ್ತೊಂದನೆಯ ಅಧ್ಯಾಯವು—		
	ಭದ್ರಾವತೀ ವಿಜಯ ವರ್ಣನೆ.	206
ಇಪ್ಪತ್ತೆರಡನೆಯ ಅಧ್ಯಾಯವು—		
	ಅವಂತಿಕಾಗಮನ ವರ್ಣನೆ.	212
ಇಪ್ಪತ್ತಮೂರನೆಯ ಅಧ್ಯಾಯವು—		
	ಅವಂತೀಪುರಿಯಲ್ಲಿ ಅನಿರುದ್ಧನು ಶ್ರೀಕೃಷ್ಣನ ಗುರುವಾದ ಸಾಂದೀಪನಿಮುನಿಯನ್ನು ದರ್ಶನಮಾಡುವುದು. ಅನಿರುದ್ಧ ಸಾಂದೀಪನಿಯರ ಸಂವಾದವು, ಕೃಷ್ಣಮಾಹಾತ್ಮ್ಯಕಥನವು.	220
ಇಪ್ಪತ್ತನಾಲ್ಕನೆಯ ಅಧ್ಯಾಯವು—		
	ರಾಜಪುರ ವಿಜಯ ವರ್ಣನೆ.	227
ಇಪ್ಪತ್ತೈದನೆಯ ಅಧ್ಯಾಯವು—		
	ಬಲ್ವಲಾಸುರನು ಯಜ್ಞಾಶ್ವವನ್ನು ಅಪಹರಿಸುವುದು.	240
ಇಪ್ಪತ್ತಾರನೆಯ ಅಧ್ಯಾಯವು—		
	ಯಜ್ಞಾಶ್ವವಿಮೋಚನೆಗಾಗಿ ಉಪದ್ವೀಪಕ್ಕೆ ಪ್ರಯಾಣಮಾಡುವುದು.	247
ಇಪ್ಪತ್ತೇಳನೆಯ ಅಧ್ಯಾಯವು—		
	ಉಪದ್ವೀಪಕ್ಕೆ ಹೋಗುವುದಕ್ಕಾಗಿ ಸಮುದ್ರಕ್ಕೆ ಬಾಣಗಳಿಂದ ಸೇತುವೆಯನ್ನು ನಿರ್ಮಿಸುವುದು.	255
ಇಪ್ಪತ್ತೆಂಟನೆಯ ಅಧ್ಯಾಯವು—		
	ಉಪದ್ವೀಪದಲ್ಲಿ ಬಲ್ವಲಾದಿದೈತ್ಯರು ಯುದ್ಧವಿಷಯದಲ್ಲಿ ಮಂತ್ರಾಲೋಚನೆಮಾಡುವುದು.	260

ಅಧ್ಯಾಯ ವಿಷಯಃ ಪುಟ

ಇಪ್ಪತ್ತೊಂಭತ್ತನೆಯ ಅಧ್ಯಾಯವು—

ಯಾದವರಿಗೂ ದೈತ್ಯರಿಗೂ ನಡೆದ ಯುದ್ಧ ವರ್ಣನೆ. 272

ಮೂವತ್ತನೆಯ ಅಧ್ಯಾಯವು—

ಊರ್ಧ್ವಕೇಶ, ನದ ಎಂಬ ದೈತ್ಯರ ವಧ ವರ್ಣನೆ. 283

ಮೂವತ್ತೊಂದನೆಯ ಅಧ್ಯಾಯವು—

ಸಿಂಹ, ಕುಶಾಂಬ ಮೊದಲಾದ ದೈತ್ಯರವಧ ವರ್ಣನೆ. 294

ಮೂವತ್ತೆರಡನೆಯ ಅಧ್ಯಾಯವು—

ಸೈನ್ಯಪಾಲಸುತವಧ ವರ್ಣನೆ. 302

ಮೂವತ್ತಮೂರನೆಯ ಅಧ್ಯಾಯವು—

ರಾಜಪುತ್ರಜೀವನ ವರ್ಣನೆ. 312

ಮೂವತ್ತನಾಲ್ಕನೆಯ ಅಧ್ಯಾಯವು—

ದೈತ್ಯಯಾದವ ಯುದ್ಧ ವರ್ಣನೆ. 327

ಮೂವತ್ತೈದನೆಯ ಅಧ್ಯಾಯವು—

ಬಲ್ವಲಾಸುರನು ಮೂರ್ಛೆಗೊಳ್ಳುವುದು; ಅನಿರುದ್ಧನ ಜಯ ವರ್ಣನೆ. 339

ಮೂವತ್ತಾರನೆಯ ಅಧ್ಯಾಯವು—

ದೈತ್ಯಪುತ್ರವಧ ವರ್ಣನೆ. 352

ಮೂವತ್ತೇಳನೆಯ ಅಧ್ಯಾಯವು—

ಬಲ್ವಲಾಸುರನ ಸಹಾಯಾರ್ಥವಾಗಿ ಈಶ್ವರನು ರಣರಂಗಕ್ಕೆ ಬಂದು ಯಾದವರೊಡನೆ ಯುದ್ಧಮಾಡಲು ಭೈರವ ಮೊದಲಾದವರನ್ನು ಕಳುಹಿಸುವುದು. ಅನಿರುದ್ಧ ಭೈರವ ಯುದ್ಧ ವರ್ಣನೆ. 363

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಪ್ರಥಮೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಸಭಾಯಾಮಾಗತಂ ವೀಕ್ಷ್ಯ ರೋಮಹರ್ಷಣನಂದನಂ ।
ಶೌನಕಃ ಪರಿಪಪ್ರಚ್ಛ ಪ್ರಣಿಪತ್ಯಾಭಿವಾದ್ಯ ಚ ॥ ೧ ॥

॥ ಶೌನಕ ಉವಾಚ ॥

ತ್ವನ್ಮುಖಾತ್ಸರ್ವಶಾಸ್ತ್ರಾಣಿ ಪುರಾಣಾನಿ ಮಹಾಮತೇ ।
ನಾನಾಹರಿಚರಿತ್ರಾಣಿ ಶ್ರುತಾನಿ ವಿಮಲಾನಿ ಮೇ ॥ ೨ ॥

ಮೊದಲನೆಯ ಅಧ್ಯಾಯವು

೧. ಗರ್ಗಾಚಾರ್ಯನು ಹೇಳುವನು :—ರೋಮಹರ್ಷಣನ ಮಗನು ಸಭೆಗೆ ಬರಲು ಅವನನ್ನು ಶೌನಕನು ನಮಸ್ಕರಿಸಿ, ಇಂತುಪ್ರಶ್ನಿಸಿದನು.

೨. ಎಲೈ, ಮಹಾಪ್ರಾಜ್ಞನೇ, ನೀನು ನಮಗೆ ಅನೇಕ ಶಾಸ್ತ್ರಗಳನ್ನು ಬೋಧಿಸಿದೆ, ಪುರಾಣಗಳನ್ನು ವಿವರಿಸಿದೆ, ಪರಮಾತ್ಮನ ಚರಿತ್ರೆಯನ್ನು ವಿಧವಿಧವಾಗಿ ವರ್ಣಿಸಿದೆ. ನಾವೆಲ್ಲರೂ ನೀನು ಹೇಳಿದ ವಿಚಿತ್ರವಾದ ವಚನಗಳನ್ನು ಕೇಳಿದೆವು.

ಪುರಾ ಗರ್ಗೇಣ ಕಥಿತಾಂ ಮಮಾಗ್ರೇ ಗರ್ಗಸಂಹಿತಾ ।
ರಾಧಾಮಾಧವಯೋರ್ಯಸ್ಯಾಂ ಮಹಿಮಾ ಬಹು ವರ್ಣಿತಃ ॥ ೩ ॥

ಅದ್ಯಾಹಂ ಶ್ರೋತುಮಿಚ್ಛಾಮಿ ತ್ವತ್ತಃ ಕೃಷ್ಣಕಥಾಂ ಪುನಃ ।
ಸರ್ವದುಃಖಹರಾಂ ಸೌತೇ ಕಥಯಸ್ವ ವಿಚಾರ್ಯ ಚ ॥ ೪ ॥

॥ ಶ್ರೀಗರ್ಗ ಉವಾಚ ॥

ಅಷ್ಟಾಶೀತಿಸಹಸ್ರೈಶ್ಚ ಮುನಿಭೀ ರೌಮಹರ್ಷಣಿಃ ।
ಪೃಷ್ಟಃ ಪ್ರೋವಾಚ ಕೃಷ್ಣಸ್ಯ ಸ್ಮರನ್ಪಾದಾಂಬುಜಂ ಕಿಲ ॥ ೫ ॥

॥ ಸೌತಿರುವಾಚ ॥

ಅಹೋ ಶೌನಕ ಧನ್ಯೋಽಸಿ ಯಸ್ಯ ತೇ ಮತಿರೀದೃಶೀ ।
ಕೃಷ್ಣಚಂದ್ರಪದದ್ವಂದ್ವಮಕರಂದಸ್ಪೃಹಾವತೀ ॥ ೬ ॥

೩-೪. ಹಿಂದೆ ನಾನು ಗರ್ಗಾಚಾರ್ಯರಿಂದ ಗರ್ಗಸಂಹಿತೆಯನ್ನು ಕೇಳಿರುವೆನು. ಆದರಲ್ಲಿ ರಾಧಾಮಾಧವರ ಚರಿತ್ರೆಯು ವಿಸ್ತಾರವಾಗಿ ವರ್ಣಿತವಾಗಿರುವುದು. ಆದರೂ ಸಹ ಪುನಃ ಕೃಷ್ಣನ ಕಥೆಯನ್ನು ನಿನ್ನಿಂದ ಕೇಳಬೇಕೆಂದಿರುವೆನು. ಆ ಕಥೆಯು ಸರ್ವದುಃಖಾಪಹಾರಕವಾದುದು. ಆದುದರಿಂದ ವಿಮರ್ಶೆಮಾಡಿ ಹೇಳಬೇಕೆನ್ನಲು,

೫. ಗರ್ಗನು ಹೇಳುವನು :—ಎಂಭತ್ತೆಂಟುಸಾವಿರ ಋಷಿಗಳು ಈ ರೀತಿಯಾಗಿ ಸೂತನನ್ನು ಕೇಳಿಕೊಳ್ಳಲು ಆಗ ಅವನು ಕೃಷ್ಣನ ಪಾದಾಂಬುಜವನ್ನು ಸ್ಮರಿಸಿಕೊಳ್ಳುತ್ತಾ ಹೇಳಲು ಪ್ರಾರಂಭಿಸಿದನು.

೬. ಸೂತನಿಂತೆಂದನು :—ಎಲೈ ಶೌನಕನೇ, ನೀನು ಧನ್ಯನು. ಆ ಪರಮಾತ್ಮನ ಪಾದಕಮಲಗಳ ಮಕರಂದವನ್ನು ಸವಿಯುವಂತಹ ಬುದ್ಧಿಯು ನಿನಗುಂಟಾದುದರಿಂದ ನೀನೇ ಧನ್ಯನು.

ಸಂಗಮಂ ವೈಷ್ಣವಾನಾಂ ಚ ದೇವಾಃ ಶ್ರೇಷ್ಠಂ ವದಂತಿ ಹಿ ।
ಪಾಪಕ್ಷಯಕರಾ ಯಸ್ಮಾಚ್ಛ್ರೀಕೃಷ್ಣಸ್ಯ ಕಥಾ ಭವೇತ್ ॥ ೭ ॥

ಅನಂತಕೃಷ್ಣಚಂದ್ರಸ್ಯ ಚರಿತಂ ಕಲ್ಮಷಾಪಹಂ ।
ಕಿಂಚಿಜ್ಜಾನಾತಿ ಬ್ರಹ್ಮಾ ಚ ತಥಾ ಕಿಂಚಿದುಮಾಪತಿಃ ॥ ೮ ॥

ಮಶಕೋ ಮಾದೃಶಃ ಕೋಽಪಿ ವಾಸುದೇವಕಥಾರ್ಣವೇ ।
ಮೋಹಿತಾ ನ ವದಿಷ್ಯಂತಿ ಯತ್ರ ಬ್ರಹ್ಮಾದಯಸ್ಸುರಾಃ ॥ ೯ ॥

ಶ್ರೀಗರ್ಗೋ ಯಾದವೇಂದ್ರಸ್ಯ ಹ್ಯುಗ್ರಸೇನಸ್ಯ ಭೂಪತೇಃ ।
ಅಶ್ವಮೇಧಂ ಕ್ರತುವರಂ ದೃಷ್ಟ್ವಾ ಪ್ರತ್ಯಾಹ ಚೈಕದಾ ॥ ೧೦ ॥

---

೭. ವಿಷ್ಣುಭಕ್ತರ ಸಹವಾಸವು, ಶ್ರೇಷ್ಠವೆಂದು ದೇವತೆಗಳು ಹೇಳುವರು. ಅದರಲ್ಲಿಯೂ ಆ ಸಮೂಹದಲ್ಲಿ ಜರುಗುವ ಶ್ರೀಕೃಷ್ಣನ ಕಥೆಯು ಪಾಪವನ್ನು ನಾಶಮಾಡುವಂತಹುದು.

೮. ಅನಂತಕೃಷ್ಣಚಂದ್ರನ ಚರಿತೆಯು ಕಲ್ಮಷವನ್ನು ನಾಶಮಾಡುವಂತಹುದು. ಆ ಅಪಾರವಾದ ಕಥೆಯನ್ನು ಯಾರು ತಾನೇ ಪೂರ್ಣವಾಗಿ ಬಲ್ಲರು? ಅದರಲ್ಲಿ ಸ್ವಲ್ಪ ಭಾಗವನ್ನು ಬ್ರಹ್ಮನು ಬಲ್ಲನು. ಮತ್ತು ಸ್ವಲ್ಪವನ್ನು ಈಶ್ವರನು ಬಲ್ಲನು.

೯. ಹೀಗಿರುವಲ್ಲಿ ನನ್ನಂತಹ ಮಶಕ (ಸೊಳ್ಳೆ) ಗಳು ವಾಸುದೇವನ ಅಪಾರವಾದ ಕಥೆಯನ್ನು ಹೇಗೆ ಹೇಳಬಲ್ಲವು? ಬ್ರಹ್ಮಾದಿ ದೇವತೆಗಳೂ ಕೂಡ ಮೋಹಿತರಾಗಿ ಅವನ ಚರಿತ್ರೆಯನ್ನು ಹೇಳಲು ಅಸಮರ್ಥರಾಗಿರುವರು.

೧೦. ಒಂದುಸಾರಿ ಉಗ್ರಸೇನರಾಜನು ಅಶ್ವಮೇಧಯಾಗವನ್ನು ಮಾಡಲು ಪ್ರಾರಂಭಿಸಿದನು. ಆ ಶ್ರೇಷ್ಠವಾದ ಯಜ್ಞವನ್ನು ನೋಡಿ ಗರ್ಗಾಚಾರ್ಯನು ಈ ರೀತಿ ಹೇಳಿದನು.

ಧನ್ಯೋ ರಾಜಾ ಯಾದವೇಂದ್ರೋ ಯಶ್ಚಕಾರ ಕ್ರತೂತ್ತಮಂ ।
ಶ್ರೀಕೃಷ್ಣಸ್ಯಾಜ್ಞಯಾ ಪುರ್ಯಾಂ ತೇನಾಹಂ ವಿಸ್ಮಯಂ ಗತಃ ॥ ೧೧ ॥

ಮಯೈವ ಸಂಹಿತಾಯಾಂ ಚ ಕಥಾಃ ಕೃಷ್ಣಸ್ಯ ವರ್ಣಿತಾಃ ।
ಪರಿಪೂರ್ಣತಮಸ್ಯಾಪಿ ಯಥಾ ದೃಷ್ಟಾ ಯಥಾ ಶ್ರುತಾ ॥ ೧೨ ॥

ತಸ್ಯಾಂ ವೈ ವಾಜಿಮೇಧಸ್ಯ ಕಥಾ ನ ಕಥಿತಾ ಮಯಾ ।
ಅದ್ಯಾಹಂ ಕಥಯಿಷ್ಯಾಮಿ ಹಯಮೇಧಕಥಾಂ ಪುನಃ ॥ ೧೩ ॥

ಯಸ್ಯಾಃ ಶ್ರವಣಮಾತ್ರೇಣ ನರಾಣಾಂ ಹಿ ಕಲೌ ಯುಗೇ ।
ಭುಕ್ತಿಂ ಮುಕ್ತಿಂ ಚ ಭಗವಾನ್ ಶೀಘ್ರಮೇವ ಪ್ರಯಚ್ಛತಿ ॥ ೧೪ ॥

ಇತ್ಯುಕ್ತ್ವಾ ಶ್ರೀಮುನಿರ್ಗರ್ಗೋ ಕೃಷ್ಣಭಕ್ತ್ಯಾ ಚ ಶೌನಕ ।
ಉಗ್ರಸೇನಸ್ಯ ಯಜ್ಞಸ್ಯ ಚರಿತ್ರಂ ಸ ಹ್ಯಚೀಕ್ಲೃಪತ್ ॥ ೧೫ ॥

---

೧೧. ಶ್ರೀಕೃಷ್ಣನ ಅಪ್ಪಣೆಯ ಮೇರೆಗೆ ಯಾದವೇಂದ್ರನಾದ ಉಗ್ರಸೇನನು ಒಂದು ದೊಡ್ಡ ಅಶ್ವಮೇಧವನ್ನು ದ್ವಾರಕೆಯಲ್ಲಿ ಮಾಡಿದನು. ಅದನ್ನು ನೋಡಿ ನಾನು ಬಹಳ ಆಶ್ಚರ್ಯಪಟ್ಟೆನು.

೧೨. ಪರಿಪೂರ್ಣತಮನಾದ ಆ ಕೃಷ್ಣನ ಚರಿತ್ರೆಯನ್ನು ದ್ವಾರಕಾವತಿಯಲ್ಲಿ ನೋಡಿರುವಂತೆಯೂ, ಮತ್ತು ಇತರರಿಂದ ಕೇಳಿರುವಂತೆಯೂ ನನ್ನ ಸಂಹಿತೆಯಲ್ಲಿ ವರ್ಣಿಸಿರುವೆನು.

೧೩. ಆ ಸಂಹಿತೆಯಲ್ಲಿ ಅಶ್ವಮೇಧಯಜ್ಞದ ವಿಷಯವನ್ನು ಮಾತ್ರ ಹೇಳಿಲ್ಲವು. ಆದುದರಿಂದ ನಾನೀಗ ಅದನ್ನು ಹೇಳುವೆನು.

೧೪. ಆ ಕಥೆಯನ್ನು ಕೇಳಿದ ಮಾತ್ರದಿಂದಲೇ, ಈ ಕಲಿಯುಗದಲ್ಲಿ ಮನುಷ್ಯನಿಗೆ ಭಗವಂತನು ಇಹಲೋಕಸುಖವನ್ನೂ, ಮುಕ್ತಿಯನ್ನೂ ಜಾಗ್ರತೆಯಾಗಿ ಅನುಗ್ರಹಿಸುವನು.

೧೫. ಎಲೈ ಶೌನಕನೇ, ಗರ್ಗನು ಈ ರೀತಿಯಾಗಿ ಹೇಳಿ ಅನಂತರ ಕೃಷ್ಣನನ್ನು ಧ್ಯಾನಿಸುತ್ತಾ ಉಗ್ರಸೇನನು ಮಾಡಿದ ಯಜ್ಞಚರಿತ್ರೆಯನ್ನು ಹೇಳಿದನು.

ಹಯಮೇಧಚರಿತ್ರಸ್ಯ ಸುಮೇರುರ್ನಾಮ ಸುಂದರಂ ।
ಧೃತ್ವಾ ಗರ್ಗಸ್ತು ಭಗವಾನ್ ಕೃತಕೃತ್ಯೋಽಭವನ್ಮುನೇ ॥ ೧೬ ॥

ಕೃತ್ವಾ ಕಥಾಮಷ್ಟದಿನೇನ ಶ್ರೀಮುನಿ-
ರ್ಯದೋರ್ಗುರುರ್ಬುದ್ಧಿಮತಾಂ ವರಃ ಪರಃ ।
ಅಥಾಯಯೌ ವೈ ಮಥುರಾಂ ಹರೇಃ ಪುರೀಂ
ವಜ್ರಂ ನೃಪೇಂದ್ರಂ ಚ ನಿರೀಕ್ಷಿತುಂ ಖಲು ॥ ೧೭ ॥

ಅಂಬರಾದಾಗತಂ ತತ್ರ ಗರ್ಗಂ ಜ್ಞಾನವತಾಂ ವರಂ ।
ವೀಕ್ಷ್ಯೋತ್ಥಾಯ ನಮಶ್ಚಕ್ರೇ ವಜ್ರನಾಭಿರ್ದ್ವಿಜೈಸ್ಸಹ ॥ ೧೮ ॥

ಅರ್ಚಯಿತ್ವಾ ಪುಷ್ಪಸ್ರಗ್ಭಿರ್ಮಿಷ್ಟಾನ್ನಂ ಚ ನ್ಯವೇದಯತ್ ।
ಸ್ವರ್ಣಸಿಂಹಾಸನಂ ದತ್ವಾವನಿಜ್ಯತ ಪದಾಂಬುಜೇ ॥ ೧೯ ॥

ತತ್ಪಾದಸಲಿಲಂ ನೀತ್ವಾ ಶೀರ್ಷೇ ಧೃತ್ವಾ ಕೃತಾಂಜಲಿಃ ।
ಭೂತ್ವಾ ಶ್ರೀವಜ್ರನಾಭಿಸ್ತು ಶ್ಯಾಮಃ ಪಂಕಜಲೋಚನಃ ॥ ೨೦ ॥

---

೧೬. ಗರ್ಗನು ಅಶ್ವಮೇಧಚರಿತ್ರೆಗೆ ಸುಮೇರುವೆಂಬ ಸುಂದರವಾದ ಹೆಸರನ್ನಿಟ್ಟು ಅದನ್ನಿತರರಿಗೆ ಬೋಧಿಸಿ ಕೃತಾರ್ಥನಾದನು.

೧೭. ಎಂಟು ದಿವಸಗಳವರೆಗೂ ಅಶ್ವಮೇಧಚರಿತ್ರೆಯನ್ನು ವರ್ಣಿಸಿ ಯದುಗುರುವೂ, ಜ್ಞಾನಿಶ್ರೇಷ್ಠನೂ ಆದ ಗರ್ಗನು ವಜ್ರನಾಭಿ ಎಂಬುವನನ್ನೂ, ಉಗ್ರಸೇನನನ್ನೂ ನೋಡಲು ಮಥುರಾಪಟ್ಟಣಕ್ಕೆ ಬಂದನು.

೧೮-೧೯. ಆಕಾಶಮಾರ್ಗದಲ್ಲಿ ಬರುತ್ತಿರುವ ಗರ್ಗನನ್ನು ನೋಡಿ ವಜ್ರನಾಭಿಯು ಬ್ರಾಹ್ಮಣರೊಡನೆ ಮೇಲಕ್ಕೆದ್ದು ಅವನಿಗೆ ಸ್ವಾಗತವನ್ನು ಬಯಸಿದನು. ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ ಅವನ ಪಾದಗಳನ್ನು ತೊಳೆದು ಹೂ ಮಾಲಿಕೆಗಳಿಂದ ಪೂಜಿಸಿ ಮೃಷ್ಟಾನ್ನವನ್ನು ನಿವೇದಿಸಿದನು.

೨೦. ಪಾದವನ್ನು ತೊಳೆದ ನೀರನ್ನು ತಲೆಯ ಮೇಲೆ ಧರಿಸಿ ಅವನನ್ನು ನಮಸ್ಕರಿಸಿದನು. ವಜ್ರನಾಭಿಯು ಶ್ಯಾಮವರ್ಣದನಾಗಿದ್ದನು. ಅವನಿಗೆ ಕಮಲದಂತೆ ವಿಶಾಲವಾದ ನೇತ್ರಗಳಿದ್ದವು.

ಪುಷ್ಟದೇಹೋ ಬೃಹದ್ಬಾಹುರ್ವೀರಃ ಷೋಡಶವಾರ್ಷಿಕಃ ।
ಇತಿ ಹೋವಾಚ ಸ್ವಗುರುಂ ಶತಸಿಂಹಸಮೋದ್ಭವಃ ॥ ೨೧ ॥

॥ ವಜ್ರನಾಭಿರುವಾಚ ॥

ನಮಸ್ತುಭ್ಯಂ ಸ್ವಾಗತಂ ತೇ ಬ್ರಹ್ಮನ್ ಕಿಂ ಕರವಾಮ ತೇ ।
ಮನ್ಯೇ ತ್ವಾಂ ಭಗವದ್ರೂಪಂ ಬ್ರಹ್ಮರ್ಷೀಣಾಂ ವರಂ ಪರಂ ॥ ೨೨ ॥

ಗುರುರ್ವಿಧಿರ್ಗುರೂ ರುದ್ರೋ ಗುರುರೇವ ಬೃಹಸ್ಪತಿಃ ।
ಗುರುರ್ನಾರಾಯಣಸ್ಸಾಕ್ಷಾತ್ತಸ್ಮೈ ಶ್ರೀಗುರವೇ ನಮಃ ॥ ೨೩ ॥

ನರಾಣಾಂ ಚ ಮುನಿಶ್ರೇಷ್ಠ ದರ್ಶನಂ ತವ ದುರ್ಲಭಂ ।
ಅಸ್ಮಾಕಂ ನಿತರಾಂ ದೇವ ವಿಷಯಾಸಕ್ತಚೇತಸಾಂ ॥ ೨೪ ॥

---

೨೧. ಅವನ ದೇಹವು ಧಷ್ಟಪುಷ್ಟವಾಗಿದ್ದಿತು. ಅವನ ಬಾಹುಗಳು ನೀಳವಾಗಿದ್ದವು. ಹದಿನಾರು ವರ್ಷದ ತರುಣನು. ಅವನು ನೂರು ಸಿಂಹಗಳೊಡನೆ ಪ್ರತಿಭಟಿಸಬಲ್ಲ ವೀರನು. ಇಂತಹ ವಜ್ರನಾಭಿಯು ತನ್ನ ಗುರುವನ್ನು ಕುರಿತು–

೨೨. ಎಲೈ ಗುರುವೇ, ನಿನಗೆ ನಮಸ್ಕಾರವು. ನಿನಗೆ ಸುಖಾಗಮನವಾಗಲಿ. ಭಗವತ್ಸ್ವರೂಪನೇ ನೀನು. ಬ್ರಹ್ಮಋಷಿಗಿಂತಲೂ ಶ್ರೇಷ್ಠನು.

೨೩. ಗುರುವು ಬ್ರಹ್ಮಸ್ವರೂಪನು. ಗುರುವೇ ರುದ್ರನೂ, ಬೃಹಸ್ಪತಿಯೂ ಆಗಿರುವನು. ಗುರುವೇ ಸಾಕ್ಷಾತ್ ನಾರಾಯಣನು. ಅಂತಹ ಗುರುವಾದ ನಿನಗೆ ನಮಸ್ಕಾರವು.

೨೪. ಮುನಿವರರ ದರ್ಶನವು ಮನುಜರಿಗೆ ಸಿಕ್ಕಬೇಕಾದರೆ ಬಹಳ ಅಪರೂಪವು. ಅದರಲ್ಲಿಯೂ ಸಂಸಾರವಿಷಯಗಳಲ್ಲಿ ಮಗ್ನರಾದ ನಮ್ಮಂತವರಿಗಂತೂ ಸಿಕ್ಕುವುದೇ ಇಲ್ಲವು.

ಗರ್ಗಾಚಾರ್ಯ ಕುಲಾಚಾರ್ಯ ತೇಜಸ್ವಿನ್ ಯೋಗಭಾಸ್ಕರ ।
ತ್ವದ್ದರ್ಶನೇನಾಪಿ ವಯಂ ಪಾವಿತಾಃ ಸಕುಟುಂಬಕಾಃ ॥ ೨೫ ॥

ಶ್ರುತ್ವಾ ಯದೂನಾಂ ವೃಷಭಸ್ಯ ವಾಕ್ಯಂ
ಮುನೀಂದ್ರವರ್ಯಸ್ತು ಮಹಾನ್ ಮಹಾತ್ಮಾ ।
ಸ್ಮರನ್ ಹರೇಃ ಶ್ರೀಚರಣಾರವಿಂದಂ
ಮುದಾ ನೃಪೇಂದ್ರಂ ನಿಜಗಾದ ಸದ್ಯಃ ॥ ೨೬ ॥

ಯುವರಾಜ ಮಹಾರಾಜ ಯದುವಂಶಶಿರೋಮಣೇ ।
ತ್ವಯಾ ಸಾಧು ಕೃತಂ ಸರ್ವಂ ಪಾಲಿತಾಃ ಪೃಥಿವೀಜನಾಃ ॥ ೨೭ ॥

ಸ್ಥಾಪಿತಂ ಚ ತ್ವಯಾ ವತ್ಸ ಧರ್ಮಂ ವೈ ಪೃಥಿವೀತಲೇ ।
ವಿಷ್ಣುರಾತಶ್ಚ ತೇ ಮಿತ್ರನ್ನೃಪಾಶ್ಚಾನ್ಯೇ ವಶಾಃ ಸ್ಮೃತಾಃ ॥ ೨೮ ॥

ಧನ್ಯಸ್ತ್ವಂ ರಾಜಶಾರ್ದೂಲ ಧನ್ಯಾ ತೇ ಮಥುರಾಪುರೀ ।
ಧನ್ಯಾಶ್ಚ ತೇ ಪ್ರಜಾಃ ಸರ್ವಾ ಧನ್ಯಾ ವೈ ವಜ್ರಭೂಶ್ಚ ತೇ ॥ ೨೯ ॥

---

೨೫. ಯದುಕುಲಾಚಾರ್ಯನಾದ ಗರ್ಗಾಚಾರ್ಯನೇ, ನಿನ್ನ ದರ್ಶನದಿಂದ ಬಂಧುಬಾಂಧವಸಮೇತರಾಗಿ ನಾವು ಪಾವನರಾದೆವು. ನೀನು ತೇಜಸ್ವಿಯು, ಯೋಗಿವರ್ಯನು.

೨೬. ಎಂದು ಯದುರಾಜನಾದ ವಜ್ರನಾಭನು ಹೇಳಲು ಆಗ ಮಹಾತ್ಮನಾದ ಆ ಗರ್ಗಮುನಿಯು ಶ್ರೀಕೃಷ್ಣನ ಚರಣಕಮಲಗಳನ್ನು ಧ್ಯಾನಿಸುತ್ತಾ ಸಂತೋಷದಿಂದ ಅವನನ್ನು ಕುರಿತು—

೨೭–೨೮. ಎಲೈ ಯದುವಂಶಶಿರೋಮಣಿಯಾದ ವಜ್ರನಾಭಮಹಾರಾಜನೇ, ನೀನು ಮಾಡಿರುವ ಕೆಲಸಗಳೆಲ್ಲವೂ ಉಚಿತವಾಗಿರುವುವು. ಪೃಥಿವಿಯಲ್ಲಿ ಧರ್ಮವನ್ನು ಸ್ಥಾಪಿಸಿರುವೆ. ಎಲ್ಲ ರಾಜರೂ ನಿನಗೆ ಮಿತ್ರರು. ಶತ್ರುಗಳೆಲ್ಲರೂ ನಿನ್ನ ವಶರಾಗಿರುವರು.

೨೯. ನೀನು ರಾಜಶ್ರೇಷ್ಠನು. ಅಂತಹ ನೀನು ಧನ್ಯನು. ನಿನ್ನ ಮಥುರಾಪುರಿಯು ಧನ್ಯವಾದುದು. ನಿನ್ನ ಪ್ರಜೆಗಳೆಲ್ಲರೂ ಧನ್ಯರು. ನಿನ್ನ ವಜ್ರಭೂಮಿಯು ಧನ್ಯವಾದುದು.

ಭುಂಕ್ಷ್ವ ಭೋಗಾನ್ ಭಜನ್ ಕೃಷ್ಣಂ ಬಲಂ ಪ್ರದ್ಯುಮ್ನಮೇವ ಚ ।
ಅನಿರುದ್ಧಂ ಚ ನಿಶ್ಶಂಕೋ ಭೂತ್ವಾ ರಾಜ್ಯಂ ಕುರು ನೃಪ ॥ ೩೦ ॥

॥ ಶ್ರೀ ಸೂತ ಉವಾಚ ॥

ಇತಿ ವಾಕ್ಯಂ ಸಮಾಕರ್ಣ್ಯ ಗರ್ಗಸ್ಯ ನೃಪಸತ್ತಮಃ ।
ಸಂಕರ್ಷಣಂ ಚ ಶ್ರೀಕೃಷ್ಣಂ ಪಿತರಂ ಚ ಪಿತಾಮಹಂ ॥ ೩೧ ॥

ವಿರಹೇಣ ಸ್ಮರನ್ ರಾಜಾ ಚಾಶ್ರುಪೂರ್ಣಮುಖೋಽಭವತ್ ।
ತಂ ನೃಪಂ ದುಃಖಿತಂ ದೃಷ್ಟ್ವಾ ಸ್ಥಿತಂ ಭೂಮಾವಧೋಮುಖಂ ॥ ೩೨ ॥

ಗರ್ಗಸ್ತು ವಿಸ್ಮಿತಃ ಪ್ರಾಹ ದುಃಖಂ ಪ್ರಶಮಯನ್ನಿವ ।
ಕಸ್ಮಾದ್ರೋದಿಷಿ ರಾಜೇಂದ್ರ ಭಯಂ ಕಿಂ ತೇ ಮಯಿ ಸ್ಥಿತೇ ॥ ೩೩ ॥

ಕಾರಣಂ ಸ್ವಸ್ಯ ದುಃಖಸ್ಯ ವದ ಸರ್ವಂ ಮಮಾಗ್ರತಃ ।
ಇತಿ ತದ್ವಚನಂ ಶ್ರುತ್ವಾ ರಾಜಾ ನ ಪ್ರಾಹ ದುಃಖಿತಃ ॥ ೩೪ ॥

---

೩೦. ಆದುದರಿಂದ ನೀನು ಸುಖಿಯಾಗಿ ಬಾಳು. ಕೃಷ್ಣನನ್ನೂ, ಬಲರಾಮ ಪ್ರದ್ಯುಮ್ನರನ್ನೂ, ಅನಿರುದ್ಧನನ್ನೂ ಸ್ತೋತ್ರಮಾಡು. ಅದರಿಂದ ಯಾವ ತೊಂದರೆಯೂ ಇಲ್ಲದೆ ರಾಜ್ಯವಾಳುವೆ ಎಂದನು.

೩೧. ಸೂತನು ಹೇಳಿದನು:—ತನ್ನ ಗುರುವು ಈ ರೀತಿಯಾಗಿ ಹೇಳಿದುದನ್ನು ಕೇಳಿ ವಜ್ರನಾಭನು ಬಲರಾಮ, ಕೃಷ್ಣ, ತನ್ನ ತಂದೆ, ತಾತ, ಮುಂತಾದುವರನ್ನು ಸ್ಮರಿಸಿಕೊಂಡನು.

೩೨–೩೩. ಈಗ ಅವರಾರೂ ಇಲ್ಲದುದರಿಂದ ಅವನಿಗೆ ದುಃಖವುಂಟಾಯಿತು. ಆಗ ಮುಖವನ್ನು ತಗ್ಗಿಸಿ ಅಳಲು ಪ್ರಾರಂಭಿಸಿದನು. ಈ ರೀತಿ ಅಳುತ್ತಿರುವುದನ್ನು ನೋಡಿ ಗರ್ಗಮುನಿಗೆ ಆಶ್ಚರ್ಯವಾಯಿತು. ಆಗ ಅವನು ಅವನನ್ನು ಸಮಾಧಾನಪಡಿಸಲು ಅಯ್ಯಾ ರಾಜೇಂದ್ರ ಏತಕ್ಕಾಗಿ ಅಳುವೆ? ನಾನಿರುವಲ್ಲಿ ನಿನಗೇತರ ದುಃಖ?

೩೪. ನಿನಗೊದಗಿರುವ ದುಃಖಕ್ಕೆ ಕಾರಣವಾದರೂ ಏನಿದೆ? ಅದೆಲ್ಲವನ್ನೂ ನನ್ನೆದುರಿಗೆ ತಿಳಿಸು ಎನ್ನಲು, ರಾಜನು ಅತಿದುಃಖಿತನಾಗಿ ಏನನ್ನೂ ಹೇಳದೆ ಸುಮ್ಮನಿದ್ದನು.

ಪುನಃ ಪೃಷ್ಟಶ್ಚ ಗುರುಣಾ ಪ್ರಾಹ ಗದ್ಗದಯಾ ಗಿರಾ ।

॥ ರಾಜೋವಾಚ ॥

ಮಾಂ ತ್ಯಕ್ತ್ವಾ ಯಾದವಾಃ ಸರ್ವೇ ಕೃಷ್ಣಸಂಕರ್ಷಣಾದಯಃ ॥ ೩೫ ॥

ಗತಾ ದೇವ ಪರಂ ಲೋಕಂ ತೇನಾಹಂ ದುಃಖಿತೋಽಭವಂ ।
ಸ್ವಾಮ್ಯಮಾತ್ಯಸುಹೃದ್ರಾಷ್ಟ್ರದುರ್ಗಬಲಾನಿ ಚ ॥
ಏಕಾಕಿನಶ್ಚ ಮೇ ಬ್ರಹ್ಮನ್ನೇತೇ ಪ್ರೀತಿಕರಾ ನ ಹಿ ॥ ೩೬ ॥

ಮಯಾ ಚರಿತ್ರಂ ಕೃಷ್ಣಸ್ಯ ನ ದೃಷ್ಟಂ ನ ಶ್ರುತಂ ವದ ।
ದೃಷ್ಟಂ ಯಾದವಸಂಹಾರಂ ತಸ್ಮಾದ್ದುಃಖಂ ನ ಯಾತಿ ಮೇ ॥ ೩೭ ॥

ಚತುರ್ವ್ಯೂಹೇನ ಹರಿಣಾ ಯಾ ಪುರೀ ಶೋಭಿತಾ ಪುರಾ ।
ಸಾಽಪಿ ಮಗ್ನಾ ಸಮುದ್ರೇ ತು ಕೃಷ್ಣೋ ಭಕ್ತೇಃ ಪರಂ ಗತಃ ॥ ೩೮ ॥

---

೩೫. ಪುನಃ ಗುರುವು ಬಲಾತ್ಕಾರಮಾಡಲು ಆಗ ವಜ್ರನಾಭನು ಗರ್ಗಮುನಿಯನ್ನು ಕುರಿತು—ಕೃಷ್ಣಬಲರಾಮರೇ ಮೊದಲಾದ ಯಾದವರೆಲ್ಲರೂ ನನ್ನನ್ನು ಬಿಟ್ಟು ದೇವಲೋಕಕ್ಕೆ ಹೊರಟುಹೋದರು. ಅವಕ್ಕೋಸ್ಕರ ಅವರ ವಿರಹದಿಂದ ನಾನು ದುಃಖಿಸುತ್ತಿರುವೆನು.

೩೬. ಸ್ವಾಮಿ, ಅಮಾತ್ಯ, ಸ್ನೇಹಿತರು, ರಾಷ್ಟ್ರ, ದುರ್ಗ, ಬಲ ಇವುಗಳೆಲ್ಲವೂ ಇದ್ದರೂ ಸಹ ಕೃಷ್ಣಾದಿಗಳಿಲ್ಲದೆ ಏಕಾಂಗಿಯಾದ ನನಗೆ ಯಾವುದರಲ್ಲಿಯೂ ಪ್ರೀತಿಯಿಲ್ಲದಂತಾಗಿರುವುದು.

೩೭. ನಾನು ಕೃಷ್ಣನ ಚರಿತ್ರೆಯನ್ನು ಕೇಳಿಯಾಗಲೀ ಅಥವಾ ನೋಡಿಯಾಗಲೀ ಇಲ್ಲ. ಕೇವಲ ಯಾದವರ ನಾಶವನ್ನು ಮಾತ್ರ ನೋಡಿರುವೆನು. ಆದುದರಿಂದ ನನ್ನ ದುಃಖವು ಕಡಿಮೆಯಾಗುತ್ತಿಲ್ಲ.

೩೮. ಚತುರ್ವ್ಯೂಹ ಸೈನ್ಯಗಳಿಂದ ಕೂಡಿದ ಶ್ರೀ ಕೃಷ್ಣನಿಂದ ಯಾವ ಮಥುರಾಪುರಿಯು ಪ್ರಕಾಶಿಸುತ್ತಿತ್ತೋ ಅದೀಗ ಸಮುದ್ರದಲ್ಲಿ ಮುಳುಗಿರುವುದು. ಕೃಷ್ಣನು ಭಕ್ತಿಗೆ ವಶನಾಗುವನು.

ಕಸ್ಯ ಹೇತೋಃ ಕಿಮರ್ಥಂ ಚ ಜೀವಾಮಿ ಶಿಷ್ಯವತ್ಸಲ ।
ಅದ್ಯ ಯಾಸ್ಯಾಮಿ ಗಹನಂ ರಾಜ್ಯಂ ಕರ್ತುಂ ನ ಮೇ ಮನಃ ॥ ೩೯ ॥

॥ ಸೂತ ಉವಾಚ ॥

ತತೋ ಮುನೀನಾಂ ವೃಷಭೋ ಮಹಾತ್ಮಾ
ಶ್ರುತ್ವಾ ಗಿರಂ ಯಾದವಸತ್ತಮಸ್ಯ ।
ಸಂಶ್ಲಾಘ್ಯ ದುಃಖಂ ಶಮಯನ್ ಹಿ ತುಷ್ಟೋ
ಗರ್ಗೋಽಬ್ರವೀದ್ಭೂಪತಿಂ ವಜ್ರನಾಭಿಂ ॥ ೪೦ ॥

॥ ಗರ್ಗ ಉವಾಚ ॥

ವೃಷ್ಣಿಪ್ರವರ ಮದ್ವಾಕ್ಯಂ ಶೃಣು ಶೋಕವಿನಾಶನಂ ।
ಸರ್ವಂ ಪಾಪಹರಂ ಪುಣ್ಯಂ ಸಾವಧಾನತಯಾ ಶುಭಂ ॥ ೪೧ ॥

ಯೋ ರಾಜತೇ ಕುಶಸ್ಥಲ್ಯಾಂ ಕೃಷ್ಣಚಂದ್ರೋ ಹರಿಃ ಪುರಾ ।
ವಿರಾಜತೇ ಸ ಸರ್ವತ್ರ ಭಕ್ತ್ಯಾ ತಂ ಪಶ್ಯ ಭೂಪತೇ ॥ ೪೨ ॥

---

೩೯. ಹೀಗೆಲ್ಲಾ ಇರುವಾಗ ನಾನು ಯಾವ ಪ್ರಯೋಜನಕ್ಕೋಸ್ಕರವಾಗಿ ಬದುಕಿರಲಿ? ಆದುದರಿಂದ ರಾಜ್ಯವನ್ನು ಬಿಟ್ಟು ಅರಣ್ಯಕ್ಕೆ ಹೊರಟುಹೋಗುವೆನು. ರಾಜ್ಯವಾಳಲು ಸ್ವಲ್ಪವೂ ನನಗೆ ಇಷ್ಟವಿಲ್ಲವು.

೪೦. ಎಂಬುದಾಗಿ ಯದುಕುಲಪ್ರದೀಪನಾದ ವಜ್ರನಾಭಿಯು ಹೇಳಲು, ಆ ಮಹಾತ್ಮನ ಮಾತನ್ನು ಕೇಳಿ ಗರ್ಗನು ಕೃಷ್ಣಾದಿಗಳ ವಿಷಯದಲ್ಲಿ ಇಷ್ಟು ಅಭಿಮಾನದಿಂದ ದುಃಖಪಡುತ್ತಿರುವನಲ್ಲ ಎಂದು ಸಂತೋಷಪಟ್ಟು ಅವನ ದುಃಖವನ್ನು ಸಮಾಧಾನಮಾಡಲು ಅವನನ್ನು ಕುರಿತಿಂತೆಂದನು.

೪೧. ಯದುಶ್ರೇಷ್ಠನೇ, ನಾನೊಂದು ವಿಷಯವನ್ನು ಹೇಳುವೆನು. ಅದನ್ನು ಸಾವಧಾನದಿಂದ ಕೇಳು. ಅದು ಶೋಕವನ್ನು ನಿವಾರಿಸುವುದು. ಪಾಪಗಳನ್ನು ಪರಿಹರಿಸಿ ಪುಣ್ಯವನ್ನುಂಟುಮಾಡುವುದು.

೪೨. ಯಾವ ಶ್ರೀಕೃಷ್ಣನು ಕುಶಸ್ಥಲಿ ಎಂಬುದರಲ್ಲಿ ಹಿಂದೆ ಹೇಗೆ ರಾರಾಜಿಸುತಿದ್ದನೋ ಅದೇ ಕೃಷ್ಣನು ಹಾಗೆಯೇ ಎಲ್ಲೆಲ್ಲಿಯೂ ಪ್ರಕಾಶಿಸುತ್ತಿರುವನು. ಅವನನ್ನು ನೀನು ಭಕ್ತಿಯಿಂದ ಧ್ಯಾನಮಾಡು.

ಅದ್ಯ ತೇ ಕಥಯಿಷ್ಯಾಮಿ ಭುಕ್ತಿಮುಕ್ತಿಪ್ರದಾಂ ಕಥಾಂ ।
ಶೃಣು ತ್ವಂ ವಸುಧಾನಾಥ ಶ್ರೀಕೃಷ್ಣಬಲಯೋಃ ಪರಾಂ　　॥ ೪೩ ॥

॥ ಸೂತ ಉವಾಚ ॥

ಇತ್ಯುಕ್ತ್ವಾ ಭಗವಾನ್ ಗರ್ಗೋ ವಜ್ರಾಯ ಸ್ವಾಂ ಚ ಸಂಹಿತಾಂ ।
ಕಥಯಾಮಾಸ ವಿಪ್ರೇಂದ್ರ ಪುಣ್ಯಾಂ ನವದಿನೈಃ ಕಿಲ　　॥ ೪೪ ॥

ಇತಿ ಶ್ರೀ ಗರ್ಗಸಂಹಿತಾಯಾಮಶ್ವಮೇಧಖಂಡೇ
ಪ್ರಥಮೋಽಧ್ಯಾಯಃ

---

೪೩. ಎಲೈ ರಾಜನೇ, ನಿನಗೀಗ ಶ್ರೀ ಕೃಷ್ಣಬಲರಾಮರ ಪರಮಪವಿತ್ರವಾದ ಕಥೆಯನ್ನು ಹೇಳುವೆನು. ಅದನ್ನು ಕೇಳು. ಅದು ಭುಕ್ತಿಮುಕ್ತಿಪ್ರದವಾದುದು.

೪೪. ಎಂದು ಹೇಳಿ ಭಗವಾನ್ ಗರ್ಗಮುನಿಯು ವಜ್ರನಾಭನಿಗೆ ತನ್ನ ಸಂಹಿತೆಯನ್ನು ಒಂಭತ್ತು ದಿನಗಳವರೆಗೂ ಶ್ರವಣಮಾಡಿಸಿದನು.

ಇಲ್ಲಿಗೆ ಶ್ರೀ ಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಮೊದಲನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ದ್ವಿತೀಯೋಽಧ್ಯಾಯಃ

॥ ಸೂತ ಉವಾಚ ॥

ಇತಿ ಶ್ರುತ್ವಾ ವಜ್ರನಾಭಿರ್ಮುನೇಃ ಶ್ರೀಗರ್ಗಸಂಹಿತಾಂ ।
ಭೃಶಂ ಮುಮೋದಾಥ ಗುರುಂ ಪ್ರತ್ಯುವಾಚ ಪ್ರಣಮ್ಯ ಚ ॥ ೧ ॥

ಅದ್ಯ ಶ್ರೀಕೃಷ್ಣಚಂದ್ರಸ್ಯ ಚರಿತ್ರಂ ತು ಶ್ರುತಂ ಮಯಾ ।
ತ್ವನ್ಮುಖಾನ್ಮುನಿಶಾರ್ದೂಲ ತೇನ ದುಃಖಾಶ್ಚ ಮೇ ಗತಾಃ ॥ ೨ ॥

ಮೇ ಮನಸ್ತು ಕೃಪಾನಾಥ ಪುನಃ ಶ್ರೋತುಂ ಹರೇರ್ಯಶಃ ।
ಅತೃಪ್ತಸ್ಯಾಸ್ತಿ ಕೃಷ್ಣಸ್ಯ ವದಸ್ವ ಚರಿತಂ ಪರಂ ॥ ೩ ॥

ಎರಡನೆಯ ಅಧ್ಯಾಯವು

೧. ಸೂತನಿಂತೆಂದನು:—ಗರ್ಗಮುನಿಯು ಕೃಷ್ಣನ ಚರಿತ್ರೆಯನ್ನೆಲ್ಲಾ ಹೇಳಲು ಅದನ್ನು ಕೇಳಿ ವಜ್ರನಾಭಿಯು ಬಹಳ ಸಂತೋಷಪಟ್ಟು ತನ್ನ ಗುರುವನ್ನು ನಮಸ್ಕರಿಸಿ ಇಂತೆಂದನು.

೨. ಮುನಿವರನೇ, ನೀನು ಹೇಳಿದ ಶ್ರೀಕೃಷ್ಣಚಂದ್ರನ ಚರಿತ್ರೆಯನ್ನು ಕೇಳಿದೆನು. ಅದರಿಂದ ನನಗೊದಗಿದ್ದ ದುಃಖಗಳೆಲ್ಲವೂ ಪರಿಹಾರವಾದವು.

೩. ಕೃಪಾನಿಧಿಯೇ, ಆ ಪರಮಾತ್ಮನ ಚರಿತ್ರೆಯನ್ನು ಎಷ್ಟು ಕೇಳಿದರೂ ತೃಪ್ತಿಯೇ ಆಗುವುದಿಲ್ಲ. ಆ ಪುಣ್ಯತಮನ ಚರಿತ್ರೆಯನ್ನು ಮತ್ತೊಂದು ಬಾರಿ ತಿಳಿಸು.

ದ್ವಾರ್ವತ್ಯಾ ಮುಗ್ರಸೇನೇನ ಹಯಮೇಧಃ ಕೃತಃ ಪುರಾ ।
ತಚ್ಚರಿತ್ರಂ ವದ ಮುನೇ ಕಿಂಚಿತ್ಪೂರ್ವಂ ಶ್ರುತಂ ಮಯಾ ॥ ೪ ॥

ಅನುವ್ರತಾನಾಂ ಶಿಷ್ಯಾಣಾಂ ಸುತಾನಾಂ ಚ ಮುನೀಶ್ವರ ।
ಬ್ರೂಯುರ್ಗುಪ್ತಮನಾ ಪೃಷ್ಟಂ ಗುರವಃ ಕರುಣಾಮಯಾಃ ॥ ೫ ॥

॥ ಶ್ರೀ ಸೂತ ಉವಾಚ ॥

ಏವಂ ಭಾಷಿತಮಾಕರ್ಣ್ಯ ಯಾದವಾನಾಂ ಗುರುರ್ಮುನಿಃ ।
ಪ್ರೀತಃ ಪ್ರತ್ಯಾಹ ರಾಜೇಂದ್ರಂ ಸ್ಮರನ್ ಪಾದಾಂಬುಜಂ ಹರೇಃ ॥ ೬ ॥

॥ ಶ್ರೀ ಗರ್ಗ ಉವಾಚ ॥

ಧನ್ಯಸ್ತ್ವಂ ಕೃಷ್ಣಚಂದ್ರಸ್ಯ ಪಾದಯೋರ್ಭಕ್ತಿರೀದೃಶೀ ।
ಜಾತಾ ತೇ ಯಾದವಶ್ರೇಷ್ಠ ದಿಷ್ಟ್ಯಾ ತು ದುರ್ಲಭಾ ನೃಣಾಂ ॥ ೭ ॥

---

೪. ದ್ವಾರಕಾವತಿಯಲ್ಲಿ ಉಗ್ರಸೇನಮಹಾರಾಜನು ಅಶ್ವಮೇಧಯಾಗವನ್ನು ಮಾಡಿದ್ದನೆಂದು ಕೇಳಿಬಲ್ಲೆನು. ಆ ವಿಷಯವನ್ನೀಗ ನನಗೆ ತಿಳಿಸು.

೫. ಅನುವ್ರತರೂ, ಶಿಷ್ಯರೂ, ಮಕ್ಕಳೂ ಇವರುಗಳು ಕೇಳದಿದ್ದರೂ ಸಹ ಕರುಣಾಮಯರಾದ ಗುರುಗಳು ಅವರ ಮನೋಭಾವವನ್ನು ತಿಳಿದು ಅದರಂತೆ ಹೇಳುವರು. ಆದುದರಿಂದ ಶಿಷ್ಯನಾದ ನಾನು ಕೇಳಿರುವೆನು, ಅನುಗ್ರಹಿಸಬೇಕು.

೬. ಎಂದು ಹೇಳಲು, ಯದುಗುರುವಾದ ಗರ್ಗಾಚಾರ್ಯನು ವಜ್ರನಾಭಿಯು ಕೇಳಿದುದಕ್ಕೆ ಬಹಳ ಸಂತೋಷಪಟ್ಟು ಹರಿಯ ಚರಣಕಮಲಗಳನ್ನು ಸ್ಮರಿಸುತ್ತಾ ಇಂತೆಂದನು.

೭. ನಿನಗೆ ಶ್ರೀಕೃಷ್ಣನ ಪಾದಗಳಲ್ಲಿ ಈ ರೀತಿ ಭಕ್ತಿಯು ಹುಟ್ಟಿರುವುದರಿಂದ ನೀನೇ ಧನ್ಯನು. ಸಾಮಾನ್ಯರಾದ ಜನರಿಗೆ ಈರೀತಿ ಭಕ್ತಿ ಹುಟ್ಟುವುದು ದುರ್ಲಭವು.

ಕಥಯಾಮ್ಯತ್ರ ತೇ ರಾಜನ್ನಿತಿಹಾಸಂ ಶೃಣುಷ್ವ ವೈ ।
ಯಸ್ಯ ಶ್ರವಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥ ೮ ॥

ದ್ವಾಪರೇ ಪೀಡಿತಾ ರಾಜನ್ ಧರಾ ಭಾರೇಣ ಪಾಪಿನಾಂ ।
ಬ್ರಹ್ಮಾಗ್ರೇ ಕಥಯಾಮಾಸ ಸೋಽಪಿ ಶ್ರುತ್ವಾ ಹರಿಂ ಯಯೌ ॥ ೯ ॥

ನತ್ವಾ ಚ ಕಥಯಾಮಾಸ ಶ್ರುತ್ವಾ ಶ್ರೀರಾಧಿಕಾಪತಿಃ ।
ಮಹೀಮಾಶ್ವಾಸ್ಯ ದೇವೈಶ್ಚ ಭಾರಂ ಹರ್ತುಂ ಮನೋ ದಧೇ ॥ ೧೦ ॥

ವಿವಾಹೋ ವಸುದೇವಸ್ಯ ಮಧುಪುರ್ಯಾಮಭೂತ್ತತಃ ।
ಕಂಸಬೋಧನಷಟ್ಪುತ್ರವಧಃ ಕಂಸಭಯಂ ನೃಪ ॥ ೧೧ ॥

---

೮. ರಾಜನೇ, ನಾನೀಗ ಒಂದು ಇತಿಹಾಸವನ್ನು ಹೇಳುವೆನು ಕೇಳು. ಅದನ್ನು ಕೇಳಿದರೆ ಪಾಪಗಳೆಲ್ಲವೂ ನಾಶವಾಗುವುವು.

೯. ದ್ವಾಪರಯುಗದಲ್ಲಿ ಭೂಮಿಯು ಪಾಪಿಗಳ ಭಾರದಿಂದ ಪೀಡಿತಳಾಗಿ ಬ್ರಹ್ಮನ ಹತ್ತಿರಕ್ಕೆ ಹೋಗಿ ಅವನಿಗೆ ಮೊರೆ ಇಟ್ಟಳು. ಅವನು ಅದನ್ನು ಕೇಳಿ ನಾರಾಯಣನ ಹತ್ತಿರಕ್ಕೆ ಹೋಗಿ ಆ ವಿಷಯವನ್ನು ಅರಿಕೆಮಾಡಿಕೊಂಡನು.

೧೦. ಅದನ್ನು ಕೇಳಿ ಶ್ರೀವಿಷ್ಣುವು ಪೃಥ್ವಿಯನ್ನು ಸಮಾಧಾನಪಡಿಸಿ ದೇವತೆಗಳ ಸಹಾಯದಿಂದ ಭೂಭಾರವನ್ನು ನಾಶಮಾಡಬೇಕೆಂದು ಮನಸ್ಸುಮಾಡಿದನು.

೧೧. ಮುಂದಿನ ವಿಷಯಗಳನ್ನೆಲ್ಲಾ ವಿಸ್ತಾರವಾಗಿ ಹಿಂದೆಯೇ ಹೇಳಿರುವುದರಿಂದ ಇಲ್ಲಿ ಸಂಕ್ಷೇಪವಾಗಿ ಹೇಳಲ್ಪಡುವುದು. ಮಧುರೆಯಲ್ಲಿ ವಸುದೇವ ದೇವಕಿಯರಿಗೆ ವಿವಾಹವಾಯಿತು. ಆ ಸಮಯದಲ್ಲಿ ಆಕಾಶವಾಣಿಯ ಮಾತನ್ನು ಕೇಳಿ ಕಂಸನಿಗೆ ಭಯವುಂಟಾಯಿತು. ಅದರಿಂದ ಅವರಿಬ್ಬರನ್ನೂ ಕಾರಾಗಾರದಲ್ಲಿ ಇಡಿಸಿ ಅವರಲ್ಲಿ ಹುಟ್ಟಿದ ಆರುಜನ ಪುತ್ರರನ್ನೂ ಕೊಂದನು.

ಮಾಯಾಜ್ಞಾಮನುದೇವಾದಿಸ್ತುತಿಃ ಕೃಷ್ಣಸಮುದ್ಭವಂ ।
ವರ್ಣನಂ ರೂಪಕೃಷ್ಣಸ್ಯ ವಸುದೇವಸ್ಯ ಸಂಸ್ತುತಿಃ ॥ ೧೨ ॥

ದೇವಕ್ಯಾದಿಪುರಾಕೃತ್ಯಕಥನಂ ಜಗದೀಶತುಃ ।
ಗೋಕುಲಂ ನಯನಂ ಕನ್ಯಾಪಾತನಂ ತದ್ವಿಭಾಷಣಂ ॥ ೧೩ ॥

ಸಾಂತ್ವನಂ ವಸುದೇವಸ್ಯ ಮೋಚನಂ ಭಾರ್ಯಯಾ ಸಹ ।
ಕಂಸದುರ್ಮಂತ್ರದೈತ್ಯೇಷು ಸಾಧುಬಾಲ ಉಪದ್ರವಃ ॥ ೧೪ ॥

ಪ್ರಾದುರ್ಭೂತೇ ವ್ರಜೇ ಕೃಷ್ಣೇ ವ್ರಜರಾಜಮಹೋತ್ಸವಃ ।
ಮಥುರಾಗಮನಂ ನಂದವಸುದೇವಸಮಾಗಮಃ ॥ ೧೫ ॥

---

೧೨. ವಿಷ್ಣುವು ಮಾಯೆಗೆ ವಸುದೇವನ ಎರಡನೆಯ ಹೆಂಡತಿಯಾದ ಯಶೋದೆಯಲ್ಲಿ ಜನಿಸುವಂತೆ ಅಪ್ಪಣೆಮಾಡುವನು. ಅನಂತರ ಕೃಷ್ಣನು ದೇವಕಿಯಲ್ಲಿ ಹುಟ್ಟುವನು. ವಸುದೇವನು ಅವನ ಸ್ವರೂಪವನ್ನು ನೋಡಿ ಸ್ತುತಿಸುವನು.

೧೩. ಆಗ ವಿಷ್ಣುವು ದೇವಕಿಮೊದಲಾದವರ ಹಿಂದಿನ ಜನ್ಮದ ವಿಷಯವನ್ನು ಹೇಳುವನು. ಅವನ ಅನುಜ್ಞೆಯಂತೆ ಶಿಶುವನ್ನು ಗೋಕುಲದಲ್ಲಿ ಯಶೋದೆಯ ಸಮೀಪದಲ್ಲಿ ಇರಿಸಿ ಆ ಹೆಣ್ಣು ಶಿಶುವನ್ನು ಮಥುರೆಗೆ ತರುವನು. ಆಗ ಕಂಸನು ಅದನ್ನು ಕೊಲ್ಲಲು ಹೋಗುವನು. ಅದು ದುರ್ಗಿಯಾಗಿ 'ನಿನ್ನ ಶತ್ರುವು ಬೆಳೆಯುತ್ತಿರುವನೆಂದು' ಹೇಳಿ ಮಾಯವಾಗುವಳು.

೧೪. ಆಗ ಕಂಸನು ದುಃಖಿಸುತ್ತಿರುವ ದೇವಕೀವಸುದೇವರನ್ನು ಸಮಾಧಾನಪಡಿಸಿ ಕಾರಾಗಾರದಿಂದ ಬಿಡಿಸುವನು. ಗೋಕುಲದಲ್ಲಿ ಬೆಳೆಯುತ್ತಿರುವ ಕೃಷ್ಣನನ್ನು ಕಂಸನಿಂದ ಪ್ರೇರಿತರಾದ ದೈತ್ಯರು ಹಿಂಸಿಸುವರು.

೧೫. ಗೋಕುಲದಲ್ಲಿರುವವರು ಕೃಷ್ಣನ ಆಟಪಾಟಗಳಿಂದ ಸಂತೋಷಪಡುವರು. ಮಥುರೆಯಲ್ಲಿ ನಂದನೂ, ವಸುದೇವನೂ, ಕಲೆತು ಮಾತನಾಡುವರು.

ಪೂತನಾಸುಪಯಃಪಾನಂ ನಂದಗೋಪಾದಿವಿಸ್ಮಯಃ ।
ಶಕಟಿವ್ಯತ್ಯಯೇ ದೈತ್ಯಚಕ್ರವಾತವಧಃ ಶಿಶೋಃ ॥ ೧೬ ॥

ಸಂಲಾಲನೇ ಮುಖೇ ಧಾತ್ರಾ ಜೃಂಭಣೇ ವಿಶ್ವದರ್ಶನಂ ।
ರಾಮಕೇಶವಯೋರ್ನಾಮ್ನೋಃ ಕಾರಣಂ ಕೇಲಿರೇತಯೋಃ ॥ ೧೭ ॥

ಧೌರ್ತ್ಯಂ ಗೋಪವಧೂಗೇಹೇ ಪ್ರಸಂಗಾ ನ್ಮೃದಭಕ್ಷಣಂ ।
ದರ್ಶನಂ ವಿಶ್ವರೂಪಸ್ಯ ನಂದಭಾಗ್ಯಪುರಾಕಥಾ ॥ ೧೮ ॥

ಚೌರ್ಯಂ ಹೈಯಂಗವಸ್ಯಾಥ ಬಂಧನಂ ದಾಮಭಿರ್ಬಲಾತ್ ।
ಯಮುಲಾರ್ಜುನಯೋಃ ಶಾಪೋ ಭಂಗಶ್ಚೈವ ಸ್ತುತಿಸ್ತಯೋಃ ॥ ೧೯ ॥

---

೧೬. ಪೂತನಿಯ ಹಾಲನ್ನು ಕುಡಿಯುವನೆಂದಿಂದ ಅವಳನ್ನು ಕೊಂದು ಹಾಕುವನು. ಶಕಟಾಸುರನೆಂಬುವನನ್ನೂ, ವಾಯುರೂಪದಿಂದ ಬಂದು ಕೃಷ್ಣನನ್ನು ಎತ್ತಿಕೊಂಡು ಹೋದ ರಾಕ್ಷಸನನ್ನೂ ಕೊಲ್ಲುವನು. ಅದನ್ನು ನೋಡಿ ನಂದಗೋಪಾದಿಗಳೆಲ್ಲರೂ ವಿಸ್ಮಿತರಾಗುವರು.

೧೭. ಕೃಷ್ಣನು ಬೆಳೆಯುತ್ತಿದ್ದನು. ಆಕಳಿಸುವ ಸಮಯದಲ್ಲಿ ಬ್ರಹ್ಮನಿಗೆ ಪ್ರಪಂಚವೆಲ್ಲವನ್ನೂ ತೋರಿಸಿದನು. ರಾಮಕೃಷ್ಣರೆಂಬ ಹೆಸರಿನಿಂದ ಪ್ರಸಿದ್ಧರಾಗಿ ಬಾಲಲೀಲೆಗಳನ್ನು ಆಡಿದರು.

೧೮. ಗೊಲ್ಲಯುವತಿಯರ ಮನೆಯಲ್ಲಿ ಹಾಲುಮೊಸರುಗಳನ್ನು ಕದಿಯುತ್ತಾ ಚೇಷ್ಟೆಗಳನ್ನು ಮಾಡಿದರು. ಯಾವುದೋ ಒಂದು ಸಮಯದಲ್ಲಿ ಕೃಷ್ಣನು ಮಣ್ಣನ್ನು ತಿನ್ನಲು ಆಗ ಯಶೋದೆಗೆ ವಿಶ್ವರೂಪವನ್ನು ತೋರಿಸಿದನು. ಎಲ್ಲರೂ ನಂದನ ಭಾಗ್ಯವನ್ನು ಹೊಗಳಿದರು.

೧೯. ಬೆಣ್ಣೆಯನ್ನು ಕದಿಯಲು ಯಶೋದೆಯು ಹಗ್ಗದಿಂದ ಕೃಷ್ಣನನ್ನು ಒರಳಿಗೆ ಕಟ್ಟಿಹಾಕಿದಳು. ಅವನು ಅದನ್ನು ಎಳೆದುಕೊಂಡು ಹೋಗಿ ಹಿತ್ತಿಲಲ್ಲಿರುವ ಮರಗಳ ನಡುವೆ ಅದನ್ನು ಸಿಕ್ಕಿಸಿ ಎಳೆದನು. ಆ ಮರಗಳು ಉರುಳಿದವು. ಅದರಿಂದ ಯಮಳಾರ್ಜುನರೆಂಬ ಇಬ್ಬರು ಬಂದು ತಮ್ಮ ಶಾಪವು ವಿಮೋಚನೆಯಾಯಿತೆಂದು ಕೃಷ್ಣನನ್ನು ಸ್ತುತಿಸಿದರು.

ಬಾಲಕ್ರೀಡೋಪನಂದಾದಿಮಂತ್ರಣಂ ಗಮನಂ ತತಃ ।
ವೃಂದಾವನೇ ತಯೋಃ ಕ್ರೀಡಾ ವಯಸ್ಯೈರ್ವತ್ಸಚಾರಿಣೋಃ ॥ ೨೦ ॥

ವತ್ಸಾಸುರಸ್ಯ ಚ ವಧೋ ಬಕಾದ್ಯಾಸುರಯೋರಪಿ ।
ಭೋಜನಂ ಸಖಿಭಿಸ್ತೀರೇ ಯಮುನಾಯಾ ಹರೇರ್ಮುದಾ ॥ ೨೧ ॥

ವತ್ಸಾದ್ಯಾಹರಣಂ ಧಾತ್ರಾ ಕೃಷ್ಣತ್ವಂ ವತ್ಸಪಾಲಯೋಃ ।
ಬ್ರಹ್ಮಣೋ ಗಮನಂ ಪಶ್ಚಾತ್ಸ್ತುತಿಃ ಕೃಷ್ಣರತಿರ್ಗತಿಃ ॥ ೨೨ ॥

ಗೋಚಾರಣೇ ಮಹಾಕ್ರೀಡಾಧೇನುಕಾದಿವಧಸ್ತಥಾ ।
ವ್ರಜ ಆಗಮನಂ ಕೃಷ್ಣಗೋಪೀನೇತ್ರಮಹೋತ್ಸವಃ ॥ ೨೩ ॥

---

೨೦. ಅನಂತರ ನಂದಾದಿಗಳೆಲ್ಲರೂ ಮರಮುಂತಾದುವು ಉರುಳಿದುದರಿಂದ ತಮಗೇನಾದರೂ ಅನಿಷ್ಟಸಂಭವಿಸಬಹುದೆಂದು ಹೆದರಿ ವೃಂದಾವನಕ್ಕೆ ಎಲ್ಲರೂ ತೆರಳುವರು. ಅಲ್ಲಿ ರಾಮಕೃಷ್ಣರು ತಮ್ಮ ಗೆಳೆಯರೊಡನೆ ಎಲ್ಲೆಲ್ಲಿಯೂ ತಿರುಗುತ್ತಾ ಆಟವಾಡುವರು.

೨೧. ಅಲ್ಲಿಗೆ ಬಂದ ವತ್ಸಾಸುರ, ಬಕಾಸುರ, ಮುಂತಾದವರನ್ನು ವಧೆಮಾಡಿದನು. ತನ್ನ ಗೆಳೆಯರೊಡನೆ ಯಮುನಾನದಿಯ ತೀರದಲ್ಲಿ ಭೋಜನಮಾಡಿ ಆನಂದದಿಂದ ಕ್ರೀಡಿಸಿದನು.

೨೨. ಅನಂತರ ಬ್ರಹ್ಮನು ಬಂದು ಕೃಷ್ಣನನ್ನು ಪರೀಕ್ಷಿಸಬೇಕೆಂದು ಕರುವನ್ನು ಅಪಹರಿಸಲು ಕೃಷ್ಣನು ಅದನ್ನು ಬಿಡಿಸಿ ತರುವನು. ಬ್ರಹ್ಮನು ಶ್ರೀಕೃಷ್ಣನನ್ನು ನಾನಾ ವಿಧವಾಗಿ ಸ್ತೋತ್ರಮಾಡಿ ತನ್ನ ಲೋಕಕ್ಕೆ ಹೊರಟುಹೋಗುವನು.

೨೩. ಹಸುಗಳನ್ನು ಮೇಯಿಸುತ್ತಾ ಸ್ನೇಹಿತರೊಡನೆ ಆಟವಾಡುತ್ತಿರಲು ಧೇನುಕನೆಂಬ ರಾಕ್ಷಸನು ಇವರಿಗೆ ತೊಂದರೆ ಕೊಟ್ಟನು. ಆಗ ಅವನನ್ನು ಕೃಷ್ಣನು ಕೊಂದುಹಾಕಿದನು. ಅನಂತರ ವೃಂದಾವನಕ್ಕೆ ಬರಲು ಗೋಪಿತರುಣಿಯರೆಲ್ಲರೂ ಕೃಷ್ಣನನ್ನು ನೋಡಿ ಸಂತೋಷಪಟ್ಟರು.

ಮೃತಾನ್ ವಿಷಾಂಭಃಪಾನೇನ ಗೋಪಾನ್ ಹರಿರಜೀವಯತ್ ।
ಕಾಲೀಯದಮನೇ ಸ್ತೋತ್ರಂ ತದ್ಭಾರ್ಯಾಣಾಂ ಪ್ರಲಾಪನಂ ॥ ೨೪ ॥

ಹ್ರದೇ ಕಾಲೀಯಸಂಬಂಧಕಥನಂ ವಹ್ನಿಮೋಚನಂ ।
ಕ್ರೀಡಾಪ್ರಲಂಭನಿಧನಂ ದಾವಾಗ್ನೇರ್ಮೋಚನಂ ಗವಾಂ ॥ ೨೫ ॥

ವರ್ಷಾಶರದ್ವರ್ಣನಂ ಚ ಗೋಪೀನಾಂ ವಚನಾಮೃತಂ ।
ವ್ರತಂ ಗೋಕುಲಕನ್ಯಾನಾಂ ವಸ್ತ್ರಾಣಾಂ ಹರಣಂ ಮುದಾ ॥ ೨೬ ॥

ವನಭಾಗ್ಯಕಥಾ ಗೋಪಪ್ರಾರ್ಥನಾ ಪ್ರೇಷಣಂ ಮಖೇ ।
ವಿಪ್ರಭಾರ್ಯಾಪ್ರಸಾದಶ್ಚ ಪಶ್ಚಾತ್ತಾಪೋ ದ್ವಿಜನ್ಮನಾಂ ॥ ೨೭ ॥

೨೪-೨೫. ಕಾಳಿಂದೀ ಮಡುವಿನಲ್ಲಿ ನೀರುಕುಡಿದು ಅದರಲ್ಲಿ ವಾಸಮಾಡು ತ್ತಿದ್ದ ಕಾಲೀಯಸರ್ಪನ ವಿಷದಿಂದ ಅನೇಕ ಗೊಲ್ಲರ ಹುಡುಗರು ಸತ್ತುಹೋಗಿದ್ದರು. ಅವರೆಲ್ಲರನ್ನೂ ಬದುಕಿಸಿದನು. ಮಡುವಿಗೆ ಧುಮಿಕಿ ಆ ಸರ್ಪವನ್ನು ತುಳಿದು ಅವನ ಅಹಂಕಾರವನ್ನು ಅಡಗಿಸಿದನು. ಆಗ ಸರ್ಪನ ಹೆಂಡತಿಯರು ಬಂದು ಕೃಷ್ಣನಲ್ಲಿ ಮೊರೆಯಿಡುವರು. ಸರ್ಪನೂ ಕೃಷ್ಣನನ್ನು ಸ್ತುತಿಸುವನು. ಆಗ ಆ ಮಡುವನ್ನು ಬಿಟ್ಟು ಹೊರಟುಹೋಗುವಂತೆ ಹೇಳುವನು. ಆಟವಾಡುತ್ತಿರಲು ಅವರಂತೆಯೇ ರೂಪವನ್ನು ಹಾಕಿಕೊಂಡು ಬಂದ ಪ್ರಲಂಭನೆಂಬ ರಾಕ್ಷಸನನ್ನು ಕೊಲ್ಲುವನು. ಕಾಡಿಗೆ ಬಿದ್ದಿದ್ದ ಕಿಚ್ಚನ್ನು ಅಡಗಿಸುವನು. ಅದರಲ್ಲಿ ಸಿಕ್ಕಿಬಿದ್ದ ಹಸುಗಳನ್ನು ಕಾಪಾಡುವನು.

೨೬. ವರ್ಷಕಾಲದ ಸೊಬಗನ್ನೂ ಶರತ್ಕಾಲದ ಸೌಂದರ್ಯವನ್ನೂ ವರ್ಣಿಸುವುದು. ಗೋಪಿಕಾಸ್ತ್ರೀಯರ ಮೃದುಮಧುರವಾದ ಆಲಾಪಗಳು. ಅವರ ವ್ರತದ ವಿಷಯವು. ಅದಕ್ಕೋಸ್ಕರ ಸ್ನಾನಮಾಡಲು ಬಂದಾಗ ಅವರುಗಳ ವಸ್ತ್ರಗಳನ್ನೆಲ್ಲಾ ಆಟಕ್ಕೋಸ್ಕರವಾಗಿ ಅಪಹರಿಸುವುದು.

೨೭. ಉದ್ಯಾನವನದ ಸೊಬಗಿನ ವರ್ಣನೆ, ಗೋಪರಪ್ರಾರ್ಥನೆ, ಇಂದ್ರನನ್ನು ಆರಾಧಿಸುವುದಕ್ಕಾಗಿ ಬ್ರಾಹ್ಮಣರ ಪತ್ನಿಯರು ತಂದಿದ್ದ ಭಕ್ಷಭೋಜ್ಯಾದಿಗಳನ್ನು ತಿಂದು ಅವರನ್ನು ಅನುಗ್ರಹಿಸುವುದು. ಬ್ರಾಹ್ಮಣರು ಯಜ್ಞಭಂಗವಾಯಿತೆಂದು ಪಶ್ಚಾತ್ತಾಪಪಡುವುದು.

ಯೊಾಗಭಂಗೋ ಮಹೇಂದ್ರಸ್ಯ ಧೃತಿರ್ಗೋವರ್ಧನಸ್ಯ ಚ ।
ಸುರೇಂದ್ರಗರ್ವಹರಣಂ ಗರ್ಗಜಾತಸ್ಯ ವರ್ಣನಂ ॥ ೨೮ ॥

ಗೋಪಶಂಕಾಪಗಮನಮಿಂದ್ರಧೇನ್ವಾಭಿಯಾಚನಂ ।
ನಂದಸ್ಯ ಮೋಕ್ಷಣಂ ಗೋಪವೈಕುಂಠಗಮನಂ ತತಃ ॥ ೨೯ ॥

ಪಂಚಾಧ್ಯಾಯನಿಶಾಕ್ರೀಡಾ ಸರ್ಪಾನ್ನಂದಸ್ಯ ಮೋಕ್ಷಣಂ ।
ಶಂಖಚೂಡವಧಃ ಪಶ್ಚಾದ್ಗೋಪೀಗೀತಂ ವೃಷಾರ್ದನಂ ॥ ೩೦ ॥

ಕಂಸನಾರದಸಂವಾದಃ ಕಂಸಾಕ್ರೂರಕಥಾ ತತಃ ।
ಕೇಶಿನೋ ನಿಧನಂ ಕೃಷ್ಣಾನ್ನಾರದರ್ಷಿಕಥಾ ತತಃ ॥ ೩೧ ॥

---

೨೮. ಪ್ರತಿವರ್ಷದಂತೆ ನಡೆಸಬೇಕಾಗಿದ್ದ ಇಂದ್ರಪೂಜೆಯನ್ನು ನಿಲ್ಲಿಸಿ ಗೋವರ್ಧನಗಿರಿಯ ಪೂಜೆಯನ್ನು ಮಾಡಿಸಿದನು. ಆಗ ಇಂದ್ರನು ಕೋಪದಿಂದ ಮಳೆಗರೆಯಲು ಕೃಷ್ಣನು ಗೋವರ್ಧನಪರ್ವತವನ್ನು ಎತ್ತಿ ಹಿಡಿದು ಇಂದ್ರನ ಗರ್ವವನ್ನು ಅಡಗಿಸುವನು. ಗರ್ಗಜಾತನ ವರ್ಣನೆಯು.

೨೯. ಗೋಪರ ಸಂದೇಹಗಳನ್ನು ಪರಿಹರಿಸುವುದು. ಕಾಮಧೇನುವಿನ ಪ್ರಾರ್ಥನೆ. ನಂದನಿಗೆ ಮೋಕ್ಷವನ್ನೂ, ಗೋಪರಿಗೆ ವೈಕುಂಠಪ್ರಾಪ್ತಿಯನ್ನೂ ಅನುಗ್ರಹಿಸುವುದು.

೩೦. ಐದು ಅಧ್ಯಾಯಪೂರ್ತ ಕೃಷ್ಣನ ರಾತ್ರಿಕ್ರೀಡೆಯು. ಸರ್ಪದಿಂದ ನಂದನನ್ನು ಬಿಡಿಸುವುದು. ಶಂಖಚೂಡನೆಂಬ ದೈತ್ಯನ ವಧೆಯು. ಗೋಪಿಯರ ಗೀತ ನಾಟ್ಯದ ವರ್ಣನೆಯು. ವೃಷರೂಪಿಯಾದ ರಾಕ್ಷಸನ ವಧೆಯು.

೩೧. ಕಂಸನು ಮತ್ತು ನಾರದರು ಇವರುಗಳ ಮಾತುಕಥೆಯು. ಕಂಸನಿಗೂ ಅಕ್ರೂರನಿಗೂ ನಡೆದ ಸಂವಾದವು. ಕೃಷ್ಣನು ಕೇಶಿಯನ್ನು ವಧಿಸುವುದು. ನಾರದ ಋಷಿಯ ಕಥೆಯು.

ವ್ಯೋಮಾಸುರವಧೋಽಕ್ರೂರಾಗಮನಂ ಗೋಕುಲೇಷು ಚ ।
ದರ್ಶನಾನ್ನಂದಹೃಷ್ಟಾತ್ಮಾ ರೋಮಾಂಚೋ ಗದ್ಗದಗಿರಃ ॥ ೩೨ ॥

ಸಂವಾದೋ ರಾಮಕೃಷ್ಣಾಭ್ಯಾಂ ವರ್ಣಿತಂ ಕಂಸಚೇಷ್ಟಿತಂ ।
ರಾಮಕೃಷ್ಣಪ್ರಯಾಣಂ ಚ ತಥಾ ಗೋಪೀಪ್ರಲಾಪನಂ ॥ ೩೩ ॥

ಮಥುರಾಗಮನಂ ಮಧ್ಯೇ ಹ್ರದೇ ಕೃಷ್ಣಸ್ಯ ದರ್ಶನಂ ।
ಸ್ತುತಿಃ ಪುರಾ ಗತಿಃ ಪಶ್ಚಾದ್ದರ್ಶನಂ ಪುರಸಂಪದಃ ॥ ೩೪ ॥

ರಜಕಸ್ಯ ಶಿರಶ್ಛೇದೋ ವಾಯಕಸ್ಯ ವರಾದಯಃ ।
ಸುದಾಮ್ನೋ ವರದಾನಂ ಚ ಕುಬ್ಜಾಸಂದರ್ಶನಂ ಹರೇಃ ॥ ೩೫ ॥

---

೩೨. ವ್ಯೋಮಾಸುರನೆಂಬುವನನ್ನು ಕೃಷ್ಣನು ವಧೆಮಾಡುವನು. ಆಮೇಲೆ ಗೋಕುಲಕ್ಕೆ ಅಕ್ರೂರನು ಬರುವನು. ಅವನನ್ನು ನೋಡಿ ನಂದನು ಅತಿಹರ್ಷದಿಂದ ರೋಮಾಂಚಿತನಾಗಿ ಗದ್ಗದವಾದ ಧ್ವನಿಯಿಂದ ಮಾತನಾಡುವುದು.

೩೩. ರಾಮಕೃಷ್ಣರು ಪರಸ್ಪರ ಮಾತನಾಡುವುದು. ಕಂಸನ ವ್ಯವಹಾರ ವರ್ಣನೆಯು. ಅಕ್ರೂರನ ಮಾತಿನಂತೆ ಮಥುರೆಗೆ ರಾಮಕೃಷ್ಣರು ತೆರಳುವುದು. ಅದನ್ನು ಕಂಡು ಗೋಪಿಕೆಯರು ದುಃಖಿಸುವುದು.

೩೪. ಮಥುರೆಗೆ ಹೋಗುತ್ತಿರುವಾಗ ಮಾರ್ಗಮಧ್ಯದಲ್ಲಿ ಕೃಷ್ಣನನ್ನು ದರ್ಶನಮಾಡಿ ಸ್ತುತಿಸುವುದು. ಅಲ್ಲಿಂದ ಮುಂದುವರೆದು ಮಥುರೆಯ ಸೊಬಗನ್ನವರು ನೋಡುವುದು.

೩೫. ದಾರಿಯಲ್ಲಿ ಸಿಕ್ಕಿ ಬಟ್ಟೆಯನ್ನು ಕೇಳಿದರೂ ಕೊಡದ ಅಗಸರವನ ತಲೆಯನ್ನು ಕತ್ತರಿಸುವುದು. ನೇಯ್ಗೆಯವನಿಗೂ, ಸುದಾಮನಿಗೂ ವರಗಳನ್ನು ಕೊಡುವುದು. ಕುಬ್ಜೆಯನ್ನು ಅನುಗ್ರಹಿಸುವುದು.

ಧನುರ್ಭಂಗಃ ಸೈನ್ಯವಧಃ ಕಂಸದುರ್ಹೇತುದರ್ಶನಂ ।
ರಂಗೋತ್ಸವಃ ಕುವಲಯಾಪೀಡಯುದ್ಧವಿಘಾತನಂ ॥ ೩೬ ॥

ದರ್ಶನಂ ರಾಮಕೃಷ್ಣಸ್ಯ ಪೌರಾಣಾಂ ಪ್ರೇಮವರ್ಧನಂ ।
ಮಲ್ಲಾನಾಂ ನಿಧನಂ ರಂಗೇ ಕಂಸಸ್ಯ ಸಹ ಬಂಧುಭಿಃ ॥ ೩೭ ॥

ಪಿತ್ರೋಶ್ಚ ಸಾಂತ್ವನಂ ಸರ್ವಸುಹೃದಾಂ ಚೈವ ತೋಷಣಂ ।
ಉಗ್ರಸೇನಾಭಿಷೇಕಂ ಚ ನಂದಾದಿವ್ರಜಪ್ರೇಷಣಂ ॥ ೩೮ ॥

ಈಶದ್ವಿಜಾತಿಸಂಸ್ಕಾರಂ ಪಠನಂ ಚ ಗುರೋರ್ಗೃಹೆ ।
ಮೃತಪುತ್ರಪ್ರದಾನಂ ಚ ಗುರೋಃ ಪಂಚಜನಾರ್ದನಂ ॥ ೩೯ ॥

---

೩೬. ಊರಮುಂದಿನ ಆಯುಧಶಾಲೆಯಲ್ಲಿಟ್ಟಿದ್ದ ಧನುಸ್ಸನ್ನು ಮುರಿಯಲು ಆಗ ಎದುರಿಸಿದ ಸೈನ್ಯವನ್ನೆಲ್ಲಾ ನಾಶಮಾಡುವುದು. ಕಂಸನಿಗೆ ದುಶ್ಶಕುನಗಳು ಕಾಣುವುದು. ರಂಗೋತ್ಸವವು. ಅಲ್ಲಿ ಕುವಲಯಾಪೀಡವೆಂಬ ಆನೆಯೊಡನೆ ಯುದ್ಧ ಮಾಡಿ ಅದನ್ನು ವಧಿಸುವುದು.

೩೭. ಮಧುರಾವಾಸಿಗಳು ರಾಮಕೃಷ್ಣರನ್ನು ನೋಡಿ ತೃಪ್ತಿಪಡುವುದು. ಅದರಿಂದ ಅವರಿಗೆ ರಾಮಕೃಷ್ಣರಲ್ಲಿ ಪ್ರೀತಿಯು ಬೆಳೆಯುವುದು. ರಂಗದಲ್ಲಿ ಇವರನ್ನು ಎದುರಿಸಿದ ಜಟ್ಟಿಗಳನ್ನು ಕೊಲ್ಲುವುದು. ಆಗ ಕಂಸನೂ ಅವನ ಕಡೆಯವರೂ ಇವರನ್ನು ಕೊಲ್ಲಲು ಬರಲು ಅವರನ್ನೇ ವಧೆಮಾಡಿದುದು.

೩೮. ವಸುದೇವ ದೇವಕಿಯರನ್ನು ಸಮಾಧಾನಪಡಿಸುವುದು. ತನ್ನ ಸ್ನೇಹಿತರಿಗೆಲ್ಲಾ ಆನಂದಪಡಿಸುವುದು. ಉಗ್ರಸೇನನಿಗೆ ರಾಜ್ಯಾಭಿಷೇಕ ಮಾಡುವುದು. ನಂದಾದಿಗಳನ್ನು ಬೃಂದಾವನಕ್ಕೆ ಕಳುಹಿಸುವುದು.

೩೯. ಉಪನಯನಾದಿ ಸಂಸ್ಕಾರಗಳಾದನಂತರ ಗುರುವಿನ ಹತ್ತಿರ ವಿದ್ಯಾಭ್ಯಾಸ ಮಾಡುವುದು. ಗುರುವಿನ ಪುತ್ರನು ಸಾಯಲು ಅವನನ್ನು ಬದುಕಿಸಿಕೊಡುವುದು. ಪಂಚಜನರೆಂಬ ದೈತ್ಯರನ್ನು ನಾಶಮಾಡುವುದು.

ಪುನರಾಗಮನಂ ಶೌರೇರ್ಮಧುಪುರ್ಯಾಂ ಮಹೋತ್ಸವಃ ।
ಉದ್ಧವಪ್ರೇಷಣಂ ಗೋಪೀವಿಲಾಪಪರಿಸಾಂತ್ವನಂ ॥ ೪೦ ॥

ಮೇಲನಾರ್ಥಂ ತು ಕೃಷ್ಣಸ್ಯಾಗಮನಂ ನಂದಗೋಕುಲೇ ।
ಪುನರ್ವೈ ಕೋಲದೈತ್ಯಸ್ಯ ವಧಃ ಪಶ್ಚಾತ್ಪ್ರಕೀರ್ತಿತಃ ॥ ೪೧ ॥

ಕುಬ್ಜಾರತಿಸ್ತಥಾಕ್ರೂರಪ್ರೇಷಣಂ ಗಜಸಾಹ್ವಯೇ ।
ಪಾಂಡವೇಷು ಚ ವೈಷಮ್ಯಂ ಧೃತರಾಷ್ಟ್ರಸ್ಯ ಬೋಧನಂ ॥ ೪೨ ॥

ಇತಿ ಶ್ರೀ ಗರ್ಗಸಂಹಿತಾಯಾಮಶ್ವಮೇಧಖಂಡೇ
ದ್ವಿತೀಯೋಽಧ್ಯಾಯಃ

---

೪೦. ಗುರುಕುಲದಿಂದ ಮಧುರೆಗೆ ಕೃಷ್ಣನು ಬಂದು ಉತ್ಸವವನ್ನು ಜರುಗಿಸುವುದು. ಉದ್ಧವನನ್ನು ಕಳುಹಿಸಿ ಗೋಪಿಯರ ದುಃಖವನ್ನು ಸಮಾಧಾನ ಪಡಿಸುವುದು.

೪೧. ಅವರೊಡನೆ ಕೂಡಲು ಕೃಷ್ಣನು ನಂದಗೋಕುಲಕ್ಕೆ ಹೋಗಿ ಅಲ್ಲಿ ಕೋಲನೆಂಬ ದೈತ್ಯನನ್ನು ಕೊಲ್ಲುವನು.

೪೨. ಅನಂತರ ಕುಬ್ಜೆಯನ್ನು ಪ್ರೀತಿಸುವುದು. ಗಜಯುದ್ಧಕೋಸ್ಕರ ಅಕ್ರೂರನನ್ನು ಕಳುಹಿಸುವುದು. ಪಾಂಡವರಲ್ಲಿ ಧೃತರಾಷ್ಟ್ರನ ದ್ವೇಷವರ್ಣನೆ. ಅದಕ್ಕೋಸ್ಕರ ಅವನಿಗೆ ಅಕ್ರೂರನು ಬೋಧಿಸುವುದು. ಇವೆಲ್ಲವೂ ಹಿಂದೆಯೇ ವಿಸ್ತಾರವಾಗಿ ಹೇಳಲ್ಪಟ್ಟಿದೆ.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಎರಡನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

॥ ತೃತೀಯೋಽಧ್ಯಾಯಃ ॥

॥ ಗರ್ಗ ಉವಾಚ ॥

ಜಾಮಾತೃವಧಸಂತಪ್ತ ಜರಾಸಂಧಚಮೂವಧಃ ।
ಬಹುಶಃ ಸೇನಯೋರ್ಯುದ್ಧೇ ದ್ವಾರಿಕಾದುರ್ಗಕಾರಣಂ ॥ ೧ ॥

ಯವನಸ್ಯ ವಧಂ ದೃಷ್ಟ್ವಾ ಮುಚುಕುಂದಸ್ಯ ಸಂಸ್ತುತಿಃ ।
ವರಂ ದತ್ವಾ ತತೋ ಮ್ಲೇಂಛವಧಂ ಕೃತ್ವಾ ಘನೇ ತತಃ ॥ ೨ ॥

ಮೂರನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಅಳಿಯನಾದ ಕಂಸನು ಸಾಯಲು ಜರಾಸಂಧನು ಅತಿಕೋಪದಿಂದ ತನ್ನ ಸೈನ್ಯವನ್ನು ಕಳುಹಿಸಿದನು. ಕೃಷ್ಣನ ಸೇನೆಗೂ ಆ ಸೇನೆಗೂ ಯುದ್ಧ ನಡೆಯಿತು. ದ್ವಾರಕೆಗೆ ದುರ್ಗವನ್ನು ಕಟ್ಟಿಸಿದರು.

೨. ಯುದ್ಧದಲ್ಲಿ ಯವನ ಸೈನ್ಯಗಳೆಲ್ಲವೂ ಸತ್ತುಹೋದವು. ಇದನ್ನು ನೋಡಿ ಮುಚುಕುಂದನು ಕೃಷ್ಣನನ್ನು ಸ್ತುತಿಸಿದನು. ಅವನಿಗೆ ಕೃಷ್ಣನು ವರವನ್ನು ಕೊಟ್ಟನು. ಅನಂತರ ಮ್ಲೇಂಛರನ್ನೆಲ್ಲಾ ವಧಿಸಿದನು.

ನೀಯಮಾನೇ ವನೇ ದೃಪ್ತಜರಾಸಂಧಾತ್ಪಲಾಯನಂ ।
ರೈವತೋ ರೈವತೀಂ ಕನ್ಯಾಂ ಬಲದೇವಸಮರ್ಪಣಂ ॥ ೩ ॥

ರುಕ್ಮಿಣೀಪ್ರಿಯಸಂದೇಶಶ್ರವಣಾದಖಿಲಾನ್ನೃಪಾತ್ ।
ನಿರ್ಜಿತ್ಯ ನಿರ್ಗಮೋ ಗೇಹಃ ಹೃತವಾನಂಬಿಕಾಗೃಹಾತ್ ॥ ೪ ॥

ನೃಪೈಸ್ಸಾಂತ್ವನಂ ಚೈದ್ಯಸ್ಯ ತತೋ ರುಕ್ಮೀಸಮಾಗಮಃ ।
ಯುದ್ಧಾಪೇಕ್ಷಾಪರಾಧಾದ್ವೈ ಮುಂಡನಂ ತಸ್ಯ ಕೃಷ್ಣತಃ ॥ ೫ ॥

ರುಕ್ಮಿಣೋ ದುಃಖಶಮನಂ ರಾಮವಾಕ್ಯಾಚ್ಚ ಮೋಕ್ಷಣಂ ।
ತತೋ ವಿವಾಹೋ ರುಕ್ಮಿಣ್ಯಾ ವಿಧಿವತ್ಸ್ವಪುರೇ ಮುದಾ ॥ ೬ ॥

---

೩. ವನಕ್ಕೆ ಹೋದ ಸಮಯದಲ್ಲಿ ಉದ್ಧತನಾದ ಜರಾಸಂಧನ ಹೆದರಿಕೆಯಿಂದ ಎಲ್ಲರೂ ಓಡಿಬರುವರು. ರೈವತನೆಂಬುವನು ತನ್ನ ಮಗಳಾದ ರೇವತಿಯನ್ನು ಬಲರಾಮನಿಗೆ ಕೊಡುವನು.

೪. ರುಕ್ಮಿಣಿಯ ರೂಪಲಾವಣ್ಯಾದಿಗಳನ್ನು ಕೇಳಿ ಮತ್ತು ಅವಳು ಹೇಳಿ ಕಳುಹಿಸಿದ ಸಂದೇಶವನ್ನು ಅನೇಕ ರಾಜರುಗಳಿಂದ ತಿಳಿದು ಕೃಷ್ಣನು, ರುಕ್ಮಿಣಿಯೊಬ್ಬಳೇ ಅಂಬಿಕಾಗೃಹದಲ್ಲಿ ಪೂಜೆಮಾಡುತ್ತಿರಲು ಆಗ ಅವಳನ್ನು ಅಪಹರಿಸಿದನು.

೫. ಆಗ ಕೃಷ್ಣನಿಗೆ ವಿರುದ್ಧವಾಗಿ ಯುದ್ಧಮಾಡಲು ಶಿಶುಪಾಲನು ಹೊರಟಾಗ ಅವನನ್ನು ರಾಜರುಗಳು ಸಮಾಧಾನಪಡಿಸಿದರು. ಆಗ ರುಕ್ಮಿಯು ಕೃಷ್ಣನ ಹತ್ತಿರ ಬಂದನು. ಆಮೇಲೆ ಶಿಶುಪಾಲನು ತನ್ನ ಮೇಲೆ ಯುದ್ಧಕ್ಕೆ ಬಂದಿದ್ದ ತಪ್ಪಿಗೋಸ್ಕರ ಕೃಷ್ಣನು ಅವನ ತಲೆಯನ್ನು ಬೋಳಿಸಿ ಕಳುಹಿಸುವನು.

೬. ಬಲರಾಮನು ರುಕ್ಮಿಯನ್ನು ಸಮಾಧಾನಪಡಿಸಿದನು. ಹಾಗೂ ಬಂಧಿಸಿದ್ದ ಅವನನ್ನು ಬಿಡಿಸಿ ಅವನ ಅನುಮತಿಯಂತೆ ಕೃಷ್ಣನಿಗೂ ರುಕ್ಮಿಣಿಗೂ ವಿಧಿವತ್ತಾಗಿ ವಿವಾಹ ನಡೆಯುವುದು.

ಪ್ರದ್ಯುಮ್ನೋತ್ಪತ್ತಿಕಥನಂ ಹರಣಂ ಸೂತಿಕಾಗೃಹಾತ್ ।
ಮಾಯಾವತ್ಯೋಕ್ತವೃತ್ತಾಂತಂ ಶಂಬರಸ್ಯ ವಧಸ್ತತಃ ॥೭॥

ಪುನರಾಗಮನಂ ಗೇಹೇ ಸಂತೋಷೋ ದ್ವಾರಕೌಕಸಾಂ ।
ಸೂರ್ಯಾತ್ಸ್ಯಮಂತಕಪ್ರಾಪ್ತಿರ್ಯಾಚನಂ ತಸ್ಯ ವೈ ಹರೇಃ ॥ ೮ ॥

ತತ್ಸಂಬಂಧಾತ್ಪ್ರಸೇನಸ್ಯ ವಧಃ ಕೀರ್ತಿರ್ಹರೇಸ್ತಥಾ ।
ತನ್ಮಾರ್ಜನಾಚ್ಚ ಋಕ್ಷಸ್ಯ ಗೃಹೇಷು ಗಮನಂ ತಯೋಃ ॥ ೯ ॥

ಯುದ್ಧಂ ಜ್ಞಾತ್ವಾ ಲೋಕನಾಥಂ ಜಾಂಬವತ್ಯಾಸ್ಸಮರ್ಪಣಂ ।
ಸತ್ರಾಜಿತಾಯ ಚ ಮಣಿಃ ಪ್ರಾಪ್ತಾ ಶ್ರೀಃ ಹರಿಣಾ ವಿಲಾತ್ ॥ ೧೦ ॥

---

೭. ಪ್ರದ್ಯುಮ್ನನು ಹುಟ್ಟುವನು. ಆ ಸಮಯದಲ್ಲಿ ಸೂತಿಕಾಗೃಹದಿಂದ ಮಗುವನ್ನು ಯಾರೋ ಅಪಹರಿಸುವರು. ಒಂದು ಮಾಯಾಶಿಶುವು ಅಪಹರಿಸಿದ ವಿಷಯವನ್ನು ತಿಳಿಸುವುದು. ಆ ರೀತಿ ಅಪಹರಿಸಿದ ಶಂಬರನನ್ನು ವಧೆಮಾಡುವನು.

೮. ಮಗುವನ್ನು ಮನೆಗೆ ತರಲು ದ್ವಾರಕೆಯ ಜನರೆಲ್ಲಾ ಸಂತೋಷಪಡುವರು. ಅನಂತರ ಕೃಷ್ಣನಿಗೆ ಸೂರ್ಯನು ಸ್ಯಮಂತಕ ರತ್ನವನ್ನು ಕೊಡುವನು.

೯. ಆ ಸ್ಯಮಂತಕವನ್ನು ಧರಿಸಿಕೊಂಡು ಪ್ರಸೇನನು ಬೇಟೆಗೆ ಹೋಗಲು ಒಂದು ಸಿಂಹವು ಅದಕ್ಕೆ ಆಸೆಪಟ್ಟು ಅವನನ್ನು ಕೊಲ್ಲುವುದು. ಆ ಸಿಂಹವನ್ನು ಒಂದು ಕರಡಿಯು ಕೊಲ್ಲುವುದು. ಸ್ಯಮಂತಕವನ್ನು ಹುಡುಕಿಕೊಂಡು ರಾಮಕೃಷ್ಣರು ಕರಡಿಯ ಗುಹೆಗೆ ಹೋಗುವರು.

೧೦. ಕೃಷ್ಣನಿಗೂ ಕರಡಿಗೂ ಯುದ್ಧವಾಗುವುದು. ಆಗ ಕರಡಿಯು ಇವನು ಜಗದ್ರಕ್ಷಕನೆಂದು ತಿಳಿದು ತನ್ನ ಮಗಳಾದ ಜಾಂಬುವತಿಯನ್ನು ಕೃಷ್ಣನಿಗೆ ಕೊಡುವುದು. ಅಲ್ಲಿಂದ ತಂದ ಸ್ಯಮಂತಕವನ್ನು ಸತ್ರಾಜಿತನಿಗೆ ಕೊಡುವನು. ಅದರಿಂದ ತನಗೆ ಬಂದ ಅಪವಾದವನ್ನು ಕಳೆದುಕೊಳ್ಳುವನು.

ವಿವಾಹಃ ಸತ್ಯಭಾಮಾಯಾಃ ಪಾರಬರ್ಹೇ ತಥಾ ಮಣಿಃ ।
ರಾಮೇಣ ಸಹ ಕೃಷ್ಣಸ್ಯ ಗಮನಂ ಹಸ್ತಿನಾಪುರೇ ॥ ೧೧ ॥

ಅಕ್ರೂರಕೃತವರ್ಮಾಭ್ಯಾಂ ಶತಧನ್ವಾ ತು ಪ್ರೇರಿತಃ ।
ಸತ್ರಾಜಿತಂ ಜಘಾನಾಶು ಸೋಽಪಿ ಕೃಷ್ಣೇನ ಪಾತಿತಃ ॥ ೧೨ ॥

ರಾಮಸ್ತು ಮಿಥಿಲಾಯಾಂ ಚ ಗದಾಶಿಕ್ಷಾಂ ಸುಯೋಧನೇ ।
ಅಕ್ರೂರೇ ಮಣಿದಾನಂ ಚ ಶಕ್ರಪ್ರಸ್ಥೇ ಹರಿರ್ಗತಃ ॥ ೧೩ ॥

ಕಾಲಿಂದ್ಯಾಂ ಸಂಗತಿಃ ಶೌರೇರ್ವಿವಾಹಃ ಸ್ವಪುರೇ ತತಃ ।
ವಿವಾಹೋ ಮಿತ್ರವಿಂದಾಯಾಃ ಸತ್ಯಾಯಾಶ್ಚ ತಥೈವ ಚ ॥ ೧೪ ॥

ಭದ್ರಾಯಾ ಲಕ್ಷಣಾಯಾಶ್ಚ ವಿವಾಹೋ ಹರಿಣಾ ತತಃ ।
ಪಾರಿಜಾತಂ ತು ಸತ್ಯಾಯೈ ಶಕ್ರಂ ಜಿತ್ವಾ ದದೌ ಹರಿಃ ॥ ೧೫ ॥

---

೧೧. ಸತ್ಯಭಾಮೆ ಕೃಷ್ಣರ ವಿವಾಹವು ನಡೆಯುವುದು. ಸ್ಯಮಂತಕಮಣಿಯು ಕೃಷ್ಣನಿಗೆಸಿಕ್ಕಿತು. ಕೃಷ್ಣನು ಬಲರಾಮನೊಡನೆ ಹಸ್ತಿನಾವತಿಗೆ ತೆರಳುವುದು.

೧೨. ಅಕ್ರೂರ ಮತ್ತು ಕೃತವರ್ಮ ಇವರುಗಳಿಂದ ಪ್ರೇರಿತನಾದ ಶತಧನ್ವನು ಸ್ಯಮಂತಕಮಣಿಗೋಸ್ಕರವಾಗಿ ಸತ್ರಾಜಿತ್ತನನ್ನು ಕೊಲ್ಲುವನು. ಅದೇ ಸಮಯದಲ್ಲಿ ಅಲ್ಲಿ ಹೋಗುತಿದ್ದ ಕೃಷ್ಣನು ಶತಧನ್ವನನ್ನು ವಧೆಮಾಡಿದನು.

೧೩. ಬಲರಾಮನು ಮಿಥಿಲಾಪಟ್ಟಣಕ್ಕೆ ದುರ್ಯೋಧನನಿಗೆ ಗದಾಯುದ್ಧ ವನ್ನು ಹೇಳಿಕೊಡಲು ಹೋದನು. ಸ್ಯಮಂತಕಮಣಿಯು ಅಕ್ರೂರನಲ್ಲಿ ಸೇರಿತು. ಕೃಷ್ಣನು ಇಂದ್ರಪ್ರಸ್ಥಕ್ಕೆ ಹೋದನು.

೧೪. ಕೃಷ್ಣನು ಕಾಳಿಂದಿಯನ್ನು ಪ್ರೀತಿಸುವುದು. ತನ್ನ ಪಟ್ಟಣದಲ್ಲಿ ಅವಳೊಡನೆ ವಿವಾಹವು ನಡೆಯುವುದು. ಹಾಗೂ ಮಿತ್ರವಿಂದಾ, ಸತ್ಯಾ ಮುಂತಾದವ ರೊಡನೆ ಕೃಷ್ಣನ ವಿವಾಹವು ನಡೆಯುವುದು.

೧೫. ಭದ್ರಾ, ಲಕ್ಷಣಾ ಎಂಬುವರೊಡನೆಯೂ ವಿವಾಹವಾಗುವುದು. ಇಂದ್ರ ನನ್ನು ಜಯಿಸಿ ಪಾರಿಜಾತಪುಷ್ಪವನ್ನು ಸತ್ಯಭಾಮೆಗೆ ತಂದುಕೊಡುವನು.

॥ ವಜ್ರನಾಭಿರುವಾಚ ॥

ಪ್ರಿಯಾಯೈ ದತ್ತವಾನ್ಕಸ್ಮಾಚ್ಛಕ್ರಂ ಜಿತ್ವಾ ಸುರದ್ರುಮಂ ।
ಶ್ರೀಕೃಷ್ಣಸ್ತತ್ಕಥಾಂ ಸರ್ವಾಂ ಮುನೇ ಬ್ರೂಹಿ ಸವಿಸ್ತರಾತ್ ॥ ೧೬ ॥

॥ ಶ್ರೀ ಗರ್ಗ ಉವಾಚ ॥

ಪಾರಿಜಾತೈಕಕುಸುಮೇ ಚಾನೀತೇ ನಾರದಾತ್ಕದಾ ।
ದತ್ತೇ ಸತಿ ಶ್ರೀರುಕ್ಮಿಣ್ಯೈ ಸತ್ಯಾ ತು ದುಃಖಿತಾಭವತ್ ॥ ೧೭ ॥

ತಾಂ ದೃಷ್ಟ್ವಾ ಕುಪಿತಾಂ ಪ್ರಾಹ ಕ್ರೋಧಾಗಾರಗತಾಂ ಹರಿಃ ।
ಮಾ ಶೋಚಂ ಕುರು ದಾಸ್ಯಾಮಿ ಪಾರಿಜಾತದ್ರುಮಂ ಚ ತೇ ॥ ೧೮ ॥

---

೧೬. ವಜ್ರನಾಭಿಯು ಕೇಳಿದನು:—ಮುನಿಯೇ, ಇಂದ್ರನನ್ನು ಜಯಿಸಿ ಪಾರಿಜಾತವನ್ನು ಸತ್ಯಭಾಮೆಗೆ ಕೊಟ್ಟನೆಂದು ತಿಳಿಸಿದೆಯಲ್ಲಾ ? ಅದು ಏತಕ್ಕೋಸ್ಕರ ವಾಗಿ? ಆ ಕಥೆಯೆಲ್ಲವನ್ನೂ ವಿಸ್ತಾರವಾಗಿ ತಿಳಿಸಬೇಕೆನಲು,

೧೭. ಗರ್ಗಮುನಿಯು ಹೇಳಿದನು:—ಒಂದು ಸಾರಿ ನಾರದನು ದೇವ ಲೋಕದಿಂದ ಇಲ್ಲಿಗೆ ಬಂದಾಗ ಒಂದು ಪಾರಿಜಾತಕುಸುಮವನ್ನು ತಂದಿದ್ದನು. ಅದನ್ನು ರುಕ್ಮಿಣಿಗೆ ಕೊಟ್ಟನು. ಅದರಿಂದ ಸತ್ಯಭಾಮೆಯು ತನಗೆ ಕೊಡ ಲಿಲ್ಲವೆಂದು ದುಃಖಿತಳಾದಳು.

೧೮. ಆ ರೀತಿ ಕೋಪಗೊಂಡ ಸತ್ಯಭಾಮೆಯನ್ನು ನೋಡಿ ಕೃಷ್ಣನು ಅವಳನ್ನು ಕುರಿತು ' ನೀನು ದುಃಖಿಸಬೇಡ. ಪಾರಿಜಾತವೃಕ್ಷವನ್ನೇ ನಿನಗೆ ತಂದುಕೊಡುವೆನು ' ಎಂದನು.

॥ ಗರ್ಗ ಉವಾಚ ॥

ತದೈವ ಕಥಿತಂ ಸರ್ವಂ ಕೃಷ್ಣಾಗ್ರೇ ಭೌಮಚೇಷ್ಟಿತಂ ।
ಶಕ್ರೇಣ ಶ್ರುತ್ವಾ ಭಗವಾನ್ ಪ್ರಾಹ ಪಶ್ಯನ್ ಕೃತಾಂಜಲಿಃ ॥

॥ ಶ್ರೀ ಕೃಷ್ಣ ಉವಾಚ ॥

ಮತ್ಪ್ರಿಯಾಂ ದುಃಖಿತಾಂ ಪಶ್ಯ ರುದಂತೀಂ ವೃತ್ರಸೂದನ ॥ ೧೯ ॥

ಪಾರಿಜಾತಸ್ಯ ವೃಕ್ಷಸ್ಯಾರ್ಥೇ ಕಿಂ ಕರಿಷ್ಯಾಮ್ಯಹಂ ವದ ।
ಯದಾಸ್ಯೈ ಪಾರಿಜಾತಸ್ಯ ವೃಕ್ಷಂ ದಾಸ್ಯಸಿ ತ್ವಂ ಹರೇ ॥ ೨೦ ॥

ತದಾ ಭೌಮಂ ಸಸೈನ್ಯಂ ಚ ಹನಿಷ್ಯಾಮಿ ನ ಸಂಶಯಃ ।
ಕೃಷ್ಣಭಾಷಣಮಾಕರ್ಣ್ಯ ಪ್ರಹಸನ್ಪ್ರಾಹ ವಾಸವಃ ॥ ೨೧ ॥

॥ ಇಂದ್ರ ಉವಾಚ ॥

ಪಾರಿಜಾತದ್ರುಮಾಸ್ಸರ್ವೇ ವರ್ತಂತೇ ನಂದನೇ ಚ ಯೇ ।
ಗೃಹಾಣ ತಾನ್ಸ್ವತಃ ಕೃಷ್ಣ ತ್ವಂ ಹತ್ವಾ ನರಕಾಸುರಂ ॥ ೨೨ ॥

---

೧೯. ಗರ್ಗನು ಹೇಳಿದನು:—ಆ ಸಮಯಕ್ಕೆ ಸರಿಯಾಗಿ ಇಂದ್ರನು ನರಕಾಸುರನ ಹಿಂಸೆಯನ್ನು ತಿಳಿಸಲು ಕೃಷ್ಣನ ಸಮೀಪಕ್ಕೆ ಬಂದನು. ಎಲ್ಲವನ್ನೂ ತಿಳಿಸಿದನಂತರ ಕೃಷ್ಣನು ಇಂದ್ರನನ್ನು ಕುರಿತು,

೨೦. ನನ್ನ ಪತ್ನಿಯು ಪಾರಿಜಾತ ವೃಕ್ಷಕ್ಕೋಸ್ಕರ ಆಸೆಪಟ್ಟಿರುವಳು. ಅದಕ್ಕೋಸ್ಕರ ದುಃಖಿಸುತ್ತಿರುವಳು ನೋಡು, ನಾನೀಗ ಏನು ಮಾಡಲಿ? ನೀನು ಪಾರಿಜಾತವೃಕ್ಷವನ್ನು ಸತ್ಯಭಾಮೆಗೆ ಕೊಡುವುದಾದರೆ ನಾನು ನಿಮಗೆ ತೊಂದರೆ ಕೊಡುತ್ತಿರುವ ನರಕಾಸುರನನ್ನು ಅವನ ಸೈನ್ಯದೊಡನೆ ಕೊಲ್ಲುವೆನು. ಈ ವಿಷಯದಲ್ಲಿ ನಿನಗೆ ಸಂಶಯಬೇಡ ಎಂದನು.

೨೧–೨೨. ಕೃಷ್ಣನು ಹೇಳಿದುದನ್ನು ಕೇಳಿ ನಗುತ್ತಾ ಇಂದ್ರನು 'ಎಲೈ ಕೃಷ್ಣನೇ ಪಾರಿಜಾತವೃಕ್ಷವು ನಂದನವನದಲ್ಲಿರುವುದು. ನರಕಾಸುರನನ್ನು ಕೊಂದು ನೀನಲ್ಲಿಗೆ ಹೋಗಿಅದನ್ನು ತೆಗೆದುಕೊಂಡು ಹೋಗು' ಎಂದನು.

ತಥಾಸ್ತು ಚೋಕ್ತ್ವಾ ಭಗವಾನ್ ಸತ್ಯಭಾಮಾಸಮನ್ವಿತಃ ।
ಗರುಡಸ್ಕಂಧಮಾರೂಢೋ ಪ್ರಾಗ್ಜ್ಯೋತಿಷಪುರಂ ಯಯೌ　　　॥ ೨೩ ॥

ಸತ್ಯಭಾಮಾ ಹರಿಂ ಪ್ರಾಹ ಸ್ವರ್ಗಮಿಂದ್ರೇ ಗತೇ ಸತಿ ।

॥ ಸತ್ಯೋವಾಚ ॥

ಪೂರ್ವಂ ಗೃಹಾಣ ಶಕ್ರಾತ್ತ್ವಂ ದ್ರುಮರಾಜಂ ಜಗತ್ಪತೇ　　　॥ ೨೪ ॥

ಕಾರ್ಯಭೂತೇ ಸತಿ ಹರೇ ನ ಕರಿಷ್ಯತಿ ತ್ವತ್ಪ್ರಿಯಂ ।
ಪ್ರಿಯವಾಕ್ಯಂ ಸಮಾಕರ್ಣ್ಯ ಪ್ರಿಯಃ ಪ್ರಾಹ ಪ್ರಿಯಂ ವಚಃ　　　॥ ೨೫ ॥

॥ ಶ್ರೀ ಕೃಷ್ಣ ಉವಾಚ ॥

ಸ ಪಾರಿಜಾತಂ ಯದಿ ನ ಪ್ರದಾಸ್ಯತಿ
　　ಪ್ರಯಾಚ್ಯಮಾನಸ್ತು ಮಯಾಮರೇಶ್ವರಃ ।
ತತಃ ಶಚೀವ್ಯಾಮುದಿತಾನುಲೇಪನೇ
　　ಗದಾಂ ವಿಮೋಕ್ಷ್ಯಾಮಿ ಪುರಂದರೋರಸಿ　　　॥ ೨೬ ॥

---

೨೩. ಆಗ ಕೃಷ್ಣನು ಹಾಗೆಯೇ ಆಗಲೆಂದು ಹೇಳಿ ಸತ್ಯಭಾಮೆಯೊಡನೆ ಗರುಡನ ಮೇಲೆ ಕುಳಿತು ನರಕಾಸುರನಿರುವ ಪ್ರಾಗ್ಜ್ಯೋತಿಷವೆಂಬ ಪಟ್ಟಣಕ್ಕೆ ತೆರಳಿದನು.

೨೪. ಇಂದ್ರನು ಕೃಷ್ಣನ ಸಮೀಪದಿಂದ ಸ್ವರ್ಗಕ್ಕೆ ಹೊರಟುಹೋಗಲು ಸತ್ಯಭಾಮೆಯು ಕೃಷ್ಣನನ್ನು ಕುರಿತು 'ಜಗದ್ರಕ್ಷನೇ, ಮೊದಲು ಇಂದ್ರನಿಂದ ಪಾರಿಜಾತ ವೃಕ್ಷವನ್ನು ತೆಗೆದುಕೋ. ಆಮೇಲೆ ನರಕಾಸುರನನ್ನು ವಧಿಸುವೆ.

೨೫. ಮೊದಲೇ ನರಕಾಸುರನನ್ನು ಕೊಂದರೆ ಇಂದ್ರನು ತನ್ನ ಕಾರ್ಯವು ನೆರವೇರಿತೆಂದು ತಿಳಿದು ನಿನ್ನಿಷ್ಟವನ್ನು ನಡೆಸಿಕೊಡುವುದಿಲ್ಲ' ಎಂದು ಹೇಳಲು ಕೃಷ್ಣನು ಅದನ್ನು ಕೇಳಿ ಪ್ರಿಯಳನ್ನು ಕುರಿತು,

೨೬. ಎಲೌ ಭಾಮಾ, ಒಂದು ವೇಳೆ ಇಂದ್ರನು ಪಾರಿಜಾತವನ್ನು ಕೊಡವೇ ಹೋದರೆ ಪುನಃ ಪ್ರಾರ್ಥಿಸುವೆನು. ಹಾಗಾದರೂ ಒಪ್ಪದಿದ್ದರೆ ಶಚಿಯಿಂದ ಪ್ರೀತಿಪೂರ್ವಕವಾಗಿ ಗಂಧಲೇಪವನ್ನು ಮಾಡಿದ ಇಂದ್ರನ ಆ ವಕ್ಷಸ್ಥಳಕ್ಕೆ ಗಧಾಘಾತವನ್ನು ಮಾಡುವೆನು.

ಇತ್ಯುಕ್ತ್ವಾ ಭಗವಾನ್ ಕೃಷ್ಣೋ ಭೌಮಾಸುರಪುರಂ ಗತಃ ।
ನಾನಾದುರ್ಗೈಃ ಸಪ್ತಭಿಶ್ಚ ವೇಷ್ಟಿತಂ ಚ ಮಹಾಸುರೈಃ ॥ ೨೭ ॥

ಸರ್ವಾನ್ ಬಿಭೇಧ ದುರ್ಗಾನ್ಸ್ವೈ ಗದಾಚಕ್ರಶರಾದಿಭಿಃ ।
ಜಘಾನ ಮುರದೈತ್ಯಂ ಚ ತತ್ಪುತ್ರಾನ್ ಶಸ್ತ್ರಸಂಯುತಾನ್ ॥ ೨೮ ॥

ಶಸ್ತ್ರಾಸ್ತ್ರವರ್ಷಂ ಮುಂಚಂತಂ ಸಸೈನ್ಯಂ ನರಕಂ ಹರಿಃ ।
ಕ್ಷಿಪ್ತ್ವಾ ಚಕ್ರಂ ದ್ವಿಧಾ ಚಕ್ರೇ ಗರುಡೇನ ಜಘಾನ ಚ ॥ ೨೯ ॥

ಹತ್ವಾ ಭೌಮಂ ಜಗನ್ನಾಥೋ ವರರತ್ನಾನಿ ಯಾದವಃ ।
ಜಗ್ರಾಹ ತತ್ರ ಕನ್ಯಾನಾಂ ಸಮೂಹಂ ವೈ ದದರ್ಶ ಹ ॥ ೩೦ ॥

ದೈತ್ಯಸಿದ್ಧನೃಪಾಣಾಂ ಚ ಸಹಸ್ರಾಣಿ ಚ ಷೋಡಶ ।
ಶತಾಧಿಕಾನಿ ಕನ್ಯಾಶ್ಚ ಪ್ರೇಷಯಾಮಾಸ ಸ್ವಾಂ ಪುರೀಂ ॥ ೩೧ ॥

೨೭-೨೮. ಎಂದು ಹೇಳಿ ನರಕಾಸುರನ ಪ್ರಾಗ್ಜ್ಯೋತಿಷಪಟ್ಟಣಕ್ಕೆ ಹೋದನು. ಏಳು ಸುತ್ತಿನ ಕೋಟೆಯಿಂದ ಆ ಪಟ್ಟಣವು ಸುತ್ತುವರೆಯಲ್ಪಟ್ಟಿತ್ತು. ಕೃಷ್ಣನು ಗದೆ, ಚಕ್ರ, ಬಾಣ ಮುಂತಾದುವುಗಳಿಂದ ಆ ದುರ್ಗಗಳನ್ನೆಲ್ಲಾ ಭೇದಿಸಿದನು. ಮತ್ತು ನರಕಾಸುರನನ್ನೂ ಶಸ್ತ್ರಾಸ್ತ್ರಸಜ್ಜಿತರಾದ ಅವನ ಪುತ್ರರನ್ನೂ ಬಾಣಗಳಿಂದ ನೋಯಿಸಿದನು.

೨೯. ನರಕಾಸುರನೂ ಸಹ ಶಸ್ತ್ರಾಸ್ತ್ರಗಳನ್ನೂ ಹರಿಯ ಮೇಲೆ ಪ್ರಯೋಗಿಸಿದನು. ಅವುಗಳೆಲ್ಲವನ್ನೂ ಹರಿಯು ಚಕ್ರಾಯುಧದಿಂದ ತುಂಡುಮಾಡಿದನು.

೩೦. ಅನಂತರ ನರಕನನ್ನೂ ಕೊಂದನು. ಅಲ್ಲಿರುವ ಶ್ರೇಷ್ಠವಾದ ರತ್ನಗಳನ್ನು ಸ್ವೀಕರಿಸಿದನು. ಅದೇ ಸಮಯದಲ್ಲಿ ಅಲ್ಲಿ ಕನ್ಯೆಯರ ಒಂದು ಸಮೂಹವನ್ನು ನೋಡಿ ಆಶ್ಚರ್ಯಪಟ್ಟನು.

೩೧. ದೈತ್ಯರು, ಸಿದ್ಧರು ಇವರುಗಳ ಕನ್ಯೆಯರೇ ಅವರು. ಅವರು ಸಾವಿರಾರು ಜನರಿದ್ದರು. ಇವರೆಲ್ಲರನ್ನೂ ತನ್ನ ಪಟ್ಟಣಕ್ಕೆ ಕಳುಹಿಸಿದನು.

ಗೃಹೀತ್ವಾಥ ಮಣಿಂ ಛತ್ರಂ ದೇವಮಾತುಶ್ಚ ಕುಂಡಲೇ ।
ಪಾರಿಜಾತದ್ರುಮಾರ್ಥೇ ವೈ ಯಯಾವಿಂದ್ರಪುರೀಂ ಹರಿಃ ॥ ೩೨ ॥

ಇತಿ ಶ್ರೀ ಗ್ಯಾರ್ಗಸಂಹಿತಾಯಾಮಶ್ವಮೇಧಖಂಡೇ
ತೃತೀಯೋಽಧ್ಯಾಯಃ

---

೩೨. ಆ ನರಕಾಸುರನಲ್ಲಿದ್ದ ದೇವಮಾತೆಯಾದ ಅದಿತಿಯ ಕುಂಡಲಗಳನ್ನೂ, ರತ್ನವನ್ನೂ, ಛತ್ರವನ್ನೂ ತೆಗೆದುಕೊಂಡನು. ಬಳಿಕ, ಪಾರಿಜಾತ ವೃಕ್ಷವನ್ನು ತರಲು ಇಂದ್ರಪುರಿಗೆ ಹೊರಟನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಮೂರನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

॥ ಚತುರ್ಥೋಽಧ್ಯಾಯಃ ॥

॥ ಶ್ರೀ ಗರ್ಗ ಉವಾಚ ॥

ಗತ್ವಾ ಸ್ವರ್ಗಂ ತು ಶಕ್ರಾಯ ದತ್ವಾ ಛತ್ರಂ ಮಣಿಂ ತಥಾ ।
ಅದಿತ್ಯೈ ಕುಂಡಲೇ ಕೃಷ್ಣೋ ದತ್ವಾಭಿಪ್ರಾಯಮಬ್ರವೀತ್ ॥ ೧ ॥

ಅಭಿಪ್ರಾಯಂ ಹರೇರ್ಜ್ಞಾತ್ವಾ ವಾಸವೋ ನ ದದೌ ದ್ರುಮಂ ।
ದೇವಾನ್ ಜಿತ್ವಾ ತದಾ ಪಾರಿಜಾತಂ ಜಗ್ರಾಹ ಮಾಧವಃ ॥ ೨ ॥

ನಾಲ್ಕನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಕೃಷ್ಣನು ಸ್ವರ್ಗಕ್ಕೆ ಹೋದನಷ್ಟೆ. ಅಲ್ಲಿ ತಾನುತಂದಿದ್ದ ಛತ್ರವನ್ನೂ, ಮಣಿಯನ್ನೂ ಇಂದ್ರನಿಗೆ ಕೊಟ್ಟನು. ಕರ್ಣಕುಂಡಲಗಳನ್ನು ಅದಿತಿಗೆ ಕೊಟ್ಟು ಪಾರಿಜಾತವೃಕ್ಷವು ಬೇಕೆಂಬ ತನ್ನಭಿಪ್ರಾಯವನ್ನು ಹೇಳಿದನು.

೨. ಹರಿಯ ಅಭಿಪ್ರಾಯವನ್ನು ತಿಳಿದರೂ ಸಹ ಇಂದ್ರನು ಪಾರಿಜಾತವೃಕ್ಷವನ್ನು ಕೊಡಲು ಒಪ್ಪಲಿಲ್ಲ. ಆಗ ದೇವತೆಗಳೆಲ್ಲರನ್ನೂ ಜಯಿಸಿ ಪಾರಿಜಾತವೃಕ್ಷವನ್ನು ತೆಗೆದುಕೊಂಡು ಬಂದನು.

|| ಸೂತ ಉವಾಚ ||

ಇತಿ ಶ್ರುತ್ವಾ ಕಥಾಂ ರಾಜಾ ಯಾದವೋ ವಿಸ್ಮಯಾನ್ವಿತಃ ।
ಪಪ್ರಚ್ಛ ಸ್ವಗುರುಂ ಭೂಯಃ ಶ್ರದ್ಧಧಾನೋ ಹರೇರ್ಗುಣೇ || ೩ ||

|| ವಜ್ರನಾಭಿರುವಾಚ ||

ಬ್ರಹ್ಮನ್ ಶಕ್ರಸ್ತು ದೇವೇಂದ್ರೋ ಜಾನನ್ ಕೃಷ್ಣಂ ಹರಿಂ ಪರಂ ।
ಅಪರಾಧಂ ಹಿ ಕೃತವಾನ್ ಸ ಕಥಂ ಬ್ರೂಹಿ ಸತ್ತಮ || ೪ ||

ಕೃಷ್ಣಾಗ್ರೇ ಕಥಿತಂ ಸತ್ಯಭಾಮಯಾ ಶಕ್ರಚೇಷ್ಟಿತಂ ।
ತಸ್ಮಾನ್ಮೇ ವಿಸ್ತರಾದ್ಯುದ್ಧಮಿಂದ್ರಮಾಧವಯೋರ್ವದ || ೫ ||

|| ಗರ್ಗ ಉವಾಚ ||

ಅದಿತ್ಯಾ ಸಂಸ್ತುತಃ ಕೃಷ್ಣೋ ಶಕ್ರವಾಕ್ಯಾಚ್ಚ ನಂದನಂ ।
ವನಂ ಗತ್ವಾ ಪಾರಿಜಾತಾನ್ ಸಂದದರ್ಶ ಬಹೂನ್ ದ್ರುಮಾನ್ || ೬ ||

---

೩. ಸೂತನು ಹೇಳಿದನು :—ಗರ್ಗಮುನಿಯು ಹೇಳಿದ ಈ ಕಥೆಯನ್ನು ಕೇಳಿ ವಜ್ರನಾಭಿಗೆ ಬಹಳ ಆಶ್ಚರ್ಯವಾಯಿತು. ಹರಿಯ ಗುಣಗಳನ್ನು ಪುನಃ ಕೇಳಬೇಕೆಂಬ ಆಸೆಯುಂಟಾಯಿತು. ಆಗ ತನ್ನ ಗುರುವನ್ನು ಪ್ರಶ್ನಿಸಿದನು.

೪. ಮುನಿವರನೇ, ದೇವತೆಗಳಿಗೆ ಪ್ರಭುವಾದರೂ ಆ ಇಂದ್ರನು ಕೃಷ್ಣನು ಪರಮಾತ್ಮನೆಂದು ತಿಳಿದಿರಲಿಲ್ಲವೇ ? ಹಾಗೆ ತಿಳಿದಿದ್ದರೂ ಅದೇಕೆ ಅವನು ಅಪರಾಧ ವನ್ನೆಸಗಿದನು ? ಎಂಬುದನ್ನು ನನಗೆ ತಿಳಿಸು.

೫. ಮತ್ತು ಸತ್ಯಭಾಮೆಯು ಇಂದ್ರನ ಮೋಸವನ್ನು ಮೊದಲೇ ಕೃಷ್ಣನಿಗೆ ತಿಳಿಸಿದಳು. ಆದುದರಿಂದ ಅನಂತರ ಇಂದ್ರಕೃಷ್ಣರಿಗೆ ನಡೆದ ಯುದ್ಧವನ್ನು ವಿಸ್ತಾರವಾಗಿ ತಿಳಿಸು ಎಂದನು.

೬. ಆಗ ಗರ್ಗಮುನಿಯು ಹೇಳತೊಡಗಿದನು :—ಕೃಷ್ಣನು ದೈತ್ಯರನ್ನು ಕೊಂದು ಸ್ವರ್ಗಕ್ಕೆ ಹೋಗಲು ಅಲ್ಲಿ ಅದಿತಿಯು ಇವನನ್ನು ಸ್ತುತಿಸಿದಳು. ಅನಂತರ ಇಂದ್ರನ ಮಾತಿನಂತೆ ನಂದನ ವನಕ್ಕೆ ಹೋಗಿ ನೋಡಲಾಗಿ ಅನೇಕ ಪಾರಿಜಾತವೃಕ್ಷಗಳು ಅಲ್ಲಿದ್ದವು.

ತೇಷಾಂ ಮಧ್ಯೇ ಮಹಾವೃಕ್ಷಂ ಮಂಜರೀಪುಂಜಧಾರಿಣಂ ।
ಕ್ಷೀರೋದಮಥನಾಜ್ಜಾತಂ ಪದ್ಮಗಂಧಸಮನ್ವಿತಂ ॥ ೭ ॥

ಸುರಾಣಾಂ ಸುಖದಂ ತಾಮ್ರಪಲ್ಲವೈಃ ಪರಿವೇಷ್ಟಿತಂ ।
ವನೇ ವಿಭೂಷಣಂ ದಿವ್ಯಂ ವರಂ ಸ್ವರ್ಣಸಮತ್ವಚಂ ॥ ೮ ॥

ತಂ ದೃಷ್ಟ್ವಾ ಮಾಧವಂ ಪ್ರಾಹ ಸತ್ಯಭಾಮಾ ಚ ಮಾನಿನೀ ।
ಏನಂ ಗೃಹ್ಣಾಮ್ಯಹಂ ಕೃಷ್ಣ ಶ್ರೇಷ್ಠಂ ಸರ್ವವನೇ ದ್ರುಮಂ ॥ ೯ ॥

ಇತ್ಯುಕ್ತಃ ಪ್ರಿಯಯೋತ್ಪಾಟ್ಯ ಪಾರಿಜಾತಂ ಗರುತ್ಮತಿ ।
ಲೀಲಯಾರೋಪಯಾಮಾಸ ಪ್ರಹಸನ್ ಜಗದೀಶ್ವರಃ ॥ ೧೦ ॥

ತದೈವ ಕುಪಿತಾಸ್ಸರ್ವೇ ವನಪಾಲಾಸ್ಸಮುತ್ಥಿತಾಃ ।
ಧನುರ್ಬಾಣಧರಾಃ ಕೃಷ್ಣಮೂಚುಃ ಪ್ರಸ್ಫುರಿತಾಧರಾಃ ॥ ೧೧ ॥

---

೭. ಅವುಗಳ ಮಧ್ಯೆ ಒಂದು ದೊಡ್ಡಪಾರಿಜಾತ ವೃಕ್ಷವಿದ್ದಿತು. ಅದೇ ಹಿಂದೆ ಸಮುದ್ರಮಥನಕಾಲದಲ್ಲಿ ಹುಟ್ಟಿದುದು. ಸುತ್ತಲೂ ಚಿಗುರಿ ಆನಂದವಾಗಿದ್ದಿತು. ಅದರ ಪರಿಮಳವು ಪದ್ಮದ ಪರಿಮಳದಂತೆ ಇತ್ತು.

೮. ಅದರಿಂದ ದೇವತೆಗಳೆಲ್ಲರೂ ಸುಖಿಗಳಾದರು. ಕೆಂಪಾದ ಚಿಗುರುಗಳಿಂದ ಶೋಭಿಸುತ್ತಾ ಆ ನಂದನವನಕ್ಕೆ ಅಲಂಕಾರಪ್ರಾಯವಾಗಿದ್ದಿತು. ಅದರ ತೊಗಟೆಯು ಚಿನ್ನದಂತೆ ಹೊಳೆಯುತಿತ್ತು.

೯. ಅದನ್ನು ನೋಡಿದ ತಕ್ಷಣ ಸತ್ಯಭಾಮೆಯು 'ಕೃಷ್ಣ ವನಗಳಲ್ಲೆಲ್ಲಾ ಅಲಂಕಾರಪ್ರಾಯವಾದ ಈ ಪಾರಿಜಾತವೃಕ್ಷವನ್ನು ತೆಗೆದುಕೊಳ್ಳುವೆನು' ಎಂದಳು.

೧೦. ಈ ರೀತಿಯಾಗಿ ಸತ್ಯಭಾಮೆಯು ಹೇಳಲು ಕೃಷ್ಣನು ಆ ವೃಕ್ಷವನ್ನು ಸುಲಭವಾಗಿ ಕಿತ್ತು ನಗುನಗುತ್ತಾ ಗರುಡನ ಮೇಲೆ ಹೊರಿಸಿದನು.

೧೧. ಆಗ ನಂದನವನಪಾಲಕರಾದ ಅನೇಕ ಯೋಧರು ಅತಿಕೋಪಗೊಂಡು ಧನುರ್ಬಾಣಸಜ್ಜಿತರಾಗಿ ಬಂದು ಕೃಷ್ಣನನ್ನು ಕುರಿತು,

ಇಂದ್ರಪ್ರಿಯಾಯಾ ವೃಕ್ಷಶ್ಚ ಹೃತಃ ಕಸ್ಮಾತ್ತ್ವಯಾ ನರ ।
ಯದೃಚ್ಛಯಾ ಕಿಲಾಸ್ಮಾಕಂ ತೃಣೀಕೃತ್ಯ ಕ್ವ ಯಾಸ್ಯಸಿ || ೧೨ ||

ಇಂದ್ರಾಣೀಪ್ರೀತಯೇ ದೇವೈಃ ಪುರಾ ಹ್ಯುದಧಿಮಂಥನೇ ।
ಉತ್ಪಾದಿತೋಽಯಂ ನ ಕ್ಷೇಮೀ ಗೃಹೀತ್ವೈನಂ ಭವಿಷ್ಯಸಿ || ೧೩ ||

ಗಿರೀಣಾಂ ಯೇನ ಸರ್ವೇಷಾಂ ಪಕ್ಷಾಃ ಪೂರ್ವಂ ವಿನಾಶಿತಾಃ ।
ತಂ ಕಿಂ ವೃತ್ರಹಣಂ ವೀರಂ ಜಿತ್ವಾ ವೃಕ್ಷಂ ನಯಿಷ್ಯಸಿ || ೧೪ ||

ತಸ್ಮಾದ್ಗಚ್ಛ ಮಹಾವೀರ ಪಾರಿಜಾತಂ ವಿಹಾಯ ಚ ।
ನ ದಾಸ್ಯಾಮೋ ದ್ರುಮಂ ತುಭ್ಯಂ ಶಕ್ರಸ್ಯಾನುಚರಾ ವಯಂ || ೧೫ ||

---

೧೨. ಈ ಮರವು ಇಂದ್ರನಿಗೆ ಪ್ರಿಯಳಾದ ಶಚೀದೇವಿಯದು. ಇದನ್ನು ನೀನು ಅಪಹರಿಸುತ್ತಿರುವೆ. ನಾವಿಲ್ಲಿ ಇದ್ದರೂ ಕೂಡ ಲೆಕ್ಕಿಸದೆ ತೆಗೆದುಕೊಂಡು ಹೋಗುತ್ತಿರುವೆ.

೧೩. ಪೂರ್ವದಲ್ಲಿ ಸಮುದ್ರವನ್ನು ಕಡೆದಾಗ ಹುಟ್ಟಿದ ಈ ಮರವನ್ನು ದೇವತೆಗಳೆಲ್ಲರೂ ಒಪ್ಪಿ ಶಚಿಯ ಸಂತೋಷಾರ್ಥವಾಗಿ ಇಂದ್ರನಿಗೆ ಕೊಟ್ಟಿರುವರು. ಇಂತಹ ವೃಕ್ಷವನ್ನು ನೀನು ತೆಗೆದುಕೊಂಡು ಹೋದರೆ ನಿನಗೆ ಕ್ಷೇಮವಾಗಲಾರದು.

೧೪. ಈ ವೃಕ್ಷವು ಇಂದ್ರನಿಗೆ ಸೇರಿದುದು. ಪರ್ವತಗಳ ರೆಕ್ಕೆಯನ್ನು ಚೂರು ಚೂರು ಮಾಡಿದ ಮಹಾವೀರನವನು. ಅವನನ್ನು ಜಯಿಸಿ ಬೇಕಾದರೆ ಈ ವೃಕ್ಷವನ್ನು ತೆಗೆದುಕೊಂಡು ಹೋಗಬಹುದು.

೧೫. ಆದುದರಿಂದ ಪಾರಿಜಾತವೃಕ್ಷವನ್ನು ಬಿಟ್ಟು ಸುಮ್ಮನೆ ಹೋಗು. ನೀನೇನೋ ವೀರನಿರಬಹುದು. ಆದರೆ ನಾವದನ್ನು ಕೊಡುವುದಿಲ್ಲ, ಇಂದ್ರನು ಹೇಳಿದಂತೆ ಕೇಳುವುದು ನಮ್ಮ ಕರ್ತವ್ಯವು.

ಯದಾ ದಾಸ್ಯತಿ ತುಭ್ಯಂ ವೈ ಪಾರಿಜಾತಂ ಪುರಂದರಃ ।
ನ ನಿಷೇಧಂ ಕರಿಷ್ಯಾಮೋ ವನಪಾಲಾ ವಯಂ ತದಾ ॥ ೧೬ ॥

ತೇಷಾಂ ಭಾಷಿತಮಾಕರ್ಣ್ಯ ಸತ್ಯಭಾಮಾ ರುಷಾನ್ವಿತಾ ।
ತೂಷ್ಣೀಂ ಭೂತೇ ಸತಿ ಹರಾವಭೀತಾ ಪ್ರಾಹ ತಾನ್ ನೃಪ ॥ ೧೭ ॥

॥ ಸತ್ಯಭಾಮೋವಾಚ ॥

ಕಾ ಶಚೀ ಪಾರಿಜಾತಶ್ಚ ಕಃ ಶಕ್ರೋ ವಾ ಸುರೇಶ್ವರಃ ।
ಸಾಮಾನ್ಯಃ ಸರ್ವಲೋಕಾನಾಂ ಯದೀಶೋಽಮೃತಮಂಥನೆ ॥ ೧೮ ॥

ಸಮುತ್ಪನ್ನಂ ಸುರಃ ಕಸ್ಮಾದೇಕೋ ಗೃಹ್ಣಾತಿ ವಾಸವಃ ।
ಯಥಾ ಸುಧಾ ಯಥೈವೇಂದುರ್ಯಥಾ ಶ್ರೀರ್ವನರಕ್ಷಿಣಃ ॥ ೧೯ ॥

ಸಾಮಾನ್ಯಃ ಸರ್ವಲೋಕಸ್ಯ ಪಾರಿಜಾತಸ್ತಥಾ ದ್ರುಮಃ ।
ಭರ್ತುರ್ಬಾಹುಮಹಾಗರ್ವಾದರುಣದ್ಧ್ಯೇನಂ ಮೃಷಾ ಶಚೀ ॥ ೨೦ ॥

---

೧೬. ಇಂದ್ರನೇ ಏನಾದರೂ ಬಂದು ಪಾರಿಜಾತವೃಕ್ಷವನ್ನು ನಿನಗೆ ಕೊಟ್ಟರೆ ನಮ್ಮ ತೊಂದರೆ ಏನೂ ಇಲ್ಲ. ನಾವು ತೋಟಕಾಯುವವರು.

೧೭. ಎಂದು ಅವರು ಹೇಳಲು ಸತ್ಯಭಾಮೆಗೆ ಕೋಪಬಂದಿತು. ಕೃಷ್ಣನೂ ಸುಮ್ಮನಾದನು. ಆಗ ಸತ್ಯಭಾಮೆಯು ಆ ಆಳುಗಳನ್ನು ಕುರಿತು,

೧೮. ಶಚಿಯಾರು ? ಪಾರಿಜಾತವಾವುದು ? ಸುರೇಶ್ವರನಾದ ಇಂದ್ರನಾರು ? ಒಬ್ಬೊಬ್ಬರಿಗೆ ಸಂಬಂಧವಿಲ್ಲವು. ಅಮೃತಮಥನದಿಂದ ಹುಟ್ಟಿದ ಎಲ್ಲಾ ಪದಾರ್ಥಗಳೂ ಲೋಕಗಳಿಗೆಲ್ಲಾ ಸಾಮಾನ್ಯ ಪ್ರಯೋಜನವಾಗುವಂತಹುವು.

೧೯–೨೦. ಹಾಗಿಲ್ಲದ ಪಕ್ಷದಲ್ಲಿ ಇಂದ್ರನು ಪಾರಿಜಾತ ವೃಕ್ಷವನ್ನು ಮಾತ್ರ ತೆಗೆದುಕೊಳ್ಳಲು ಕಾರಣವೇನು ? ಅವನೊಬ್ಬನಿಗೇ ಎಲ್ಲವೂ ಸೇರಿದ ಪಕ್ಷದಲ್ಲಿ ಎಲ್ಲವನ್ನೂ ತೆಗೆದುಕೊಳ್ಳಬೇಕಿತ್ತು. ಆದ್ದರಿಂದ ಅಮೃತ, ಚಂದ್ರ, ಲಕ್ಷ್ಮೀ ಇವರೆಲ್ಲರೂ ಹೇಗೆ ಸರ್ವಸಾಮಾನ್ಯರೋ ಪಾರಿಜಾತವೂ ಅಂತೆಯೇ. ತನ್ನ ಪತಿಯು ಪರಾಕ್ರಮಿ ಎಂದು ತಿಳಿದು ಶಚಿಯು ಗರ್ವಿತಳಾಗಿರುವಳು.

ತತ್ಕಥ್ಯತಾಮಲಂ ಕ್ಷಾಂತ್ಯಾ ಸತ್ಯಾಹಾರಪ್ರತಿ ದ್ರುಮಂ ।
ಕಥ್ಯತಾಂ ಚ ದ್ರುತಂ ಗತ್ವಾ ಪೌಲೋಮ್ಯಾ ವಚನಂ ಮಮ   ॥ ೨೧ ॥

ಸತ್ಯಭಾಮಾ ವದತ್ಯೇತದತಿಗರ್ವೋದ್ಧತಾಕ್ಷರಂ ।
ಯದಿ ತ್ವಂ ದಯಿತಾ ಭರ್ತುರ್ಯದಿ ವಶ್ಯಃ ಪತಿಸ್ತವ   ॥ ೨೨ ॥

ಮದ್ಭರ್ತುರ್ಹರತೋ ವೃಕ್ಷಂ ತತ್ಕಾರಯ ನಿವಾರಣಂ ।
ಜಾನಾಮಿ ತೇ ಪತಿಂ ಶಕ್ರಂ ಯುಷ್ಮಾನ್ ಜಾನಾಮಿ ತತ್ತ್ವತಃ   ॥ ೨೩ ॥

ಪಾರಿಜಾತಂ ತಥಾಪ್ಯೇನಂ ಮಾನುಷೀ ಹಾರಯಾಮಿ ತೇ ।

॥ ಗರ್ಗ ಉವಾಚ ॥

ಕೃಷ್ಣಪ್ರಿಯಾಯಾ ವಚನಂ ವನಪಾಲಾ ನಿಶಮ್ಯ ಚ   ॥ ೨೪ ॥

---

೨೧. ಆದುದರಿಂದ ನೀವು ಜಾಗ್ರತೆಯಾಗಿ ಹೋಗಿ ಪಾರಿಜಾತ ವೃಕ್ಷಕ್ಕೋಸ್ಕರ ಸತ್ಯಭಾಮೆಯು ಹಟವನ್ನು ಶಚಿಗೆ ತಿಳಿಸಿರಿ.

೨೨. ಸತ್ಯಭಾಮೆಯು ಗರ್ವದಿಂದ ಹೇಳಿದಳೆಂದು ತಿಳಿಸಿರಿ. ನೀನು ನಿನ್ನ ಗಂಡನಿಗೆ ಸರಿಯಾದ ಹೆಂಡತಿಯಾಗಿದ್ದರೆ, ನಿನ್ನ ಗಂಡನು ನಿನಗೆ ವಶನಾಗಿದ್ದರೆ ನನ್ನ ಪತಿಯು ತೆಗೆದುಕೊಂಡು ಹೋಗುತ್ತಿರುವ ಈ ಪಾರಿಜಾತ ವೃಕ್ಷವನ್ನು ಬಿಡಿಸಿಕೊ ಎಂದು ಅವಳಿಗೆ ತಿಳಿಸಿ.

೨೩. ನಿನ್ನ ಪತಿಯಾದ ಇಂದ್ರನಾರೆಂಬುದನ್ನು ಬಲ್ಲೆನು. ನೀವೆಲ್ಲರೂ ಎಂಥವರೆಂಬುದನ್ನು ಬಲ್ಲೆನು. ಪಾರಿಜಾತ ವೃಕ್ಷವನ್ನೂ ಬಲ್ಲೆನು. ನಾನು ಮನುಷ್ಯ ಸ್ತ್ರೀಯು. ಆದರೂ ನಿಮ್ಮನ್ನು ಸುಮ್ಮನೆ ಬಿಡುವವಳಲ್ಲ. ಎಂದು ಹೇಳಿರಿ ಎಂದಳು.

೨೪. ಸತ್ಯಭಾಮೆಯ ವಾಕ್ಯವನ್ನು ಕೇಳಿ ವನಪಾಲಕರೆಲ್ಲರೂ ಶಚಿಯ ಹತ್ತಿರಕ್ಕೆ ಹೋಗಿ ಅವಳು ಹೇಳಿದಂತೆಯೇ ಎಲ್ಲಾ ವಿಷಯವನ್ನೂ ತಿಳಿಸಿದರು.

ಇಂದ್ರಾಣೀನಿಕಟಂ ಗತ್ವಾ ಪ್ರೋಚುಃ ಸರ್ವಂ ಯಥೋದಿತಂ ।
ರಕ್ಷಕಾಣಾಂ ವಚಃ ಶ್ರುತ್ವಾ ಶಚೀ ಪ್ರಾಹ ರುಷಾನ್ವಿತಾ ॥ ೨೫ ॥

ಕೃಷ್ಣಂ ನಿವಾರಣಾರ್ಥಾಯ ನ ಯಾಸ್ಯಂತಂ ಪುರಂದರಂ ।
॥ ಶಚ್ಯುವಾಚ ॥
ಮದೀಯಂ ಪಾರಿಜಾತಂ ವೈ ಮಾಧವೇನ ಬಲೀಯಸಾ ॥ ೨೬ ॥

ಗೃಹೀತಂ ಸ್ವಪ್ರಿಯಾರ್ಥೇ ವೈ ತ್ವಾಂ ತೃಣೀಕೃತ್ಯ ವಜ್ರಿಣಂ ।
ತಸ್ಮಾನ್ಮೋಚಯ ವೃಕ್ಷೇಶಂ ಪಾಕಸೂದನ ವೃತ್ರಹನ್ ॥ ೨೭ ॥

ಸತ್ಯಭಾಮಾವಶಂ ಕೃಷ್ಣಂ ವಿನಿರ್ಜಿತ್ಯ ಮಹಾರಣೇ ।
ತ್ವಯಾ ವೈ ಪೂರ್ವಮದ್ರೀಣಾಂ ಪಕ್ಷಾ ವಜ್ರೇಣ ನಾಶಿತಾಃ ॥ ೨೮ ॥

---

೨೫. ವನಪಾಲಕರ ಮಾತನ್ನು ಕೇಳಿ, ಶಚಿಗೆ ಕೋಪವು ಮಿತಿಮೀರಿತು. ಇಷ್ಟು ಕೇಳಿದರೂ ಆ ಕೃಷ್ಣನನ್ನು ತಡೆಯಲು ಹೋಗದೆ ಸುಮ್ಮನೇ ಕುಳಿತಿರುವ ಇಂದ್ರನನ್ನು ಕುರಿತು,

೨೬–೨೭. ಈ ಪಾರಿಜಾತವು ನನ್ನದು. ಈಗ ಅದನ್ನು ಕೃಷ್ಣನು ತನ್ನ ಹೆಂಡತಿಗೋಸ್ಕರವಾಗಿ ತೆಗೆದುಕೊಂಡು ಹೋಗುತ್ತಿರುವನು. ವೃತ್ರಾಸುರ, ಪಾಕ, ಮೊದಲಾದವರನ್ನು ನಾಶಮಾಡಿದ ಮಹಾವೀರನಾದ ನಿನ್ನನ್ನೂ ಲೆಕ್ಕಿಸಿಲ್ಲವು, ಆದುದರಿಂದ ನೀನು ಜಾಗ್ರತೆಯಾಗಿ ಹೋಗಿ ಪಾರಿಜಾತವೃಕ್ಷವನ್ನು ಬಿಡಿಸಿ ಕೊಂಡು ಬಾ.

೨೮. ಸತ್ಯಭಾಮೆಗೆ ವಶನಾಗಿ ಅವಳು ಹೇಳಿದಂತೆ ಕೇಳುತ್ತಿರುವ ಕೃಷ್ಣನನ್ನು ಯುದ್ಧಮಾಡಿ ಜಯಿಸು. ನೀನು ಪರ್ವತಗಳ ರೆಕ್ಕೆಗಳನ್ನು ವಜ್ರಾಯುಧದಿಂದ ಕತ್ತರಿಸಿದ ವೀರನಲ್ಲವೆ? ಏಕೆ ಹೆದರುವೆ?

ಭಯಂ ವಿಸೃಜ್ಯ ಯುದ್ಧಾಯ ಗಚ್ಛ ತಸ್ಮಾತ್ಸುರೈರ್ವೃತಃ ।
ಇತಿ ಶ್ರುತ್ವಾ ಶಚೀವಾಕ್ಯಂ ಶಕ್ರೋ ನಮುಚಿಸೂದನಃ ॥ ೨೯ ॥

ನ ಚಕಾರ ತು ಯುದ್ಧಾಯ ಮನೋ ಭಯಸಮನ್ವಿತಃ ।
ತತಶ್ಚ ಬಹುಶಃ ಪತ್ನ್ಯಾ ಪ್ರೇರಿತಃ ಕೋಪಯುಕ್ತಯಾ ॥ ೩೦ ॥

ತದಾ ಕೋಪೇನ ಶ್ರೀಕೃಷ್ಣಂ ನಿಂದನ್ ಪ್ರಾಹ ಮದಾನ್ವಿತಃ ।
ಯೇನ ತೇ ಪಾರಿಜಾತಂ ನೈ ಗೃಹೀತಂ ಸುಂದರಾನನೇ ॥ ೩೧॥

ಮೃಧೇ ತಂ ಪಾತಯಿಷ್ಯಾಮಿ ವಜ್ರೇಣ ಶತಪರ್ವಣಾ ।
ಇತ್ಯುಕ್ತ್ವಾ ವಾಸವೋ ರಾಜನ್ನಾರುಹ್ಯೈರಾವತಂ ಗಜಂ ॥ ೩೨ ॥

ಶುಂಡಾದಂಡೈಸ್ತ್ರಿಭಿರ್ಯುಕ್ತಂ ರಕ್ತಕಂಬಲಮಂಡಿತಂ ।
ಚತುರ್ಭಿಶ್ಶೋಭಿತಂ ದಂತೈರ್ಹಿಮಾದ್ರಿಸದೃಶಂ ಶುಭಂ ॥ ೩೩ ॥

---

೨೯. ಭಯವನ್ನು ದೂರಮಾಡಿ ದೇವತೆಗಳ ಸಹಾಯದಿಂದ ಅವನೊಡನೆ ಯುದ್ಧಮಾಡು ಎಂದು ಶಚಿಯು ಹೇಳಲು ಇಂದ್ರನು ಮನಸ್ಸಿನ ಭಯದಿಂದ ಯುದ್ಧಕ್ಕೆ ಹೊರಡಲು ಒಪ್ಪಲಿಲ್ಲ.

೩೦. ಆಗ ಶಚಿಯು ಸುಮ್ಮನಿರಲಿಲ್ಲ. ಪುನಃ ಪುನಃ ಕೋಪದಿಂದ ಇಂದ್ರನನ್ನು ಪ್ರೇರೇಪಿಸಿದಳು. ಆಗ ಅವನಿಗೆ ಕೋಪಬಂದಿತು. ಆಮೇಲೆ ಕೃಷ್ಣನನ್ನು ನಿಂದಿಸುತ್ತಾ ಗರ್ವದಿಂದ ನುಡಿದನು.

೩೧-೩೨. ಇಂದ್ರನು ಹೇಳಿದನು :—ಎಲೌ ಸುಂದರೀ, ನಿನಗೋಸ್ಕರವಾಗಿಯೇ ಇದ್ದ ಪಾರಿಜಾತವೃಕ್ಷವನ್ನು ತೆಗೆದುಕೊಂಡು ಹೋಗತ್ತಿರುವ ಆ ಕೃಷ್ಣನನ್ನು ನನ್ನ ವಜ್ರಾಯುಧದಿಂದ ಹೊಡೆದು ಕೆಡಹುವೆನು. ಎಂದು ಹೇಳಿ ಇಂದ್ರನು ಐರಾವತವನ್ನು ಏರಿದನು.

೩೩. ಆ ಐರಾವತಕ್ಕೆ ಮೂರು ಸೊಂಡಿಲುಗಳಿದ್ದವು. ನಾಲ್ಕು ದಂತಗಳಿಂದ ರಂಜಿಸುತ್ತಿತ್ತು. ಹಿಮವತ್ಪರ್ವತದಂತೆ ಗಾತ್ರವಾಗಿದ್ದಿತು. ಅದರ ಮೇಲೆ ಕೆಂಪಾದ ರತ್ನಗಂಬಳಿಯನ್ನು ಹಾಸಿದ್ದಿತು.

ಸ್ವರ್ಣಶೃಂಖಲಯಾ ಜುಷ್ಟಂ ಶುಶುಭೇ ನಿರ್ಜರೈರ್ವೃತಃ ।
ತಥಾ ಮರುದ್ಗಣಾಃ ಸರ್ವೇ ಯಮಾಗ್ನಿವರುಣಾದಯಃ ॥ ೩೪ ॥

ರುದ್ರಾಶ್ಚ ದ್ವಾದಶಾತ್ಮಾನೋ ವಸವೋ ಧನದಾಪಯಃ ।
ವಿದ್ಯಾಧರಾಶ್ಚ ಗಂಧರ್ವಾಃ ಸಾಧ್ಯಾಃ ಪಿತೃಗಣಾಸ್ತಥಾ ॥ ೩೫ ॥

ತ್ರಯಸ್ತ್ರಿಂಶತ್ಕೋಟಿಸಂಖ್ಯಾಃ ಶಕ್ರಸ್ಯಾನುಚರಾಸ್ಸುರಾಃ ।
ಏತೇ ಸಮಾಗತಾಃ ಕ್ರುದ್ಧಾ ಯೋದ್ಧುಂ ಶ್ರೀಕೃಷ್ಣಸಂಮುಖೇ ॥ ೩೬ ॥

ಆಹೂತಾಃ ಕೇಽಪಿ ಶಕ್ರೇಣ ಸಹಾಯಾರ್ಥಂ ತು ಸ್ವಾತ್ಮನಃ ।
ತಥಾ ತು ನಾರದೇನಾಪಿ ಕೇಚಿದ್ದೇವಾಶ್ಚ ಪ್ರೇರಿತಾಃ ॥ ೩೭ ॥

ತತಃ ಪರಿಘನಿಸ್ತ್ರಿಂಶಗದಾಶೂಲಪರಶ್ವಧೈಃ ।
ಬಭೂವುಸ್ತ್ರಿದಶಾಃ ಸಜ್ಜಾಃ ಶಕ್ರೇ ವಜ್ರಕರೇ ಸ್ಥಿತೇ ॥ ೩೮ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ಪಾರಿಜಾತವರ್ಣನಂ ನಾಮ ಚತುರ್ಥೋಽಧ್ಯಾಯಃ

---

೩೪. ಚಿನ್ನದ ಸರಪಣಿಗಳಿಂದ ಅದನ್ನು ಅಲಂಕರಿಸಿದ್ದರು. ಅವನ ಜೊತೆಯಲ್ಲಿ ದೇವತೆಗಳೆಲ್ಲರೂ ಹೊರಟನು. ಯಮ, ಅಗ್ನಿ, ವರುಣ ಮುಂತಾದವರೂ ಸಿದ್ಧರಾದರು.

೩೫–೩೬. ಏಕಾದಶ ರುದ್ರರೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ, ಕುಬೇರನೂ, ವಿದ್ಯಾಧರ, ಗಂಧರ್ವ, ಸಿದ್ಧ, ಸಾಧ್ಯ, ಪಿತೃ ಇವರೇ ಮೊದಲಾದ ಮುನ್ನೂರ ಮೂವತ್ತುಕೋಟಿ ದೇವತೆಗಳು ಇಂದ್ರನೊಡನೆ ಸೇರಿ ಶ್ರೀಕೃಷ್ಣನೊಡನೆ ಯುದ್ಧಮಾಡಲು ಹೊರಟರು.

೩೭. ಇಂದ್ರನು ಇನ್ನೂ ಕೆಲವರನ್ನು ಯುದ್ಧಕ್ಕೆ ಬರುವಂತೆ ಆಹ್ವಾನ ಮಾಡಿದನು. ನಾರದನೂ ಸಹ ಅಲ್ಲಲ್ಲೇ ಸಂಚರಿಸಿ ಅನೇಕ ದೇವತೆಗಳನ್ನು ಒಟ್ಟುಗೂಡಿಸಿದನು.

೩೮. ಅವರೆಲ್ಲರೂ ಪರಿಘ, ನಿಸ್ತ್ರಿಂಶ, ಗದೆ, ಶೂಲ, ಪರಶು (ಕೊಡಲಿ) ಮುಂತಾದ ಆಯುಧಗಳನ್ನು ತೆಗೆದುಕೊಂಡು ಯುದ್ಧಕ್ಕೆ ಸಿದ್ಧರಾದರು. ಇಂದ್ರನು ವಜ್ರಾಯುಧವನ್ನು ಕೈಯಲ್ಲಿ ಹಿಡಿದು ಸಿದ್ಧನಾದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಪಾರಿಜಾತಹರಣ ವರ್ಣನವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ಪಂಚಮೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಅಥ ದೃಷ್ಟ್ವಾ ಕೃಷ್ಣಚಂದ್ರೋ ಗಜೇಂದ್ರೋಪರಿ ಶೋಭಿತಂ ।
ಇಂದ್ರಂ ದೇವಪರೀವಾರಂ ಯುದ್ಧಾಯ ಸಮುಪಸ್ಥಿತಂ ॥ ೧ ॥

ಶಂಖಂ ಪದ್ಮೌ ಸ್ವಯಂ ಕೃಷ್ಣಃ ಶಬ್ದೇನಾಪೂರಯನ್ ದಿಶಃ ।
ಮುಮೋಚ ಚ ಶರವ್ರಾತಂ ಸಹಸ್ರಾಯುಧಸಂಮಿತಂ ॥ ೨ ॥

ತತೋ ದಿಶಶ್ಚ ಗಗನಂ ದೃಷ್ಟ್ವಾ ಬಾಣಶತಾನ್ವಿತಂ ।
ಮುಮುಚುರ್ವಿಬುಧಾಸ್ಸರ್ವೇ ಶರಾನ್ ಚಕ್ರಾಯುಧೋಪರಿ ॥ ೩ ॥

ಐದನೆಯ ಅಧ್ಯಾಯವು

೧. ಗರ್ಗಮುನಿಯು ಹೇಳಿದನು:—ಶ್ರೀಕೃಷ್ಣನು, ಐರಾವತದ ಮೇಲೆ ಕುಳಿತು ದೇವತಾಸೈನ್ಯದೊಡನೆ ಯುದ್ಧಸನ್ನದ್ಧನಾಗಿ ಬಂದಿರುವ ಇಂದ್ರನನ್ನು ನೋಡಿದನು.

೨ ಆಗ ಕೃಷ್ಣನು ತನ್ನ ಶಂಖವನ್ನು ಊದಿದನು. ಅದರ ನಾದವು ದಿಕ್ಕು ದಿಕ್ಕುಗಳಿಗೆಲ್ಲಾ ಹರಡಿತು. ಸಾವಿರಾರು ಆಯುಧ ಸಮೇತವಾಗಿ ಅನೇಕ ಬಾಣಗಳನ್ನು ಇಂದ್ರನ ಸೈನ್ಯದ ಮೇಲೆ ಪ್ರಯೋಗಿಸಿದನು.

೩. ಆ ರೀತಿ ಪ್ರಯೋಗಿಸಿದ ಬಾಣಗಳು ದಿಕ್ಕು ದಿಕ್ಕುಗಳಲ್ಲೆಲ್ಲಾ ಹರಡಿತು. ಆಗ ದೇವತೆಗಳು ತಮ್ಮ ಬಾಣಗಳನ್ನು ಕೃಷ್ಣನ ಚಕ್ರಾಯುಧದ ಮೇಲೆ ಪ್ರಯೋಗಿಸಿದರು.

ಏಕೈಕಮಸ್ತ್ರಂ ಶಸ್ತ್ರಂ ಚ ಸುರೈರ್ಮುಕ್ತಂ ಸಹಸ್ರಧಾ ।
ಸ್ವಬಾಣೈರ್ಭಗವಾನ್ ಕೃಷ್ಣೋ ಚಿಚ್ಛೇದ ನೃಪ ಲೀಲಯಾ ॥ ೪ ॥

ಪಾಶಿನಶ್ಚಾಹಿಪಾಶಂ ಚ ಚಿಚ್ಛಿದತ್ಪನ್ನಗಾಶನಃ ।
ಯಮರಾಜೇನ ಪ್ರಹಿತಂ ದಂಡಂ ಲೋಕಭಯಂಕರಂ ॥ ೫ ॥

ಗದಯಾ ಪಾತಯಾಮಾಸ ಭೂಮೌ ಕೃಷ್ಣಸ್ತು ಲೀಲಯಾ ।
ಚಕ್ರೇಣ ಧನದಸ್ಯಾಪಿ ಶಿಬಿಕಾಂ ತಿಲಶೋ ಬಹು ॥ ೬ ॥

ಚಕಾರ ಕೃಷ್ಣಃ ಸೂರ್ಯಂ ಚ ಕೋಪದೃಷ್ಟ್ಯಾ ಹತೌಜಸಂ ।
ಮಹಾಗ್ನಿಮಾಗತಂ ವೀಕ್ಷ್ಯ ಮುಖೇನ ಚ ಪಪೌ ಹರಿಃ ॥ ೭ ॥

---

೪. ಆಗ ಕೃಷ್ಣನು ತನ್ನ ಬಾಣಗಳನ್ನು ಪ್ರಯೋಗಿಸಿ ದೇವತೆಗಳು ಬಿಟ್ಟಿದ್ದ ಅಸ್ತ್ರಗಳನ್ನೂ, ಶಸ್ತ್ರಗಳನ್ನೂ ಒಂದೊಂದಾಗಿ ಲೀಲೆಯಿಂದಲೇ ಸಹಸ್ರಪಾಲಾಗಿ ಕತ್ತರಿಸಿದನು.

೫–೬. ವರುಣನು ಸರ್ಪಾಸ್ತ್ರವನ್ನು ಪ್ರಯೋಗಿಸಲು ಅದನ್ನು ಗರುಡನು ಚೂರುಚೂರುಮಾಡಿದನು. ಅದನ್ನು ನೋಡಿ ಯಮನು ಸಿಟ್ಟಿನಿಂದ ಯಮದಂಡವನ್ನು ಪ್ರಯೋಗಿಸಿದನು. ಆಗ ಕೃಷ್ಣನು ತನ್ನ ಗದಾಯುಧದಿಂದ ಅದನ್ನು ಭೂಮಿಯಲ್ಲಿ ಕೆಡಹಿದನು. ಅದೇ ಸಮಯದಲ್ಲಿ ಕುಬೇರನು ಹೊಡೆದ ಶಿಬಿಕಾಯುಧವನ್ನು ತನ್ನ ಚಕ್ರದಿಂದ ಚೂರುಚೂರು ಮಾಡಿದನು.

೭. ಸೂರ್ಯನು ತನ್ನ ಕೋಪವನ್ನು ತೋರಿಸಲು ಕೃಷ್ಣನು ಕೋಪಗೊಂಡು ಅವನನ್ನು 'ಬಿರಿಬಿರಿ' ನೋಡಿದನು. ಅವನ ತೇಜಸ್ಸು ಕಡಿಮೆಯಾಯಿತು. ಅಗ್ನಿಯು ಭಯಂಕರ ಸ್ವರೂಪದಿಂದ ಕೃಷ್ಣನ ಕಡೆಗೆ ಬರಲು ಅದನ್ನು ಕುಡಿದು ಬಿಟ್ಟನು.

ತತೋ ರುದ್ರಗಣೈರ್ಮುಕ್ತಾನ್ ಶೂಲಾನ್ ಚಿಚ್ಛೇದ ವೈ ರುಷಾ ।
ಚಕ್ರೇಣ ಚ ಹರೀ ರುದ್ರಾನ್ ಪಾತಯಾಮಾಸ ಬಾಹುನಾ　　　　|| ೮ ||

ತತೋ ಮರುದ್ಗಣಾ ದೇವಾಃ ಸಾಧ್ಯವಿದ್ಯಾಧರಾಸ್ತಥಾ
ಮುಮುಚುರ್ಬಾಣಪಟಲಾನ್ ಮಾಧವೋಪರಿ ಭೂಪತೇ　　　　|| ೯ ||

ಶರವರ್ಷಂ ಪ್ರಮುಂಚಂತೀಂ ಸೇನಾಂ ಸರ್ವಾಂ ಸಮಾಗತಾಂ ।
ವಿಲೋಕ್ಯ ಸತ್ಯಭಾಮಾ ತು ಭಯಂ ಪ್ರಾಪ ತದಾ ಮೃಧೇ　　　　|| ೧೦ ||

ತಾಂ ಭೀತಾಂ ಪ್ರಾಹ ಗೋವಿಂದೋ ಸತ್ಯೇ ತ್ವಂ ಮಾ ಭಯಂ ಕುರು ।
ಆಗತಂ ಶಕ್ರಸೇನಾಂ ವೈ ಹನಿಷ್ಯಾಮಿ ನ ಸಂಶಯಃ　　　　|| ೧೧ ||

---

೮. ಏಕಾದಶರುದ್ರರು ಅತಿಕೋಪದಿಂದ ಶೂಲಗಳನ್ನು ಕೃಷ್ಣನ ಮೇಲೆ ಪ್ರಯೋಗಿಸಿದರು. ಅವುಗಳನ್ನೆಲ್ಲಾ ಚಕ್ರಾಯುಧದಿಂದ ಛಿದ್ರಮಾಡಿದನು. ರುದ್ರರನ್ನು ತನ್ನ ಬಾಹುಬಲದಿಂದ ಕೆಳಗುರುಳಿಸಿದನು.

೯. ಆ ಸಮಯದಲ್ಲಿ ಸಪ್ತಮರುತ್ತುಗಳೂ, ಸಾಧ್ಯ, ವಿದ್ಯಾಧರ, ಇವರೇ ಮೊದಲಾದ ಅನೇಕ ದೇವತೆಗಳು ಕೃಷ್ಣನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದರು.

೧೦. ಈ ರೀತಿಯಾಗಿ ದೇವಸೈನ್ಯವು ಕೃಷ್ಣನ ಮೇಲೆ ಬಾಣಗಳ ಮಳೆಯನ್ನು ಕರೆಯುತ್ತಿರಲು ಅದನ್ನು ನೋಡಿ ಸತ್ಯಭಾಮೆಯು ಬಹಳ ಹೆದರಿದಳು.

೧೧. ಆಗ ಗೋವಿಂದನು ಭಯಪಟ್ಟಿರುವ ಅವಳನ್ನು ಕುರಿತು 'ಸತ್ಯೇ' ನೀನು ಹೆದರಬೇಡ. ಇಂದ್ರಸೇನೆಯು ಎಷ್ಟಾದರೂ ಬರಲಿ, ಅವರೆಲ್ಲರನ್ನೂ ಖಂಡಿತವಾಗಿಯೂ ವಧಿಸುವೆನು ಎಂದನು.

ಇತ್ಯುಕ್ತ್ವಾ ಭಗವಾನ್ ಕ್ರುದ್ಧೋ ಬಾಣೈಃ ಶಾರ್ಙ್ಗಧನುಶ್ಚ್ಯುತೈಃ ।
ತಾಡಯಾಮಾಸ ವಿಬುಧಾನ್ ಕ್ರೋಷ್ಟೂನ್ ಸಿಂಹೋ ನಖೈರ್ಯಥಾ ॥೧೨॥

ತತಃ ಪ್ರತ್ಯಾಹ ಗರುಡಂ ಕಂಸಹಾ ಕೋಪಪೂರಿತಃ ।
ವೈನತೇಯ ತ್ವಯಾ ಯುದ್ಧಂ ನ ಕೃತಂ ರಣಮಂಡಲೇ ॥ ೧೩ ॥

ತಚ್ಛ್ರುತ್ವಾ ತು ಸಭಾರ್ಯಂ ಚ ಸ್ಕಂಧೇ ಸಂಧಾರಯನ್ ಹರಿಂ ।
ಕೋಪಾದ್ವಿಷ್ಣು ರಥಃ ಸದ್ಯಃ ಪಕ್ಷಾಭ್ಯಾಂ ನಖರಾಂಕುರೈಃ ॥ ೧೪ ॥

ತುಂಡೇನ ಭಕ್ಷಯನ್ ದೇವಾನ್ ತಾಡಯನ್ವಿಚಚಾರ ವೈ ।
ತತಶ್ಚ ದುದ್ರುವುರ್ದೇವಾ ಹನ್ಯಮಾನಾ ಗರುತ್ಮತಾ ॥ ೧೫ ॥

---

೧೨. ಹೀಗೆ ಹೇಳಿ ಅತಿಕೋಪದಿಂದ ಕೃಷ್ಣನು ಶಾರ್ಙ್ಗವೆಂಬ ಧನುಸ್ಸನ್ನು ತೆಗೆದುಕೊಂಡನು. ಅದರಲ್ಲಿ ಬಾಣಗಳನ್ನು ಹೂಡಿ ಸಿಂಹವು ತನ್ನುಗುರುಗಳಿಂದ ನರಿಗಳನ್ನು ಸೀಳುವಂತೆ, ದೇವಸೈನ್ಯದ ಮೇಲೆ ಪ್ರಯೋಗಿಸಿ ಅವರೆಲ್ಲರನ್ನೂ ಛಿದ್ರಛಿದ್ರಮಾಡಿದನು.

೧೩. ಆಗ ಕೃಷ್ಣನು ಗರುಡನನ್ನು ಕುರಿತು—ವೈನತೇಯ, ನೀನು ಯುದ್ಧವನ್ನು ಮಾಡಿಲ್ಲವು. ಆದುದರಿಂದ ನೀನೀಗ ಯುದ್ಧಮಾಡು' ಎಂದು ಹೇಳಿದನು.

೧೪-೧೫. ಅದನ್ನು ಕೇಳಿ ಗರುಡನು ಕೃಷ್ಣಸತ್ಯಭಾಮೆಯರನ್ನು ತನ್ನ ರೆಕ್ಕೆಯ ಮೇಲೆ ಕೂರಿಸಿಕೊಂಡು ಅತಿ ಕೋಪದಿಂದ ರೆಕ್ಕೆಯನ್ನು ಬಡಿಯುತ್ತಾ ತನ್ನ ಉಗುರುಗಳಿಂದಲೂ, ಕೊಕ್ಕಿನಿಂದಲೂ ದೇವತೆಗಳನ್ನು ಹಿಂಸಿಸಿದನು. ಆಗ ದೇವತೆಗಳೆಲ್ಲರೂ ಹೆದರಿ ಓಡಿಹೋಗಲು ಪ್ರಾರಂಭಿಸಿದರು.

ಅಥ ಬಾಣೈರ್ಮಹೀಪಾಲ ಇಂದ್ರೋಪೇಂದ್ರೌ ಮಹಾಬಲೌ ।
ಪರಸ್ಪರಂ ಚ ವರ್ಷಂತೌ ಧಾರಾಭಿರಿವ ತೋಯದೌ ॥ ೧೬ ॥

ಐರಾವತೇನ ರಾಜೇಂದ್ರ ಸುಪರ್ಣೋ ಯುಯುಧೇ ತಥಾ ।
ಗಜಸ್ತಾರ್ಕ್ಷ್ಯಂ ತು ದಶನೈರ್ಜಘಾನ ಗರುಡಸ್ತಥಾ ॥ ೧೭ ॥

ಗಜಂ ತು ತುಂಡಪಕ್ಷೈಶ್ಚ ಭಿನ್ನಭಿನ್ನಂ ಚಕಾರ ಹ ।
ಸುರೈಸ್ಸಮಸ್ತೈರ್ಯುಯುಧೇ ವಜ್ರಿಣಾ ಚ ಯದೂತ್ತಮಃ ॥ ೧೮ ॥

ಭಗವಾನ್ ಮಘವಂತಂ ವೈ ಮಘವಾ ಮಧುಸೂದನಂ ।
ಬಾಣೈರ್ವವೃಷತುಃ ಕ್ರುದ್ಧಾವನ್ಯೋನ್ಯವಿಜಗೀಷಿಣೌ ॥ ೧೯ ॥

ಛಿನ್ನೇಷ್ವಶೇಷಬಾಣೇಷು ಶಸ್ತ್ರೇಷ್ವಸ್ತ್ರೇಷು ಚ ತ್ವರಂ ।
ವಜ್ರಂ ಜಗ್ರಾಹ ಮಘವಾ ಭಗವಾನ್ ಚಕ್ರಮೇವ ಚ ॥ ೨೦ ॥

---

೧೬. ಆಮೇಲೆ ಇಂದ್ರನೂ, ಕೃಷ್ಣನೂ ಸಹ ಪರಸ್ಪರವಾಗಿ ಬಾಣಗಳಮಳೆಯನ್ನು ಸುರಿಸುತ್ತಾ ಯುದ್ಧಮಾಡಿದರು

೧೭. ಗರುಡನು ಐರಾವತದ ಮೇಲೆ ಯುದ್ಧಮಾಡಿದನು. ಐರಾವತವು ತನ್ನ ಕೋರೆಹಲ್ಲುಗಳಿಂದ ಗರುಡನನ್ನು ಗಾಯಮಾಡಿತು.

೧೮. ಗರುಡನು ತನ್ನ ರೆಕ್ಕೆ, ಕೊಕ್ಕು, ಇವುಗಳಿಂದ ಐರಾವತವನ್ನು ಚೂರು ಚೂರಾಗಿ ಮಾಡಿದನು. ಯದುಶ್ರೇಷ್ಠನಾದ ಕೃಷ್ಣನು ದೇವತೆಗಳೊಡನೆಯೂ, ಇಂದ್ರನೊಡನೆಯೂ ಯುದ್ಧಮಾಡಿದನು.

೧೯. ಇಂದ್ರನೂ, ಕೃಷ್ಣನೂ, ಪರಸ್ಪರ ಗೆಲ್ಲಬೇಕೆಂಬ ಆಸೆಯುಳ್ಳವರಾಗಿ ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ಅತಿಕೋಪದಿಂದ ಯುದ್ಧಮಾಡಿದರು.

೨೦. ಉಭಯಪಕ್ಷದಲ್ಲಿಯೂ ಶಸ್ತ್ರಾಸ್ತ್ರಗಳೆಲ್ಲಾ ಚೂರುಚೂರಾದವು. ಆಗ ಕೃಷ್ಣನು ಚಕ್ರಾಯುಧವನ್ನೂ, ಇಂದ್ರನು ವಜ್ರಾಯುಧವನ್ನೂ ಹಿಡಿದು ಸಿದ್ಧರಾದರು.

ಹಾಹಾಕಾರಸ್ತದೈವಾಸೀತ್ ತ್ರೈಲೋಕ್ಯೇ ಸಚರಾಚರೇ ।
ವಜ್ರಚಕ್ರಧರೌ ವೀಕ್ಷ್ಯ ಸುರೇಶ್ವರನರೇಶ್ವರೌ ॥ ೨೧ ॥

ಜಗ್ರಾಹ ವಾಮಹಸ್ತೇನ ಕ್ಷಿಪ್ತಂ ವಜ್ರಂ ಚ ವಜ್ರಿಣಾ ।
ನ ಮುಮೋಚ ಹರಿಶ್ಚಕ್ರಂ ತಿಷ್ಠ ತಿಷ್ಠೇತ್ಯುವಾಚ ಚ ॥ ೨೨ ॥

ಲಜ್ಜಿತಂ ವಜ್ರಹೀನಂ ಚ ತಾರ್ಕ್ಷ್ಯೇಣ ಕ್ಷತವಾಹನಂ ।
ಭೀತಂ ಪಲಾಯಮಾನಂ ಚಾಲೋಕ್ಯ ಸತ್ಯಾ ಜಹಾಸ ವೈ ॥ ೨೩ ॥

ಶಚೀ ವಿಕ್ಷ್ಯಾಗತಂ ಶಕ್ರಂ ಪ್ರಾಹ ಕೋಪೇನ ಪೂರಿತಾ ।
ಏಕಾಕಿನಾ ಮಾಧವೇನ ಪ್ರಧನೇ ತು ವಿನಿರ್ಜಿತಃ ॥ ೨೪ ॥

---

೨೧. ಇಂದ್ರನು ವಜ್ರಾಯುಧವನ್ನೂ, ಕೃಷ್ಣನು ಚಕ್ರಾಯುಧವನ್ನೂ ತೆಗೆದುಕೊಳ್ಳಲು ಅದನ್ನು ನೋಡಿ ಮೂರು ಲೋಕದಲ್ಲಿಯೂ ಹಾಹಾಕಾರ ವುಂಟಾಯಿತು.

೨೨. ಇಂದ್ರನು ಅತಿಕೋಪದಿಂದ ವಜ್ರಾಯುಧವನ್ನು ಕೃಷ್ಣನ ಮೇಲೆ ಪ್ರಯೋಗಿಸಿದನು. ಕೃಷ್ಣನದನ್ನು ತನ್ನ ಎಡಗೈಯಿಂದ ಹಿಡಿದುಕೊಂಡನು. ಅದರ ಬದಲು ತನ್ನ ಚಕ್ರವನ್ನು ಬಿಡಲಿಲ್ಲ. ಆದರೆ 'ನಿಲ್ಲು–ನಿಲ್ಲು' ಎಂಬುದಾಗಿ ಹೇಳಿದನು.

೨೩. ಕೃಷ್ಣನು ವಜ್ರಾಯುಧವನ್ನು ಹಿಡಿದನು. ಗರುಡನು ಐರಾವತವನ್ನು ಗಾಯಮಾಡಿದನು. ಇವೆಲ್ಲವನ್ನೂ ನೋಡಿ ಇಂದ್ರನಿಗೆ ಬಲು ನಾಚಿಕೆಯಾಯಿತು. ತಕ್ಷಣ ಭಯಪಟ್ಟು ಯುದ್ಧರಂಗದಿಂದ ಹಿಮ್ಮೆಟ್ಟಿದನು. ಹೀಗೆ ಓಡಿಹೋಗುತ್ತಿರು ವುದನ್ನು ನೋಡಿ ಸತ್ಯಭಾಮೆಯು ನಕ್ಕಳು.

೨೪–೨೫. ಇಂದ್ರನು ಮನೆಗೆ ಬಂದುದನ್ನು ನೋಡಿ ಶಚಿಗೆ ಸಿಟ್ಟುಬಂದಿತು. ಆಗ ಇಂದ್ರನನ್ನು ಕುರಿತು, ಮಾಧವನು ಒಬ್ಬನೇ ನಿಂತು ಯುದ್ಧಮಾಡಿ ಗೆದ್ದಿರುವನು. ನೀನು ದೊಡ್ಡ ಸೈನ್ಯಸಹಾಯದಿಂದ ಯುದ್ಧಮಾಡಿದೆ. ಆದರೂ ಸೋತುಹೋಗಿರುವೆ.

ಮಹಾಸೈನ್ಯಯುತಸ್ತ್ವಂ ವೈ ತಸ್ಮಾತ್ತೇ ಧಿಗ್ಬಲಂ ಸುರ।
ಅಹಂ ಗತ್ವಾ ರಣೇ ಕೃಷ್ಣಂ ವಿನಿರ್ಜಿತ್ಯ ಸುರದ್ರುಮಂ ॥ ೨೫ ॥

ಮೋಚಯಾಮಿ ನ ಸಂದೇಹೋ ಪಶ್ಯ ತ್ವಂ ಚ ಸುರಾಧಮ ।

॥ ಶ್ರೀಗರ್ಗ ಉವಾಚ ॥

ಇತ್ಯುಕ್ತ್ವಾ ಶಿಬಿಕಾಂ ಶೀಘ್ರಮಾರುಹ್ಯ ಕುಪಿತಾ ಶಚೀ ॥ ೨೬ ॥

ಯೋದ್ಧುಕಾಮಾ ಯಯೌ ರಾಜನ್ ಪುನಸ್ಸುರಗಣೈರ್ವೃತಾ ।
ತಾಮಾಗತಾಂ ವೀಕ್ಷ್ಯ ಕೃಷ್ಣೋ ಯುದ್ಧಾಯ ನ ದಧೇ ಮನಃ ॥ ೨೭ ॥

ತತಃ ಸತ್ಯಾ ಹರಿಂ ಪ್ರಾಹ ರುಷಾ ಪ್ರಸ್ಫುರಿತಾಧರಾ ।
ಅದ್ಯ ಯುದ್ಧಂ ಕರಿಷ್ಯಾಮಿ ಶಚ್ಯಾ ಸಾರ್ಧಮಹಂ ಪ್ರಭೋ ॥ ೨೮ ॥

ತಚ್ಛ್ರುತ್ವಾ ಪ್ರಹಸನ್ ಕೃಷ್ಣೋ ದತ್ವಾ ತಸ್ಯೈ ಸುದರ್ಶನಂ।
ಸ್ಥಾಪಯಿತ್ವಾ ಸುಪರ್ಣೇ ಚ ಜಗ್ರಾಹ ದ್ಯುತರುಂ ಸ್ವಯಂ ॥ ೨೯ ॥

ನಿನ್ನ ಶೌರ್ಯಕ್ಕೆ ಧಿಕ್ಕಾರವಿರಲಿ. ನೋಡೀಗ, ನಾನೇ ಹೋಗಿ ಕೃಷ್ಣನೊಡನೆ ಯುದ್ಧ ಮಾಡಿ ಅವನನ್ನು ಜಯಿಸಿ ಪಾರಿಜಾತವೃಕ್ಷವನ್ನು ಬಿಡಿಸಿಕೊಂಡು ಬರುವೆನು. ಈ ವಿಷಯದಲ್ಲಿ ಸಂಶಯಪಡಬೇಡ. ಎಂದಳು.

೨೬. ಹೀಗೆ ಹೇಳಿ ಪಲ್ಲಕ್ಕಿಯನ್ನು ಏರಿ, ಕೃಷ್ಣನೊಡನೆ ಯುದ್ಧಮಾಡಲು ರಣಾಂಗಣಕ್ಕೆ ಹೋದಳು. ದೇವತೆಗಳ ಸೈನ್ಯವನ್ನು ಪುನಃ ಒಟ್ಟುಗೂಡಿಸಿದಳು.

೨೭–೨೮. ಶಚಿಯು ಯುದ್ಧಕ್ಕೆ ಬಂದುದನ್ನು ನೋಡಿ ಕೃಷ್ಣನು ಅವಳೊಡನೆ ಯುದ್ಧಮಾಡಲು ಒಡಂಬಡಲಿಲ್ಲ. ಆಗ ಸತ್ಯಭಾಮೆಗೆ ಅತಿಕೋಪವುಂಟಾಯಿತು. ಕೋಪದಿಂದ ತುಟಿಗಳು ಅದುರುತ್ತಿದ್ದವು. 'ಪ್ರಭುವೇ' ಶಚಿಯೊಡನೆ ನಾನೇ ಯುದ್ಧಮಾಡುವೆನು, ಎಂದಳು.

೨೯. ಅದನ್ನು ಕೇಳಿ ಕೃಷ್ಣನು ನಗುತ್ತಾ ಸುದರ್ಶನ ಚಕ್ರವನ್ನು ಅವಳ ಕೈಗೆ ಕೊಟ್ಟನು. ಪಾರಿಜಾತವೃಕ್ಷವನ್ನು ಗರುಡನ ಮೇಲೆ ಇಟ್ಟನು.

ಯದಾ ಹರಿಪ್ರಿಯಾ ಕ್ರುದ್ಧಾ ಯುದ್ಧಂ ಕರ್ತುಂ ಸಮಾಗತಾ ।
ತದಾ ಸರ್ವತ್ರ ಬ್ರಹ್ಮಾಂಡೇ ಚಾಸೀತ್ಕೋಲಾಹಲೋ ಮಹಾನ್ ॥ ೩೦ ॥

ಭಯಂ ಪ್ರಾಪುಸ್ಸುರಾಸ್ಸರ್ವೇ ವಿಧಿಶಕ್ರಾದಯೋ ನೃಪ ।
ತದೈವ ಗೀಷ್ಪತೀ ರಾಜನ್ನಾಯಯೌ ಶಕ್ರಚೋದಿತಃ ॥ ೩೧ ॥

ಆಗತ್ಯ ವಾರಯಾಮಾಸ ಯೋದ್ಧುಕಾಮಾಂ ಪುಲೋಮಜಾಂ ।

॥ ಬೃಹಸ್ಪತಿರುವಾಚ ॥

ಶಚಿ ಶೃಣು ಮದೀಯಂ ವೈ ವಚನಂ ಬಹುಬುದ್ಧಿದಂ ॥ ೩೨ ॥

ಕೃಷ್ಣಸ್ತು ಭಗವಾನ್ಸಾಕ್ಷಾತ್ಸತ್ಯಭಾಮಾ ಚ ಶ್ರೀಸಮಾ ।
ತಯಾ ಸಾರ್ಧಂ ಕಥಂ ಯುದ್ಧಂ ಕರಿಷ್ಯಸಿ ಹರಿಪ್ರಿಯೇ ॥ ೩೩ ॥

ತಸ್ಮಾದವಜ್ಞಾಂ ಸಂತ್ಯಜ್ಯ ಖುಭುಕ್ಷೇ ತ್ವಂ ಗೃಹಂ ವ್ರಜ ।
ಸತ್ಯಾಂ ವೈ ಪಾರಿಜಾತಂ ಚ ದತ್ವಾ ರಕ್ಷ ಸುರಾನ್ ಭಯಾತ್ ॥ ೩೪ ॥

---

೩೦. ಸತ್ಯಭಾಮೆಯು ಅತಿಕೋಪದಿಂದ ಯುದ್ಧಮಾಡಲು ಹೊರಟಳು. ಆಗ ಮೂರು ಲೋಕಗಳಲ್ಲಿಯೂ ಹಾಹಾಕಾರವುಂಟಾಯಿತು.

೩೧. ದೇವತೆಗಳೆಲ್ಲರೂ ಭಯಪಟ್ಟರು. ಬ್ರಹ್ಮ, ಇಂದ್ರ ಮುಂತಾದವರು ಹೆದರಿದರು. ಆಗ ಇಂದ್ರನು ಬೃಹಸ್ಪತಿಯನ್ನು ಯುದ್ಧಸ್ಥಾನಕ್ಕೆ ಕಳುಹಿಸಿದನು.

೩೨-೩೩. ಆಗ ಬೃಹಸ್ಪತಿಯು ಯುದ್ಧಸನ್ನದ್ಧಳಾಗಿ ನಿಂತಿರುವ ಶಚಿಯನ್ನು ತಡೆದನು. ಅವಳನ್ನು ಕುರಿತು ಶಚಿಯೇ, ನನ್ನ ಮಾತನ್ನು ಕೇಳು. ಶ್ರೀಕೃಷ್ಣನು ಪರಮಾತ್ಮಸ್ವರೂಪನು. ಸತ್ಯಭಾಮೆಯು ಲಕ್ಷ್ಮೀಸ್ವರೂಪಳು. ಅಂತಹ ಸತ್ಯಭಾಮೆ ಯೊಡನೆ ನೀನು ಯುದ್ಧಮಾಡುವುದೆಂದರೇನು?

೩೪. ಆದುದರಿಂದ ಈ ಮೂರ್ಖತನವನ್ನು ಬಿಟ್ಟು ಮನೆಗೆ ಹೊರಡು. ಸತ್ಯಭಾಮೆಗೆ ಪಾರಿಜಾತವೃಕ್ಷವನ್ನು ಒಪ್ಪಿಸಿ ಭಯಗೊಂಡಿರುವ ದೇವತೆಗಳನ್ನು ರಕ್ಷಿಸು.

ಯದ್ಭಯಾದ್ವಾತಿ ಶ್ವಸನೋ ವಹ್ನಿರ್ದಹತಿ ಯದ್ಭಯಾತ್ ।
ಭಯಾದ್ಮೃತ್ಯುಶ್ಚರತಿ ಬ್ರಧ್ನೋ ವ್ರಜತಿ ಯದ್ಭಯಾತ್ ॥ ೩೫ ॥

ಯಸ್ಮಾದ್ಬಿಭೇತಿ ಬ್ರಹ್ಮಾ ವೈ ಕಪರ್ದೀ ಚ ಪುರಂದರಃ ।
ತಂ ನ ಜಾನಾಸಿ ಶ್ರೀಕೃಷ್ಣಂ ಭೌಮಂ ಹತ್ವಾ ಸಮಾಗತಮ್ ॥ ೩೬ ॥

॥ ಶ್ರೀಗರ್ಗ ಉವಾಚ ॥

ಇತಿ ಶ್ರುತ್ವಾ ಶಚೀ ವಾಕ್ಯಂ ಭಾಮಾಂ ಕೃಷ್ಣಂ ಚ ಲಜ್ಜಯಾ ।
ನತ್ವಾ ಜಗಾಮ ಸದನಮಾತ್ಮಾನಂ ಚ ವಿಗರ್ಹಯನ್ ॥ ೩೭ ॥

ತತಃ ಶಕ್ರಂ ನಮಂತಂ ಚ ವ್ರೀಡಿತಂ ವೀಕ್ಷ್ಯ ಮಾಧವಃ ।
ಉವಾಚ ಶಕ್ರ ಮಾ ವ್ರೀಡಾಂ ಗತೇ ಚ ಭಿದುರೇ ಕುರು ॥ ೩೮ ॥

---

೩೫. ಪರಮಾತ್ಮನ ಭಯಕ್ಕೊಳಪಟ್ಟ ವಾಯುವು ಚಲಿಸುವನು. ವಹ್ನಿಯು ದಹಿಸುವ ಶಕ್ತಿಯುಳ್ಳವನಾಗಿರುವನು. ಮೃತ್ಯುವು ಜೀವಗ್ರಹಣ ಶಕ್ತಿಯುಳ್ಳದ್ದಾಗಿರುವುದು. ಸೂರ್ಯನು ತಪ್ಪದೆ ಪ್ರಕಾಶಿಸುವನು.

೩೬. ಬ್ರಹ್ಮನೂ ಸಹ ಅವನಿಗೆ ಹೆದರುವನು. ಈಶ್ವರ, ಇಂದ್ರ ಇವರೂ ಅವನ ಅನುಜ್ಞೆಯಂತೆ ನಡೆಯುವರು. ಇಂತಹ ಪರಮಾತ್ಮಸ್ವರೂಪನಾದ ಶ್ರೀಕೃಷ್ಣನನ್ನು ನೀನು ತಿಳಿಯಲಾರದೆ ಹೋಗಿರುವೆ. ಪ್ರಬಲನಾದ ನರಕಾಸುರನನ್ನು ಕೊಂದು ಇಲ್ಲಿಗೆ ಬಂದಿರುವನು. ನಿನ್ನಂತಹ ಸ್ತ್ರೀಯ ವಿಷಯವು ಅವನಿಗೆಷ್ಟರದು ? ಎಂದನು.

೩೭. ಬೃಹಸ್ಪತಿಯ ಮಾತುಗಳನ್ನು ಕೇಳಿ ಶಚಿಗೆ ತುಂಬಾ ನಾಚಿಕೆಯಾಯಿತು. ಆಗ ತಕ್ಷಣ ಸತ್ಯಭಾಮೆಯನ್ನೂ ಶ್ರೀಕೃಷ್ಣನನ್ನೂ ನಮಸ್ಕರಿಸಿ ತಾನು ಹೀಗೆ ಪ್ರವರ್ತಿಸಿದುದಕ್ಕೆ ತನ್ನನ್ನು ಹಳಿದುಕೊಳ್ಳುತ್ತಾ ಮನೆಗೆ ಹೋದಳು.

೩೮. ಇಂದ್ರನೂ ತಾನು ಯುದ್ಧಕ್ಕೆ ಹೋದುದರಿಂದ ನಾಚಿಕೆಪಟ್ಟು ಶ್ರೀಕೃಷ್ಣನಿಗೆ ನಮಸ್ಕರಿಸಿದನು. ಆಗ ಕೃಷ್ಣನು ಇಂದ್ರನನ್ನು ಕುರಿತು, ಇಂದ್ರ ನಾಚಿಕೆಪಡಬೇಡ ಹೆದರಿಕೆಯನ್ನು ದೂರಮಾಡು,

ದ್ವಂದ್ವಯುದ್ಧೇ ಹಿ ಚೈಕಸ್ಯ ಭವಿಷ್ಯತಿ ಪರಾಜಯಃ ।
ಇತಿ ಶ್ರುತ್ವಾ ಚ ಪ್ರೋವಾಚ ವಚನಂ ಪಾಕಶಾಸನಃ ॥ ೩೯ ॥

॥ ಇಂದ್ರ ಉವಾಚ ॥

ಯಸ್ಮಿನ್ ಜಗತ್ಸಕಲಮೇತದನಾದಿಮಧ್ಯೇ
ಯಸ್ಮಾದ್ಯತಶ್ಚ ನ ಭವಿಷ್ಯತಿ ಸರ್ವಭೂತಾತ್ ।
ತೇನೋದ್ಭವಪ್ರಲಯಪಾಲನಕಾರಣೇನ
ವ್ರೀಡಾ ಕಥಂ ಭವತಿ ದೇವಿ ನಿರಾಕೃತಸ್ಯ ॥ ೪೦ ॥

ಸಕಲಭುವನಸೂತೇರ್ಮೂರ್ತಿರನ್ಯಾತಿಸೂಕ್ಷ್ಮಾ
ವಿದಿತಸಕಲವೇದ್ಯೈರ್ಜ್ಞಾಯತೇ ಯಸ್ಯ ನಾನ್ಯೈಃ ।
ತಮುಜಮುಕೃತವಿನಾಶಂ ಶಾಶ್ವತಂ ಸ್ವೇಚ್ಛಯೈನಂ
ಜಗದುಪಕೃತಿಮರ್ತ್ಯಂ ಕೋ ವಿಜೇತುಂ ಸಮರ್ಥಃ ॥ ೪೧ ॥

---

೩೯. ಪರಸ್ಪರ ಯುದ್ಧಮಾಡುವಾಗ ಯಾವ ಪಕ್ಷಕ್ಕಾದರೂ ಸೋಲು ಆಗಿಯೇ ಆಗುವುದು. ಆದುದರಿಂದ ದುಃಖಪಡಬೇಕಾದ ಅಗತ್ಯವಿಲ್ಲ, ಎಂದು ಹೇಳಲು ಆಗ ಇಂದ್ರನು ಕೃಷ್ಣನನ್ನು ಇಂತು ಸ್ತುತಿಸಿದನು.

೪೦. ಆದಿಮಧ್ಯಾಂತರಹಿತನಾದ ಆ ಪರಮಾತ್ಮನಲ್ಲಿ ಪ್ರಪಂಚವೆಲ್ಲವೂ ಇರುವುದು. ಅವನ ರಕ್ಷಣೆಯಿಲ್ಲದಿದ್ದರೆ ಯಾವ ಪ್ರಾಣಿಗಳೂ ಬದುಕಲಾರವು. ಅಂತಹ ಜಗತ್ಸೃಷ್ಟಿ ಪಾಲನ ಪ್ರಳಯಗಳಿಗೆ ಕಾರಣನಾದ ನಿನ್ನಿಂದ ಶಚಿಯು ತಿರಸ್ಕೃತಳಾದಳೆಂಬ ವಿಷಯಕ್ಕೆ ನಾಚಿಕೆ ಪಡಬೇಕೇ? ನಾಚಿಕೆ ಆಗುವುದು ತಾನೆ ಎಂತು?

೪೧. ಸಮಸ್ತ ಜಗತ್ತಿಗೂ ನೀನೇ ಕಾರಣನು. ಆದರೂ ಅತಿಸೂಕ್ಷ್ಮವಾದ ಮೂರ್ತಿಯು. ಸಕಲ ವಿಷಯಗಳನ್ನೂ ತಿಳಿದಿರುವ ಸರ್ವಜ್ಞನು ಜ್ಞಾನಿಗಳಿಗೆ ಮಾತ್ರ ಗೋಚರನಾಗತಕ್ಕವನು. ಉತ್ಪತ್ತಿರಹಿತನೂ, ನಾಶರಹಿತನೂ, ಶಾಶ್ವತನೂ ಸ್ವತಂತ್ರನೂ ಜಗತ್ತಿಗೆ ಉಪಕಾರವನ್ನು ಮಾಡುವವನೂ ಆಗಿರುವೆ. ಇಂತಹ ನಿನ್ನನ್ನು ಯಾರು ತಾನೇ ಜಯಿಸಲು ಸಮರ್ಥರು? ಎಂದನು.

ಇತ್ಯುಕ್ತ್ವಾ ಸತ್ಯಭಾಮಾಂ ವೈ ಶಕ್ರಸ್ತೂಷ್ಣೀಂ ಬಭೂವ ಚ ।
ತತಃ ಪ್ರಹಸ್ಯ ಭಗವಾನ್ ಪ್ರಾಹ ಗಂಭೀರಯಾ ಗಿರಾ ॥ ೪೨ ॥

ಭವಾನ್ ದೇವಾಧಿಪಃ ಶಕ್ರ ವಯಂ ಭೂಮಿನಿವಾಸಿನಃ ।
ಕ್ಷಂತವ್ಯಮುಪರಾಧಂ ತದ್ಭವತಾ ಚ ಕೃತಂ ಮಯಾ ॥ ೪೩ ॥

ಭೋಃ ಶಕ್ರ ಪಾರಿಜಾತಶ್ಚ ನೀಯತಾಮುಚಿತಾಸ್ಪದಂ ।
ಗೃಹೀತೋಽಯಂ ಮಯಾ ಸತ್ಯಭಾಮಾವಚನಕಾರಣಾತ್ ॥ ೪೪ ॥

ಗೃಹಾಣ ಕುಲಿಶಂ ಚೇದಂ ಪ್ರಹಿತಂ ಯತ್ತ್ವಯಾ ಮಯಿ ।
ತವೈವಾಸ್ತ್ರಂ ಶುನಾಸೀರ ತದ್ವೈರಿಷು ನಿವಾರಣಂ ॥ ೪೫ ॥

॥ ಇಂದ್ರ ಉವಾಚ ॥

ಕೃಷ್ಣಃ ಕಿಂ ಮೋಹಯಸಿ ಮಾಂ ನರೋಽಹಮಿತಿ ಕಿಂ ವದ ।
ಜಾನಾಮಸ್ತ್ವಾಂ ಜಗನ್ನಾಥಂ ನ ತು ಸೂಕ್ಷ್ಮವಿದೋ ವಯಂ ॥ ೪೬ ॥

---

೪೨. ಈ ರೀತಿ ಇಂದ್ರನು ಕೃಷ್ಣನನ್ನೂ ಸತ್ಯಭಾಮೆಯನ್ನೂ ಕುರಿತು ಹೇಳಿ ಸುಮ್ಮನಾದನು. ಅನಂತರ ಕೃಷ್ಣನು ನಕ್ಕು ಗಂಭೀರವಾದ ಧ್ವನಿಯಿಂದ ಹೇಳಿದನು.

೪೩. 'ದೇವೇಶ್ವರನೆ' ನೀನು ಅಸುರಾಧಿಪನು, ನಾವೆಲ್ಲರೂ ಭೂಮಿಯಲ್ಲಿ ವಾಸಮಾಡುವವರು. ನಾನು ನಿನ್ನ ವಿಷಯದಲ್ಲಿ ಎಸಗಿದ ಅಪರಾಧವನ್ನು ಕ್ಷಮಿಸು.

೪೪. ಎಲೈ ಶಕ್ರನೇ, ನಾನು ಸತ್ಯಭಾಮೆಯ ಮಾತನ್ನು ಕೇಳಿ ಪಾರಿಜಾತ ವೃಕ್ಷಕ್ಕೆ ಆಸೆಪಟ್ಟೆನು, ಆದುದರಿಂದ ನೀನು ಪಾರಿಜಾತವೃಕ್ಷವನ್ನು ಹಿಂದಕ್ಕೆ ತೆಗೆದುಕೋ?

೪೫ ನನ್ನ ಮೇಲೆ ಪ್ರಯೋಗಿಸಿದ ಈ ವಜ್ರಾಯುಧವನ್ನು ತೆಗೆದುಕೋ. ನಿನ್ನ ಶತ್ರುಗಳಲ್ಲಿ ಇದನ್ನು ಪ್ರಯೋಗಿಸು. ಅವರನ್ನು ಇದು ತಡೆಯುವುದು ಎಂದನು.

೪೬. ಅದನ್ನು ಕೇಳಿ ಇಂದ್ರನು ಕೃಷ್ಣನನ್ನು ಕುರಿತು, 'ಕೃಷ್ಣ, ನೀನು ಮನುಷ್ಯನು ಎಂದು ಹೇಳಿಕೊಂಡು ನನ್ನನ್ನೇಕೆ ಮೋಹಿಸುವೆ? ಸೂಕ್ಷ್ಮದರ್ಶಿಗಳಾದ ನಾವು ನಿನ್ನನ್ನು ಜಗನ್ನಾಥನೆಂಬುದಾಗಿ ತಿಳಿದಿರುವೆವು.

ಯೋಸಿ ಯೋಸಿ ಜಗತ್ತ್ರಾಣ ಪ್ರವೃತ್ತೌ ನಾಥ ಸಂಸ್ಥಿತಿಃ ।
ವಿಶ್ವಸ್ಯ ಶಲ್ಯ ನಿಷ್ಕರ್ಷಂ ಕರೋಷಿ ಗರುಡಧ್ವಜ ॥ ೪೭ ॥

ಅಯಂ ಚ ನೀಯತಾಂ ಕೃಷ್ಣ ಪಾರಿಜಾತಃ ಕುಶಸ್ಥಲೀಂ ।
ನರಲೋಕೇ ತ್ವಯಾ ಮುಕ್ತೇನಾಯಂ ಸಂಸ್ಥಾಪ್ಯತೇ ಭುವಿ ॥ ೪೮ ॥

ಆಗಮಿಷ್ಯಸಿ ಗೋವಿಂದ ಸ್ವಯಮೇವ ತ್ರಿವಿಷ್ಟಪಂ ।

॥ ಗರ್ಗ ಉವಾಚ ॥

ತಚ್ಛ್ರುತ್ವಾ ವಜ್ರಿಣೇ ವಜ್ರಂ ದತ್ವಾ ಸೋಽಪ್ಯಾಜಗಾಮ ಕೌ ॥ ೪೯ ॥

ದ್ವಾರಕಾಂ ದ್ವಾರಕಾನಾಥೋ ಸ್ತೂಯಮಾನಸ್ಸುರೇಶ್ವರೈಃ ।
ಉಪಾಧ್ಮಾಯ ತತಃ ಕಂಬುಂ ಸಂಸ್ಥಿತೋ ದ್ವಾರಕೋಪರಿ ॥ ೫೦ ॥

ಉತ್ಪಾದಯಾಮಾಸ ಮುದಂ ದ್ವಾರಕಾವಾಸಿನಾಂ ನೃಪ ।
ಸುಪರ್ಣಾದವತೀರ್ಯಾಥ ಕೃಷ್ಣೋ ಭಾಮಾಸಮನ್ವಿತಃ ॥ ೫೧ ॥

ಪಾರಿಜಾತಂ ಚ ನಿಷ್ಕುಟೇ ಸ್ಥಾಪಯಾಮಾಸ ಲೀಲಯಾ ।
ಜುಷ್ಟಂ ಸುರದ್ರುಮಂ ಕೃಷ್ಣೋ ಭ್ರಮರೈಃ ಸ್ವರ್ಗಪಕ್ಷಿಭಿಃ ॥ ೫೨ ॥

---

೪೭. ಜಗತ್ತು ನಿಂತಿರುವುದಕ್ಕೂ ಅದರ ರಕ್ಷಣೆಗೂ ನೀನೇ ಕಾರಣನು ಗರುಡಧ್ವಜನೇ, ಪ್ರಪಂಚಕ್ಕೆ ಒದಗಿದ ತೊಂದರೆಯನ್ನು ತಪ್ಪಿಸಲು ನೀನಲ್ಲದೆ ಮತ್ತಾರು ಸಮರ್ಥರು ?

೪೮. ಕುಶಸ್ಥಲಿಗೆ ಪಾರಿಜಾತವೃಕ್ಷವನ್ನು ನೀನು ತೆಗೆದುಕೊಂಡು ಹೋಗು. ಆದರೆ ಇದು ನೀನು ನರಲೋಕವನ್ನು ಬಿಟ್ಟುಬಂದರೆ ತಾನಾಗಿಯೇ ಸ್ವರ್ಗಕ್ಕೆ ಬಂದು ಸೇರುವುದು, ಎಂದು ಹೇಳಿದನು.

೪೯–೫೦. ಇಂದ್ರನ ಮಾತನ್ನು ಕೇಳಿ ಕೃಷ್ಣನು ಅವನಿಗೆ ವಜ್ರಾಯುಧವನ್ನು ಕೊಟ್ಟು ಭೂಲೋಕಕ್ಕೆ ಬಂದನು. ದ್ವಾಕಕೆಗೆ ಬಂದು ಪಟ್ಟಣದ ಬಾಗಿಲಿನಲ್ಲಿ ನಿಂತು ಶಂಖವನ್ನು ಊದಿದನು.

೫೧–೫೨. ಎಲ್ಲರೂ ಬಂದು ಕೃಷ್ಣನನ್ನು ನೋಡಿ ಆನಂದಪಟ್ಟರು. ಕೃಷ್ಣನು ಭಾಮಾಸಮೇತನಾಗಿ ಗರುಡನಿಂದ ಕೆಳಗಿಳಿದು ಪುರಪ್ರವೇಶಮಾಡಿದನು. ಪಾರಿಜಾತ ವೃಕ್ಷವನ್ನು ತನ್ನ ತೋಟದಲ್ಲಿ ಹಾಕಿದನು. ಭ್ರಮರಗಳೂ, ಸ್ವರ್ಗದ ಅನೇಕ ಪಕ್ಷಿಗಳೂ ಆ ಪಾರಿಜಾತದಲ್ಲಿ ನೋಡುವುದಕ್ಕೆ ರಮ್ಯವಾಗಿ ಕಾಣಿಸುತಿತ್ತು.

ಅಥೈಕಸ್ಮಿನ್ಮುಹೂರ್ತೇ ವೈ ಮಾಧವೋ ಮಾಧವಃ ಸ್ವಯಂ ।
ಉವಾಹ ರಾಜಕನ್ಯಾಶ್ಚ ಪೃಥಗ್ಗೇಹೇಷು ಧರ್ಮತಃ ॥ ೫೩ ॥

ಷೋಡಶಸ್ತ್ರೀಸಹಸ್ರಾಣಿ ಶತಾಧಿಕಾನಿ ಚಾಷ್ಟ ಚ ।
ತಾವಂತಿ ಚಕ್ರೇ ರೂಪಾಣಿ ಪರಿಪೂರ್ಣತಮೋ ಹರಿಃ ॥ ೫೪ ॥

ಏಕೈಕಸ್ಯಾಂ ದಶ ದಶ ಕೃಷ್ಣೋಽಜೀಜನದಾತ್ಮಜಾನ್ ।
ಯಾವಂತ್ಯ ಆತ್ಮನೋ ಭಾರ್ಯಾ ಹ್ಯಮೋಘಗತಿರೀಶ್ವರಃ ॥ ೫೫ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ಪಾರಿಜಾತವರ್ಣನಂ
ನಾಮ ಪಂಚಮೋಽಧ್ಯಾಯಃ

---

೫೩. ಒಂದು ದಿನ ಒಳ್ಳೆಯ ಲಗ್ನದಲ್ಲಿ ಮಾಧವನು ನರಕಾಸುರನನ್ನು ಕೊಂದ ಸ್ಥಳದಲ್ಲಿ ಸಿಕ್ಕಿದ ರಾಜಕುಮಾರಿಯರನ್ನು ಬೇರೆಬೇರೆ ಮನೆಗಳಲ್ಲಿ ವಿಧಿವತ್ತಾಗಿ ವಿವಾಹ ಮಾಡಿಕೊಂಡನು.

೫೪. ಅವರೆಲ್ಲರೂ ಸೇರಿ ಹದಿನಾರುಸಾವಿರದ ನೂರೆಂಟು ಜನರಿದ್ದರು. ಅದಕ್ಕೋಸ್ಕರ ಪರಿಪೂರ್ಣತಮನಾದ ಹರಿಯು ಅಷ್ಟು ಜನರಾಗಿ ಪರಿಣಮಿಸಿದನು.

೫೫. ತನ್ನ ಪತ್ನಿಯರಿಗಾದಂತೆ ಆ ಸ್ತ್ರೀಯರಿಗೂ ಒಬ್ಬೊಬ್ಬಳಿಗೆ ಹತ್ತು ಹತ್ತು ಜನ ಮಕ್ಕಳಾದರು. ಪರಮಾತ್ಮನ ಮಹಿಮೆಯು ಅಮೋಘವಾದುದು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಪಾರಿಜಾತಹರಣ
ವರ್ಣನವೆಂಬ ಐದನೆಯ ಅಧ್ಯಾಯವು
ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಷಷ್ಠೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಪುನಸ್ತೇ ಕಥಯಿಷ್ಯಾಮಿ ಯಶಃ ಸಂಕ್ಷೇಪತೋ ಹರೇಃ ।
ಚಕಾರ ಹಾಸ್ಯಂ ಭಗವಾನ್ ರುಕ್ಮಿಣ್ಯಾ ಸಹ ಚಾದ್ಭುತಂ ॥ ೧ ॥

ಅನಿರುದ್ಧವಿವಾಹೇ ಚಾವಧೀತ್ ಭ್ರಾತ್ರಾ ತು ರುಕ್ಮಿಣಂ ।
ಉಷಾಸ್ವಪ್ನಕಥಾ ಚಿತ್ರಲೇಖಯಾ ಹರಣಂ ಹರೇಃ ॥ ೨ ॥

ಆರನೆಯ ಅಧ್ಯಾಯವು

೧. ಗರ್ಗನು ಹೇಳಿದನು:—ವಜ್ರನಾಭಿಯೇ, ಪುನಃ ನಿನಗೆ ಹರಿಯ ಯಶಸ್ಸನ್ನು ಸಂಕ್ಷೇಪವಾಗಿ ತಿಳಿಸುವೆನು. ಪಾರಿಜಾತವೃಕ್ಷವನ್ನು ತಂದನಂತರ ರುಕ್ಮಿಣಿಯೊಡನೆಯೂ ಸೇರಿ ಆನಂದದಿಂದ ಕಾಲಕಳೆದನು.

೨. ಆಮೇಲೆ ಮಗನಾದ ಅನಿರುದ್ಧನ ವಿವಾಹವು ನಡೆಯಿತು. ಆ ಸಮಯದಲ್ಲಿ ಬಲರಾಮನಿಂದ ರುಕ್ಮಿಯು ವಧೆಯಾಗುವುದು. ಅನಿರುದ್ಧನಿಗೆ ಬಾಣಾಸುರನ ಮಗಳಾದ ಉಷೆಯ ಸ್ವಪ್ನವಾಗುವುದು ಅದಕ್ಕನುಸಾರವಾಗಿ ಚಿತ್ರಲೇಖೆ ಎಂಬುವಳು ಉಷೆಯನ್ನು ಅಪಹರಿಸುವುದು.

ಪೌತ್ರಸ್ಯ ಬಂಧನಂ ಚಾಪಿ ಬಾಣಯಾದವಸಂಯುಗಃ ।
ಕೃಷ್ಣಶಂಕರಯೋರ್ಯುದ್ಧೇ ಜ್ವರಸಂಸ್ತವನಂ ತತಃ ॥ ೩ ॥

ಬಾಣಬಾಹುಚ್ಛಿದಿ ರುದ್ರಸ್ತುತಿರ್ಬಾಣಸ್ಯ ರಕ್ಷಣೇ ।
ಉಷಾಪ್ರಾಪ್ತಿರ್ನೃಗಾಖ್ಯಾನಂ ಬಲಸ್ಯ ಚ ವ್ರಜಾಗಮಂ ॥ ೪ ॥

ಗೋಪೀವಿಲಾಪೋ ರಾಮಸ್ಯ ಸ್ತುತಿರ್ಗೋಪೀಭಿರೇವ ಚ ।
ಯಮುನಾಕರ್ಷಣಂ ಕಾಶೀಪತಿಪೌಂಡ್ರಕಘಾತನಂ ॥ ೫ ॥

ಕೃತ್ಯೋತ್ಪತ್ತಿರ್ದಾಹನಂ ಚ ಕಾಶ್ಯಾಂ ಕಪಿವಧಸ್ತತಃ ।
ಸಾಂಬಸ್ಯ ಬಂಧನೇ ರಾಮವಿಕ್ರಮೋ ಗಜಸಾಹ್ವಯೇ ॥ ೬ ॥

---

೩. ಕೃಷ್ಣನ ಮೊಮ್ಮಗನನ್ನು ಬಾಣಾಸುರನು ಬಂಧಿಸುವುದು. ಆಗ ಯಾದವರಿಗೂ ಬಾಣಾಸುರನಿಗೂ ಯುದ್ಧವಾಗುವುದು. ಅದೇ ಸಮಯದಲ್ಲಿ ಬಾಣನ ರಕ್ಷಕನಾದ ಶಂಕರನಿಗೂ, ಕೃಷ್ಣನಿಗೂ ಘೋರಯುದ್ಧವು ನಡೆಯುವುದು.

೪. ಯುದ್ಧದಲ್ಲಿ ಬಾಣನ ಬಾಹುಗಳನ್ನು ಕತ್ತರಿಸುವನು. ಆಗ ರುದ್ರನು ಕೃಷ್ಣನನ್ನು ಸ್ತುತಿಸುವನು. ಉಷಾಪ್ರಾಪ್ತಿಯಾಗುವದು. ನೃಗಾಖ್ಯಾನದ ವಿಷಯವು. ಬಲರಾಮನು ಗೋಕುಲಕ್ಕೆ ಹೋಗುವನು.

೫. ಅದಕ್ಕೋಸ್ಕರ ಗೋಪಿಯರೆಲ್ಲರೂ ದುಃಖಪಡುವರು. ಮತ್ತು ಅವನನ್ನು ಹೊಗಳುವರು. ಯಮುನೆಯ ಗರ್ವವನ್ನಡಗಿಸುವುದು. ಕಾಶಿಗೆ ಒಡಯನಾದ ಪೌಂಡ್ರಕನೆಂಬುವನನ್ನು ಅಡಗಿಸುವುದು.

೬. ಕೃತ್ಯೋತ್ಪತ್ತಿಯು. ಮತ್ತು ಅವನ್ನು ದಹಿಸುವುದು, ಕಾಶಿಯಲ್ಲಿಯೇ ಕಪಿಯ ವಧೆಯು. ಸಾಂಬನ ಬಂಧನವು ಗಜಯುದ್ಧದಲ್ಲಿ ಬಲರಾಮನಿಗೆ ಜಯವುಂಟಾಗುವುದು.

ಉಗ್ರಸೇನರಾಜಸೂಯೇ ಜಘಾನ ಶಕುನಂ ಹರಿಃ ।
ನಾರದೇನ ಹರೇರ್ಲೀಲಾದರ್ಶನಂ ಗೃಹಮೇಧಿನಾಂ ॥ ೭ ॥

ಆಹ್ನಿಕಂ ವಾಸುದೇವಸ್ಯ ರಾಜದೂತೇನ ವೈ ಸ್ತುತಿಃ ।
ಇಂದ್ರಪ್ರಸ್ಥೇ ಚ ಗಮನಮುದ್ಧವೇನ ತು ಯಾದವೈಃ ॥ ೮ ॥

ಜರಾಸಂಧಂ ಚ ಭೀಮೇನ ನಿಜಘಾನ ಗಿರಿವ್ರಜೇ ।
ಸಹದೇವಾಭಿಷೇಕಂ ಚ ರಾಜಭಿಶ್ಚ ಕೃತಾ ಸ್ತುತಿಃ ॥ ೯ ॥

ರಾಜಸೂಯೇ ಹರೇಃ ಪೂಜಾ ಶಿಶುಪಾಲವಧಸ್ತಥಾ ।
ದುರ್ಯೋಧನಾಭಿಮಾನಸ್ಯ ಭಂಗಃ ಪ್ರದ್ಯುಮ್ನಶಾಲ್ವಯೋಃ ॥ ೧೦ ॥

ಯುದ್ಧಂ ತ್ರಿನವರಾತ್ರಂ ಚ ಕೃಷ್ಣಸ್ಯಾಗಮನಂ ತತಃ ।
ಶಾಲ್ವಸ್ಯ ದಂತವಕ್ತ್ರಸ್ಯ ತದ್ಭ್ರಾತುರ್ಲೀಲಯಾ ವಧಃ ॥ ೧೧ ॥

---

೭. ಉಗ್ರಸೇನನು ರಾಜಸೂಯಯಾಗವನ್ನು ಮಾಡುವುದು. ಆಗ ಉಂಟಾದ ಶಕುನವನ್ನು ಕೃಷ್ಣನು ನಾಶಮಾಡುವನು. ಪ್ರತಿ ಮನೆಯಲ್ಲಿಯೂ ನಾರದನು ಕೃಷ್ಣನ ಅದ್ಭುತ ಲೀಲೆಯನ್ನು ನೋಡುವನು.

೮. ಕೃಷ್ಣನು ಅಹ್ನೀಕವನ್ನು ಮಾಡುವುದು. ರಾಜದೂತನು ಅವನನ್ನು ಸ್ತೋತ್ರಮಾಡುವನು. ಅನಂತರ ಉದ್ಧವನೇ ಮೊದಲಾದ ಯಾದವರೊಡಗೂಡಿ ಇಂದ್ರಪ್ರಸ್ಥಕ್ಕೆ ಹೋಗುವನು.

೯. ಭೀಮನಿಂದ ಜರಾಸಂಧನ ವಧೆಯಾಗುವುದು. ಆ ಗಿರಿವ್ರಜದಲ್ಲಿ ಸಹದೇವನಿಗೆ ಪಟ್ಟಾಭಿಷೇಕಮಾಡುವನು. ರಾಜರುಗಳೆಲ್ಲರೂ ಸ್ತುತಿಸುವರು.

೧೦. ಯುಧಿಷ್ಠಿರನು ರಾಜಸೂಯ ಯಾಗವನ್ನು ಮಾಡುವನು. ಆಗ ಕೃಷ್ಣನಿಗೆ ಅಗ್ರಪೂಜೆಯನ್ನು ಕೊಡುವುದು. ಅದನ್ನು ವಿರೋಧಿಸಲು ಬಂದ ಶಿಶುಪಾಲನನ್ನು ವಧಿಸುವನು. ಕೃಷ್ಣನಿಂದ ದುರ್ಯೋಧನನ ಗರ್ವಭಂಗವು.

೧೧. ಪ್ರದ್ಯುಮ್ನ ಮತ್ತು ಶಿಶುಪಾಲರಿಗೆ ಇಪ್ಪತ್ತೇಳು ದಿನಗಳು ಯುದ್ಧ ನಾಗುವುದು ಅನಂತರ ಕೃಷ್ಣನು ಬಂದು ದಂತವಕ್ತ್ರ ಶಿಶುಪಾಲರನ್ನು ಅನಾಯಾಸ ವಾಗಿ ಕೊಲ್ಲುವನು.

ತತೋ ಗಜಾಹ್ವಯೇ ರಾಜನ್ ದುರ್ದ್ಯೂತೇನ ಚ ಕೌರವೈಃ ।
ವಿನಿರ್ಜಿತೋ ಭ್ರಾತೃಯುಕ್ತೋ ಸಭಾರ್ಯಸ್ತು ಯುಧಿಷ್ಠಿರಃ ॥ ೧೨ ॥

ವನಂ ಜಗಾಮ ಸಂಸ್ಥಾಪ್ಯ ಪೃಥಾಂ ವಿದುರಗೃಹೇ ।
ಗತ್ವಾರಣ್ಯೇ ನಿವಾಸಂ ವೈ ಚಕಾರ ಬಹುಭಿರ್ದಿನೈಃ ॥ ೧೩ ॥

ತತಶ್ಚ ಪಾಲಯಾಮಾಸ ಮಹೀಂ ದುರ್ಯೋಧನೋ ಮುದಾ ।
ಪ್ರಜಾಸ್ತಂ ನಾಭ್ಯನಂದಂಸ್ಮ ಪಾಂಡುಪುತ್ರೇ ಗತೇ ಸತಿ ॥ ೧೪ ॥

ಅರಣ್ಯೇ ವರ್ತಮಾನಾನ್ವೈ ಪಾಂಡವಾನ್ ದುಃಖಕರ್ಷಿತಾನ್ ।
ಮಿಲಿತ್ವಾಶ್ವಾಸಯಾಮಾಸ ಹ್ಯನಂತಶ್ಚೈಕದಾ ಹರಿಃ ॥ ೧೫ ॥

ದೃಷ್ಟ್ವಾಽಥ ಪಾಂಡವಾನ್ ಕೃಷ್ಣೋ ಹ್ಯಾಜಗಾಮ ಕುಶಸ್ಥಲೀಂ ।
ಉಗ್ರಸೇನಸುಧರ್ಮಾಯಾಂ ಶಶಂಸ ಚೇಷ್ಟಿತಂ ಚ ತತ್ ॥ ೧೬ ॥

---

೧೨. ಯುಧಿಷ್ಠಿರನನ್ನು ಹಸ್ತಿನಾಪುರದಲ್ಲಿ ಜೂಜಿನಲ್ಲಿ ಕೌರವರು ಸೋಲಿಸಿದರು. ಅದರ ಕರಾರಿನಂತೆ ತಮ್ಮಂದಿರು, ಹೆಂಡತಿ ಇವರುಗಳೊಡನೆ ಕಾಡಿಗೆ ಹೋದನು.

೧೩. ಹೋಗುವಾಗ ಕುಂತಿಯನ್ನು ವಿದುರನ ಮನೆಯಲ್ಲಿ ಇರಿಸಿ, ಬಹಳ ಕಾಲದ ವರೆಗೂ ಅರಣ್ಯದಲ್ಲಿಯೇ ವಾಸಮಾಡಿದನು.

೧೪. ಯುಧಿಷ್ಠಿರನು ಕಾಡಿಗೆ ಹೊರಟುಹೋದನಂತರ ದುರ್ಯೋಧನನು ಆನಂದದಿಂದ ರಾಜ್ಯವಾಳಲು ಪ್ರಾರಂಭಿಸಿದನು. ಆದರೇನು, ಪ್ರಜೆಗಳಿಗೆ ಇವನ ಆಳ್ವಿಕೆಯು ಅಭಿರುಚಿಯನ್ನುಂಟುಮಾಡಲಿಲ್ಲ.

೧೫. ಪಾಂಡವರು ಅರಣ್ಯದಲ್ಲಿ ಬಹಳ ಕಷ್ಟಪಡುತ್ತಿದ್ದರು. ಒಂದಾನೊಂದು ದಿನ ಹರಿಯು ಅವರಲ್ಲಿಗೆ ಬಂದು ಅತಿದುಃಖಿತರಾದ ಅವರನ್ನು ಸಮಾಧಾನ ಮಾಡಿದನು.

೧೬. ಪಾಂಡವರನ್ನು ನೋಡಿಕೊಂಡು ಕೃಷ್ಣನು ಕುಶಸ್ಥಲಿಗೆ ಬಂದನು. ಅಲ್ಲಿ ಉಗ್ರಸೇನನ ಸಭೆಯಲ್ಲಿ ಪಾಂಡವರ ವ್ಯವಹಾರವನ್ನು ಹೊಗಳಿದನು.

ತಚ್ಚ ಶ್ರುತ್ವಾ ಯಾದವಾಶ್ಚ ಪ್ರೋಚುಃ ಸರ್ವೇ ಹಿ ವಿಸ್ಮಿತಾಃ।

॥ ಯಾದವಾ ಊಚುಃ ॥

ಕಿಂ ಕೃತಂ ಧೃತರಾಷ್ಟ್ರೇಣ ದೀನಾ ಭ್ರಾತೃಸುತಾ ಅಹೋ ॥ ೧೭ ॥

ದುರ್ದ್ಯೂತೇನ ವಿನಿರ್ಜಿತ್ಯಾಧರ್ಮಾನ್ನಿಷ್ಕಾಸಿತಾ ಗೃಹಾತ್ ।
ಸ್ವಾಧರ್ಮೇಣ ವಿನಶ್ಯಂತಿ ಕೌರವಾ ರಾಜ್ಯಲೋಲುಪಾಃ ॥ ೧೮ ॥

ಪಾಂಡವೇಭ್ಯಸ್ತು ಭಗವಾನ್ ತಸ್ಮಾದ್ದಾಸ್ಯತಿ ಸಂಪದಂ ।

॥ ಶ್ರೀ ಗರ್ಗ ಉವಾಚ ॥

ಇತಿ ಶ್ರುತ್ವಾ ಯಾದವಾನಾಂ ವಾಕ್ಯಂ ಚ ಮಧುಸೂದನಃ ॥ ೧೯ ॥

ಆಯಯೌ ವೈ ಸ್ವಸದನಂ ಸಾಯಂಕಾಲೇ ನೃಪೇಶ್ವರಃ ।
ಆಗತಂ ಸ್ವಾತ್ಮಜಂ ವೀಕ್ಷ್ಯ ನಮಂತಂ ದೇವಕೀ ಮುದಾ ॥ ೨೦ ॥

ದತ್ವಾಶಿಷಂ ಭೋಜನಂ ಚ ಕಾರಯಾಮಾಸ ವೈ ಸತೀ ॥ ೨೧ ॥

---

೧೭. ಅದನ್ನು ಕೇಳಿ ಯಾದವರೆಲ್ಲರೂ ವಿಸ್ಮಿತರಾಗಿ ಕೃಷ್ಣನನ್ನು ಕುರಿತು ದೀನರಾಗಿರುವ ತಮ್ಮನ ಮಕ್ಕಳಾದ ಪಾಂಡವರಿಗೆ ಧೃತರಾಷ್ಟ್ರನು ಎಂತಹ ತೊಂದರೆ ಕೊಟ್ಟಿರುವನು.

೧೮. ಜೂಜಾಟವಾಡಿ ಮೋಸದಿಂದ ಅವರನ್ನು ಸೋಲಿಸಿ ಧರ್ಮಕ್ಕೂ ಅಂಜದೆ ಮನೆಯಿಂದ ಓಡಿಸಿದನು. ಆದರೇನು, ರಾಜ್ಯದಲ್ಲಿ ಅತಿಯಾಸೆಯುಳ್ಳ ಕೌರವರು ತಮ್ಮ ಅಧರ್ಮದಿಂದಲೇ ನಾಶವಾಗುವರು. ಭಗವಂತನೇ ಅವರಿಗೆ ಸುಖವನ್ನು ಕೊಟ್ಟೇ ಕೊಡುವನು. ಎಂದರು.

೧೯. ಅದನ್ನು ಕೇಳಿ ಮಧುಸೂದನನು ಅಲ್ಲಿಂದ ತನ್ನ ಮನೆಗೆ ಬಂದು ಸೇರಿದನು. ಆಗ ಸಾಯಂಕಾಲವಾಗಿತ್ತು.

೨೦–೨೧. ಬಂದವನೇ ದೇವಕಿಗೆ ನಮಸ್ಕರಿಸಿದನು. ದೇವಕಿಯು ಆಶೀರ್ವದಿಸಿದಳು. ಆ ಮೇಲೆ ಕೃಷ್ಣನಿಗೆ ಭೋಜನಾದಿಗಳನ್ನು ಮಾಡಿಸಿದಳು.

ತತಃ ಸ ಚಾಯಯೌ ಕೃಷ್ಣೋ ಸ್ವಸ್ತ್ರೀಣಾಂ ಮಂದಿರಾಣಿ ಚ ।
ಪ್ರಿಯಾಭಿಃ ಪೂಜಿತಸ್ತತ್ರ ಚಕಾರ ಶಯನಂ ಕಿಲ ॥ ೨೨ ॥

ಇತಿ ಶ್ರೀ ಗರ್ಗಸಂಹಿತಾಯಾಮಶ್ವಮೇಧಖಂಡೇ
ಶ್ರೀಕೃಷ್ಣ ಚರಿತ್ರವರ್ಣನೇ ಷಷ್ಠೋಽಧ್ಯಾಯಃ

---

೨೨. ಅನಂತರ ಕೃಷ್ಣನು ತನ್ನ ಪತ್ನಿಯರ ಮನೆಗಳಿಗೆಲ್ಲಾ ಹೋಗಿ ಅಲ್ಲಿ ತನ್ನ ಪ್ರಿಯೆಯರಿಂದ ಪೂಜಿತನಾಗಿ ಮಲಗಿಕೊಂಡನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಶ್ರೀಕೃಷ್ಣಚರಿತ್ರವೆಂಬ
ಆರನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಸಪ್ತಮೋಽಧ್ಯಾಯಃ

|| ಗರ್ಗ ಉವಾಚ ||

ದೇವರ್ಷಿಶ್ಚೈಕದಾ ರಾಜನ್ ದೃಷ್ಟ್ವಾ ರಾಮಂ ಚ ಕೇಶವಂ |
ಸುವೀಣಾಂ ನಾದಯನ್ ಕೃಷ್ಣಗಾಥಾಂ ಗಾಯನ್ಸಮಾಯಯೌ || ೧ ||

ಬ್ರಹ್ಮಲೋಕಾತ್ಸರ್ವಲೋಕಾನ್ ಪಶ್ಯನ್ ಭಾಸ್ಕರಸನ್ನಿಭಃ |
ಸಾಕಂ ತುಂಬುರುಣಾ ಪಿಂಗಜಟಾಭಾರೇಣ ಶೋಭಿತಃ || ೨ ||

ಏಳನೆಯ ಅಧ್ಯಾಯವು

೧. ಗರ್ಗಮುನಿಯು ಹೇಳಿದನು :—ವಜ್ರನಾಭಿಯೇ, ಕೇಳು. ಒಂದುಸಾರಿ ನಾರದಮಹರ್ಷಿಯು ಕೃಷ್ಣನ ಕೀರ್ತನೆಯನ್ನು ಹಾಡುತ್ತಾ ವೀಣೆಯನ್ನು ನುಡಿಸುತ್ತಾ ರಾಮಕೃಷ್ಣರ ಸಮೀಪಕ್ಕೆ ಬಂದನು.

೨. ಬ್ರಹ್ಮಲೋಕದಲ್ಲಿಯೇ ಇದ್ದು ಎಲ್ಲಾ ಲೋಕಗಳನ್ನೂ ನೋಡುವ ಶಕ್ತಿ ಇದ್ದಿತವನಿಗೆ. ಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಜೊತೆಯಲ್ಲಿ ತುಂಬುರುವನ್ನೂ ಕರೆದುಕೊಂಡು ಬಂದಿದ್ದನು. ಅವನ ಜಟೆಗಳೆಲ್ಲವೂ ಹೊಂಬಣ್ಣವಾಗಿ ರಂಜಿಸುತ್ತಿದ್ದವು.

ಕಿಂಚಿಚ್ಛ್ಯಾಮೋ ಮೃಗಾಕ್ಷಶ್ಚ ಕಾಶ್ಮೀರತಿಲಕೈರ್ಯುತಃ ।
ಪೀತೇನ ಧೌತವಸ್ತ್ರೇಣ ತಥಾ ಪೀತಾಂಬರೇಣ ಚ ॥ ೩ ॥

ರಂಗವಲ್ಲೀಮಾಲಯಾ ಚ ವ್ರಜಸ್ತ್ರೀಚಂದನೇನ ಚ ।
ವೃದ್ಧಃ ಪಂಚಾಶದಬ್ದೈಶ್ಚ ಮಂಡಿತಃ ಶುಶುಭೇ ಬಹು ॥ ೪ ॥

ದೃಷ್ಟ್ವಾ ತಮಾಗತಂ ರಾಜಾ ಶಕ್ರಸಿಂಹಾಸನೇ ಸ್ಥಿತಃ ।
ಸುಧರ್ಮಾಯಾಂ ಸ ಚೋತ್ಥಾಯ ನತ್ವಾ ಸಿಂಹಾಸನಂ ದದೌ ॥ ೫ ॥

ತದಂಘ್ರೀ ಚಾವನಿಜ್ಯಾಥ ಕೃತ್ವಾ ಪೂಜನಮುತ್ತಮಂ ।
ತಜ್ಜಲಂ ಮಸ್ತಕೇ ಧೃತ್ವಾ ಚೋಗ್ರಸೇನಸ್ತಮಬ್ರವೀತ್ ॥ ೬ ॥

॥ ಉಗ್ರಸೇನ ಉವಾಚ ॥

ಅದ್ಯ ಮೇ ಸಫಲಂ ಜನ್ಮ ಸಫಲಂ ಸದನಂ ಚ ಮೇ ।
ಅದ್ಯ ಮೇ ಸಫಲಶ್ಚಾತ್ಮಾ ದೇವರ್ಷೇ ತವ ದರ್ಶನಾತ್ ॥ ೭ ॥

---

೩. ಅವನ ಮೈಬಣ್ಣವು ಸ್ವಲ್ಪ ಕಪ್ಪಾಗಿದ್ದಿತು. ಅವನ ಕಣ್ಣುಗಳು ಜಿಂಕೆಯ ಕಣ್ಣುಗಳಂತೆ ಹೊಳೆಯುತ್ತಿದ್ದವು ಹಣೆಗೆ ಕುಂಕುಮದ ತಿಲಕವನ್ನಿಟ್ಟದ್ದನು. ಹಳದಿಯ ಬಣ್ಣದ ಪೀತಾಂಬರವನ್ನು ಉಟ್ಟು ಪ್ರಕಾಶಿಸುತ್ತಿದ್ದನು.

೪. ರಂಗವಲ್ಲಿಯ ಮಾಲೆಯನ್ನು ಧರಿಸಿದ್ದನು. ಗೋಕುಲದ ಸ್ತ್ರೀಯರು ಚಂದನದಿಂದ ಅವನನ್ನು ಅರ್ಚಿಸಿದ್ದರು. ಅವನಿಗೆ ಐವತ್ತು ವರ್ಷಗಳಾಗಿದ್ದವು. ಈ ರೀತಿಯಾಗಿ ನಾರದನು ಶೋಭಿಸಿದನು.

೫. ಸಭೆಗೆ ಬಂದಿರುವ ನಾರದನನ್ನು ಉಗ್ರಸೇನನು ನೋಡಿದನು ಮೇಲಕ್ಕೆದ್ದು ಸ್ವಾಗತಿಸಿದನು. ನಮಸ್ಕರಿಸಿ ಸಿಂಹಾಸನವನ್ನು ಕೊಟ್ಟನು.

೬. ಅವನ ಪಾದಗಳನ್ನು ತೊಳೆದು ಪೂಜಿಸಿದನು. ತೊಳೆದ ನೀರನ್ನು ತನ್ನ ತಲೆಯಲ್ಲಿ ಧರಿಸಿ ಅವನನ್ನು ಕುರಿತು,

೭. ಎಲೈ, ದೇವರ್ಷಿಯೇ, ಇಂದು ನಿನ್ನ ದರ್ಶನದಿಂದ ನನ್ನ ಜನ್ಮವು ಸಾರ್ಥಕವಾಯಿತು. ನನ್ನ ಮನೆಯಿಂದು ಪವಿತ್ರವಾಯಿತು. ನನ್ನಾತ್ಮನು ಸಫಲನಾದನು.

ನಮಸ್ತಸ್ಮೈ ಭಗವತೇ ನಾರದಾಯ ಮಹಾತ್ಮನೇ।
ಕಾಮಕ್ರೋಧವಿಹೀನಾಯ ಋಷೀಣಾಂ ಪ್ರವರಾಯ ಚ ॥ ೮ ॥

ಕಿಮರ್ಥಮಾಗತೋಽಸಿ ತ್ವಮಾಜ್ಞಾಂ ಕುರು ಮಮೋಪರಿ।
ನಿಶಮ್ಯ ವಚನಂ ತಸ್ಯ ಋಷಿರ್ನಿರ್ಜರದರ್ಶನಃ ॥ ೯ ॥

ಉವಾಚ ನೃಪಶಾರ್ದೂಲಂ ಮನಸಾ ನೋದಿತೋ ಹರೇಃ।

॥ ನಾರದ ಉವಾಚ ॥

ಯಾದವೇಂದ್ರ ಮಹಾರಾಜ ಧನ್ಯಸ್ತ್ವಂ ಪೃಥಿವೀಪತೇ ॥ ೧೦ ॥

ತ್ವದ್ಭಕ್ತ್ಯಾ ಕೌ ನಿವಸತಿ ಬಲೇನ ಸಹ ಕೇಶವಃ ।
ರಾಜಸೂಯಂ ಕ್ರತುವರಂ ಪುರಾ ಮದ್ವಚನಾತ್ತ್ವಯಾ ॥ ೧೧ ॥

---

೮. ಭಗವಂತನಾದ ನಾರದನೇ, ನಿನಗೆ ನಮಸ್ಕಾರವು, ನೀನು ಮಹಾತ್ಮನು. ಕಾಮಕ್ರೋಧವಿವರ್ಜಿತನು. ಋಷಿಶ್ರೇಷ್ಠನು.

೯. ನೀನು ಯಾವ ಕಾರಣದಿಂದ ದಯಮಾಡಿಸಿರುವೆ? ಅಪ್ಪಣೆ ಮಾಡಬೇಕು. ಎಂದು ಕೇಳಲು, ದೇವರ್ಷಿಯಾದ ನಾರದನು ಉಗ್ರಸೇನನನ್ನು ಕುರಿತು,

೧೦-೧೧. ಯದುಮಹಾರಾಜನೇ, ನೀನೇ ಧನ್ಯನು. ನೀನು ರಾಜನಾಗಿ ಪೃಥಿವಿಯನ್ನು ಸರಿಯಾಗಿ ಪಾಲಿಸುತ್ತಿರುವೆ. ಬಲರಾಮ ಕೃಷ್ಣರಲ್ಲಿ ಭಕ್ತಿಯಿಟ್ಟಿರುವುದರಿಂದ ಅವರು ಭೂಮಿಯಲ್ಲಿ ವಾಸವಾಗಿರುವರು. ಹಿಂದೆ ನನ್ನ ಮಾತಿನಂತೆ ಶ್ರೀಕೃಷ್ಣನ ಕೃಪೆಯಿಂದ ದ್ವಾರಕೆಯಲ್ಲಿ ರಾಜಸೂಯಯಾಗವನ್ನು ಸುಖವಾಗಿ ಮಾಡಿದೆ.

ಕೃತಂ ಶ್ರೀಕೃಷ್ಣ ಕೃಪಯಾ ದ್ವಾರಕಾಯಾಂ ಸುಖೇನ ಚ ।
ಯೇನ ತ್ರಿಲೋಕೇ ತೇ ಕೀರ್ತಿರ್ನೃಪ ವಿಸ್ತಾರಿತಾ ಭುವಿ || ೧೨ ||

ರಾಜಸೂಯಾಶ್ವಮೇಧೌ ಚ ಕಠಿನೌ ಮಂಡಲೇಶ್ವರೈಃ ।
ಹರಿಭಕ್ತಸ್ಯ ರಾಜೇಂದ್ರ ಸುಲಭೌ ಚಕ್ರವರ್ತಿನಃ || ೧೩ ||

ದ್ವಯೋರ್ಮಧ್ಯೇ ಕೃತಂ ಚೈಕಂ ರಾಜಸೂಯಂ ತ್ವಯಾ ನೃಪ ।
ತಥಾ ಯುಧಿಷ್ಠಿರೇಣಾಪಿ ಕೃತಂ ಕೃಷ್ಣಾಜ್ಞಯಾ ತತಃ || ೧೪ ||

ದ್ವಾಪರಾಂತೇ ಭಾರತೇ ಚ ಹಯಮೇಧಂ ಕ್ರತೂತ್ತಮಂ ।
ನ ಕೃತಂ ಕೇನ ರಾಜ್ಞಾಪಿ ಮುಕ್ತಿದಂ ತ್ವಘನಾಶನಂ || ೧೫ ||

ದ್ವಿಜಹಾ ವಿಶ್ವಹಾ ಗೋಘ್ನೋ ವಾಜಿಮೇಧೇನ ಶುದ್ಧ್ಯತಿ ।
ತಸ್ಮಾದ್ವರಂ ಚ ಯಜ್ಞಾನಾಂ ಹಯಮೇಧಂ ವದಂತಿ ಹಿ || ೧೬ ||

೧೨-೧೩. ಅದರಿಂದ ನಿನ್ನ ಕೀರ್ತಿಯು ಲೋಕತ್ರಯದಲ್ಲಿಯೂ ಹರಡಿರುವುದು. ಇತರರಾಜರಿಂದ ರಾಜಸೂಯ, ಅಶ್ವಮೇಧ ಯಜ್ಞಗಳನ್ನು ಮಾಡಲು ಎಂದಿಗೂ ಸಾಧ್ಯವಿಲ್ಲವು. ಆದರೆ ಕೃಷ್ಣಭಕ್ತನಾದ ನಿನಗೆ ಮಾತ್ರ ಅದು ಬಹು ಸುಲಭವಾಗಿರುವುದು.

೧೪. ರಾಜಸೂಯ, ಅಶ್ವಮೇಧ ಯಜ್ಞಗಳಲ್ಲಿ ನೀನು ರಾಜಸೂಯ ಯಾಗವನ್ನು ಮಾತ್ರ ಮಾಡಿರುವೆ. ಅಂತಯೇ ಯುಧಿಷ್ಠಿರನೂ ಕೃಷ್ಣನ ಆಜ್ಞೆಯಂತೆ ರಾಜಸೂಯಯಾಗವನ್ನು ಮಾಡಿದನು.

೧೫. ದ್ವಾಪರಯುಗದ ಕೊನೆಯಲ್ಲಿ ಭಾರತಭೂಮಿಯಲ್ಲಿ ಈ ಶ್ರೇಷ್ಠವಾದ ಅಶ್ವಮೇಧವನ್ನು ಯಾವ ರಾಜನೂ ಮಾಡಿಲ್ಲವು. ಇದನ್ನು ಮಾಡಿದರೆ ಪಾಪಗಳೆಲ್ಲವೂ ಪರಿಹಾರವಾಗುವುವು.

೧೬. ಬ್ರಹ್ಮಹತ್ಯಾದೋಷ, ಜನರನ್ನು ಕೊಂದದೋಷ, ಗೋಹತ್ಯಾದೋಷ, ಇವುಗಳೆಲ್ಲವೂ ನಾಶವಾಗಿ ಅದನ್ನು ಮಾಡಿದವನು ಪರಿಶುದ್ಧನಾಗುವನು. ಆದ್ದರಿಂದ ಈ ಅಶ್ವಮೇಧವು ಯಜ್ಞಗಳಲ್ಲೆಲ್ಲಾ ಶ್ರೇಷ್ಠವೆನಿಸಿರುವುದು.

ನಿಷ್ಕಾರಣಂ ನೃಪಶ್ರೇಷ್ಠ ವಾಜಿಮೇಧಂ ಕರೋತಿ ಯಃ ।
ವ್ರಜೇತ್ಸುಪರ್ಣಕೇತೋಃ ಸ ಸದನಂ ಸಿದ್ಧದುರ್ಲಭಂ ॥ ೧೭ ॥

ಇತಿ ದೇವರ್ಷಿವಚನಮುಗ್ರಸೇನೋ ನಿಶಮ್ಯ ಚ ।
ಹಯಮೇಧಂ ಯಜ್ಞವರಂ ಕರ್ತುಂ ಚಕ್ರೇ ಮತಿಂ ನೃಪ ॥ ೧೮ ॥

ತದೈವ ಸಹ ರಾಮೇಣ ಕೃಷ್ಣಂ ವೀಕ್ಷ್ಯಾಗತಂ ನೃಪಃ ।
ಪೂಜಯಿತ್ವಾಸನೇ ಸ್ಥಾಪ್ಯ ಸಾಕಂ ಚ ಋಷಿಣಾಬ್ರವೀತ್ ॥ ೧೯ ॥

॥ ಉಗ್ರಸೇನ ಉವಾಚ ॥

ದೇವದೇವ ಜಗನ್ನಾಥ ಜಗದೀಶ ಜಗನ್ಮಯ ।
ವಾಸುದೇವ ತ್ರಿಲೋಕೇಶ ಶೃಣುಷ್ವ ವಚನಂ ಮಮ ॥ ೨೦ ॥

ಮತ್ಪುತ್ರೇಣ ಚ ಕಂಸೇನ ಬಾಲಕಾಶ್ಚ ಸಹಸ್ರಶಃ ।
ವಿನಾಪರಾಧೇನ ಹರೇ ಘಾತಿತಾಶ್ಚ ಮಹಾಸುರೈಃ ॥ ೨೧ ॥

---

೧೭. ಯಾರು ಈ ಯಜ್ಞವನ್ನು ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವರೋ ಅವರು ಮುನಿಗಳಿಗೂ ದುರ್ಲಭವಾದ ವಿಷ್ಣುವಿನ ಸ್ಥಾನವನ್ನು ಹೊಂದುವರು.

೧೮. ಎಲೈ ವಜ್ರನಾಭಿಯೇ, ಈ ರೀತಿ ನಾರದನು ಹೇಳಲು ಉಗ್ರಸೇನನು ಅದರಂತೆಯೇ ಯಜ್ಞಶ್ರೇಷ್ಠವಾದ ಅಶ್ವಮೇಧವನ್ನು ಮಾಡಲಿಚ್ಛಿಸಿದನು.

೧೯. ಆ ಕ್ಷಣವೇ ಕೃಷ್ಣನು ಬಲರಾಮನೊಡನೆ ಅಲ್ಲಿಗೆ ಬಂದನು. ಅವನನ್ನು ನೋಡಿ ಉಗ್ರಸೇನನು ಪೂಜಿಸಿ, ಆಸನದಲ್ಲಿ ಕುಳ್ಳಿರಿಸಿ ಋಷಿಯೊಡಗೂಡಿ ಇಂತೆಂದನು.

೨೦. ದೇವದೇವನಾದ ಜಗನ್ನಾಥನೇ, ನೀನು ಜಗನ್ಮಯನು; ಲೋಕತ್ರಯಕ್ಕೂ ಅಧಿಪತಿಯು. ನಾನು ಹೇಳುವುದನ್ನು ದಯವಿಟ್ಟು ಲಾಲಿಸು.

೨೧. ಹರಿಯೇ, ನನ್ನ ಪುತ್ರನಾದ ಕಂಸನು ಮಹಾಸುರರೊಡಗೂಡಿ ಸಾವಿರಾರು ಜನ ಬಾಲಕರನ್ನು ಅಪರಾಧವಿಲ್ಲದಿದ್ದರೂ ಸಹ ನಾಶಪಡಿಸಿದನು.

ತಸ್ಯ ಮುಕ್ತಿಶ್ಚ ಗೋವಿಂದ ಕಥಂ ಭವತಿ ಪಾಪಿನಃ ।
ಕಸ್ಮಿನ್ ಲೋಕೇ ಗತಃ ಕಂಸೋ ಬಾಲಘಾತೀ ವದಸ್ವ ಮಾಂ ॥ ೨೨ ॥

ಪಿತುಃ ಪಾಪೇನ ಪತತಿ ನಿರಯೇ ಹಿ ತಥಾ ಸುತಃ ।
ತಸ್ಮಾಚ್ಚ ಕಿಂ ಕರಿಷ್ಯೇಽಹಮುಪಾಯಂ ವದ ಮಾಧವ ॥ ೨೩ ॥

ಕಥಿತಂ ನಾರದೇನಾದ್ಯ ತಚ್ಛೃಣುಷ್ವ ಜಗತ್ಪತೇ ।
ವಿಪ್ರಹಾ ವಿಶ್ವಹಾ ಗೋಘ್ನೋ ಹಯಮೇಧೇನ ಶುದ್ಧ್ಯತಿ ॥ ೨೪ ॥

ತಸ್ಮಿನ್ ಯಜ್ಞೇ ಮನೋ ಮೇಽಸ್ತಿ ಯದಿ ಚಾಜ್ಞಾಂ ಪ್ರದಾಸ್ಯತಿ ॥ ೨೫ ॥

॥ ಗರ್ಗ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಮುದಾ ಮದನಮೋಹನಃ ॥ ೨೬ ॥

---

೨೨. ಅಂತಹ ಪಾಪಿಗೆ ಮುಕ್ತಿಯುಂಟಾಗುವ ಬಗೆ ಎಂತು? ಅವನೀಗ ಯಾವ ಲೋಕದಲ್ಲಿರುವನು. ಎಂಬುದನ್ನು ನನಗೆ ತಿಳಿಸು.

೨೩. ತಂದೆಯ ಪಾಪದಿಂದಲೂ ಮಗನು ನರಕಕ್ಕೆ ಬೀಳುವುದುಂಟು. ಆದುದರಿಂದ ಮುಕ್ತಿಗೆ ಉಪಾಯವಾವುದು? ಅದಕ್ಕೆ ನಾನೇನು ಮಾಡಲಿ?

೨೪-೨೫. ಇಂದು ನಾರದನು—ಬ್ರಹ್ಮಹತ್ಯೆಮಾಡಿದವನೂ, ಜನನಾಶಕನೂ, ಗೋಹತ್ಯೆಯನ್ನು ಮಾಡಿದವನೂ, ಅಶ್ವಮೇಧಯಜ್ಞದಿಂದ ಪವಿತ್ರರಾಗುವರೆಂದು ಹೇಳಿರುವನು. ಅದನ್ನು ಮಾಡಬೇಕೆಂದು ಆಸೆಯಿದೆ. ನೀನೇನಾದರೂ ಅಪ್ಪಣೆ ಕೊಟ್ಟರೆ ಮಾಡುವೆನು.

೨೬. ಎಂದು ಹೇಳಲು ಕೃಷ್ಣನು ಅದನ್ನು ಕೇಳಿ ಭೂಮಿಯು ಭಾರಪೀಡಿತ ಳಾಗಿರುವಳೆಂದು ತಿಳಿದು ಮನಸ್ಸಿನಲ್ಲಿ ಇಂತು ಯೋಚಿಸಿದನು—

ಮನಸಿ ಪ್ರಾಹ ಸಂಪಶ್ಯನ್ ಧರಾಂ ಭಾರೇಣ ಪೀಡಿತಾಂ ।
ಅಹೋ ಮಯಾ ಚ ಬಹುಶೋ ಧರಾಭಾರೋಽವತಾರಿತಃ ॥ ೨೭ ॥

ತಥಾಪಿ ಸಂತಿ ಕೌ ಮಧ್ಯೇ ಸೋಽಶ್ವಮೇಧೇನ ನಶ್ಯತಿ ।
ನಾಹಂ ಹನಿಷ್ಯೇ ಶತ್ರೂನ್ವೈ ಸ್ವಹಸ್ತೇನ ಮೃಧಾಂಗಣೇ ॥ ೨೮ ॥

ಇತಿ ಪ್ರತಿಜ್ಞಾ ಚ ಮಯಾ ವಿದೂರಥ ವಧೇ ಕೃತಾ ।
ತಸ್ಮಾಚ್ಚ ಪ್ರೇಷಯಿಷ್ಯಾಮಿ ಸ್ವಪುತ್ರಾನ್ ಯಾದವಾಂಸ್ತಥಾ ॥ ೨೯ ॥

ಜೇತುಂ ವಸುಂಧರಾಂ ಸರ್ವಾಂ ಹಯಮೇಧಮಿಷೇಣ ಚ ।
ಇತಿ ವಾರ್ತಾಂ ವಜ್ರನಾಭೇ ವಿಷ್ವಕ್ಸೇನೋ ವಿಚಾರ್ಯ ಚ ॥ ೩೦ ॥

ಸುಧರ್ಮಾಯಾಂ ಚ ಪ್ರಹಸನ್ನುಗ್ರಸೇನಮುವಾಚ ವೈ ।

॥ ಶ್ರೀ ಕೃಷ್ಣ ಉವಾಚ ॥

ಮಯಾ ಹತೋ ಮಹಾರಾಜ ಕಂಸೋ ವೈಕುಂಠಮುದ್ಭುತಂ ॥ ೩೧ ॥

೨೭-೨೮. ನಾನೇನೋ ಸಾಧ್ಯವಾದಷ್ಟು ಭೂಭಾರವನ್ನು ಇಳಿಸಿರುವೆನು. ಆದರೂ ಇನ್ನೂ ಭಾರವಿದ್ದೇ ಇರುವುದು. ಅದೂ ಈ ಅಶ್ವಮೇಧ ಯಾಗವನ್ನು ಮಾಡುವುದರಿಂದ ನಾಶವಾಗುವುದು. ನನ್ನ ಕೈಯಿಂದ ಸುಮ್ಮಸುಮ್ಮನೆ ಶತ್ರುಗಳನ್ನು ಎಂದಿಗೂ ಕೊಲ್ಲುವುದಿಲ್ಲ.

೨೯-೩೦. ಎಂಬುದಾಗಿ ನಾನು ಪ್ರತಿಜ್ಞೆಮಾಡಿರುವೆನು. ಆದುದರಿಂದ ನನ್ನ ಮಕ್ಕಳನ್ನೂ, ಯಾದವರನ್ನೂ, ಅಶ್ವಮೇಧದ ನೆಪದಿಂದ ಭೂಮಿಯನ್ನೆಲ್ಲಾ ಗೆದ್ದು ಬರಲು ಕಳುಹಿಸಿಕೊಡುವೆನು. ಎಂದು ಮನಸ್ಸಿನಲ್ಲಿ ಯೋಚಿಸಿ, ಸಭೆಯಲ್ಲಿ ಕುಳಿತಿದ್ದ ಉಗ್ರಸೇನನನ್ನು ಕುರಿತು ನಗುತ್ತಾ,

೩೧. ಇಂತೆಂದನು :—ಎಲೈ ಮಹಾರಾಜನೇ, ಆ ಕಂಸನನ್ನು ನಾನೇ ಕೊಂದೆನು. ಅವನೀಗ ನನ್ನ ಸ್ವರೂಪವನ್ನು ವೈಕುಂಠದಲ್ಲಿ ಹೊಂದಿ ವಾಸಮಾಡುತ್ತಿರುವನು.

ಗತೋ ಭೂತ್ವಾ ಮಮಾಕಾರೋ ನಿತ್ಯಂ ವಸತಿ ತತ್ರ ಹಿ ।
ತಥಾ ತ್ವಮಸಿ ರಾಜೇಂದ್ರ ವಿಪಾಪೋ ದರ್ಶನಾನ್ಮಮ ॥ ೩೨ ॥

ತಥಾಪಿ ಹಯಮೇಧಂ ತ್ವಂ ಯಶೋರ್ಥೇ ಕುರು ಭೂಪತೇ ।
ಯಜ್ಞೇನ ತೇ ಮಹಾಕೀರ್ತಿಃ ಪೃಥಿವ್ಯಾಂ ಚ ಭವಿಷ್ಯತಿ ॥ ೩೩ ॥

ಇತಿ ತತ್ಕಥಿತಂ ಶ್ರುತ್ವಾ ಕೃಷ್ಣಸ್ಯಾಕ್ಲಿಷ್ಟಕರ್ಮಣಃ ।
ಉವಾಚ ಪರಮಂ ವಾಕ್ಯಮುಗ್ರಸೇನೋ ಮುದಾ ನೃಪ ॥ ೩೪ ॥

॥ ರಾಜೋವಾಚ ॥

ಅದ್ಯ ದೇವ ಕರಿಷ್ಯೇಽಹಮಶ್ವಮೇಧಂ ಕ್ರತೂತ್ತಮಂ ।
ಸಂಭವಿಷ್ಯತಿ ಶೀಘ್ರಂ ವೈ ಗೋವಿಂದ ಕೃಪಯಾ ತವ ॥ ೩೫ ॥

ಹಯಮೇಧಸ್ಯ ಚ ವಿಧಿಂ ಸರ್ವಂ ಮೇ ಬ್ರೂಹಿ ವಿಸ್ತರಾತ್ ।
ಇತಿ ಶ್ರುತ್ವಾ ಚ ತದ್ವಾಕ್ಯಮುವಾಚದ್ವಿಷ್ಟರಶ್ರವಾಃ ॥ ೩೬ ॥

೩೨–೩೩. ನೀನೂ ಸಹ ನನ್ನ ದರ್ಶನವನ್ನು ಪಡೆದು ಪಾಪರಹಿತನಾಗಿರುವೆ. ಆದರೂ ಕೂಡ ಕೀರ್ತಿಯನ್ನು ಪಡೆಯಲು ಅಶ್ವಮೇಧಯಾಗವನ್ನಾಚರಿಸು. ಆರೀತಿ ಮಾಡಿದರೆ ನಿನ್ನ ಕೀರ್ತಿಯು ಪ್ರಪಂಚದಲ್ಲೆಲ್ಲಾ ಹರಡುವುದು.

೩೪. ಎಂದು ಹೇಳಲು ಉಗ್ರಸೇನನು ಅದನ್ನು ಕೇಳಿ, ಆನದದಿಂದ ಕೃಷ್ಣನನ್ನು ಕುರಿತು,

೩೫. ಎಲೈ ದೇವನೇ, ಈಗ ನಾನು ಅಶ್ವಮೇಧವೆಂಬ ಶ್ರೇಷ್ಠವಾದ ಯಾಗವನ್ನು ಮಾಡುವೆನು. ನಿನ್ನ ಕೃಪೆಯಿಂದ ಅದು ಶೀಘ್ರವಾಗಿ ಪ್ರಾರಂಭವಾಗುವುದೆಂದು ನಂಬಿರುತ್ತೇನೆ.

೩೬. ಆದುದರಿಂದ ನೀನು ಅಶ್ವಮೇಧಯಜ್ಞವನ್ನು ಮಾಡುವ ರೀತಿಯನ್ನು ವಿಸ್ತಾರವಾಗಿ ತಿಳಿಸಬೇಕೆನಲು, ಆಗ ಕೃಷ್ಣನು ಉಗ್ರಸೇನನನ್ನು ಕುರಿತು ಹೇಳಿದನು.

ಹಯಮೇಧವಿಧಿಂ ಪೃಚ್ಛ ದೇವರ್ಷಿಂ ನಾರದಂ ಪ್ರತಿ ।
ಸ ತವಾಗ್ರೇ ಚ ವದತಿ ಸರ್ವಂ ಜ್ಞಾತಾ ಯದೂದ್ವಹ ॥ ೩೭ ॥

ಇತಿ ವಾಕ್ಯಂ ಹರೇಃ ಶ್ರುತ್ವಾ ಯದುರಾಜೋ ಮುದಾನ್ವಿತಃ ।
ಸಭಾಯಾಂ ಸಂಸ್ಥಿತಂ ರಾಜನ್ ದೇವರ್ಷಿಂ ನಿಜಗೌ ನೃಪ ॥ ೩೮ ॥

ತುರಂಗಃ ಕೀದೃಶೋ ಭಾವ್ಯಃ ಕತಿಸಂಖ್ಯಾ ದ್ವಿಜೋತ್ತಮಾಃ ।
ದಕ್ಷಿಣಾ ಕೀದೃಶೀ ಬ್ರಹ್ಮನ್ ವದ ಮೇ ಕೀದೃಶಂ ವ್ರತಂ ॥ ೩೯ ॥

ಉಗ್ರಸೇನಸ್ಯ ವಚನಮಾಕರ್ಣ್ಯ ದೇವದರ್ಶನಃ ।
ಸ್ಮಯಮಾನ ಇವ ಪ್ರಾಹ ಪ್ರೀತ್ಯಾ ಕೃಷ್ಣಂ ವಿಲೋಕಯನ್ ॥ ೪೦ ॥

---

೩೭. ರಾಜನೇ, ಅಶ್ವಮೇಧಯಜ್ಞದ ವಿಧಿಯನ್ನು ವೇದಋಷಿಯಾದ ನಾರದನನ್ನು ಕೇಳಿ ತಿಳಿದುಕೋ. ಸರ್ವಜ್ಞನಾದ ಅವನು ಅದನ್ನು ನಿನಗೆ ಹೇಳುವನು.

೩೮. ಎಂದು ಕೃಷ್ಣನು ಹೇಳಲು ಉಗ್ರಸೇನನು ಅತಿಸಂತೋಷದಿಂದ, ಸಭೆಯಲ್ಲಿ ಮಂಡಿಸಿರುವ ನಾರದನನ್ನು ಕುರಿತು ಪ್ರಶ್ನಿಸಿದನು.

೩೯. ಎಲೈ ಬ್ರಹ್ಮಋಷಿಯೇ, ಅಶ್ವಮೇಧ ಯಾಗಕ್ಕೆ ಎಂತಹ ಕುದುರೆಯನ್ನು ತರಬೇಕು? ಎಷ್ಟು ಮಂದಿ ಬ್ರಾಹ್ಮಣರ ಅವಶ್ಯಕತೆಯುಂಟು? ಅವರಿಗೆ ಕೊಡಬೇಕಾದ ದಕ್ಷಿಣೆ ಎಷ್ಟು? ನಾನು ಯಾವ ರೀತಿಯಾಗಿ ವ್ರತವನ್ನವಲಂಬಿಸಬೇಕು?

೪೦. ಎಂದು ಉಗ್ರಸೇನನು ಪ್ರಶ್ನೆಮಾಡಲು ಅದನ್ನು ಕೇಳಿ ನಾರದ ಮಹರ್ಷಿಯು ಕೃಷ್ಣನ ಮುಖವನ್ನು ನೋಡುತ್ತಾ ಮುಗುಳ್ನಗೆ ನಕ್ಕು ಉಗ್ರಸೇನನನ್ನು ಕುರಿತು ಇಂತೆಂದನು.

॥ ಶ್ರೀ ನಾರದ ಉವಾಚ ॥

ಚಂದ್ರವರ್ಣಂ ರಕ್ತಮುಖಂ ಪೀತಪುಚ್ಛಂ ಮನೋಹರಂ ।
ಸರ್ವಾಂಗಸುಂದರಂ ದಿವ್ಯಂ ಶ್ಯಾಮಕರ್ಣಂ ಸುಲೋಚನಂ ॥ ೪೧ ॥

ಪ್ರವದಂತಿ ಮಹಾರಾಜ ಯಜ್ಞೇಽಸ್ಮಿನ್ ಹಯಮೀದೃಶಂ ।
ಮಧುಮಾಸೇ ಪೂರ್ಣಿಮಾಯಾಂ ಮೋಚ್ಯೋಽಯಂ ಘೋಟಕೋ ನೃಪ ॥

ಮಹಾವೀರೈಃ ಪಾಲನೀಯೋ ವರ್ಷಮಾತ್ರಂ ಹಯೋತ್ತಮಃ ।
ಅಶ್ವಸ್ಯಾಗಮನಂ ಯಾವದ್ಭವಿಷ್ಯತಿ ಸ್ವಕೇ ಪುರೇ ॥ ೪೩ ॥

ನಿವಸೇದ್ಧೈರ್ಯಸಂಯುಕ್ತೋ ತಾವತ್ಕರ್ತಾ ಪ್ರಯತ್ನತಃ ।
ಯತ್ರ ಯತ್ರ ಪುರೀಷಂ ಚ ಮೂತ್ರಂ ಚ ಕುರುತೇ ಹಯಃ ॥ ೪೪ ॥

---

೪೧. ಅದರ ಮೈಬಣ್ಣವು ಬೆಳ್ಳಗಿರಬೇಕು. ಅದರ ಮುಖವು ಕೆಂಪಾಗಿರಬೇಕು. ಬಾಲವು ಹಳದಿಯಾಗಿರಬೇಕು. ಅದು ಸರ್ವಾಂಗಸುಂದರವಾಗಿರಬೇಕು. ಅದರ ಕಿವಿಗಳು ಕಪ್ಪಾಗಿಯೂ, ಅದರ ಕಣ್ಣುಗಳು ಹೊಳಪಾಗಿಯೂ ಇರಬೇಕು. ಎಂದು ಜ್ಞಾನಿಗಳು ಹೇಳುವರು.

೪೨. ವಸಂತಋತುವಿನ ಪೂರ್ಣಿಮೆಯ ದಿವಸ ಕುದುರೆಯನ್ನು ಬಿಡಬೇಕು. ಅದರ ರಕ್ಷಣೆಗೆ ಅನೇಕ ವೀರರು ನಿಯುಕ್ತರಾಗಬೇಕು. ಒಂದು ವರ್ಷ ಮಾತ್ರ ಅದನ್ನು ಬಿಡಬೇಕಾದುದು.

೪೩. ಆ ಕುದುರೆಯು ತನ್ನ ಸ್ಥಾನಕ್ಕೆ ಹಿಂತಿರುಗುವ ವರೆಗೂ ಯಜ್ಞವನ್ನು ಮಾಡುವವನು ಧೈರ್ಯದಿಂದ ಅದನ್ನು ಕಾಯಬೇಕು.

೪೪. ಅದು ಎಲ್ಲೆಲ್ಲಿ ಮೂತ್ರಪುರೀಷೋತ್ಸರ್ಜನವನ್ನು ಮಾಡುವುದೋ ಅಲ್ಲಲ್ಲಿ ಬ್ರಾಹ್ಮಣರಿಂದ ಹೋಮವನ್ನು ಮಾಡಿಸಿ ಒಂದು ಸಹಸ್ರ ಗೋವುಗಳನ್ನು ಅವರಿಗೆ ದಾನವಾಗಿ ಕೊಡಬೇಕು.

ಕರ್ತವ್ಯಂ ಹವನಂ ವಿಪ್ರೈರ್ದಾತವ್ಯಂ ಗೋಸಹಸ್ರಕಂ ।
ಸಂಲಿಂಖ್ಯ ಕಾಂಚನಂ ಪತ್ರಂ ಸ್ವನಾಮಬಲಚಿಹ್ನಿತಂ ॥ ೪೫ ॥

ಹಯಸ್ಯ ಭಾಲೇ ಬಧ್ವಾ ಚ ಕಥನೀಯಮಿದಂ ವಚಃ ।
ಸರ್ವೇ ಶೃಣುತ ರಾಜಾನೋ ವಿಮುಕ್ತೋಽಸ್ತಿ ಹಯೋ ಮಯಾ ॥ ೪೬ ॥

ಕಶ್ಚಿದ್ಭೂಪೋ ಶ್ಯಾಮಕರ್ಣಂ ಪ್ರತಿಗೃಹ್ಣಾತು ಚೇದ್ಬಲಂ ।
ಗೃಹ್ಣಾತಿ ಯಸ್ತಂ ಮಾನೇನ ಸಂಜೇತವ್ಯೋ ಬಲಾತ್ಸ್ವಯಂ ॥ ೪೭ ॥

ವಿಪ್ರಾ ವಿಂಶತಿಸಾಹಸ್ರಾ ಯಜ್ಞಾದೌ ಕೀರ್ತಿತಾ ನೃಪ ।
ವೇದಜ್ಞಾಃ ಸರ್ವಶಾಸ್ತ್ರಜ್ಞಾಃ ಕುಲೀನಾಶ್ಚ ತಪಸ್ವಿನಃ ॥ ೪೮ ॥

ಅತ್ರ ತೇ ಕಥಯಿಷ್ಯಾಮಿ ಸಮರ್ಥಸ್ತಂ ಶೃಣುಷ್ವ ಚ ।
ವಾಜಿಮೇಧೇ ಮಹಾರಾಜ ವಿಪ್ರಾಣಾಂ ದೀರ್ಘದಕ್ಷಿಣಾಂ ॥ ೪೯ ॥

---

೪೫. ಒಂದು ಚಿನ್ನದ ತಗಡಿನಲ್ಲಿ ತನ್ನ ಪರಾಕ್ರಮಾದಿಗಳನ್ನು ನಿರೂಪಿಸಿ ಹೆಸರನ್ನು ಬರೆಸಿ, ಆ ಕುದುರೆಯ ಹಣೆಗೆ ಕಟ್ಟಿಸಿ ಈ ರೀತಿ ಘೋಷಿಸಬೇಕು—

೪೬–೪೭. ರಾಜರುಗಳೆಲ್ಲರೂ ಕೇಳಿರಿ, ನಾನು ಯಜ್ಞಕ್ಕೋಸ್ಕರವಾಗಿ ಕುದುರೆಯನ್ನು ಬಿಟ್ಟಿರುವೆನು. ಶಕ್ತಿಯಿದ್ದ ಪಕ್ಷದಲ್ಲಿ ಯಾವ ರಾಜನಾದರೂ ಇದನ್ನು ಹಿಡಿದುಕೊಳ್ಳಬಹುದು. ಆರೀತಿ ಹಿಡಿದುಕೊಂಡಲ್ಲಿ ಅವನನ್ನು ನಾವು ಜಯಿಸುವೆವು. ಎಂದು ಬರೆದಿರಬೇಕು.

೪೮. ಇಪ್ಪತ್ತುಸಾವಿರ ಬ್ರಾಹ್ಮಣರು ಬೇಕು. ಅವರೆಲ್ಲರೂ ವೇದಾಧ್ಯಯನ ಸಂಪನ್ನರಾಗಿಯೂ, ಸರ್ವಶಾಸ್ತ್ರವಿಶಾರದರಾಗಿಯೂ, ಸತ್ಕುಲಪ್ರಸೂತರಾಗಿಯೂ, ತಪಸ್ವಿಗಳಾಗಿಯೂ ಇರಬೇಕು.

೪೯. ಮಹಾರಾಜ, ವಿಪ್ರರಿಗೆ ಕೊಡಬೇಕಾದ ದಕ್ಷಿಣೆಯ ವಿಷಯವನ್ನು ಹೇಳುವೆನು ಕೇಳು. ನೀನು ಅದರಲ್ಲಿ ಸಮರ್ಥನೇ ಆಗಿರುವೆ.

ತುರಗಾನಾಂ ಸಹಸ್ರಂ ಚ ಗಜಾನಾಂ ಶತಮೇವ ಚ ।
ದ್ವಿಶತಂ ಸ್ಯಂದನಾನಾಂ ಚ ಸಹಸ್ರಂ ಚ ಗವಾಂ ತಥಾ || ೫೦ ||

ವಿಂಶದ್ಭಾರಂ ಸುವರ್ಣಾನಾಂ ಪ್ರದಾತವ್ಯಂ ದ್ವಿಜೇ ದ್ವಿಜೇ ।
ಯಜ್ಞಸ್ಯಾದೌ ತಥಾ ಚಾಂತಮೀದೃಶೀ ದಕ್ಷಿಣಾ ಸ್ಮೃತಾ || ೫೧ ||

ಅಸಿಪತ್ರವ್ರತಂ ಕೃತ್ವಾ ಬ್ರಹ್ಮಚರ್ಯಸಮನ್ವಿತಃ ।
ಕೌ ಪತ್ನ್ಯಾ ಸಾರ್ಧಮೇಕತ್ರ ಕುರ್ಯಾಚ್ಚ ಶಯನಂ ನಿಶಿ || ೫೨ ||

ವರ್ಷಮಾತ್ರಂ ಮಹಾರಾಜ ಕರ್ತವ್ಯಂ ವ್ರತಮೀದೃಶಂ ।
ದೀನಾನಾಂ ಚ ಪ್ರದಾತವ್ಯಮನ್ನಂ ವಾ ಬಹುಶೋ ಧನಂ || ೫೩ ||

ವಿಧಿನಾನೇನ ರಾಜೇಂದ್ರ ಕ್ರತುರೇಷೋ ಭವಿಷ್ಯತಿ ।
ಅಸಿಪತ್ರವ್ರತಯುತೋ ಬಹುಪುತ್ರಫಲಪ್ರದಃ || ೫೪ ||

೫೦-೫೧. ಯಜ್ಞದ ಮೊದಲಲ್ಲಿಯೂ, ಕೊನೆಯಲ್ಲಿಯೂ, ಪ್ರತಿಯೊಬ್ಬ ಬ್ರಾಹ್ಮಣನಿಗೂ ಒಂದುಸಾವಿರ ಕುದುರೆಗಳನ್ನೂ ನೂರು ಆನೆ, ಇನ್ನೂರು ರಥಗಳು. ಒಂದು ಸಹಸ್ರ ಹಸುಗಳು ಇಪ್ಪತ್ತುಭಾರ ತೂಕದ ಸುವರ್ಣ, ಇವೆಲ್ಲವನ್ನೂ ಕೊಡಬೇಕು.

೫೨. ಅಸಿಪತ್ರವ್ರತ (ಕತ್ತಿಯ ಅಲುಗಿನ ಮೇಲೆ ನಡೆಯುವಂತೆ) ದಂತೆ ನೈಷ್ಠಿಕಬ್ರಹ್ಮಚರ್ಯವನ್ನು ಪರಿಪಾಲಿಸಬೇಕು. ಪತ್ನಿಯೊಡನೆ ಒಂದೇ ಸ್ಥಳದಲ್ಲಿ ಭೂಮಿಯ ಮೇಲೆ ಮಲಗಬೇಕು.

೫೩. ಒಂದು ವರ್ಷದವರೆಗೂ ಈ ರೀತಿಯಾದ ವ್ರತವನ್ನು ಪಾಲಿಸಬೇಕು. ಬಡಬಗ್ಗರಿಗೆ ಅನ್ನಾಹಾರಾದಿಗಳನ್ನೂ ಅಧಿಕವಾಗಿ ಧನವನ್ನೂ ಕೊಡಬೇಕು.

೫೪. ರಾಜೇಂದ್ರ, ಇದೇ ಅಶ್ವಮೇಧಯಾಗದ ನಿಯಮವು. ಅಸಿಪತ್ರ ವ್ರತದಂತೆ ಬ್ರಹ್ಮಚರ್ಯಪಾಲನೆಮಾಡುವುದರಿಂದ ಅನೇಕ ಪುತ್ರರೂ, ಇಷ್ಟಾರ್ಥ ಸಿದ್ಧಿಯೂ ಆಗುವುದು.

ಭೀಷ್ಮಂ ವಿನಾ ಹಿ ಮದನಂ ಕೋ ವಿಜೇತುಂ ಭವೇನ್ನರಃ ।
ತಸ್ಮಾದ್ಭೀತಾ ನ ಕುರ್ವಂತಿ ಕಠಿನಂ ಚೈನಮದ್ಭುತಂ ॥ ೫೫ ॥

ಕಾಮಂ ಪ್ರತಿ ವಿಜೇತುಂ ವೈ ಶಕ್ತಿಸ್ತೇ ವಿದ್ಯತೇ ಯದಿ ।
ಕುರು ಗರ್ಗಂ ಸಮಾಹೂಯ ಯಜ್ಞಾರಂಭಂ ನೃಪೋತ್ತಮ ॥ ೫೬ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ಯಜ್ಞೋದ್ಯೋಗ
ವರ್ಣನಂ ನಾಮ ಸಪ್ತಮೋಽಧ್ಯಾಯಃ

---

೫೫. ಭೀಷ್ಮನನ್ನು ಬಿಟ್ಟರೆ ಮನ್ಮಥನನ್ನು ಜಯಿಸಿರುವವರು ಯಾರೂ ಇಲ್ಲ. ಆದುದರಿಂದ ಈ ಬ್ರಹ್ಮಚರ್ಯವ್ರತಪಾಲನೆಗೆ ಹೆದರಿ ಈ ಅದ್ಭುತವೂ, ಕಠಿಣವೂ ಆದ ಯಜ್ಞವನ್ನು ಯಾರೂ ಮಾಡುತ್ತಿಲ್ಲ.

೫೬. ನೀನು ಮನ್ಮಥನನ್ನು ಜಯಿಸುವಷ್ಟು ಸಮರ್ಥನಾಗಿದ್ದ ಪಕ್ಷದಲ್ಲಿ ಗರ್ಗಾಚಾರ್ಯನನ್ನು ಕರೆಸಿ ಅವನ ಅನುಮತಿಯಿಂದ ಯಜ್ಞವನ್ನು ಪ್ರಾರಂಭಿಸು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಯಜ್ಞೋದ್ಯೋಗವರ್ಣನವೆಂಬ
ಏಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಅಷ್ಟಮೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಇತಿ ತದ್ವಾಕ್ಯಮಾಕರ್ಣ್ಯ ಸ್ಪಷ್ಟಾಕ್ಷರಸಮನ್ವಿತಂ ।
ರಾಜರ್ಷಿಃ ಪ್ರಾಹ ದೇವರ್ಷಿಂ ವಿಸ್ಮಿತಃ ಪ್ರಹಸನ್ನಿವ ॥ ೧ ॥

॥ ರಾಜೋವಾಚ ॥

ಮುನೇ ಯಜ್ಞಂ ಕರಿಷ್ಯೇಽಹಂ ಯಜ್ಞಯೋಗ್ಯಂ ತುರಂಗಮಂ ।
ಗತ್ವಾ ಮಮಾಶ್ವಶಾಲಾಯಾಂ ಹಯಾನಾಂ ತ್ವಂ ವಿಲೋಕಯ ॥ ೨ ॥

ಎಂಟನೆಯ ಅಧ್ಯಾಯವು

೧. ಗರ್ಗಮುನಿಯು ಹೇಳಿದನು:—ದೇವರ್ಷಿಯಾದ ನಾರದನು ಹೇಳಿದುದನ್ನು ಕೇಳಿ ರಾಜರ್ಷಿಯಾದ ಉಗ್ರಸೇನನು ನಗುತ್ತಾ ಆಶ್ಚರ್ಯದಿಂದ ನಾರದನನ್ನು ಕುರಿತು,

೨. ಎಲೈ ಮುನಿಯೇ, ನಿನ್ನ ನಿಯಮದಂತೆಯೇ ನಾನು ಯಜ್ಞಮಾಡಲು ಸಿದ್ಧನಾಗಿರುವೆನು. ಈಗ ನೀನು ನನ್ನ ಅಶ್ವಶಾಲೆಗೆ ಹೋಗಿ ಯಜ್ಞಕ್ಕೆ ಬೇಕಾದ ಕುದುರೆಯನ್ನು ಆರಿಸು.

ನೃಪಸ್ಯ ವಚನಂ ಶ್ರುತ್ವಾ ತಥೇತ್ಯುಕ್ತ್ವಾ ಚ ನಾರದಃ ।
ವಾಜಿಶಾಲಾಂ ಯಯೌ ತೇನ ದ್ರಷ್ಟುಂ ಕೃಷ್ಣೇನ ಘೋಟಕಂ ॥ ೩ ॥

ಸ ಗತ್ವಾ ತತ್ರ ತುರಗಾನ್ ಧೂಮ್ರವರ್ಣಾನ್ಮನೋಹರಾನ್ ।
ಶ್ಯಾಮವರ್ಣಾನ್ಕೃಷ್ಣವರ್ಣಾನ್ ಪದ್ಮವರ್ಣಾನ್ದದರ್ಶ ವೈ ॥ ೪ ॥

ತಥಾ ಚಾನ್ಯತ್ರ ಶಾಲಾಯಾಂ ದುಗ್ಧಭಾನ್ ಜಲಸನ್ನಿಭಾನ್ ।
ಹರಿದ್ರಾಭಾನ್ಕುಂಕುಮಾಭಾನ್ ಪಲಾಶಕುಸುಮಪ್ರಭಾನ್ ॥ ೫ ॥

ತಥಾ ಚಿತ್ರವಿಚಿತ್ರಾಂಗಾನ್ ಸ್ಫಟಿಕಾಂಗಾನ್ ಮನೋಜವಾನ್ ।
ಹರಿದ್ವರ್ಣಾನ್ ತಾಮ್ರವರ್ಣಾನ್ ಕೌಸುಂಭಾಂಗಾನ್ ಶುಕಪ್ರಭಾನ್ ॥ ೬ ॥

ಇಂದ್ರಗೋಪನಿಭಾನ್ಗೌರಾನ್ ದಿವ್ಯಾನ್ಪೂರ್ಣಶಶಿಪ್ರಭಾನ್ ।
ಸಿಂಧೂರಾಂಗಾನಗ್ನಿವರ್ಣಾನ್ ಬಾಲಸೂರ್ಯಸಮಾನ್ನೃಪ ॥ ೭ ॥

---

೩. ಎಂದು ರಾಜನು ಹೇಳಲು ಅದರಂತೆ ನಾರದನು ಯಜ್ಞಕ್ಕೆ ಬೇಕಾದ ಕುದುರೆಯನ್ನು ಆರಿಸಲು ಕೃಷ್ಣನೊಡನೆ ಅಶ್ವಶಾಲೆಗೆ ಹೋದನು.

೪. ಅಲ್ಲಿ ಬೂದುಬಣ್ಣ, ಕಪ್ಪು, ನೀಲ, ಕೆಂಪು, ಮುಂತಾದ ಬಣ್ಣಗಳಿಂದ ಕೂಡಿರುವ ಮನೋಹರವಾದ ಅನೇಕ ಕುದುರೆಗಳನ್ನು ನೋಡಿದನು.

೫–೬. ಬೇರೊಂದು ಶಾಲೆಯಲ್ಲಿ ಹಾಲುಬಣ್ಣದ ಕುದುರೆಗಳನ್ನೂ, ಹಸುರು, ಕುಂಕುಮ, ಚಂದ್ರ, ಮುಂತಾದ ಚಿತ್ರ ವಿಚಿತ್ರವಾದ ಬಣ್ಣಗಳುಳ್ಳ ಕುದುರೆಗಳನ್ನೂ, ಸ್ಫಟಿಕದಂತೆ ಸ್ವಚ್ಛವೂ, ಮನೋಹರವೂ, ಕೆಂಪಾಗಿಯೂ, ಗಿಳಿಯ ಬಣ್ಣವೂ, ಇರುವ ಅನೇಕ ಕುದುರೆಗಳನ್ನೂ ನೋಡಿದನು.

೭. ಇಂದ್ರಗೋಪದಂತೆ ಬಿಳುಪಾಗಿಯೂ, ಅಗ್ನಿಯಂತೆ ಜಾಜ್ವಲ್ಯಮಾನವಾಗಿಯೂ, ಬಾಲಸೂರ್ಯನಂತೆ ಸೌಮ್ಯವಾಗಿಯೂ ಇರುವ ಅನೇಕ ಕುದುರೆಗಳನ್ನು ನೋಡಿದನು.

ಈದೃಶಾಂಶ್ಚ ಹಯಾನ್ದೃಷ್ಟ್ವಾ ನಾರದೋ ವಿಸ್ಮಯಾನ್ವಿತಃ ।
ಉವಾಚ ಕೃಷ್ಣಸಹಿತಮುಗ್ರಸೇನಂ ಹಸನ್ನಿವ　　॥ ೮ ॥

॥ ನಾರದ ಉವಾಚ ॥

ವಾಜಿನಸ್ತೇ ಮಹಾರಾಜ ಸರ್ವೇ ಹಿ ಬಹುಸುಂದರಾಃ ।
ಈದೃಶಾ ನೈವ ಸ್ವರ್ಲೋಕೇ ಪೃಥಿವ್ಯಾಂ ಚ ರಸಾತಲೇ　　॥ ೯ ॥

ವರ್ತಂತೇ ವಾಜಿಶಾಲಾಯಾಂ ಕೃಷ್ಣಸ್ಯ ಕೃಪಯಾ ತವ ।
ಏಕೋಽಪಿ ಶ್ಯಾಮಕರ್ಣಸ್ತು ತೇಷಾಂ ಮಧ್ಯೇ ನ ದೃಶ್ಯತೇ　　॥ ೧೦ ॥

॥ ಗರ್ಗ ಉವಾಚ ॥

ನಿಶಮ್ಯ ವಾಕ್ಯಂ ದೇವರ್ಷೇ ನೃಪಸ್ತು ದುಃಖಿತೋಽಭವತ್ ।
ಯಜ್ಞೋ ಭವಿಷ್ಯತಿ ಕಥಂ ಮನಸೀತಿ ವಿಚಾರಯನ್　　॥ ೧೧ ॥

---

೮. ಇಂತಹ ಕುದುರೆಗಳೆಲ್ಲವನ್ನೂ ನೋಡಿ ನಾರದನು ವಿಸ್ಮಿತನಾದನು. ಆಮೇಲೆ ಕೃಷ್ಣನೊಡನಿರುವ ಉಗ್ರಸೇನನನ್ನು ಕುರಿತು ನಗುತ್ತಾ ಈ ರೀತಿ ಹೇಳಿದನು.

೯. ಮಹಾರಾಜ, ಕುದುರೆಗಳೆಲ್ಲವೂ ಬಹುಸುಂದರವಾಗಿರುವುವು. ಇಂತಹ ಕುದುರೆಗಳು ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ಎಲ್ಲಿಯೂ ದೊರಕಲಾರವು.

೧೦. ಕೃಷ್ಣನ ಅನುಗ್ರಹಬಲದಿಂದ ನಿನ್ನ ಅಶ್ವಶಾಲೆಯು ಮನೋಹರವಾದ ಅಶ್ವಗಳಿಂದ ತುಂಬಿರುವುದು. ಆದರೆ ಯಜ್ಞಕ್ಕೆ ಬೇಕಾದ ಕಪ್ಪುಕಿವಿಯ ಕುದುರೆಯೊಂದೂ ಇಲ್ಲವೆಂದು,

೧೧. ನಾರದಮುನಿಯು ಹೇಳಲು ಉಗ್ರಸೇನನು ಬಹಳ ವ್ಯಥೆಪಟ್ಟನು. ಯಜ್ಞವು ನಡೆಯುವುದೆಂತು? ಎಂದು ಬಹುವಾಗಿ ಯೋಚಿಸಿದನು.

ಉದಾಸೀನಂ ನೃಪಂ ದೃಷ್ಟ್ವಾ ಭಗವಾನ್ಮಧುಸೂದನಃ ।
ಅವೋಚತ್ಪ್ರಹಸನ್ ಶೀಘ್ರಂ ಮೇಘಗಂಭೀರಯಾ ಗಿರಾ ॥ ೧೨ ॥

॥ ಶ್ರೀಕೃಷ್ಣ ಉವಾಚ ॥

ಶೃಣು ಮದ್ವಚನಂ ರಾಜನ್ ಸರ್ವಂ ಶೋಕಂ ವಿಹಾಯ ಚ ।
ಗತ್ವಾ ಮಮಾಶ್ವಶಾಲಾಂ ವೈ ಶ್ಯಾಮಕರ್ಣಂ ವಿಲೋಕಯ ॥ ೧೩ ॥

ಇತ್ಯುದೀರಿತಮಾಕರ್ಣ್ಯ ಕೃಷ್ಣೇನ ಚ ಸುರರ್ಷಿಣಾ ।
ಹರೇಶ್ಚ ವಾಜಿಶಾಲಾಂ ಹಿ ಜಗಾಮ ನೃಪಸತ್ತಮಃ ॥ ೧೪ ॥

ದದರ್ಶ ತಾಂ ಸ ಗತ್ವಾ ಚ ಯಜ್ಞಯೋಗ್ಯಾನ್ ಸಹಸ್ರಶಃ ।
ಶ್ಯಾಮಕರ್ಣಾನ್ಪೀತಪುಚ್ಛಾನ್ ಚಂದ್ರವರ್ಣಾನ್ಮನೋಜವಾನ್ ॥ ೧೫ ॥

ಸರ್ವಾಂಗಸುಂದರಾನ್ದಿವ್ಯಾನ್ ತಪ್ತಹೇಮಮುಖಾನ್ ಶುಭಾನ್ ।
ದದರ್ಶ ತಾಂ ಸ ಗತ್ವಾ ಚ ಯಜ್ಞಯೋಗ್ಯಾನ್ ಸಹಸ್ರಶಃ ॥ ೧೬ ॥

---

೧೨. ಈ ರೀತಿ ರಾಜನು ಯೋಚಿಸುತ್ತಾ ಉದಾಸೀನನಾಗಿ ನಿಂತಿರುವುದನ್ನು ನೋಡಿ ಮಧುಸೂದನನು ಮುಗುಳ್ನಗೆ ನಗುತ್ತಾ ಮೇಘಗರ್ಜನೆಯಂತೆ ಗಂಭೀರವಾದ ಧ್ವನಿಯಿಂದ,

೧೩. ಎಲೈ ರಾಜನೇ, ನೀನು ದುಃಖವನ್ನು ಬಿಡು ನನ್ನ ಅಶ್ವಶಾಲೆಗೆ ಹೋಗಿ ಅಲ್ಲಿ ಕಪ್ಪು ಕಿವಿಯ ಕುದುರೆಯನ್ನು ಆರಿಸಿ 'ತಾ' ಎಂದು ಹೇಳಿದನು.

೧೪. ಅದರಂತೆ ರಾಜನು ಕೃಷ್ಣ, ನಾರದರೊಡಗೂಡಿ ಕೃಷ್ಣನ ಅಶ್ವಶಾಲೆಗೆ ಹೋಗಿ ಅಲ್ಲಿ ನೋಡುವಲ್ಲಿ,

೧೫-೧೬. ಆ ಅಶ್ವಶಾಲೆಯಲ್ಲಿ ಕಪ್ಪು ಕಿವಿಯುಳ್ಳವುಗಳೂ, ಹಳದಿಯ ಬಾಲದಿಂದ ಕೂಡಿರುವುವೂ, ಬಿಳಿಯವರ್ಣದಿಂದ ಮನೋಹರವಾಗಿಯೂ, ಸರ್ವಾಂಗ ಸುಂದರಗಳಾಗಿಯೂ, ಸುವರ್ಣದಂತೆ ಮುಖವು ಹೊಳೆಯುತ್ತಿರುವ ಅನೇಕ ಯಜ್ಞ ಯೋಗ್ಯಗಳಾದ ಕುದುರೆಗಳನ್ನು ನೋಡಿದನು.

ಹರ್ಷೇಣ ಮಹತಾ ಯುಕ್ತೋ ಕೃಷ್ಣಂ ನತ್ವಾಽಬ್ರವೀದ್ವಚಃ ।

॥ ರಾಜೋವಾಚ ॥

ಶ್ಯಾಮಕರ್ಣಾಶ್ಚ ಬಹುಶೋ ಮಯಾ ಚಾದ್ಯ ನಿರೀಕ್ಷಿತಾಃ ॥ ೧೭ ॥

ದುರ್ಲಭಂ ಕಿಂ ಜಗನ್ನಾಥ ತ್ವದ್ಭಕ್ತಾನಾಂ ಧರಾತಲೇ ।
ಯಥಾ ಮನೋರಥಃ ಪೂರ್ವಂ ಪ್ರಹ್ಲಾದಸ್ಯ ಧ್ರುವಸ್ಯ ಚ ॥ ೧೮ ॥

ಆಸೀತ್ತ್ವತ್ಕೃಪಯಾ ಕೃಷ್ಣ ತಥಾ ಮಮ ಮನೋರಥಃ ।
ಇತಿ ಶ್ರುತ್ವಾ ಹರೀ ರಾಜನ್ ಶಾರ್ಙ್ಗೀ ಭೂಪಮುವೋಚತ ॥ ೧೯ ॥

॥ ಶ್ರೀಕೃಷ್ಣ ಉವಾಚ ॥

ಏಕಂ ತ್ವಂ ಶ್ಯಾಮಕರ್ಣಾನಾಮಶ್ವಾನಾಂ ಚಂದ್ರವರ್ಚಸಾಂ ।
ಗೃಹೀತ್ವಾ ನೃಪಶಾರ್ದೂಲ ಕುರು ಯಜ್ಞಂ ಮಮಾಜ್ಞಯಾ ॥ ೨೦ ॥

---

೧೭. ಅತಿ ಹರ್ಷದಿಂದ ಕೃಷ್ಣನಿಗೆ ನಮಸ್ಕರಿಸಿ ಇಂತೆಂದನು. ಜಗನ್ನಾಥನೇ, ಕಪ್ಪುಕಿವಿಯುಳ್ಳ ಅನೇಕ ಕುದುರೆಗಳನ್ನು ಇಲ್ಲಿ ನೋಡಿತ್ತಿರುವೆನು. ಪ್ರಪಂಚದಲ್ಲಿ ನಿನ್ನ ಭಕ್ತರಾದವರಿಗೆ ಯಾವುದು ತಾನೇ ದುರ್ಲಭವಾದುದು?

೧೮. ನಿನ್ನ ಭಕ್ತರಾಗಿದ್ದ ಪ್ರಹ್ಲಾದ, ಧ್ರುವ, ಮುಂತಾದವರ ಮನೋರಥವು ಹೇಗೆ ನೆರವೇರಿತೋ ಹಾಗೆಯೇ ನಿನ್ನ ಭಕ್ತನಾದ ನನ್ನ ಇಷ್ಟಾರ್ಥವೂ ನೆರವೇರಿತು.

೧೯-೨೦. ಎಂದು ಹೇಳಿದನ್ನು ಕೃಷ್ಣನು ಕೇಳಿ ರಾಜನನ್ನು ಕುರಿತು, ನೃಪೋತ್ತಮನೇ ನನ್ನ ಅಶ್ವಶಾಲೆಯಲ್ಲಿ ಬಿಳೀಬಣ್ಣವುಳ್ಳ ಕಪ್ಪುಕಿವಿಯ ಒಂದು ಕುದುರೆಯನ್ನು ತೆಗೆದುಕೊಂಡು ನನ್ನ ಅನುಜ್ಞೆಯಿಂದ ಯಜ್ಞವನ್ನು ಪ್ರಾರಂಭಿಸು ಎಂದನು.

॥ ಶ್ರೀಗರ್ಗ ಉವಾಚ ॥

ಶ್ರುತ್ವಾ ವಾಕ್ಯಂ ಹರಿಂ ಪ್ರಾಹ ಕರಿಷ್ಯೇಽಹಂ ಕ್ರತೂತ್ತಮಂ ।
ಇತ್ಯುಕ್ತ್ವಾ ತೇನ ಸಹಿತೋ ನಾರದೇನ ಸಭಾಂ ಯಯೌ ॥ ೨೧ ॥

ತತಃ ಕೃಷ್ಣಮನುಜ್ಞಾಪ್ಯ ನಾರದಃ ಸಹ ತುಂಬುರುಃ ।
ರಾಜಾನಮಾಶಿಷಂ ದತ್ವಾ ಸ್ವಯಂಭೂಸದನಂ ಯಯೌ ॥ ೨೨ ॥

ಇತಿ ಶ್ರೀ ಗರ್ಗಸಂಹಿತಾಯಾಮಶ್ವಮೇಧಖಂಡೇ ತುರಂಗದರ್ಶನಂ
ನಾಮಾಷ್ಟಮೋಽಧ್ಯಾಯಃ

---

೨೧. ಗರ್ಗಮುನಿಯು ಹೇಳಿದನು:—ಎಲೈ ವಜ್ರನಾಭಿಯೇ, ಕೇಳು. ಈ ರೀತಿಯಾಗಿ ಕೃಷ್ಣನು ಹೇಳಲು ಉಗ್ರಸೇನಮಹಾರಾಜನು ನಿನ್ನಪ್ಪಣೆಯಂತೆ ನಾನು ಯಜ್ಞವನ್ನು ಮಾಡುವೆನು. ಎಂದು ಕೃಷ್ಣನಿಗೆ ಹೇಳಿ ಅವನು ಮತ್ತು ನಾರದ ಇವರೊಡನೆ ತನ್ನ ಸಭೆಗೆ ಬಂದನು.

೨೨. ಅನಂತರ ನಾರದನು ತುಂಬುರುವಿನೊಡಗೂಡಿ ಕೃಷ್ಣನ ಅಪ್ಪಣೆಯನ್ನು ಪಡೆದು ಉಗ್ರಸೇನನನ್ನು ಆಶೀರ್ವದಿಸಿ ಬ್ರಹ್ಮಲೋಕಕ್ಕೆ ತೆರಳಿದನು.

ಇಲ್ಲಿಗೆ ಗರ್ಗಸಂಹಿತೆಯು ಅಶ್ವಮೇಧಖಂಡದಲ್ಲಿ ತುರಂಗದರ್ಶನವೆಂಬ
ಎಂಟನೆಯು ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ನವಮೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ರಾಜಾ ಕುಶಸ್ಥಲ್ಯಾಂ ಗತೇ ದೇವರ್ಷಿಸತ್ತಮೇ ।
ಸ್ವದೂತಾನ್ಪ್ರೇಷಯಾಮಾಸ ಮಾಮಾನೇತುಂ ನೃಪೇಶ್ವರ ॥ ೧ ॥

ತೇ ಊಚುರುಗ್ರಸೇನಸ್ಯ ಮಮಾಗ್ರೇ ವಚನಂ ನರಾಃ ।

॥ ದೂತಾ ಊಚುಃ ॥

ದೇವದೇವ ಮುನೇ ಬ್ರಹ್ಮನ್ ಭೂದೇವಾನಾಂ ಶಿರೋಮಣೇ ॥ ೨ ॥

ಒಂಭತ್ತನೆಯ ಅಧ್ಯಾಯವು

೧. ಗರ್ಗಮುನಿಯು ಹೇಳಿದನು:—ದೇವರ್ಷಿಯಾದ ನಾರದಮುನಿಯು ದೇವಲೋಕಕ್ಕೆ ಹೋದನಂತರ ಉಗ್ರಸೇನಮಹಾರಾಜನು ನನ್ನನ್ನು (ಗರ್ಗಮುನಿಯನ್ನು) ಕರೆದುಕೊಂಡು ಬರಲು ದೂತರನ್ನು ಕಳುಹಿಸಿದನು.

೨. ಅವರೆಲ್ಲರೂ ನನ್ನ ಹತ್ತಿರಕ್ಕೆ ಬಂದು ಉಗ್ರಸೇನನು ಹೇಳಿದಂತೆ ಹೇಳಿದರು—ದೇವದೇವನಾದ ಋಷಿಯೇ, ನೀನು ಬ್ರಾಹ್ಮಣೋತ್ತಮನು. ದಯವಿಟ್ಟು ನಾವು ಹೇಳುವ ಮಾತನ್ನು ಲಾಲಿಸು.

ಅಸ್ಮಾಕಂ ವಚನಂ ಸರ್ವಂ ಕೃಪಯಾ ಶೃಣು ವಿಸ್ತರಾತ್ ।
ಕೃಷ್ಣೇಚ್ಛಯಾ ದ್ವಾರಕಾಯಾಮುಗ್ರಸೇನೇನ ಭೋ ಮುನೇ ॥ ೩ ॥

ನಿರೂಪಿತಂ ಕ್ರತುವರಂ ತವ ಶಿಷ್ಯೇಣ ಧೀಮತಾ ।
ತ್ವಮಾಗಚ್ಛ ಮುನೇ ಶೀಘ್ರಂ ತಸ್ಮಿನ್ ಯಜ್ಞಮಹೋತ್ಸವೇ ॥ ೪ ॥

ತೇಷಾಮಹಂ ವಚಂ ಶ್ರುತ್ವಾ ಜಗ್ಮಿವಾನ್ ದ್ವಾರಕಾಂ ಪುರೀಂ ।
ಗರ್ಗಾಚಲಾನ್ನೃಪಶ್ರೇಷ್ಠ ಯಜ್ಞಕೌತುಕಸಂಯುತಃ ॥ ೫ ॥

ತತೋ ದೃಷ್ಟ್ವಾ ಪುರೀ ದೂರಾಚ್ಚಾನರ್ತೇ ದ್ವಾರಕಾ ಮಯಾ ।
ನಾನಾದ್ರುಮಗಣೈರ್ಜುಷ್ಟಾ ನಾನಾಚೋಪವನೈರ್ವೃತಾ ॥ ೬ ॥

ನಾನಾತಡಾಗೈರ್ವಾಪೀಭಿರ್ನಾನಾಪಕ್ಷಿಗಣೈಸ್ತಥಾ ।
ನೀಲರಕ್ತಸಿತಾಂಭೋಜೈಃ ಪೀತಪದ್ಮೈಃ ಸರೋವರಾಃ ॥
ರಾಜಂತೇ ಕುಮುದೈಶ್ಚೈವ ಶುಕಪುಷ್ಪೈರ್ನೃಪೇಶ್ವರ ॥ ೭ ॥

೩–೪. ಕೃಷ್ಣನ ಅಭಿಪ್ರಾಯದಂತೆ, ನಿನ್ನ ಶಿಷ್ಯನಾದ ಉಗ್ರಸೇನನು ಅಶ್ವಮೇಧ ಯಜ್ಞವನ್ನು ಮಾಡಲಿರುವನು. ಆದುದರಿಂದ ನೀನು ಜಾಗ್ರತೆಯಾಗಿ ಆ ಯಜ್ಞ ಮಹೋತ್ಸವಕ್ಕೆ ದಯಮಾಡಿಸಬೇಕು.

೫. ಈ ರೀತಿ ಆ ದೂತರು ಹೇಳಲು ನಾನು ಗರ್ಗಾಚಲದಿಂದ ದ್ವಾರಕಾಪುರಿಗೆ ಹೊರಟೆನು. ಯಜ್ಞವನ್ನು ನೋಡಬೇಕೆಂಬ ಕುತೂಹಲವು ನನಗತಿಯಾಗಿತ್ತು.

೬. ದೂರದಿಂದಲೇ, ದ್ವಾರಕಾವತಿಯನ್ನು ನೋಡಿದೆನು. ಅಲ್ಲಿ ಅನೇಕ ವಿಧವಾದ ಮರಗಳು ಇದ್ದವು. ಅನೇಕ ಉಪವನಗಳಿಂದಲೂ, ಅನೇಕ ಕೆರೆ, ಬಾವಿಗಳಿಂದಲೂ, ಆ ಪುರಿಯು ರಂಜಿಸುತ್ತಿತ್ತು. ವಿವಿಧವಾದ ಪಕ್ಷಿಗಳು ರಮ್ಯವಾಗಿ ಕೂಗುತ್ತಿದ್ದವು.

೭. ಕೊಳಗಳಲ್ಲಿ ನೀಲಿ, ಕೆಂಪು, ಬಿಳಿಪು ಬಣ್ಣಗಳ ಕಮಲಗಳೂ, ಹಳದಿಯ ಪದ್ಮಗಳೂ ರಾರಾಜಿಸುತ್ತಿದ್ದವು. ಕನ್ನೈದಿಲೆಪುಷ್ಪಗಳಿಂದ ಸರೋವರಗಳು ರಮ್ಯವಾಗಿರುತ್ತಿದ್ದವು. ಅಲ್ಲಲ್ಲೇ ಶುಕಪುಷ್ಪಗಳು ಬಿಟ್ಟು ಮನೋಹರವಾಗಿ ಕಾಣಿಸುತ್ತಿತ್ತು.

ಬಿಲ್ವೈಃ ಕದಂಬೈರ್ನ್ಯಗ್ರೋಧೈಃ ಶಾಲೈಸ್ತಾಲೈಸ್ತಮಾಲಕೈಃ ।
ವಕುಲೈರ್ನಾಗಪುನ್ನಾಗೈಃ ಕೋವಿದಾರೈಶ್ಚ ಪಿಪ್ಪಲೈಃ ।
ಜಂಬೀರೈರ್ಹಾರಶಿಂಗಾರೈರಾಮ್ರೈರಾಮ್ರಾತಕೈರಪಿ ॥ ೮ ॥

ಕೇತಕೀಭಿರ್ಗೋಸ್ತನೀಭಿಃ ಕದಲೀಭಿಶ್ಚ ಜಂಬುಭಿಃ ।
ಶ್ರೀಫಲೈಃ ಪಿಂಡಖರ್ಜೂರೈಃ ಖದಿರೈಃ ಪತ್ರನಿಂಬುಭಿಃ ॥ ೯ ॥

ಅಗರೈಸ್ತಗರೈಶ್ಚೈವ ಚಂದನೈ ರಕ್ತಚಂದನೈಃ ।
ಪಲಾಶೈಶ್ಚ ಕಪಿತ್ಥೈಶ್ಚ ಪ್ಲಕ್ಷೈರ್ವೇತ್ರೈಶ್ಚ ವೇಣುಭಿಃ ॥ ೧೦ ॥

ಮಲ್ಲಿಕಾಭಿರ್ಯೂಥಿಕಾಭಿರ್ಮೇದಿನೀಭಿರ್ಮಹೀರುಹೈಃ ।
ತಥಾ ಮದನಬಾಣೈಶ್ಚ ಸಹಸ್ರಾಂಶುಮುಖದ್ರುಮೈಃ ॥ ೧೧ ॥

---

೮. ಬಿಲ್ವವೃಕ್ಷಗಳು, ಈಚಲು, ಆಲ, ಶಾಲ, ತಾಳೆ, ಹೊಂಗೆ, ಮುಂತಾದ ದೊಡ್ಡದೊಡ್ಡ ಮರಗಳಿಂದ ಪ್ರಕಾಶಿಸುತ್ತಿತ್ತು. ವಕುಳ, ನಾಗಸಂಪಿಗೆ, ಪುನ್ನಾಗ, ಮುಂತಾದ ಪುಷ್ಪಗಳಿಂದ ಸುವಾಸಿತವಾಗಿತ್ತು. ಕೋವಿದಾರ, ಪಿಪ್ಪಲ, ನಿಂಬೆ, ಹಾರಶಿಂಗಾರ, ಆಮ್ರಾತ್ರಕ ಮುಂತಾದ ಔಷದವೃಕ್ಷಗಳು ಅನೇಕವಾಗಿದ್ದವು.

೯-೧೦. ತಾಳೆ, ಗೋಸ್ತನ, ಬಾಳೆ, ನೇರಳೆ, ಶ್ರೀಫಲ, ಪಿಂಡಖರ್ಜೂರ, ಅತ್ತಿ, ಪತ್ರನಿಂಬೆ, ಅಗರು, ತಗರ, ಚಂದನ, ರಕ್ತಚಂದನ, ಮುತ್ತುಗ, ಬೇಲ, ಬೆತ್ತ ಬಿದುರು ಇವೇ ಮೊದಲಾದ ಅನೇಕ ವೃಕ್ಷಗಳು ಇದ್ದವು.

೧೧. ಮಲ್ಲಿಗೆ, ಶೇವಂತಿಗೆ, ಮೇದಿನಿ ಮುಂತಾದ ಬಳ್ಳಿಗಳಿಂದಲೂ, ಮದನಬಾಣ, ಸೂರ್ಯಕಾಂತಿ ಮುಂತಾದ ಗಿಡಗಳಿಂದಲೂ ರಂಜಿಸುತ್ತಿತ್ತು.

ಪ್ರಿಯೊವಂಶೈರ್ಗುಲ್ಮವಂಶೈಃ ಕರ್ಣಿಕಾರೈಶ್ಚ ಪುಷ್ಪಿತೈಃ ।
ಸಹಸ್ರಾಖ್ಯಕಂದುಕೈರ್ವೈ ಚಾಗಸ್ತ್ಯೈಶ್ಚ ಸುದರ್ಶನೈಃ ॥ ೧೨ ॥

ಚಂದ್ರಕಾಖ್ಯೈಶ್ಚ ಕುಂದೈಶ್ಚ ಕರ್ಣಪುಷ್ಪೈಶ್ಚ ದಾಡಿಮೈಃ ।
ಅನುಜೀರೈರ್ನಾಗರಂಗೈರಾಡುಕೈರ್ಜಾನಕೀಫಲೈಃ ॥ ೧೩ ॥

ಪೂಗೀಫಲೈರ್ಬದಾಮೈಶ್ಚ ತೂಲೈರಾಜಾದನೈರ್ದ್ರುಮೈಃ ।
ಏಲಾಭಿಃ ಸೇವಿತೀಭಿಶ್ಚ ತಥಾ ವೈ ದೇವದಾರುಭಿಃ ॥ ೧೪ ॥

ಈದೃಶೈಶ್ಚ ಮಹಾವೃಕ್ಷೈಃ ಶೋಭಿತಾ ನಗರೀ ಹರೇಃ ।
ಕೂಜಂತಿ ಯತ್ರ ರಾಜೇಂದ್ರ ಮಯೂರಾಃ ಸಾರಸಾಃ ಶುಕಾಃ ॥ ೧೫ ॥

ಹಂಸಾಃ ಪಾರಾವತಾಶ್ಚೈವ ಕಪೋತಾಃ ಕೋಕಿಲಾಸ್ತಥಾ ।
ಸಾರಿಕಾಶ್ಚಕ್ರವಾಕಾಶ್ಚ ಖಂಜನಾಶ್ಚಟಕಾಃ ಕಿಲ ॥ ೧೬ ॥

೧೨–೧೩. ಬಿದಿರುಮೆಳೆಗಳು, ಬಳ್ಳಿಗಳು, ಕರ್ಣಿಕಾರ, ಕಂದುಕ, ಅಗಸ್ತ್ಯ ಪುಷ್ಪ, ಚಂದ್ರಕ, ಕುಂದ, ಕರ್ಣ, ದಾಳಿಂಬೆ, ಅನುಜೀರ, ನಾಗರಂಗ, ಆಡುಕ ಮೊದಲಾದ ವೃಕ್ಷಗಳಿಂದ ಶೋಭಿಸುತ್ತಿತ್ತು.

೧೪. ಅಡಿಕೆ, ಬಾದಾಮಿ, ಹತ್ತಿ, ರಾಜಾದನ ಮುಂತಾದ ಗಿಡಗಳು ಹೇರಳವಾಗಿದ್ದವು. ಏಲಕ್ಕಿ, ಸೇವಂತಿಗೆ, ಮುಂತಾದ ಗಿಡಗಳೂ, ದೇವದಾರುವೇ ಮೊದಲಾದ ದೊಡ್ಡ ದೊಡ್ಡ ಮರಗಳಿಂದಲೂ ಆ ದ್ವಾರಕಾವತಿಯು ಪ್ರಕಾಶಿಸುತ್ತಿತ್ತು.

೧೫–೧೬. ಆ ದ್ವಾರಕಾವತಿಯಲ್ಲಿ ನವಿಲುಗಳು ಕೇಕೆಹಾಕುತ್ತಾ ನರ್ತಿಸುತ್ತಿದ್ದವು. ಸಾರಸಗಳೂ, ಗಿಳಿಗಳೂ ಹಾರಾಡುತ್ತಿದ್ದವು, ಹಂಸಗಳೂ, ಪಾರಿವಾಳಗಳೂ, ಕೋಕಿಲೆಗಳೂ, ಸಾರಿಕೆಗಳೂ, ರಮ್ಯವಾಗಿ ಕೂಗುತ್ತಿದ್ದವು. ಚಕ್ರವಾಕೆಗಳೂ ಗೊರವನ ಹಕ್ಕಿಗಳೂ, ಗುಬ್ಬಿಗಳೂ ಹೇರಳವಾಗಿದ್ದವು.

ಏತೇ ಪಕ್ಷಿಗಣಾಃ ಸರ್ವೇ ವೈಕುಂಠಾಚ್ಚ ಸಮಾಗತಾಃ ।
ಕೃಷ್ಣ ಕೃಷ್ಣೇತಿ ಮಧುರಾಂ ವಾಣೀಂ ಗಾಯಂತಿ ಯತ್ರ ಹಿ　　॥ ೧೭ ॥

ಇತ್ಥಂ ಪಶ್ಯನ್ ವ್ರಜನ್ ರಾಜನ್ ದದರ್ಶ ದ್ವಾರಕಾಮಹಂ ।
ತಾಮ್ರರೌಪ್ಯಸುವರ್ಣೈಶ್ಚ ತ್ರಿಭಿರ್ದುರ್ಗೈಶ್ಚ ವೇಷ್ಟಿತಾಂ　　॥ ೧೮ ॥

ಗಿರಿಣಾ ರೈವತೇನಾಪಿ ದೇವವೃಕ್ಷಮಯೇನ ಚ ।
ರತ್ನಾಕರೇಣ ಗೋಮತ್ಯಾ ವೃತಾಂ ಪರಿಖಯಾನ್ವಿತಾಂ　　॥ ೧೯ ॥

ಕೃಷ್ಣಸ್ಯ ನಗರೀಂ ರಮ್ಯಾಂ ಕೃತಕೌತುಕತೋರಣಾಂ ।
ಮುದಾಯುಕ್ತಜನಾಕೀರ್ಣಾಂ ಸುವರ್ಣಭವನೈರ್ಯುತಾಂ　　॥ ೨೦ ॥

---

೧೭. ಈ ಪಕ್ಷಿಸಮೂಹವೆಲ್ಲವೂ ವೈಕುಂಠದಿಂದ ಬಂದವುಗಳು. ಇವು ಕೃಷ್ಣ ಕೃಷ್ಣ ಎಂಬುದಾಗಿ ಮನೋಹರವಾಗಿ ಕೂಗುತ್ತಿದ್ದವು.

೧೮. ಎಲೈ ರಾಜನೇ, ಈ ಮನೋಹರ ದೃಶ್ಯಗಳೆಲ್ಲವನ್ನೂ ನೋಡುತ್ತಾ, ನೋಡುತ್ತಾ ಆನಂದ ಪರವಶನಾಗಿ ದ್ವಾರಕೆಗೆ ಬಂದು ಸೇರಿದೆನು. ಆ ಪಟ್ಟಣಕ್ಕೆ ತಾಮ್ರ, ಬೆಳ್ಳಿ, ಚಿನ್ನ ಇವುಗಳಿಂದ ಕೂಡಿರುವ ಮೂರು ಕೋಟೆಗಳಿದ್ದವು.

೧೯. ಅದರ ಸಮೀಪದಲ್ಲಿಯೇ ರೈವತಗಿರಿಯು ಇದ್ದಿತು. ಅಲ್ಲಿ ಅನೇಕ ದೇವದಾರುವೃಕ್ಷಗಳು ಬೆಳದಿದ್ದವು. ಅದರ ಸುತ್ತಲೂ ಸಮುದ್ರವೂ ಗೋಮತೀ ನದಿಯೂ, ಕಂದಕದಂತೆ ಆವರಿಸಿದ್ದವು.

೨೦. ನಗರದಲ್ಲೆಲ್ಲಾ ಚಿತ್ರವಿಚಿತ್ರವಾಗಿ ತೋರಣಗಳನ್ನು ಕಟ್ಟಿದ್ದರು. ಅಲ್ಲಿನ ಜನರೆಲ್ಲರೂ ಸಂತೋಷಯುಕ್ತರಾಗಿಯೇ ಇರುತ್ತಿದ್ದರು. ಅಲ್ಲಿನ ಮನೆಗಳು ಚಿನ್ನದಿಂದ ನಿರ್ಮಿಸಲ್ಪಟ್ಟಿದ್ದವು. ಇವೆಲ್ಲವನ್ನೂ ನೋಡಿ ನನಗೆ ಆಶ್ಚರ್ಯ ವಾಯಿತು.

ತಥಾ ಹಾಟಕಹಟ್ಟಾಭಿಃ ಪತಕಾಭಿಶ್ಚ ಮಂಡಿತಾಂ ।
ವಿಷ್ಣೋಃಶ್ಚ ಮಂದಿರೈಃ ಪ್ರೋಚ್ಚೈರ್ಮಹೇಶಸ್ಯಾಲಯೈರ್ವೃತಾಂ ॥ ೨೧ ॥

ಯದುಭಿಶ್ಚ ಮಹಾಶೂರೈರ್ವಿಮಾನೈಶ್ಚ ಸಹಸ್ರಶಃ ।
ಶತಶೃಂಗಾಟಕೈಶ್ಚೈವ ಕಲಶೈರ್ಭರ್ಮಕರ್ಬುರೈಃ ॥ ೨೨ ॥

ರಥ್ಯಾಭಿರ್ಮಂದುರಾಭಿಶ್ಚ ದಂತಿಶಾಲಾಭಿರೇವ ಚ ।
ಗೋಶಾಲಾಭಿಃ ಸಭಾಭಿಶ್ಚ ಸುರೌಪ್ಯಪಥಿಭಿರ್ಯುತಾಂ ॥ ೨೩ ॥

ಪ್ರಾಸಾದೈರ್ನವಲಕ್ಷೈಶ್ಚ ಕೃಷ್ಣಸ್ಯ ಪರಮಾತ್ಮನಃ ।
ತಥಾ ಷೋಡಶಸಾಹಸ್ರೈರ್ಭವನೈರ್ವೇಷ್ಟಿತಾಂ ಪುರೀಂ ॥ ೨೪ ॥

ದ್ವಾರೇ ದ್ವಾರೇ ದ್ವಾರಕಾಯಾಂ ಶೂರವೀರಾಶ್ಚ ಕೋಟಿಶಃ ।
ರಕ್ಷಂತ್ಯಹರ್ನಿಶಂ ರಾಜನ್ ಸರ್ವಶಸ್ತ್ರಧರಾಃ ಕಿಲ ॥ ೨೫ ॥

---

೨೧. ಮನೆಗಳ ಮೇಲೆಲ್ಲಾ ಪಚ್ಚೆಯ ದಂಡಗಳಿಂದ ಕೂಡಿರುವ ಬಾವುಟಗಳು ಹಾರಾಡುತ್ತಿದ್ದವು. ವಿಷ್ಣುವಿನ ದೇವಸ್ಥಾನಗಳೂ, ಎತ್ತರವಾದ ಈಶ್ವರನ ಗುಡಿಗಳೂ ಇದ್ದವು.

೨೨. ಮಹಾಪರಾಕ್ರಮಿಗಳಾದ ಅನೇಕ ಯಾದವರು ಇದ್ದರು. ಸಾವಿರಾರು ವಿಮಾನಗಳಿದ್ಧವು. ನೂರಾರು ಚತುಷ್ಪಥಗಳಿದ್ದವು. ಚಿನ್ನದ ಕಲಶಗಳಿದ್ದವು.

೨೩. ಅನೇಕ ಕುದುರೆಗಳೂ, ಅಶ್ವಶಾಲೆಗಳೂ, ಗಜಶಾಲೆಗಳೂ, ಗೋಶಾಲೆಗಳೂ ಇದ್ದುವು. ಪ್ರಸಿದ್ಧವಾದ ಅನೇಕ ಸಭೆಗಳಿದ್ದವು. ರಸ್ತೆಗಳೆಲ್ಲವೂ ಬೆಳ್ಳಿಯಿಂದ ನಿರ್ಮಿತವಾಗಿದ್ದವು.

೨೪. ಅಲ್ಲಿ ಒಂಭತ್ತು ಲಕ್ಷ ಅರಮನೆಗಳೂ, ಉಪ್ಪರಿಗೆಯ ಮನೆಗಳೂ ಇದ್ದವು. ಅದಲ್ಲದೆ ಆ ಕೃಷ್ಣಪರಮಾತ್ಮನ ಸ್ತ್ರೀಯರಿಗೆ ಸಂಬಂಧಪಟ್ಟ ಹದಿನಾರುಸಾವಿರ ಮನೆಗಳಿದ್ದವು.

೨೫. ಆ ದ್ವಾರಕೆಯ ಪ್ರತಿಯೊಂದು ಬಾಗಿಲಿನಲ್ಲಿಯೂ ಕೋಟ್ಯಾನುಕೋಟಿ ಯಾದವ ವೀರರು ಶಸ್ತ್ರಾಸ್ತ್ರಗಳನ್ನು ಹಿಡಿದು ನಿಂತು ಆ ಪಟ್ಟಣವನ್ನು ರಕ್ಷಣೆಮಾಡುತ್ತಿದ್ದರು.

ಪ್ರಗಾಯಂತಿ ಜನಾಸ್ಸರ್ವೇ ಶ್ರೀಕೃಷ್ಣಬಲದೇವಯೋಃ ।
ಗೃಹೇ ಗೃಹೇ ಚ ನಾಮಾನಿ ಶೃಣ್ವಂತಿ ಚರಿತಾನಿ ಚ ॥ ೨೬ ॥

ಇತ್ಥಂ ವಿಲೋಕಯನ್ಸರ್ವಾನ್ ಸುಧರ್ಮಾಯಾಮಹಂ ಗತಃ ।
ಕೃಷ್ಣೇತಿ ಪಾದುಕಾರೂಢಸ್ತುಲಸೀಮಾಲಯಾ ಜಪನ್ ॥ ೨೭ ॥

ಅಥೋಗ್ರಸೇನೋ ರಾಜರ್ಷಿರ್ದೃಷ್ಟ್ವಾ ಮಾಂ ಚ ಸಮಾಗತಂ ।
ಸಮುತ್ಥಾಯ ಮುದಾ ಯುಕ್ತೋ ಶಕ್ರಸಿಂಹಾಸನಾತ್ಕಿಲ ॥ ೨೮ ॥

ಷಟ್ಪಂಚಾಶತ್ಕೋಟಿಸಂಖ್ಯೈರ್ಯಾದವೈಸ್ಸಹ ಭೂಪತೇ ।
ನತ್ವಾ ಸಿಂಹಾಸನೇ ಸ್ಥಾಪ್ಯ ಪೂಜಯಾಮಾಸ ಚಾಹುಕಃ ॥ ೨೯ ॥

ಮದಂಘ್ರೀ ಚಾವನಿಜ್ಯಾಥ ಯಾದವಾನಾಂ ಚ ಸನ್ನಿಧೌ ।
ಪಾದೋದಕಂ ಸ್ವಶಿರಸಿ ಧೃತ್ವಾ ಪ್ರಾಹ ನೃಪೇಶ್ವರಃ ॥ ೩೦ ॥

---

೨೬. ಅಲ್ಲಿನ ಪ್ರತಿಯೊಂದು ಮನೆಯಲ್ಲಿಯೂ ಜನರು ಶ್ರೀಕೃಷ್ಣ ಬಲರಾಮರ ನಾಮಗಳನ್ನೂ, ಚರಿತ್ರೆಯನ್ನೂ ಹಾಡುವರು.

೨೭. ಈ ದೃಶ್ಯಗಳೆಲ್ಲವನ್ನೂ ನೋಡುತ್ತಾ ನಗರದ ಒಳಗೆ ಸಂಚರಿಸುತ್ತಾ ಉಗ್ರಸೇನನ ಸಭೆಗೆ ಬಂದೆನು. ನಾನು ಪಾದುಕೆಗಳನ್ನು ಧರಿಸಿದ್ದೆನು, ಕೈಲಿರುವ ತುಳಸಿಮಾಲೆಯಿಂದ ಕೃಷ್ಣ, ಕೃಷ್ಣ ಎಂಬುದಾಗಿ ಜಪವನ್ನು ಮಾಡುತ್ತಿದ್ದೆನು.

೨೮. ನಾನು ಬಂದುದನ್ನು ನೋಡಿ ರಾಜರ್ಷಿಯಾದ ಉಗ್ರಸೇನನು ಸಂತೋಷಪಟ್ಟು ಸಿಂಹಾಸನದಿಂದ ಮೇಲಕ್ಕೆದ್ದು ಸ್ವಾಗತಿಸಿದನು.

೨೯. ಯಾದವರೆಲ್ಲರೂ ನನ್ನನ್ನು ನೋಡಲು ಬಂದಿದ್ದರು. ಅವರೆಲ್ಲರೂ ಐವತ್ತಾರು ಕೋಟಿ ಜನರಿದ್ದರು. ಅವರೊಡನೆ ರಾಜನು ನನ್ನನ್ನು ನಮಸ್ಕರಿಸಿದನು. ಸಿಂಹಾಸನದಲ್ಲಿ ಕುಳ್ಳಿರಿಸಿ ಪೂಜೆಮಾಡಿದನು.

೩೦. ನನ್ನ ಪಾದಗಳನ್ನು ತೊಳೆದು ಪೂಜಿಸಿದನು. ಆ ನೀರನ್ನು ತನ್ನ ತಲೆಯ ಮೇಲೆ ಪ್ರೋಕ್ಷಿಸಿಕೊಂಡನು. ಅನಂತರ ನನ್ನನ್ನು ಕುರಿತು ಉಗ್ರಸೇನನು ಇಂತೆಂದನು.

|| ಉಗ್ರಸೇನ ಉವಾಚ ||

ವಿಪ್ರೇಂದ್ರ ನಾರದಮುಖಾಚ್ಛ್ರುತಂ ಯಸ್ಯ ಮಹತ್ಫಲಂ |
ತಂ ಯಜ್ಞಮಶ್ವಮೇಧಾಖ್ಯಂ ಕರಿಷ್ಯೇಽಹಂ ತವಾಜ್ಞಯಾ || ೩೧ ||

ಯಸ್ಯಾಂಘ್ರಿಸೇವಯಾ ಪೂರ್ವೇ ಮನೋರಥಮಹಾರ್ಣವಂ |
ತೇರುರ್ಜಗತ್ತೃಣೀಕೃತ್ಯ ಸಕೃಷ್ಣಶ್ಚಾತ್ರ ವರ್ತತೇ || ೩೨ ||

|| ಶ್ರೀಗರ್ಗ ಉವಾಚ ||

ಯಾದವೇಂದ್ರ ಮಹಾರಾಜ ಸಮ್ಯಗ್ವ್ಯವಸಿತಂ ತ್ವಯಾ |
ಹಯಮೇಧೇನ ತೇ ಕೀರ್ತಿಸ್ತ್ರಿಲೋಕ್ಯಾಂ ಸಂಭವಿಷ್ಯತಿ || ೩೩ ||

ಕಃ ಪ್ರಯಾಸ್ಯತಿ ರಕ್ಷಾರ್ಥಂ ತುರಗಸ್ಯ ನೃಪೇಶ್ವರ |
ಬಹವಃ ಶತ್ರವಸ್ಸಂತಿ ತಸ್ಮಾತ್ತ್ವಂ ನಿಶ್ಚಯಂ ಕುರು || ೩೪ ||

---

೩೧. ವಿಪ್ರಶ್ರೇಷ್ಠನೇ, ನಾರದನು ಅಶ್ವಮೇಧಯಜ್ಞವನ್ನು ಮಾಡುವ ರೀತಿಯನ್ನು ಅದರಿಂದುಂಟಾಗುವ ಮಹತ್ಫಲವನ್ನೂ ವಿವರಿಸಿದನು. ಆದುದರಿಂದ ನಾನು ಆ ಅಶ್ವಮೇಧಯಜ್ಞವನ್ನು ಮಾಡಲಿರುವೆನು. ಅದಕ್ಕೆ ಮುಖ್ಯವಾಗಿ ನಿನ್ನಾಜ್ಞೆಯನ್ನು ನಿರೀಕ್ಷಿಸಿರುವೆನು.

೩೨. ಈ ವಿಷಯದಲ್ಲಿ ಶ್ರೀಕೃಷ್ಣನೂ ಅಭಿಪ್ರಾಯವುಳ್ಳವನಾಗಿರುವನು. ಆ ಪರಮಾತ್ಮನ ಪಾದಸೇವೆಯಿಂದ ಅಭಿಲಾಷೆ ಎಂಬ ದೊಡ್ಡ ಸಮುದ್ರವನ್ನೂ ಅನಾಯಾಸವಾಗಿ ದಾಟಬಹುದಲ್ಲವೇ ?

೩೩. ಎಂದು ಹೇಳಲು ನಾನು (ಗರ್ಗನು) ಇಂತೆಂದನು :—ಯದು ಮಹಾರಾಜನೇ, ಯೋಗ್ಯವಾದುದನ್ನೇ ನೀನು ನಿಶ್ಚಯಿಸಿರುವೆ. ಅಶ್ವಮೇಧ ಯಾಗವನ್ನು ನೀನು ಮಾಡಿದರೆ ನಿನ್ನ ಕೀರ್ತಿಯು ಮೂರು ಲೋಕಗಳಲ್ಲಿಯೂ ಹರಡುವುದು.

೩೪. ಕುದುರೆಯನ್ನು ಬಿಟ್ಟನಂತರ ಅದರ ರಕ್ಷಣೆಗೆ ಯಾರು ಹೋಗುವರು ? ಮೊದಲು ಅದನ್ನು ನಿಶ್ಚಯಿಸು. ಏಕೆಂದರೆ ಅನೇಕ ಶತ್ರುಗಳು ಎದುರಾಗಲಿರುವರು.

ವರ್ಷಮಾತ್ರಂ ಪ್ರಕರ್ತವ್ಯಮಸಿಪತ್ರವ್ರತಂ ತ್ವಯಾ ।
ತದಾ ತು ಕುಶಲೇನಾಪಿ ಭವಿಷ್ಯತಿ ಕ್ರತೂತ್ತಮಃ ॥ ೩೫ ॥

ಪ್ರದ್ಯುಮ್ನೇನ ರಾಜಸೂಯೇ ಜಿತಾ ಸರ್ವಾ ಮಹೀ ಪುರಾ ।
ತುರಂಗಸ್ಯಾದ್ಯ ರಕ್ಷಾರ್ಥಂ ತಂ ಪುನಃ ಕಿಂ ನಿಯೋಜಸಿ ॥ ೩೬ ॥

ಇತಿ ಮದ್ವಚನಂ ಶ್ರುತ್ವಾ ರಾಜಾ ಚಿಂತಾಪರಾಯಣಃ ।
ದದರ್ಶ ಸಂಸ್ಥಿತಂ ಸ್ವಾಣಾಂ ಸರ್ವದುಃಖಹರಂ ಹರಿಂ ॥ ೩೭ ॥

ತದೈವ ಭಗವಾನ್ ದೃಷ್ಟ್ವಾ ಶೋಕೇನಾಪೂರಿತಂ ನೃಪಂ ।
ತಾಂಬೂಲವೀಟಕಂ ನೀತ್ವಾ ಪ್ರಹಸನ್ನಿದಮಬ್ರವೀತ್ ॥ ೩೮ ॥

ಭೋಃ ಶೂರಾ ಯಾದವಾಃ ಸರ್ವೇ ಬಲಿನೋ ರಣಕೋವಿದಾಃ ।
ಉಗ್ರಸೇನಸ್ಯ ಚಾಗ್ರೇ ವೈ ಶೃಣ್ವಂತು ಮಮ ಭಾಷಿತಂ ॥ ೩೯ ॥

---

೩೫. ಒಂದು ವರ್ಷದವರೆಗೆ ಮಾತ್ರ ಅಸಿಪತ್ರವ್ರತವನ್ನು (ನೈಷ್ಠಿಕಬ್ರಹ್ಮಚರ್ಯ) ಆಚರಿಸಬೇಕು. ಆ ರೀತಿ ಆಚರಿಸಿದರೆ ಈ ಯಜ್ಞವು ಸಾಂಗವಾಗಿ ನಿರ್ವಿಘ್ನವಾಗಿ ನೆರವೇರುವುದು.

೩೬. ರಾಜಸೂಯಯಾಗವನ್ನು ಮಾಡಿದಾಗ ಪ್ರದ್ಯುಮ್ನನು ಭೂಮಂಡಲವನ್ನೆಲ್ಲಾ ಜಯಿಸಿದನು. ಆದುದರಿಂದ ಈಗಲೂ ಆ ರೀತಿಮಾಡಲು ಕುದುರೆಯ ರಕ್ಷಣೆಗೆ ಯಾರನ್ನು ಕಳುಹುವೆ? ಎನ್ನಲು,

೩೭ ನನ್ನ ಮಾತನ್ನು ಕೇಳಿ ರಾಜನು ಚಿಂತಾಪರವಶನಾಗಿ ಪಕ್ಕದಲ್ಲಿಯೇ ನಿಂತಿರುವ, ಸರ್ವದುಃಖಾಪಹಾರಕನಾದ ಶ್ರೀಕೃಷ್ಣನನ್ನು ನೋಡಿದನು.

೩೮ ಕೃಷ್ಣನೂ ಸಹ ಉಗ್ರಸೇನನ ಮುಖವನ್ನು ನೋಡಿದನು. ಶೋಕಪೂರಿತವಾಗಿತ್ತು ಅವನ ಮುಖವು. ಆಗ ಕೃಷ್ಣನು ತಾಂಬೂಲವನ್ನು ಕೈಯಲ್ಲಿ ಹಿಡಿದುಕೊಂಡು ನಗುತ್ತಾ ಈ ರೀತಿ ಹೇಳಿದನು.

೩೯. ಎಲೈ ಶೂರರಾದ ಯಾದವರೇ, ನೀವೆಲ್ಲರೂ ಪರಾಕ್ರಮಿಗಳು. ಯುದ್ಧಶೂರರು. ಉಗ್ರಸೇನರಾಜನ ಎದುರಿಗೆ ನಿಮಗೆ ನಾನು ಹೇಳುವುದೇನೆಂದರೆ—

ಯೋ ಮೋಚಯತಿ ರಾಜಭ್ಯೋ ಹಯಮೇಧತುರಂಗಮಂ ।
ಮಹಾರಥೀ ಮನಸ್ವೀ ಚ ಸೋಽಯಂ ಗೃಹ್ಣಾತು ವೀಟಿಕಂ ॥ ೪೦ ॥

ಇತಿ ಶ್ರುತ್ವಾ ಹರೇರ್ವಾಕ್ಯಂ ಯಾದವಾ ಯುದ್ಧಕೋವಿದಾಃ ।
ಪರಸ್ಪರಂ ಪ್ರಪಶ್ಯಂತೋ ಗತಮಾನಾಃ ಪುನಃಪುನಃ ॥ ೪೧ ॥

ಸಂಸ್ಥಿತೋ ಘಟಿಕಾಮಾತ್ರಂ ರೇಜೇ ತಾಂಬೂಲವೀಟಿಕಃ ।
ಕೃಷ್ಣಸ್ಯ ಸುಂದರೇ ಹಸ್ತೇ ಯಥಾ ತಾಮರಸೇ ಶುಕಃ ॥ ೪೨ ॥

ತತಶ್ಚ ಸರ್ವೇಷು ಗತೇಷು ತೂಷ್ಣೀಂ
ಮುಷಾಪತಿಶ್ಚಾಪಧರೋ ಮಹಾತ್ಮಾ ।
ಪ್ರಗೃಹ್ಯ ತಾಂಬೂಲಚಯಂ ನೃಪೇಂದ್ರ
ನತ್ವಾ ಚ ಕೃಷ್ಣಂ ನಿಜಗಾದ ಸದ್ಯಃ ॥ ೪೩ ॥

---

೪೦. ಈ ಯಜ್ಞದ ಕುದುರೆಯನ್ನು ಯಾವ ರಾಜನಾದರೂ ಬಂಧಿಸಿದರೆ ಅವನಿಂದ ಬಿಡಿಸಿಕೊಂಡು ಬರುವ ಶಕ್ತಿಯುಳ್ಳವನೂ, ಮಹಾಶೂರನೂ, ಸ್ವತಂತ್ರನೂ ಆದವನು ಯಾರಾದರೂ ನಿಮ್ಮಲ್ಲಿ ಇದ್ದರೆ ಈ ತಾಂಬೂಲವನ್ನು ತೆಗೆದು ಕೊಳ್ಳಬಹುದು ಎಂದನು.

೪೧. ಈ ರೀತಿ ಕೃಷ್ಣನು ಹೇಳಿದುದನ್ನು ಕೇಳಿ ಅಲ್ಲಿ ನೆರದಿದ್ದ ಯುದ್ಧ ನಿಪುಣರಾದ ಅನೇಕ ಯಾದವರು ಪರಸ್ಪರವಾಗಿ ನೋಡಿ ನಾಚಿಕೆಗೊಂಡರು.

೪೨. ಒಂದು ಮುಹೂರ್ತಕಾಲ ತಾಂಬೂಲವು ಕೃಷ್ಣನ ಸುಂದರವಾದ ಕೈಲಿದ್ದು ಪದ್ಮದಲ್ಲಿರುವ ಗಿಳಿಯಂತೆ ಪ್ರಕಾಶಿಸುತ್ತಿತ್ತು.

೪೩. ಯಾದವರೆಲ್ಲರೂ ಸುಮ್ಮನೇ ಅಲ್ಲಿಂದ ಹೊರಟುಹೋದರು. ಆಗ ಅನಿರುದ್ಧನು ಧನುರ್ಧರನಾಗಿ ಬಂದು ಕೃಷ್ಣನ ಕೈಲಿದ್ದ ತಾಂಬೂಲವನ್ನು ತೆಗೆದು ಕೊಂಡು ಅವನನ್ನು ನಮಸ್ಕರಿಸಿ ತಕ್ಷಣ ಇಂತೆಂದನು.

|| ಶ್ರೀ ಅನಿರುದ್ಧ ಉವಾಚ ||

ಅಹಂ ಹಿ ಶ್ಯಾಮಕರ್ಣಸ್ಯ ರಾಜನ್ಯೇಭ್ಯಶ್ಚ ಪಾಲನಂ |
ಕರಿಷ್ಯಾಮಿ ಜಗನ್ನಾಥ ತಸ್ಮಾನ್ಮಾಂ ತ್ವಂ ನಿಯೋಜಯ || ೪೪ ||

ನ ಕರಿಷ್ಯೇ ಘೋಟಕಸ್ಯ ಪಾಲನಂ ಯದಿ ತಚ್ಛೃಣು |
ಪ್ರತಿಜ್ಞಾಂ ಮಮ ಗೋವಿಂದ ದೀನಸ್ಯ ದೀನವತ್ಸಲ || ೪೫ ||

ಬ್ರಾಹ್ಮಣೀಗಮನಾತ್ ಕ್ಷತ್ರೀ ವೈಶ್ಯಶ್ಚ ಶೂದ್ರ ಏವ ಚ |
ಯಾಂ ಗತಿಂ ಪ್ರಾಪ್ನುಯಾನ್ನೂನಂ ತಾಮಹಂ ದುಃಖದಾಯಿನೀಂ || ೪೬ ||

ವಿಪ್ರಂ ಕೃತ್ವಾ ಗುರುಂ ಪೂರ್ವಂ ಪಶ್ಚಾತ್ತಂ ಯೋ ನ ಸೇವತೇ |
ಸ ಯಾತಿ ಯಾಂ ಗತಿಂ ದೇವ ಪ್ರಾಪ್ನುಯಾಂ ತಾಮಹಂ ಧ್ರುವಂ || ೪೭ ||

---

೪೪. ಜಗನ್ನಾಥನೇ, ನಾನು ಯಜ್ಞದ ಕುದುರೆಯ ರಕ್ಷಣೆಗೆ ಹೊರಡಲು ಸಿದ್ಧನಾಗಿರುವೆನು. ಅದನ್ನು ಬಂಧಿಸಿದ ರಾಜರುಗಳಿಂದಲೂ ಬಿಡಿಸುವೆನು.

೪೫. ದೀನವತ್ಸಲನೇ, ಒಂದು ವೇಳೆ ದೀನನಾದ ನಾನು ಕುದುರೆಯ ರಕ್ಷಣೆಯನ್ನು ಮಾಡದಿದ್ದ ಪಕ್ಷದಲ್ಲಿ ನಾನೊಂದು ಪ್ರತಿಜ್ಞೆಯನ್ನು ಮಾಡುವೆನು. ಅದನ್ನು ಕೇಳು.

೪೬. ಕ್ಷತ್ರಿಯನೂ, ವೈಶ್ಯನೂ, ಶೂದ್ರನೂ ಬ್ರಾಹ್ಮಣಸ್ತ್ರೀಯ ಗಮನ ಮಾಡಿದರೆ ಯಾವ ದುರ್ಗತಿಯುಂಟಾಗುವುದೋ ಅಂತಹ ಗತಿಯು ನನಗೆ ಬರಲಿ.

೪೭. ಮೊದಲು ಬ್ರಾಹ್ಮಣನನ್ನು ಗುರುವನ್ನಾಗಿ ಮಾಡಿಕೊಂಡು ಅನಂತರ ಯಾರು ಅವನನ್ನು ಸೇವಿಸುವುದಿಲ್ಲವೋ ಅಂತಹವನು ಯಾವ ಗತಿಯನ್ನು ಹೊಂದುವನೋ ಆ ಗತಿಯು ಕುದುರೆಯನ್ನು ರಕ್ಷಣೆ ಮಾಡದಿದ್ದಲ್ಲಿ ನನಗೆ ಉಂಟಾಗಲಿ.

|| ಗರ್ಗ ಉವಾಚ ||

ಇತಿ ತದ್ವಾಕ್ಯಮಾಕರ್ಣ್ಯ ಯಾದವಾ ವಿಸ್ಮಯಂ ಗತಾಃ ।
ತದೈವ ಕೃಷ್ಣಸ್ಸಂತುಷ್ಟೋ ಜಗ್ರಾಹ ಪೌತ್ರಮೇವ ಚ || ೪೮ ||

ತತೋ ಹರಿಸ್ಸುಧರ್ಮಾಯಾಮನಿರುದ್ಧಂ ಕೃತಾಂಜಲಿಂ ।
ಸರ್ವೇಷಾಂ ಶೃಣ್ವತಾಂ ಪ್ರಾಹ ಘನನಿಹ್ರಾದಯಾ ಗಿರಾ || ೪೯ ||

|| ಶ್ರೀಕೃಷ್ಣ ಉವಾಚ ||

ಅನಿರುದ್ಧ ತುರಂಗಸ್ಯ ವರ್ಷಮಾತ್ರಂ ಚ ಪಾಲನಂ ।
ರಾಜನ್ಯೇಭ್ಯಶ್ಚ ಕೃತ್ವಾ ತ್ವಂ ಪುನರಾಗಚ್ಛ ಚಾತ್ರ ವೈ || ೫೦ ||

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ನವಮೋಽಧ್ಯಾಯಃ

---

೪೮. ಎಂದು ಅನಿರುದ್ಧನು ಪ್ರತಿಜ್ಞೆಮಾಡಲು ಆಗ ಕೃಷ್ಣನು ಸಂತುಷ್ಟನಾಗಿ ಅನಿರುದ್ಧನನ್ನು ಅಶ್ವರಕ್ಷಕನನ್ನಾಗಿ ಸ್ವೀಕರಿಸಿದನು.

೪೯. ಅನಿರುದ್ಧನು ಅಂಜಲಿಬದ್ಧನಾಗಿ ಉಗ್ರಸೇನನ ಸಭೆಯಲ್ಲಿ ನಿಂತಿದ್ದನು. ಕೃಷ್ಣನು ಅಲ್ಲಿ ನೆರದಿರುವವರೆದುರಿಗೆ ಅನಿರುದ್ಧನನ್ನು ಕುರಿತು,

೫೦. ಅನಿರುದ್ಧನೇ, ನೀನು ಒಂದು ವರ್ಷಪರ್ಯಂತ ಈ ಅಶ್ವವನ್ನು ರಾಜರುಗಳ ಬಾಧೆಯಿಂದ ರಕ್ಷಿಸಿ ಅನಂತರ ಪುನಃ ಈ ಸ್ಥಳಕ್ಕೆ ಬಂದು ಸೇರಬೇಕು. ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಒಂಭತ್ತನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ದಶಮೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಇತಿ ಬ್ರುವತಿ ಶ್ರೀಕೃಷ್ಣೇ ಹಂಸಸ್ಥೋ ಚತುರಾನನಃ ।
ಆಜಗಾಮ ಕುಶಸ್ಥಲ್ಯಾಮೀಶ್ವರೇಣ ಸಮನ್ವಿತಃ ॥ ೧ ॥

ತತ ಇಂದ್ರಃ ಕುಬೇರಶ್ಚ ಯಮೋ ವರುಣ ಏವ ಚ ।
ವಾಯುರ್ವಾಯುಸಖಶ್ಚೈವ ನೈಋರ್ತಶ್ಚ ನಿಶಾಕರಃ ॥ ೨ ॥

ಏತೇ ಸಮಾಯಯೂ ರಾಜನ್ ಕೃಷ್ಣದರ್ಶನಕಾಂಕ್ಷಯಾ ।

ಹತ್ತನೆಯ ಅಧ್ಯಾಯವು

೧. ಗರ್ಗಮುನಿಯು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಕೃಷ್ಣನು ಆ ರೀತಿ ಹೇಳಿ ಸುಮ್ಮನಾಗಲು ಆ ಸಮಯಕ್ಕೆ ಸರಿಯಾಗಿ ಬ್ರಹ್ಮನು ಹಂಸಾರೂಢನಾಗಿ ಈಶ್ವರನೊಡನೆ ಕುಶಸ್ಥಲಿಗೆ ಬಂದನು.

೨. ಅನಂತರ ಇಂದ್ರ, ಕುಬೇರ, ಯಮ, ವರುಣ, ವಾಯು, ಅಗ್ನಿ, ನಿಋತಿ, ಚಂದ್ರ, ಇವರೆಲ್ಲರೂ ಕೃಷ್ಣನನ್ನು ನೋಡಬೇಕೆಂಬ ಅಭಿಲಾಷೆಯಿಂದ ಕುಶಸ್ಥಲಿಗೆ ಬಂದರು.

ತತಶ್ಚ ದ್ವಾದಶಾದಿತ್ಯಾ ವೇತಾಲಾಶ್ಚ ಮರುದ್ಗಣಾಃ ॥ ೩ ॥
ವಿಶ್ವೇದೇವಾಶ್ಚ ಸಾಧ್ಯಾಶ್ಚ ಗಂಧರ್ವಾಃ ಕಿನ್ನರಾಸ್ತಥಾ ।
ವಿದ್ಯಾಧರಶ್ಚ ಮುನಯಃ ಶ್ರೀಕೃಷ್ಣಂ ದ್ರಷ್ಟುಮಾಯಯೌ ॥ ೪ ॥

ತತ್ರಾಗತಾನಾಂ ದೇವಾನಾಮುಗ್ರಸೇನೇನ ಮಾಧವಃ ।
ಯಥಾವಿಧ್ಯುಪಸಂಗಮ್ಯ ಸರ್ವೇಷಾಂ ಮಾನಮಾದಧೇ ॥ ೫ ॥

ಆಸನೇಷೂಪವಿಷ್ಟೇಷು ಸಭಾಯಾಂ ನಿರ್ಜರೇಷ್ವಥ ।
ಶ್ಲಾಘಾಂ ಚಕಾರ ಸರ್ವೇಷಾಂ ಲೀಲಾನರವಪುರ್ಹರಿಃ ॥ ೬ ॥

ಅಥ ಬ್ರಹ್ಮಾ ಹರೇಃ ಪಾರ್ಶ್ವೇ ಸ್ಥಿತಃ ಶಕ್ರೇಣ ನೋದಿತಃ ।
ಪ್ರತ್ಯುವಾಚ ಜಗನ್ನಾಥಂ ಬಲಭದ್ರಸಮನ್ವಿತಂ ॥ ೭ ॥

೩–೪. ಅಲ್ಲದೆ ದ್ವಾದಶಾದಿತ್ಯರು, ವೇತಾಲಗಳು, ಮರುದ್ಗಣಗಳು, ವಿಶ್ವೇದೇವತೆಗಳು, ಸಾಧ್ಯರು, ಗಂಧರ್ವರು ; ಕಿನ್ನರರು. ವಿದ್ಯಾಧರರು, ಮುನಿಗಳು ಇವರೂ ಸಹ ಶ್ರೀಕೃಷ್ಣನ ದರ್ಶನಾಕಾಂಕ್ಷಿಗಳಾಗಿ ಅಲ್ಲಿಗೆ ಬಂದರು.

೫. ಆಗ ಕೃಷ್ಣನು ಉಗ್ರಸೇನನ ಮೂಲಕವಾಗಿ ಅವರೆಲ್ಲರಿಗೂ ವಿಧಿವತ್ತಾಗಿ ಅರ್ಘ್ಯಪಾದ್ಯಾದಿಗಳನ್ನು ನೆರವೇರಿಸಿ ಆಸನಗಳನ್ನು ಕೊಟ್ಟನು.

೬. ಎಲ್ಲರೂ ಆಸನದಲ್ಲಿ ಸುಖಾಸೀನರಾದನಂತರ ಲೀಲಾಮಾನುಷರೂಪನಾದ ಪರಮಾತ್ಮನು ಅವರೆಲ್ಲರನ್ನೂ ಸ್ತುತಿಸಿದನು.

೭. ಆಗ ಹರಿಯ ಪಕ್ಕದಲ್ಲಿ ಕುಳಿತಿದ್ದ ಬ್ರಹ್ಮನು ಇಂದ್ರನ ಇಂಗಿತವನ್ನರಿತು, ಬಲರಾಮನೊಡಗೂಡಿದ ಕೃಷ್ಣನನ್ನು ಕುರಿತು ಇಂತೆಂದನು.

॥ ಬ್ರಹ್ಮೋವಾಚ ॥

ಪೌತ್ರಸ್ತೇ ಬಾಲಕಃ ಕೃಷ್ಣ ರಾಜನ್ಯೇಭ್ಯಶ್ಚ ಪಾಲನಂ ।
ಕಠಿನಂ ಶ್ಯಾಮಕರ್ಣಸ್ಯ ಕರಿಷ್ಯತಿ ಕಥಂ ಹರೇಃ ॥ ೮ ॥

ಮಾ ತಂ ಪ್ರೇಷಯ ತಸ್ಮಾತ್ತ್ವಂ ರಕ್ಷಣಾಯ ಹಯಸ್ಯ ವೈ ।
ವಿಘ್ನಾಶ್ಚ ಬಹವಸ್ಸಂತಿ ಪ್ರದ್ಯುಮ್ನಂ ಪ್ರೇಷಯಸ್ವ ಚ ॥ ೯ ॥

ಸಂಕರ್ಷಣಂ ವಾ ಗೋವಿಂದಮಥವಾ ರಕ್ಷ ತ್ವಂ ಹಯಂ ।
ಇತಿ ತದ್ವಚನಂ ಶ್ರುತ್ವಾ ನಿಜಗೌ ಪ್ರಹಸನ್ ಹರಿಃ ॥ ೧೦ ॥

॥ ಶ್ರೀಭಗವಾನುವಾಚ ॥

ಅನಿರುದ್ಧೋ ಹಠಾದ್ಯಾತಿ ಮನ್ನಿಷೇಧಂ ನ ಮನ್ಯತೇ ।
ತಸ್ಮಾತ್ತನ್ನಿಕಟೇ ಗತ್ವಾ ನಿಷೇಧಂ ಕುರು ಯತ್ನತಃ ॥ ೧೧ ॥

---

೮. ಬ್ರಹ್ಮನು ಹೇಳಿದನು:—ಎಲೈ ಕೃಷ್ಣ, ನಿನ್ನ ಮೊಮ್ಮಗನು ಇನ್ನೂ ಬಾಲಕನು. ಇವನು ಯಜ್ಞದ ಕುದುರೆಯನ್ನು ರಾಜರಿಂದ ರಕ್ಷಿಸಲು ಹೇಗೆ ತಾನೇ ಸಮರ್ಥನಾಗುವನು? ಇದು ಅತಿ ಕಠಿನವಾದ ಕೆಲಸವಲ್ಲವೇ?

೯. ಆದುದರಿಂದ ನೀನು ಆ ಹುಡುಗನನ್ನು ಕಳುಹಿಸಬೇಡ. ಅನೇಕ ತೊಂದರೆಗಳನ್ನು ಎದುರಿಸಬೇಕು. ಅದಕ್ಕೋಸ್ಕರ ಪ್ರದ್ಯುಮ್ನನನ್ನು ಕಳುಹಿಸು.

೧೦. ಅಥವಾ ಬಲರಾಮನನ್ನು ಕಳುಹಿಸು. ಇಲ್ಲದಿದ್ದರೆ ನೀನೇ ಹೊರಡು. ಎಂದು ಬ್ರಹ್ಮನು ಹೇಳಲು ಅದನ್ನು ಕೇಳಿ ಕೃಷ್ಣನು ಮುಗುಳ್ನಗೆ ನಗುತ್ತಾ ಈ ರೀತಿ ಹೇಳಿದನು.

೧೧. ಅನಿರುದ್ಧನು ನಾನೆಷ್ಟು ಹೇಳಿದರೂ ಕೇಳದೆ ಹೊರಟಿರುವನು. ಆದುದರಿಂದ ನೀನೇ ಅವರ ಬಳಿಗೆ ಹೋಗಿ ಅವನನ್ನು ಹೋಗದಂತೆ ತಡೆ.

ಕೃಷ್ಣಸ್ಯ ವಾಕ್ಯಮಾಕರ್ಣ್ಯ ವಿಧಿಶ್ಚಂದ್ರಸಮನ್ವಿತಃ ।
ಯಯೌ ನಿವಾರಣಾರ್ಥಾಯಾನಿರುದ್ಧಂ ಕಾರ್ಷ್ಣಿನಂದನಂ ॥ ೧೨ ॥

ಯದಾಗತೌ ಸಮೀಪೇ ತು ಸುರಜ್ಯೇಷ್ಠಕಲಾನಿಧೀ ।
ವಿಗ್ರಹೇ ಹ್ಯನಿರುದ್ಧಸ್ಯ ಸದ್ಯಸ್ತೌ ಲೀನತಾಂ ಗತೌ ॥ ೧೩ ॥

ಬಭೂವುರ್ವಿಸ್ಮಿತಾಸ್ಸರ್ವೇ ಶಿವಶಕ್ರಾದಯಸ್ಸುರಾಃ ।
ಯಾದವಾ ಮುನಯಶ್ಚೈವ ಹ್ಯುಗ್ರಸೇನಾದಯೋ ನೃಪಾಃ ॥ ೧೪ ॥

ವಜ್ರನಾಭ ತ್ವತ್ಪಿತರಂ ಸರ್ವೇ ಮುನಿಗಣಾಃ ಕಿಲ ।
ಪರಿಪೂರ್ಣತಮಂ ತಸ್ಮಾದನಿರುದ್ಧಂ ವದಂತಿ ಹಿ ॥ ೧೫ ॥

॥ ಗರ್ಗ ಉವಾಚ ॥

ಅಥೋಗ್ರಸೇನೋ ನೃಪತಿಃ ಸಭಾತಲಾ-
ದುತ್ಥಾಯ ಕೃಷ್ಣಂ ಮನಸಾ ಪ್ರಣಮ್ಯ ಚ ।
ಸ್ವಾಂತಃಪುರಂ ಸುಂದರರತ್ನವೇಷ್ಟಿತಂ
ಜಗಾಮ ರಾಜನ್ ಕ್ರತುಕೌತುಕಾನ್ವಿತಃ ॥ ೧೬ ॥

---

೧೨. ಎಂದು ಕೃಷ್ಣನು ಹೇಳಲು ಬ್ರಹ್ಮನು ಚಂದ್ರನನ್ನು ಜೊತೆಯಲ್ಲಿ ಕರೆದುಕೊಂಡು ಅನಿರುದ್ಧನ ಬಳಿಗೆ ಬಂದನು.

೧೩. ಬ್ರಹ್ಮಚಂದ್ರರು ಅನಿರುದ್ಧನ ಸಮೀಪಕ್ಕೆ ಹೋದ ಕೂಡಲೇ ಅವರಿಬ್ಬರೂ ಅನಿರುದ್ಧನ ಶರೀರದಲ್ಲಿ ಐಕ್ಯವಾಗಿ ಸೇರಿಹೋದರು.

೧೪. ಅದನ್ನು ನೋಡಿ ಈಶ್ವರ, ಇಂದ್ರ ಮುಂತಾದವರೂ, ಉಗ್ರಸೇನನೇ ಮೊದಲಾದ ರಾಜರೂ, ಯಾದವರೂ ಬಹಳ ಆಶ್ಚರ್ಯಪಟ್ಟರು.

೧೫. ಎಲೈ ವಜ್ರನಾಭನೇ, ನಿನ್ನ ತಂದೆಯಾದ ಅನಿರುದ್ಧನನ್ನು ಪರಿಪೂರ್ಣತಮನಾದ ಪರಮಾತ್ಮನೆಂಬುದಾಗಿ ಮುನಿಗಳೆಲ್ಲರೂ ಹೇಳುವರು.

೧೬. ಅನಂತರ ಉಗ್ರಸೇನ ಮಹಾರಾಜನು ಸಭೆಯನ್ನು ಮುಕ್ತಾಯಗೊಳಿಸಿ ಅಲ್ಲಿಂದೆದ್ದು ಕೃಷ್ಣನನ್ನು ಮನಸ್ಸಿನಿಂದ ವಂದಿಸಿ ರತ್ನನಿರ್ಮಿತವಾದ ತನ್ನ ಅಂತಃಪುರಕ್ಕೆ ತೆರಳಿದನು.

ಗತ್ವಾ ಹ್ಯಂತಃಪುರೇ ರಾಜಾ ಸುರೇಂದ್ರಸದನೋಪಮೇ ।
ಪರ್ಯಂಕಸ್ಥಾಂ ರುಚಿಮತೀಂ ಶಚೀತುಲ್ಯಾಂ ವರಾನನಾಂ　　॥ ೧೭ ॥

ದಾಸೀಭಿಸ್ಸೇವಿತಾಂ ರಾಜ್ಞೀಂ ವಸ್ತ್ರಾಲಂಕಾರವೇಷ್ಟಿತಾಂ ।
ವೀಜಿತಾಂ ಚಾಮರೈಃ ಶುಕ್ಲೈರ್ದದರ್ಶ ನೃಪಸತ್ತಮಃ　　॥ ೧೮ ॥

ಸಾ ವಿಲೋಕ್ಯಾಗತಂ ತತ್ರ ಸ್ವಪತಿಂ ಯಾದವೇಶ್ವರಂ ।
ಉತ್ಥಾಯ ಚಾದರಂ ರಾಜನ್ ಚಕಾರ ವಿಧಿನಾ ಕಿಲ　　॥ ೧೯ ॥

ತತಸ್ಸ್ಥಿತ್ವಾ ಸ ಪರ್ಯಂಕೇ ವೃಷ್ಣೀಶೋ ಸ್ವಾಂ ಪ್ರಿಯಾಂ ಪರಾಂ ।
ಪ್ರೋವಾಚ ಪ್ರಹಸನ್ ವಾಣ್ಯಾ ಘನಶಬ್ದಗಭೀರಯಾ　　॥ ೨೦ ॥

---

೧೭. ಅದು ಅಮರಾವತಿಯಂತೆ ಮನೋಹರವಾಗಿದ್ದಿತು. ಯಜ್ಞಕುತೂಹಲವುಳ್ಳವನಾಗಿ ಅಲ್ಲಿಗೆ ಹೋದಾಗ ಪತ್ನಿಯಾದ ರುಚಿಮತಿಯು ಮಂಚದ ಮೇಲೆ ಕುಳಿತಿದ್ದಳು. ಅವಳು ಶಚಿಯಂತೆ ಸುಂದರಳಾಗಿದ್ದಳು.

೧೮. ದಾಸಿಯರು ಅವಳ ಸೇವೆಯಲ್ಲಿ ನಿರತರಾಗಿದ್ದರು. ಕೆಲವರು ರುಚಿಮತಿಗೆ ವಸ್ತ್ರಗಳನ್ನೂ, ಆಭರಣಗಳನ್ನೂ ಇಡುತ್ತಿದ್ದರು. ಅದರಿಂದ ರುಚಿಮತಿಯು ಅತಿಸುಂದರಿಯಾಗಿ ಕಾಣಿಸುತ್ತಿದ್ದಳು. ಮತ್ತೆ ಕೆಲವರು ಬಿಳಿಯ ಚಾಮರಗಳಿಂದ ಬೀಸುತ್ತಿದ್ದರು.

೧೯. ಯದುರಾಜನಾದ ತನ್ನ ಪತಿಯು ಬಂದುದನ್ನು ನೋಡಿ ರುಚಿಮತಿಯು ಮೇಲಕ್ಕೆದ್ದು ಆದರದಿಂದ ಅವನನ್ನು ಸ್ವಾಗತಿಸಿದಳು.

೨೦. ಉಗ್ರಸೇನನು ಮಂಚದಮೇಲೆ ಕುಳಿತುಕೊಂಡನು. ಆಮೇಲೆ ತನ್ನ ಪ್ರಿಯ ಪತ್ನಿಯನ್ನು ಕುರಿತು ಮೇಘದಂತೆ ಗಂಭೀರವಾದ ಧ್ವನಿಯಿಂದ ಈ ರೀತಿ ಹೇಳಿದನು.

ಹಯಮೇಧಂ ಕರಿಷ್ಯೇಽಹಂ ಪ್ರಿಯೇ ಕೃಷ್ಣಾಜ್ಞಯಾದ್ಯ ವೈ ।
ನರೋ ಯಸ್ಯ ಪ್ರತಾಪೇನ ಲಭತೇ ವಾಂಛಿತಂ ಫಲಂ ॥ ೨೧ ॥

॥ ಗರ್ಗ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಪುತ್ರದುಃಖೇನ ದುಃಖಿತಾ ।
ಸ್ಮರಂತಿ ಕೃಪಣಾ ಪುತ್ರಾನ್ ಪ್ರತ್ಯುವಾಚ ನೃಪೇಶ್ವರಂ ॥ ೨೨ ॥

॥ ರಾಜ್ಞ್ಯುವಾಚ ॥

ಪುತ್ರದರ್ಶನಹೀನಾಯಾ ರಾಜನ್ಮೇ ಸರ್ವಸಂಪದಃ ।
ನ ರೋಚಂತೇ ಸುರೈಃ ಪ್ರಾರ್ಥ್ಯಾಃ ಸುಖೇನ ತ್ವಂ ಕ್ರತುಂ ಕುರು ॥ ೨೩ ॥

ಯದಿ ಯಜ್ಞಪ್ರತಾಪೇನ ಪುತ್ರೋ ಭವತಿ ಸುಂದರಃ ।
ತದಾ ಪ್ರಸನ್ನಚಿತ್ತಾಹಂ ಭವಿಷ್ಯಾಮಿ ನೃಪೇಶ್ವರ ॥ ೨೪ ॥

ತಸ್ಯಾ ವಾಕ್ಯಂ ಸಮಾಕರ್ಣ್ಯ ನೃಪಃ ಖಿನ್ನಮನಾ ಹ್ಯಭೂತ್ ।
ಪುನರಾಹ ಪ್ರಿಯಾಂ ತತ್ರ ಶ್ರದ್ಧಾಂ ಶ್ರಾದ್ಧಸುರೋ ಯಥಾ ॥ ೨೫ ॥

---

೨೧. ಪ್ರಿಯೇ, ನಾನೀಗ ಕೃಷ್ಣನ ಅನುಜ್ಞೆಯಂತೆ ಅಶ್ವಮೇಧ ಯಾಗವನ್ನು ಮಾಡಲಿರುವೆನು. ಅದರಿಂದ ಇಷ್ಟಾರ್ಥವೆಲ್ಲವೂ ಸಿದ್ಧಿಸುವುದು.

೨೨. ಎಂದು ಉಗ್ರಸೇನನು ಹೇಳಲು ರುಚಿಮತಿಗೆ ಪುತ್ರರಿಲ್ಲದುದರಿಂದ ಬಹಳ ದುಃಖವುಂಟಾಯಿತು. ಸತ್ತುಹೋದ ಕಂಸನೇ ಮೊದಲಾದ ಪುತ್ರರನ್ನು ನೆನೆಸಿಕೊಂಡು ದುಃಖಪಡುತ್ತಾ ರಾಜನನ್ನು ಕುರಿತು ಹೇಳಿದಳು.

೨೩–೨೪. ನೃಪೇಶ್ವರನೇ, ಪುತ್ರರ ಮುಖದರ್ಶನವಿಲ್ಲದ ನನಗೆ ಬೇಕಾದ ಸಂಪತ್ಸಮೃದ್ಧಿಗಳಿದ್ದರೂ ಫಲವಿಲ್ಲದಂತಾಗಿವೆ. ಆದುದರಿಂದ ನೀನು ಸುಖವಾಗಿ ಯಜ್ಞವನ್ನು ಮಾಡು ಯಜ್ಞದ ಮಹಿಮೆಯಿಂದ ಸುಂದರನಾದ ಒಬ್ಬ ಪುತ್ರನಾದರೂ ಹುಟ್ಟಿದರೆ ಆಗ ನಾನು ಸುಖಿಯಾಗುವೆನು.

೨೫. ಎಂದು ಹೇಳಿದುದನ್ನು ಕೇಳಿ ಉಗ್ರಸೇನನು ಅತಿಖಿನ್ನನಾದನು. ಅನಂತರ ಅವಳನ್ನು ಕುರಿತು ಹೇಳಿದನು.

|| ರಾಜೋವಾಚ ||

ಶೃಣು ಭದ್ರೇ ಪ್ರವಕ್ಷ್ಯಾಮಿ ಪುತ್ರಾಶಾಂ ಬಹುದುಃಖದಾಂ |
ತ್ಯಕ್ತ್ವಾ ವಿಮುಕ್ತಿದಂ ಸಾಕ್ಷಾತ್ ಕೃಷ್ಣಂ ಭಜ ಪರಾತ್ಪರಂ || ೨೬ ||

ಅಹಂ ವೃದ್ಧಸ್ತು ತ್ವಂ ವೃದ್ಧಾ ಕಥಂ ಪುತ್ರೋ ಭವಿಷ್ಯತಿ |
ತಸ್ಮಾದಜ್ಞಾನಜಂ ಶೋಕಂ ತ್ಯಜ ಬಂಧನಕಾರಣಂ || ೨೭ ||

ಶ್ರುತ್ವಾ ತು ಯಾದವೇಂದ್ರಸ್ಯ ವಾಕ್ಯಂ ವಿಜ್ಞಾನದಂ ಪರಂ |
ರಾಜನ್ ರುಚಿಮತೀ ಪ್ರಾಹ ಯದೂನಾಂ ಪ್ರವರಂ ಪತಿಂ || ೨೮ ||

|| ರುಚಿಮತ್ಯುವಾಚ ||

ರಾಜನ್ ಯಜ್ಞಪ್ರತಾಪೇನ ಪ್ರಾಪ್ಯತೇ ವಾಂಛಿತಂ ಫಲಂ |
ಅಹಂ ತು ಕಾಮಯೇ ದ್ರಷ್ಟುಂ ಹತಪುತ್ರಾನ್ಸಮಾಗತಾನ್ || ೨೯ ||

---

೨೬. ಮಂಗಳಕರಳೇ, ಪುತ್ರರಾಗಬೇಕೆಂಬ ಆಸೆಯು ಬಹು ದುಃಖವನ್ನುಂಟು ಮಾಡುವುದು. ಅದನ್ನು ಬಿಟ್ಟು ಪರಾತ್ಪರ ಸ್ವರೂಪನಾದ ಶ್ರೀಕೃಷ್ಣನನ್ನು ಭಜಿಸು. ಅದರಿಂದ ಮುಕ್ತಿಯುಂಟಾಗುವುದು.

೨೭. ನಾನಾದರೋ ಮುದುಕನು. ನೀನೂ ಮುದಿಕಿಯೇ ಹೌದು. ಹೀಗಿರುವಲ್ಲಿ ನಮಗೆ ಈಗ ಹೇಗೆ ತಾನೇ ಮಕ್ಕಳಾಗುವುದು? ಆದುದರಿಂದ ಈ ಅಜ್ಞಾನದಿಂದುಂಟಾಗಿರುವ ಶೋಕವನ್ನು ಬಿಟ್ಟುಬಿಡು. ಇದು ಸಂಸಾರಬಂಧನಕ್ಕೆ ಕಾರಣವೇ ಹೊರತು ಮುಕ್ತಿಗೆ ಕಾರಣವಲ್ಲ.

೨೮. ಈ ರೀತಿಯಾಡಿದ ಉಗ್ರಸೇನನ ಮಾತನ್ನು ಕೇಳಿ ರುಚಿಮತಿಯು ಯದುಶ್ರೇಷ್ಠನಾದ ಉಗ್ರಸೇನನನ್ನು ಕುರಿತು,

೨೯. ಎಲೈ ರಾಜನೇ, ಯಜ್ಞಮಹಿಮೆಯಿಂದ ಇಷ್ಟಾರ್ಥಗಳು ನೆರವೇರುವವಷ್ಟೇ. ಹಾಗಿದ್ದರೆ ನಾನು ಸತ್ತುಹೋದ ಪುತ್ರನನ್ನು ನೋಡಬೇಕೆಂದು ಇಷ್ಟಪಟ್ಟಿರುವೆನು. ಆದುದರಿಂದ ನೀನು ಮಾಡುವ ಯಜ್ಞದಿಂದ ನನ್ನಭಿಲಾಷೆಯು ಪೂರ್ಣವಾಗುವುದರಲ್ಲಿ ಸಂಶಯವಿಲ್ಲ.

ಯದಿ ತ್ವಮೀದೃಶಂ ವಾಕ್ಯಂ ಮೃತಾನಾಂ ದರ್ಶನಂ ಕುತಃ ।
ವದಿಷ್ಯಸಿ ಮದಗ್ರೇ ತ್ವಂ ತತೋಽನ್ಯಚ್ಛೃಣು ಮನ್ಮುಖಾತ್ ॥ ೩೦ ॥

ಕೃಷ್ಣೇನ ದತ್ತಂ ತತ್ಪುತ್ರಂ ಗುರವೇ ಗುರುದಕ್ಷಿಣಾಂ ।
ತದ್ವತ್ಸ್ವಪುತ್ರಾನ್ ರಾಜೇಂದ್ರ ಕಾಮಯೇ ದ್ರಷ್ಟುಮಾಗತಾನ್ ॥ ೩೧ ॥

॥ ಗರ್ಗ ಉವಾಚ ॥

ಇತಿ ಶ್ರುತ್ವಾಹ್ವಯೋಮಾಸ ಮಾಂ ಚ ಕೃಷ್ಣಂ ಬೃಹಚ್ಛ್ರವಾಃ ।
ತಯೋಃ ಸಪರ್ಯಾಂ ಮಹತೀಮಾಗತಾಭ್ಯಾಂ ಚಕಾರ ಹ ॥ ೩೨ ॥

ತೌ ಪೂಜಯಿತ್ವಾಭಿಪ್ರಾಯಂ ತಾಭ್ಯಾಂ ಸರ್ವಂ ನ್ಯವೇದಯತ್ ।
ಉಗ್ರಸೇನಸ್ಯ ವಾಕ್ಯಂ ವೈ ಶ್ರುತ್ವಾ ಮದ್ವಚನಾದ್ಧರಿಃ ॥ ೩೩ ॥
ಉಪಶಕ್ರೋ ಯಥಾಶಕ್ರಂ ಪ್ರಾಹ ತದ್ವನ್ನೃಪೇಶ್ವರ ।

---

೩೦. ಒಂದು ವೇಳೆ ನೀನು—ಸತ್ತುಹೋದವರನ್ನು ಕಟ್ಟಿಕೊಂಡು ನಮಗೇನು? ಅವರನ್ನು ನೋಡುವುದು ತಾನೆ ಏತಕ್ಕೆ? ಎಂದು ಹೇಳಬಹುದು. ಹಾಗಾದರೆ ಮತ್ತೊಂದು ವಿಷಯವನ್ನು ಹೇಳುವೆನು ಕೇಳು.

೩೧. ಸತ್ತುಹೋಗಿದ್ದ ಗುರುಪುತ್ರನನ್ನು ಕೃಷ್ಣನು ಬದುಕಿಸಿ ಗುರುವಿಗೆ ಕೊಡಲಿಲ್ಲವೇ. ಹಾಗೆ ನಾನೂ ನನ್ನ ಮಕ್ಕಳನ್ನು ನೋಡಬೇಕೆಂಬ ಅಭಿಲಾಷೆಯುಳ್ಳವಳಾಗಿರುವೆನು.

೩೨. ಎಂದು ರುಚಿಮತಿಯು ಹೇಳಲು ಉಗ್ರಸೇನನು ನನ್ನ (ಗರ್ಗನ)ನ್ನೂ ಕೃಷ್ಣನನ್ನೂ ಅಲ್ಲಿಗೆ ಕರೆಸಿ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿದನು.

೩೩. ಎಲೈ ವಜ್ರನಾಭಿಯೇ ಕೇಳು. ಅನಂತರ ಅಲ್ಲಿ ನಡೆದುದೆಲ್ಲವನ್ನೂ ನಮ್ಮಿಬ್ಬರಿಗೂ ತಿಳಿಸಿದನು. ನಾನು ಈ ವಿಷಯದಲ್ಲಿ ಕೃಷ್ಣನಿಗೆ ಸಲಹೆಗಳನ್ನು ಸೂಚಿಸಿದೆನು. ಆಗ ಕೃಷ್ಣನು, ಉಪೇಂದ್ರನು ಇಂದ್ರನೊಡನೆ ಮಾತನಾಡಿದಂತೆ, ರಾಜನನ್ನು ಕುರಿತು,

॥ ಶ್ರೀಭಗವಾನುವಾಚ ॥

ಶೃಣು ರಾಜನ್ ತವ ಸುತಾಃ ಪ್ರಧನೇ ನಿಹಿತಾಃ ಪುರಾ ॥ ೩೪ ॥

ತೇ ಸರ್ವೇ ದಿವ್ಯದೇಹೇನ ವರ್ತಂತೇ ದಿವಿ ದೇವವತ್ ।
ತಸ್ಮಾತ್ತ್ವಂ ನೃಪಶಾರ್ದೂಲ ಪುತ್ರಶೋಕಂ ವಿಹಾಯ ಚ ॥ ೩೫ ॥

ಅಶ್ವಮೇಧಂ ಕ್ರತುವರಂ ಕುರು ಧೈರ್ಯೇಣ ಭೂಪತೇ ।
ದರ್ಶಯಿಷ್ಯಾಮ್ಯಹಂ ಸರ್ವಾನ್ ಯಜ್ಞಸ್ಯಾಂತೇ ಚ ತೇ ಸುತಾನ್ ॥ ೩೬ ॥

ನಿಶಮ್ಯ ಕೃಷ್ಣವಚನಮುರ್ವೀಶೋ ಸ್ವಾಂ ಪ್ರಿಯಾಂ ಮುದಾ ।
ಆಶ್ವಾಸ್ಯ ಚ ಶುಭೈರ್ವಾಕ್ಯೈಃ ಸುಧರ್ಮಾಂ ಸುಜನೈರ್ಯಯೌ ॥ ೩೭ ॥

ಆಗತಂ ತು ನೃಪಂ ವೀಕ್ಷ್ಯ ಶ್ರೀಕೃಷ್ಣೇನ ಸಮನ್ವಿತಂ ।
ದಿಕ್ಪಾಲಾಶ್ಚ ಪ್ರಣೇಮುರ್ವೈ ರಾಮೇಶಾನಾದಯಸ್ಸುರಾಃ ॥ ೩೮ ॥

೩೪–೩೫. ಎಲೈ ರಾಜಪ್ರವರನೇ, ನಿನ್ನ ಮಕ್ಕಳೆಲ್ಲರೂ ಯುದ್ಧದಲ್ಲಿ ಮಡಿದಿರುವರು. ಅವರು ದಿವ್ಯದೇಹವನ್ನು ಧರಿಸಿ ದೇವತೆಗಳಂತೆ ಸ್ವರ್ಗದಲ್ಲಿ ಸುಖವಾಗಿರುವರು. ನೀನು ಪುತ್ರಶೋಕವನ್ನು ಬಿಡು.

೩೬. ಧೈರ್ಯವನ್ನವಲಂಬಿಸು, ಅಶ್ವಮೇಧಯಾಗವನ್ನು ಮಾಡು. ಯಜ್ಞವೆಲ್ಲವೂ ಮುಗಿದನಂತರ ನಿನ್ನ ಮಕ್ಕಳನ್ನು ತೋರಿಸುವೆನು.

೩೭. ಎಂದು ಕೃಷ್ಣನು ಹೇಳಲು ಉಗ್ರಸೇನನು ತನ್ನ ಪ್ರಿಯಳನ್ನು ಸಮಾಧಾನೋಕ್ತಿಗಳಿಂದ ಸಂತೈಸಿ ಒಡನಾಡಿಗಳೊಡನೆ ಸಭೆಗೆ ಬಂದನು.

೩೮. ಕೃಷ್ಣನೊಡನೆ ಉಗ್ರಸೇನನು ಸಭೆಗೆ ಬರಲು ಬಲರಾಮನೂ, ದಿಕ್ಪಾಲಕರು, ಮೊದಲಾದ ದೇವತೆಗಳೂ ಅವನನ್ನು ನಮಸ್ಕರಿಸಿದರು.

ಉಗ್ರಸೇನಸ್ಯ ಭೂಪಸ್ಯ ವಜ್ರನಾಭೇ ತಪಃಫಲಂ ।
ಕಿಂ ವರ್ಣಯಾಮಿ ಯಂ ಸರ್ವೇ ಶ್ರೀಕೃಷ್ಣಾದ್ಯಾ ನಮಂತಿ ಹಿ ॥ ೩೯ ॥

ಯಾದವೇಂದ್ರಸ್ತು ಸರ್ವಾನ್ ವೈ ದೇವಾನ್ ನತ್ವಾ ವಿಲಜ್ಜಿತಃ ।
ಶಕ್ರಸಿಂಹಾಸನೇ ದಿವ್ಯೇ ನಾರುರೋಹ ವಿಚಾರಯನ್ ॥ ೪೦ ॥

ತದೈವ ಕೃಷ್ಣೋ ಭಗವಾನ್ ಗೃಹೀತ್ವಾ ಪಾಣಿನಾ ನೃಪಂ ।
ಸ್ವಭಕ್ತಂ ಸ್ಥಾಪಯಾಮಾಸ ತಸ್ಮಿನ್ವೈ ವಾಸವಾಸನೇ ॥ ೪೧ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ದಶಮೋಽಧ್ಯಾಯಃ

---

೩೯. ವಜ್ರನಾಭಿಯೇ, ಉಗ್ರಸೇನ ಮಹಾರಾಜನ ತಪೋಮಹಿಮೆಯು ಅದ್ಭುತವಾದುದು. ಶ್ರೀಕೃಷ್ಣನೇ ಮೊದಲಾದವರೂ ಸಹ ಅವನನ್ನು ನಮಸ್ಕರಿಸ ಬೇಕಾದರೆ ಅವನೆಂತಹ ಮಹಾಮಹಿಮನು? ಅದನ್ನು ವರ್ಣಿಸಲು ಹೇಗೆ ತಾನೇ ಆದೀತು?

೪೦. ಉಗ್ರಸೇನನೂ ದೇವತೆಗಳನ್ನೆಲ್ಲಾ ನಮಸ್ಕರಿಸಿದನು. ಅವರೆಲ್ಲರೂ ನಿಂತಿರಲು ತಾನು ಸಿಂಹಾಸನದ ಮೇಲೆ ಹೇಗೆ ಕುಳಿತುಕೊಳ್ಳುವುದು ಎಂದು ಅವನಿಗೆ ನಾಚಿಕೆಯಾಗಿ ಶಕ್ರಸಿಂಹಾಸನವನ್ನೇರದೆ ಹಾಗೆಯೇ ನಿಂತಿದ್ದನು.

೪೧. ತಕ್ಷಣ ಕೃಷ್ಣನು ರಾಜನ ಹತ್ತಿರ ಬಂದು ಅವನ ಕೈಯನ್ನು ಹಿಡಿದು ತನ್ನ ಭಕ್ತನನ್ನು ಶಕ್ರಸಿಂಹಾಸನದಲ್ಲಿ ಕುಳ್ಳಿರಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ
ಹತ್ತನೆಯ ಅಧ್ಯಾಯವು ಮುಗಿದುದು.

--॥ ಶ್ರೀಃ ॥--

-॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥--

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕಾದಶೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಅಥ ರಾಜಾ ಸುಧರ್ಮಾಯಾಂ ವಾಸುದೇವೇನ ನೋದಿತಃ ।
ಸಂಸ್ಥಿತಾನೃತ್ವಿಜೋ ವವ್ರೇ ಮೂರ್ಧ್ನಾನಮ್ಯ ಪ್ರಸಾದ್ಯ ಚ ॥ ೧ ॥

ಪರಾಶರಶ್ಚ ವ್ಯಾಸಶ್ಚ ದೇವಲಶ್ಚ್ಯವನೋಽಸಿತಃ ।
ಶತಾನಂದೋ ಗಾಲವಶ್ಚ ಯಾಜ್ಞವಲ್ಕ್ಯೋ ಬೃಹಸ್ಪತಿಃ ॥ ೨ ॥

ಅಗಸ್ತ್ಯೋ ವಾಮದೇವಶ್ಚ ಮೈತ್ರೇಯೋ ಲೋಮಶಃ ಕವಿಃ ।
ಅಹಂ ಕ್ರತುರ್ಜೈಮಿನಿಶ್ಚ ವೈಶಂಪಾಯನ ಏವ ಚ ॥ ೩ ॥

ಹನ್ನೊಂದನೆಯ ಅಧ್ಯಾಯವು

೧. ಗರ್ಗಮುನಿಯು ಹೇಳಿದನು :—ವಜ್ರನಾಭಿಯೇ, ಕೇಳು. ಉಗ್ರಸೇನನು ಸಭೆಯಲ್ಲಿದ್ದು ವಾಸುದೇವನ ಪ್ರೇರಣೆಯಂತೆ, ಅಲ್ಲಿಗೆ ಬಂದಿರುವ ಋಷಿಗಳನ್ನು ನಮಸ್ಕರಿಸಿ ಅವರನುಮತಿಯಂತೆ ಋತ್ವಿಗ್ವರಣವನ್ನು ಮಾಡಿದನು.

೨-೩. ಪರಾಶರ, ವ್ಯಾಸ, ದೇವಲ, ಚ್ಯವನ, ಅಸಿತ, ಶತಾನಂದ, ಗಾಲವ, ಯಾಜ್ಞವಲ್ಕ್ಯ, ಬೃಹಸ್ಪತಿ, ಅಗಸ್ತ್ಯ, ವಾಮದೇವ, ಮೈತ್ರೇಯ, ಲೋಮಶ, ಶುಕ್ರ, ನಾನು (ಗರ್ಗ) ಕ್ರತು, ಜೈಮಿನಿ, ವೈಶಂಪಾಯನ,

ಪೈಲಸ್ಸುಮಂತುಃ ಕಣ್ವಶ್ಚ ಭೃಗೂ ರಾಮೋ ಕೃತವ್ರಣಃ ।
ಮಧುಚ್ಛಂದೋ ವೀತಹೋತ್ರೋ ಕಷವೋ ಧೌಮ್ಯ ಆಸುರಿಃ ॥ ೪ ॥

ಜಾಬಾಲಿರ್ವೀರಸೇನಶ್ಚ ಪುಲಸ್ತ್ಯೋ ಪುಲಹಸ್ತಥಾ ।
ದುರ್ವಾಸಾಶ್ಚ ಮರೀಚಿಶ್ಚ ಹ್ಯೇಕತಶ್ಚ ದ್ವಿತಸ್ತ್ರಿತಃ ॥ ೫ ॥

ಅಂಗಿರಾ ನಾರದಶ್ಚೈವ ಪರ್ವತಃ ಕಪಿಲೋ ಮುನಿಃ ।
ಜಾತೂಕರ್ಣ್ಯೋ ಹ್ಯುತಥ್ಯಶ್ಚ ಸಂವರ್ತಶ್ಚ ವ್ಯುಗೀಸುತಃ ॥ ೬ ॥

ಶಾಂಡಿಲ್ಯಃ ಪ್ರಾಡ್ವಿಪಾಕಶ್ಚ ಕಹೋಡಃ ಸುರತೋ ಮನುಃ ।
ಕಚಃ ಸ್ಥಲಶಿರಾಶ್ಚೈವ ಸ್ಥೂಲಾಕ್ಷಃ ಪ್ರತಿಮರ್ದನಃ ॥ ೭ ॥

ಬಕದಾಲ್ಭ್ಯಶ್ಚ ಕೌಂಡಿನ್ಯೋ ರೈಭ್ಯೋ ದ್ರೋಣಃ ಕೃಪಸ್ತಥಾ ।
ಪ್ರಗಟಾಕ್ಷೋ ಯವಕ್ರೀತೋ ವಸುಧನ್ವಾ ಚ ಮಿತ್ರಭೂಃ ॥ ೮ ॥

ಅಪಾಂತರತಮೋ ದತ್ತೋ ಮಾರ್ಕಂಡೇಯೋ ಮಹಾಮುನಿಃ ।
ಜಮದಗ್ನಿಃ ಕಶ್ಯಪಶ್ಚ ಭರದ್ವಾಜಶ್ಚ ಗೌತಮಃ ॥ ೯ ॥

೪–೫. ಪೈಲ, ಸುಮಂತು, ಕಣ್ವ, ಭೃಗು, ರಾಮ, ಕೃತವ್ರಣ, ಮಧುಚ್ಛಂದ, ವೀತಹೋತ್ರ, ಕಷವ, ಧೌಮ್ಯ, ಆಸುರಿ, ಜಾಬಾಲಿ, ವೀರಸೇನ, ಪುಲಸ್ತ್ಯ, ಪುಲಹ, ದುರ್ವಾಸ, ಮರೀಚಿ, ಏಕತ, ದ್ವಿತ, ತ್ರಿತ ಇವರೂ,

೬–೭. ಅಂಗಿರ, ನಾರದ, ಪರ್ವತ, ಕಪಿಲ, ಜಾತೂಕರ್ಣಿ, ಉತಥ್ಯ, ಸಂವರ್ತ, ವ್ಯುಗೀಸುತ, ಶಾಂಡಿಲ್ಯ, ಪ್ರಾಡ್ವಿಪಾಕ, ಕಹೋಡ. ಸುರತ, ಮನು, ಕಚ, ಸ್ಥಲಶಿರ, ಸ್ಥೂಲಾಕ್ಷ, ಪ್ರತಿಮರ್ದನ,

೮–೯. ಬಕ, ದಾಲ್ಭ್ಯ, ಕೌಂಡಿನ್ಯ, ರೈಭ್ಯ, ದ್ರೋಣ, ಕೃಪ, ಪ್ರಗಟಾಕ್ಷ, ಯವಕ್ರೀತ, ವಸುಧನ್ವಾ, ಮಿತ್ರಭೂ, ಅಪಾಂತರತಮ, ದತ್ತ, ಮಾರ್ಕಂಡೇಯ, ಜಮದಗ್ನಿ, ಕಶ್ಯಪ, ಭರದ್ವಾಜ, ಗೌತಮ ಇವರೂ,

ಅತ್ರಿರ್ಮುನಿರ್ವಸಿಷ್ಠಶ್ಚ ವಿಶ್ವಾಮಿತ್ರಃ ಪತಂಜಲಿಃ ।
ಕಾತ್ಯಾಯನಿಃ ಪಾಣಿನಿಶ್ಚ ವಾಲ್ಮೀಕಾದ್ಯಾಶ್ಚ ಋತ್ವಿಜಃ ॥ ೧೦ ॥

ಪೂಜಿತಾ ಯಾದವೇಂದ್ರೇಣ ಪ್ರಸನ್ನಾಸ್ತೇಽಭವನ್ನೃಪ ।
ತತಸ್ಸರ್ವೇ ಋತ್ವಿಜಶ್ಚ ನೃಪಮೂಚುರ್ನಿಮಂತ್ರಿತಾಃ ॥ ೧೧ ॥

॥ ಮುನಯ ಊಚುಃ ॥

ಉಗ್ರಸೇನಮಹಾರಾಜ ಸುರಾಸುರನಮಸ್ಕೃತೆ ।
ಯಜ್ಞಂ ಕೃಷ್ಣಸ್ಯ ಕೃಪಯಾ ಕುರು ಸೋಽಪಿ ಭವಿಷ್ಯತಿ ॥ ೧೨ ॥

ಇತಿ ತೇಷಾಂ ವಚಃ ಶ್ರುತ್ವಾ ಪರಿತುಷ್ಟಾಖಿಲೇಂದ್ರಿಯಃ ।
ಸರ್ವಾನ್ವೈ ಕ್ರತುಸಂಭಾರಾನಾಜಹಾರಾಂಧಕೇಶ್ವರಃ ॥ ೧೩ ॥

ತತಃ ಕೃಷ್ಟ್ವಾ ಯಜ್ಞಭೂಮಿಂ ವಿಪ್ರಾಃ ಕನಕಲಾಂಗಲೈಃ ।
ಪಿಂಡಾರಕೇ ಯಥಾನ್ಯಾಯಂ ದೀಕ್ಷಯಾಂಚಕ್ರಿರೇ ನೃಪಂ ॥ ೧೪ ॥

---

೧೦. ಅತ್ರಿ, ವಸಿಷ್ಠ, ವಿಶ್ವಾಮಿತ್ರ, ಪತಂಜಲಿ, ಕಾತ್ಯಾಯನಿ, ಪಾಣಿನಿ, ವಾಲ್ಮೀಕಿ ಇವರೆಲ್ಲರೂ ಋತ್ವಿಜರಾಗಿ ನಿಯಮಿತರಾದರು.

೧೧. ರಾಜನು ಅವರೆಲ್ಲರನ್ನೂ ಪೂಜಿಸಿದನು. ಪ್ರಸನ್ನರಾದ ಅವರು ರಾಜನನ್ನು ಕುರಿತು,

೧೨. ಉಗ್ರಸೇನಮಹಾರಾಜನೇ, ನೀನು ದೇವಾಸುರರಿಂದ ನಮಸ್ಕೃತನಾದವನು. ನೀನು ಅಶ್ವಮೇಧಯಜ್ಞವನ್ನು ಮಾಡು. ಶ್ರೀಕೃಷ್ಣನ ಕೃಪೆಯಿಂದ ಅದು ನಿರ್ವಿಘ್ನವಾಗಿ ನೆರವೇರುವುದು ಎಂದರು.

೧೩. ಹೀಗೆ ಹೇಳಿದ ಮುನಿಗಳ ಮಾತನ್ನು ಕೇಳಿ ರಾಜನು ಅತಿಹರ್ಷಗೊಂಡನು. ಯಜ್ಞಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಸಿದ್ಧಮಾಡಿದನು.

೧೪. ಋತ್ವಿಜರು ಚಿನ್ನದ ನೇಗಿಲಿನಿಂದ ಯಜ್ಞಭೂಮಿಯನ್ನು ಅಗೆದು ಶುದ್ಧಿಮಾಡಿ ಪಿಂಡಾರಕವೆಂಬ ತೀರ್ಥದಲ್ಲಿ ವಿಧಿವತ್ತಾಗಿ ರಾಜನಿಗೆ ಯಜ್ಞದೀಕ್ಷೆಯನ್ನು ಕೊಡಿಸಿದರು.

ಚತುರ್ಯೋಜನಪರ್ಯಂತಂ ವಿಲಿಖ್ಯ ಬಹುಶೋ ಮಹೀಂ ।
ಯಜ್ಞಸ್ಯಾರ್ಥೇ ನೃಪಸ್ತತ್ರ ರಚಯಾಮಾಸ ಮಂಡಪಾನ್ ॥ ೧೫ ॥

ಯೋನಿಮೇಖಲಯಾ ಯುಕ್ತಂ ಮಧ್ಯೇ ಕುಂಡಂ ವಿಧಾಯ ಚ ।
ತಸ್ಮಿನ್ವೈ ಸ್ಥಾಪಯಾಮಾಸ ವಿಧಿನಾ ಜಾತವೇದಸಂ ॥ ೧೬ ॥

ರತ್ನಾನೇಕೈರ್ವಿರಚಿತಾಂ ಪತಾಕಾಭಿರ್ಯುತಾಂ ಸಭಾಂ ।
ಮಮ ವಾಕ್ಯಾದ್ವಜ್ರನಾಭೇ ರಚಯಾಮಾಸ ಚಾಹುಕಃ ॥ ೧೭ ॥

ಅಥ ದೃಷ್ಟ್ವಾ ಸಭಾಂ ಕೃಷ್ಣೋ ನಿಜಗೌ ಸ್ವಸುತಂ ಪ್ರತಿ ।

॥ ಶ್ರೀಕೃಷ್ಣ ಉವಾಚ ॥

ಪ್ರದ್ಯುಮ್ನ ಶೃಣು ಮದ್ವಾಕ್ಯಂ ತನ್ನಿಶಮ್ಯ ಕುರು ತ್ವರಂ ॥ ೧೮ ॥

ಗತ್ವಾ ಶಸ್ತ್ರಧರೈಃ ಶೂರೈರ್ಯತ್ನೇನ ಹಯಮಾನಯ ।

॥ ಗರ್ಗ ಉವಾಚ ॥

ಇತಿ ಶ್ರುತ್ವಾ ಹರೇರ್ವಾಕ್ಯಂ ಪ್ರದ್ಯುಮ್ನೋ ಧನ್ವಿನಾಂ ವರಃ ॥ ೧೯ ॥

---

೧೫. ನಾಲ್ಕುಯೋಜನ ವಿಸ್ತಾರವುಳ್ಳ ಭೂಮಿಯನ್ನು ಯಜ್ಞಕ್ಕೋಸ್ಕರ ಅಗೆಸಿದನು. ಅಲ್ಲಿ ಮಂಟಪವನ್ನು ಕಟ್ಟಿಸಿದನು.

೧೬. ಸುತ್ತಲೂ ಯೋನಿಮೇಖಲೆಯನ್ನು ರಚಿಸಿ ಮಧ್ಯೆ ಯಜ್ಞಕುಂಡವನ್ನು ನಿರ್ಮಿಸಿದನು. ಅದರಲ್ಲಿ ವಿಧಿವತ್ತಾಗಿ ಅಗ್ನಿಯನ್ನು ಪ್ರತಿಷ್ಠಿಸಿದನು.

೧೭. ವಜ್ರನಾಭಿಯೇ, ಉಗ್ರಸೇನನು ನನ್ನ ಅಪ್ಪಣೆಯಂತೆ ಆ ಯಜ್ಞ ಭೂಮಿಯ ಹತ್ತಿರ ಸಭೆಯನ್ನು ನಿರ್ಮಿಸಿದನು. ಅದು ಅನೇಕ ರತ್ನಗಳಿಂದ ರಚಿತವಾಗಿದ್ದಿತು. ಬಾವುಟಗಳು ಸಭೆಯ ಮೇಲೆ ಶೋಭಿಸುತ್ತಿದ್ದವು. ಶ್ರೀಕೃಷ್ಣನು ಇದೆಲ್ಲವನ್ನೂ ನೋಡಿ ತನ್ನ ಮಗನಾದ ಪ್ರದ್ಯುಮ್ನನನ್ನು ಕುರಿತು,

೧೮. ಎಲೈ ಪ್ರದ್ಯುಮ್ನ, ನೀನು ಜಾಗ್ರತೆಯಾಗಿ ಶಸ್ತ್ರಸಜ್ಜಿತರಾದ ಯೋಧರೊಡನೆ ಹೊರಟು ಯಜ್ಞದ ಕುದುರೆಯನ್ನು ತೆಗೆದುಕೊಂಡು ಬಾ.

೧೯. ಎಂದು ಹೇಳಲು ಪ್ರದ್ಯುಮ್ನನು ಹಾಗೆಯೇ ಆಗಲೆಂದು ಹೇಳಿ ಧನುರ್ಬಾಣಗಳನ್ನು ಧರಿಸಿ ಯಜ್ಞಾಶ್ವವನ್ನು ತರಲು ಅಶ್ವಶಾಲೆಗೆ ಹೊರಟನು.

ತಥೇತ್ಯುಕ್ತ್ವಾ ಹಯಂ ನೇತುಂ ವಾಜಿಶಾಲಾಂ ಜಗಾಮ ಹ ।
ತತಃ ಕೃಷ್ಣೇನ ರಕ್ಷಾರ್ಥಂ ಸ್ವಪುತ್ರಾಶ್ಚ ಹಯಸ್ಯ ವೈ || ೨೦ ||

ಪ್ರೇಷಿತಾ ವಾಜಿಶಾಲಾಯಾಂ ಭಾನುಸಾಂಬಾದಯೋ ನೃಪ ।
ಸ ಗತ್ವಾ ವಾಜಿಶಾಲಾಯಾಂ ರುಕ್ಮಿಣೀನಂದನೋ ಬಲೀ || ೨೧ ||

ಸ್ವರ್ಣಶೃಂಖಲಯಾ ಬದ್ಧಾನ್ ಶ್ಯಾಮಕರ್ಣಾನ್ ಸಹಸ್ರಶಃ ।
ವಿಲೋಕ್ಯೈಕಂ ಸ್ವಹಸ್ತೇನ ಯಜ್ಞಯೋಗ್ಯಂ ತುರಂಗಮಂ || ೨೨ ||

ಪ್ರಹಸನ್ಮೋಚಯಾಮಾಸ ಬಂಧನಾನ್ನೃಪ ಲೀಲಯಾ ।
ಸ ಹಯೋ ನಿರ್ಯಯೌ ಮುಕ್ತೋ ಶಾಲಾಯಾಶ್ಚ ಶನೈಃ ಶನೈಃ || ೨೩ ||

ರತ್ನಾನನೋ ಪೀತಪುಚ್ಛೋ ಶ್ಯಾಮಕರ್ಣೋ ಮನೋಹರಃ ।
ಸ್ರಗ್ಭಿರ್ಮುಕ್ತಾಫಲಾನಾಂ ಚ ಶೋಭಿತೋ ದಿವ್ಯದರ್ಶನಃ || ೨೪ ||

---

೨೦. ಅನಂತರ ಕೃಷ್ಣನು ಕುದುರೆಯ ರಕ್ಷಣೆಗೆ ತನ್ನಿತರ ಮಕ್ಕಳಾದ ಭಾನು, ಸಾಂಬ ಮೊದಲಾದವರನ್ನೂ ಅಶ್ವಶಾಲೆಗೆ ಕಳುಹಿಸಿದನು.

೨೧-೨೨. ಪ್ರದ್ಯುಮ್ನನು ಅಶ್ವಶಾಲೆಗೆ ಹೋಗಿ ಚಿನ್ನದ ಸರಪಳಿಗಳಿಂದ ಕಟ್ಟಿರುವ ಸಾವಿರಾರು ಕಪ್ಪುಕಿವಿಯ ಕುದುರೆಗಳನ್ನು ನೋಡಿದನು. ಅವುಗಳಲ್ಲಿ ಯಜ್ಞಯೋಗ್ಯವಾದ ಕುದುರೆಯೊಂದನ್ನು ಆರಿಸಿ ಹಿಡಿದುಕೊಂಡನು.

೨೩. ಆಮೇಲೆ ನಗುತ್ತಾ ಆ ಕುದುರೆಯ ಸರಪಳಿಯನ್ನು ಬಿಚ್ಚಿದನು. ಅದು ಅಶ್ವಶಾಲೆಯಿಂದ ನಿಧಾನವಾಗಿ ಆಚೆಗೆ ತೆರಳಿತು.

೨೪. ಅದರ ಮುಖವು ರತ್ನದಂತೆ ಹೊಳೆಯುತ್ತಿದ್ದಿತು. ಅದರ ಕಿವಿಯು ಕಪ್ಪಾಗಿಯೂ, ಮನೋಹರವಾಗಿಯೂ ಇದ್ದಿತು. ಮುತ್ತಿನ ಹಾರಗಳಿಂದಲೂ, ಹೂಮಾಲಿಕೆಗಳಿಂದಲೂ ಅದನ್ನು ಅಲಂಕರಿಸಿದ್ದರು. ಆಗ ನೋಡುವುದಕ್ಕೆ ರಮ್ಯವಾಗಿ ಕಾಣಿಸುತ್ತಿತ್ತು.

ಶ್ವೇತಾತಪತ್ರೇಣ ಯುತೋ ಚಾಮರೈಸ್ಸಮಲಂಕೃತಃ ।
ಅಗ್ರತೋ ಮಧ್ಯತಶ್ಚೈವ ಪೃಷ್ಠತಶ್ಚ ಹರೇಸ್ಸುತಾಃ ॥ ೨೫ ॥

ಸೇವಂತೇ ಹರಿರಾಜಂ ವೈ ಸುರಾಸ್ಸರ್ವೇ ಹರಿಂ ಯಥಾ ।
ತಥಾನ್ಯೈ ರಕ್ಷಮಾಣಸ್ತು ಮಂಡಲೇಶೈಸ್ತುರಂಗಮಃ ॥ ೨೬ ॥

ಪ್ರಾಪ್ತೋಽಥ ಮಂಡಪಂ ಕುರ್ವನ್ ಖುರಾಕ್ಷತತಲಾಂ ಮಹೀಂ ।
ನೃಪೋ ವೀಕ್ಷ್ಯಾಗತಂ ತತ್ರ ಶ್ಯಾಮಕರ್ಣಂ ಮುದಾನ್ವಿತಃ ॥ ೨೭ ॥

ಪ್ರೇಷಯಾಮಾಸ ಮಾಂ ರಾಜನ್ ಕ್ರಿಯಾ ಕರ್ತವ್ಯತಾಂ ಪ್ರತಿ ।
ಸೋಽಹಂ ನೃಪಂ ಚ ಸಂಸ್ಥಾಪ್ಯ ರುಚಿಮತ್ಯಾ ಸಮನ್ವಿತಂ ॥ ೨೮ ॥

---

೨೫. ಅದಕ್ಕೆ ಶ್ವೇತಚ್ಛತ್ರವನ್ನು ಹಿಡಿದಿದ್ದರು. ಚಾಮರಗಳಿಂದ ಅದನ್ನು ಬೀಸುತ್ತಿದ್ದರು. ಅದರ ಮುಂಭಾಗ, ಮಧ್ಯೆ, ಹಿಂಭಾಗಗಳಲ್ಲಿ ಕೃಷ್ಣನ ಮಕ್ಕಳು ನಿಂತಿದ್ದರು.

೨೬. ದೇವತೆಗಳೂ ಸಹ, ಇಂದ್ರನನ್ನು ಸೇವಿಸುವಂತೆ ಆ ಕುದುರೆಯನ್ನು ಸೇವಿಸುತ್ತಿದ್ದರು. ಇನ್ನೂ ಅನೇಕ ರಾಜರು ಕುದುರೆಯ ಸುತ್ತಮುತ್ತಲೂ ಇದ್ದು ಅದನ್ನು ಕಾಪಾಡುತ್ತಿದ್ದರು.

೨೭. ಆ ಕುದುರೆಯು ತನ್ನ ಕಾಲ್ಗೊರಸುಗಳಿಂದ ನೆಲವನ್ನು ಕೀಳುತ್ತಾ ಯಜ್ಞಮಂಟಪಕ್ಕೆ ಬಂದು ಸೇರಿತು. ಅದನ್ನು ನೋಡಿ ಉಗ್ರಸೇನನು ಆನಂದಪಟ್ಟನು.

೨೮. ಅನಂತರ ನನ್ನನ್ನು ಮುಂದೆ ಮಾಡತಕ್ಕ ಕರ್ಮಗಳಿಗೋಸ್ಕರವಾಗಿ ನಿಯಮಿಸಿದನು. ನಾನು ರುಚಿಮತಿಯೊಡಗೂಡಿದ ರಾಜನಿಗೆ ಪಿಂಡಾರಕಕ್ಷೇತ್ರದಲ್ಲಿ ವಿಧಿವತ್ತಾಗಿ ಪ್ರಯೋಗಮಾಡಿಸಿ ಯಜ್ಞದೀಕ್ಷೆಯನ್ನು ಕೊಡಿಸಿದೆನು.

ಪಿಂಡಾರಕೇ ಪ್ರಯೋಗಂ ವೈ ಕಾರಯಾಮಾಸ ಧರ್ಮತಃ ।
ನೃಪಶ್ಚೈತ್ರೇ ಪೂರ್ಣಿಮಾಯಾಂ ದೀಕ್ಷಿತೋಽಜಿನಸಂವೃತಃ ॥ ೨೯ ॥

ಅಸಿಪತ್ರವ್ರತಂ ರಾಜನ್ ಸ ಚಕಾರ ಮದಾಜ್ಞಯಾ ।
ಅಹಂ ತು ಯಾದವೇಂದ್ರಸ್ಯ ಕುಲಪೂರ್ವಗುರುರ್ಮುನಿಃ ॥ ೩೦ ॥

ಸರ್ವೇಷಾಂ ಚೈವ ವಿಪ್ರಾಣಾಮಾಚಾರ್ಯೋಽಭವಂ ನೃಪ ।
ಅಥ ವಿಪ್ರಾ ಬ್ರಹ್ಮಘೋಷೈಃ ಶ್ರೀಕೃಷ್ಣಸ್ಯಾಜ್ಞಯಾ ಸ್ಥಿತಾಃ ॥ ೩೧ ॥

ಸರ್ವಾಃ ಪ್ರಪೂಜಯಾಮಾಸುರ್ಹೇರಂಬಾದೀನ್ಸುರಾನ್ಪೃಥಕ್ ।
ತತಸ್ಸರ್ವೇ ಮುನಿಗಣಾಃ ಸಂಸ್ಥಾಪ್ಯ ತುರುಗಂ ನೃಪ ॥
ಕಾಶ್ಮೀರಚಂದನೇನಾಪಿ ಪುಷ್ಪಸ್ರಗ್ಭಿಶ್ಚ ತಂಡುಲೈಃ ॥ ೩೨ ॥

ನೀರಾಜನಾದಿಭಿರ್ಧೂಪೈಃ ಸುಧಾಕುಂಡಲಕಾದಿಭಿಃ ।
ಪೂಜಯಿತ್ವಾ ಹಯಂ ಭೂಪ ದಾನಾರ್ಥೇ ತು ಹ್ಯನೋದಯನ್ ॥ ೩೩ ॥

---

೨೯. ಚೈತ್ರಮಾಸದ ಪೂರ್ಣಿಮೆಯ ದಿವಸ ರಾಜನು ಕೃಷ್ಣಾಜಿನವನ್ನು ಧರಿಸಿ ದೀಕ್ಷಿತನಾದನು. ಅಂದಿನಿಂದಲೇ ನನ್ನಾಜ್ಞೆಯಂತೆ ಅಸಿಪತ್ರವ್ರತವನ್ನು (ಏಕಶಯನದಲ್ಲಿ ಪತ್ನಿಯೊಡನೆ ಮಲಗಿ ನೈಷ್ಠಿಕಬ್ರಹ್ಮಚರ್ಯವನ್ನು ಪಾಲಿಸುವುದು) ಪ್ರಾರಂಭಿಸಿದನು.

೩೦. ನಾನು ಉಗ್ರಸೇನನಿಗೆ ಕುಲಕ್ರಮವಾಗಿ ಬಂದ ಗುರುವು. ಇಂತಹ ನಾನು ಈಗ ಅಲ್ಲಿಗೆ ಬಂದ ಬ್ರಾಹ್ಮಣರಿಗೆಲ್ಲಾ ಆಚಾರ್ಯನಾದೆನು.

೩೧. ಕೃಷ್ಣನು ಪ್ರಾರಂಭಮಾಡಿರೆಂದು ಹೇಳಲು ಬ್ರಾಹ್ಮಣರೆಲ್ಲರೂ ವೇದ ಘೋಷವನ್ನು ಮಾಡುತ್ತಾ ಗಣಪತಿಯೇ ಮುಂತಾದ ದೇವತೆಗಳನ್ನು ಪೂಜಿಸಿದರು.

೩೨-೩೩. ಋಷಿಗಳೆಲ್ಲರೂ ಕುದುರೆಯನ್ನು ಪೂಜಿಸಿದರು. ಅದರ ಹಣೆಗೆ ಕುಂಕುಮ-ಚಂದನದ ತಿಲಕವನ್ನಿಟ್ಟರು. ಹೂವಿನಹಾರಗಳನ್ನು ಹಾಕಿದರು. ಧೂಪ, ದೀಪ, ನೈವೇದ್ಯಗಳಿಂದ ಅದನ್ನು ಪೂಜಿಸಿ ಅನಂತರ ದಾನವನ್ನು ಕೊಡಲು ರಾಜನಿಗೆ ಹೇಳಿದರು.

ತತಃ ಶ್ರುತ್ವಾಹುಕಃ ಶೀಘ್ರಂ ಪೂರ್ವಂ ಮಹ್ಯಂ ದದೌ ಧನಂ ।
ಏಕಲಕ್ಷಂ ತುರಂಗಾಣಾಂ ಸಹಸ್ರಂ ಹಸ್ತಿನಾಂ ತಥಾ ॥ ೩೪ ॥

ದ್ವಿಸಹಸ್ರಂ ರಥಾನಾಂ ಚ ಧೇನೂನಾಂ ಲಕ್ಷಮೇವ ಚ ।
ಶತಭಾರಸುವರ್ಣಾನಾಮಿದೃಶೀಂ ದಕ್ಷಿಣಾಂ ನೃಪ ॥ ೩೫ ॥

ನಿಮಂತ್ರಿತೇಭ್ಯೋ ವಿಪ್ರೇಭ್ಯ ಉಗ್ರಸೇನೋ ನೃಪಸ್ತತಃ ।
ಯಥೋಕ್ತಾಂ ದಕ್ಷಿಣಾಂ ರಾಜನ್ ಪ್ರದದೌ ತಾಂ ಚ ತ್ವಂ ಶೃಣು ॥ ೩೬ ॥

ಘೋಟಕಾನಾಂ ಸಹಸ್ರಂ ಚ ದ್ವಿಪಾನಾಂ ಶತಮೇವ ಚ ।
ರಥಾನಾಂ ದ್ವಿಶತಂ ಚೈವ ಸಹಸ್ರಂ ಚ ಗವಾಂ ತಥಾ ॥ ೩೭ ॥

ವಿಂಶದ್ಭಾರಂ ಚ ಹೇಮಾನಾಮಿದೃಶೀಂ ದಕ್ಷಿಣಾಂ ಪುನಃ ।
ಅಥಾಗತೇಭ್ಯೋ ವಿಪ್ರೇಭ್ಯೋ ನತ್ವಾ ರಾಜಾ ವಿಧಾನತಃ ॥ ೩೮ ॥

ಗಜಮೇಕಂ ರಥಂ ಗಾಂ ಚ ಸ್ವರ್ಣಭಾರಂ ಚ ಘೋಟಕಂ ।
ಏಕೈಕಸ್ಮೈ ಚ ವಿಪ್ರಾಯ ದಕ್ಷಿಣಾಂ ಪ್ರದದೌ ನೃಪಃ ॥ ೩೯ ॥

೩೪–೩೫. ಆಗ ರಾಜನು ಮೊದಲು ನನಗೆ ಒಂದು ಲಕ್ಷ ಕುದುರೆಗಳನ್ನೂ, ಒಂದು ಸಹಸ್ರ ಆನೆಗಳನ್ನೂ, ಎರಡು ಸಾವಿರ ರಥಗಳನ್ನೂ, ಒಂದು ಲಕ್ಷ ಹಸುಗಳನ್ನೂ, ನೂರುಭಾರ ಚಿನ್ನವನ್ನೂ ದಾನಮಾಡಿದನು.

೩೬. ಆ ಮೇಲೆ ಅಲ್ಲಿಗೆ ನಿಮಂತ್ರಿತರಾಗಿದ್ದ ಬ್ರಾಹ್ಮಣರಿಗೆಲ್ಲಾ ಉಗ್ರಸೇನ ಮಹಾರಾಜನು ದಕ್ಷಿಣೆಯನ್ನು ಕೊಟ್ಟನು. ಅದನ್ನು ಹೇಳುವೆನು ಕೇಳು.

೩೭. ಒಂದು ಸಾವಿರ ಕುದುರೆಗಳನ್ನೂ, ನೂರು ಆನೆಗಳನ್ನೂ, ಇನ್ನೂರು ರಥಗಳನ್ನೂ, ಸಹಸ್ರ ಗೋವುಗಳನ್ನೂ, ಇಪ್ಪತ್ತುಭಾರ ಚಿನ್ನವನ್ನೂ ಕೊಟ್ಟನು.

೩೮–೩೯. ಋತ್ವಿಜರಲ್ಲದೆ ಅಲ್ಲಿಗೆ ಬಂದಿದ್ದ ಅನೇಕ ಬ್ರಾಹ್ಮಣರಿಗೆಲ್ಲಾ ರಾಜನು ಪ್ರತಿಯೊಬ್ಬರಿಗೂ ಒಂದು ಆನೆ, ಒಂದು ರಥ, ಒಂದುಭಾರ ಸುವರ್ಣ, ಒಂದು ಅಶ್ವ ಇವುಗಳನ್ನು ಕೊಟ್ಟನು.

ಏವಂ ಕೃತ್ವಾ ತು ದಾನಂ ವೈ ಲಲಾಟೇ ತುರಗಸ್ಯ ಚ ।
ಕಮನೀಯೇ ಕುಂಕುಮಾಕ್ತೇ ಸ್ವರ್ಣಪತ್ರಂ ಬಬಂಧ ಹ ॥ ೪೦ ॥

ತತ್ರಾಹಮುಗ್ರಸೇನಸ್ಯ ಪ್ರತಾಪಂ ವೀರ್ಯಮೂರ್ಜಿತಂ ।
ತತೋಽಲಿಖಂ ಸಭಾಯಾಂ ವೈ ಯಾದವಾನಾಂ ಚ ಪಶ್ಯತಾಂ ॥ ೪೧ ॥

ಚಂದ್ರವಂಶೇ ಯದುಕುಲೇ ಉಗ್ರಸೇನೋ ವಿರಾಜತಿ ।
ಇಂದ್ರಾದಯಸ್ಸುರಗಣಾ ಯಸ್ಯಾದೇಶಾನುವರ್ತಿನಃ ॥ ೪೨ ॥

ಸಹಾಯೋ ಯಸ್ಯ ಭಗವಾನ್ ಶ್ರೀಕೃಷ್ಣೋ ಭಕ್ತಪಾಲಕಃ ।
ಅಸ್ತಿ ವೈ ದ್ವಾರಕಾಪುರ್ಯಾಂ ತದ್ಭಕ್ತ್ಯಾ ನಿವಸನ್ ಹರಿಃ ॥ ೪೩ ॥

ತದ್ವಾಕ್ಯಾದ್ಧಯಮೇಧಂ ಸ ಉಗ್ರಸೇನೋ ನೃಪೇಶ್ವರಃ ।
ಚಕ್ರವರ್ತೀ ಹಠಾದ್ಯಜ್ಞಂ ಸ್ವಯಶೋರ್ಥೇ ಕರೋತಿ ಹ ॥ ೪೪ ॥

---

೪೦. ಈ ರೀತಿ ದಕ್ಷಿಣೆಯನ್ನು ಕೊಟ್ಟನಂತರ ಉಗ್ರಸೇನನು ಕುಂಕುಮವನ್ನು ಇಟ್ಟು ಮನೋಹರವಾಗಿರುವ ಆ ಕುದುರೆಯ ಹಣೆಗೆ ಚಿನ್ನದ ತಗಡನ್ನು ಕಟ್ಟಿದನು.

೪೧. ನಾನು ಆ ತಗಡಿನ ಮೇಲೆ ಉಗ್ರಸೇನನ ಕುಲ-ಪ್ರತಾಪ ಮುಂತಾದುವುಗಳನ್ನು ಆ ಸಭೆಯಲ್ಲಿ ಯಾದವರ ಮುಂಭಾಗದಲ್ಲಿ ನಿಂತು ಇಂತು ಬರೆದೆನು-

೪೨. ಯದುಕುಲದಲ್ಲಿ ಚಂದ್ರವಂಶಸಂಭೂತನಾದ ಉಗ್ರಸೇನನೆಂಬ ರಾಜನು ಪ್ರಸಿದ್ಧನಾಗಿ ಮೆರೆಯುತ್ತಿರುವನು. ಇಂದ್ರಾದಿ ದೇವತೆಗಳೂ ಸಹ ಅವನಾಜ್ಞೆಯಂತೆ ನಡೆಯುವರು.

೪೩. ಭಕ್ತಪರಾಧೀನನಾದ ಶ್ರೀಕೃಷ್ಣನೂ ಅವನಿಗೆ ಸಹಾಯಕನಾಗಿ ನಿಂತಿರುವನು. ದ್ವಾರಕೆಯಲ್ಲಿ ರಾಜ್ಯವಾಳುತ್ತಿರುವನು. ರಾಜನ ಭಕ್ತಿಗೆ ವಶನಾಗಿ ಕೃಷ್ಣನೂ ಅಲ್ಲಿಯೇ ಇರುವನು.

೪೪. ಆ ಕೃಷ್ಣನ ಮಾತಿನಂತೆ ಉಗ್ರಸೇನಮಹಾರಾಜನು ತನ್ನ ಕೀರ್ತಿಯು ಎಲ್ಲ ಕಡೆಗೂ ಹರಡಲೆಂದು ಅಶ್ವಮೇಧಯಜ್ಞವನ್ನು ಮಾಡುವನು.

ಮೋಚಿತಾಸ್ತೇನ ತುರಗೋ ಹಯಾನಾಂ ಪ್ರವರಃ ಶುಭಃ ।
ತದ್ರಕ್ಷಕಃ ಕೃಷ್ಣಪೌತ್ರೋಽನಿರುದ್ಧೋ ವೃಕದೈತ್ಯಹಾ ॥ ೪೫ ॥

ಗಜಾಶ್ವರಥವೀರಾಣಾಂ ಸೇನಾಸಂಘಸಮನ್ವಿತಃ ।
ರಾಜಾನೋ ಯೇ ಕರಿಷ್ಯಂತಿ ರಾಜ್ಯಂ ಕೌ ಶೂರಮಾನಿನಃ ॥ ೪೬ ॥

ತೇ ಗೃಹ್ಣಂತು ಯಜ್ಞಹಯಂ ಸ್ವಬಲಾತ್ಪತ್ರಶೋಭಿತಂ ।
ತಂ ಮೋಚಯತಿ ಧರ್ಮಾತ್ಮಾ ಗೃಹೀತಂ ಚ ಹಯಂ ನೃಪೈಃ ॥ ೪೭ ॥

ಸ್ವಬಾಹುಬಲವೀರ್ಯೇಣಾನಿರುದ್ಧೋ ಲೀಲಯಾ ಹಠಾತ್ ।
ತಸ್ಯಾನ್ಯಥಾ ಚ ಪದಯೋಃ ಪತಿತ್ವಾ ಯಾಂತು ಧನ್ವಿನಃ ॥ ೪೮ ॥

ಇತಿ ಪತ್ರೇ ಚ ಲಿಖಿತೇ ದಧ್ಮುಃ ಶಂಖಾನ್ಯದೂತ್ತಮಾಃ ।
ಕಾಂಸ್ಯತಾಲಮೃದಂಗಾದ್ಯಾ ನೇದುರ್ಭೇರ್ಯಶ್ಚ ಗೋಮುಖಾಃ ॥ ೪೯ ॥

---

೪೫. ಅದಕ್ಕೋಸ್ಕರ ಈ ಕುದುರೆಯನ್ನು ಬಿಟ್ಟಿರುವುದು. ಇದನ್ನು ರಕ್ಷಿಸಲು ವೃಕಾಸುರನನ್ನು ನಾಶಪಡಿಸಿದ ಕೃಷ್ಣನ ಮೊಮ್ಮಗನಾದ ಅನಿರುದ್ಧನು ಹೊರಟಿರುವನು.

೪೬–೪೭. ಆನೆ, ಕುದುರೆ, ರಥ, ಕಾಲಾಳುಗಳೆಂಬ ಚತುರಂಗ ಸೇನಾಸಮೇತ ರಾಗಿ ಭೂಮಿಯನ್ನು ಪರಿಪಾಲಿಸುತ್ತಿರುವ ಶೂರರಾದ ಯಾವ ರಾಜನಾದರೂ ಈ ಯಜ್ಞಾಶ್ವವನ್ನು ಹಿಡಿದುಕೊಳ್ಳಬಹುದು. ಆಗ ರಕ್ಷಕನಾದ ಅನಿರುದ್ಧನು ಅಂಥವರಿಂದ ಈ ಅಶ್ವವನ್ನು ಬಿಡಿಸಲು ಸಿದ್ಧನಾಗಿರುವನು.

೪೮. ತನ್ನ ಭುಜಪರಾಕ್ರಮದಿಂದ ಅಂಥವರೊಡನೆ ಹೋರಾಡಿ ಅನಾಯಾಸ ವಾಗಿ ಕುದುರೆಯನ್ನು ಬಿಡಿಸುವನು. ಹಾಗೆ ಆ ಕುದುರೆಯನ್ನು ಹಿಡಿದು ಕೊಳ್ಳಲು ಅಸಮರ್ಥರಾದವರು ಅನಿರುದ್ಧನ ಕಾಲ್ಗಳಿಗೆ ನಮಸ್ಕರಿಸಿ ಸುಮ್ಮ ನಾಗಬೇಕು.

೪೯. ಈ ರೀತಿ ನಾನು ಅಶ್ವದ ಲಲಾಟದಲ್ಲಿ ಕಟ್ಟಿರುವ ಚಿನ್ನದ ತಗಡಿನ ಮೇಲೆ ಬರೆಯಲು ಕಾಂಸ್ಯ, ತಾಳ, ಮೃದಂಗ, ಶಂಖ, ಭೇರಿ, ಗೋಮುಖ, ಮುಂತಾದ ವಾದ್ಯಗಳು ಮೊಳಗಿದವು.

ಮಂಗಲಾನಿ ಚರಿತ್ರಾಣಿ ಶ್ರೀಕೃಷ್ಣಬಲದೇವಯೋಃ ।
ಗಂಧರ್ವಾಸ್ತತ್ರ ಗಾಯಂತಿ ನನೃತುರಪ್ಸರಸೋ ಮುದಾ ॥ ೫೦ ॥

ಅಥಾನಿರುದ್ಧಂ ತುರಗಸ್ಯ ಪಾಲನೇ
ಭೂತ್ವಾ ಪ್ರಸನ್ನಃ ಕಿಲ ಕಾರ್ಷ್ಣಿನಂದನಂ ।
ಸಮಾದಿದೇಶಾಚ್ಯುತ ಏವ ಸಂಸ್ಥಿತಂ
ಯದೂತ್ತಮಾನಾಮಧಿಪಸ್ಯ ಪಶ್ಯತಃ ॥ ೫೧ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಏಕಾದಶೋಽಧ್ಯಾಯಃ

---

೫೦. ಗಂಧರ್ವರು ಮಂಗಳಗಳನ್ನೂ ಶ್ರೀಕೃಷ್ಣಬಲರಾಮರ ಚರಿತ್ರೆಯನ್ನೂ ಗಾಯನಮಾಡಿದರು. ಅಪ್ಸರೆಯರು ಆನಂದದಿಂದ ನರ್ತಿಸಿದರು.

೫೧. ಅನಂತರ ಕೃಷ್ಣನು ಉಗ್ರಸೇನನ ಮತ್ತು ಯಾದವರ ಮುಂಭಾಗದಲ್ಲಿ ಪ್ರಸನ್ನನಾಗಿ ನಿಂತಿರುವ ತನ್ನ ಮೊಮ್ಮಗನಾದ ಅನಿರುದ್ಧನನ್ನು ಕುದುರೆಯನ್ನು ರಕ್ಷಿಸಿಕೊಂಡು ಬರುವಂತೆ ಅಪ್ಪಣೆ ಮಾಡಿದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹನ್ನೊಂದನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ದ್ವಾದಶೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಅಥ ರಾಜಾ ಕುಶಸ್ಥಲ್ಯಾಂ ಪೂಜಯಿತ್ವಾ ತುರಂಗಮಂ ।
ಮುಮೋಚ ಬ್ರಹ್ಮಘೋಷೇಣ ವಿಧಿನಾ ಬದ್ಧಚಾಮರಂ ॥ ೧ ॥

ಸುಧಾಕುಂಡಲಕಾಃ ಸೋಽಪಿ ಭುಕ್ತ್ವಾ ತುರಗರಾಟ್ತತಃ ।
ನಿರ್ಯಯೌ ಸ್ವರ್ಣಮಾಲಾಭಿಃ ಶೋಭಿತಃ ಕುಂಕುಮೇನ ಚ ॥ ೨ ॥

ರಕ್ಷಣಾರ್ಥಂ ಹಯಸ್ಯಾರ್ಥೇ ಚಾದರೇಣ ನೃಪೇಶ್ವರಃ ।
ಅನಿರುದ್ಧಂ ವೃಕಹಣಮೂಚೇ ರಕ್ಷಾರ್ಥಮುದ್ಯತಂ ॥ ೩ ॥

ಹನ್ನೆರಡನೆಯ ಅಧ್ಯಾಯವು

೧. ಗರ್ಗಮುನಿಯು ಹೇಳಿದನು :—ವಜ್ರನಾಭಿಯೇ, ಆಮೇಲೆ ಉಗ್ರಸೇನನು ಯಜ್ಞಾಶ್ವವನ್ನು ಪೂಜಿಸಿ ವೇದಘೋಷದೊಡನೆ ಅದನ್ನು ಬಿಟ್ಟನು.

೨. ಕುದುರೆಯು ಹುಲ್ಲುಗರಿಕೆಗಳನ್ನು ತಿಂದು ಅಲ್ಲಿಂದ ಹೊರಟಿತು. ಅದು ಚಿನ್ನದ ಹಾರಗಳಿಂದ ಶೋಭಿಸುತ್ತಿತ್ತು. ಅದರ ತಲೆಯಮೇಲೆ ಚಾಮರಗಳನ್ನು ಕಟ್ಟಿದ್ದರು. ಹಣೆಯಲ್ಲಿ ಕುಂಕುಮವು ರಂಜಿಸುತ್ತಿತ್ತು.

೩. ಆಗ ರಾಜನು ಯಜ್ಞಾಶ್ವದ ರಕ್ಷಣೆಗೆ ನಿಯುಕ್ತನಾಗಿರುವ ವೃಕನಾಶಕನಾದ ಅನಿರುದ್ಧನನ್ನು ಕುರಿತು ಇಂತು ಹೇಳಿದನು.

ಶ್ರೀಕೃಷ್ಣಪೌತ್ರ ಪ್ರಾದ್ಯುಮ್ನೇ ತ್ವಯಾ ಯತ್ಕಥಿತಂ ವಚಃ ।
ಪಾಲನಾರ್ಥೇ ತುರಂಗಸ್ಯ ಸ್ವೇಚ್ಛಯಾ ತತ್ಕುರು ತ್ವರಂ ॥ ೪ ॥

ಮದ್ರಾಜಸೂಯೇ ಪೂರ್ವಂ ವೈ ಪ್ರದ್ಯುಮ್ನೇನ ಜಿತಾ ಮಹೀ ।
ತ್ವಂ ತು ಶೂರೋಽಸಿ ಬಲವಾನ್ ಧನ್ವೀ ತಸ್ಯಾತ್ಮಜೋ ಮಹಾನ್ ॥ ೫ ॥

ವೃಕಸ್ತು ಶಕುನೇರ್ಭ್ರಾತಾ ಮಹಾದೈತ್ಯೋ ಹತಸ್ತ್ವಯಾ ।
ರಾಜಾನಶ್ಚ ಜಿತಾಃ ಸರ್ವೇ ಭೀಷ್ಮೋ ಯುದ್ಧೇ ಹಿ ತೋಷಿತಃ ॥ ೬ ॥

ಅಹೋ ಮೃಗಾಂಕಲೋಕೇಶೌ ಯಸ್ಮಿನ್ ಸಂಲೀನತಾಂ ಗತೌ ।
ತಸ್ಮಾತ್ತ್ವಾಂ ಋಷಯಸ್ಸರ್ವೇ ಪರಿಪೂರ್ಣಂ ವದಂತಿ ಹಿ ॥ ೭ ॥

ತಸ್ಮಾತ್ಪಾಲಯ ತ್ವಂ ವೀರ ಸೇನಯಾ ಚ ಪರೀವೃತಃ ।
ರಾಜನ್ಯೇಭ್ಯಶ್ಚ ಸರ್ವೇಭ್ಯೋ ಹಯಮೇಧತುರಂಗಮಂ ॥ ೮ ॥

---

೪. ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನೇ, ನೀನು ಯಜ್ಞಾಶ್ವರಕ್ಷಣೆಯ ವಿಷಯದಲ್ಲಿ ಏನನ್ನು ಹೇಳಿರುವೆಯೋ ಆ ಮಾತುಗಳನ್ನೆಲ್ಲಾ ಉಳಿಸಿಕೊಂಡು ಸ್ವೇಚ್ಛೆಯಾಗಿ ಕಾರ್ಯಪ್ರವೃತ್ತನಾಗು.

೫ ನಾನು ಹಿಂದೆ ರಾಜಸೂಯಯಾಗವನ್ನು ಮಾಡಿದಾಗ ನಿನ್ನ ತಂದೆಯಾದ ಪ್ರದ್ಯುಮ್ನನು ಅಖಿಲಭೂಮಂಡಲವೆಲ್ಲವನ್ನೂ ಜಯಿಸಿದನು. ಅಂತಹ ಶೂರನ ಮಗನು ನೀನು. ನೀನೂ ಪರಾಕ್ರಮಿಯೂ ಒಳ್ಳೆಯ ಧನುರ್ಧಾರಿಯೂ.

೬. ವೃಕಾಸುರನೆಂಬುವನು ಶಕುನಿಯ ಸಹೋದರನು. ಅಂಥವನನ್ನೂ ನೀನು ಕೊಂದುಹಾಕಿದೆ. ರಾಜರುಗಳನ್ನೆಲ್ಲಾ ಗೆದ್ದಿರುವೆ. ನಿನ್ನ ಯುದ್ಧದಲ್ಲಿ ಭೀಷ್ಮಾಚಾರ್ಯನೂ ಸಂತೋಷಪಟ್ಟಿರುವನು.

೭. ಚಂದ್ರನೂ ಮತ್ತು ವಿಷ್ಣುವೂ ನಿನ್ನಲ್ಲಿ ಲೀನರಾಗಿರುವರಾದ್ದರಿಂದ ಋಷಿಗಳೆಲ್ಲರೂ ನಿನ್ನನ್ನು ಪರಿಪೂರ್ಣನೆಂದು ಹೇಳುವರು.

೮. ಆದುದರಿಂದ ಎಲೈ ವೀರನೇ, ನೀನು ಸೇನಾಸಮೇತನಾಗಿ ಹೊರಟು ಎಲ್ಲಾ ರಾಜರುಗಳಿಂದಲೂ ಯಜ್ಞಾಶ್ವವನ್ನು ರಕ್ಷಿಸು.

ಅರ್ಭಕಾನ್ವಿರಥಾನ್ಭೀತಾನ್ ಪ್ರಪನ್ನಾನ್ ದೀನಮಾನಸಾನ್ ।
ಸುಪ್ತಾನ್ಪ್ರಮತ್ತಾನುನ್ಮತ್ತಾನ್ ರಣೇ ತಾನ್ಮಾ ನಿಪಾತಯ ॥ ೯ ॥

ಶ್ರೀಕೃಷ್ಣಸ್ಯ ಪ್ರತಾಪೇನ ನಿರ್ವಿಘ್ನಂ ತೇಽಸ್ತು ಕಾರ್ಷ್ಣಿಜ ।
ಸಾಶ್ವಸ್ತ್ವಂ ಪುನರಾಗಚ್ಛ ಕುಶಲೀ ಸೇನಯಾನ್ವಿತಃ ॥ ೧೦ ॥

॥ ಗರ್ಗ ಉವಾಚ ॥

ತತಃ ಶ್ರುತ್ವಾನಿರುದ್ಧಸ್ತು ನೃಪಸ್ಯ ವಚನಂ ಶುಭಂ ।
ತಥೇತ್ಯುಕ್ತ್ವಾ ಹಯಸ್ಯಾಪಿ ಪಾಲನಾರ್ಥಂ ಮನೋ ದಧೇ ॥ ೧೧ ॥

ಅಥಾನಿರುದ್ಧಂ ತೇ ವಿಪ್ರಾಃ ಕೃಷ್ಣಚಂದ್ರಾಜ್ಞಯಾ ತ್ವರಂ ।
ತಂ ಮಂತ್ರೈಃ ಸ್ಥಾಪಯಿತ್ವಾ ಚ ಪೂಜಾಂ ಚಕ್ರುರ್ಮುದಾನ್ವಿತಾಃ ॥ ೧೨ ॥

ಅನಿರುದ್ಧಸ್ಯ ತಿಲಕಂ ಕೃತ್ವಾ ರಾಜಾ ವಿಧಾನತಃ ।
ಬಲಿಂ ದತ್ವಾ ಚ ಯುದ್ಧಾಯ ಕರವಾಲಂ ದದೌ ತತಃ ॥ ೧೩ ॥

---

೯. ಏನಾದರೂ ಯುದ್ಧವೊದಗಲು ಆಗ ಹುಡುಗರು, ವಿರಾಗಿಗಳು, ಹೆದರಿರುವವರು, ಶರಣಾಗತಿಹೊಂದಿರುವವರು, ಗತಿಯಿಲ್ಲದವರು, ಮಲಗಿರುವವರು, ಮೂರ್ಛಿತರಾದವರು, ಹುಚ್ಚರು ಇವರುಗಳನ್ನು ಮಾತ್ರ ಕೊಲ್ಲಬೇಡ.

೧೦. ಶ್ರೀಕೃಷ್ಣನ ಮಹಿಮೆಯಿಂದ ನಿನ್ನ ಯಾತ್ರೆಯು ನಿರ್ವಿಘ್ನವಾಗಿ ನೆರವೇರಲಿ. ನಿನಗೆ ಮಂಗಳವುಂಟಾಗಲಿ. ಪುನಃ ನೀನು ಯಜ್ಞಾಶ್ವಸಹಿತನಾಗಿ ಸೇನೆಯೊಡನೆ ಕ್ಷೇಮದಿಂದ ಹಿಂತಿರುಗು.

೧೧. ಎಂದು ಹೇಳಲು ಅನಿರುದ್ಧನು ಹಾಗೆಯೇ ಆಗಲೆಂದು ಹೇಳಿ ಯಜ್ಞಾಶ್ವರಕ್ಷಣೆಗೆ ಹೊರಡಲು ಸಿದ್ಧನಾದನು.

೧೨. ಬ್ರಾಹ್ಮಣರೆಲ್ಲರೂ ಕೃಷ್ಣನ ಆಜ್ಞೆಯಂತೆ ಅನಿರುದ್ಧನನ್ನು ಮಂತ್ರಪೂತವಾದ ನೀರಿನಿಂದ ಸ್ನಾನಮಾಡಿಸಿದರು. ಅವನನ್ನು ಕುಳ್ಳಿರಿಸಿ ಪೂಜಿಸಿದರು.

೧೩. ಉಗ್ರಸೇನನು ಅನಿರುದ್ಧನ ಹಣೆಗೆ ತಿಲಕವನ್ನು ತಿದ್ದಿದನು. ಯುದ್ಧಬಲಿಯನ್ನು ಹಾಕಿ ಅವನ ಕೈಗೆ ಕತ್ತಿಯನ್ನು ಕೊಟ್ಟನು.

ಶೂರೋ ದದೌ ರತ್ನಮಾಲಾಂ ತಸ್ಮೈ ಶೌರಿಶ್ಚ ಕುಂಡಲೇ ।
ಬಲದೇವಶ್ಚ ಕವಚಂ ಸ್ವಚಕ್ರಂ ಹರಿರೇವ ಚ ॥ ೧೪ ॥

ಪ್ರದ್ಯುಮ್ನಶ್ಚಾನಿರುದ್ಧಾಯ ಕೃಷ್ಣದತ್ತಂ ಧನುರ್ದದೌ ।
ತಥಾ ಸ್ವತೂಣೌ ರಾಜೇಂದ್ರ ತಸ್ಮೈ ಚಾಕ್ಷಯಸಾಯಕೌ ॥ ೧೫ ॥

ಸ್ವತ್ರಿಶೂಲಾತ್ಸಮುತ್ಪಾಟ್ಯ ತ್ರಿಶೂಲಂ ಪ್ರಮಥಾಧಿಪಃ ।
ಉದ್ಧವಶ್ಚ ಕಿರೀಟಂ ವೈ ಪೀತವಸ್ತ್ರಂ ಚ ದೇವಕಃ ॥ ೧೬ ॥

ಪ್ರಚೇತಾ ನಾಗಪಾಶಂ ಚ ಶಕ್ತಿಂ ಶಕ್ತಿಧರಃ ಕಿಲ ।
ಶ್ವಸನೋ ವ್ಯಜನೇ ದಿವ್ಯೇ ಸ್ವದಂಡಂ ಯಮರಾಟ್ಸ್ವನಃ ॥ ೧೭ ॥

ಹೀರಾಹಾರಂ ರಾಜರಾಜೋ ಪರಿಘಂ ತು ಧನಂಜಯಃ ।
ಭದ್ರಕಾಲೀ ಗದಾಂ ಗುರ್ವೀಂ ದದೌ ಕುಂತಂ ದಿವಾಕರಃ ॥ ೧೮ ॥

ಭೂಃ ಪಾದುಕೇ ಯೋಗಮಯೌ ಪದ್ಮಂ ದಿವ್ಯಂ ಗಣಾಧಿಪಃ ।
ಶಂಖಂ ಚ ದಕ್ಷಿಣಾವರ್ತಮಕ್ರೂರೋ ವಿಜಯಪ್ರದಂ ॥ ೧೯ ॥

೧೪–೧೫. ಶೂರನೆಂಬುವನು ಅನಿರುದ್ಧನಿಗೆ ರತ್ನಮಾಲಿಕೆಯನ್ನು ಹಾಕಿದನು. ಕೃಷ್ಣನು ಕರ್ಣಕುಂಡಲಗಳನ್ನು ಕೊಟ್ಟನು. ಬಲದೇವನು ಕವಚವನ್ನೂ, ಕೃಷ್ಣನು ಚಕ್ರವನ್ನೂ ಕೊಟ್ಟರು. ಪ್ರದ್ಯುಮ್ನನು ಕೃಷ್ಣನು ಕೊಟ್ಟ ಧನುಸ್ಸನ್ನೂ, ಬತ್ತಳಿಕೆಗಳನ್ನೂ, ನಾಶವಾಗದ ಬಾಣಗಳನ್ನೂ ಕೊಟ್ಟನು.

೧೬–೧೭. ಈಶ್ವರನು ತ್ರಿಶೂಲವನ್ನೂ, ಉದ್ಧವನು ಕಿರೀಟವನ್ನೂ, ದೇವಕನು ಪೀತಾಂಬರವನ್ನೂ, ಪ್ರಚೇತಸನು ನಾಗಪಾಶವನ್ನೂ, ಶಕ್ತಿಧರನು ಶಕ್ತಿಯನ್ನೂ ವಾಯುವು ಬೀಸಣಿಗೆಯನ್ನೂ, ಯಮನು ದಂಡವನ್ನೂ ಕೊಟ್ಟರು.

೧೮–೧೯. ಕುಬೇರನು ಪಚ್ಚೆಯ ಹಾರವನ್ನೂ, ಧನಂಜಯನು ಪರಿಘಾಯುಧವನ್ನೂ, ಭದ್ರಕಾಲಿಯು ದೊಡ್ಡಗದೆಯನ್ನೂ, ಸೂರ್ಯನು ಕುಂತಾಯುಧವನ್ನೂ, ಭೂಮಿಯು ಯೋಗಮಯವಾದ ಪಾದುಕೆಗಳನ್ನೂ, ಗಣಪತಿಯು ದಿವ್ಯವಾದ ಪದ್ಮವನ್ನೂ ಅಕ್ರೂರನು ವಿಜಯಪ್ರದವಾದ ಬಲಮುರಿಯ ಶಂಖವನ್ನೂ ಕೊಟ್ಟರು.

ಸಹಸ್ರವಾಜಿಸಂಯುಕ್ತಂ ವಿಶ್ವಕರ್ಮವಿನಿರ್ಮಿತಂ ।
ಸಹಸ್ರಚಕ್ರಂ ಸ್ವರ್ಣಾಢ್ಯಂ ಬ್ರಹ್ಮಾಂಡಾಂತರ್ಬಹಿರ್ಗತಿಂ ॥ ೨೦ ॥

ಛತ್ರೇಣ ಶತಕುಂಭೈಶ್ಚ ಪತಾಕಾಭಿಃ ಶತೈರಪಿ ।
ಶೋಭಿತಂ ಮೇಘನಿರ್ಘೋಷಂ ಘಂಟಾಮಂಜೀರನಾದಿತಂ ॥ ೨೧ ॥

ಮನೋವೇಗಂ ಮಹಾದಿವ್ಯಂ ಜೈತ್ರಂ ರತ್ನಮಯಂ ರಥಂ ।
ಅನಿರುದ್ಧಾಯ ಪ್ರದದೌ ದ್ವಾರಕಾಯಾಂ ಪುರಂದರಃ ॥ ೨೨ ॥

ಕಂಬುದುಂದುಭಯೋ ನೇದುಃ ಕಾಂಸ್ಯವೀಣಾದಯಸ್ತಥಾ ।
ಮೃದಂಗವೇಣವೋ ರಾಗೈರ್ಜಯಧ್ವನಿಸಮಾಕುಲೈಃ ॥ ೨೩ ॥

---

೨೦. ಇಂದ್ರನು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಸುವರ್ಣಮಯರಥವನ್ನು ಕೊಟ್ಟನು. ಅದಕ್ಕೆ ಸಾವಿರಕುದುರೆಗಳನ್ನು ಕಟ್ಟಿದ್ದಿತು. ಒಂದುಸಾವಿರ ಚಕ್ರಗಳಿದ್ದವು. ಅದು ಬ್ರಹ್ಮಾಂಡದ ಒಳಗೂ ಹೊರಗೂ ಓಡಾಡುವಂತಹುದಾಗಿತ್ತು.

೨೧-೨೨. ಅದರ ಮೇಲೆ ಛತ್ರಿಯು ಪ್ರಕಾಶಿಸುತ್ತಿತ್ತು. ಅಲ್ಲಲ್ಲೇ ಸುವರ್ಣ ಪತಾಕೆಗಳು ಹಾರಾಡುತ್ತಿದ್ದವು ಮೇಘಧ್ವನಿಯಂತೆ ಗಂಭೀರವಾಗಿ ಧ್ವನಿ ಮಾಡುತ್ತಿರುವ ಘಂಟೆಗಳು ಅನೇಕವಿದ್ದವು. ಅದರ ವೇಗವು ಮನೋವೇಗ ದಂತಿತ್ತು. ದಿವ್ಯವೂ, ರತ್ನಮಯವೂ ಆಗಿತ್ತು. ಅದಕ್ಕೆ ಜೈತ್ರವೆಂದು ಹೆಸರು.

೨೩. ಶಂಖಗಳು ಧ್ವನಿಮಾಡಿದವು. ದುಂದುಭಿಗಳು ಮೊಳಗಿದವು. ಕಾಂಸ್ಯ, ವೀಣೆ, ಮೃದಂಗ, ಕೊಳಲು ಮುಂತಾದುವನ್ನು ಬಾರಿಸಿದರು. ಎಲ್ಲೆಲ್ಲೂ ಜಯಜಯಾಕಾರಗಳು ಕೇಳಿಸುತ್ತಿದ್ದವು.

ಬ್ರಹ್ಮಘೋಷೈರ್ಲಾಜಪುಷ್ಪೈರ್ಮುಕ್ತಾವರ್ಷಸಮನ್ವಿತೈಃ ।
ಅನಿರುದ್ಧೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೨೪ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ದ್ವಾದಶೋಽಧ್ಯಾಯಃ

---

೨೪. ಬ್ರಾಹ್ಮಣರು ವೇದಗಳನ್ನು ಹೇಳುತ್ತಾ, ಮುತ್ತು, ಹೂವು, ಅರಳು ಮುಂತಾದುವುಗಳನ್ನು ಬೆರಸಿ ಅದನ್ನು ಅನಿರುದ್ಧನ ಮೇಲೆ ಎರಚಿದರು. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹನ್ನೆರಡನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ತ್ರಯೋದಶೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಅಥ ನತ್ವಾ ಗುರೂನ್ ಸೋಽಪಿ ಪ್ರಾಯಾತ್ತ್ರಷ್ಟುಂ ಚ ದೇವಕೀಂ।
ರೋಹಿಣೀಂ ರುಕ್ಮಿಣೀಂ ಭಾಮಾಮನ್ಯಾಃ ಸರ್ವಾ ಹರಿಪ್ರಿಯಾಃ ॥ ೧ ॥

ನತ್ವಾ ರತಿಂ ರುಕ್ಮವಾತೀಮಹಂ ಗಚ್ಛಾಮ್ಯುವಾಚ ಹ।
ರಾಜ್ಞಾದಿಷ್ಟೋ ಪಾಲನಾರ್ಥಂ ಹಯಸ್ಯ ಸಹ ಯಾದವೈಃ ॥ ೨ ॥

ಹದಿಮೂರನೆಯ ಅಧ್ಯಾಯವು

೧. ಗರ್ಗನು ಹೇಳಿದನು:—ವಜ್ರನಾಭಿಯೇ, ಕೇಳು. ಆಮೇಲೆ ಅನಿರುದ್ಧನು ತನ್ನ ಗುರುಹಿರಿಯರನ್ನು ನಮಸ್ಕರಿಸಿದನು. ದೇವಕಿ, ರೋಹಿಣಿ, ರುಕ್ಮಿಣಿ, ಸತ್ಯಭಾಮಾ, ಅನೇಕಜನ ಕೃಷ್ಣನ ಪ್ರಿಯರು ಇವರಿಗೆಲ್ಲಾ ನಮಸ್ಕರಿಸಿ ಅವರನ್ನು ಬೀಳ್ಕೊಂಡು ಹೊರಟನು.

೨. ರತಿಯನ್ನೂ, ರುಕ್ಮವಾತಿಯನ್ನೂ ನಮಸ್ಕರಿಸಿ–ನಾನು ಉಗ್ರಸೇನ ಮಹಾರಾಜನ ಅಪ್ಪಣೆಯ ಮೇರೆಗೆ ಯಜ್ಞಾಶ್ವವನ್ನು ಕಾಪಾಡಲು ಯಾದವರೊಡನೆ ಹೊರಟಿರುವೆನು ಎಂದು ಹೇಳಿದನು.

ತಾಶ್ಚ ಗದ್ಗದಭಾಷಿಣ್ಯೋ ತಂ ಪರಿಷ್ವಜ್ಯ ಕಾರ್ಷ್ಣಿಜಂ ।
ಆಶಿಷಂ ಪ್ರದದೌ ರಾಜನ್ ತಸ್ಮೈ ಚ ಪ್ರಣತಾಯ ವೈ ॥ ೩ ॥

ನತ್ವಾ ತಾಶ್ಚ ಯಯೌ ಸೋಽಪಿ ಭಾರ್ಯಾಣಾಂ ಭುವನಾನಿ ಚ ।
ತಮಾಗತಂ ಸ್ವಭರ್ತಾರಂ ತಿಸ್ರಃ ಪತ್ನ್ಯೋ ವಿಲೋಕ್ಯ ಚ ॥ ೪ ॥

ಆದರಂ ತಸ್ಯ ತಾಶ್ಚಕ್ರುರ್ವಿರಹಾತ್ ಖಿನ್ನಮಾನಸಾಃ ।
ಆಶ್ವಾಸಯಿತ್ವಾ ತಾಸ್ಸೋಽಪಿ ಚಾಜಗಾಮ ಸಭಾಂ ಕಿಲ ॥ ೫ ॥

॥ ಗರ್ಗ ಉವಾಚ ॥

ಅಥಾಧ್ವರಾರ್ಥೇ ರಾಜೇಂದ್ರ ಮುನಿಭಿಃ ಕೃತಮಂಗಲಃ ।
ಸರ್ವಾನ್ನೃಷೀನ್ಗುರೂಂಶ್ಚೈವ ನೃಪೇಂದ್ರಂ ಶೂರಮೇವ ಚ ॥ ೬ ॥

ವಸುದೇವಂ ಚ ಹಲಿನಂ ಕೃಷ್ಣಂ ಸ್ವಪಿತರಂ ತಥಾ ।
ಅನ್ಯಾಂಶ್ಚ ಯಾದವಾನ್ಪೂಜ್ಯಾನನಿರುದ್ಧಃ ಪ್ರಣಮ್ಯ ಚ ॥ ೭ ॥

---

೩. ಆಗ ಅವರೆಲ್ಲರೂ ದುಃಖಿತರಾದರು. ಅವನನ್ನು ಆಲಂಗಿಸಿ ಗದ್ಗದವಾದ ಧ್ವನಿಯಿಂದ ಅವನಿಗೆ ಆಶೀರ್ವಾದಗಳನ್ನು ಮಾಡಿದರು.

೪. ಅವರೆಲ್ಲರನ್ನೂ ನಮಸ್ಕರಿಸಿ ಅನಿರುದ್ಧನು ಅಲ್ಲಿಂದ ತನ್ನ ಪತ್ನಿಯರ ಮನೆಗೆ ಹೊರಟನು. ಅವನಿಗೆ ಮೂರು ಜನ ಪತ್ನಿಯರಿದ್ದರು. ಇವನು ಬರುತ್ತಿರುವುದನ್ನು ಅವರು ನೋಡಿದರು.

೫. ಮನೆಗೆ ಬಂದನಂತರ ಅವನನ್ನು ಸತ್ಕರಿಸಿದರು. ಅವನ ವಿರಹದಿಂದ ಅವರೆಲ್ಲರೂ ದುಃಖಮಾಡಿದರು. ಆಗ ಅನಿರುದ್ಧನು ಅವರೆಲ್ಲರನ್ನೂ ಸಮಾಧಾನ ಪಡಿಸಿ ಸಭೆಗೆ ಬಂದನು.

೬-೭. ಅಲ್ಲಿ ಮುನಿಗಳೆಲ್ಲರೂ ಅನಿರುದ್ಧನಿಗೆ ಮಂಗಳಕಾರ್ಯವನ್ನು ಮಾಡಿದರು. ಅವನು ಋಷಿಗಳನ್ನೂ, ಗುರುಹಿರಿಯರನ್ನೂ ಉಗ್ರಸೇನನನ್ನೂ, ವಸುದೇವ, ಬಲರಾಮ, ಕೃಷ್ಣ, ಪ್ರದ್ಯುಮ್ನ, ಮುಂತಾದವರನ್ನೂ ಇನ್ನೂ ಅನೇಕ ಪೂಜ್ಯರಾದ ಯಾದವರನ್ನೂ ನಮಸ್ಕರಿಸಿದನು.

ಪೂಜಿತೋ ನಾಗರೈಸ್ಸರ್ವೈರ್ಧನುಷ್ಪಾಣಿಃ ಶರೀ ನೃಪ ।
ಬದ್ಧಗೋದಾಂಗುಲಿತ್ರಾಣಃ ಕವಚೀ ಕುಂಡಲಾವೃತಃ ॥ ೮ ॥

ಉಪಾನದ್ಗೂಢಪಾದಶ್ಚ ಪಂಚಾಸ್ಯಸಮವಿಕ್ರಮಃ ।
ಕರವಾಲಧರಶ್ಚಾರ್ಸಿ ಕಿರೀಟೀ ಶಕ್ತಿಹಸ್ತಕಃ ॥ ೯ ॥

ಮಹಾವೀರಸ್ಸುವರ್ಣಸ್ಯ ಹ್ಯಲಂಕಾರೈರಲಂಕೃತಃ ।
ಪುರಂದರರಥೇನಾಪಿ ನಿರ್ಯಯೌ ಸ್ವಪುರಾದ್ಬಹಿಃ ॥ ೧೦ ॥

ಗೀತಾವಾದಿತ್ರಘೋಷೇಣ ಬ್ರಹ್ಮಘೋಷೇಣ ಕಾರ್ಷ್ಣಿಜಂ ।
ಯೊಸ್ಯಂತಂ ಚಾಮರೈರ್ಯುಕ್ತಂ ದದೃಶುಃ ಪುರವಾಸಿನಃ ॥ ೧೧ ॥

ತತಃ ಶ್ರೀಕೃಷ್ಣಚಂದ್ರೇಣ ಪ್ರೇಷಿತಾ ಉದ್ಧವಾದಯಃ ।
ಭೋಜವೃಷ್ಣ್ಯಂಧಕಮಧುಶೂರಸೇನದಶಾರ್ಹಕಾಃ ॥ ೧೨ ॥

---

೮. ನಗರದ ಪ್ರಮುಖರೆಲ್ಲರೂ ಬಂದು ಅವನನ್ನು ಪೂಜಿಸಿದರು. ಅವನು ಧನುಸ್ಸನ್ನೂ, ಬಾಣಗಳನ್ನೂ ಹಿಡಿದು ಶಿರಸ್ತ್ರಾಣವನ್ನೂ, ಕವಚವನ್ನೂ ಧರಿಸಿದ್ದನು. ಕುಂಡಲಗಳು ಕಿವಿಯಲ್ಲಿ ಪ್ರಕಾಶಿಸುತ್ತಿದ್ದವು.

೯-೧೦. ಪಾದರಕ್ಷೆಗಳನ್ನು ಮೆಟ್ಟಿಕೊಂಡನು. ಸಿಂಹದಂತೆ ಪರಾಕ್ರಮಿಯಾದ ಅವನು ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡನು. ಕಿರೀಟವನ್ನು ಧರಿಸಿದ್ದನು. ಶಕ್ತ್ಯಾಯುಧವನ್ನು ಸ್ವೀಕರಿಸಿ ಪ್ರಕಾಶಿಸುತ್ತಿದ್ದನು. ಚಿನ್ನದ ಆಭರಣಗಳು ಕಂಠದಲ್ಲಿ ಶೋಭಿಸುತ್ತಿದ್ದವು. ಇಂದ್ರನ ರಥದ ಮೇಲೆ ಕುಳಿತು ಕೊಂಡು ಪಟ್ಟಣದಿಂದ ಹೊರಟನು.

೧೧. ಗೀತ, ವಾದ್ಯ, ನರ್ತನಗಳು ಪ್ರಾರಂಭವಾದವು. ವೇದಘೋಷವನ್ನು ಮಾಡುತ್ತಿದ್ದರು. ರಥದಲ್ಲಿ ಕುಳಿತು ನಿಧಾನವಾಗಿ ಬೀದಿಯಲ್ಲಿ ಹೊರಡಲು ಅಕ್ಕಪಕ್ಕಗಳಲ್ಲಿ ಚಾಮರಗಳನ್ನು ಬೀಸುತ್ತಿದ್ದರು. ಪುರಜನರೆಲ್ಲರೂ ಅನಿರುದ್ಧನನ್ನು ನೋಡಿದರು.

೧೨. ಶ್ರೀಕೃಷ್ಣನು ಉದ್ಧವ, ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ, ಮುಂತಾದವರನ್ನು ಅನಿರುದ್ಧನೊಡನೆ ಕಳುಹಿಸಿದನು.

ಅಥ ರಾಜಾ ಯದೂನ್ಪ್ರಾಹಾನಿರುದ್ಧಸ್ಯ ಚ ಯಾದವಾಃ ।
ಸಹಾಯಾರ್ಥಂ ತು ಪ್ರಧನೇ ವದತಾತ್ಕಃ ಪ್ರಯಾಸ್ಯತಿ ॥ ೧೩ ॥

ಉಗ್ರಸೇನವಚಃ ಶ್ರುತ್ವಾ ಸಾಂಬೋ ಜಾಂಬವತೀಸುತಃ ।
ಸರ್ವೇಷಾಂ ಪಶ್ಯತಾಂ ನತ್ವಾ ನೃಪಂ ವಚನಮಬ್ರವೀತ್ ॥ ೧೪ ॥

॥ ಸಾಂಬ ಉವಾಚ ॥

ಅನಿರುದ್ಧಸ್ಯ ರಾಜೇಂದ್ರ ಸಹಾಯಮಹಮೇವ ಚ ।
ಮಹಾರಣೇ ಚ ಶತ್ರುಭ್ಯಃ ಕರಿಷ್ಯೇ ಸರ್ವದಾ ಕಿಲ ॥ ೧೫ ॥

ಯದ್ಯಹಂ ತಸ್ಯ ರಕ್ಷಾಂ ವೈ ನ ಕರಿಷ್ಯೇ ರಣಾಂಗಣೇ ।
ಪ್ರತಿಜ್ಞಾಂ ಮಮ ರಾಜೇಂದ್ರ ಶೃಣುಷ್ವ ಸತ್ಯವಾದಿನಃ ॥ ೧೬ ॥

ತ್ಯಾಜ್ಯಾಂ ತು ದಶಮೀವಿದ್ಧಾಂ ಯಃ ಕೃತ್ವೈಕಾದಶೀಂ ನರಃ ।
ಪ್ರಯಾತಿ ಯಾಂ ಗತಿಂ ರಾಜನ್ ತಾಮಹಂ ಪ್ರಾಪ್ನುಯಾಂ ಧ್ರುವಂ ॥ ೧೭ ॥

---

೧೩. ಅನಂತರ ರಾಜನು ಯಾದವರೆಲ್ಲರನ್ನೂ ಕುರಿತು ಯುದ್ಧದಲ್ಲಿ ಅನಿರುದ್ಧನಿಗೆ ಸಹಾಯಮಾಡಲು ಯಾರು ಹೊರಡುವಿರಿ? ಎಂದು ಕೇಳಿದನು.

೧೪. ಅದನ್ನು ಕೇಳಿ ಜಾಂಬವತೀಪುತ್ರನಾದ ಸಾಂಬನು ಎಲ್ಲರ ಎದುರಿಗೂ ರಾಜನ ಹತ್ತಿರಕ್ಕೆ ಬಂದು ಅವನನ್ನು ನಮಸ್ಕರಿಸಿ ಇಂತೆಂದನು.

೧೫. ಸಾಂಬನು ಹೇಳಿದನು :— ರಾಜೇಂದ್ರನೇ, ನಾನು ಅನಿರುದ್ಧನಿಗೆ ಯಾವಾಗಲೂ ಯುದ್ಧದಲ್ಲಿ ಸಹಾಯ ಮಾಡುವೆನು.

೧೬. ನಾನು ಅನಿರುದ್ಧನಿಗೆ ಯುದ್ಧದಲ್ಲಿ ಸಹಾಯವನ್ನು ಮಾಡದಿದ್ದಲ್ಲಿ ಸತ್ಯವಾದಿಯಾದ ನನ್ನ ಪ್ರತಿಜ್ಞೆಯನ್ನು ಲಾಲಿಸು.

೧೭. ದಶಮೀತಿಥಿ ಸ್ವಲ್ಪಭಾಗವಿರುವ ಏಕಾದಶೀತಿಥಿಯನ್ನು ಆಚರಿಸುವವನಿಗೆ ಯಾವ ಗತಿಯುಂಟಾಗುವುದೋ ಆ ಗತಿಯು ನನಗೆ ಬರಲಿ.

ಗೋಹಂತ್ಯಾಣಾಂ ಗತಿರ್ಯಾ ತು ಯಾ ಗತಿರ್ಬ್ರಹ್ಮಘಾತಿನಾಂ ।
ಸ ಗತಿರ್ಮಮ ಭೂಯಾದ್ವೈ ನ ಕುರ್ಯಾಂ ಕರ್ಮ ಚೇದಿದಂ ॥ ೧೮ ॥

॥ ಗರ್ಗ ಉವಾಚ ॥

ಇತ್ಯುಕ್ತ್ವಾ ವಚನಂ ಸೋಽಪಿ ಯಯೌ ಚಾಂತಃಪುರಂ ತತಃ ।
ನತ್ವಾ ಚ ಮಾತರಂ ಸರ್ವಮಭಿಪ್ರಾಯಂ ನ್ಯವೇದಯತ್ ॥ ೧೯ ॥

ಶ್ರುತ್ವಾ ಸಾ ತಂ ಪರಿಷ್ವಜ್ಯ ವಿರಹಾದಾಶಿಷಂ ದದೌ ।
ತತೋ ಮಾತೃಸ್ತು ತಾಃ ಸರ್ವಾ ನತ್ವಾ ಪತ್ನೀಗೃಹಂ ಗತಃ ॥ ೨೦ ॥

ಸಾ ತಮಾಯಾಂತಮಾಲೋಕ್ಯ ಲಕ್ಷ್ಮಣಾ ವರಲಕ್ಷಣಾ ।
ದತ್ವಾಸನಂ ಬಾಷ್ಪಕಂಠೀ ನ ತು ಕಿಂಚಿದುವಾಚ ಹ ॥ ೨೧ ॥

---

೧೮. ಗೋಹತ್ಯೆ, ಬ್ರಹ್ಮಹತ್ಯೆ ಮಾಡಿದವರಿಗೆ ಯಾವ ಗತಿಯುಂಟಾಗುವುದೋ ಆ ಗತಿಯು ನನ್ನ ಮಾತಿನಂತೆ ನಡೆಯದ ಪಕ್ಷದಲ್ಲಿ ನನಗುಂಟಾಗಲಿ.

೧೯. ಹೀಗೆ ಹೇಳಿ ಸಾಂಬನು ಅಂತಃಪುರಕ್ಕೆ ಹೋದನು. ಅಲ್ಲಿ ತನ್ನ ತಾಯಿಗೆ ಅಭಿವಂದಿಸಿ ಅನಿರುದ್ಧನೊಡನೆ ಹೊರಡುವ ವಿಷಯವನ್ನೆಲ್ಲಾ ತಿಳಿಸಿದನು.

೨೦. ಆಗ ಜಾಂಬವತಿಯು ಅವನನ್ನು ಆಲಂಗಿಸಿ ಆಶೀರ್ವಾದವನ್ನು ಮಾಡಿದಳು. ಇನ್ನುಳಿದ ತಾಯಿಯರಿಗೂ ನಮಸ್ಕರಿಸಿ ಅಲ್ಲಿಂದ ತನ್ನ ಪತ್ನಿಯ ಮನೆಗೆ ಹೋದನು.

೨೧. ತನ್ನ ಪತಿಯು ಬರುವುದನ್ನು ನೋಡಿ ಸರ್ವಲಕ್ಷಣಸಂಪನ್ನೆಯಾದ ಲಕ್ಷ್ಮಣೆಯು ಸಾಂಬನಿಗೆ ಆಸನವನ್ನು ಕೊಟ್ಟು ಕಣ್ಣಿನಲ್ಲಿ ಬಾಷ್ಪಗಳನ್ನು ಸುರಿಸುತ್ತಾ ಸುಮ್ಮನೇ ನಿಂತುಕೊಂಡಳು.

ಅಶ್ವಾಸಯಿತ್ವಾ ತಾಂ ಸಾಂಬೋ ಹ್ಯಭಿಪ್ರಾಯಮನುವರ್ಣಯೇತ್ ।
ಇತಿ ಶ್ರುತ್ವಾ ಪತಿಂ ಪ್ರಾಹ ವಿರಹಾತ್ ಖಿನ್ನಮಾನಸಾ ॥ ೨೨ ॥

॥ ಲಕ್ಷ್ಮಣೋವಾಚ ॥

ಅನಿರುದ್ಧಸ್ಯ ತುರಗೋ ರಕ್ಷಣೀಯಸ್ತ್ವಯಾ ಪತೇ ।
ಯುದ್ಧಂ ಹಿ ಸುಮುಖಂ ಕಾರ್ಯಂ ವಿಮುಖಂ ನ ಕದಾಚನ ॥ ೨೩ ॥

ತ್ವದ್ಭ್ರಾತೄಣಾಂ ಸ್ತ್ರಿಯಃ ಸಂತಿ ಮಾನವತ್ಯಃ ಸಹಸ್ರಶಃ ।
ಸಂಗ್ರಾಮೇ ಯದಿ ತೇ ನಾಥ ನಿಶಮ್ಯ ಚ ಪರಾಜಯಂ ॥ ೨೪ ॥

ಸ್ಮಿತಾನನಾ ಭವಿಷ್ಯಂತಿ ದೃಷ್ಟ್ವಾ ಮಾಂ ಚ ತವ ಪ್ರಿಯಾಂ ।
ತದಾ ದುಃಖೇನ ಮೇ ನಾಥ ಮರಣಂ ತು ಭವಿಷ್ಯತಿ ॥ ೨೫ ॥

---

೨೨. ಆಗ ಸಾಂಬನು ಲಕ್ಷ್ಮಣೆಯನ್ನು ಸಮಾಧಾನಪಡಿಸಿ ತಾನು ಹೊರಟಿರುವ ವಿಷಯವನ್ನು ತಿಳಿಸಿದನು. ಅದನ್ನು ಕೇಳಿ ಲಕ್ಷ್ಮಣೆಯು ಪತಿವಿರಹದಿಂದ ಅತಿದುಃಖಿತಳಾಗಿ ಅವನನ್ನು ಕುರಿತು,

೨೩. ನಾಥನೇ, ನೀನು ಅನಿರುದ್ಧನಿಗೆ ಸಹಾಯಕನಾಗಿ ಹೊರಟಿರುವೆ. ಆದುದರಿಂದ ಅವನ ಅಶ್ವವನ್ನು ಸರಿಯಾಗಿ ರಕ್ಷಣೆ ಮಾಡಬೇಕು. ಯುದ್ಧವೊದಗಲು ಶತ್ರುಗಳನ್ನು ಎದುರಿಸಿ ಹೋರಾಡಬೇಕು. ಎಂದಿಗೂ ಹಿಮ್ಮೆಟ್ಟಕೂಡದು.

೨೪–೨೫. ನಿನಗೆ ಒಂದು ವೇಳೆ ಸೋಲಾದರೆ ಮಾನವತಿಯರಾದ ನಿನ್ನ ಅಣ್ಣನ ಪತ್ನಿಯರೆಲ್ಲರೂ ನನ್ನನ್ನು ನೋಡಿ ನೋಡಿ ನಗುವರು. ಆಗ ನನಗಾಗುವ ದುಃಖಕ್ಕೆ ಪಾರವೇ ಇರುವುದಿಲ್ಲ. ನನಗೆ ತುಂಬಾ ನಾಚಿಕೆಯಾಗುವುದು. ಆಗ ನನಗೆ ಮರಣವೇ ಗತಿಯು ಆದುದರಿಂದ ಆರೀತಿಯಾಗದಂತೆ ಜಯಶೀಲನಾಗಿ ಬಾ ಎಂದಳು.

ಶ್ರುತ್ವೈತದ್ವಚನಂ ಸಾಂಬೋ ಪ್ರತ್ಯುವಾಚ ಪ್ರಿಯಾಂ ಹಸನ್ ।
|| ಸಾಂಬ ಉವಾಚ ||
ಪ್ರಧನೇ ಮಮ ಸಂಪ್ರಾಪ್ತೇ ತ್ರೈಲೋಕ್ಯಂ ಸಂಮುಖಂ ಕಿಲ || ೨೬ ||

ಶ್ರೋಷ್ಯಸೇ ತ್ವಂ ಮಯಾ ಭದ್ರೇ ಸರ್ವಂ ಚ ವಿದಿಲೀಕೃತಂ ।
ಯದಿ ಸಾಂಬೋ ರಣಾಚ್ಛೂರೋ ವಿಮುಖೋ ಜಾಯತೇ ಶುಭೇ || ೨೭ ||

ತದಾ ಸೋಽಸ್ತು ಸ್ವಪಾಪೇನ ಬ್ರಹ್ಮವಿಪ್ರವಿನಿಂದಕಃ ।
ಪುನಸ್ತ್ವಹಂ ನ ಪಶ್ಯಾಮಿ ಚಂದ್ರಾಕಾರಂ ತವಾನನಂ || ೨೮ ||

|| ಶ್ರೀಗರ್ಗ ಉವಾಚ ||

ಇತ್ಯಾಶ್ವಾಸ್ಯ ಪ್ರಿಯಾಂ ಸಾಂಬೋ ದ್ವಿತೀಯಾಂ ಚ ಪ್ರಯತ್ನತಃ ।
ಅಭಿಮನ್ಯುಂ ಸುಭದ್ರಾಂ ಚ ಮಿಲಿತ್ವಾ ನಿರ್ಯಯೌ ಗೃಹಾತ್ || ೨೯ ||

---

೨೬. ತನ್ನ ಪ್ರಿಯಳು ಈ ರೀತಿ ಹೇಳಿದುದನ್ನು ಕೇಳಿ ನಗುತ್ತಾ ಸಾಂಬನು ಅವಳನ್ನು ಕುರಿತು ಎಲೌ ಮಂಗಳಕರಳೇ, ಮೂರುಲೋಕದವರೂ ಸಹ ನನ್ನೊಡನೆ ಯುದ್ಧಕ್ಕೆ ಬಂದು ಎದುರಿಸಲಿ. ಅವರೆಲ್ಲರನ್ನೂ ನಾನು ನುಚ್ಚು ನೂರು ಮಾಡುವೆನು.

೨೭–೨೮. ಒಂದು ವೇಳೆ ಈ ರಣಧೀರನಾದ ಸಾಂಬನು ಯುದ್ಧರಂಗದಿಂದ ಹಿಮ್ಮೆಟ್ಟಿದರೆ ಆಗ ವೇದ, ಬ್ರಾಹ್ಮಣ, ಇವರುಗಳನ್ನು ನಿಂದಿಸಿದ ಪಾಪವು ನನಗುಂಟಾಗಲಿ. ಹಾಗೂ ಆ ರೀತಿಯಾದರೆ ಚಂದ್ರಸದೃಶವಾದ ನಿನ್ನ ಮುಖವನ್ನು ಮತ್ತೆಂದಿಗೂ ನೋಡುವುದಿಲ್ಲವು.

೨೯. ಹೀಗೆ ತನ್ನ ಪತ್ನಿಯನ್ನು ಸಮಾಧಾನಪಡಿಸಿ ಅಭಿಮನ್ಯು, ಸುಭದ್ರೆ ಇವರನ್ನೂ ಬೀಳ್ಕೊಂಡು ಮನೆಯಿಂದ ಹೊರಹೊರಟನು.

ಚಾಪೀನ್ಸೈಸ್ತ್ರಿಂಶಕಸ್ಸಜ್ಜೋ ಸ್ಯಂದನೀ ಯಾದವೈರ್ವೃತಃ ।
ಪ್ರಾಪ್ತಶ್ಚೋಪವನೇ ಸಾಂಬೋಽನಿರುದ್ಧೋ ಯತ್ರ ವರ್ತತೇ ॥ ೩೦ ॥

ತತಃ ಸ್ವಭ್ರಾತರಃ ಸರ್ವೇ ಶ್ರೀಕೃಷ್ಣೇನ ಗದಾದಯಃ ।
ಪ್ರೇಷಿತಾ ಆತ್ಮಜಾಶ್ಚೈವ ಭಾನುದೀಪ್ತಿಮುತಾದಯಃ ॥ ೩೧ ॥

ಸರ್ವೇ ಹಿ ಧನ್ವಿನಃ ಶೂರಾ ದಂಶಿತಾ ಯುದ್ಧಕೋವಿದಾಃ ।
ಚತುರಂಗಬಲೋಪೇತಾ ನಿರ್ಜಗ್ಮುಃ ಕೋಟಿಶಃ ಪುರಾತ್ ॥ ೩೨ ॥

ತಾಲಹಂಸಮೀನಬರ್ಹಿರ್ಮೃಗರಾಜಧ್ವಜೈ ರಥೈಃ ।
ದಿವ್ಯೈಶ್ಚ ಕನಕಾಂಗೈಶ್ಚ ಚತುರ್ವಾಜಿಸಮನ್ವಿತೈಃ ॥ ೩೩ ॥

---

೩೦. ಬಿಲ್ಲುಬಾಣಗಳನ್ನೂ, ಆಯುಧಗಳನ್ನೂ ಧರಿಸಿ ರಥದಲ್ಲಿ ಕುಳಿತು ಅನೇಕ ಯಾದವರು ತನ್ನನ್ನು ಹಿಂಬಾಲಿಸುತ್ತಿರಲು, ಹೊರಹೊರಟು ನಗರದ ಉಪವನದಲ್ಲಿ ಅನಿರುದ್ಧನಿರುವ ಸ್ಥಳಕ್ಕೆ ಬಂದನು.

೩೧. ಸಾಂಬನ ಸಹೋದರರಾದ ಗದನೇ ಮುಂತಾದವರೂ ಮಕ್ಕಳಾದ ಭಾನು, ದೀಪ್ತಮಾನ್ ಮುಂತಾದವರೂ ಶ್ರೀಕೃಷ್ಣನ ಅಪ್ಪಣೆಯಂತೆ ಹೊರಟರು.

೩೨. ಎಲ್ಲರೂ ಧನುರ್ಧಾರಿಗಳಾಗಿದ್ದರು. ಎಲ್ಲರೂ ಯುದ್ಧಶೂರರೇ. ಈ ರೀತಿ ಕೋಟ್ಯಾನುಕೋಟಿ ಜನರು ಚತುರಂಗಬಲಸಮೇತರಾಗಿ ಪುರದಿಂದ ಹೊರ ಹೊರಟರು.

೩೩. ಕೆಲವರ ಧ್ವಜವು ತಾಳೆಯ ಚಿಹ್ನೆಯುಳ್ಳದು. ಕೆಲವರದು ಹಂಸ ಧ್ವಜವು. ಹೀಗೆಯೇ ಮೀನು, ನವಿಲು, ಸಿಂಹ ಮುಂತಾದ ಚಿಹ್ನೆಗಳುಳ್ಳ ಧ್ವಜಗಳು ಅಲ್ಲಲ್ಲಿ ಕಾಣುತ್ತಿದ್ದವು. ದಿವ್ಯವಾಗಿಯೂ, ಚಿನ್ನದಂತೆ ಪ್ರಕಾಶಿಸುತ್ತಿರುವ ಕುದುರೆಗಳು ರಥಗಳಿಗೆ ಕಟ್ಟಲ್ಪಟ್ಟಿದ್ದವು.

ಮಹೋಚ್ಚೈರ್ದೇವಧಿಷ್ಣ್ಯಾಭೈಶ್ಛತ್ರಚಾಮರಸಂಯುತೈಃ ।
ಸೂರ್ಯಾಭೈಶ್ಚ ಸುವರ್ಣಸ್ಯ ಕುಂಭೈರ್ಜಾಲಕತೋರಣೈಃ ॥ ೩೪ ॥

ರೇಜುಸ್ಸರ್ವೇ ಕೃಷ್ಣಸುತಾಃ ಕುಶಸ್ಥಲ್ಯಾ ವಿನಿರ್ಗತಾಃ ।
ತತಶ್ಚ ನಿರ್ಯಯೌ ರಾಜನ್ ಹೇಮನೀಡಾಶ್ಚ ಹಸ್ತಿನಃ ॥ ೩೫ ॥

ಗೋಮೂತ್ರಚಯಸಿಂಧೂರಕಸ್ತೂರೀಪತ್ರಭೃನ್ಮುಖಾಃ ।
ಅಂಜನಾಭಾಃ ಕಜ್ಜಲಾಭಾ ಘನಶ್ಯಾಮಾ ಮದಚ್ಯುತಾಃ ॥ ೩೬ ॥

ರಾಜೀವಮೂಲಸದೃಶಾಃ ಶುಕ್ಲದಂತಾ ಮೃಗದ್ವಿಪಾಃ ।
ಮಹೋಚ್ಚಾಃ ಪರ್ವತಾಕಾರಾ ರಣಧ್ವಂಟಾ ಮಹೋದ್ಭಟಾಃ ॥ ೩೭ ॥

ಐರಾವತಕುಲೇಭಾಶ್ಚ ತಿಸ್ರಃ ಶುಂಡಾಶ್ಚ ಪಾಂಡುರಾಃ ।
ಚತುರ್ದಂತಾಸ್ತು ಕೃಷ್ಣೇನ ಭೌಮಾನ್ನೀತಾಶ್ಚ ನಿರ್ಯಯುಃ ॥ ೩೮ ॥

---

೩೪. ರಥಗಳ ಮೇಲ್ಭಾಗದಲ್ಲಿ ಎತ್ತರವಾಗಿ ಛತ್ರಗಳನ್ನೂ, ಚಾಮರಗಳನ್ನೂ ಕಟ್ಟಿದ್ದರು. ಚಿನ್ನದಿಂದ ಕುಂಭಾಕಾರವಾಗಿ ರಥದ ಮೇಲ್ಭಾಗವನ್ನು ನಿರ್ಮಿಸಿದ್ದರು. ಅದು ಸೂರ್ಯನಂತೆ ಹೊಳೆಯುತ್ತಿತ್ತು. ಅದಕ್ಕೆ ತೋರಣಗಳನ್ನು ಕಟ್ಟಿದ್ದರು. ಅದರಲ್ಲಿ ಕುಳಿತ ಕೃಷ್ಣನ ಮಕ್ಕಳೆಲ್ಲರೂ ಪ್ರಕಾಶಿಸುತ್ತಿದ್ದರು.

೩೫–೩೬. ಆಮೇಲೆ ಚಿನ್ನದ ನೀಡಗಳನ್ನುಳ್ಳ ಆನೆಗಳು ಹೊರಟವು. ಕೆಲವು ಬೂದಾಗಿಯೂ, ಕೆಲವು ನೀಲವಾಗಿಯೂ ಇದ್ದವು. ಅವುಗಳ ಮುಖಕ್ಕೆ ಗೋಮೂತ್ರ ಚಯ, ಸಿಂಧೂರ, ಕಸ್ತೂರಿ ಮುಂತಾದುವುಗಳಿಂದ ಬರೆದು ಅಲಂಕರಿಸಿದ್ದರು.

೩೭. ಕಮಲದ ದಂಟಿನ ನಾಳದಂತೆ ಅವುಗಳ ದಂತವು ಬೆಳ್ಳಗೆ ರಮ್ಯವಾಗಿದ್ದವು. ಎತ್ತರವಾಗಿ ಪರ್ವತದಂತೆ ಕಾಣುತ್ತಿದ್ದವು. ಯುದ್ಧರಂಗದಲ್ಲಿ ಹೋರಾಡಲು ಸಮರ್ಥವಾಗಿದ್ದವು.

೩೮. ಐರಾವತದ ಕುಲದಲ್ಲಿ ಹುಟ್ಟಿದ ಕೆಲವು ಆನೆಗಳು ಬೆಳ್ಳಗಿದ್ದವು. ಅವಕ್ಕೆ ಮೂರು ಮೂರು ಸೊಂಡಿಲುಗಳೂ ನಾಲ್ಕು ದಂತಗಳೂ ಇದ್ದವು. ಕೃಷ್ಣನು ಇವುಗಳನ್ನು ನರಕಾಸುರನಿಂದ ಗೆದ್ದು ತಂದಿದ್ದನು.

ಧ್ವಜಯುಕ್ತಾ ಲಕ್ಷಗಜಾ ಲಕ್ಷಾ ದುಂದುಭಿಸಂಯುತಾಃ ।
ಲಕ್ಷಾಃ ಶೂನ್ಯಾ ಮಹಾಮಾತ್ಯೈಃ ಸ್ವರ್ಣಕಂಬಲಮಂಡಿತಾಃ ॥ ೩೯ ॥

ತತಃ ಶೂರೈಶ್ಚ ಸಂಯುಕ್ತಾ ಗಜೇಂದ್ರಾ ಏಕಕೋಟಯಃ ।
ಇತಸ್ತತೋ ವಿರೇಜುಸ್ತೇ ಬಲೇಽಬ್ಧೌ ಮಕರಾ ಯಥಾ ॥ ೪೦ ॥

ಉತ್ಪಾಟ್ಯ ಗುಲ್ಮಾನ್ ಶುಂಡೈಶ್ಚ ಕ್ಷೇಪಯಂತೋ ನಭಸ್ಥಲೇ ।
ಮಹೀಂ ಪಾದೈಃ ಕಂಪಯಂತ ಆರ್ದ್ರೀಕೃತ್ವಾ ಮದೈರಪಿ ॥ ೪೧ ॥

ಪ್ರಾಸಾದದುರ್ಗಶೈಲಾನ್ ಗಾನ್ಪಾತಯಂತಃ ಶಿರಸ್ಥಲೈಃ ।
ರಿಪೂಣಾಂ ಚ ಬಲಂ ಸರ್ವಂ ಖಂಡಯಂತೋ ಮಹಾಬಲಾಃ ॥ ೪೨ ॥

---

೩೯. ಒಂದುಲಕ್ಷ ಆನೆಗಳು ಧ್ವಜಗಳನ್ನು ಹೊತ್ತು ಹೊರಟಿದ್ದವು. ದುಂದುಭಿಗಳು ಒಂದು ಲಕ್ಷ ಆನೆಯ ಮೇಲೆ ಇರಿಸಲ್ಪಟ್ಟಿದ್ದವು. ಮತ್ತೊಂದು ಲಕ್ಷ ಆನೆಗಳ ಮೇಲೆ ರತ್ನಗಂಬಳಿಗಳನ್ನು ಹಾಸಿಕೊಂಡು ಮಹಾಮಂತ್ರಿಗಳು ಕುಳಿತಿದ್ದರು.

೪೦. ಅನೇಕ ಶೂರರು ಒಂದು ಕೋಟಿ ಆನೆಗಳ ಮೇಲೆ ಕುಳಿತಿದ್ದರು. ಅವರ ನಿಯಂತ್ರಣದಿಂದ ಅವು ಸಮುದ್ರದಲ್ಲಿ ಮೊಸಳೆಗಳು ಸಂಚರಿಸುವಂತೆ ಅತ್ತಿತ್ತ ಓಡಾಡುತ್ತಿದ್ದವು.

೪೧. ತಮ್ಮ ಸೊಂಡಿಲುಗಳಿಂದ ಪೊದೆಗಳನ್ನೆಲ್ಲಾ ಕಿತ್ತು ಕಿತ್ತು ಆಕಾಶಕ್ಕೆ ಎಸೆಯುತ್ತಿದ್ದವು. ಅವುಗಳ ಕಾಲಿಡುವಿಕೆಯಿಂದ ಭೂಮಿಯು ಅಲುಗಾಡುತ್ತಿತ್ತು. ಮದೋದಕದಿಂದ ದಾರಿಯಲ್ಲಾ ನೆನೆಯುತ್ತಿತ್ತು.

೪೨. ಶತ್ರುಗಳ ಅರಮನೆ, ಕೋಟೆ, ಬೆಟ್ಟಗಳು ಇವುಗಳನ್ನೆಲ್ಲಾ ತಲೆಯಿಂದ ನೂಕಿ ನಾಶಮಾಡುತ್ತಿದ್ದವು. ಶತ್ರುಪಕ್ಷದವರ ಕಡೆಗೆ ನುಗ್ಗಿ ಅವರ ಸೈನ್ಯಗಳನ್ನೆಲ್ಲಾ ತುಂಡು ತುಂಡು ಮಾಡುತ್ತಿದ್ದವು.

ಶ್ಯಾಮಪೀತಕೃಷ್ಣಶುಕ್ಲರಕ್ತವರ್ಣೈಶ್ಚ ಕಂಬಲೈಃ ।
ಸುವರ್ಣಶೃಂಖಲೈರ್ಯುಕ್ತಾ ರೇಜುರೇತಾದೃಶಾ ಗಜಾಃ ॥ ೪೩ ॥

ತತಸ್ತುರಂಗಮಾ ಯೇ ವೈ ನಾರದೇನ ವಿಲೋಕಿತಾಃ ।
ತೇ ಸರ್ವೇ ನಿರ್ಗತಾ ರಾಜನ್ ಸ್ವರ್ಣಹಾರೈಶ್ಚ ಸಂಯುತಾಃ ॥ ೪೪ ॥

ಕೇಚಿದ್ವೈ ಚಂಚಲಾಂಗಾಶ್ಚ ಧೂಮ್ರವರ್ಣಾ ಮನೋಹರಾಃ ।
ಶ್ಯಾಮವರ್ಣಾಃ ಪದ್ಮವರ್ಣಾ ಕೃಷ್ಣವರ್ಣಾಃ ಸುಕಂದರಾಃ ॥ ೪೫ ॥

ದುಗ್ಧಾಭಾ ಘೋಟಕಾಃ ಕೇಚಿತ್ತಥಾ ಕೀಲಾಲಸನ್ನಿಭಾಃ ।
ಹರಿದ್ರಾಭಾಃ ಕುಂಕುಮಾಭಾ ಪಾಲಾಶಕುಸುಮಪ್ರಭಾಃ ॥ ೪೬ ॥

---

೪೩. ಆ ಆನೆಗಳಿಗೆ ನೀಲ, ಹಳದಿ, ಕಪ್ಪು, ಬಿಳುಪು, ಕೆಂಪು, ಈ ವರ್ಣಗಳ ರತ್ನಗಂಬಳಿಗಳನ್ನು ಹೊದಿಸಿದ್ದರು. ಚಿನ್ನದ ಸರಪಳಿಗಳನ್ನು ಕತ್ತಿಗೆ ಹಾಕಿದ್ದರು. ಈ ರೀತಿಯಾಗಿ ಆನೆಗಳೆಲ್ಲವೂ ಪ್ರಕಾಶಿಸುತ್ತಿದ್ದವು.

೪೪. ಅನಂತರ ಕುದುರೆಯ ಸಾಲು ಹೊರಟಿತು. ಹಿಂದೆ ನಾರದನು ಅಶ್ವಶಾಲೆಯಲ್ಲಿ ನೋಡಿದ ಕುದುರೆಗಳವು. ಸುವರ್ಣಹಾರಗಳನ್ನು ಹಾಕಿದ್ದುದರಿಂದ ಅವೆಲ್ಲವೂ ಶೋಭಿಸುತ್ತಿದ್ದವು.

೪೫. ಅವುಗಳಲ್ಲಿ ಕೆಲವು ಕುದುರೆಗಳು ಅತಿ ಚಂಚಲವಾಗಿ ಹೋಗುತ್ತಿದ್ದವು. ಕೆಲವು ಬೂದುಬಣ್ಣದ ಕುದುರೆಗಳು ಮನೋಹರವಾಗಿ ಕಾಣುತ್ತಿದ್ದವು. ಕೆಲವು ನೀಲಿ, ಕೆಂಪು, ಕಪ್ಪು ಮುಂತಾದ ಬಣ್ಣಗಳುಳ್ಳವಾಗಿದ್ದವು. ಕೆಲವು ಕುದುರೆಗಳ ಕತ್ತು ಬಲುರಮ್ಯವಾಗಿ ಕಾಣುತ್ತಿತ್ತು.

೪೬. ಕೆಲವು ಹಾಲಿನಂತೆ ಬೆಳ್ಳಗಿದ್ದವು. ಮತ್ತೆ ಕೆಲವು ಅಮೃತದಂತೆ ಸ್ವಚ್ಛವಾಗಿದ್ದವು. ಕೆಲವು ಅರಿಶಿನದಂತೆ ಹಳದಿಯಾಗಿಯೂ, ಇನ್ನೂ ಕೆಲವು ಕುಂಕುಮದಂತೆ ಕೆಂಪಾಗಿಯೂ, ಮುತ್ತುಗದ ಹೂವಿನಂತೆ ರಕ್ತವರ್ಣವಾಗಿಯೂ ಇದ್ದವು.

ಕೇಚಿಚ್ಚಿತ್ರವಿಚಿತ್ರಾಂಗಾಃ ಸ್ಫಟಿಕಾಂಗಾ ಮನೋಜವಾಃ ।
ಹರಿದ್ವರ್ಣಾಸ್ತಾಮ್ರವರ್ಣಾಃ ಕೌಸುಂಭಾಭಾಃ ಶುಕಪ್ರಭಾಃ ॥ ೪೭ ॥

ಇಂದ್ರಗೋಪನಿಭಾ ಗೌರಾ ದಿವ್ಯಾಃ ಪೂರ್ಣೇಂದುಸನ್ನಿಭಾಃ ।
ಸಿಂಧೂರಾಂಗಾಶ್ಚಾಗ್ನಿವರ್ಣಾ ರವಿವಾಲಸಮಪ್ರಭಾಃ ॥ ೪೮ ॥

ಏತೇ ತುರಂಗಮಾ ರಾಜನ್ ಸರ್ವದೇಶಾತ್ಸಮಾಗತಾಃ ।
ಪುರ್ಯಾಂ ಕೃಷ್ಣಪ್ರತಾಪೇನ ತೇ ತು ಸರ್ವೇ ವಿನಿರ್ಗತಾಃ ॥ ೪೯ ॥

ಕೃಷ್ಣಸ್ಯ ವಾಜಿಶಾಲಾಸು ಯೇ ವರ್ತಂತೇ ಚ ತೇ ಹಯಾಃ ।
ವೈಕುಂಠವಾಸಿನಶ್ಚೈವ ಶ್ವೇತದ್ವೀಪನಿವಾಸಿನಃ ॥ ೫೦ ॥

ಕೇಚಿನ್ಮಯೂರವರ್ಣಾಶ್ಚ ನೀಲಕಂಠನಿಭಾಸ್ತಥಾ ।
ವಿದ್ಯುದ್ವರ್ಣಾಸ್ತಾರ್ಕ್ಷ್ಯವರ್ಣಾಃ ಸರ್ವೇ ಪಕ್ಷೈರಲಂಕೃತಾಃ ॥ ೫೧ ॥

---

೪೭. ಕೆಲವು ಅಶ್ವಗಳ ಶರೀರವು ಚಿತ್ರವಿಚಿತ್ರ ವರ್ಣವಾಗಿದ್ದವು. ಕೆಲವು ಸ್ಫಟಿಕದಂತೆ ಇದ್ದವು ಕೆಲವು ಮನೋವೇಗವುಳ್ಳವುಗಳಾಗಿದ್ದವು. ಹಸುರು, ಕೆಂಪು, ಅಚ್ಚಕೆಂಪು ಮುಂತಾದ ಬಣ್ಣಗಳ ಅಶ್ವಗಳು ಅನೇಕವಿದ್ದವು.

೪೮. ಇಂದ್ರಗೋಪದಂತೆ ಕೆಲವಿದ್ದವು. ಬಿಳುಪಾಗಿ ಪೂರ್ಣಚಂದ್ರನಂತೆ ಕೆಲವೂ, ಸಿಂಧೂರವರ್ಣದವು ಕೆಲವೂ, ಸೂರ್ಯನಂತೆ ಕೆಲವೂ ಪ್ರಕಾಶಿಸುತ್ತಿದ್ದವು.

೪೯. ಎಲೈ ವಜ್ರನಾಭಿಯೇ, ಈ ಕುದುರೆಗಳೆಲ್ಲಾ ಅನೇಕ ದೇಶಗಳಿಂದ ಬಂದವು. ಶ್ರೀಕೃಷ್ಣನ ಪ್ರತಾಪದಿಂದ ದ್ವಾರಕೆಯಲ್ಲಿದ್ದವು. ಅವೀಗ ಅಲ್ಲಿಂದ ಹೊರಹೊರಟವು.

೫೦. ಶ್ರೀಕೃಷ್ಣನ ಅಶ್ವಶಾಲೆಯ ಕುದುರೆಗಳಲ್ಲಿ ಕೆಲವು ವೈಕುಂಠದಲ್ಲಿದ್ದವುಗಳು. ಮತ್ತೆ ಕೆಲವು ಶ್ವೇತದ್ವೀಪವಾಸಿಗಳು.

೫೧. ನವಿಲಿನ ಬಣ್ಣದ ಕುದುರೆಗಳೂ, ಮಿಂಚಿನ ಬಣ್ಣದ ಕುದುರೆಗಳೂ ಗರುಡನ ಬಣ್ಣದ ಕುದುರೆಗಳೂ ಅನೇಕವಿದ್ದವು. ಅವಕ್ಕೆಲ್ಲಾ ರೆಕ್ಕೆಗಳಿದ್ದವು.

ಶಿಖಾಮಣಿಧರಾಃ ಶುಕ್ಲಚಾಮರೈಃ ಸಮಲಂಕೃತಾಃ ।
ಸ್ರಗ್ಭಿರ್ಮುಕ್ತಾಫಲಾನಾಂ ಚ ರಕ್ತವಸ್ತ್ರೈರ್ವಿಭೂಷಿತಾಃ ॥ ೫೨ ॥

ಸ್ವರ್ಣೇನ ಮಂಡಿತಾಃ ಪುಚ್ಛಮುಖಪಟ್ಟೆಸ್ಸ್ಫುರತ್ಪ್ರಭಾಃ ।
ಸರ್ವಾಂಗಸುಂದರಾ ದಿವ್ಯಾ ನಿರ್ಗತಾಸ್ತೇ ಸಹಸ್ರಶಃ ॥ ೫೩ ॥

ನ ಸ್ಪರ್ಶಂತಃ ಪದೈರ್ಭೂಮಿಂ ಹ್ಯೇತೆ ಕೃಷ್ಣಹಯಾ ನೃಪ ।
ಚಂಚಲಾ ವಾಯುವೇಗಾಶ್ಚ ಮನೋವೇಗಾ ಮನೋಹರಾಃ ॥ ೫೪ ॥

ಬುದ್ಬುದೇಷ್ವತಿಗಾಶ್ಚೈವ ಪಕ್ವಸೂತ್ರೇಷು ಭೂಪತೇ ।
ಲೂತಾಜಾಲೇಷು ಕೇಚಿದ್ವೈ ಚಲಂತಃ ಪಾರದಂ ಹ್ಯಸು ॥ ೫೫ ॥

ಸ್ಫಾರಾವಾರಿಷು ದೃಶ್ಯಂತೇ ನಿರಾಧಾರಾ ನೃಪೇಶ್ವರ ।
ಅನ್ಯೇಽಪಿ ನಿರ್ಗತಾ ರಾಜನ್ ಮ್ಲೇಚ್ಛದೇಶಭವಾ ಹಯಾಃ ॥ ೫೬ ॥

---

೫೨. ಆ ಕುದುರೆಗಳ ಶಿರಸ್ಸನ್ನು ರತ್ನಗಳಿಂದ ಅಲಂಕರಿಸಿದ್ದರು. ಬಿಳಿಯ ಚಾಮರಗಳು ಪ್ರಕಾಶಿಸುತ್ತಿದ್ದವು. ಮುತ್ತಿನ ಹಾರಗಳನ್ನು ಹಾಕಿದ್ದರು. ಕೆಂಪು ಬಟ್ಟೆಯನ್ನು ಹೊದಿಸಿದ್ದುದರಿಂದ ರಮ್ಯವಾಗಿ ಕಾಣುತ್ತಿದ್ದವು.

೫೩. ಚಿನ್ನದ ಒಡವೆಗಳನ್ನು ಬಾಲ, ಮುಖ, ಹಣೆ ಮುಂತಾದುವುಗಳಲ್ಲಿ ಹಾಕಿದ್ದುದರಿಂದ ಆ ಒಡವೆಗಳು ಹೊಳೆಯುತ್ತಿದ್ದುವು. ಅವು ಸರ್ವಾಂಗ ಸುಂದರ ವಾಗಿಯೂ, ದಿವ್ಯವಾಗಿಯೂ ಇದ್ದವು.

೫೪. ಈ ಕೃಷ್ಣನ ಕುದುರೆಗಳು ಭೂಮಿಯಲ್ಲಿ ಕಾಲನ್ನೇ ಇಡುವುದಿಲ್ಲವೋ ಏನೋ? ಎನ್ನುವಷ್ಟು ಚಂಚಲವಾಗಿ ನಡೆಯುತ್ತಿದ್ದವು. ವಾಯುವೇಗ, ಮನೋ ವೇಗದಂತೆ ಅವುಗಳ ಗತಿಯಿದ್ದಿತು.

೫೫. ಚಿನ್ನದ ಜಾಲರಿಗಳಿಂದಲೂ, ರೇಶಿಮೆಯ ವಸ್ತ್ರಗಳಿಂದಲೂ ಅವು ಗಳನ್ನು ಅಲಂಕರಿಸಿದ್ದರು. ಅವು ಬಾಯಲ್ಲಿ ನೊರೆಯನ್ನು ಸುರಿಸುತ್ತಾ ಪಾದರಸ ದಂತೆ ಅತಿ ಚಂಚಲಸ್ವಭಾವದಿಂದ ಹೊರಡುವ ಆತುರದಲ್ಲಿದ್ದವು

೫೬. ಇನ್ನೂ ಅನೇಕ ಮ್ಲೇಚ್ಛದೇಶೋತ್ಪನ್ನವಾದ ಕುದುರೆಗಳೂ ಹೊರಟವು.

ಶತಯೋಜನಗಾಶ್ಚೈವ ಕೋಟಿಶಃ ಕೋಟಿಶೋ ನೃಪ ।
ಗರ್ತದುರ್ಗನದೀಸೌಧಶೈಲಾದೀಂಶ್ಚ ಹರೇರ್ಹಯಾಃ ॥
ಉಲ್ಲಂಘಯಂತೋ ನೃಪತೇ ಸವೀರಾಸ್ತೇ ತುರಂಗಮಾಃ ॥ ೫೭ ॥

ತತಶ್ಚ ನಿರ್ಯಯೌ ಸರ್ವೇ ದ್ವಾರಕಾಯಾಃ ಪದಾತಿನಃ ।
ಧನ್ವಿನೋ ದಂಶಿತಾಶ್ಶೂರಾ ಮಹಾಬಲಪರಾಕ್ರಮಾಃ ॥ ೫೮ ॥

ಖಡ್ಗಚರ್ಮಧರಾ ಉಚ್ಚಾ ಲೋಹಕಂಚುಕಮಂಡಿತಾಃ ।
ಸಂಗ್ರಾಮೇ ಬಹುಶತ್ರೂಣಾಂ ಜೇತಾರೋ ಗಜಸನ್ನಿಭಾಃ ॥ ೫೯ ॥

ಇತ್ಥಂ ವಿನಿರ್ಗತಂ ಸೈನ್ಯಂ ಯಾದವಾನಾಂ ನಿರೀಕ್ಷ್ಯ ಚ ।
ದೇವದೈತ್ಯನರಾಸ್ಸರ್ವೇ ವಿಸ್ಮಯಂ ಪರಮಂ ಗತಾಃ ॥ ೬೦ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ತ್ರಯೋದಶೋಽಧ್ಯಾಯಃ

---

೫೭. ಕೋಟ್ಯಾನುಕೋಟಿ ಕುದುರೆಗಳು ನೂರುಯೋಜನದ ದೂರ ವೇಗವಾಗಿ ಹೋಗುತ್ತಿದ್ದವು. ಕಂದಕ, ಕೋಟೆ, ನದಿ, ಸೌಧ, ಪರ್ವತ ಇವೆಲ್ಲವನ್ನೂ ದಾಟಿಕೊಂಡು ವೀರರೊಡಗೂಡಿ ಹೊರಟವು. ಇವು ಕೃಷ್ಣನ ಕುದುರೆಗಳು.

೫೮. ಆ ಮೇಲೆ ಸೈನಿಕರು ಹೊರಟರು. ಎಲ್ಲರೂ ಧನುರ್ಧಾರಿಗಳಾಗಿದ್ದರು. ಮಹಾಪರಾಕ್ರಮಿಗಳಾದ ಶೂರರವರು.

೫೯. ಕೆಲವರು ಖಡ್ಗಚರ್ಮಧಾರಿಗಳಾಗಿದ್ದರು. ಕೆಲವರು ಕಬ್ಬಿಣದ ಕವಚಗಳನ್ನು ಧರಿಸಿದ್ದರು. ಆನೆಯಂತೆ ಎತ್ತರವಾಗಿಯೂ ಪರಾಕ್ರಮಿಗಳಾಗಿಯೂ ಇದ್ದರು. ಯುದ್ಧದಲ್ಲಿ ಅನೇಕ ಶತ್ರುಗಳನ್ನು ಕೊಲ್ಲುವಷ್ಟು ಶಕ್ತಿವಂತರಾಗಿದ್ದರು.

೬೦. ಈ ರೀತಿ ದ್ವಾರಕೆಯಿಂದ ಹೊರಟ ಯದುಸೈನ್ಯವನ್ನು ನೋಡಿ ದೇವ, ದೈತ್ಯ, ಮಾನವರೆಲ್ಲರೂ ಅತ್ಯಾಶ್ಚರ್ಯಗೊಂಡರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹದಿಮೂರನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಚತುರ್ದಶೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಅಥ ತನ್ಮಿಲನಾರ್ಥಂ ವೈ ಉಗ್ರಸೇನಾಜ್ಞಯಾ ನೃಪ ।
ವಸುದೇವಃ ಕಾಮಪಾಲಃ ಶ್ರೀಕೃಷ್ಣಃ ಕಾರ್ಷ್ಣಿರೇವ ಚ ॥ ೧ ॥

ಅನ್ಯೇಽಪಿ ಯಾದವಾ ರಾಜನ್ ರಥೈಸ್ಸರ್ವೇ ವಿನಿರ್ಯಯುಃ ।
ಗತ್ವಾನಿರುದ್ಧಂ ದದೃಶುಃ ಸೇನಯಾ ತು ಪರೀವೃತಂ ॥ ೨ ॥

ಪ್ರದ್ಯುಮ್ನಾಯ ರಾಜಸೂಯೇ ಯಾ ನೀತಿಃ ಕಥಿತಾ ಪುರಾ ।
ತಾಂ ಸರ್ವಾಮನಿರುದ್ಧಾಯ ಕಥಯಾಮಾಸ ಮಾಧವಃ ॥ ೩ ॥

ಹದಿನಾಲ್ಕನೆಯ ಅಧ್ಯಾಯವು

೧. ಗರ್ಗನು ಹೇಳಿದನು:—ಎಲೈ ವಜ್ರನಾಭಿಯೇ, ಕೇಳು. ಅನಿರುದ್ಧನು ದ್ವಾರಕೆಯನ್ನು ಬಿಟ್ಟು ಹೊರಹೊರಡಲು ಆಗ ಅವನನ್ನು ಬೀಳ್ಕೊಂಡು ಬರಲು ಉಗ್ರಸೇನನ ಅಪ್ಪಣೆಯಂತೆ ವಸುದೇವ, ಕಾಮಪಾಲ, ಶ್ರೀಕೃಷ್ಣ, ಪ್ರದ್ಯುಮ್ನ, ಮುಂತಾದ ಇನ್ನೂ ಅನೇಕ ಯಾದವರು ರಥದಲ್ಲಿ ಕುಳಿತು ಹೊರಟರು.

೨-೩. ಹೋಗಿ ಊರ ಹೊರಗೆ ಸೇನಾಸಮೇತನಾಗಿ ನಿಂತಿರುವ ಅನಿರುದ್ಧನನ್ನು ಕಂಡರು. ಕೃಷ್ಣನು ರಾಜಸೂಯಯಾಗದಲ್ಲಿ ಯಜ್ಞಾಶ್ವರಕ್ಷಣೆಗೆ ಹೊರಟ ಪ್ರದ್ಯುಮ್ನನಿಗೆ ಯಾವ ಯಾವ ನೀತಿಗಳನ್ನು ಹೇಳಿದ್ದನೋ ಅವೆಲ್ಲವನ್ನೂ ಅನಿರುದ್ಧನಿಗೆ ಉಪದೇಶಿಸಿದನು.

ಇತಿ ಶ್ರುತ್ವಾ ಚ ಕೃಷ್ಣಸ್ಯ ಶಾಸನಂ ಸರ್ವಯಾದವಾಃ ।
ಶಿರಸಾ ಜಗೃಹೂ ರಾಜನ್ನನಿರುದ್ಧಾದಯೋ ಮುದಾ ॥ ೪ ॥

ಅಥ ಗರ್ಗಂ ಮುನೀಂಶ್ಚೈವ ವಸುದೇವಂ ಹಲಾಯುಧಂ ।
ಶ್ರೀಕೃಷ್ಣಚಂದ್ರಂ ಕಾರ್ಷ್ಣಿಂ ಚ ಪ್ರಾದ್ಯುಮ್ನಿಃ ಪ್ರಣನಾಮ ಹ ॥ ೫ ॥

ವಸುದೇವರಾಮಕೃಷ್ಣಪ್ರದ್ಯುಮ್ನಾದ್ಯಾಃ ಶುಭಾಶಿಷಂ ।
ಅನಿರುದ್ಧಾಯ ದತ್ವಾ ಚ ಪ್ರವಿಷ್ಟಾಸ್ತೇ ಪುರೀಂ ರಥೈಃ ॥ ೬ ॥

ಅಥಾನಿರುದ್ಧಸ್ಯ ಹಯೋ ದೇಶೇ ದೇಶೇ ಗತೋ ನೃಪ ।
ನ ಕೋಪಿ ಜಗೃಹುಸ್ತಂ ವೈ ಭಯಾತ್ಕೃಷ್ಣಸ್ಯ ಭೂಮಿಪಾಃ ॥ ೭ ॥

ಯತ್ರ ಯತ್ರ ಗತೋ ವಾಜೀ ತತ್ರ ತತ್ರ ಸಸೈನಿಕಃ ।
ಕಾರ್ಷ್ಣಿಜಃ ಪೃಷ್ಟತಸ್ತಸ್ಯ ಜೇತುಂ ಶತ್ರೂನ್ ಗತಃ ಕಿಲ ॥ ೮ ॥

ಇತ್ಥಂ ವಿಲೋಕಯನ್ರಾಜ್ಯಾನ್ಯನಿರುದ್ಧತುರಂಗಮಃ ।
ರಾಜಿತಾಂ ನರ್ಮದಾತೀರೇ ಯಯೌ ಮಾಹಿಷ್ಮತೀಂ ಪುರೀಂ ॥ ೯ ॥

---

೪. ಕೃಷ್ಣನ ಉಪದೇಶವನ್ನು ಅನಿರುದ್ಧನೂ, ಯದುಸೈನಿಕರೂ ಸಂತೋಷದಿಂದ ಶಿರಸಾವಹಿಸಿದರು.

೫. ಅನಂತರ ಅನಿರುದ್ಧನು ನನ್ನನ್ನೂ, ಋಷಿಗಳನ್ನೂ, ವಸುದೇವ, ಬಲರಾಮ, ಶ್ರೀಕೃಷ್ಣ ಮುಂತಾದವರನ್ನು ನಮಸ್ಕರಿಸಿದನು.

೬. ವಸುದೇವ, ಬಲರಾಮ, ಕೃಷ್ಣ, ಪ್ರದ್ಯುಮ್ನ ಇವರೇ ಮೊದಲಾದವರು ಅನಿರುದ್ಧನಿಗೆ ಶುಭಾಶೀರ್ವಾದಗಳನ್ನು ಮಾಡಿ ಹಿಂತಿರುಗಿದರು.

೭. ಬಳಿಕ ಯಜ್ಞಾಶ್ವವು ಹೊರಟು ದೇಶದೇಶಗಳನ್ನೆಲ್ಲಾ ಸಂಚರಸಿತು. ಆದರೂ ಕೃಷ್ಣನ ಭಯದಿಂದ ಯಾವ ರಾಜನೂ ಅದನ್ನು ಹಿಡಿಯಲ್ಲಿಲ್ಲ.

೮. ಅಶ್ವವು ಎಲ್ಲೆಲ್ಲಿಗೆ ಹೋಗುವುದೋ ಅಲ್ಲಲ್ಲಿಗೆ ಅದರ ಹಿಂದೆಯೇ ಅನಿರುದ್ಧನು ಸೈನ್ಯಸಮೇತನಾಗಿ ಶತ್ರುಗಳನ್ನು ಗೆಲ್ಲಲು ಸಿದ್ಧನಾಗಿರುತ್ತಿದ್ದನು.

೯. ಹೀಗೆಯೇ ಅಶ್ವವು ಅನೇಕ ರಾಜ್ಯಗಳಲ್ಲಿ ಸಂಚರಿಸಿ ಕೊನೆಗೆ ನರ್ಮದಾನದಿಯ ದಡದಲ್ಲಿ ಪ್ರಕಾಶಿಸುತ್ತಿದ್ದ ಮಾಹಿಷ್ಮತೀ ಎಂಬ ಪಟ್ಟಣಕ್ಕೆ ತೆರಳಿತು.

ಚಾತುರ್ವರ್ಣ್ಯಸಮಾಕೀರ್ಣಾಮಶ್ಮದುರ್ಗೇಣ ಮಂಡಿತಾಂ ।
ಸದನೈರ್ಗಗನಸ್ಪರ್ಶೈರ್ಮಹೇಶಸ್ಯಾಲಯೈರ್ವೃತಾಂ ॥ ೧೦ ॥

ಇಂದ್ರನೀಲೇನ ರಾಜ್ಞಾಪಿ ಪಾಲಿತಾಂ ಪಂಚಯೋಜನಾಂ ।
ಶಾಲೈಸ್ತಾಲೈಸ್ತಮಾಲೈಶ್ಚ ವಟೈರ್ಬಿಲ್ವೈಶ್ಚ ಪಿಪ್ಪಲೈಃ ॥ ೧೧ ॥

ತಡಾಗೈಶ್ಚೈವ ವಾಪೀಭಿರ್ಘುಷ್ಟಾಂ ಪಕ್ಷಿಗಣೈಸ್ತಥಾ ।
ಈದೃಶೀಂ ನಗರೀಮಶ್ವೋ ದದರ್ಶೋಪವನೇ ಗತಃ ॥ ೧೨ ॥

ಇಂದ್ರನೀಲಸ್ಯ ತನಯೋ ನಾಮ್ನಾ ನೀಲಧ್ವಜೋ ಬಲೀ ।
ಪುರ್ಯಾಃ ಸಹಸ್ರವೀರೈಶ್ಚ ಮೃಗಯಾರ್ಥೀ ವಿನಿರ್ಗತಃ ॥ ೧೩ ॥

---

೧೦. ಆ ಮಾಹಿಷ್ಮತಿಯಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರೂ ವಾಸವಾಗಿದ್ದರು. ಆ ಪಟ್ಟಣದ ಕೋಟೆಯು ಕಲ್ಲಿನಿಂದ ಕಟ್ಟಲ್ಪಟ್ಟಿದ್ದಿತು. ಗಗನ ಚುಂಬಿತಗಳಾದ ಮನೆಗಳು ಅನೇಕವಿದ್ದವು. ಪರಮೇಶ್ವರನ ದೇವಸ್ಥಾನಗಳಿಂದ ರಂಜಿಸುತ್ತಿತ್ತು.

೧೧. ಆ ಪಟ್ಟಣವು ಐದುಯೋಜನ ವಿಸ್ತಾರವಾಗಿದ್ದಿತು. ಅದನ್ನು ಇಂದ್ರನೀಲನೆಂಬ ರಾಜನು ಆಳುತ್ತಿದ್ದನು. ಶಾಲ, ತಾಲ, ಹೊಂಗೆ, ಆಲ, ಬಿಲ್ವ, ಪಿಪ್ಪಲ, ಮುಂತಾದ ಅನೇಕ ಮರಗಳಿಂದ ಕೂಡಿದ ಉಪವನಗಳಿದ್ದವು.

೧೨. ಅನೇಕ ಕೆರೆಗಳೂ, ಭಾವಿಗಳೂ ಇದ್ದವು. ವಿಚಿತ್ರವಾದ ಪಕ್ಷಿಗಳು ಇದ್ದವು. ಇಂತಹ ರಮ್ಯವಾದ ಮಾಹಿಷ್ಮತಿಗೆ ಅಶ್ವವು ಬಂದು ಒಂದು ಉಪವನದ ಸಮೀಪದಲ್ಲಿ ನಿಂತಿತು.

೧೩. ಇಂದ್ರನೀಲನಿಗೆ ನೀಲಧ್ವಜನೆಂಬ ಮಗನಿದ್ದನು. ಅವನು ಬಹು ಶೂರನು. ನಗರದ ಅನೇಕ ವೀರರೊಡಗೂಡಿ ಬೇಟೆಯಾಡಲು ಹೊರಟು ಆ ಕುದುರೆ ನಿಂತಿದ್ದ ವನಕ್ಕೆ ಬಂದನು.

ತತೋ ದದರ್ಶ ತುರಗಂ ಸಪತ್ರಂ ನೃಪನಂದನಃ ।
ಪ್ರಫುಲ್ಲಿತೇ ಚೋಪವನೇ ಕದಂಬಸ್ಯ ತಲೇ ಸ್ಥಿತಂ ॥ ೧೪ ॥

ಚರಂತಂ ಚಾಮರೈರ್ಯುಕ್ತಂ ಸೌರಭೇಯಿಾಪಯಃಪ್ರಭಂ ।
ಸ್ತ್ರೀಣಾಂ ಕುಂಕುಮಹಸ್ತೈಶ್ಚ ಮುಕ್ತಾಹಾರೈರಲಂಕೃತಂ ॥
ಹಯಂ ದೃಷ್ಟ್ವಾ ರಾಜಸುತೋ ಸ್ವವಾಹಾದವತೀರ್ಯ ಚ ॥ ೧೫ ॥

ಕೇಶೇಷು ತಂ ನಿಜಗ್ರಾಹ ಹರ್ಷೇಣ ನೃಪ ಲೀಲಯಾ ।
ತತ್ಪತ್ರಂ ವಾಚಯಾಮಾಸ ಯಾದವೇಂದ್ರೇಣ ಯತ್ಕೃತಂ ॥ ೧೬ ॥

ದ್ವಾರಕಾಧಿಪತೀ ರಾಜಾ ಸರ್ವಶೂರಶಿರೋಮಣಿಃ ॥ ೧೭ ॥

ನಾನ್ಯೋಽಸ್ತಿ ತತ್ಸಮಃ ಕೋಽಪಿ ಚಕ್ರವರ್ತೀ ಬೃಹಚ್ಛ್ರವಾಃ ।
ವಿಮೋಚಿತಸ್ತುರಗರಾಟ್ ತೇನಾಸೌ ಪತ್ರಸಂಯುತಃ ॥ ೧೮ ॥

---

೧೪. ಆ ವನದಲ್ಲಿ ಮೇಯುತ್ತಾ ಕದಂಬವೃಕ್ಷದ ಕೆಳಗಡೆ ನಿಂತಿರುವ ಯಜ್ಞಾಶ್ವವನ್ನು ಆ ನೀಲಧ್ವಜನು ನೋಡಿದನು. ಅದರ ಹಣೆಗೆ ಚಿನ್ನದ ತಗಡನ್ನು ಕಟ್ಟಿರುವುದು ಕಂಡಿತು.

೧೫. ಹಾಲಿನಂತೆ ಬಿಳುಪಾಗಿದ್ದಿತು. ಚಾಮರಗಳು ತಲೆಯಮೇಲೆ ಪ್ರಕಾಶಿಸುತ್ತಿದ್ದವು. ಸ್ತ್ರೀಯರು ಕುಂಕುಮದಲ್ಲಿ ಕೈಗಳನ್ನದ್ದಿ ಕುದುರೆಯ ಶರೀರದ ಮೇಲೆಲ್ಲಾ ಕೈಗಳ ಗುರುತನ್ನು ಮೂಡಿದ್ದರು. ಮುತ್ತಿನಸರಗಳು ಕತ್ತಿನಲ್ಲಿ ಪ್ರಕಾಶಿಸುತ್ತಿದ್ದವು. ಇಂತಹ ಹಯುವನ್ನು ನೋಡಿ ರಾಜಕುಮಾರನಾದ ನೀಲಧ್ವಜನು ತನ್ನ ವಾಹನದಿಂದ ಇಳಿದು,

೧೬. ತಕ್ಷಣ ಕುದುರೆಯ ಹತ್ತಿರಕ್ಕೆ ಹೋಗಿ ಅನಾಯಾಸವಾಗಿ ಆ ಕುದುರೆಯ ತಲೆಯ ಕೂದಲುಗಳನ್ನು ಹಿಡಿದು ಅದನ್ನು ನಿಲ್ಲಿಸಿದನು. ಹಾಗೂ ಲಲಾಟದಲ್ಲಿ ಕಟ್ಟಿದ್ದ ಸುವರ್ಣಪತ್ರವನ್ನು ಓದಿದನು.

೧೭–೧೮. ಶೂರಾಗ್ರೇಸರನಾದ ಉಗ್ರಸೇನಚಕ್ರವರ್ತಿಯು ದ್ವಾರಕೆಯನ್ನು ಆಳುತ್ತಿರುವನು. ಅವನಿಗೆ ಸಮಾನರಾದ ಶೂರರು ಪ್ರಪಂಚದಲ್ಲಿ ಯಾರೂ ಇಲ್ಲವು. ಅವನು ಈ ಯಜ್ಞಾಶ್ವವನ್ನು ಬಿಟ್ಟಿರುವನು. ಅದರ ವಿಷಯಗಳು ಈ ಪತ್ರದಲ್ಲಿವೆ.

ಪಾಲ್ಯಮಾನೋಽನಿರುದ್ಧೇನ ಗೃಹ್ಣಂತು ಸಬಲಾ ನೃಪಾಃ ।
ತಸ್ಯಾನ್ಯಥಾ ಪ್ರಪದಯೋಃ ಪತಿತ್ವಾ ಯಾಂತು ಕ್ಷತ್ರಿಯಾಃ ॥ ೧೯ ॥

ಇತ್ಯಭಿಪ್ರಾಯಮಾಲೋಕ್ಯ ಕೋಪೇನಾಹ ನೃಪಾತ್ಮಜಃ ।
ಅನಿರುದ್ಧೋ ಧನುರ್ಧಾರೀ ಧನ್ವಿನೋ ನ ವಯಂ ಸ್ಮೃತಾಃ ॥ ೨೦ ॥

ಮತ್ಪಿತರಿ ಸ್ಥಿತೇ ಮಹ್ಯಾಂ ಕಸ್ತು ಗರ್ವಂ ಸಮಾಚರೇತ್ ।

॥ ಶ್ರೀಗರ್ಗ ಉವಾಚ ॥

ಇತ್ಯುಕ್ತ್ವಾ ಸ ಹಯಂ ನೀತ್ವಾ ಪ್ರಯಯೌ ನೃಪಸನ್ನಿಧೌ ॥ ೨೧ ॥

ಕಥಯಾಮಾಸ ವೃತ್ತಾಂತಂ ಪಿತುರಗ್ರೇ ಹಯಸ್ಯ ಚ ।
ಶ್ರುತ್ವಾ ಪುತ್ರಸ್ಯ ವಚನಮಿಂದ್ರನೀಲೋ ಮಹೀಶ್ವರಃ ॥ ೨೨ ॥

ಶಿವಭಕ್ತೋ ಮಹಾಮಾನೀ ಪುತ್ರಂ ಪ್ರಾಹ ಮಹಾಬಲಃ ।

---

೧೯. ಇದರ ರಕ್ಷಣೆಗೆ ಶೂರನಾದ ಅನಿರುದ್ಧನು ಸಿದ್ಧವಾಗಿರುವನು. ಶೂರರಾದ ಕ್ಷತ್ರಿಯರು ಯಾರಾದರೂ ಇದ್ದಲ್ಲಿ ಇದನ್ನು ಕಟ್ಟಿಹಾಕಬಹುದು. ಹಾಗಿಲ್ಲದ ಪಕ್ಷಕ್ಕೆ ಎಲ್ಲ ರಾಜರೂ ಅನಿರುದ್ಧನ ಕಾಲ್ಗಳಮೇಲೆ ಬಿದ್ದು ಶರಣಾಗತರಾಗಬೇಕು.

೨೦. ಎಂದು ಬರೆದಿರುವುದನ್ನು ತಿಳಿದು ನೀಲಧ್ವಜನು ಕೋಪಗೊಂಡು ಅನಿರುದ್ಧನೊಬ್ಬನು ಮಾತ್ರ ಧನುಸ್ಸನ್ನು ಧರಿಸಿರುವವೀರನೇ ? ಇಂತಹ ಧನುರ್ಧಾರಿಗಳು ನಮಗೊಂದು ಲೆಕ್ಕವೇ ? ನಮ್ಮ ತಂದೆ ಇರುವಾಗ ಇಷ್ಟು ಗರ್ವಪಡುವವರೂ ಇರುವರೇ ? ಎಂದು ಹೇಳಿ,

೨೧. ಆ ಕುದುರೆಯನ್ನು ಹಿಡಿದುಕೊಂಡು ತನ್ನ ತಂದೆಯ ಸಮೀಪಕ್ಕೆ ಹೋಗಿ ಎಲ್ಲ ವಿಷಯಗಳನ್ನೂ ತಿಳಿಸಿದನು.

೨೨. ತನ್ನ ಮಗನಾಡಿದುದನ್ನು ಕೇಳಿ ಈಶ್ವರನ ಭಕ್ತನೂ, ಮಹಾ ಗೌರವಶಾಲಿಯೂ ಆದ ಇಂದ್ರನೀಲರಾಜನು ಮಗನನ್ನು ಕುರಿತಿಂತೆಂದನು.

॥ ಇಂದ್ರನೀಲ ಉವಾಚ ॥

ಸಮರ್ಥೇನ ಪುರಾ ದತ್ತಂ ರಾಜಸೂಯೇ ಕ್ರತೂತ್ತಮೇ ॥ ೨೩ ॥
ಪ್ರದ್ಯುಮ್ನಾಯ ಬಲಿಂ ಕಿಂಚಿತ್ಕುಮಂತ್ರಿವಚನಾನ್ಮಯಾ ।
ಅದ್ಯಾನಿರುದ್ಧಸ್ತು ಹಯಂ ಪಾಲಯನ್ಪುನರಾಗತಃ ॥ ೨೪ ॥

ಅಹೋ ದೈವಬಲಂ ಯೇನ ಕಿಂ ನ ಭೂಯಾದ್ವಿಪರ್ಯಯಃ ।
ಗತಾ ವೃದ್ಧಿಂ ದ್ವಾರಕಾಯಾಮಲ್ಪಕಾಲೇನ ವೃಷ್ಣಯಃ ॥ ೨೫ ॥

ತಸ್ಮಾತ್ಸರ್ವಾನ್ವಿಜೇಷ್ಯಾಮಿ ಕಾರ್ಷ್ಣಿಜಪ್ರಮುಖಾನ್ಯದೂನ್ ।
ಶ್ಯಾಮಕರ್ಣಂ ನ ದಾಸ್ಯಾಮಿ ತಸ್ಮೈ ಮಾನವೃತಾಯ ಚ ॥ ೨೬ ॥

ಪಾಲಯಿಷ್ಯತಿ ಮಾಂ ಯುದ್ಧೇ ಭಕ್ತ್ಯಾ ಸಂತೋಷಿತಃ ಶಿವಃ ।
ಇತ್ಯುಕ್ತ್ವಾ ಸೇನಯಾ ಯುಕ್ತೋ ವೀರೋ ಮಾಹಿಷ್ಮತೀಪತಿಃ ॥ ೨೭ ॥
ಸ್ವರ್ಣದಾಮ್ನಾ ಹಯಂ ಬದ್ಧ್ವಾ ಯುದ್ಧಂ ಕರ್ತುಂ ಮನೋ ದಧೇ ।

೨೩–೨೪. ಇಂದ್ರನೀಲನು ಹೇಳಿದನು :–ಹಿಂದೆ ಉಗ್ರಸೇನನು ರಾಜಸೂಯ ಯಾಗವನ್ನು ಮಾಡಿದಾಗ ನಾನು ದುರ್ಮಂತ್ರಿಯ ಮಾತನ್ನು ಕೇಳಿಕೊಂಡು ಯಜ್ಞಾಶ್ವ ಪಾಲನೆಗೆ ಬಂದಿದ್ದ ಪ್ರದ್ಯುಮ್ನನಿಗೆ ಕಾಣಿಕೆಯನ್ನು ಕೊಟ್ಟು ಶರಣಾಗತ ನಾಗಿದ್ದೆನು. ಈಗ ಅವನ ಮಗ ಅನಿರುದ್ಧನು ಯಜ್ಞಾಶ್ವದರಕ್ಷಣೆಗೆ ಬಂದಿರುವನು.

೨೫. ಏನೋ ದೈವಗತಿಯು ವಿಚಿತ್ರವಾದುದು. ಸ್ವಲ್ಪಕಾಲದಲ್ಲಿಯೇ ಯಾದವರು ಅಭಿವೃದ್ಧಿಗೆ ಬಂದುಬಿಟ್ಟರು. ಅದೃಷ್ಟದಿಂದ ಯಾವುದು ತಾನೇ ವ್ಯತ್ಯಾಸವಾಗುವುದಿಲ್ಲ

೨೬. ಆದರೆ ಈಗ ಬಿಡುವೆನೇ ? ಅನಿರುದ್ಧನೇ ಮೊದಲಾದ ಯದುಪ್ರಮುಖ ರನ್ನೆಲ್ಲಾ ಜಯಿಸಿ ಬಿಡುವೆನು. ಯಜ್ಞಾಶ್ವವನ್ನು ಕೊಡುವುದಿಲ್ಲ. ನೋಡೋಣ. ನನ್ನ ಭಕ್ತಿಯಿಂದ ಶಿವನನ್ನು ಸಂತೋಷಪಡಿಸುವೆನು. ಸಂತುಷ್ಟನಾದ ಶಿವನು ಯುದ್ಧದಲ್ಲಿ ನನ್ನನ್ನು ಕಾಪಾಡಿಯೇ ಕಾಪಾಡುವನು.

೨೭. ಹೀಗೆಂದು ಹೇಳಿ ಮಾಹಿಷ್ಮತೀ ಪತಿಯಾದ ಇಂದ್ರನೀಲನು ಸೇನೆ ಯೊಡನೆ ಹೊರಟು ಆ ಕುದುರೆಯನ್ನು ಚಿನ್ನದ ಹಗ್ಗದಿಂದ ಕಟ್ಟಿದನು. ಯುದ್ಧ ಮಾಡಲು ನಿಶ್ಚಯಿಸಿದನು.

ತತೋಽನಿರುದ್ಧಃ ಸಂಪ್ರಾಪ್ತೋ ತುರಗಂ ಚ ವಿಲೋಕಯನ್ ॥ ೨೮ ॥

ಅಕ್ಷೌಹಿಣೀಶತಯುತೋ ನರ್ಮದಾಯಾಸ್ತಟೇ ನೃಪ ।
ಸಾಂಬೋ ಮಧುಬೃಹದ್ಬಾಹುಶ್ಚಿತ್ರಭಾನುರ್ವೃಕೋಽರುಣಃ ॥ ೨೯ ॥

ಸಂಗ್ರಾಮಜಿತ್ಸುಮಿತ್ರಶ್ಚ ದೀಪ್ತಿಮಾನ್ಭಾನುರೇವ ಚ ।
ವೇದಬಾಹುಃ ಪುಷ್ಕರಶ್ಚ ಶ್ರುತದೇವಃ ಸುನಂದನಃ ॥ ೩೦ ॥

ವಿರೂಪಶ್ಚಿತ್ರಬಾಹುಶ್ಚ ನ್ಯಗ್ರೋಧಶ್ಚ ಕವಿಸ್ತಥಾ ।
ಏತೇ ಸಮಾಯಯೂ ರಾಜನ್ನನಿರುದ್ಧಸಹಾಯಿನಃ ॥ ೩೧ ॥

ಗದಶ್ಚ ಸಾರಣೋ ಕ್ರೂರಃ ಕೃತವರ್ಮಾ ಹಿ ಚೋದ್ಧವಃ ।
ಯುಯುಧಾನಸ್ಸಾತ್ಯಕಿಶ್ಚ ಶೂರಾ ಏತೇ ಚ ವೃಷ್ಣಯಃ ॥ ೩೨ ॥

ಸಹಾಯಮನಿರುದ್ಧಸ್ಯ ಕರ್ತುಂ ಸರ್ವೇ ಸಮಾಗತಾಃ ।
ಸ್ಥಿತ್ವಾ ತೇ ನರ್ಮದಾತೀರೇ ಭೋಜವೃಷ್ಣ್ಯಂಧಕಾದಯಃ ॥ ೩೩ ॥

ಶ್ಯಾಮಕರ್ಣಮಪಶ್ಯಂತೋ ತ್ವಬ್ರುವನ್ ವಿಸ್ಮಯಾನ್ವಿತಾಃ ।

---

೨೮. ಅಶ್ವವನ್ನು ಹಿಂಬಾಲಿಸುತ್ತಾ ಅನಿರುದ್ಧಾದಿಗಳು ನೂರು ಅಕ್ಷೌಹಿಣಿ ಸೇನೆಯೊಂದಿಗೆ ಆ ನರ್ಮದಾನದಿಯ ತಟಕ್ಕೆ ಬಂದಿಳಿದರು.

೨೯-೩೨. ಸಾಂಬ, ಮಧು, ಬೃಹದ್ಬಾಹು, ಚಿತ್ರಭಾನು, ವೃಕ, ಅರುಣ, ಸಂಗ್ರಾಮಜಿತ್, ಸುಮಿತ್ರ, ದಿಪ್ತಮಾನ್, ಭಾನು, ವೇದಬಾಹು, ಪುಷ್ಕರ, ಶ್ರುತದೇವ, ಸುನಂದ, ವಿರೂಪ, ಚಿತ್ರಬಾಹು, ನ್ಯಗ್ರೋಧ, ಕವಿ, ಗದ, ಸಾರಣ, ಕ್ರೂರ, ಕೃತವರ್ಮ, ಉದ್ಧವ, ಯುಯುಧಾನ, ಸಾತ್ಯಕಿ, ಇವರೇ ಮೊದಲಾದ ಶೂರರು ಅನಿರುದ್ಧನಿಗೆ ಸಹಾಯಕರಾಗಿ ಬಂದಿದ್ದರು.

೩೩. ಭೋಜ, ವೃಷ್ಣಿ, ಅಂಧಕ ಮುಂತಾದವರೂ ಸಹ ನರ್ಮದೆಯ ದಡಕ್ಕೆ ಬಂದು ಸೇರಿದರು. ಅಲ್ಲಿ ಯಜ್ಞಾಶ್ವವನ್ನು ಕಾಣದೆ ಆಶ್ಚರ್ಯಗೊಂಡು ಈ ರೀತಿ ಅಂದುಕೊಂಡರು.

ಕೇನ ನೀತಃ ಸಪತ್ರಾಶ್ವ ಉಗ್ರಸೇನಸ್ಯ ಭೂಪತೇಃ ॥ ೩೪ ॥

ತಸ್ಮಾನ್ಮಿತ್ರಾಣಿ ಸೋಽಪ್ಯತ್ರ ಶ್ಯಾಮಕರ್ಣೋ ನ ದೃಶ್ಯತೇ ।
ರಾಜಸೂಯೇ ಪುರಾ ಯಸ್ಮೈ ನರದೈತ್ಯಸುರಾದಯಃ ॥ ೩೫ ॥

ನವಖಂಡಾಧಿಪಾಶ್ಚೈವ ನಿರ್ಜಿತಾಶ್ಚ ಬಲಿಂ ದದುಃ ।
ಯಸ್ಯ ವೈ ಶಾಸನಂ ಚಂಡಂ ತಿರಸ್ಕೃತ್ಯ ಕುಧೀರ್ನೃಪಃ ॥ ೩೬ ॥

ತುರಗಂ ಹೃತವಾನ್ಮಾನಾತ್ಸ ಸ್ತೇನೋ ದಂಡಮರ್ಹತಿ ।
ಸರ್ವೇಷಾಮಿತಿ ವಾಕ್ಯಂ ತು ಶ್ರುತ್ವಾ ದೃಷ್ಟ್ವಾ ಪುರೀಂ ಪುರಃ ॥ ೩೭ ॥

ಉದ್ಧವಂ ಮಂತ್ರಿಣಾಂ ಶ್ರೇಷ್ಠಂ ಪ್ರಾಹ ರುಕ್ಮವತೀಸುತಃ ।

॥ ಅನಿರುದ್ಧ ಉವಾಚ ॥

ನಗರೀಯಂ ನದೀತೀರೇ ಕಸ್ಯ ಭೂಪಸ್ಯ ರಾಜತೇ ॥ ೩೮ ॥

---

೩೪. ಎಲೈ ಮಿತ್ರರೇ, ಇದೇನು ನಮ್ಮ ಯಜ್ಞಾಶ್ವವು ಕಾಣುವುದೇ ಇಲ್ಲವಲ್ಲ? ಯಾರು ಇದನ್ನು ಕಟ್ಟಿಹಾಕಿರುವರು?

೩೫–೩೬. ಹಿಂದೆ ಇದೇ ಉಗ್ರಸೇನನು ರಾಜಸೂಯಯಾಗಕ್ಕೋಸ್ಕರ ಬಿಟ್ಟ ಅಶ್ವವನ್ನು ಹಿಡಿಯಲಾರದೆ ಮನುಷ್ಯ, ದೈತ್ಯ, ದೇವತೆ ಮುಂತಾದ ರಾಜರೂ ನವದ್ವೀಪಾಧಿಪತಿಗಳೂ ಕಾಣಿಕೆಯನ್ನೊಪ್ಪಿಸಿ ಶರಣಾಗತರಾದರು. ಈಗ ಅಂತಹ ರಾಜನ ಉಗ್ರವಾದ ಶಾಸನವನ್ನೂ ಉಲ್ಲಂಘಿಸಿ ಯಾವ ಚೋರನು ಕುದುರೆಯನ್ನಪಹರಿಸಿರುವನು? ಅವನಿಗೆ ಶಿಕ್ಷೆಯಾಗಲೇಬೇಕು.

೩೭. ಎಂದು ಎಲ್ಲರೂ ಹೇಳಲು ಅನಿರುದ್ಧನು ಎದುರಿಗೆ ಇರುವ ಮಾಹಿಷ್ಮತಿಯನ್ನು ನೋಡಿ ಮಂತ್ರಿಶ್ರೇಷ್ಠನಾದ ಉದ್ಧವನನ್ನು ಕರೆದು.

೩೮. ಈ ನದೀ ತೀರದಲ್ಲಿ ಕಾಣುವ ಪಟ್ಟಣವಾವುದು? ಇಲ್ಲಿಯ ರಾಜನಾರು? ಬಹುಶಃ ನಮ್ಮ ಕುದುರೆಯು ಈ ಪಟ್ಟಣಕ್ಕೆ ಹೋಗಿರಬಹುದೆಂದು ನನಗೆ ತೋರುತ್ತಿದೆ.

ತುರಂಗಮೋ ಗತಸ್ತಸ್ಯಾಮಿತಿ ಮನ್ಯೇ ತ್ವಹಂ ಕಿಲ ।
ಇತಿ ತದ್ವಾಕ್ಯಮಾಕರ್ಣ್ಯ ಪ್ರಾಹ ಕೃಷ್ಣಸಖೋ ಮುದಾ ॥ ೩೯ ॥

॥ ಉದ್ಧವ ಉವಾಚ ॥

ಇಂದ್ರನೀಲಸ್ಯ ನಗರೀ ನಾಮ್ನಾ ಮಾಹಿಷ್ಮತೀ ಶುಭಾ ।
ಮಹೇಶಪೂಜನರತಾ ವರ್ಣಾ ಯಸ್ಯಾಂ ವಸಂತಿ ಹಿ ॥ ೪೦ ॥

ನೃಪೇಣಾನೇನ ವೃಷ್ಣೀಶ ನರ್ಮದಾಯಾಸ್ತಟೇ ಪುರಾ ।
ದ್ವಾದಶವರ್ಷಪರ್ಯಂತಂ ಪೂಜಿತೋ ನರ್ಮದೇಶ್ವರಃ ॥ ೪೧ ॥

ತತಃ ಶಿವಃ ಪ್ರಸನ್ನೋಽಭೂದುಪಚಾರೈಶ್ಚ ಷೋಡಶೈಃ ।
ತಸ್ಮೈ ಸ್ವದರ್ಶನಂ ದತ್ವಾ ವರಾರ್ಥಂ ತಮನೋದಯತ್ ॥ ೪೨ ॥

ಮಹೇಶಸ್ಯ ವಚಃ ಶ್ರುತ್ವಾ ನೃಪೋ ಮಾಹಿಷ್ಮತೀಪತಿಃ ।
ಭೂತ್ವಾ ಕೃತಾಂಜಲೀ ರುದ್ರಂ ಪ್ರಾಹ ಗದ್ಗದಯಾ ಗಿರಾ ॥ ೪೩ ॥

೩೯–೪೦. ಎಂದು ಹೇಳಲು ಅದನ್ನು ಕೇಳಿ ಉದ್ಧವನು ಅನಿರುದ್ಧನನ್ನು ಕುರಿತು“ ಇದಕ್ಕೆ ಮಾಹಿಷ್ಮತೀನಗರವೆಂದು ಹೆಸರು. ಇದನ್ನು ಇಂದ್ರನೀಲನೆಂಬುವನು ಆಳುತ್ತಿರುವನು. ಅವನು ಅತ್ಯಂತ ಈಶ್ವರನ ಭಕ್ತನು. ನಾಲ್ಕುವರ್ಣದ ಜನರೂ ಇಲ್ಲಿ ವಾಸಮಾಡುವರು.

೪೧. ಈ ಇಂದ್ರನೀಲನು ಹಿಂದೆ ನರ್ಮದಾನದಿಯ ದಡದಲ್ಲಿ ಹನ್ನೆರಡು ವರ್ಷಗಳವರೆಗೂ ನರ್ಮದೇಶ್ವರನನ್ನು ಪೂಜಿಸಿದನು.

೪೨. ಇವನು ಮಾಡಿದ ಷೋಡಶೋಪಚಾರಗಳಿಂದ ಶಿವನು ಸಂತುಷ್ಟನಾದನು. ಇವನಿಗೆ ಪ್ರಸನ್ನನಾಗಿ ದರ್ಶನವನ್ನು ಕೊಟ್ಟು. ಬೇಕಾದ ವರವನ್ನು ಕೇಳಿಕೊಳ್ಳುವಂತೆ ಹೇಳಿದನು.

೪೩. ಮಹೇಶನ ಮಾತನ್ನು ಕೇಳಿ ಇಂದ್ರನೀಲನು ಅಂಜಲಿಬದ್ಧನಾಗಿ ನಿಂತು ನಡುಗುತ್ತಿರುವ ಮಾತಿನಿಂದ ಈಶ್ವರನನ್ನು ಈ ರೀತಿ ಕೇಳಿಕೊಂಡನು.

ಈಶಾನ ತ್ವಾಂ ನಮಸ್ಯೇಽಹಂ ಸರ್ವದೇಶಂ ಜಗದ್ಗುರುಂ।
ಪುರುಷಾಣಾಂ ಸಕಾಮಾನಾಂ ಕಾಮರೂಪಸುರದ್ರುಮಂ ॥ ೪೪ ॥

ತ್ವತ್ತಃ ಪ್ರದಾತುಃ ಕಾಂಕ್ಷೇಽಹಂ ವರಮೇತನ್ಮಹೇಶ್ವರ।
ದೇವದೈತ್ಯನರೇಭ್ಯಸ್ತ್ವಂ ರಕ್ಷ ಮಾಂ ಸರ್ವದಾ ಭಯಾತ್ ॥ ೪೫ ॥

ಇತಿ ತದ್ವಾಕ್ಯಮಾಕರ್ಣ್ಯ ಕೃತ್ತಿವಾಸಾ ಮುದಾನ್ವಿತಃ।
ತಥಾಸ್ತು ಚೋಕ್ತ್ವಾ ರಾಜೇಂದ್ರ ತತಶ್ಚಾಂತರಧೀಯತ ॥ ೪೬ ॥

ತಸ್ಮಾದೇಷ ನೃಪಃ ಶೂರೋ ಹಯಂ ತುಭ್ಯಂ ನ ದಾಸ್ಯತಿ।
ವಿನಾ ಯುದ್ಧೇನ ರುದ್ರಸ್ಯ ವರಾತ್ಕಂದರ್ಪನಂದನ ॥ ೪೭ ॥

ಇತ್ಥಮೌಪಗವೇರ್ವಾಕ್ಯಮನಿರುದ್ಧೋ ನಿಶಮ್ಯ ಚ।
ಬಲೀ ಧೈರ್ಯೇಣ ಪ್ರತ್ಯಾಹ ಯಾದವಾನಾಂ ಚ ಶೃಣ್ವತಾಂ ॥ ೪೮ ॥

೪೪–೪೫. ಸರ್ವದೇಶನಾದ ನಿನಗೆ ನಮಸ್ಕಾರವು. ನೀನು ಜಗದ್ಗುರುವು. ಪುರುಷರ ಇಷ್ಟಾರ್ಥಗಳಿಗೆ ಕಲ್ಪದ್ರುಮದಂತಿರುವ ನಿನ್ನಿಂದ ನಾನು ಕೇಳುವುದೇನೆಂದರೆ—ನನಗೆ ದೇವ, ದಾನವ, ನರ ಇವರುಗಳ ಯಾರ ಭಯವೂ ಇಲ್ಲದಂತೆ ನನ್ನನ್ನು ಯಾವಾಗಲೂ ಕಾಪಾಡಬೇಕು ಎನ್ನಲು,

೪೬. ರಾಜನು ಹೇಳಿದುದನ್ನು ಕೇಳಿ ಈಶ್ವರನು ಹಾಗೆಯೇ ಆಗಲೆಂದು ವರವನ್ನಿತ್ತು ಅಂತರ್ಧಾನನಾದನು.

೪೭. ಆದುದರಿಂದ ಅನಿರುದ್ಧನೇ, ಶೂರನಾದ ಇಂದ್ರನೀಲನು ನಿನಗೆ ಕುದುರೆಯನ್ನು ಯುದ್ಧಮಾಡದೆ ಹಾಗೆಯೇ ಎಂದಿಗೂ ಕೊಡಲಾರನು. ಏಕೆಂದರೆ ಮಹೇಶ್ವರನ ವರದ ಮಹಿಮೇ ಅವನಿಗಿದೆ.

೪೮. ಈ ರೀತಿ ಉದ್ಧವನು ಹೇಳಲು ಅನಿರುದ್ಧನು ಪುನಃ ಉದ್ಧವನನ್ನು ಕುರಿತು ಯಾದವರೆದುರಿಗೆ ಧೈರ್ಯದಿಂದ ಹೇಳಿದನು.

|| ಅನಿರುದ್ಧ ಉವಾಚ ||

ನೃಪಸ್ಯೈತಸ್ಯ ರುದ್ರಸ್ತು ಸಹಾಯಸ್ತೇ ಹ್ಯುದಾಹೃತಃ ।
ತಥಾ ಕೃಷ್ಣಸ್ತು ಭಗವಾನ್ ಶೃಣು ಮಂತ್ರಿನ್ಮಮೋಪರಿ || ೪೯ ||

ಇತ್ಯುಕ್ತ್ವಾ ಯಾದವೈಸ್ಸಾರ್ಧಂ ವೀರೋ ರುಕ್ಮವತೀಸುತಃ ।
ಹಯಸ್ಯ ಮೋಚನಾರ್ಥಂ ವೈ ನೃಪಂ ಜೇತುಂ ಮನೋ ದಧೇ || ೫೦ ||

ತತಃ ಪರಿಘನಿಸ್ತ್ರಿಂಶಗದಾಚಾಪಪರಶ್ವಧೈಃ ।
ಬಭೂವುರ್ಯಾದವಾಃ ಸಜ್ಜಾಃ ಪ್ರದ್ಯುಮ್ನೋ ದಂಶಿತೇ ಸ್ಥಿತೇ || ೫೧ ||

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಚತುರ್ದಶೋಽಧ್ಯಾಯಃ

---

೪೯. ಮಂತ್ರಿಯೇ, ಆ ಇಂದ್ರನೀಲನಿಗೆ ಮಹೇಶನ ಸಹಾಯವಿರಬಹುದು. ಆದರೆ ನನಗೆ ಶ್ರೀಕೃಷ್ಣಪರಮಾತ್ಮನ ಸಹಾಯವು ಪೂರ್ಣವಾಗಿರುವುದು.

೫೦. ಹೀಗೆಂದು ಹೇಳಿ ಅನಿರುದ್ಧನು ವೀರರಾದ ಯಾದವರೊಡನೆ ಆ ಇಂದ್ರನೀಲನನ್ನು ಜಯಿಸಿ ಕುದುರೆಯನ್ನು ಬಿಡಿಸಿಕೊಂಡು ಬರಬೇಕೆಂದು ನಿಶ್ಚಯಿಸಿದನು.

೫೧. ಆಮೇಲೆ ಯದುಸೈನಿಕರು ಪರಿಘ, ನಿಸ್ತ್ರಿಂಶ, ಗದ, ಬಾಣ, ಪರಶ್ವಧ ಮುಂತಾದ ಆಯುಧಗಳನ್ನು ಹಿಡಿದು ಯುದ್ಧಸನ್ನದ್ಧರಾದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹದಿನಾಲ್ಕನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

-॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಪಂಚದಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥೇಂದ್ರನೀಲಸ್ಯ ಸುತೋ ಮಹಾಬಲೋ
ಹ್ಯಕ್ಷೌಹಿಣೀಭಿಸ್ತ್ರಿಭಿರೇವ ಸಂಯುತಃ ।
ಯದೂನ್ವಿಜೇತುಂ ಸ್ವಪುರಾದ್ವಿನಿರ್ಗತೋ
ಪಿತುಶ್ಚ ವಾಕ್ಯಾದ್ಬಹುರೋಷಪೂರಿತಃ ॥ ೧ ॥

ತಮಾಗತಂ ವೀಕ್ಷ್ಯ ನೃಪಸ್ಯ ಪುತ್ರಂ
ಶ್ರೀಕೃಷ್ಣಪೌತ್ರಸ್ತು ಧನುರ್ಗೃಹೀತ್ವಾ ।
ಯುದ್ಧಂ ಪ್ರಕರ್ತುಂ ಪ್ರಯಯೌ ಸ ಏಕೋ
ವೃತ್ರಂ ವಿಜೇತುಂ ಚ ಯಥಾ ಬಿಡೌಜಾಃ ॥ ೨ ॥

ಹದಿನೈದನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಆಮೇಲೆ ಇಂದ್ರನೀಲನ ಅಪ್ಪಣೆಯನ್ನು ಪಡೆದು ಅವನ ಮಗನಾದ ನೀಲಧ್ವಜನು ಮೂರು ಅಕ್ಷೌಹಿಣೀಸೈನ್ಯವನ್ನು ತೆಗೆದುಕೊಂಡು ಯಾದವರನ್ನು ಜಯಿಸಲು ಅತಿ ರೋಷದಿಂದ ಹೊರಹೊರಟನು.

೨. ತನಗೆದುರಾಗಿ ಬರುತ್ತಿರುವ ನೀಲಧ್ವಜನನ್ನು ನೋಡಿ ಅನಿರುದ್ಧನು ವೃತ್ರಾಸುರನನ್ನು ಕೊಲ್ಲಲು ಹೊರಟ ಇಂದ್ರನಂತೆ ಧನುಸ್ಸನ್ನು ಹಿಡಿದುಕೊಂಡು ಅವನೊಬ್ಬನೇ ನೀಲಧ್ವಜನೊಡನೆ ಯುದ್ಧಮಾಡಲು ಹೊರಟನು.

ಗತ್ವಾನಿರುದ್ಧಃ ಸಂಗ್ರಾಮೇ ಶತ್ರೂಣಾಮುಪರಿ ತ್ವರಂ ।
ಮುಮೋಚ ಬಾಣಪಟಲಾನ್ ಸರ್ವೇಷಾಂ ತ್ರಾಸಯನ್ಮನಃ ॥ ೩ ॥

ತತಶ್ಚ ದುದ್ರುವುಸ್ಸರ್ವೇ ನಿಲಕೇತೋಶ್ಚ ಸೈನಿಕಾಃ ।
ರಣಾದ್ಭೀತಾಃ ಸ್ವಶಂಖಂ ಚ ದಧ್ಮೌ ಪ್ರದ್ಯುಮ್ನನಂದನಃ ॥ ೪ ॥

ಪಲಾಯಮಾನಾಂ ಸ್ವಾಂ ಸೇನಾಂ ದೃಷ್ಟ್ವಾ ನೀಲಧ್ವಜೋ ಬಲೀ ।
ಚಾಪಂ ಟಂಕಾರಯನ್ ಶೀಘ್ರಮಾಯಯೌ ರಣಮಂಡಲೇ ॥ ೫ ॥

ಸೇನಾಂ ಸ್ವಾಂ ನೋದಯಾಮಾಸ ಪುನಸ್ಸೋಽಪಿ ಧನುರ್ಜ್ಯಯಾ ।
ದ್ವಿಷಾಂ ಮಧ್ಯೇಽನಿರುದ್ಧಂ ತಂ ದೃಷ್ಟ್ವಾ ಸಾಂಬೋಽತ್ಯಮರ್ಷಿತಃ ॥ ೬ ॥

ಧನುಷ್ಟಂಕಾರಯನ್ಪ್ರಾಪ್ತೋ ಹ್ಯಕ್ಷೌಹಿಣ್ಯಾವೃತೋ ರುಷಾ ।
ವಿಂಶದ್ಬಾಣೈರ್ನೀಲಕೇತುಂ ಪಂಚಭಿಃ ಪಂಚಭೀ ರಥಾನ್ ॥ ೭ ॥

೩-೪. ಅನಿರುದ್ಧನು ಶತ್ರುಗಳ ಮೇಲೆ ಬೇಗಬೇಗನೆ ಬಾಣಗಳನ್ನು ಪ್ರಯೋಗಿಸಿದನು. ಅವರೆಲ್ಲರೂ ಹೆದರಿ ಯುದ್ಧರಂಗದಿಂದ ಹಿಮ್ಮೆಟ್ಟಿದರು. ಆಗ ಅನಿರುದ್ಧನು ತನ್ನ ಶಂಖವನ್ನು ಗಟ್ಟಿಯಾಗಿ ಊದಿದನು.

೫. ಈ ರೀತಿ ತನ್ನ ಸೇನೆಯು ಓಡಿಹೋಗುತ್ತಿರುವುದನ್ನು ನೋಡಿ ನೀಲಧ್ವಜನು ತನ್ನ ಧನುಸ್ಸನ್ನು ಶಬ್ದಮಾಡಿಸಿ ಜಾಗ್ರತೆಯಾಗಿ ಯುದ್ಧರಂಗಕ್ಕೆ ಬಂದು ನಿಂತನು.

೬. ಪುನಃ ಧನುಷ್ಟಂಕಾರಮಾಡಿ ತನ್ನ ಸೇನೆಯನ್ನು ಉತ್ಸಾಹಗೊಳಿಸಿದನು. ಶತ್ರುಗಳ ಮಧ್ಯದಲ್ಲಿ ನಿಂತಿರುವ ಅನಿರುದ್ಧನನ್ನು ನೋಡಿ ಅತಿ ಕೋಪಗೊಂಡನು. ಆಗ ಸಾಂಬನು ಅವನನ್ನು ನೋಡಿ ಯುದ್ಧಸನ್ನದ್ಧನಾದನು.

೭. ಸಾಂಬನು ಧನುಷ್ಟಂಕಾರವನ್ನು ಮಾಡಿ ತನ್ನ ಸೇನೆಯೊಡಗೂಡಿ ಇಪ್ಪತ್ತು ಬಾಣಗಳಿಂದ ನೀಲಕೇತುವನ್ನೂ ಐದೈದು ಬಾಣಗಳಿಂದ ಅವನ ರಥಗಳನ್ನೂ ಹೊಡೆದನು.

ಅತಾಡಯದ್ಗಜಾಂಶ್ಚೈವ ತಥಾ ಸ ತು ಹಯೊನ್ನರಾನ್ ।
ಭೂವ್ಯಾಂ ನಿಪೇತುಸ್ತೇ ಸರ್ವೇ ಸಾಂಬಬಾಣೈಃ ಪ್ರತಾಡಿತಾಃ ॥ ೮ ॥

ಗಜೋಪರಿ ಗಜಾಃ ಕೇಚಿದ್ರಥೋಪರಿ ರಥಾಸ್ತಥಾ ।
ಹಯೋಪರಿ ಹಯಾಶ್ಚೈವ ನರೋಪರಿ ನರಾಶ್ಚ ವೈ ॥ ೯ ॥

ತತ್ಕ್ಷಣೇನಾಪ್ಯಭೂದ್ಭೂಮಿಾ ರುಧಿರೌಘಪರಿಪ್ಲುತಾ ।
ಪತಿತೈಶ್ಛಿನ್ನಭಿನ್ನೈಶ್ಚ ದ್ವಿಪಾಶ್ವರಥಪತ್ತಿಭಿಃ ॥ ೧೦ ॥

ತತಃ ಪ್ರಭಗ್ನಂ ಸ್ವಬಲಂ ವಿಲೋಕ್ಯ
ನೀಲಧ್ವಜೋ ಭೂಪ ಧನುರ್ಗೃಹೀತ್ವಾ ।
ಬಾಣಾನ್ವಿಮುಂಚನ್ಕಿಲ ಯಾದವಾನಾಂ
ಜೇತುಂ ಮನೋ ಯಸ್ಯ ಸ ಚಾಗಮುದ್ವೈ ॥ ೧೧ ॥

---

೮. ಗಜಗಳನ್ನೂ, ಅಶ್ವಗಳನ್ನೂ, ಕಾಲಾಳುಗಳನ್ನೂ, ಬಾಣಗಳಿಂದ ನೋಯಿಸಿ ಭೂಮಿಯಲ್ಲಿ ಕೆಡಹಿದನು.

೯. ಸಾಂಬನು ಬಾಣಪ್ರಯೋಗಮಾಡಿದ ವೇಗದಲ್ಲಿ ಆನೆಗಳ ಮೇಲೆ ಆನೆಗಳೂ, ರಥಗಳ ಮೇಲೆ ರಥಗಳೂ, ಅಶ್ವಗಳ ಮೇಲೆ ಅಶ್ವಗಳೂ, ಮನುಷ್ಯರ ಮೇಲೆ ಮನುಷ್ಯರೂ ಬಿದ್ದರು.

೧೦. ಆ ಕ್ಷಣದಲ್ಲಿಯೇ ಭೂಮಿಯು ರಕ್ತಪ್ರವಾಹದಿಂದ ನೆನೆದುಹೋಯಿತು. ಗಜ, ಅಶ್ವ, ರಥ, ಕಾಲಾಳು ಮುಂತಾದ ಅನೇಕವು ಕತ್ತರಿಸಲ್ಪಟ್ಟು ಛಿನ್ನಭಿನ್ನವಾದುವು.

೧೧. ತನ್ನ ಸೈನ್ಯವೆಲ್ಲವೂ ಹೀಗೆ ನುಚ್ಚುನೂರಾದುದನ್ನು ನೋಡಿ ನೀಲಧ್ವಜನು ಧನುಸ್ಸನ್ನು ಸಿದ್ಧಗೊಳಿಸಿ ಯಾದವರ ಮೇಲೆ ಬಾಣಪ್ರಯೋಗ ಮಾಡಿ ಅವರನ್ನು ಜಯಿಸಬೇಕೆಂದು ನಿಶ್ಚಯಿಸಿದನು.

ಸ ಗತ್ವಾ ಪ್ರಧನೇ ರಾಜನ್ ದಶಬಾಣೈ ರುಷಾನ್ವಿತಃ ।
ಚಾಪಂ ಸಾಂಬಸ್ಯ ಚಿಚ್ಛೇದ ಪ್ರೇಮ ದುರ್ವಚನೈರಿವ ॥ ೧೨ ॥

ಚತುರ್ಭಿಶ್ಚ ತುರೋ ವಾಹಾನ್ ದ್ವಾಭ್ಯಾಂ ಕೇತುಂ ರಥಂ ಶತೈಃ ।
ಏಕೇನ ಜಘ್ನೇ ಸೂತಂ ಸ ಇಂದ್ರನೀಲಸುತೋ ಬಲೀ ॥ ೧೩ ॥

ಏವಂ ಕೃತ್ವಾ ಚ ವಿರಥಂ ಸಾಂಬಂ ನೈ ನೃಪನಂದನಃ ।
ಪುನಸ್ಸಮಾಗತಾಂ ತಸ್ಯ ಸೇನಾಂ ಬಾಣೈರ್ಜಘಾನ ಹ ॥ ೧೪ ॥

ಅಥ ನೀಲಧ್ವಜಸ್ಯಾಪಿ ಸೇನಾ ಸರ್ವಾ ಸಮಾಗತಾ ।
ಯಾದವಾನಾಂ ಬಲಂ ಸಂಖ್ಯೇ ಜಘಾನ ನಿಶಿತೈಃ ಶರೈಃ ॥ ೧೫ ॥

---

೧೨. ಅನಂತರ ನೀಲಧ್ವಜನು ಅತಿ ಕೋಪಗೊಂಡು ದುರ್ವಚನಗಳಿಂದ ಪ್ರೇಮವನ್ನು ನಾಶಗೊಳಿಸುವಂತೆ ಹತ್ತು ಬಾಣಗಳನ್ನು ಪ್ರಯೋಗಿಸಿ ಸಾಂಬನ ಧನುಸ್ಸನ್ನು ಕತ್ತರಿಸಿದನು.

೧೩. ನಾಲ್ಕು ಬಾಣಗಳಿಂದ ಕುದುರೆಗಳನ್ನೂ, ಎರಡು ಬಾಣಗಳಿಂದ ಬಾವುಟವನ್ನೂ, ನೂರು ಬಾಣಗಳಿಂದ ರಥವನ್ನೂ ಒಂದು ಬಾಣದಿಂದ ಸೂತನನ್ನೂ ಕೊಂದನು.

೧೪. ಆಗ ಸಾಂಬನು ರಥವಿಲ್ಲದವನಾದನು. ಅದನ್ನು ನೋಡಿ ಸಾಂಬನ ಸೇನೆಯು ನೀಲಧ್ವಜನ ಮೇಲೆ ಬಿದ್ದಿತು. ಆಗ ನೀಲಧ್ವಜನು ಬಾಣಪ್ರಯೋಗ ಮಾಡಿ ಸೇನೆಯನ್ನು ನೋಯಿಸಿದನು.

೧೫. ಅಷ್ಟು ಹೊತ್ತಿಗೆ ನೀಲಧ್ವಜನ ಉಳಿದ ಸೈನ್ಯಗಳೂ ಬಂದು ಸೇರಿದವು. ಅದರೊಡಗೂಡಿ ನೀಲಧ್ವಜನು ಯಾದವರ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ತತಸ್ಸಮಭವದ್ಯುದ್ಧಮುಭಯೋಃ ಸೇನಯೋರ್ಮೃಧೇ ।
ನಿಸ್ತ್ರಿಂಶೈಃ ಪರಿಘೈರ್ಬಾಣೈರ್ಗದಾಪರಶುಶಕ್ತಿಭಿಃ ॥ ೧೬ ॥

ಸಾಂಬೋಽನ್ಯಂ ರಥಮಾರುಹ್ಯ ಸಜ್ಜಂ ಕೃತ್ವಾ ಧನುರ್ದೃಢಂ ।
ತದ್ರಥಂ ಚೂರ್ಣಯಾಮಾಸ ಶತಬಾಣೈ ರಣೇ ಬಲೀ ॥ ೧೭ ॥

ಸ ಛಿನ್ನಧನ್ವಾ ವಿರಥೋ ಗದಾಮುದ್ಯಮ್ಯ ವೇಗವಾನ್ ।
ಅಭ್ಯಧಾವದ್ರಣೇ ಕ್ರುದ್ಧೋ ಸಾಂಬಸ್ಯೋಪರಿ ಮಾನದ ॥ ೧೮ ॥

ತದೈವ ಸಾಂಬಸ್ಸಹಸಾವತೀರ್ಯಾಥ ರಥಾದ್ಗದಾಂ ।
ನೀತ್ವಾ ನೀಲಧ್ವಜಸ್ಯಾಪಿ ಸಂಮುಖೇ ಗತವಾನ್ರುಷಾ ॥ ೧೯ ॥

ತತಾಡ ಗದಯಾ ಸಾಂಬಮಾಗತಂ ವೀಕ್ಷ್ಯ ಭೂಪಜಃ ।
ನ ಚಚಾಲ ಪ್ರಹಾರೇಣ ಮಾಲಾಹತ ಗಜೋ ಯಥಾ ॥ ೨೦ ॥

---

೧೬. ಎರಡು ಸೈನ್ಯಗಳಿಗೂ ಬಲವಾದ ಯುದ್ಧವು ಪ್ರಾರಂಭವಾಯಿತು. ಎರಡು ಕಡೆಯವರೂ ನಿಸ್ತ್ರಿಂಶ, ಪರಿಘ, ಬಾಣ, ಗದೆ, ಪರಶು, ಶಕ್ತಿ ಮುಂತಾದ ಆಯುಧಗಳನ್ನು ಪ್ರಯೋಗಮಾಡುತ್ತಿದ್ದರು.

೧೭. ಸಾಂಬನು ಬೇರೊಂದು ರಥವನ್ನು ಹತ್ತಿದನು. ಬೇರೊಂದು ಧನುಸ್ಸನ್ನು ತೆಗೆದುಕೊಂಡು ಹೆದೆ ಏರಿಸಿದನು. ನೂರು ಬಾಣಗಳನ್ನು ಪ್ರಯೋಗಿಸಿ ನೀಲಧ್ವಜನ ರಥವನ್ನು ಚೂರು ಚೂರು ಮಾಡಿದನು.

೧೮. ನೀಲಧ್ವಜನ ರಥವು ಚೂರಾಯಿತು. ಧನಸ್ಸು ಮುರಿದುಹೋಯಿತು. ಆಗ ಅವನು ಗದೆಯನ್ನು ತೆಗೆದುಕೊಂಡು ಸಾಂಬನ ಮೇಲೆ ಪ್ರಯೋಗಿಸಲು ಅತಿಕೋಪದಿಂದ ಮುಂದುವರೆದನು.

೧೯. ಅದನ್ನು ನೋಡಿ ಸಾಂಬನೂ ಸಹ ತನ್ನ ಗದೆಯನ್ನು ಹಿಡಿದು ರಥದಿಂದ ಇಳಿದು ಆ ನೀಲಧ್ವಜನನ್ನು ಕೋಪದಿಂದ ಎದುರಿಸಿದನು.

೨೦. ಆಗ ನೀಲಧ್ವಜನು ಗದೆಯಿಂದ ಸಾಂಬನನ್ನು ಬಲವಾಗಿ ಹೊಡೆದನು. ಆದರೂ ಸಾಂಬನು, ಹೂವಿನ ಮಾಲಿಕೆಯಿಂದ ಹೊಡೆದ ಆನೆಯಂತೆ ಕದಲದೇ ಸುಮ್ಮನೆ ನಿಂತಿದ್ದನು.

ತತಸ್ಸಾಂಬಸ್ತು ಗದಯಾ ತತಾಡ ನೃಪನಂದನಂ ।
ತತ್ಪ್ರಹಾರೇಣ ಪತಿತೋ ಮೂರ್ಛಾಂ ಪ್ರಾಪ್ತೋ ರಣೇ ತು ಸಃ ॥ ೨೧ ॥

ಸೈನಿಕಾ ದುದ್ರುವುಸ್ತಸ್ಯ ಹಾಹಾಕಾರಂ ಸಮುಚ್ಚರನ್ ।
ತತೋ ಯುದ್ಧಾಯ ಸಂಕ್ರುದ್ಧ ಇಂದ್ರನೀಲಃ ಸಮಾಗತಃ ॥ ೨೨ ॥

ಸಾಕಮಕ್ಷೌಹಿಣೀಭ್ಯಾಂ ಚ ವಿಮುಂಚನ್ ಧನುಷಾ ಶರಾನ್ ।
ತಮಾಗತಂ ವಿಲೋಕ್ಯಾಥ ಮಧುಃ ಕೃಷ್ಣಸುತೋ ಬಲೀ ॥ ೨೩ ॥

ಧಾನುಷ್ಕೋ ವಿರಥಂ ಚಕ್ರ ಇಂದ್ರನೀಲಂ ಶಿಲಾಮುಖೈಃ ।
ಸೇನಾಂ ಸಮಾಗತಾಂ ತಸ್ಯ ಯುಯುಧಾನೋಽರ್ಜುನಪ್ರಿಯಃ ॥ ೨೪ ॥

ಶರೈರ್ವಿನ್ಯಾಥ ಸಮರೇ ಮೈತ್ರೀಂ ದುರ್ವಚನೈರಿವ ।
ತತಶ್ಚ ಯಾದವೈರ್ಮುಕ್ತೋ ನೃಪೋ ಮಾಹಿಷ್ಮತೀಂ ಯಯೌ ॥ ೨೫ ॥

---

೨೧. ಆಗ ಸಾಂಬನು ತನ್ನ ಗದೆಯಿಂದ ನೀಲಧ್ವಜನನ್ನು ಹೊಡೆಯಲು ಅವನು ಆ ಏಟನ್ನು ತಾಳಲಾರದೆ ರಣಾಂಗಣದಲ್ಲಿ ಮೂರ್ಛಿತನಾಗಿ ಬಿದ್ದನು.

೨೨. ಅದನ್ನು ನೋಡಿ ಅವನ ಸೈನಿಕರೆಲ್ಲರೂ ಹಾಹಾಕಾರವನ್ನು ಮಾಡುತ್ತಾ ಅಲ್ಲಿಂದ ಓಡಿಹೋದರು. ಇಂದ್ರನೀಲರಾಜನು ಇದೆಲ್ಲವನ್ನೂ ನೋಡಿ ಅತಿ ಕುಪಿತನಾಗಿ ಯುದ್ಧಕ್ಕೆ ಬಂದನು.

೨೩. ಎರಡು ಅಕ್ಷೌಹಿಣೀ ಸೈನ್ಯಗಳೊಡಗೂಡಿ ಇಂದ್ರನೀಲನು ಶತ್ರು ಪಕ್ಷದ ಮೇಲೆ ಬಾಣಗಳನ್ನು ಪ್ರಯೋಗಮಾಡಿದನು ಆಗ ಕೃಷ್ಣನ ಮಗನಾದ ಮಧು ಎಂಬುವನು ಇಂದ್ರನೀಲನ ಮೇಲೆ ಬಾಣಪ್ರಯೋಗ ಮಾಡಿ ಅವನ ರಥವನ್ನು ಚೂರು ಚೂರು ಮಾಡಿದನು.

೨೪–೨೫. ಯುಯುಧಾನನು ಇಂದ್ರನೀಲನ ಸೈನಿಕರ ಮೇಲೆ ಬಾಣಪ್ರಯೋಗ ಮಾಡಿ, ಕೆಟ್ಟಮಾತುಗಳಿಂದ ಸ್ನೇಹವನ್ನು ನಾಶಪಡಿಸುವಂತೆ ಅವರೆಲ್ಲರನ್ನೂ ನಾಶ ಪಡಿಸಿದನು. ಆಗ ಇಂದ್ರನೀಲನು ನಿರುಪಾಯನಾಗಿ ಯಾದವರಿಂದ ಹೇಗೋ ಬಿಡಿಸಿಕೊಂಡು ತನ್ನ ಊರಿಗೆ ಹೊರಟುಹೋದನು.

ಗತ್ವಾ ಪುರ್ಯೋಂ ಚ ದುಃಖಾರ್ತೋ ಸಸ್ಮಾರ ಸ್ವಪತಿಂ ಶಿವಂ ।
ಅಥ ತಸ್ಮೈ ಶಿವಃ ಸಾಕ್ಷಾದ್ದತ್ವಾ ದರ್ಶನಮುತ್ತಮಂ ॥ ೨೬ ॥

ಪಪ್ರಚ್ಛ ಸರ್ವವೃತ್ತಾಂತಂ ಶ್ರುತ್ವಾ ಸ ತು ನಿವೇದಯತ್ ।
ಇತ್ಥಂ ನಿಶಮ್ಯ ವಚನಂ ಪ್ರತ್ಯಾಹ ಪರಮೇಶ್ವರಃ ॥ ೨೭ ॥

॥ ಶಿವ ಉವಾಚ ॥

ಶೋಕಂ ಮಾ ಕುರು ರಾಜೇಂದ್ರ ಮದ್ವರೋಽಪಿ ಮೃಷಾ ನ ಹಿ ।
ದೇವದೈತ್ಯನರಾಸ್ಸರ್ವೇ ತ್ವಾಂ ವಿಜೇತುಂ ನ ಚ ಕ್ಷಮಾಃ ॥ ೨೮ ॥

ಏತೇ ಕೃಷ್ಣಸುತಾ ರಾಜನ್ ಶ್ರೀಕೃಷ್ಣಸ್ಯಾಂಶಸಂಭವಾಃ ।
ನ ದೇವಾ ಯೇ ಮಹಾರಾಜ ನ ದೈತ್ಯಾ ನ ಚ ಮಾನುಷಾಃ ॥ ೨೯ ॥

ಏತೈರ್ವಿನಿರ್ಜಿತಸ್ತ್ವಂ ತು ದುರ್ಮನಾ ಭವ ಮಾ ನೃಪ ।
ಅಪರಾಧಂ ತು ಕೃಷ್ಣಸ್ಯ ಕರ್ತುಂ ನಾರ್ಹಸಿ ಭೂಪತೇ ॥ ೩೦ ॥

---

೨೬. ಅತಿ ದುಃಖಿತನಾಗಿ ಯೋಚಿಸುತ್ತಾ ಕುಳಿತು, ತನ್ನ ಸ್ವಾಮಿಯಾದ ಶಿವನಿಗೆ ಮೊರೆ ಇಟ್ಟನು. ಶಿವನು ಅವನಿಗೆ ಪ್ರತ್ಯಕ್ಷನಾಗಿ ದರ್ಶನವನ್ನು ಕೊಟ್ಟನು.

೨೭. ಈಶ್ವರನು ಏನೆಂದು ಕೇಳಲು ರಾಜನು ಎಲ್ಲಾ ವಿಷಯುಗಳನ್ನೂ ವಿಶದ ಪಡಿಸಿದನು. ಅದನ್ನು ಕೇಳಿ ಈಶ್ವರನು ರಾಜನನ್ನು ಕುರಿತು,

೨೮. ರಾಜೇಂದ್ರ, ದುಃಖಿಸಬೇಡ. ಎಂದಿಗೂ ನನ್ನ ವರವು ಸುಳ್ಳಾಗು ವುದಿಲ್ಲವು. ದೇವದೈತ್ಯಮಾನವರಲ್ಲಿ ನಿನ್ನನ್ನು ಯಾರೂ ಸೋಲಿಸಲಾರರು. ಇದೇ ಅಲ್ಲವೇ ನನ್ನ ವರವು?

೨೯. ಆದರೆ ಈಗ ನಿನ್ನನ್ನು ಸೋಲಿಸಿರುವ ಶ್ರೀಕೃಷ್ಣನ ಮಕ್ಕಳು ಶ್ರೀಕೃಷ್ಣನ ಅಂಶಸಂಭೂತರು. ಅವರು ದೇವತೆಗಳೂ ಅಲ್ಲವು, ದೈತ್ಯರೂ ಅಲ್ಲವು, ಮನುಷ್ಯರೂ ಅಲ್ಲವು.

೩೦. ಇಂಥವರು ನಿನ್ನನ್ನೀಗ ಸೋಲಿಸಿರುವರು. ಆದುದರಿಂದ ನೀನವರ ವಿಷಯದಲ್ಲಿ ಕೆಟ್ಟದೆಣಿಸಬೇಡ. ಕೃಷ್ಣನಿಗೆ ಎಂದೂ ನೀನು ಅಪರಾಧವನ್ನೆಸಗ ಬಾರದು.

ಸಮಾಗತೇಭ್ಯ ಏತೇಭ್ಯಸ್ತಸ್ಮಾತ್ತಂ ವಿಧಿನಾ ನೃಪ ।
ಶೀಘ್ರಂ ಪ್ರಯಚ್ಛ ಭದ್ರಂ ತೇ ಹಯಮೇಧತುರಂಗಮಂ ॥ ೩೧ ॥

ಇತ್ಯುಕ್ತ್ವಾಂತರ್ದಧೇ ರುದ್ರೋ ನೃಪೋ ಜ್ಞಾತ್ವಾ ಜಗತ್ಪತೇಃ ।
ಮಾಹಾತ್ಮ್ಯಂ ಚ ಮುದಾ ಯುಕ್ತೋ ಗೃಹೀತ್ವಾ ಕ್ರತುವಾಹನಂ ॥ ೩೨ ॥

ನೀಲಧ್ವಜೇನ ಸಹಿತೋ ರತ್ನಾನ್ಯಾದಾಯ ಭೂರಿಶಃ ।
ಸ್ವರ್ಣಭಾರಶತಂ ಚೈವ ಮತಂಗಜಸಹಸ್ರಕಂ ॥ ೩೩ ॥

ನಿಯುತಂ ಘೋಟಕಾನಾಂ ಚ ಹ್ಯಾದಾಯ ಸ್ಯಂದನಾಯುತಂ ।
ಯತ್ರಾನಿರುದ್ಧಃ ಪ್ರಯಯೌ ನಮಸ್ಕರ್ತುಂ ಜನೈರ್ವೃತಃ ॥ ೩೪ ॥

ಅನಿರುದ್ಧಸ್ಯ ನಿಕಟೇ ಗತ್ವಾ ರಾಜಾ ವಿಧಾನತಃ ।
ಸರ್ವಂ ನಿವೇದಯಾಮಾಸ ನತ್ವಾ ವಚನಮಬ್ರವೀತ್ ॥ ೩೫ ॥

---

೩೧. ಆದುದರಿಂದ ಈಗ ನೀನು ಅವರನ್ನು ಸ್ವಾಗತಿಸಿ ಅವರಿಗೆ ನೀನು ಹಿಡಿದುಕೊಂಡಿರುವ ಯಜ್ಞಾಶ್ವವನ್ನು ಜಾಗ್ರತೆಯಾಗಿ ಸಮರ್ಪಿಸು.

೩೨. ಈ ರೀತಿಯಾಗಿ ಹೇಳಿ ಈಶ್ವರನು ಅಂತರ್ಧಾನನಾದನು. ಇದೆಲ್ಲಾ ಶ್ರೀಕೃಷ್ಣಪರಮಾತ್ಮನ ಮಾಹಾತ್ಮ್ಯೆ ಎಂದು ತಿಳಿದು ಸಂತೋಷಗೊಂಡು ಯಜ್ಞಾಶ ವನ್ನು ಅರ್ಪಿಸಲು ತೆರಳಿದನು.

೩೩-೩೪. ಕಾಣಿಕೆಯಾಗಿ ಅರ್ಪಿಸಲು ಅನೇಕ ರತ್ನಗಳನ್ನೂ, ನೂರು ಭಾರ ಸುವರ್ಣವನ್ನೂ, ಒಂದು ಸಹಸ್ರ ಆನೆಗಳು, ನಿಯುತಸಂಖ್ಯೆಯ ಕುದುರೆಗಳು, ಅಯುತ ರಥಗಳು ಇವುಗಳೆಲ್ಲವನ್ನೂ ತೆಗೆದುಕೊಂಡು ನೀಲಧ್ವಜನನ್ನು ಕರೆದು ಕೊಂಡು ಅನಿರುದ್ಧನ ಸಮೀಪಕ್ಕೆ ಹೋದನು.

೩೫. ತನ್ನ ಜನರೊಡನೆ ಅನಿರುದ್ಧನಿಗೆ ನಮಸ್ಕರಿಸಿದನು. ತನ್ನ ವಿಷಯ ಗಳನ್ನೆಲ್ಲಾ ನಿವೇದಿಸಿ ಅವನನ್ನು ಕುರಿತು ಹೇಳಿದನು.

|| ಇಂದ್ರನೀಲ ಉವಾಚ ||

ನಮಃ ಕೃಷ್ಣಾಯ ರಾಮಾಯ ಪ್ರದ್ಯುಮ್ನಾಯ ಮಹಾತ್ಮನೇ ।
ನಮೋ ನಮೋಽನಿರುದ್ಧಾಯ ಸಾತ್ವತಾಂ ಪ್ರವರಾಯ ಚ || ೩೬ ||

ಆದೇಶೋ ದೀಯತಾಂ ಮಹ್ಯಂ ಕಿಂ ಕರೋಮ್ಯಸುರಾರ್ದನ ।
ಅನಿರುದ್ಧಸ್ತು ತಂ ಪ್ರಾಹ ಮಯಾ ಸಹ ನೃಪೋತ್ತಮ || ೩೭ ||

ಶತ್ರುಭ್ಯಶ್ಚ ಮಿತ್ರ ಹಯಂ ಪಾಲಯ ತ್ವಂ ಹಿ ಮಾಮಕಂ ।

|| ಗರ್ಗ ಉವಾಚ ||

ಇತಿ ತಸ್ಯ ವಚಃ ಶ್ರುತ್ವಾ ತಥೇತ್ಯುಕ್ತ್ವಾ ನೃಪೋ ನೃಪ || ೩೮ ||

ನೀಲಧ್ವಜಾಯ ರಾಜ್ಯಂ ತು ದತ್ವಾ ಗಂತುಂ ಮನೋ ದಧೇ || ೩೯ ||

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಪಂಚದಶೋಽಧ್ಯಾಯಃ

---

೩೬. ಕೃಷ್ಣ, ಬಲರಾಮ, ಮಹಾತ್ಮನಾದ ಪ್ರದ್ಯುಮ್ನ ಇವರುಗಳಿಗೆ ನಮಸ್ಕಾರವು. ಸಚ್ಚರಿತ್ರನಾದ ಅನಿರುದ್ಧನಿಗೆ ನಮಸ್ಕಾರಗಳು. ನಾನು ನಿನ್ನ ಕಿಂಕರನು. ಅಸುರನಾಶಕನೇ, ನಾನೇನು ಮಾಡಬೇಕೆಂದು ನನಗೆ ಅಪ್ಪಣೆಮಾಡು.

೩೭. ಎಂದು ಹೇಳಲು, ಅನಿರುದ್ಧನು ನೃಪೋತ್ತಮನೇ, ನೀನು ನನಗೆ ಮಿತ್ರನು. ನಿನ್ನಭಿಮತದಂತೆ ನಾನು ಹೇಳುವೆನು:—ನನ್ನೊಡನೆ ನೀನೂ ಸಹ ಯಜ್ಞಾಶ್ವರಕ್ಷಣೆಗೆ ಹೊರಡು ಎಂದನು.

೩೮–೩೯. ಅನಿರುದ್ಧನ ಅಪ್ಪಣೆಯನ್ನು ಶಿರಸಾವಹಿಸಿ ಇಂದ್ರನೀಲನು ತನ್ನ ಮಗ ನೀಲಧ್ವಜನಿಗೆ ರಾಜ್ಯವನ್ನು ಕೊಟ್ಟು ಅನಿರುದ್ಧನೊಡನೆ ಹೊರಡಲು ನಿಶ್ಚಯಿಸಿದನು.

ಇಲ್ಲಿಗೆ ಶ್ರೀ ಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹದಿನೈದನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಷೋಡಶೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಅಥ ಮುಕ್ತಸ್ತು ತುರಗೋ ದೇಶಾನ್ಸರ್ವಾನ್ವಿಲೋಕಯನ್ ।
ಉಶೀನರೇ ಚ ವಿಷಯೇ ಪ್ರಾಪ್ತಶ್ಚಂಪಾವತೀಂ ಪುರೀಂ ॥ ೧ ॥

ರಾಜ್ಞಾ ಹೇಮಾಂಗದೇನಾಪಿ ಪಾಲಿತಾಂ ದುರ್ಗಮಂಡಿತಾಂ ।
ಚಾತುರ್ವರ್ಣ್ಯಜನಾಕೀರ್ಣಾಂ ಪ್ರಾಸಾದೈಃ ಪರಿವೇಷ್ಟಿತಾಂ ॥ ೨ ॥

ಹದಿನಾರನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಇಂದ್ರನೀಲನು ಕುದುರೆಯನ್ನು ಅನಿರುದ್ಧನಿಗೆ ತಂದೊಪ್ಪಿಸಿ ಆಗ ಅದನ್ನು ಬಿಡಲು, ಅದು ದೇಶದೇಶಗಳನ್ನು ಸಂಚರಿಸುತ್ತಾ ಉಶೀನರದೇಶದ ಚಂಪಾವತೀ ಪಟ್ಟಣಕ್ಕೆ ಬಂದಿತು.

೨. ಆ ಪಟ್ಟಣವನ್ನು ಹೇಮಾಂಗದನೆಂಬ ರಾಜನು ಆಳುತ್ತಿದ್ದನು. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರೂ ಅಲ್ಲಿ ವಾಸಿಸುತ್ತಿದ್ದರು. ದೊಡ್ಡ ಉಪ್ಪರಿಗೆ ಮನೆಗಳಿಂದಲೂ, ಕೋಟೆ-ಕೊತ್ತಲುಗಳಿಂದ ಆ ಪಟ್ಟಣವು ಶೋಭಿಸುತ್ತಿತ್ತು.

ಯತ್ರ ಹೇಮಾಂಗದೋ ರಾಜಾ ಪುತ್ರೇಣ ಹಂಸಕೇತುನಾ।
ರಾಜ್ಯಂ ಕರೋತಿ ಸುಕೃತಿರ್ಮಹಾಶೂರಜನೈರ್ವೃತಃ ॥ ೩ ॥

ಗೃಹೀತಸ್ತೇನ ತುರಗೋಽನಿರುದ್ಧಸ್ಯ ಮಹಾತ್ಮನಃ।
ಸ್ವಪುರ್ಯಾಂ ಲೀಲಯಾ ರಾಜನ್ ಯಾದವಾನಗಣಯ್ಯ ಚ ॥ ೪ ॥

ಬಧ್ವಾ ಹೇಮಾಂಗದೋ ರಾಜಾ ಸ್ವರ್ಣದಾಮ್ನಾ ಚ ವಾಜಿನಂ।
ದ್ವಾರೇಷು ಚ ಕಪಾಟಾದೀನ್ ದತ್ವಾ ಕ್ರೋಧೇನ ಪೂರಿತಃ ॥ ೫ ॥

ಯಾದವಾನಾಂ ವಿನಾಶಾಯ ದುರ್ಗಭಿತ್ತಿಷು ಮಾನದ।
ಶತಘ್ನೀಶ್ಚ ದ್ವಿಲಕ್ಷಾಣಿ ಧೃತ್ವಾ ಯುದ್ಧಾಯ ವೈ ಪುನಃ ॥ ೬ ॥

ತತಃ ಪ್ರಾಪ್ತೋಽನಿರುದ್ಧಸ್ತು ಸಸೈನ್ಯೋಽಶ್ವಂ ವಿಲೋಕಯನ್।
ಚಂಪಾವತ್ಯಾ ಹ್ಯುಪವನೇ ಶಿಬಿರೋಽಭೂಚ್ಚ ತಸ್ಯ ವೈ ॥ ೭ ॥

ಅಥ ಪ್ರದ್ಯುಮ್ನತನಯೋ ತತ್ರ ದೃಷ್ಟ್ವಾ ತುರಂಗಮಂ।
ಉದ್ಧವಂ ಕೃಷ್ಣಚಂದ್ರಸ್ಯ ಸಖಾಯಮಿದಮಬ್ರವೀತ್ ॥ ೮ ॥

---

೩. ಹೇಮಾಂಗದನು ತನ್ನ ಪುತ್ರನಾದ ಹಂಸಕೇತುವಿನೊಡನೆ ಮಹಾ ಪರಾಕ್ರಮಿಗಳಾದ ಜನರೊಡಗೂಡಿ ಸುಖವಾಗಿ ರಾಜ್ಯವಾಳುತ್ತಿದ್ದನು.

೪. ಅವನು ಯಾದವರನ್ನೂ ಲೆಕ್ಕಿಸದೆ ತನ್ನ ಊರೊಳಕ್ಕೆ ಬಂದ ಕುದುರೆಯನ್ನು ಧೈರ್ಯವಾಗಿ ಹಿಡಿದುಕೊಂಡನು.

೫–೬. ಅದನ್ನು ಚಿನ್ನದ ಹಗ್ಗದಿಂದ ಕಟ್ಟಿಹಾಕಿದನು. ಕೋಟೆಯ ಬಾಗಿಲುಗಳನ್ನೆಲ್ಲಾ ಹಾಕಿಸಿದನು. ಕೋಟೆಯ ಗೋಡೆಗಳ ಮೇಲೆ ಎರಡು ಲಕ್ಷ ಶತಘ್ನಿಗಳನ್ನು ನೆಡಿಸಿದನು. ಯಾದವರೊಡನೆ, ಯುದ್ಧಮಾಡುವುದಕ್ಕೂ ಸಿದ್ಧನಾದನು.

೭. ತಮ್ಮ ಕುದುರೆಯನ್ನು ಹಿಂಬಾಲಿಸುತ್ತಾ ಅನಿರುದ್ಧನು ಸೈನಿಕರೊಡನೆ ಚಂಪಾವತಿಗೆ ಬಂದನು. ಅಲ್ಲಿಯ ಒಂದು ಉಪವನದಲ್ಲಿ ಶಿಬಿರವನ್ನು ಹಾಕಿದನು.

೮. ತನ್ನ ಯಜ್ಞಾಶ್ವವನ್ನು ಅಲ್ಲಿಯ ರಾಜನು ಹಿಡಿದಿರುವುದನ್ನು ನೋಡಿ ಕೃಷ್ಣನ ಸ್ನೇಹಿತನಾದ ಉದ್ಧವನನ್ನು ಕುರಿತು

|| ಅನಿರುದ್ಧ ಉವಾಚ ||

ಕಸ್ಯೇಯಂ ನಗರೀ ಮಂತ್ರೀ ಕೇನ ನೀತೋ ಹಯೋ ಮಮ ।
ತ್ವಂ ಜಾನಾಸಿ ಮಹಾಬುದ್ಧೇ ಕಥಯಸ್ವ ವಿಚಾರ್ಯ ಚ || ೯ ||

ಇತ್ಥಂ ನಿಶಮ್ಯ ತದ್ವಾಕ್ಯಮುದ್ಧವೋ ಬುದ್ಧಿಸತ್ತಮಃ ।
ಜ್ಞಾತ್ವಾ ವಾರ್ತಾಂ ಚ ಶತ್ರೂಣಾಮಿದಂ ವಚನಮಬ್ರವೀತ್ || ೧೦ ||

|| ಉದ್ಧವ ಉವಾಚ ||

ಇಯಂ ಚಂಪಾವತೀ ನಾಮ ನಗರೀ ದ್ವಾರಕೇಶ್ವರ ।
ಹಂಸಧ್ವಜೇನ ಪುತ್ರೇಣ ಯತ್ರ ಹೇಮಾಂಗದೋ ನೃಪಃ || ೧೧ ||

ಕರೋತಿ ರಾಜ್ಯಂ ತೇನಾಪಿ ಗೃಹೀತಸ್ತುರಗಸ್ತವ ।
ಏಷ ರಾಜಾ ಮಹಾಶೂರೋ ಯಜ್ಞಸ್ಯಾಶ್ವಂ ನ ದಾಸ್ಯತಿ || ೧೨ ||

---

೯. ಎಲೈ ಮಂತ್ರಿಯೇ, ಇಲ್ಲಿ ಕಾಣುವ ನಗರಿಯು ಯಾವುದು? ಇಲ್ಲಿಯ ರಾಜನಾರು? ನನ್ನ ಕುದುರೆಯನ್ನು ಹಿಡಿದಿರುವವನಾರು? ಇವೆಲ್ಲವನ್ನೂ ತಿಳಿಸು. ನೀನು ಮಹಾಪ್ರಾಜ್ಞನು.

೧೦. ಎಂದು ಹೇಳಲು ಮಹಾಪ್ರಾಜ್ಞನಾದ ಉದ್ಧವನು ವಿಷಯವನ್ನು ವಿಮರ್ಶಿಸಿ ಶತ್ರುಗಳ ವಿಷಯವಾಗಿ ಇಂತು ಹೇಳಿದನು.

೧೧-೧೨. ಕುಮಾರ, ಇದು ಚಂಪಾವತೀ ಎಂಬ ನಗರಿಯು. ಇಲ್ಲಿಯ ರಾಜನು ಹೇಮಾಂಗದನೆಂಬುವನು. ಅವನ ಮಗನು ಹಂಸಧ್ವಜನು. ಈತನು ಮಹಾಶೂರನು. ಅವನೇ ಕುದುರೆಯನ್ನು ಹಿಡಿದಿರುವನು. ಎಂದಿಗೂ ನಿನ್ನ ಅಶ್ವವನ್ನು ಕೊಡಲಾರನು.

ಪುರ್ಯಾಂ ಸ್ಥಿತ್ವಾ ಭುಶುಂಡೀಭಿರ್ಬಹುಯುದ್ಧಂ ಕರಿಷ್ಯತಿ ।
ನ ನಿರ್ಗಮಿಷ್ಯತಿ ಬಹಿರ್ಯುದ್ಧಾಯ ಸ ನೃಪಃ ಪುರಾತ್ ॥ ೧೩ ॥

ತಸ್ಮಾತ್ತವೇಚ್ಛಾ ನೃಪತೇ ಯಥಾ ಭೂಯಾತ್ತಥಾ ಕುರು ।
ಇತಿ ತದ್ವಚನಂ ಶ್ರುತ್ವಾ ಸ ಉವಾಚ ರುಷಾನ್ವಿತಃ ॥ ೧೪ ॥

॥ ಅನಿರುದ್ಧ ಉವಾಚ ॥

ಅಹಂ ಸರ್ವಾನ್ ಹನಿಷ್ಯಾಮಿ ದುರ್ಗಯುಕ್ತಾನ್ಬಹೂನ್ ದ್ವಿಷಃ ।
ಲೋಹಶಕ್ತಿಸನ್ಯೈರ್ಬಾಣೈಃ ಪ್ರಹರಾರ್ಧೇನ ಸತ್ತಮ ॥ ೧೫ ॥

ಇತ್ಥಂ ತದ್ವಾಕ್ಯಮಾಕರ್ಣ್ಯ ಯಾದವಾಃ ಕ್ರೋಧಪೂರಿತಾಃ ।
ಪುರೀಂ ಹಂತುಂ ಯಯುಃ ಶೀಘ್ರಂ ಮುಂಚನ್ಬಾಣಾಂಶ್ಚ ಕೋಟಿಶಃ ॥ ೧೬ ॥

---

೧೩. ಕೋಟೆಯೊಳಗೇ ಇದ್ದು ಭುಶುಂಡಿಗಳೊಡನೆ ಯುದ್ಧವನ್ನು ಮಾಡುವನು. ನಗರಿಯಿಂದ ಹೊರಗಡೆಗೆ ಯುದ್ಧಕ್ಕೆ ಬರುವುದಿಲ್ಲ. ಆದುದರಿಂದ ನಿನ್ನಿಷ್ಟ ಬಂದಂತೆ ಮಾಡಬಹುದು.

೧೪-೧೫. ಎಂದು ಹೇಳಲು ಅದನ್ನು ಕೇಳಿ ಅನಿರುದ್ಧನು ಅತಿ ಕೋಪದಿಂದ ಉದ್ಧವನನ್ನು ಕುರಿತು ಎಲೈ ಶ್ರೇಷ್ಠನೇ, ಅವರು ದುರ್ಗದೊಳಗೇ ಯುದ್ಧಮಾಡಲಿ. ನಾನು ಲೋಹಶಕ್ತಿಸಮೇತವಾದ ಅನೇಕ ಬಾಣಗಳನ್ನು ಪ್ರಯೋಗಮಾಡಿ ಅರ್ಧ ಪ್ರಹರದೊಳಗಾಗಿ ಶತ್ರುಗಳನ್ನು ನಾಶಪಡಿಸುವೆನು.

೧೬. ಎಂದು ಅನಿರುದ್ಧನು ಹೇಳಿದುದನ್ನು ಯಾದವರೆಲ್ಲರೂ ಕೇಳಿದರು. ಉತ್ಸಾಹವು ಜಾಸ್ತಿಯಾಯಿತು. ಕೋಪವು ಇಮ್ಮಡಿಯಾಯಿತು. ತಕ್ಷಣ ಅವರು ಶಸ್ತ್ರಸಜ್ಜಿತರಾಗಿ ಹೊರಟು ಕೋಟ್ಯಾನುಕೋಟಿ ಬಾಣಗಳನ್ನು ನಗರದ ಮೇಲೆ ಪ್ರಯೋಗಿಸಿದರು.

ಅಂಧಕಾನಾಂ ಚ ಬಾಣೌಘೈಃ ಪುರ್ಯಾಂ ಕೋಲಾಹಲೋಽಪ್ಯಭೂತ್ ।
ಶತ್ರವಃ ಶಂಕಿತಾಸ್ಸರ್ವೇ ವೀರಾ ಹಂಸಧ್ವಜಾದಯಃ ॥ ೧೭ ॥

ತತೋ ನೃಪಸ್ಯ ವಚನಾದ್ವೀರಾಸ್ತೇ ಸಾಹಸೇನ ವೈ ।
ದುರ್ಗಭಿತ್ತಿಷ್ವಥಾರುಹ್ಯ ಯಾದವಾನ್ ದದೃಶುರ್ಬಹಿಃ ॥ ೧೮ ॥

ದೃಷ್ಟ್ವಾ ತೇ ಚ ಭಯಂ ಪ್ರಾಪುಃ ಸನ್ನದ್ಧಾನ್ಯದುಪುಂಗವಾನ್ ।
ಶಸ್ತ್ರವರ್ಷಂ ಪ್ರಕುರ್ವಂತಃ ಸರ್ವತಃ ಪರಿಮಂಡಿತಾನ್ ॥ ೧೯ ॥

ತೇಭ್ಯಃ ಶತಘ್ನೀ ವ್ಯಸೃಜನ್ ಚತುರ್ದಿಕ್ಷು ಚ ವಹ್ನಿನಾ ।
ಸರ್ವಾನೇವ ಹನಿಷ್ಯಾಮೋ ನ ದಾಸ್ಯಾಮೋ ಹಯಂ ಬ್ರುವನ್ ॥ ೨೦ ॥

ಅಥಾನಿರುದ್ಧಸೇನಾಯಾಂ ಹಾಹಾಕಾರೋ ಮಹಾನಭೂತ್ ।
ವಿಹ್ವಲಾ ವೃಷ್ಣಯಸ್ಸರ್ವೇ ಶತಘ್ನೀಭಿಃ ಪ್ರತಾಡಿತಾಃ ॥ ೨೧ ॥

---

೧೭. ಹೀಗೆ ಅನಿರೀಕ್ಷಿತವಾಗಿ ಬಾಣಗಳು ಬೀಳುತ್ತಿರಲು ನಗರಿಯಲ್ಲಿ ಕೋಲಾಹಲವೆದ್ದಿತು. ಹಂಸಧ್ವಜಾದಿ ವೀರರೆಲ್ಲರೂ ಶತ್ರುಗಳು ಬಂದಿರುವರೆಂದು ಅನುಮಾನಿಸಿದರು.

೧೮. ಹೇಮಾಂಗದನ ಅಪ್ಪಣೆಯಂತೆ ಅನೇಕ ವೀರರು ಅತಿಸಾಹಸದಿಂದ ಕೋಟೆಯ ಗೋಡೆಗಳ ಮೇಲೆ ಹತ್ತಿನಿಂತು ಹೊರಗಡೆ ಇರುವ ಯಾದವರನ್ನು ನೋಡಿದರು.

೧೯. ಯದುವೀರರೆಲ್ಲರೂ ಶಸ್ತ್ರಾಸ್ತ್ರಸಜ್ಜಿತರಾಗಿ ಸುತ್ತಲೂ ಆವರಿಸಿಕೊಂಡು ನಿಂತು ಇವರ ಮೇಲೆ ಬಾಣಗಳ ಮಳೆಯನ್ನು ಕರೆಯುತಿದ್ದರು. ಅದನ್ನು ನೋಡಿ ಹೇಮಾಂಗದನ ಕಡೆಯವರು ಹೆದರಿದರು.

೨೦. ಆದರೂ ಶತಘ್ನಿಗಳನ್ನು ಯಾದವರ ಮೇಲೆ ಪ್ರಯೋಗಮಾಡುತ್ತಿದ್ದರು. ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿಯು ಆವರಿಸಿತು. 'ಎಲ್ಲರನ್ನೂ ಕೊಲ್ಲುವೆವೇ ಹೊರತು ಅಶ್ವವನ್ನು ಎಂದಿಗೂ ಕೊಡುವುದಿಲ್ಲ' ಎಂದು ಗಟ್ಟಿಯಾಗಿ ಕೂಗುತ್ತಾ ಬಾಣ ಪ್ರಯೋಗಮಾಡುತ್ತಿದ್ದರು.

೨೧. ಆ ಶತಘ್ನಿಗಳ ಏಟಿನಿಂದ ಯಾದವರೆಲ್ಲರೂ ದುಃಖಿತರಾದರು. ಎಲ್ಲೆಲ್ಲೂ ಕೋಲಾಹಲವೆದ್ದಿತು.

ಸಂಭಿನ್ನಭಿನ್ನಸರ್ವಾಂಗಾಃ ಕೇಚಿದ್ಯುದ್ಧಾತ್ಪಲಾಯಿತಾಃ ।
ಕೇಚಿನ್ಮೂರ್ಛಾಂ ಗತಾ ರಾಜನ್ ಕೇಚಿದ್ವೈ ನಿಧನಂ ಗತಾಃ ॥ ೨೨ ॥

ಕೇಚಿತ್ಪ್ರಜ್ವಲಿತಾ ಯುದ್ಧೇ ಭಸ್ಮೀಭೂತಾಸ್ತಥಾಪರೇ ।
ಕೇಚಿದ್ವೈ ಪಾದಹೀನಾಶ್ಚ ಕರಹೀನಾ ವಿಬಾಹವಃ ॥ ೨೩ ॥

ನಿಃಶಸ್ತ್ರಾಃ ಪತಿತಾಶ್ಚೈವ ಕೇಚಿಜ್ಜ್ವಲಿತಕಂಚುಕಾಃ ।
ಹಾಹೇತಿ ವಾದಿನಃ ಕೇಚಿದ್ರಾಮಕೃಷ್ಣೇತಿ ವಾದಿನಃ ॥ ೨೪ ॥

ಶತಘ್ನೀಭಿರ್ವಿಶೀರ್ಣಾಂಗಾ ಗಜಾಃ ಕೇಚಿನ್ಮೃಧಾಂಗಣೇ ।
ದುದ್ರುವಂತಶ್ಚ ಪತಿತಾ ಮೂರ್ಛಿತಾ ನಿಧನಂ ಗತಾಃ ॥ ೨೫ ॥

ಉತ್ಪತಂತೋ ದುದ್ರುವಂತಶ್ಛಿನ್ನದೇಹಾಸ್ತುರಂಗಮಾಃ ।
ಮೃಧೇ ಮೃತ್ಯುಂ ಗತಾಃ ಕೇಚಿದ್ವಿಶೀರ್ಣಾಃ ಪತಿತಾ ರಥಾಃ ॥ ೨೬ ॥

---

೨೨. ಅನೇಕರ ಶರೀರಗಳು ಚೂರಾದವು. ಏಟನ್ನು ತಾಳಲಾರದೆ ಕೆಲವರು ಯುದ್ಧರಂಗದಿಂದ ಪಲಾಯನಮಾಡಿದರು. ಕೆಲವರು ಮೂರ್ಛೆಯನ್ನು ಹೊಂದಿದರು. ಕೆಲವರು ಸತ್ತುಹೋದರು.

೨೩. ಶತಘ್ನಿಗಳಿಂದ ಹೊರಟ ಅಗ್ನಿಗೆ ಸಿಕ್ಕಿ ಕೆಲವರು ಉರಿಯುತ್ತಿದ್ದರು. ಕೆಲವರು ಭಸ್ಮವಾದರು. ಕೆಲವರಿಗೆ ಪಾದಗಳೇ ಮುರಿದುಹೋದವು. ಕೆಲವರಿಗೆ ಕೈಗಳೇ ಇಲ್ಲದಂತಾದವು.

೨೪. ಕೈಲಿರುವ ಅಸ್ತ್ರಗಳು ಮುರಿದು ಹೋಗಲು ಕೆಲವರು ಭೂಮಿಯಲ್ಲಿ ಉರುಳಿದರು. ಕೆಲವರ ಕವಚಗಳು ಉರಿಯತೊಡಗಿದವು. ಕೆಲವರು ಅಯ್ಯೋ ರಾಮ, ಕೃಷ್ಣ, ಎಂದು ಕೊರಗುತ್ತಾ ಬೀಳುತ್ತಿದ್ದರು.

೨೫. ಆನೆಗಳ ಮೈಯಲ್ಲಾ ಸೀಳಿಹೋದವು. ಕೆಲವು ಅಲ್ಲಿಂದ ಓಡಿದವು. ಕೆಲವು ಮೂರ್ಛಿತವಾಗಿ ಬಿದ್ದುಬಿಟ್ಟವು. ಕೆಲವು ಸತ್ತವು.

೨೬. ಕುದುರೆಗಳೂ ಭಯದಿಂದ ಓಡುತ್ತಿದ್ದವು. ಕೆಲವು ಕುದುರೆಗಳ ಶರೀರವು ಛಿನ್ನಭಿನ್ನವಾಯಿತು. ಕೆಲವು ಪ್ರಾಣವನ್ನು ಬಿಟ್ಟವು. ಅನೇಕ ರಥಗಳು ಪುಡಿಪುಡಿಯಾದವು.

ಅಗ್ನಿನಾ ಪೂರಿತಂ ಸರ್ವಂ ಯದುಸೈನ್ಯಂ ಭಯಾನಕಂ ।
ದೃಷ್ಟ್ವಾನಿರುದ್ಧಃ ಸಂಗ್ರಾಮೇ ಶುಶೋಚ ಸಂಸ್ಮರನ್ ಹರಿಂ ॥ ೨೭ ॥

ತತಃ ಕೃಷ್ಣಸ್ಯ ಕೃಪಯಾ ಬುದ್ಧಿಂ ಪ್ರಾಪ್ತ ಉಷಾಪತಿಃ ।
ಪ್ರತಿಶಾರ್ಙ್ಗಂ ಗೃಹೀತ್ವಾ ವೈ ನಿಷಂಗಾಚ್ಛರಮೇವ ಚ ॥ ೨೮ ॥

ನೀತ್ವಾ ನಿಧಾಯ ಕೋದಂಡೇ ಪರ್ಜನ್ಯಾಸ್ತ್ರಂ ಸಮಾದಧೇ ॥ ೨೯ ॥

ಬಾಣೇ ಪ್ರಯುಕ್ತೇ ಸತಿ ವೈ ಬಲಾಹಕೋ
ಸಮಾಗತಃ ಸೋ ಯದುಸೈನ್ಯಮಂಡಲೇ ।
ಜಲಂ ವವರ್ಷಾಥ ಯದೂನ್ಪ್ರಪಾಲಯನ್
ಕೃಪೀಟಯೋನಿಂ ಕಿಲ ಶಾಂತಯನ್ನೃಪ ॥ ೩೦ ॥

ತತಸ್ತೇಽಗ್ನಿಭಯಾನ್ಮುಕ್ತಾಃ ಶೀತಲಾಂಗಾಶ್ಚ ವೃಷ್ಣಯಃ ।
ಶ್ಲಾಘಾಂ ಕೃತ್ವಾನಿರುದ್ಧಸ್ಯ ಯುದ್ಧಂ ಕರ್ತುಂ ಸಮುತ್ಥಿತಾಃ ॥ ೩೧ ॥

---

೨೭. ಈ ರೀತಿಯಾಗಿ ತನ್ನ ಸೈನ್ಯದಲ್ಲಿ ಅನರ್ಥವು ನಡೆಯುತ್ತಿರುವುದನ್ನು ನೋಡಿ ಅನಿರುದ್ಧನು ಅತಿದುಃಖಪಟ್ಟನು. ನಿರುಪಾಯನಾಗಿ ಕೃಷ್ಣನನ್ನು ಸ್ಮರಿಸುತ್ತಾ ಕುಳಿತನು.

೨೮-೨೯. ಕೃಷ್ಣನ ಅನುಗ್ರಹದಿಂದ ಅನಿರುದ್ಧನಿಗೆ ಸ್ವಲ್ಪ ಬುದ್ಧಿಯೋಡಿತು. ತಕ್ಷಣ ಮೇಲಕ್ಕೆದ್ದು ಶಾರ್ಙ್ಗವೆಂಬ ಧನುಸ್ಸನ್ನು ಹಿಡಿದನು. ಬತ್ತಳಿಕೆಯಿಂದ ಬಾಣವೊಂದನ್ನು ಹಿಡಿದು ಧನುಸ್ಸಿಗೆ ಹೂಡಿ ಮಂತ್ರಿಸಿ ಪರ್ಜನ್ಯಾಸ್ತ್ರವನ್ನು ಪ್ರಯೋಗಿಸಿದನು.

೩೦. ಪರ್ಜನ್ಯಾಸ್ತ್ರವನ್ನು ಬಿಡಲು ಮೋಡಗಳಾವರಿಸಿದವು. ಯದುಸೈನ್ಯಗಳ ಮೇಲೆ ಅತಿಯಾಗಿ ಮಳೆಗರೆದವು. ಯಾದವರು ಉಳಿದುಕೊಂಡರು. ಅಗ್ನಿಯು ಶಾಂತವಾಯಿತು.

೩೧. ಎಲ್ಲರಿಗೂ ಅಗ್ನಿಯ ಕಾಟವು ತಪ್ಪಿತು. ಶರೀರಗಳೆಲ್ಲವೂ ತಣ್ಣಗಾದವು. ಎಲ್ಲರೂ ಅನಿರುದ್ಧನನ್ನು ಹೊಗಳಿದರು. ಪುನಃ ಉತ್ಸಾಹ ಭರಿತರಾಗಿ ಯುದ್ಧಸನ್ನದ್ಧರಾದರು.

ತಾನ್ಪ್ರತ್ಯಾಹಾನಿರುದ್ಧಸ್ತು ಹ್ಯಹಂ ಯಾಸ್ಯೇ ಪುರೀಂ ಪ್ರತಿ ।
ಅರ್ವೇಣ ಪಕ್ಷಯುಕ್ತೇನೈಕೋ ವಿಜೇತುಂ ದ್ವಿಷಾಂ ಪತಿಂ ॥ ೩೨ ॥

॥ ಗರ್ಗ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯಾ ಸಾಂಬಾದ್ಯಾಃ ಕೃಷ್ಣನಂದನಾಃ ।
ಪ್ರೋಚುಸ್ಸರ್ವೇ ಚ ತಂ ರಾಜನ್ನಷ್ಟಾದಶ ಮಹಾರಥಾಃ ॥ ೩೩ ॥

ಗಂತುಂ ನಾರ್ಹಸಿ ತ್ವಂ ರಾಜನ್ ಶತ್ರೂಣಾಂ ನಗರೀಂ ಪ್ರತಿ ।
ಪ್ರಯಾಸ್ಯಾಮೋ ವಯಂ ಸರ್ವೇ ವಿಜೇತುಂ ಚಾತಿತಾಯಿನಂ ॥ ೩೪ ॥

ಇತ್ಯುಕ್ತ್ವಾ ಕುಪಿತಾಸ್ಸರ್ವೇ ಸಹಸಾರುಹ್ಯ ಘೋಟಕಾನ್ ।
ಸಪಕ್ಷಾನ್ ಧನ್ವಿನೋ ವೀರಾ ದಂಶಿತಾ ಯುದ್ಧಕೋವಿದಾಃ ॥ ೩೫ ॥

ಉಲ್ಲಂಘಯಿತ್ವಾ ಪ್ರಾಕಾರಂ ಪುರ್ಯಾಂ ಪ್ರಾಪ್ತಾ ಹರೇಸ್ಸುತಾಃ ।
ಗತ್ವಾ ಜಘ್ನುರ್ದ್ವಿಷಸ್ಸರ್ವಾನ್ ಬಾಣೈರುರಗಸನ್ನಿಭೈಃ ॥ ೩೬ ॥

---

೩೨. ಆಗ ಅನಿರುದ್ಧನು ಅವರನ್ನೆಲ್ಲಾ ಕುರಿತು ನಾನು ರೆಕ್ಕೆಗಳುಳ್ಳ ಕುದುರೆಯ ಮೇಲೆ ಕುಳಿತು ಹೇಮಾಂಗದನ ಪಟ್ಟಣದೊಳಕ್ಕೆ ಪ್ರವೇಶಮಾಡುವೆನು. ನಾನೊಬ್ಬನೇ ಶತ್ರುವನ್ನು ಜಯಿಸಿ ಬರುವೆನು. ಎಂದು ಹೇಳಿದನು.

೩೩. ಅದನ್ನು ಕೇಳಿ ಅಷ್ಟಾದಶಮಹಾರಥರಾದ ಸಾಂಬನೇ ಮೊದಲಾದ ಕೃಷ್ಣನ ಮಕ್ಕಳು ಅನಿರುದ್ಧನನ್ನು ಕುರಿತು,

೩೪. ರಾಜನೇ, ನೀನು ಶತ್ರುನಗರಿಗೆ ಹೋಗುವುದು ಉಚಿತವಲ್ಲ. ನಾವೆಲ್ಲರೂ ಹೋಗುವೆವು. ಎಲ್ಲರೂ ಸೇರಿ ಆ ಶತ್ರುವನ್ನು ನಾಶಪಡಿಸುವೆವು.

೩೫. ಎಂದು ಹೇಳಿ ಎಲ್ಲರೂ ಧನುರ್ಧಾರಿಗಳಾಗಿ ರೆಕ್ಕೆಗಳುಳ್ಳ ಕುದುರೆಗಳನ್ನೇರಿ ಹೊರಟರು. ಎಲ್ಲರೂ ರಣಧೀರರಾಗಿದ್ದರು.

೩೬. ಎಲ್ಲರೂ ಕೋಟೆಯನ್ನು ದಾಟಿ ನಗರಿಯ ಒಳಭಾಗಕ್ಕೆ ಹೋಗಿ ನಿಂತರು. ಬಂದ ಶತ್ರುಗಳನ್ನೆಲ್ಲಾ ವಿಷಬಾಣಗಳಿಂದ ನಾಶಪಡಿಸಿದರು.

ತೇ ಶತ್ರವಸ್ತು ಸಹಸಾ ನೃಪಸ್ಯ ವಚನಾನ್ನೃಪ ।
ಯುದ್ಧಾರ್ಥೇ ಧನ್ವಿನಃ ಕ್ರುದ್ಧಾ ಆಗತಾ ಏಕಕೋಟಯಃ ॥ ೩೭ ॥

ತಾನಾಗತಾನ್ಬಹೂನ್ವೀರಾನ್ ಕುಪಿತಾನುದ್ಯತಾಯುಧಾನ್ ।
ಸಾಂಬೋ ಮಧುರ್ಬೃಹದ್ಬಾಹುಶ್ಚಿತ್ರಭಾನುರ್ವೃಕೋಽರುಣಃ ॥ ೩೮ ॥

ಸಂಗ್ರಾಮಜಿತ್ಸುಮಿತ್ರಶ್ಚ ದೀಪ್ತಿಮಾನ್ಭಾನುರೇವ ಚ ।
ವೇದಬಾಹುಃ ಪುಷ್ಕರಶ್ಚ ಶ್ರುತದೇವಸ್ಸುನಂದನಃ ॥ ೩೯ ॥

ವಿರೂಪಶ್ಚಿತ್ರಬಾಹುಶ್ಚ ನ್ಯಗ್ರೋಧಶ್ಚ ಕವಿಸ್ತಥಾ ।
ಏತೇ ಕೃಷ್ಣಸುತಾಸ್ಸರ್ವೇ ಜಘ್ನುರ್ಬಾಣೈರ್ನಿರೀಕ್ಷ್ಯ ಚ ॥ ೪೦ ॥

ತತಃ ಪುರ್ಯಾಂ ಚ ವೀರಾಣಾಂ ರುಧಿರೇಣ ಭಯಂಕರಾ ।
ನದೀ ಬಭೂವ ರಾಜೇಂದ್ರ ಪುರದ್ವಾರಾದ್ವಿನಿಸ್ಸೃತಾ ॥ ೪೧ ॥

---

೩೭. ಹೇಮಾಂಗದ ಆಜ್ಞೆಯಂತೆ ಅನೇಕ ಯೋಧರು ಅತಿ ಕೋಪದಿಂದ ಇವರನ್ನು ಎದುರಿಸಿದರು. ಧನುರ್ಧಾರಿಗಳಾದ ಒಂದು ಕೋಟಿ ಸೈನಿಕರು ಯುದ್ಧ ಸನ್ನದ್ಧರಾಗಿ ಬಂದರು.

೩೮–೪೦. ಆಗ ಸಾಂಬ, ಮಧು, ಬೃಹದ್ಬಾಹು, ಚಿತ್ರಭಾನು, ವೃಕ, ಅರುಣ, ಸಂಗ್ರಾಮಜಿತ್, ಸುಮಿತ್ರ, ದೀಪ್ತಿಮಾನ್, ಭಾನು, ವೇದಬಾಹು, ಪುಷ್ಕರ, ಶ್ರುತದೇವ, ಸುನಂದನ, ವಿರೂಪ, ಚಿತ್ರಬಾಹು, ನ್ಯಗ್ರೋಧ, ಕವಿ, ಮುಂತಾದ ಹದಿನೆಂಟು ಜನ ಕೃಷ್ಣನ ಮಕ್ಕಳು ಬಾಣಪ್ರಯೋಗ ಮಾಡಿ ಶತ್ರುಗಳನ್ನು ನೋಯಿಸಿದರು.

೪೧. ಸ್ವಲ್ಪಹೊತ್ತಿನೊಳಗಾಗಿ ನಗರದಲ್ಲೆಲ್ಲಾ ರಕ್ತನದಿಯು ಹರಿಯಲು ಪ್ರಾರಂಭಿಸಿತು. ಅದು ಕೋಟೆಯ ಬಾಗಿಲಿನ ಮೂಲಕ ಹೊರಗಡೆಗೂ ಬಂದಿತು.

ತಾಮಾಗತಾಂ ನದೀಂ ಘೋರಾಮನಿರುದ್ಧಸ್ತು ಶಂಕಿತಃ ।
ಪ್ರತ್ಯುವಾಚ ರುಷಾ ರಾಜನ್ಮುಖೇನ ಪರಿಶುಷ್ಯತಾ ॥ ೪೨ ॥

ಮತ್ಪಿತೃಭ್ರಾತರಸ್ಸರ್ವೇ ರಣೇ ಕಿಂ ನಿಹತಾ ಅಹೋ ।
ತಸ್ಮಾದಸ್ಮಾನ್ಪ್ಲಾವಯಿತುಂ ನದೀ ಘೋರಾ ಸಮಾಗತಾ ॥ ೪೩ ॥

ಏತಾಮಗ್ನಿಮಯೈರ್ಬಾಣೈಃ ಶೋಷಯಿಷ್ಯೇ ನ ಸಂಶಯಃ ।
ಪಾತಯಿಷ್ಯಾಮಿ ನಗರೀಮಹಂ ಗಿರಿಸಮೈರ್ಗಜೈಃ ॥ ೪೪ ॥

ತತೋಽನಿರುದ್ಧವಚನಾದ್ಧಸ್ತಿಪೈರ್ಲಕ್ಷಹಸ್ತಿನಃ ।
ಮಹೋಚ್ಚಾಶ್ಚ ಮದೋನ್ಮತ್ತಾಃ ಕಜ್ಜಲಾದ್ರಿಸಮಪ್ರಭಾಃ ॥ ೪೫ ॥

ಕರೈರ್ಗುಲ್ಮಾನ್ಸಮುತ್ಪಾಟ್ಯ ಕ್ಷೇಪಯಂತಶ್ಚ ತತ್ಪುರೇ ।
ಕಂಪಯಂತೋ ಭುವಂ ಪಾದೈಃ ಪುರೋಪರಿ ಸಮಾಗತಾಃ ॥ ೪೬ ॥

---

೪೨. ಹೊರಗಡೆ ನಿಂತಿರುವ ಅನಿರುದ್ಧನು ಈ ಭಯಂಕರವಾದ ರಕ್ತನದಿಯನ್ನು ನೋಡಿ ಹೆದರಿದನು. ಅನುಮಾನಪಡುತ್ತಾ,

೪೩. ಅಯ್ಯೋ, ಇದೇನೀ ಭಯಂಕರವಾದ ರಕ್ತನದಿಯು. ಪುರಿಯೊಳಗೆ ಹೋದ ನನ್ನ ತಂದೆ, ಸಹೋದರರೇನಾದರೂ ಮಡಿದರೋ? ನಮ್ಮನ್ನೂ ತೇಲಿಸಲೇನಾದರೂ ಈ ನದಿಯು ಬಂದಿರುವುದೋ?

೪೪. ಈಗ ನಾನು ಈ ನದಿಯನ್ನು ಆಗ್ನೇಯಬಾಣಗಳಿಂದ ಒಣಗಿಸಿಬಿಡುವೆನು. ಈ ನಗರಿಯನ್ನೂ ಪರ್ವತಾಕಾರಗಳಾದ ಆನೆಗಳಿಂದ ಉರುಳಿಸಿಬಿಡುವೆನು.

೪೫–೪೬. ಎಂದು ಹೇಳಿ ಮಾವಟಿಗರಿಗೆ ಅಪ್ಪಣೆಮಾಡಿದನು. ಒಂದುಲಕ್ಷ ಮದ್ದಾನೆಗಳು ಸಿದ್ಧವಾದವು. ಅವು ಎತ್ತರವಾಗಿಯೂ, ಕಪ್ಪಾಗಿಯೂ ಇದ್ದವು. ನಡೆಯುವ ವೇಗಕ್ಕೆ ಭೂಮಿಯು ಅಲುಗಾಡುವಂತಿತ್ತು. ಅವು ತಮ್ಮ ಸೊಂಡಿಲುಗಳಿಂದ ದೊಡ್ಡ ದೊಡ್ಡ ಪೊದೆಗಳನ್ನು ಕಿತ್ತು ಕಿತ್ತು ನಗರಿಯ ಮೇಲೆ ಎಸೆಯುತ್ತಿದ್ದವು.

ಗತ್ವಾ ತೇ ಕುಂಜರಾಸ್ಸರ್ವೇ ಹೇಮಾಂಗದಪುರೀಂ ರುಷಾ।
ಸರ್ವತಃ ಪಾತಯಾಮಾಸುಃ ಶೀಘ್ರಂ ಕುಂಭಸ್ಥಲೈರ್ನೃಪಃ ॥ ೪೭ ॥

ಕಪಾಟಾಃ ಪತಿತಾಃ ಸರ್ವೇ ದ್ವಾರಾಣಾಂ ದೃಢಶೃಂಖಲಾಃ।
ದುರ್ಗಸ್ಯ ಪತಿತಾಃ ಪುರ್ಯಾ ಗಜೈಃ ಪಾಷಾಣಭಿತ್ತಯಃ ॥ ೪೮ ॥

ಪಾತಯಿತ್ವಾ ಕಪಾಟಾದೀನ್ ದುರ್ಗಂ ಚೈವ ಹರೇರ್ಗಜಾಃ।
ಪುರ್ಯಾಂ ಪ್ರಾಪ್ತಾ ನೃಪಶ್ರೇಷ್ಠ ರಿಪೂಣಾಂ ಪಾತಯನ್ ಗೃಹಾನ್ ॥ ೪೯ ॥

ಹಾಹಾಕಾರೋ ಮಹಾನಾಸೀಚ್ಚಂಪಾವತ್ಯಾಂ ತದೈವ ಹಿ।
ಭಯಭೀತಾ ಜನಾಃ ಸರ್ವೇ ನೃಪಾದ್ಯಾ ವಿಸ್ಮಯಂ ಗತಾಃ ॥ ೫೦ ॥

ತದಾ ತು ಧರ್ಷಿತೋ ರಾಜಾ ಸ್ರಜಾ ಬದ್ಧಕರದ್ವಯಂ।
ಸಮ್ಮುಖೇ ಹರಿಪುತ್ರಾಣಾಮಾಯಯೌ ಪಾಹಿ ಮಾಂ ಬ್ರುವನ್ ॥ ೫೧ ॥

---

೪೭. ಆನೆಗಳೆಲ್ಲವೂ ಚಂಪಾವತಿಯ ಮೇಲೆ ನುಗ್ಗಿದವು. ಅತಿ ಕೋಪದಿಂದ ಕೋಟೆಗಳನ್ನು ತಮ್ಮ ಕುಂಭಸ್ಥಳಗಳಿಂದ ನೂಕುತ್ತಿದ್ದವು.

೪೮. ಹಾಗೆ ನೂಕುವುದರಿಂದ ಕಲ್ಲಿನ ಕೋಟೆಯ ಗೋಡೆಗಳೆಲ್ಲವೂ ಮುರಿದು ಬಿದ್ದವು. ಕೋಟೆಯ ಬಾಗಿಲುಗಳಿಗೆ ಹಾಕಿರುವ ಅಗುಳೀ ಮರಗಳೂ ಸರಪಣಿಗಳೂ ಚೂರು ಚೂರಾದವು. ಬಾಗಿಲುಗಳು ಪುಡಿಪುಡಿಯಾದವು.

೪೯. ಅನಂತರ ಆನೆಗಳೆಲ್ಲವೂ ನಗರಿಯೊಳಕ್ಕೆ ನುಗ್ಗಿದವು. ಶತ್ರುಗಳ ಮನೆಗಳನ್ನೆಲ್ಲಾ ಬೀಳಿಸಿದವು.

೫೦. ಚಂಪಾವತಿಯಲ್ಲಿ ಮಹಾಕೋಲಾಹಲವೆದ್ದಿತು. ಜನರೆಲ್ಲರೂ ಹಾಹಾಕಾರಮಾಡಿದರು. ಹೆದರಿ ಓಡಿಹೋದರು. ಹೇಮಾಂಗದನೇ ಮೊದಲಾದವರು ಇದೇನೆಂದು ಆಶ್ಚರ್ಯಪಟ್ಟರು.

೫೧. ರಾಜನು ಆಗ ಏನೂ ಮಾಡಲಾರದವನಾದನು. ಶರಣಾಗತಿಯನ್ನು ಹೊರತು ಬೇರೆ ಮಾರ್ಗವಿಲ್ಲದಾಯಿತು. ನಿರುಪಾಯನಾಗಿ ಹೂಮಾಲಿಕೆಯಿಂದ ತನ್ನ ಎರಡು ಕೈಗಳನ್ನೂ ಕಟ್ಟಿಕೊಂಡು ಕೃಷ್ಣನ ಮಕ್ಕಳಿದುರಿಗೆ ಬಂದು ನನ್ನನ್ನು ಕಾಪಾಡಿರೆಂದು ಬೇಡಿಕೊಂಡನು.

ತಮಾಗತಂ ನೃಪಂ ವೀಕ್ಷ್ಯ ರಣೇ ಸಾಂಬಸ್ತು ಧರ್ಮವಿತ್ ।
ಭ್ರಾತೄನ್ನಿವಾರಯಾಮಾಸ ದೀನಹಂತ್ಯಾಂಶ್ಚ ಹಸ್ತಿಪಾನ್ ॥ ೫೨ ॥

ನಿವಾರಯಿತ್ವಾ ಸರ್ವಾನ್ ಸ ರಾಜಾನಮಿದಮಬ್ರವೀತ್ ।

॥ ಸಾಂಬ ಉವಾಚ ॥

ಆಗಚ್ಛ ರಾಜನ್ ಭದ್ರಂ ತೇ ನೀತ್ವಾ ಮಮ ತುರಂಗಮಂ ॥ ೫೩ ॥

ಗಚ್ಛಾನಿರುದ್ಧನಿಕಟೇ ತತಃ ಶ್ರೇಯೋ ಭವಿಷ್ಯತಿ ।
ಇತಿ ಶ್ರುತ್ವಾ ತು ತದ್ವಾಕ್ಯಂ ನೀತ್ವಾ ಯಜ್ಞತುರಂಗಮಂ ॥ ೫೪ ॥

ಹರಿಪುತ್ರೈರ್ಯುತೋ ರಾಜಾ ನಿಶ್ಚಕ್ರಾಮ ಪುರಾದ್ಬಹಿಃ ॥ ೫೫ ॥

ಗತ್ವಾನಿರುದ್ಧನಿಕಟೇ ಸಾಕಂ ಪುತ್ರೇಣ ಭೂಪತಿಃ ।
ಹಯಂ ನಿವೇದಯಾಮಾಸ ಸ್ವರ್ಣಕೋಟಿಂ ಚ ಮಾನದ ॥ ೫೬ ॥

---

೫೨. ಆ ರೀತಿ ಹೇಮಾಂಗನು ಬರಲು ಆಗ ಸಾಂಬನು ಯುದ್ಧಮಾಡುತ್ತಿರುವ ತನ್ನ ಸಹೋದರರನ್ನೂ ಮತ್ತು ಮಾವಟಿಗರನ್ನೂ ಯುದ್ಧಮಾಡಬೇಡಿರೆಂದು ತಡೆದನು. ಎಲ್ಲರನ್ನೂ ಯುದ್ಧದಿಂದ ತಡೆದು ಹೇಮಾಂಗದನನ್ನು ಕುರಿತು ಇಂತೆಂದನು.

೫೩. ರಾಜನೇ, ನಿನಗೆ ಮಂಗಳವಾಗಲಿ. ನಮ್ಮ ಯಜ್ಞಾಶ್ವವನ್ನು ತೆಗೆದುಕೊಂಡು ಅನಿರುದ್ಧನ ಹತ್ತಿರಕ್ಕೆ ನಡೆ. ನಿನಗೆ ಒಳ್ಳೆಯದಾಗುವುದು.

೫೪–೫೫. ಎಂದು ಸಾಂಬನಾಡಿದುದನ್ನು ಕೇಳಿ ಹೇಮಾಂಗದನು ಯಜ್ಞಾಶ್ವವನ್ನು ತೆಗೆದುಕೊಂಡು ಕೃಷ್ಣನ ಪುತ್ರರೊಡನೆ ಪಟ್ಟಣದಿಂದ ಹೊರಹೊರಟನು.

೫೬. ತನ್ನ ಮಗನೊಡಗೂಡಿ ಅನಿರುದ್ಧನ ಸಮೀಪಕ್ಕೆ ಹೋಗಿ ಅವನಿಗೆ ಯಜ್ಞಾಶ್ವವನ್ನೂ ಹಾಗೂ ಒಂದು ಕೋಟಿ ಸುವರ್ಣ ನಾಣ್ಯವನ್ನೂ ಅರ್ಪಿಸಿದನು.

ಅನಿರುದ್ಧಸ್ತು ರಾಜೇಂದ್ರ ನೀತಿವಿದ್ದೀನವತ್ಸಲಃ ।
ತತ್ಕರೌ ಮಾಲಯಾಬದ್ಧೌ ಮೋಚಯಿತ್ವೇದಮಬ್ರವೀತ್ ॥ ೫೭ ॥

ಮಯಾ ಸಹ ನೃಪಶ್ರೇಷ್ಠ ಪಾಲಯೈನಂ ತುರಂಗಮಂ ।
ರಾಜನ್ಯೇಭ್ಯಶ್ಚ ಶತ್ರುಭ್ಯಃ ಕೃಷ್ಣಸ್ಯ ಪ್ರೀತಿಹೇತವೇ ॥ ೫೮ ॥

ಶ್ರುತ್ವಾನಿರುದ್ಧಸ್ಯ ವಚೋ ಮಹಾತ್ಮಾ
ಹೇಮಾಂಗದೋ ಬುದ್ಧಿಮತಾಂ ವರಿಷ್ಠಃ ।
ದತ್ವಾ ಚ ರಾಜ್ಯಂ ಸ್ವಸುತಾಯ ಪ್ರೀತ್ಯಾ
ಗಂತುಂ ಮನಸ್ತತ್ರ ಚಕಾರ ತೇನ ॥ ೫೯ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಷೋಡಶೋಽಧ್ಯಾಯಃ

---

೫೭. ನೀತಿಜ್ಞನೂ, ದೀನವತ್ಸಲನೂ ಆದ ಅನಿರುದ್ಧನು ಮಾಲಿಕೆಯಿಂದ ಬಂಧಿತವಾಗಿರುವ ಹೇಮಾಂಗದನ ಕೈಗಳನ್ನು ಬಿಡಿಸಿ

೫೮. ಎಲೈ ನೃಪಶ್ರೇಷ್ಠನೇ, ನೀನೂ ನನ್ನೊಡನೆ ಹೊರಟು ಈ ಯಜ್ಞಾಶ್ವವನ್ನು ಶತ್ರುರಾಜರುಗಳಿಂದ ರಕ್ಷಿಸು. ಹೀಗೆ ಮಾಡಿದರೆ ಕೃಷ್ಣನ ಪ್ರೀತಿಗೆ ಪಾತ್ರನಾಗುವೆ.

೫೯. ಎಂದು ಅನಿರುದ್ಧನು ಹೇಳಲು ಮಹಾಜ್ಞಾನಿಯಾದ ರಾಜನು ಅದನ್ನು ಶಿರಸಾವಹಿಸಿ ತನ್ನ ರಾಜ್ಯವನ್ನು ಮಗನಿಗೆ ಒಪ್ಪಿಸಿ ಅನಿರುದ್ಧನೊಡನೆ ಪ್ರೀತಿಯಿಂದ ಹೊರಡಲು ಸಿದ್ಧನಾದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹದಿನಾರನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ಸಪ್ತದಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥಾನಿರುದ್ಧಸ್ಯ ಹಯೋ ವಿಮುಕ್ತೋ
ಯದುಪ್ರವೀರೈಶ್ಚ ಮಹೋಜ್ಜ್ವಲಾಂಗಃ ।
ಉಶೀನರಾದ್ವೀರವರಾನ್ಪ್ರವಿಶ್ಯ-
ನ್ವಿನಿರ್ಗತಸ್ಸೋಽಪಿ ಶನೈಃ ಶನೈಶ್ಚ ॥ ೧ ॥

ಏವಂ ಸ ವಿಚರನ್ರಾಜನ್ರಾಷ್ಟ್ರೇ ರಾಷ್ಟ್ರೇ ಹಯೋತ್ತಮಃ ।
ನೃಪೈಶ್ಚ ಬಹುಭೀ ರಾಜನ್ ಗೃಹೀತಶ್ಚ ವಿನೋಚಿತಃ ॥ ೨ ॥

ಹದಿನೇಳನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಚಂಪಾವತಿಯಿಂದ ಬಿಡಲ್ಪಟ್ಟ ಹಯವು ಉಶೀನರ ದೇಶವನ್ನು ಬಿಟ್ಟು ವೀರರನ್ನೆಲ್ಲಾ ಎದುರಿಸುತ್ತಾ ನಿಧಾನವಾಗಿ ದೇಶಗಳಲ್ಲಿ ಸಂಚರಿಸುತ್ತಿತ್ತು. ಯದುವೀರರೆಲ್ಲ ಅದನ್ನು ಹಿಂಬಾಲಿಸುತ್ತಾ ಅದರ ರಕ್ಷಣೆಯಲ್ಲಿ ನಿರತರಾಗಿರುತ್ತಿದ್ದರು.

೨ ಈ ರೀತಿಯಾಗಿಯೇ ಯಜ್ಞಾಶ್ವವು ದೇಶದೇಶಗಳಲ್ಲಿ ಸಂಚರಿಸಿತು. ಕೆಲವು ರಾಜರು ಹಿಡಿವರು. ಯುದ್ಧದಲ್ಲಿ ಸೋತು ಬಿಟ್ಟುಬಿಡುವರು.

ಇಂದ್ರನೀಲಂ ಜಿತಂ ಶ್ರುತ್ವಾ ತಥಾ ಹೇಮಾಂಗದಂ ನೃಪಂ ।
ನೃಪಾಶ್ಚಾನ್ಯೇ ಮಂಡಲೇಶಾಃ ಪ್ರಾಪ್ತಂ ನ ಜಗೃಹುರ್ಹಯಂ ॥ ೩ ॥

ವೀರಹೀನಾನ್ಬಹೂನ್ ದೇಶಾನ್ ವಿಲೋಕ್ಯ ತುರಗೋತ್ತಮಃ ।
ಯದೃಚ್ಛಯಾ ನೃಪಶ್ರೇಷ್ಠ ಸ್ತ್ರೀರಾಜ್ಯಂ ತು ಜಗಾಮ ಹ ॥ ೪ ॥

ರಾಜನ್ಯಕನ್ಯಾ ಕಾಚಿದ್ವೈ ಸುರೂಪಾ ನಾಮ ಸುಂದರೀ ।
ಯತ್ರಾಪಿ ರಾಜ್ಯಂ ಕುರುತೇ ರಾಜಾ ತತ್ರ ನ ಜೀವತಿ ॥ ೫ ॥

ಯತ್ರ ದೇಶೇ ಸ್ತ್ರಿಯಂ ಪ್ರಾಪ್ಯ ಯಸ್ತಾಂ ಭಜತಿ ಕಾಮತಃ ।
ಊರ್ಧ್ವಂ ಸಂವತ್ಸರಾದ್ರಾಜನ್ ಕದಾಚಿತ್ಸ ನ ಜೀವತಿ ॥ ೬ ॥

---

೩. ಕೆಲವು ರಾಜರಂತೂ ಇಂದ್ರನೀಲನೂ, ಹೇಮಾಂಗದನೂ ಯುದ್ಧದಲ್ಲಿ ಸೋತರೆಂಬ ವಿಷಯವನ್ನು ಕೇಳಿ ಹೆದರಿ ಅಶ್ವವು ತಮ್ಮ ದೇಶಕ್ಕೆ ಬಂದರೂ ಹಿಡಿಯದೆ ಸುಮ್ಮನಿರುತ್ತಿದ್ದರು.

೪. ದೇಶದೇಶಗಳಲ್ಲೆಲ್ಲಾ ತಿರುಗಿದರೂ ಸಹ ಅದನ್ನು ಹಿಡಿದು ಕಟ್ಟಿಹಾಕಿಕೊಳ್ಳುವಂತಹ ವೀರರು ಯಾರೂ ಸಿಗಲಿಲ್ಲ. ಆ ಮೇಲೆ ಕುದುರೆಯು ಸ್ತ್ರೀರಾಜ್ಯಕ್ಕೆ ಹೋಗಿ ನಿಂತಿತು.

೫. ಆ ಸ್ತ್ರೀರಾಜ್ಯವನ್ನು ಸುರೂಪೆ ಎಂಬ ಸುಂದರಿಯು ಆಳುವಳು. ಅವಳೊಬ್ಬ ರಾಜನ ಮಗಳು. ಅವಳು ರಾಜ್ಯಕ್ಕೆ ಬರುತ್ತಲೇ ರಾಜನು ಸತ್ತು ಹೋಗುವನು.

೬. ಯಾವ ಗಂಡಸಾದರೂ ಆ ದೇಶಕ್ಕೆ ಹೋಗಿ ಯಾವಳನ್ನಾದರೂ ಕಾಮಿಸಿ ಅವಳನ್ನು ಹೊಂದಿದರೆ ಅವನು ಒಂದು ವರ್ಷದ ಮೇಲೆ ಬದುಕುವುದಿಲ್ಲ.

ತತ್ಪುರೇ ತುರಗೋ ಗತ್ವಾ ಹ್ಯುದ್ಯಾನೇ ಪುಷ್ಪಸಂಕುಲೇ ।
ಲವಂಗಲತಿಕಾವೃಂದೇ ತ್ವೇಲಾಗಂಧಸಮಾಕುಲೇ ॥ ೭ ॥

ಪಕ್ಷಿಭಿರ್ಮಧುಪೈರ್ಘುಷ್ಟೇ ಸ್ಥಿತೋಽಭೂಚ್ಚಿಂಚಿಣೀತಲೇ ।
ದದೃಶುಃ ಸ್ತ್ರೀಜನಾಸ್ಸರ್ವೇ ಶ್ಯಾಮಕರ್ಣಂ ಮನೋಹರಂ ॥ ೮ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ದ್ರಷ್ಟುಂ ಸಮಾಗತಾಃ ।
ಹಯಂ ದೃಷ್ಟ್ವಾ ಸ್ತ್ರಿಯೋ ಗತ್ವಾ ಸ್ವಾಮಿನೀಮುವದನ್ನೃಪ ॥ ೯ ॥

ಶ್ರುತ್ವಾ ರಾಜ್ಞೀ ರಥೇ ಸ್ಥಿತ್ವಾ ಛತ್ರಚಾಮರವೀಜಿತಾ ।
ನಾರೀಕೋಟಿಸಮಾಯುಕ್ತಾ ಹಯಂ ದ್ರಷ್ಟುಂ ಸಮಾಗತಾ ॥ ೧೦ ॥

---

೭. ಇಂತಹ ಸ್ತ್ರೀರಾಜ್ಯಕ್ಕೆ ಅಶ್ವವು ಹೋಗಿ ಒಂದು ಪುಷ್ಪೋದ್ಯಾನದಲ್ಲಿ ನಿಂತಿತು. ಅಲ್ಲಿ ಲವಂಗದ ಬಳ್ಳಿಗಳು ಬೇಕಾದಷ್ಟು ಹಬ್ಬಿದ್ದವು. ಏಲಕ್ಕಿ ಗಿಡಗಳು ಇದ್ದುದರಿಂದ ಅದರ ಪರಿಮಳವು ಸುತ್ತಲೂ ಬೀರುತ್ತಿತ್ತು.

೮. ಅನೇಕ ವಿಧವಾದ ಪಕ್ಷಿಗಳೂ, ದುಂಬಿಗಳೂ ಅಲ್ಲಿದ್ದವು. ಇಂತಹ ಉದ್ಯಾನವನದಲ್ಲಿ ಒಂದು ಹುಣುಸೆಯ ಮರದಡಿಯಲ್ಲಿ ಅಶ್ವವು ನಿಂತಿತು. ಮನೋಹರವಾಗಿರುವ ಆ ಯಜ್ಞಾಶ್ವವನ್ನು ಸ್ತ್ರೀಜನರೆಲ್ಲರೂ ನೋಡಿದರು.

೯. ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರರೆಲ್ಲರೂ ಅದನ್ನು ನೋಡಲು ಬರುತ್ತಿದ್ದರು. ಸ್ತ್ರೀಯರೆಲ್ಲರೂ ಹೋಗಿ ತಮ್ಮ ಸ್ವಾಮಿನಿಯಾದ ಸುರೂಪಳಿಗೆ ಅಶ್ವವು ಬಂದಿರುವ ವಿಷಯವನ್ನು ತಿಳಿಸಿದರು.

೧೦. ರಾಜ್ಞಿಯು ಇದನ್ನು ಕೇಳಿ ರಥದ ಮೇಲೆ ಕುಳಿತುಕೊಂಡು ಅಶ್ವವನ್ನು ನೋಡಲು ಬಂದಳು. ಅಕ್ಕಪಕ್ಕದಲ್ಲಿ ಸಖಿಯರು ಛತ್ರವನ್ನು ಹಿಡಿದಿದ್ದರು. ಚಾಮರಗಳನ್ನು ಬೀಸುತ್ತಿದ್ದರು. ಅವಳ ಜೊತೆಯಲ್ಲಿ ಒಂದು ಕೋಟಿ ಜನ ನಾರಿಯರೂ ಬಂದಿದ್ದರು.

ಅಶ್ವಂ ದೃಷ್ಟ್ವಾ ಚ ತತ್ಪತ್ರಂ ವಾಚಯಿತ್ವಾ ರುಷಾನ್ವಿತಾ ।
ಪುನಃ ಪುರೇ ಹಯಂ ಬಧ್ವಾ ಯುದ್ಧಂ ಕರ್ತುಂ ಮನೋ ದಧೇ ॥ ೧೧ ॥

ಕಾಶ್ಚಿನ್ನಾರ್ಯೋ ಗಜಾರೂಢಾ ರಥಾರೂಢಾಃ ಸಮಾಯಯುಃ ।
ಹಯಾರೂಢಾಸ್ತಥಾ ಕಾಶ್ಚಿದ್ದಂಶಿತಾಃ ಶಸ್ತ್ರಸಂಯುತಾಃ ॥ ೧೨ ॥

ತಾಸ್ಸರ್ವಾಃ ಕುಪಿತಾ ವೀಕ್ಷ್ಯ ಶಸ್ತ್ರವರ್ಷಂ ಪ್ರಕುರ್ವತೀಃ ।
ಆಗತಾ ಅನಿರುದ್ಧಸ್ತು ಹೇಮಾಂಗದಮುವಾಚ ಹ ॥ ೧೩ ॥

॥ ಅನಿರುದ್ಧ ಉವಾಚ ॥

ರಾಜನ್ನೇತಾಶ್ಚ ಕಾ ನಾರ್ಯೋ ಯುದ್ಧಂ ಕರ್ತುಂ ಸಮಾಗತಾಃ ।
ವಿಸ್ತರೇಣಾಪಿ ಕಥಯ ಯೇನ ಮೇ ಸ್ಯಾಚ್ಛಿವಂ ತ್ವಿಹ ॥ ೧೪ ॥

---

೧೧. ಸುರೂಪಳು ಕುದುರೆಯನ್ನು ಪರೀಕ್ಷಿಸಿ ಅದರ ಹಣೆಯಲ್ಲಿ ಕಟ್ಟಿರುವುದನ್ನು ಓದಿದಳು. ಕೋಪವು ಮಿತಿಮೀರಿತು. ಅಶ್ವವನ್ನು ತನ್ನ ಪಟ್ಟಣಕ್ಕೆ ಎಳೆದುಕೊಂಡು ಹೋಗಿ ಕಟ್ಟಿಹಾಕಿದಳು. ಯುದ್ಧಮಾಡಲೂ ನಿಶ್ಚಯಿಸಿದಳು.

೧೨. ಯುದ್ಧಸನ್ನದ್ಧರಾಗಿ ಅನೇಕ ಸ್ತ್ರೀಯರು ಆನೆಗಳನ್ನೇರಿ ಬಂದರು. ಕೆಲವರು ರಥಗಳನ್ನೇರಿಯೂ, ಕೆಲವರು ಕುದುರೆಗಳನ್ನೇರಿಯೂ, ಶಸ್ತ್ರಾಸ್ತ್ರಸಜ್ಜಿತರಾಗಿಯಾದವರ ಮೇಲೆ ಯುದ್ಧಮಾಡಲು ಬಂದರು.

೧೩. ಎಲ್ಲರೂ ಕೋಪದಿಂದ ಶಸ್ತ್ರಗಳನ್ನು ಪ್ರಯೋಗಿಸುತ್ತಾ ಬರುತ್ತಿರುವುದನ್ನು ಅನಿರುದ್ಧನು ನೋಡಿ ಹೇಮಾಂಗದನನ್ನು ಕುರಿತು ಇಂತೆಂದನು.

೧೪. ರಾಜನೇ, ಈ ಹೆಂಗಸರಾರು? ಇವರು ಯುದ್ಧಮಾಡುವುದೆಂದರೇನು? ಇದರ ವಿಷಯಗಳನ್ನೆಲ್ಲಾ ವಿಸ್ತಾರವಾಗಿ ತಿಳಿಸು. ಅದರಿಂದ ಪ್ರಕೃತದಲ್ಲಿ ಒಳ್ಳೆಯದಾದೀತು ಎನ್ನಲು,

|| ಹೇಮಾಂಗದ ಉವಾಚ ||

ಅತ್ರ ದೇಶೇ ಚ ಕುರುತೇ ರಾಜ್ಞೀ ರಾಜ್ಯಂ ನೃಪೇಶ್ವರ ।
ನ ಜೀವತಿ ನೃಪೋ ರಾಜ್ಯೇ ತಸ್ಮಾತ್ ಸ್ತ್ರೀಭಿಸ್ಸಮನ್ವಿತಾ || ೧೫ ||

ಹಯಂ ಗೃಹೀತ್ವಾ ತೇ ಸಾ ಚ ಸಂಗ್ರಾಮಂ ಕರ್ತುಮಾಗತಾ ।
ಇತಿ ಶ್ರುತ್ವಾನಿರುದ್ಧಸ್ತು ರಾಜಾನಮಿದಮಬ್ರವೀತ್ || ೧೬ ||

|| ಅನಿರುದ್ಧ ಉವಾಚ ||

ಕಸ್ಮಾತ್ ಸ್ತ್ರೀ ಕುರುತೇ ರಾಜ್ಯಂ ರಾಜಾ ಕಸ್ಮಾನ್ನ ಜೀವತಿ ।
ಏತಾಂ ವಿಸ್ತರತೋ ವಾರ್ತಾಂ ಯತ್ತ್ವಂ ಜಾನಾಸಿ ತದ್ವದ || ೧೭ ||

ಇತಿ ತದ್ವಾಕ್ಯಮಾಕರ್ಣ್ಯ ರಾಜಾ ಹೇಮಾಂಗದೋಽಬ್ರವೀತ್ ।
ಸಂಸ್ಮರನ್ ಯಾಜ್ಞವಲ್ಕ್ಯಸ್ಯ ಸ್ವಗುರೋಶ್ಚ ಪದಾಂಬುಜಂ || ೧೮ ||

ಯಾದವೇಂದ್ರ ಪುರಾವೃತ್ತಂ ಯಾಜ್ಞವಲ್ಕ್ಯಮುಖಾಚ್ಛ್ರುತಂ ।
ಚಂಪಕಾಯಾಂ ಮಯಾ ಪೂರ್ವಂ ಕಥಯಿಷ್ಯಾಮಿ ತಚ್ಛೃಣು || ೧೯ ||

೧೫-೧೬. ಹೇಮಾಂಗದನು ಹೇಳಿದನು:—ರಾಜನೇ, ಈ ದೇಶಕ್ಕೆ ಹೆಂಗಸೇ ರಾಜ್ಞಿಯು. ಕಾರಣವೇನೆಂದರೆ ಇಲ್ಲಿಯ ರಾಜನು ಬಹಳ ಕಾಲ ಬದುಕುವುದಿಲ್ಲ. ಈಗ ಇವಳು ನಿನ್ನ ಅಶ್ವವನ್ನು ಕಟ್ಟಿಹಾಕಿರುವಳು. ಅದಕ್ಕೋಸ್ಕರ ಯುದ್ಧ ಮಾಡಲು ಬಂದಿರುವಳು. ಎಂದು ಹೇಳಿದುದನ್ನು ಕೇಳಿ ಅನಿರುದ್ಧನು ಪುನಃ ಹೇಮಾಂಗದನನ್ನು ಕುರಿತು,

೧೭. ಸ್ತ್ರೀಯೇ ರಾಜ್ಯಭಾರಮಾಡಲು ಕಾರಣವೇನು? ರಾಜನು ಬದುಕದಿರಲು ಏನು ಕಾರಣ? ಇದನ್ನೆಲ್ಲಾ ನಿನಗೆ ಗೊತ್ತಿರುವ ಮಟ್ಟಿಗೆ ತಿಳಿಸು.

೧೮. ಎಂದು ಅನಿರುದ್ಧನು ಕೇಳಲು ಹೇಮಾಂಗದನು ತನ್ನ ಗುರುವಾದ ಯಾಜ್ಞವಲ್ಕ್ಯಮುನಿಯ ಪದಕಮಲಗಳನ್ನು ಧ್ಯಾನಿಸುತ್ತಾ ಹೇಳಿದನು.

೧೯. ಯಾದವೇಂದ್ರನೇ, ಹಿಂದೆ ಚಂಪಕಾಶ್ರಮದಲ್ಲಿ ಯಾಜ್ಞವಲ್ಕ್ಯಮುನಿಯು ಈ ವಿಷಯವನ್ನು ನನಗೆ ಹೇಳಿದನು. ಅದನ್ನೇ ನಿನಗೆ ಹೇಳುವೆನು ಕೇಳು.

ಪುರಾ ಕೃತಯುಗೇ ರಾಜನ್ನತ್ರ ದೇಶೇ ಬಭೂವ ಹ ।
ನಾರೀಪಾಲ ಇತಿ ಖ್ಯಾತೋ ರಾಜಾ ತು ಮಂಡಲೇಶ್ವರಃ ॥ ೨೦ ॥

ತಸ್ಯಾಸೀನ್ಮೋಹಿನೀ ಭಾರ್ಯಾ ಸಿಂಹಲದ್ವೀಪಸಂಭವಾ ।
ಪದ್ಮಿನೀ ಹಂಸಗಮನಾ ಪೂರ್ಣಚಂದ್ರನಿಭಾನನಾ ॥ ೨೧ ॥

ತಸ್ಯಾಃಸೌಂದರ್ಯಜಲಧೌ ಮಗ್ನೋ ಭೂತ್ವಾ ಮಹೀಪತಿಃ ।
ಅಹರ್ನಿಶಮವಿಜ್ಞಾಯ ರೇಮೇ ತಾಂ ಶತವತ್ಸರೈಃ ॥ ೨೨ ॥

ನ ಚಕಾರ ಪ್ರಜಾನಾಂ ವೈ ನ್ಯಾಯಂ ಕಾಮೇನ ಮೋಹಿತಃ ।
ತದಾ ಸರ್ವಾಃ ಪ್ರಜಾ ರಾಜನ್ ಬಭೂವುರ್ದುಃಖಪೀಡಿತಾಃ ॥ ೨೩ ॥

ಪ್ರಜಾನಾಂ ಕದನಂ ವೀಕ್ಷ್ಯ ಮೋಹಿನೀ ನೃಪವಲ್ಲಭಾ ।
ನ್ಯಾಯಂ ಚಕಾರ ಸರ್ವಾಸಾಂ ಸ್ವಶಕ್ತ್ಯಾ ಯಾದವೇಶ್ವರ ॥ ೨೪ ॥

---

೨೦. ಕೃತಯುಗದಲ್ಲಿ ಇದೇ ದೇಶದಲ್ಲಿ ನಾರೀಪಾಲನೆಂಬ ಪ್ರಖ್ಯಾತನಾದ ರಾಜನು ರಾಜ್ಯವಾಳುತ್ತಿದ್ದನು.

೨೧. ಆ ರಾಜನಿಗೆ ಮೋಹಿನೀ ಎಂಬ ಹೆಂಡತಿ ಇದ್ದಳು. ಅವಳು ಸಿಂಹಳದ್ವೀಪೋತ್ಪನ್ನಳು. ಪದ್ಮಿನೀಜಾತಿಯ ಹೆಂಗಸು ಅವಳು. ಹಂಸದಂತೆ ಮಂದಗಾಮಿನಿಯೂ ಅವಳ ಮುಖವು ಪೂರ್ಣಚಂದ್ರನಂತೆ ಆಹ್ಲಾದಕರವಾಗಿಯೂ ಇದ್ದಿತು.

೨೨. ಅವಳ ಸೌಂದರ್ಯ ಸಮುದ್ರದಲ್ಲಿ ಮುಳುಗಿ ರಾಜನು ಹಗಲುರಾತ್ರಿಗಳ ಜ್ಞಾನವೂ ಇಲ್ಲದೆ ನೂರುವರ್ಷಗಳವರೆಗೂ ಅವಳೊಡನೆ ರಮಿಸಿದನು.

೨೩. ಹೀಗೆ ಅವಳೊಡನೆ ಸೇರಿ ಕಾಮಮೋಹಿತನಾಗಿ ರಾಜ್ಯಭಾರದ ಕಡೆಗೆ ಗಮನವನ್ನೇ ಕೊಡಲಿಲ್ಲ. ನ್ಯಾಯವಾದ ಆಳ್ವಿಕೆಯಿಲ್ಲದಿದ್ದುದರಿಂದ ಪ್ರಜೆಗಳೆಲ್ಲರೂ ದುಃಖಿತರಾದರು.

೨೪. ಪ್ರಜೆಗಳ ದುಃಖವನ್ನು ನೋಡಿ ರಾಜ್ಞಿಯಾದ ಮೋಹಿನಿಯೇ ತನ್ನ ಶಕ್ತಿಯಿಂದ ಅವರೆಲ್ಲರಿಗೂ ನ್ಯಾಯಮಾರ್ಗವನ್ನು ತೋರಿಸಿದಳು.

ಏಕದಾ ತಂ ನೃಪಂ ದ್ರಷ್ಟುಮಷ್ಟಾವಕ್ರೋ ಮಹಾಮುನಿಃ ।
ಆಜಗಾಮ ನೃಪಸ್ಯಾಪಿ ಪ್ರಾಪ್ತಶ್ಚಾಂತಃಪುರೇ ಕಿಲ　　॥ ೨೫ ॥

ತಮಾಗತಂ ಮುನಿಂ ದೃಷ್ಟ್ವಾ ನೃಪಃ ಸ್ತ್ರೀಲಗ್ನಮಾನಸಃ ।
ವಿಜಹಾಸ ಕುರೂಪೋಽಯಂ ಕಸ್ಮಾತ್ಪ್ರಾಪ್ತ ಇತಿ ಬ್ರುವನ್　　॥ ೨೬ ॥

ತತೋ ರುಷಾ ಮುನಿಃ ಪ್ರಾಹ ಶೃಣು ಮೂಢ ನಪುಂಸಕ ।
ಮುನೀನಾಂ ಸ್ತ್ರೀಜಿತೋ ಭೂತ್ವಾಪಮಾನಂ ಕಿಂ ಕರಿಷ್ಯಸಿ　　॥ ೨೭ ॥

ತ್ವದ್ದೇಶೇ ಚ ಸದಾ ರಾಜ್ಯಂ ನಾರ್ಯಃ ಕುರ್ವಂತಿ ನಿತ್ಯಶಃ ।
ನ ಜೀವತಿ ನೃಪೋ ರಾಜ್ಯೇ ತಸ್ಮಾದ್ಗಚ್ಛ ತ್ವಮಾಲಯಾತ್　　॥ ೨೮ ॥

ಅತ್ರ ದೇಶೇ ಸ್ತ್ರಿಯಂ ಪ್ರಾಪ್ಯ ಯಸ್ತಾಂ ಭಜತಿ ನಿತ್ಯಶಃ ।
ಸ ತು ಸಂವತ್ಸರಾಂತೇ ವೈ ನ ಜೀವತಿ ನ ಸಂಶಯಃ　　॥ ೨೯ ॥

---

೨೫. ಹೀಗೆಯೇ ಇರುತ್ತಿರಲು ಒಂದುಸಾರೆ ಅಷ್ಟಾವಕ್ರಮಹಾಮುನಿಯು ಅಲ್ಲಿಗೆ ಬಂದು ರಾಜನ ಅಂತಃಪುರಕ್ಕೂ ದಯಮಾಡಿಸಿದನು.

೨೬. ಅವನನ್ನು ನೋಡಿ ಸ್ತ್ರೀಯರಲ್ಲಿಯೇ ಆಸಕ್ತನಾದ ಆ ರಾಜನು ಕುರೂಪಿಯಾದ ಈ ಮುನಿಯು ಇಲ್ಲೀಕೆ ಬಂದನು? ಎಂದು ಹೇಳುತ್ತಾ ಅಪಹಾಸ್ಯ ಮಾಡಿ ಗಟ್ಟಿಯಾಗಿ ನಕ್ಕುಬಿಟ್ಟನು.

೨೭-೨೮. ಆಗ ಮುನಿಗೆ ಕೋಪಬಂದಿತು. ರಾಜನನ್ನು ಕುರಿತು 'ಲೋ ನಪುಂಸಕ' ಕೇಳು. ನೀನು ಸ್ತ್ರೀಗೆ ವಶನಾಗಿ ಮುನಿಗಳಿಗೆ ಅಪಮಾನಮಾಡುವೆಯಾ? ಅದಕ್ಕೆ ತಕ್ಕ ಫಲವನ್ನನುಭವಿಸು. ನಿನ್ನ ದೇಶದಲ್ಲಿ ಇನ್ನುಮುಂದೆ ಸ್ತ್ರೀಯರೇ ರಾಜ್ಯವಾಳಲಿ. ರಾಜನು ಹೆಚ್ಚಿಗೇ ದಿವಸ ಬದುಕದಿರಲಿ.

೨೯. ಈ ದೇಶದಲ್ಲಿ ಯಾವನಾದರೂ ಸರಿಯೇ ಸ್ತ್ರೀಯರನ್ನು ಪಡೆದು ಅನುಭವಿಸುವನೋ ಅವನು ಒಂದು ವರ್ಷದೊಳಗಾಗಿ ಸಾಯುವನು ಇದು ಸತ್ಯವಾದುದು. ಇದಕ್ಕೆ ಸಂಶಯವಿಲ್ಲ ಎಂದು ಹೇಳಿದನು.

॥ ಗರ್ಗ ಉವಾಚ ॥

ಇತ್ಯುಕ್ತ್ವಾ ಸ್ವಾಶ್ರಮಂ ಸೋಽಪಿ ಪ್ರಯಯೌ ಮುನಿಸತ್ತಮಃ ।
ಗತೇ ಮುನೌ ನೃಪಸ್ತತ್ರ ಕ್ಲೀಬೋಽಭೂತ್ತಸ್ಯ ಶಾಪತಃ ॥ ೩೦ ॥

ಸರ್ವಂ ಮುನಿಕೃತಂ ಜ್ಞಾತ್ವಾ ಗರ್ಹಯಾಮಾಸ ಭೂಪತಿಃ ।
ಆತ್ಮಾನಮಾತ್ಮನಾ ಚೈವ ಸ ದೀನೋ ದುಃಖದುಃಖಿತಃ ॥ ೩೧ ॥

॥ ನಾರೀಪಾಲ ಉವಾಚ ॥

ಕಿಂ ಕೃತಂ ಮಂದಭಾಗ್ಯೇನ ಸ್ತ್ರೀಜಿತೇನ ಮಯಾ ಹ್ಯಹೋ ।
ಮುನೀನಾಂ ಪೂಜನಂ ತ್ಯಕ್ತ್ವಾ ತಥಾ ನಿರಯಯಾಯಿನಂ ॥ ೩೨ ॥

ಅದ್ಯ ಮಾಂ ಪಾಪಿನಂ ದುಷ್ಟಂ ಯಮದೂತೈರ್ವಿಲೋಕಿತಂ ।
ದೃಷ್ಟ್ವಾ ವೈತರಣೀಯೋಗ್ಯಂ ಕಃ ಸ್ವತೇಜಾತ್ತ್ರಮೋಚತಿ ॥ ೩೩ ॥

---

೩೦. ಹೀಗೆ ಹೇಳಿ ಅಷ್ಟಾವಕ್ರಮುನಿಯು ತನ್ನಾಶ್ರಮಕ್ಕೆ ತೆರಳಿದನು. ಅವನ ಶಾಪದಿಂದ ರಾಜನು ನಪುಂಸಕನಾದನು.

೩೧. ಇದೆಲ್ಲವೂ ಮುನಿಯ ಶಾಪಪ್ರಭಾವವೆಂದು ತಿಳಿದು ರಾಜನು ತನ್ನನ್ನು ಅತಿಯಾಗಿ ನಿಂದಿಸಿಕೊಂಡನು. ಅತಿದುಃಖಪಟ್ಟನು.

೩೨-೩೩. ನಾರೀಪಾಲನು ಹೇಳಿದನು :—ಅಯ್ಯೋ! ನಾನು ಮಂದಭಾಗ್ಯನು. ಸ್ತ್ರೀಗೆ ವಶನಾಗಿ ಎಂತಹ ಕೆಲಸವನ್ನು ಮಾಡಿಬಿಟ್ಟೆ? ಮುನಿಗೆ ಪೂಜೆಮಾಡಿ ಸತ್ಕರಿಸದೆ ನರಕಕ್ಕೆ ಹೋಗಲು ದಾರಿಯಾದೆ. ನಾನು ಪಾಪಿಯು. ದುಷ್ಟನು. ಯಮದೂತರಾಗಲೇ ನನ್ನನ್ನು ನೋಡುತ್ತಿರುವರು. ವೈತರಣೀನದಿಯಲ್ಲಿ ನಾನು ಬೀಳಬೇಕಾಗುವುದು. ಇಂತಹ ಸಮಯದಲ್ಲಿ ಯಾರುತಾನೇ ನನ್ನನ್ನು ತಮ್ಮ ಶಕ್ತಿಯಿಂದ ಕಾಪಾಡುವರು?

ಇತ್ಯುಕ್ತ್ವಾ ಸ್ವಗೃಹಂ ತ್ಯಕ್ತ್ವಾ ವಿಚಚಾರ ವನೇ ವನೇ ।
ಭಜನ್ವಿಮುಕ್ತಿದಂ ವಿಷ್ಣುಂ ಲೇಭೇ ಚಾಂತೇ ಹರೇಃ ಪದಂ ॥ ೩೪ ॥

ಅತ್ರ ದೇಶೇ ಚ ರಾಜಾನೋ ರಾಜ್ಯಂ ಶಾಪಭಯಾನ್ವಿತಾಃ ।
ನ ಕರಿಷ್ಯಂತಿ ನಾರ್ಯಶ್ಚ ಕರಿಷ್ಯಂತಿ ನ ಸಂಶಯಃ ॥ ೩೫ ॥

॥ ಗರ್ಗ ಉವಾಚ ॥

ಏವಂ ತಯೋಃ ಕಥಯತೋರ್ನಾರ್ಯಃ ಕ್ರುದ್ಧಾಃ ಸಮಾಗತಾಃ ।
ವಿಮುಂಚನ್ ಧನುಷ್ಟೈರ್ಬಾಣಾನ್ ಪುಂಶ್ಚಲ್ಯಃ ಕ್ರೋಧಪೂರಿತಾಃ ॥ ೩೬ ॥

ತಾಃ ಸ್ತ್ರೀರ್ವೀಕ್ಷ್ಯಾನಿರುದ್ಧಸ್ತು ವಿಸ್ಮಿತೋಽಭೂದ್ಭಯಾನ್ವಿತಃ ।
ಕಥಂ ಕರಿಷ್ಯೇ ಯುದ್ಧಂ ವೈ ಸ್ತ್ರೀಭಿಸ್ಸಾರ್ಧಮಿತಿ ಬ್ರುವನ್ ॥ ೩೭ ॥

---

೩೪. ಎಂದು ಪ್ರಲಪಿಸುತ್ತಾ ತನ್ನ ಮನೆಯನ್ನು ಬಿಟ್ಟು ಕಾಡಿಗೆ ಹೊರಟು ಹೋದನು. ಅಲ್ಲಿ ಮುಕ್ತಿದಾಯಕನಾದ ವಿಷ್ಣುವನ್ನು ಭಜಿಸಿ ಅವನನ್ನು ಸಂತುಷ್ಟಿಪಡಿಸಿದನು. ಕೊನೆಗೆ ವಿಷ್ಣುವಿನ ಸ್ಥಾನವನ್ನು ಪಡೆದನು.

೩೫. ಆ ಮುನಿಯ ಶಾಪಭಯದಿಂದ ರಾಜರು ಈ ದೇಶವನ್ನು ಆಳುವುದಿಲ್ಲವು. ಸ್ತ್ರೀಯರೇ ರಾಜ್ಯವಾಳುವರು ಎಂದನು.

೩೬. ಹೇಮಾಂಗದನು ಹೀಗೆ ಹೇಳಿ ಮುಗಿಸುವಷ್ಟರಲ್ಲಿಯೇ ಸ್ತ್ರೀಯರೆಲ್ಲರೂ ಅತಿಕ್ರುದ್ಧರಾಗಿ ಬಾಣಪ್ರಯೋಗಮಾಡುತ್ತಾ ಯುದ್ಧರಂಗಕ್ಕೆ ಬಂದರು.

೩೭. ಆ ಹೆಂಗಸರನ್ನು ನೋಡಿ ಅನಿರುದ್ಧನು ಅತಿವಿಸ್ಮಿತನಾದನು. ಭಯವೂ ಉಂಟಾಯಿತು. ಸ್ತ್ರೀಯರೊಡನೆ ಯುದ್ಧಮಾಡುವುದೆಂತು ? ಎಂದು ಹೇಳುತ್ತಾ ಸುಮ್ಮನೆ ನಿಂತನು.

ತದೈವ ತಸ್ಯ ನಿಕಟೇ ಸುರೂಪಾ ಮಂಡಲೇಶ್ವರೀ ।
ಸ್ತ್ರೀಭಿಃ ಪ್ರಾಪ್ತಾ ಚಾನಿರುದ್ಧಂ ದೃಷ್ಟ್ವಾ ವಚನಮಬ್ರವೀತ್ ॥ ೩೮ ॥

॥ ರಾಜ್ಞ್ಯುವಾಚ ॥

ತಿಷ್ಠ ತಿಷ್ಠ ರಣೇ ವೀರ ಕುರು ಯುದ್ಧಂ ಮಯಾ ಸಹ ।
ಸೇನಾಯುಕ್ತಸ್ತಥಾಪಿ ತ್ವಂ ಕಿಂ ಶೋಚಸಿ ವೃಥಾ ರಣೇ ॥ ೩೯ ॥

ಅಹಂ ತ್ವಾಂ ಮಾನಿನಂ ಜಿತ್ವಾ ಪ್ರಧನೇ ವೃಷ್ಣಿಭಿರ್ಯುತಂ ।
ಕ್ರೀಡಾಮೃಗಂ ಕರಿಷ್ಯಾಮಿ ಮದನಜ್ವರಪೀಡಿತಾ ॥ ೪೦ ॥

ಇತಿ ತಸ್ಯಾ ವಚಃ ಶ್ರುತ್ವಾನಿರುದ್ಧೋ ಭಯವಿಹ್ವಲಃ ।
ಪ್ರತ್ಯಾಹ ದೀನಯಾ ವಾಚಾ ಸರ್ವವಿನ್ಮಂಡಲೇಶ್ವರೀಂ ॥ ೪೧ ॥

---

೩೮. ಆ ಕ್ಷಣದಲ್ಲಿಯೇ ಚಕ್ರವರ್ತಿನಿಯಾದ ಸುರೂಪಳು ಸ್ತ್ರೀಸೈನಿಕರೊಂದಿಗೆ ಅನಿರುದ್ಧನ ಸಮೀಪಕ್ಕೆ ಬಂದು ನಿಂತು ಅವನನ್ನು ಕುರಿತು,

೩೯. ಎಲೈ ವೀರನೇ, ನನ್ನೊಡನೆ ಯುದ್ಧಮಾಡು. ದೊಡ್ಡ ಸೈನ್ಯದಿಂದ ಕೂಡಿದ್ದರೂ ಸುಮ್ಮನೆ ದುಃಖಮಾಡುತ್ತಾ ನಿಂತಿರುವೆ ಏಕೆ? ಏಳು. ಸಿದ್ಧನಾಗು.

೪೦. ನೀನೇನೋ ಗೌರವಶಾಲಿಯಾಗಿರಬಹುದು. ಆದರೇನು? ಯದು ವೀರರೊಡಗೂಡಿದ ನಿನ್ನನ್ನು ಯುದ್ಧದಲ್ಲಿ ಗೆಲ್ಲುವೆನು. ಅನಂತರ ಕಾಮಜ್ವರಪೀಡಿತಳಾದ ನನಗೆ ನೀನು ಕ್ರೀಡಾಮೃಗವಾಗಿರುವಂತೆ ಮಾಡಿಕೊಳ್ಳುವೆನು.

೪೧. ಎಂದು ಹೇಳಲು ಅನಿರುದ್ಧನು ಭಯವಿಹ್ವಲನಾದನು. ಅನಂತರ ಚಕ್ರವರ್ತಿನಿಯಾದ ಸುರೂಪಳನ್ನು ಕುರಿತು ದೈನ್ಯದಿಂದ ಮಾತನಾಡಿದನು.

ತುರಗಂ ಕೃಷ್ಣಚಂದ್ರಸ್ಯ ಸರ್ವದೇವೇಶ್ವರಸ್ಯ ಚ ।
ಮಹ್ಯಂ ಪ್ರಯಚ್ಛ ಹೇ ರಾಜ್ಞಿ ಕ್ರತುರರ್ಥೇ ತು ಸ್ವೇಚ್ಛಯಾ ॥ ೪೨ ॥

ನಾಹಂ ಕರಿಷ್ಯೇ ಯುದ್ಧಂ ವೈ ತ್ವಯಾ ಸಾರ್ಧಂ ವರಾನನೇ ।
ಗಚ್ಛ ದ್ವಾರವತೀಂ ತಸ್ಮಾದ್ದರ್ಶನಾರ್ಥಂ ಹರೇಶ್ಚ ವೈ ॥ ೪೩ ॥

ಯನ್ನಾಮಸ್ಮರಣಾದ್ಭದ್ರೇ ನರೋ ಯಾತಿ ಕೃತಾರ್ಥತಾಂ ।
ತಸ್ಯೈವ ದರ್ಶನಸ್ಯಾಪಿ ಫಲಂ ಕಿಂ ಕಥಯಾಮಿ ತೇ ॥ ೪೪ ॥

ಇತಿ ಸಾ ಚಾನಿರುದ್ಧೇನ ಬೋಧಿತಾ ನಿಪುಣೇನ ವೈ ।
ಪೂರ್ವವಾರ್ತಾಂ ಸ್ಮರನ್ಪ್ರಾಹ ಬ್ರಹ್ಮಾಣಂ ಮೋಹಿನೀ ಯಥಾ ॥ ೪೫ ॥

॥ ಸುರೂಪೋವಾಚ ॥

ಅಹಂ ಪುರಾಭವಂ ದೇವ ಸ್ವರ್ವೇಶ್ಯಾ ಪೂರ್ವಜನ್ಮನಿ ।
ಮೋಹಿನೀ ನಾಮ ವಿಖ್ಯಾತಾ ಕಂಜಾಂಗಾ ಕಂಜಲೋಚನಾ ॥ ೪೬ ॥

೪೨–೪೩. ಎಲೌ ಸುಂದರಿಯೇ, ಇದು ದೇವದೇವನಾದ ಶ್ರೀಕೃಷ್ಣನ ಅಶ್ವವು. ಯಜ್ಞಕ್ಕೋಸ್ಕರ ಬಿಟ್ಟಿರುವ ಇದನ್ನು ನನಗೆ ಕೊಟ್ಟುಬಿಡು. ನಿನ್ನೊಡನೆ ನಾನು ಯುದ್ಧಮಾಡಲಾರೆನು. ನೀನು ದ್ವಾರಕಾವತಿಗೆ ನಡೆ. ಅಲ್ಲಿ ಶ್ರೀಕೃಷ್ಣನ ದರ್ಶನ ಮಾಡುವೆ.

೪೪. ಅವನ ನಾಮಸ್ಮರಣೆಮಾತ್ರದಿಂದಲೇ ಮನುಜನು ಕೃತಕೃತ್ಯನಾಗುವನು. ಇನ್ನು ಅವನ ದರ್ಶನಮಾಡಿದರೆ ಆಗುವ ಫಲವನ್ನು ಹೇಳುವುದೇನು? ಎಂದನು.

೪೫. ನಿಪುಣನಾದ ಅನಿರುದ್ಧನ ಮಾತನ್ನು ಕೇಳಿ ಸುರೂಪಳು ತನ್ನ ಹಿಂದಿನ ಜನ್ಮದ ಸ್ಮರಣೆಯನ್ನು ತಂದುಕೊಂಡು ಮೋಹಿನೀ ಎಂಬ ಅಪ್ಸರೆಯು ಬ್ರಹ್ಮನನ್ನು ಕುರಿತು ಹೇಳಿದಂತೆ ಹೇಳಿದಳು.

೪೬. ನಾನು ಪೂರ್ವಜನ್ಮದಲ್ಲಿ ಮೋಹಿನೀ ಎಂದು ಪ್ರಸಿದ್ಧಳಾದ ಸ್ವರ್ಗಲೋಕದ ವೇಶ್ಯೆಯು. ಸುಂದರಿಯಾಗಿದ್ದೆನು.

ಏಕದಾ ಹಂಸಯಾನೇನ ವ್ರಜಂತಂ ಪದ್ಮಸಂಭವಂ ।
ದೃಷ್ಟ್ವಾ ತನ್ನಿಕಟೇ ಗತ್ವಾ ಭಜ ಮಾಮಿತ್ಯುವಾಚ ಹ ॥ ೪೭ ॥

ಯದಾ ನ ಜಗೃಹೇ ಬ್ರಹ್ಮಾ ಶಾಪಂ ದತ್ವಾ ತದಾ ಹ್ಯಹಂ ।
ಗತ್ವಾ ಕಕುದ್ಮತೀತೀರೇ ಚಕಾರ ದುಷ್ಕರಂ ತಪಃ ॥ ೪೮ ॥

ತಪಸಾ ತೋಷಿತೋ ಬ್ರಹ್ಮಾ ತಪ್ರೋಂತೇ ಚ ಸಮಾಗತಃ ।
ತಪಸ್ವಿನೀ ಪ್ರಸನ್ನಾತ್ಮಾ ವರಂ ಬ್ರೂಹೀತ್ಯುವಾಚ ಹ ॥ ೪೯ ॥

ತಚ್ಛ್ರುತ್ವಾ ಮೋಹಿನೀ ಪ್ರಾಹ ದೇವದೇವ ನಮೋಽಸ್ತು ತೇ ।
ವರಯ ವರಯ ಲೋಕೇಶ ದೀನಾಂ ಮಾಂ ತಪಸಿ ಸ್ಥಿತಾಂ ॥ ೫೦ ॥

ಯದಿ ಮಾಂ ತ್ವಂ ನ ಗೃಹ್ಣಾಸಿ ದುಃಖಿತಾಂ ಶರಣಾಗತಾಂ ।
ತದಾ ರೋಷೇಣ ತ್ಯಕ್ಷ್ಯಾಮಿ ತಪಸಾ ಚ ಕೃಶಾಂ ತನುಂ ॥ ೫೧ ॥

---

೪೭. ಒಂದು ದಿನ ಬ್ರಹ್ಮನು ಹಂಸಾರೂಢನಾಗಿ ಹೋಗುತ್ತಿರಲು ನಾನು ಅವನನ್ನು ನೋಡಿ ಅವನ ಹತ್ತಿರಕ್ಕೆ ಹೋಗಿ ನನ್ನನ್ನು ವರಿಸೆಂದು ಕೇಳಿಕೊಂಡೆನು.

೪೮. ಅದಕ್ಕವನು ಒಪ್ಪಲಿಲ್ಲ. ಆಗ ನಾನು ಅವನಿಗೆ ಶಾಪವನ್ನಿತ್ತು ಕಕುದ್ಮತೀ ಎಂಬ ನದಿಯ ತೀರಕ್ಕೆ ಬಂದು ಬ್ರಹ್ಮನನ್ನೇ ಕುರಿತು ಘೋರವಾದ ತಪಸ್ಸನ್ನಾಚರಿಸಿದೆನು.

೪೯. ಅದರಿಂದ ಬ್ರಹ್ಮನು ಸಂತುಷ್ಟನಾಗಿ ಪ್ರತ್ಯಕ್ಷನಾದನು. ತಪಸ್ವಿನಿಯಾದ ನನ್ನನ್ನು ಕುರಿತು 'ವರವನ್ನು ಕೇಳಿಕೋ' ಎಂದು ಹೇಳಿದನು.

೫೦–೫೧. ಆಗ ನಾನು (ಮೋಹಿನಿಯು) ಬ್ರಹ್ಮನನ್ನು ಕುರಿತು ದೇವದೇವನೇ, ನಿನಗೆ ನಮಸ್ಕಾರವು. ಲೋಕೇಶನಾದ ನೀನು ದೀನಳಾದ ನನ್ನನ್ನು ವರಿಸು. ನೀನು ಶರಣಾಗತಳಾದ ನನ್ನನ್ನು ವರಿಸದಿದ್ದರೆ ಇದರ ದುಃಖದಿಂದಲೇ ನಾನು ಶರೀರವನ್ನು ಶೋಷಿಸಿ ಪ್ರಾಣವನ್ನು ಬಿಡುವೆನು.

ಇತಿ ಶ್ರುತ್ವಾ ವಿಧಿಃ ಪ್ರಾಹ ಶೋಚಂ ಮಾ ಕುರು ಭಾಮಿನೀ ।
ಅನ್ಯಜನ್ಮನಿ ತೇ ಭದ್ರೇ ಭವಿಷ್ಯತಿ ಮನೋರಥಃ　　　　|| ೩೨ ||

ಅಹಂ ಪೌತ್ರೋ ಭವಿಷ್ಯಾಮಿ ದ್ವಾರಕಾಯಾಂ ಹರೇಶ್ಚ ವೈ ।
ಸುವರ್ಣಶ್ಚಾನಿರುದ್ಧಾಖ್ಯೋ ಸ್ತ್ರೀರಾಜ್ಯೇ ತ್ವಂ ಭವಿಷ್ಯಸಿ　　　　|| ೩೩ ||

ತತೋ ಗೃಹ್ಣಾಮಿ ತ್ವಾಂ ಭದ್ರೇ ನಾನೃತಂ ವಚನಂ ಮಮ ।
ಇತಿ ಶ್ರುತ್ವಾ ಚ ತದ್ವಾಕ್ಯಂ ಜಾತಾಹಂ ಪೃಥಿವೀತಲೇ　　　　|| ೩೪ ||

ಬ್ರಹ್ಮಾ ತ್ವಂ ಯಾದವಶ್ರೇಷ್ಠ ಮದರ್ಥೇ ಚ ಸಮಾಗತಃ ।

|| ಗರ್ಗ ಉವಾಚ ||

ವಾಕ್ಯಂ ತಸ್ಯಾಃ ಸಮಾಕರ್ಣ್ಯ ಯಾದವಾ ವಿಸ್ಮಯಂ ಗತಾಃ　　　　|| ೩೫ ||

---

೩೨. ಎಂದು ಹೇಳಲು ಆಗ ಬ್ರಹ್ಮನು ಎಲೌ ಮಂಗಳೇ, ದುಃಖಿಸಬೇಡ. ನಿನ್ನ ಮನೋರಥವು ನಿನ್ನ ಮುಂದಿನ ಜನ್ಮದಲ್ಲಿ ಸಿದ್ಧಿಸುವುದು.

೩೩. ನಾನು ಮುಂದೆ ಶ್ರೀಕೃಷ್ಣನಿಗೆ ಮೊಮ್ಮಗನಾಗಿ ಅನಿರುದ್ಧನೆಂಬ ಹೆಸರಿನಿಂದ ದ್ವಾರಕಾವತಿಯಲ್ಲಿ ಹುಟ್ಟುವೆನು. ನೀನು ಸ್ತ್ರೀರಾಜ್ಯದಲ್ಲಿ ಹುಟ್ಟುವೆ. ಆಗ ನಿನ್ನನ್ನು ನಾನು ಸ್ವೀಕರಿಸುವೆನು. ಇದು ಸತ್ಯವು. ನನ್ನ ಮಾತು ಎಂದಿಗೂ ಸುಳ್ಳಾಗುವುದಿಲ್ಲ.

೩೪. ಎಂದು ನುಡಿದ ಬ್ರಹ್ಮನ ಅಭಿಪ್ರಾಯದಂತೆ ನಾನು ಪೃಥಿವಿಯಲ್ಲಿ ಜನಿಸಿರುವೆನು. ಯದುಶ್ರೇಷ್ಠನೇ ನೀನು ಬ್ರಹ್ಮನು. ನನಗೋಸ್ಕರ ಇಲ್ಲಿಗೆ ಬಂದಿರುವೆ ಎಂದಳು.

೩೫. ಸುರೂಪಳು ಹೇಳಿದುದನ್ನು ಕೇಳಿ ಯಾದವರೆಲ್ಲರೂ ವಿಸ್ಮಿತರಾದರು. ಧರ್ಮಾತ್ಮನಾದ ಅನಿರುದ್ಧನು ಅವಳನ್ನು ಕುರಿತು ಈ ರೀತಿ ವಿಮಲವಾದ ಮಾತುಗಳನ್ನು ಹೇಳಿದನು.

ಅನಿರುದ್ಧಸ್ತು ಧರ್ಮಾತ್ಮಾ ಪ್ರತ್ಯಾಹ ವಿಮಲಂ ವಚಃ ।

॥ ಅನಿರುದ್ಧ ಉವಾಚ ॥

ಗಚ್ಛ ಶ್ರೀದ್ವಾರಕಾಂ ಭದ್ರೇ ತತ್ರ ಗೃಹ್ಣಾಮಿ ತ್ವಾಂ ಪ್ರಿಯಾಂ ॥
ಅದ್ಯ ಯಾಸ್ಯಾಮಿ ತುರಗಂ ರಾಜನ್ಯೇಭ್ಯಶ್ಚ ಪಾಲಯನ್ ॥ ೫೬ ॥

ತತಸ್ಸಾ ತಸ್ಯ ವಾಕ್ಯೇನ ಪ್ರಮಿಲಾಂ ಮಂತ್ರಿಣೀಂ ವರಾಂ ।
ರಾಜ್ಯೇ ಕೃತ್ವಾ ತುರಂಗಂ ಚ ದತ್ವಾ ದ್ವಾರವತೀಂ ಯಯೌ ॥ ೫೭ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಸಪ್ತದಶೋಽಧ್ಯಾಯಃ

---

೫೬. ಎಲೌ ಶುಭಕರಳೇ, ನೀನು ದ್ವಾರಕೆಗೆ ಬಾ. ಅಲ್ಲಿ ನಿನ್ನನ್ನು ಸ್ವೀಕರಿಸುವೆನು. ಈಗ ಈ ಯಜ್ಞಾಶ್ವವನ್ನು ರಾಜರುಗಳಿಂದ ರಕ್ಷಿಸಲು ಹೊರಟಿರುವೆನು.

೫೭. ಎಂದು ಅನಿರುದ್ಧನು ಹೇಳಲು ಅದನ್ನು ಕೇಳಿ ಸುರೂಪಳು ತನ್ನ ಮಂತ್ರಿಶ್ರೇಷ್ಠಳಾದ ಪ್ರಮಿಳೆ ಎಂಬುವಳಿಗೆ ರಾಜ್ಯವನ್ನು ಅರ್ಪಿಸಿ ಯಜ್ಞಾಶ್ವವನ್ನು ಅನಿರುದ್ಧನಿಗೆ ಒಪ್ಪಿಸಿ ದ್ವಾರಕೆಗೆ ಹೊರಟಳು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹದಿನೇಳನೆಯ
ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಅಷ್ಟಾದಶೋಽಧ್ಯಾಯಃ

|| ಶ್ರೀಗರ್ಗ ಉವಾಚ ||

ಅಥ ಮುಕ್ತೋಽನಿರುದ್ಧೇನ ಕ್ರತೋರ್ವಾಜೀ ಪಯಃಪ್ರಭಃ ।
ಸಿಂಹಲದ್ವೀಪನಿಕಟೇ ವಿಚಚಾರ ಯದೃಚ್ಛಯಾ || ೧ ||

ತೃಷಾರ್ತಸ್ತುರಗಸ್ತತ್ರ ದೃಷ್ಟ್ವಾ ವಾಪೀಂ ಜಲಾನ್ವಿತಾಂ ।
ವೃಕ್ಷೈಶ್ಚ ಬಹುಭಿರ್ಗುಪ್ತಾಂ ದೃಷ್ಟ್ವಾ ತೋಯಂ ಪಪೌ ಸ್ವಯಂ || ೨ ||

ವಾಪ್ಯಾಮಶ್ವಂ ವಿಲೋಕ್ಯಾಥ ಭೀಷಣೋ ನಾಮ ರಾಕ್ಷಸಃ ।
ವಾಚಯಿತ್ವಾ ಚ ತತ್ಪತ್ರಂ ಜಗ್ರಾಹ ತುರಗಂ ಮುದಾ || ೩ ||

ಹದಿನೆಂಟನೆಯ ಅಧ್ಯಾಯವು

೧–೨. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಸುರೂಪಳು ಯಜ್ಞಾಶ್ವವನ್ನು ಅನಿರುದ್ಧನಿಗೆ ಒಪ್ಪಸಿದನಂತರ ಅನಿರುದ್ಧನು ಅದನ್ನು ಬಿಟ್ಟನು. ಅದು ಸ್ವೇಚ್ಛೆಯಾಗಿ ತಿರುಗುತ್ತಾ ಸಿಂಹಲದ್ವೀಪದ ಹತ್ತಿರಕ್ಕೆ ಹೋಯಿತು. ಬಾಯಾರಿಕೆಯಿಂದ ಒಂದು ಜಲಸಮೃದ್ಧವಾದ ಭಾವಿಗೆ ಹೋಗಿ ಯಥೇಚ್ಛವಾಗಿ ನೀರನ್ನು ಕುಡಿಯಿತು.

೩. ಭಾವಿಯಲ್ಲಿ ನೀರನ್ನು ಕುಡಿಯುತ್ತಿರುವ ಅಶ್ವವನ್ನು ಭೀಷಣ ನೆಂಬ ರಾಕ್ಷಸನು ನೋಡಿದನು. ಅದರ ಹಣೆಯಲ್ಲಿ ಕಟ್ಟಿರುವುದನ್ನು ಓದಿ ಅಶ್ವವನ್ನು ಆನಂದದಿಂದ ಹಿಡಿದುಕೊಂಡನು.

ತದೈವ ಯಾದವಾಃ ಸರ್ವೇ ತಂ ಪಶ್ಯಂತಃ ಸಮಾಗತಾಃ ।
ರಾಕ್ಷಸೇನ ಗೃಹೀತಂ ವೈ ದದೃಶುಃ ಕ್ರತುವಾಜಿನಂ ॥ ೪ ॥

ತತಸ್ತೇ ಕೌಣಪಂ ಪ್ರಾಹುರ್ಯಾದವಾ ಯುದ್ಧಶಾಲಿನಃ ।

॥ ಯಾದವಾ ಊಚುಃ ॥

ಕಸ್ತ್ವಂ ಶ್ರೀಯಾದವೇಂದ್ರಸ್ಯ ಹ್ಯುಗ್ರಸೇನಸ್ಯ ಭೂಪತೇಃ ॥ ೫ ॥

ಸಿಂಹವಸ್ತುಂ ಕ್ರೋಷ್ಟ ಇವ ಹಯಂ ನೀತ್ವಾ ಕ್ವ ಯಾಸ್ಯಸಿ ।
ತಿಷ್ಠ ತಿಷ್ಠ ರಣಂ ಧೂರ್ತ ಅಸ್ಮಾಭಿಃ ಕುರು ಧೈರ್ಯತಃ ॥ ೬ ॥

ತುರಗಂ ಮೋಚಯಿಷ್ಯಾಮೋ ವಧಿಷ್ಯಾಮೋ ರಣೇ ಚ ತ್ವಾಂ ।
ಶಕುನಿರ್ಭ್ರಾತೃಸಹಿತೋ ನರಕೋ ಬಾಣ ಏವ ಚ ॥ ೭ ॥

ಕಲಂಕಶ್ಚೈವ ರಾಜಾನ ಏತೇಽಸ್ಮಾಭಿರ್ವಿನಾಶಿತಾಃ ।
ತಸ್ಮಾನ್ನ ಗಣಯಿಷ್ಯಾಮೋ ಯುದ್ಧೇ ತ್ವಾಂ ಚ ತೃಣೋಪಮಂ ॥ ೮ ॥

---

೪. ಅವನ್ನು ಹಿಂಬಾಲಿಸಿಕೊಂಡು ಬಂದ ಯಾದವರೂ ಅಲ್ಲಿಗೆ ಬಂದು ಯಜ್ಞಾಶ್ವವನ್ನು ಈ ರಾಕ್ಷಸನು ಹಿಡಿದಿರುವುದನ್ನು ನೋಡಿದರು. ಆಗ ಆ ರಾಕ್ಷಸನನ್ನು ಕುರಿತು ಇಂತೆಂದರು.

೫–೬. ಎಲೋ ನೀನು ಯಾರು? ಈ ಯಜ್ಞಾಶ್ವವು ಯಾದವರಾಜನಾದ ಉಗ್ರಸೇನ ಭೂಪತಿಗೆ ಸೇರಿದುದು. ಸಿಂಹದ ಸ್ವತ್ತನ್ನು ಎಳೆದುಕೊಂಡು ಹೋಗುವ ನರಿಯಂತೆ ಕುದುರೆಯನ್ನು ಎಲ್ಲಿಗೆ ಎಳೆದುಕೊಂಡು ಹೋಗುತ್ತಿರುವೆ? ಧೂರ್ತನೇ, ನಿಲ್ಲು ನಿಲ್ಲು ನಮ್ಮೊಡನೆ ಯುದ್ಧಮಾಡು.

೭–೮. ನಾವು ನಿನ್ನನ್ನು ಕೊಂದು ಕುದುರೆಯನ್ನು ಬಿಡಿಸಿಕೊಳ್ಳುವುವು. ಶಕುನಿ, ಅವನ ಸಹೋದರ ವೃಕ, ನರಕ, ಬಾಣ, ಕಲಂಕ, ಮುಂತಾದ ಮಹಾ ಮಹಾ ಶೂರರಾದ ರಾಜರೆಲ್ಲರೂ ನಮ್ಮಿಂದ ಹತರಾಗಿರುವರು. ನೀನು ನಮಗೆ ಹುಲ್ಲಿಗೆ ಸಮಾನನು. ಯುದ್ಧದಲ್ಲಿ ನೀನೊಬ್ಬ ಲೆಕ್ಕವೇ ನಮಗೆ?

ಗಚ್ಛ ಗಚ್ಛ ಹಯಂ ದತ್ವಾ ಘಾತಯಾಮೋ ನ ಚೇತ್ವಲು ।
ತೇಷಾಂ ಭಾಷಿತಮಾಕರ್ಣ್ಯ ಭೀಷಣಸ್ಸುರಭೀಷಣಃ ॥ ೯ ॥

ಶೂಲೀ ಗದಾಧರಃ ಖಡ್ಗೀ ತಾನ್ಪ್ರತ್ಯಾಹ ರುಷಾನ್ವಿತಃ ।

॥ ಭೀಷಣ ಉವಾಚ ॥

ಕೇ ಯೂಯಂ ಪ್ರತಿ ಯೋದ್ಧಾರೋ ಮಮ ಭಕ್ಷ್ಯಾಃ ನರಾಃ ಸ್ಮೃತಾಃ॥೧೦॥

ಸಂಮುಖೇ ರಾಕ್ಷಸಾನಾಂ ತೇ ಕಿಂ ಕರಿಷ್ಯಂತಿ ಪೌರುಷಂ ।
ಯದಾ ವಿಶ್ವಜಿತಂ ಯಜ್ಞಂ ಯಾದವೇನ ಕೃತಂ ಪುರಾ ॥ ೧೧ ॥

ತದಾಹಂ ಕೌಣಪಾನ್ನೇತುಂ ಲಂಕಾಯಾಂ ಚ ಗತಃ ಕಿಲ ।
ಯದಾಹಂ ರಾಕ್ಷಸಾನ್ನೀತ್ವಾ ಸ್ವಪುರ್ಯಾಂ ಚ ಸಮಾಗತಃ ॥ ೧೨ ॥

---

೯. ನಡೆ. ಮೊದಲು ಹಯವನ್ನು ನಮಗೆ ತಂದೊಪ್ಪಿಸು. ಇಲ್ಲದಿದ್ದರೆ ನಿನ್ನನ್ನು ಕೊಲ್ಲುವೆವು. ಎಂದು ಹೇಳಲು, ದೇವಭಯಂಕರನಾದ ಭೀಷಣನು ಶೂಲ, ಗದೆ, ಖಡ್ಗ ಮುಂತಾದ ಆಯುಧಗಳನ್ನು ಧರಿಸಿ ಅತಿ ಕುಪಿತನಾಗಿ ಯಾದವರನ್ನು ಕುರಿತು,

೧೦. ನನಗೆ ವಿರುದ್ಧವಾಗಿ ಯುದ್ಧಮಾಡಲು ಬಂದಿರುವ ನೀವು ಯಾರು? ಎಷ್ಟಾದರೂ ನೀವು ಮನುಷ್ಯರು. ರಾಕ್ಷಸರಿಗೆ ಆಹಾರಕ್ಕೆ ಯೋಗ್ಯರಾದವರು. ಇಂತಹ ನೀವು ರಾಕ್ಷಸರ ಎದುರಿಗೇ ಬಂದು ನಿಂತು ಪೌರುಷವನ್ನು ತೋರಿಸುವುದೆಂತು?

೧೧-೧೨ ಹಿಂದೆ ಯಾದವನಾದ ಉಗ್ರಸೇನನು ವಿಶ್ವಜಿತ್ ಎಂಬ ಯಾಗವನ್ನು ಮಾಡಿದಾಗ ಅದನ್ನು ನಾಶಪಡಿಸಲು ನನ್ನ ಸಹಾಯಕ್ಕೆ ಇನ್ನೂ ಕೆಲವು ರಾಕ್ಷಸರನ್ನು ಕರೆತರಲು ಲಂಕೆಗೆ ಹೋಗಿದ್ದೆನು. ನಾನು ರಾಕ್ಷಸರನ್ನು ಕರೆದುಕೊಂಡು ನನ್ನ ಪಟ್ಟಣಕ್ಕೆ ಹಿಂತಿರುಗಿದಾಗ ನಾರದನಿಂದ ಆ ಯಜ್ಞವು ಪೂರ್ಣವಾಯಿತೆಂಬ ವರ್ತಮಾನವು ತಿಳಿದು ಬಂದಿತು.

ತದಾಶ್ರೃಣೋನ್ನಾರದಾದ್ವೈ ಯಜ್ಞಂ ಪೂರ್ಣಂ ಬಭೂವ ಹ ।
ಪುನರ್ವೈ ಹಯಮೇಧಸ್ಯ ಪ್ರಯಾಸಂ ಚ ವೃಥಾ ಕೃತಂ ॥ ೧೩ ॥

ಯುಷ್ಮತ್ಸು ಯದ್ಗೃಹೀತಂ ಚ ತುರಗಂ ಮೋಚಯಂತಿ ಕೇ ।
ತಸ್ಮಾದ್ಧಯಾಶಾಂ ತ್ಯಕ್ತ್ವಾ ತು ಯೂಯಂ ಗಚ್ಛತ ಗಚ್ಛತ ॥ ೧೪ ॥

ನ ಚೇತ್ಸರ್ವಾನ್ಪ್ರಭಕ್ಷ್ಯಂತಿ ಚತುರ್ಲಕ್ಷಾ ಮಮಾನುಗಾಃ ।
ಅತ್ರ ಸ್ಥಾನಾತ್ಸಮುದ್ರೇ ತು ಪುರೀ ದ್ವಾದಶಯೋಜನೇ ॥ ೧೫ ॥

ಉಪಲಂಕಾ ಚ ನಾಮ್ನಾ ವೈ ವರ್ತತೇ ಮಮ ನಿರ್ಮಿತಾ ।
ನಿಶಾಚರಗಣೈರ್ಯುಕ್ತಾ ಸರ್ಪೈರ್ಭೋಗವತೀ ಯಥಾ ॥ ೧೬ ॥

ಇತ್ಯುಕ್ತ್ವಾ ಸ ಹಯಂ ನೀತ್ವಾ ಸಹಸಾ ಸ್ವಪುರೀಂ ಯಯೌ ।
ಆಕಾಶಮಾರ್ಗೇಣ ನೃಪ ಶೋಕಂ ಚಕ್ರುಶ್ಚ ಯಾದವಾಃ ॥ ೧೭ ॥

೧೩-೧೪. ಮತ್ತೊಂದುಸಾರೆ ಅಶ್ವಮೇಧಯಾಗವನ್ನು ಮಾಡಿದಾಗ ನಾನು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಯಿತು. ಈಗ ಬಿಡುವೆನೇ? ನಿಮ್ಮ ಕುದುರೆಯನ್ನು ನಾನೆಂದಿಗೂ ಬಿಡುವುದಿಲ್ಲ. ಆದುದರಿಂದ ಕುದುರೆಯ ಆಶೆಯನ್ನು ಬಿಟ್ಟು ಸುಮ್ಮನೆ ಹೊರಟುಹೋಗಿರಿ.

೧೫-೧೬. ಇಲ್ಲದಿದ್ದರೆ ನನ್ನ ನಾಲ್ಕು ಲಕ್ಷ ಅನುಚರರು ನಿಮ್ಮನ್ನು ತಿಂದು ಬಿಡುವರು. ಉಪಲಂಕವೆಂಬುದು ನನ್ನ ಪಟ್ಟಣವು. ಅದನ್ನು ನಾನೇ ನಿರ್ಮಿಸಿರುವೆನು. ಅದು ಇಲ್ಲಿಂದ ಹನ್ನೆರಡು ಯೋಜನ ದೂರದಲ್ಲಿ ಸಮುದ್ರದಲ್ಲಿರುವುದು. ಸರ್ಪಗಳಿಂದ ಪಾತಾಳಲೋಕವಿರುವಂತೆ ರಾಕ್ಷಸರಿಂದ ಆ ಪಟ್ಟಣವು ತುಂಬಿರುವುದು.

೧೭. ಎಂದು ಹೇಳಿ ಆ ರಾಕ್ಷಸನು ಯಜ್ಞಾಶ್ವವನ್ನು ತೆಗೆದುಕೊಂಡು ಆಕಾಶಮಾರ್ಗದಲ್ಲಿ ಹೊರಟು ತನ್ನ ಪಟ್ಟಣಕ್ಕೆ ಹೋದನು. ಯಾದವರೆಲ್ಲರೂ ದುಃಖಿತರಾದರು.

ಅನಿರುದ್ಧಸ್ತತಃ ಪ್ರಾಹ ಭೋಜರಾಜ ತುರಂಗಮಂ ।
ನಿಶಾಚರೇಣ ನೀತಂ ವೈ ಮೋಚಯಾಮೋ ವಯಂ ಕಥಂ　　॥ ೧೮ ॥

ಇತಿ ಶ್ರುತ್ವಾ ಚ ಸಾಂಬಾದ್ಯಾಃ ಪ್ರತ್ಯಾಹುರ್ನಯಕೋವಿದಾಃ ।
ಶೋಚಂ ಮಾ ಕುರು ತೇ ರಾಜನ್ ಸ್ಥಿತೇಷ್ವಸ್ಮಾಸು ಕಿಂ ಭಯಂ　　॥ ೧೯ ॥

ಹಯಾಸ್ಸಪಕ್ಷಾಸ್ತ್ವಸ್ಸೈನ್ಯೇ ವಿಮಾನಾನಿ ಶರಾಸ್ತಥಾ ।
ಶೂರಾಸ್ಸಂತಿ ಮಹಾವೀರಾ ಲೋಕದ್ವಯಜಿಗೀಷವಃ　　॥ ೨೦ ॥

ಅಶ್ವೈರ್ವಯಂ ಗಮಿಷ್ಯಾಮೋ ಸೇತುಂ ಕೃತ್ವಾ ತಥಾ ಶರೈಃ ।
ವಿಷ್ಣುದತ್ತೇನ ವಾ ರಾಜನ್ ಶತ್ರೂಣಾಂ ನಗರೀಂ ಪ್ರತಿ　　॥ ೨೧ ॥

ಸರ್ವೇಷಾಂ ವಚನಂ ಶ್ರುತ್ವಾನಿರುದ್ಧೋ ಧನ್ವಿನಾಂ ವರಃ ।
ಉದ್ಧವಂ ಮಂತ್ರಿಣಾಂ ಶ್ರೇಷ್ಠಂ ಸಮಾಹೂಯೇದಮಬ್ರವೀತ್　　॥ ೨೨ ॥

೧೮-೧೯. ಆಗ ಅನಿರುದ್ಧನು ಯಜ್ಞಾಶ್ವವನ್ನು ರಾಕ್ಷಸನು ಅಪಹರಿಸಿದನು. ಅದನ್ನು ಬಿಡಿಸಿಕೊಂಡು ಬರುವ ಬಗೆ ಹೇಗೆ? ಎಂದು ಹೇಳುತ್ತಾ ದುಃಖಿಸುತ್ತಿರಲು ಆಗ ಯುದ್ಧಶೂರರಾದ ಸಾಂಬನೇ ಮುಂತಾದವರು—ರಾಜನೇ, ನಾವೆಲ್ಲರೂ ಇರುವಾಗ ನಿನಗೇತರ ಭಯ? ದುಃಖಿಸಬೇಡ. ಎಂಬುದಾಗಿ ಸಮಾಧಾನ ಪಡಿಸಿದರು.

೨೦. ಮತ್ತು ರೆಕ್ಕೆಯುಳ್ಳ ಕುದುರೆಗಳು ಅನೇಕವಿರುವುವು. ವಿಮಾನಗಳು ಬಹಳವಿರುವುವು. ಬಲಗಳು ಅಸಂಖ್ಯಾತಗಳಾಗಿರುವುವು. ಎರಡು ಲೋಕಗಳನ್ನೂ ಜಯಿಸಬಲ್ಲ ಅನೇಕ ಶೂರರಿರುವರು.

೨೧. ಆ ಅಶ್ವಗಳ ಸಹಾಯದಿಂದಲೂ ಶರಸೇತುಗಳನ್ನು ನಿರ್ಮಿಸಿ ಅವುಗಳ ಸಹಾಯದಿಂದಲೂ ವಿಷ್ಣುವಿನ ಅನುಗ್ರಹದಿಂದಲೂ ಶತ್ರುನಗರಿಗೆ ಹೋಗುವೆವು. ನೀನು ದುಃಖಿಸಬೇಡ.

೨೨. ಎಂದು ಎಲ್ಲರೂ ಹೇಳಲು ಆಗ ಧನ್ವಿಶ್ರೇಷ್ಠನಾದ ಅನಿರುದ್ಧನು ಮಂತ್ರಿಶ್ರೇಷ್ಠನಾದ ಉದ್ಧವನನ್ನು ಕರೆಸಿ,

|| ಅನಿರುದ್ಧ ಉವಾಚ ||

ಕಿಂ ಕರಿಷ್ಯಾಮ್ಯಹಂ ಮಂತ್ರಿನ್ ಶ್ಯಾಮಕರ್ಣೇ ಗತೇ ಸತಿ ।
ತ್ವಚ್ಛಾಸನೇ ಭಗವತಾ ಪ್ರೇರಿತೋಽಹಂ ವದಸ್ವ ತತ್ || ೨೩ ||

ಮತ್ಪಿತೃಭ್ರಾತರಸ್ಸರ್ವೇ ಉಪಾಯಂ ಪ್ರವದಂತಿ ಹಿ ।
ಯದಿ ದಾಸ್ಯಸಿ ತ್ವಂ ಚಾಜ್ಞಾಂ ತದಾ ಸರ್ವಂ ಕರೋಮ್ಯಹಂ || ೨೪ ||

ಉದ್ಧವಸ್ತದ್ವಚಶ್ಶ್ರುತ್ವಾ ಪ್ರತ್ಯುವಾಚ ವಿಲಜ್ಜಿತಃ ।
ಅಹಂ ಕೃಷ್ಣಸ್ಯ ಪುತ್ರಾಣಾಂ ಪೌತ್ರಾಣಾಂ ಚ ವಿಶೇಷತಃ || ೨೫ ||

ಸದಾ ದಾಸೋಽಸ್ಮಿ ನಿತರಾಮಾಜ್ಞಾವರ್ತೀ ವದಾಮಿ ಕಿಂ ।
ಯದೀಚ್ಛಾ ತವ ಚೈತೇಷಾಂ ಕುರು ಸಾ ಚ ಭವಿಷ್ಯತಿ || ೨೬ ||

ತತಃ ಪ್ರಾಹಾನಿರುದ್ಧಸ್ತು ಯಾಸ್ಯೇಽಹಂ ದೈತ್ಯಪತ್ತನಂ ।
ಅಕ್ಷೌಹಿಣೀದಶಯುತೋ ವಿಷ್ಣುದತ್ತೇನ ಯಾದವಾಃ || ೨೭ ||

೨೩–೨೪. ಎಲೈ ಮಂತ್ರಿಯೇ, ಯಜ್ಞಾಶ್ವವನ್ನು ರಾಕ್ಷಸನಪಹರಿಸಿದನು. ಈಗ ನಾವೇನು ಮಾಡಬೇಕು ? ಅದರ ರಕ್ಷಣೆಗೆ ನಾನು ಶ್ರೀಕೃಷ್ಣನಿಂದ ಪ್ರೇರಿತನಾಗಿರುವೆನು. ನನ್ನ ತಂದೆ, ಸಹೋದರರಾದ ಸಾಂಬನೇ ಮುಂತಾದವರು ಅದಕ್ಕೆ ಉಪಾಯವನ್ನೇನೋ ಹೇಳುತ್ತಿರುವರು. ಆದರೂ ನೀನು ಹೇಳು. ಅದರಂತೆ ನಾನು ಆಚರಿಸುವೆನು.

೨೫–೨೬. ಎಂದು ಅನಿರುದ್ಧನು ಹೇಳಲು ಉದ್ಧವನು ನಾಚಿ, ರಾಜನೇ, ನಾನು ಕೃಷ್ಣನ ಪುತ್ರಪೌತ್ರರ ಆಜ್ಞೆಯನ್ನು ಬಿಡದಂತೆ ಪರಿಪಾಲಿಸುವೆನು. ಅವರ ಆಜ್ಞಾಕಾರಿಯಾದ ದಾಸನು ನಾನು. ನೀನು ಕೇಳಿದುದಕ್ಕೆ ನಾನೇನು ಹೇಳಲಿ ? ನಿನಗಿಷ್ಟವಿದ್ದ ಪಕ್ಷದಲ್ಲಿ ಅವರು ಹೇಳಿದಂತೆಯೇ ನಡೆಯುವುದು ಒಳ್ಳೆಯದು ಎಂದನು.

೨೭–೨೮. ಅದಕ್ಕೆ ಅನಿರುದ್ಧನು–ಹಾಗಾದರೆ ನಾನು ಹತ್ತು ಅಕ್ಷೌಹಿಣೀ ಸೇನೆಯನ್ನು ತೆಗೆದುಕೊಂಡು ಆ ರಾಕ್ಷಸನ ಪಟ್ಟಣಕ್ಕೆ ಹೋಗುವೆನು. ಸಾರಣ,

ಸಾರಣಃ ಕೃತವರ್ಮಾ ಚ ಯುಯುಧಾನಶ್ಚ ಸಾತ್ಯಕಿಃ ।
ಅಕ್ರೂರಸಹಿತಾ ಏತೇ ಸೇನಾಂ ರಕ್ಷಂತು ಚಾತ್ರ ಹಿ　　　　|| ೨೮ ||

ಇತ್ಯುಕ್ತ್ವಾ ಸ ವಿಮಾನಂ ತ್ವಾರುರೋಹ ಸಹ ಸೇನಯಾ ।
ಅಷ್ಟಾದಶೈರ್ಹರೇಃ ಪುತ್ರೈರುದ್ಧವೇನ ಗದೇನ ಚ　　　　|| ೨೯ ||

ರೇಜೇ ತತೋ ಭಾಸ್ಕರಬಿಂಬತುಲ್ಯಂ
ಧನೇಶಯಾನಂ ಸ್ವಬಲೇನ ನೀತಂ ।
ಶ್ರೀಕೃಷ್ಣಪೌತ್ರೇಣ ಯದುಪ್ರವೀರೈ-
ರ್ಯಥಾ ಚ ರಾಮೇಣ ಪುರಾ ಕಪೀಂದ್ರೈಃ　　　　|| ೩೦ ||

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಅಷ್ಟಾದಶೋಽಧ್ಯಾಯಃ

ಕೃತವರ್ಮಾ, ಯುಯುಧಾನ, ಸಾತ್ಯಕಿ, ಅಕ್ರೂರ ಮುಂತಾದವರು ಸೇನೆಯನ್ನು ರಕ್ಷಿಸುತ್ತಾ ಇಲ್ಲಿಯೇ ಇರಲಿ ಎಂದನು.

೨೯. ಅನಂತರ ಅನಿರುದ್ಧನು ತನ್ನ ಸೇನೆಯೊಡನೆಯೂ, ಹದಿನೆಂಟು ಜನ ಕೃಷ್ಣನ ಪುತ್ರರೊಡನೆಯೂ, ಉದ್ಧವನೊಡನೆಯೂ, ಗದನೆಂಬುವನೊಡನೆಯೂ ವಿಮಾನವನ್ನು ಏರಿದನು.

೩೦. ಕುಬೇರದತ್ತವಾದ ಆ ವಿಮಾನವು ಆಕಾಶಮಾರ್ಗದಲ್ಲಿ ಹೊರಟಿತು. ಯದುವೀರರೂ, ಶ್ರೀಕೃಷ್ಣನ ಪುತ್ರರೂ, ಅನಿರುದ್ಧನೂ ಅದರಲ್ಲಿ ಕುಳಿತು ಪ್ರಕಾಶಿಸುತ್ತಿದ್ದರು. ಅದು ಹಿಂದೆ ಕಪಿಶ್ರೇಷ್ಠರಿಂದೊಡಗೂಡಿದ ರಾಮನು ಕುಳಿತ ವಿಮಾನದಂತೆ ಸೂರ್ಯಬಿಂಬದೋಪಾದಿಯಲ್ಲಿ ಪ್ರಕಾಶಿಸುತ್ತಿತ್ತು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹದಿನೆಂಟನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕೋನವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ರುಕ್ಮವತೀಪುತ್ರೋ ಮಹತ್ಯಾ ಸೇನಯಾ ವೃತಃ ।
ಉಪಲಂಕಾಂ ವಿಮಾನೇನ ಪ್ರಯಯೌ ಧನದೋ ಯಥಾ ॥ ೧ ॥

ಯದುಭಿಸ್ತತ್ರ ಗತ್ವಾ ಸ ಶರೈರಾಶೀವಿಷೋಪಮೈಃ ।
ಬಭಂಜ ನಗರೀಂ ರಾಜನ್ ವನಾನ್ಯುಪವನಾನಿ ಚ ॥ ೨ ॥

ಕ್ರೀಡಾಸ್ಥಾನಾನಿ ದ್ವಾರಾಣಿ ಸದನಾಟ್ಟಾಲತೋಲಕಾಃ ।
ಗೋಪುರಾಣಿ ವಿಮಾನಗ್ರಾನ್ನಿಪೇತುಃ ಶಸ್ತ್ರವೃಷ್ಟಯಃ ॥ ೩ ॥

ಹತ್ತೊಂಬತ್ತನೆಯ ಅಧ್ಯಾಯವು

೧. ಗರ್ಗನು ಹೇಳಿದನು:—ಎಲೈ ವಜ್ರನಾಭಿಯೇ, ಕೇಳು. ಅಲ್ಲಿಂದ ಹೊರಟ ಅನಿರುದ್ಧನು ದೊಡ್ಡ ಸೇನೆಯೊಡಗೂಡಿ ಕುಬೇರನಂತೆ ವಿಮಾನದಲ್ಲಿ ಉಪಲಂಕೆಯನ್ನು ಸೇರಿದನು.

೨. ಯದುವೀರರೂ ಅವನೂ ಆಕಾಶದಲ್ಲೇ ನಿಂತು ಯುದ್ಧಮಾಡುತ್ತಾ ಆಶೀವಿಷಕ್ಕೆ ಸದೃಶಗಳಾದ ಬಾಣಗಳನ್ನು ಪ್ರಯೋಗಿಸಿ ಉಪಲಂಕೆಯನ್ನು ಮುರಿದರು.

೩. ಕ್ರೀಡಾಸ್ಥಾನಗಳು, ದ್ವಾರಗಳು, ಮನೆಗಳು, ಮಹಡಿಗಳು, ತೋರಣಗಳು, ಗೋಪುರಗಳು ಇವುಗಳ ಮೇಲೆಲ್ಲಾ ಶಸ್ತ್ರವೃಷ್ಟಿಗಳನ್ನು ಕರೆದರು

ಮುಸಲಾಃ ಶಕ್ತಯಶ್ಚೈವ ಪರಿಘಾಶ್ಚ ಶರಾಃ ಶಿಲಾಃ ।
ಚಂಡವಾಯುರಭೂದ್ರಾಜನ್ ರಜಸಾಚ್ಛಾದಿತಾ ದಿಶಃ ॥ ೪ ॥

ಇತ್ಯರ್ದ್ಯಮಾನಾ ಯದುಭಿರ್ಭೀಷಣಸ್ಯ ಪುರೀ ಭೃಶಂ ।
ನಾಭ್ಯಪದ್ಯತ ಕಲ್ಯಾಣಂ ಯಥಾ ಶಾಲ್ವೈಶ್ಚ ದ್ವಾರಿಕಾ ॥ ೫ ॥

ಹಾಹಾಕಾರಸ್ತದೈವಾಸೀನ್ನಗರ್ಯಾಂ ನೃಪಸತ್ತಮ ।
ಅಸುರಾ ಭೀಷಣಾದ್ಯಾಶ್ಚ ಬಭೂವುರ್ಭಯವಿಹ್ವಲಾಃ ॥ ೬ ॥

ಬಾಧ್ಯಮಾನಾಂ ಚ ನಗರೀಂ ದೃಷ್ಟ್ವಾ ರಾಕ್ಷಸಪುಂಗವಃ ।
ಮಾ ಭೈಷ್ಟೇತ್ಯಭಯಂ ದತ್ವಾ ರಾಕ್ಷಸೈಸ್ಸಹ ನಿರ್ಯಯೌ ॥ ೭ ॥

ತತಃ ಪ್ರವವೃತೇ ಯುದ್ಧಂ ಯಾದವಾನಾಂ ನಿಶಾಚರೈಃ ।
ತತ್ಪುರ್ಯಾಂ ಚೈವ ಲಂಕಾಯಾಂ ಕಪಿಭೀ ರಾಕ್ಷಸಾಂ ಯಥಾ ॥ ೮ ॥

---

೪. ಮುಸಲಾಯುಧಗಳು, ಶಕ್ತ್ಯಾಯುಧಗಳು, ಪರಿಘಾಯುಧಗಳು, ಶರಗಳು ಕಲ್ಲುಗಳು ಇವುಗಳನ್ನೆಲ್ಲಾ ಪ್ರಯೋಗಿಸಿದುದರಿಂದ ದೊಡ್ಡ ಬಿರುಗಾಳಿಯೆದ್ದಿತು. ದಿಕ್ಕುದಿಕ್ಕುಗಳೆಲ್ಲಾ ಧೂಳಿನಿಂದ ತುಂಬಿಹೋದವು.

೫. ಈ ರೀತಿ ಯದುವೀರರ ಅಪಘಾತಕ್ಕೆ ಸಿಕ್ಕಿದ ಭೀಷಣಾಸುರನ ಪಟ್ಟಣವು ಶಾಲ್ವರು ಮುತ್ತಿದ ದ್ವಾರಕಾಪುರಿಯಂತೆ ಬಹಳ ತೊಂದರೆಗೊಳಗಾಯಿತು.

೬. ನಗರಿಯಲ್ಲೆಲ್ಲಾ ಹಾಹಾಕಾರ ಉಂಟಾಯಿತು. ಭೀಷಣನೇ ಮುಂತಾದ ರಾಕ್ಷಸರೆಲ್ಲರೂ ಭಯಗೊಂಡರು.

೭. ಅಪಘಾತಕ್ಕೀಡಾದ ಪಟ್ಟಣವನ್ನು ನೋಡಿ ಭೀಷಣನು ಜನರೆಲ್ಲರನ್ನೂ ಹೆದರಬೇಡಿ, ಎಂದು ಸಮಾಧಾನಮಾಡುತ್ತಾ ರಾಕ್ಷಸರೊಡಗೂಡಿ ಅಲ್ಲಿಂದ ಯುದ್ಧ ಸನ್ನದ್ಧನಾಗಿ ಹೊರಟನು.

೮-೯. ಆಮೇಲೆ ಯಾದವರಿಗೂ ರಾಕ್ಷಸರಿಗೂ ಯುದ್ಧವು ಪ್ರಾರಂಭವಾಯಿತು. ಹಿಂದೆ ರಾಕ್ಷಸರಿಗೂ ಕಪಿಗಳಿಗೂ ಲಂಕೆಯಲ್ಲಿ ಯುದ್ಧವಾದಂತೆ ಯುದ್ಧ

ವೃಷ್ಣೀನಾಂ ಚೈವ ಬಾಣೌಘೈ ರಾಕ್ಷಸಾಶ್ಛಿನ್ನಕಂಧರಾಃ ।
ನಿಪೇತುಸ್ತೇ ಸಮುದ್ರೇ ವೈ ವೃಕ್ಷಾ ವಾತಹತಾ ಇವ ॥ ೯ ॥

ಕೇಚಿತ್ಪೃಥಿವ್ಯಾಂ ಪತಿತಾಃ ಕೇಚಿತ್ಪುರ್ಯಾಮಧೋಮುಖಾಃ ।
ಕೇಚಿದೂರ್ಧ್ವಮುಖಾ ರಾಜನ್ ಕೇಚಿದ್ವೈ ಪಂಚತಾಂ ಗತಾಃ ॥ ೧೦ ॥

ತತ್ರ ತೇಷಾಂ ಶೋಣಿತೇನ ದುರ್ನದೀ ಚ ಭಯಂಕರಾ ।
ಬಭೂವ ಸಾ ಚ ದುಷ್ಪಾರಾ ಮಹಾವೈತರಣೀ ಯಥಾ ॥ ೧೧॥

ತತ್ರ ತೇಷಾಂ ಬಲಂ ವೀಕ್ಷ್ಯ ಭೀಷಣೋ ವಿಸ್ಮಯಂ ಗತಃ ।
ತಿರಶ್ಚೀನೇನ ನೇತ್ರೇಣ ದೃಷ್ಟ್ವಾ ಪ್ರಾಹ ಯದೂನಿದಂ ॥ ೧೨ ॥

ವುಂಟಾಯಿತು. ಯಾದವರ ಬಾಣಪ್ರಹಾರಗಳಿಂದ ಅನೇಕ ರಾಕ್ಷಸರ ತಲೆಗಳು ಕತ್ತರಿಸಿಹೋದವು. ಕೆಲವರು ಕೆಳಗುರುಳಿದು. ಕೆಲವರು ವಾಯುವಿನ ವೇಗಕ್ಕೆ ಮರಗಳು ದೂರಕ್ಕೆ ಹೋಗಿ ಬೀಳುವಂತೆ ಸಮುದ್ರದಲ್ಲಿ ಬಿದ್ದರು.

೧೦. ನಿಶ್ಚೇಷ್ಟಿತರಾಗಿ ಅಧೋಮುಖಿಗಳಾಗಿ ಬಿದ್ದರು. ಮತ್ತೆ ಕೆಲವರು ಮೇಲ್ಮುಖರಾಗಿ ಬಿದ್ದು ಮೂರ್ಛಿತರಾದರು. ಕೆಲವರು ಸತ್ತೂ ಹೋದರು.

೧೧. ರಾಕ್ಷಸರ ಕೊಲೆಯಿಂದುಂಟಾದ ರಕ್ತವು ನಗರದ ಬೀದಿಯಲ್ಲಿ ನದಿಯ ರೂಪದಲ್ಲಿ ಮಹಾವೈತರಣೀನದಿಯಂತೆ ದಾಟಲಸಾಧ್ಯವಾದುದಾಗಿ ಹರಿಯುತ್ತಾ ಭಯಂಕರವಾಗಿ ಕಾಣಿಸುತ್ತಿತ್ತು.

೧೨. ಭೀಷಣನು ಯಾದವರ ಶೌರ್ಯವನ್ನು ನೋಡಿ ವಿಸ್ಮಯಗೊಂಡನು. ವಕ್ರವಾದ ದೃಷ್ಟಿಯಿಂದ ಅವರನ್ನು ನೋಡುತ್ತಾ ಇಂತೆಂದನು.

ಭವದ್ಭಿಶ್ಚ ಕೃತಂ ಯುದ್ಧಮಾಕಾಶಾನ್ನಿರ್ಬಲೈರಿವ ।
ಅಶ್ಲಾಘನೀಯಂ ಚ ವೃಥಾ ಯೂಯಂ ಮಾನಂ ಕರಿಷ್ಯಥ　　|| ೧೩ ||

ಯುಷ್ಮಾಕಂ ಯದಿ ದೇಹೇಷು ಶಕ್ತಿಶ್ಚೇದ್ವಿದ್ಯತೇ ಶೃಣು ।
ಮಹೀತಲೇ ತದಾಗತ್ಯ ಮಯಾ ಕುರುತ ವೈ ರಣಂ　　|| ೧೪ ||

ಇತ್ಯಾಕರ್ಣ್ಯ ವಚಸ್ತಸ್ಯೇಽಪಿ ಕಾರ್ಷ್ಣಿರ್ಜಃ ಕರುಣಾಮಯಃ ।
ವಿಮಾನಂ ಭೂತಲೇ ಕೃತ್ವಾ ಪ್ರತ್ಯುವಾಚ ಮಹಾಸುರಂ　　|| ೧೫ ||

|| ಅನಿರುದ್ಧ ಉವಾಚ ||

ಸಹಸಾ ತ್ವಂ ಮಯಾ ಸಾರ್ಧಂ ರಣಂ ಕುರು ಮಹಾರಣೇ ।
ಕಿಂ ವಿಚಾರೇಣ ಭವತಿ ಭಯಂ ತ್ಯಕ್ತ್ವಾ ಮಹಾಸುರ　　|| ೧೬ ||

ಇತಿ ತದ್ವಾಕ್ಯಮಾಕರ್ಣ್ಯ ಭೀಷಣೋ ಭೀಮವಿಕ್ರಮಃ ।
ಧನುಷಾ ಪಂಚನಾರಾಚಾಂಸ್ತಸ್ಯೋಪರಿ ಮುಮೋಚ ಹ　　|| ೧೭ ||

೧೩-೧೪. ಇದೇನಿದು ? ಹೇಡಿಗಳಂತೆ ಆಕಾಶದಲ್ಲಿ ನಿಂತು ಯುದ್ಧಮಾಡುತ್ತಿರುವಿರಿ ? ಇದು ಶೂರರಿಗೆ ಯೋಗ್ಯವಾದುದಲ್ಲ. ನೀವು ದಿಟವಾಗಿಯೂ ಶೂರರಾಗಿದ್ದಲ್ಲಿ ಬನ್ನಿರಿ ಭೂಮಿಗೆ. ನೆಲದಲ್ಲಿ ನಿಂತು ನನ್ನೊಡನೆ ಯುದ್ಧಮಾಡಿರಿ.

೧೫. ಎಂದು ಹೇಳಲು ಅನಿರುದ್ಧನು ದಯಾಪೂರಿತನಾಗಿ ವಿಮಾನವನ್ನು ಭೂಮಿಗೆ ಇಳಿಸಿ ಆ ಮಹಾಸುರನನ್ನು ಕುರಿತು,

೧೬. ಎಲೋ ಮಹಾಸುರನೇ, ನಾನೀಗ ಭೂಮಿಯ ಮೇಲಕ್ಕೆ ಬಂದು ಯುದ್ಧಸನ್ನದ್ಧನಾಗಿರುವೆನು. ಈಗ ನನ್ನೊಡನೆ ಭಯವನ್ನು ಬಿಟ್ಟು ಯುದ್ಧಮಾಡು. ಸುಮ್ಮನೆ ಹೇಳುವುದರಿಂದೇನು ?

೧೭. ಎಂದು ಅನಿರುದ್ಧನು ಹೇಳಿದಾಕ್ಷಣ ಅತಿಪರಾಕ್ರಮಿಯಾದ ಭೀಷಣನು ಧನುಸ್ಸಿನಲ್ಲಿ ಐದು ಬಾಣಗಳನ್ನು ಹೂಡಿ ಅನಿರುದ್ಧನ ಮೇಲೆ ಪ್ರಯೋಗ ಮಾಡಿದನು.

ಅನಿರುದ್ಧೋ ನಿರೀಕ್ಷ್ಯಾಥ ಸ್ವಬಾಣೈಸ್ತಾನ್ ದ್ವಿಧಾ ಕರೋತ್ ।
ಚಿಚ್ಛೇದ ಚ ಧನುಸ್ತಸ್ಯ ಶರೇಣೈಕೇನ ಲೀಲಯಾ ॥ ೧೮ ॥

ಸೋಽಪ್ಯನ್ಯಂ ಧನುರಾದಾಯ ಸಜ್ಜಂ ಕೃತ್ವಾ ನಿಶಾಚರಃ ।
ಸರ್ಪಾಕಾರೈಃ ಶತಶರೈರ್ಜಘಾನ ಕಾರ್ಷ್ಣಿನಂದನಂ ॥ ೧೯ ॥

ರಥಸ್ತು ತಸ್ಯ ಭಗ್ನೋಽಭೂತ್ಸಾರಥೀ ಪಂಚತಾಂ ಗತಃ ।
ಹಯಾ ಮೃತ್ಯುಂ ಗತಾಃ ಸರ್ವೇ ಪ್ರೌದ್ಯುಮ್ನಿರ್ಮೂರ್ಛಿತೋಽಭವತ್ ॥

ತದೈವ ವೃಷ್ಣಯಸ್ಸರ್ವೇ ಸ್ಫುರಿತಾಧರಪಲ್ಲವಾಃ ।
ಸ್ವನಾಥಂ ಪತಿತಂ ದೃಷ್ಟ್ವಾ ಶರಾನ್ಮುಂಚನ್ಸಮಾಗತಾಃ ॥ ೨೧ ॥

ತಾನಾಗತಾನ್ಬಹೂನ್ ದೃಷ್ಟ್ವಾ ಚಾಪಂ ಧೃತ್ವಾಽಸುರೋ ರುಷಾ ।
ಗದಯಾ ಪೋಥಯಾಮಾಸ ದಂಷ್ಟ್ರಯೈವ ಮೃಗಾನ್ ಹರಿಃ ॥ ೨೨ ॥

---

೧೮. ಆಗ ಅನಿರುದ್ಧನು ತನ್ನ ಕಡೆಗೆ ಬರುತ್ತಿರುವ ಬಾಣಗಳನ್ನು ನೋಡಿ ಒಂದೇ ಒಂದು ಬಾಣವನ್ನು ಹೂಡಿ ಅವುಗಳನ್ನು ಚೂರು ಮಾಡಿದನು.

೧೯. ಆಗ ಭೀಷಣನು ಮತ್ತೊಂದು ಧನುಸ್ಸಿನಲ್ಲಿ ಸರ್ಪಾಕಾರಗಳಾದ ನೂರು ಬಾಣಗಳನ್ನು ಹೂಡಿ ಅನಿರುದ್ಧನನ್ನು ನೋಯಿಸಿದನು.

೨೦. ಅನಿರುದ್ಧನು ಕೆಳಗುರುಳಿ ಮೂರ್ಛಿತನಾದನು. ಸಾರಥಿಯು ಸತ್ತುಹೋದನು. ರಥವು ಚೂರುಚೂರಾಯಿತು. ಕುದುರೆಗಳೆಲ್ಲವೂ ಮರಣ ಹೊಂದಿದವು.

೨೧-೨೨. ಅನಿರುದ್ಧನು ಬಿದ್ದುದನ್ನು ನೋಡಿ ಯಾದವರೆಲ್ಲರೂ ಭಯದಿಂದ ನಡುಗಿದರು. ಬಾಣಗಳನ್ನು ಶತ್ರುಗಳ ಮೇಲೆ ಪ್ರಯೋಗಿಸುತ್ತಾ ಓಡಿ ಬಂದರು. ಆಗ ಅಸುರನು ತನ್ನ ಕಡೆಗೆ ಬರುತ್ತಿರುವ ಅವರೆಲ್ಲರನ್ನೂ ಗದೆಯಿಂದ ಸಿಂಹವು ತನ್ನ ಕೋರೆದಾಡೆಗಳಿಂದ ಮೃಗಗಳನ್ನು ಸೀಳುವಂತೆ ಸೀಳಿದನು.

ಗದಾಪ್ರಹಾರವ್ಯಥಿತಾ ಯೊದವಾಃ ಪತಿತಾ ಭುವಿ ।
ಸಂಭಿನ್ನಭಿನ್ನಸರ್ವಾಂಗಾಃ ಕೇಚಿನ್ನಿಪತಿತಾ ರಣೇ　　॥ ೨೩ ॥

ತತೋ ಗೃಹೀತ್ವಾ ಸ್ವಗದಾಂ ಗದಃ ಸಂಕರ್ಷಣಾನುಜಃ ।
ತಾಡಯಾಮಾಸ ಸಮರೇ ಭೀಷಣಸ್ಯ ಚ ಮೂರ್ಧನಿ　　॥ ೨೪ ॥

ಗದಾಪ್ರಹಾರವ್ಯಥಿತೋ ಸ ಪಪಾತ ಮಹೀತಲೇ ।
ಚಾಲಯನ್ವಸುಧಾಂ ರಾಜನ್ ಯಥಾ ವಜ್ರಹತೋ ಗಿರಿಃ　　॥ ೨೫ ॥

ಭೀಷಣಂ ಪತಿತಂ ದೃಷ್ಟ್ವಾ ಮೂರ್ಛಿತಂ ಭಗ್ನಶೀರ್ಷಕಂ ।
ಅಸುರಾಸ್ತೇ ಗದಂ ಹಂತುಂ ಪ್ರಾಪ್ತಾಃ ಶಸ್ತ್ರಧರಾಃ ಕಿಲ　　॥ ೨೬ ॥

ತಾನ್ಸರ್ವಾನ್ ಪೋಥಯಮಾಸ ಗದಯಾ ವಜ್ರಕಲ್ಪಯಾ ।
ರಾಮಾನುಜೋ ಯಥಾ ರಾಜನ್ನೃಸಿಂಹೋ ದಂಷ್ಟ್ರಯಾ ಗಜಾನ್　　॥ ೨೭ ॥

---

೨೩. ಗದೆಯ ಏಟನ್ನು ತಾಳಲಾರದೆ ಕೆಲವರು ದುಃಖಿತರಾದರು. ಕೆಲವರ ಶರೀರಗಳು ಜಜ್ಜಿಹೋದವು. ಅಂಗಾಂಗಳು ಚೂರುಚೂರಾದವು. ಎಲ್ಲರೂ ಕೆಳಗುರುಳಿದರು.

೨೪. ಅದನ್ನು ನೋಡಿ ಅನಿರುದ್ಧನ ತಮ್ಮನಾದ ಗದನು ತನ್ನ ಗದೆಯನ್ನು ತೆಗೆದುಕೊಂಡು ಆ ಭೀಷಣನ ತಲೆಗೆ ಬಲವಾಗಿ ಹೊಡೆದನು.

೨೫. ಆದರಿಂದ ಬಲವಾಗಿ ಏಟುಬಿದ್ದಿತು. ತಕ್ಷಣ ಭೀಷಣನು, ವಜ್ರಾಯುಧದ ಏಟಿನಿಂದ ಬಿದ್ದ ಪರ್ವತದಂತೆ ಭೂಮಿಯ ಮೇಲೆ ಉರುಳಿದನು. ಬಿದ್ದ ರಭಸಕ್ಕೆ ಭೂಮಿಯು ನಡುಗಿತು.

೨೬-೨೭. ಅವನ ತಲೆಯೊಡೆದು ಕೆಳಗುರುಳಲು ಅವನ ಕಡೆಯವರೆಲ್ಲರೂ ಶಸ್ತ್ರಾಸ್ತ್ರಗಳನ್ನು ಧರಿಸಿ ಆ ಗದನನ್ನು ಕೊಲ್ಲಲು ಮುನ್ನುಗ್ಗಿದರು. ಗದನು ಅದೇ ಗದೆಯಿಂದಲೇ ಪ್ರಹರಿಸಿ ಸಿಂಹವು ಆನೆಗಳನ್ನು ಸೀಳುವಂತೆ ಅವರನ್ನು ಸೀಳಿದನು.

ಅಥೋತ್ಥಿತೇಽನಿರುದ್ಧಸ್ತು ಬ್ರುವನ್ ಧನ್ವೀ ಕ್ಷಣೇನ ವೈ ।
ಭೀಷಣೋ ಮಮ ಶತ್ರುರ್ವೈ ಕ್ವ ಗತಃ ಕ್ವ ಗತಃ ಖಲಃ ॥ ೨೮ ॥

ಉತ್ಥಿತಂ ಚ ಹರೇಃ ಪೌತ್ರಂ ದೃಷ್ಟ್ವಾ ಯಾದವಪುಂಗವಾಃ ।
ಚಕ್ರುರ್ಜಯಜಯಾರಾವಂ ದೇವಾಸ್ಸರ್ವೇ ಚ ಹರ್ಷಿತಾಃ ॥ ೨೯ ॥

ತತೋ ನಾರದವಾಕ್ಯಾದ್ವೈ ಬಕೋ ನಾಮ ನಿಶಾಚರಃ ।
ಭೀಷಣಸ್ಯ ಪಿತಾರಣ್ಯಾತ್ ಕ್ರುದ್ಧಸ್ತತ್ರಾಜಗಾಮ ಹ ॥ ೩೦ ॥

ಕಜ್ಜಲಾದ್ರಿಸಮೋ ರಾಜನ್ ತಾಲವೃಕ್ಷದಶೋತ್ಥಿತಃ ।
ಲಲಜ್ಜಿಹ್ವಶ್ಚ ದುರ್ನೇತ್ರಸ್ತ್ರಿಶೂಲೀ ಚ ಗದಾಧರಃ ॥ ೩೧ ॥

ಹಸ್ತಿನಂ ವಾಮಹಸ್ತೇನ ಗೃಹೀತ್ವಾ ಚ ಮುಖೇನ ವೈ ।
ಪ್ರಭಕ್ಷಯನ್ ರುಧಿರಾಕ್ರಾಂತಃ ಪಿಶಾಚಸದೃಶೋ ಮಹಾನ್ ॥ ೩೨ ॥

---

೨೮. ಅಷ್ಟುಹೊತ್ತಿಗೆ ಅನಿರುದ್ಧನಿಗೆ ಎಚ್ಚರವಾಯಿತು. ತಕ್ಷಣ ಎದ್ದು ತನ್ನ ಧನುಸ್ಸನ್ನು ಕೈಗೆ ತೆಗೆದುಕೊಂಡು ಆ ನೀಚನಾದ ಭೀಷಣನೆಲ್ಲಿ? ಆ ಶತ್ರುವು ಎಲ್ಲಿ ಹೋದನು? ಎಂದು ಹೇಳುತ್ತಾ ನಿಂತನು.

೨೯. ಅನಿರುದ್ಧನು ಮೇಲಕ್ಕೆದ್ದುದನ್ನು ನೋಡಿ ಎಲ್ಲರೂ ಆನಂದಪಟ್ಟರು. ಉತ್ಸಾಹಭರಿತರಾಗಿ ಜಯವಾಗಲಿ, ಜಯವಾಗಲಿ ಎಂದು ಕೂಗಿದರು. ದೇವತೆಗಳೆಲ್ಲರೂ ಸಂತೋಷಗೊಂಡರು.

೩೦. ಭೀಷಣನಿಗೆ ಬಕನೆಂಬ ತಂದೆಯಿದ್ದನು. ಅವನು ನಾರದನಿಂದ ನಡೆದ ವರ್ತಮಾನವನ್ನೆಲ್ಲಾ ತಿಳಿದು ಅತಿಕೋಪಗೊಂಡು ಅರಣ್ಯದಿಂದ ಯುದ್ಧರಂಗಕ್ಕೆ ಬಂದನು.

೩೧–೩೨ ಅವನು ಕಪ್ಪಗೆ ಅಂಜನಾದ್ರಿಗೆ ಸಮನಾಗಿದ್ದನು. ತಾಳೆಯ ಮರದಂತೆ ಎತ್ತರವಾಗಿದ್ದನು. ಅವನ ನಾಲಿಗೆಯಿಂದ ಯಾವಾಗಲೂ ಜೊಲ್ಲು ಸುರಿಯುತ್ತಿತ್ತು. ಅವನ ಕಣ್ಣುಗಳು ನೋಡಲು ಭಯಂಕರವಾಗಿದ್ದವು. ಕೈಲಿ ತ್ರಿಶೂಲವನ್ನೂ ಹಿಡಿದಿದ್ದನು. ಎಡಗೈಯಲ್ಲಿ ಒಂದು ಆನೆಯನ್ನು ಹಿಡಿದುಕೊಂಡು ಅದನ್ನು ಬಾಯಲ್ಲಿ ಕಚ್ಚಿ ಕಚ್ಚಿ ತಿನ್ನುತ್ತಿದ್ದನು. ಅದರ ರಕ್ತವು ಮೈಮೇಲೆಲ್ಲಾ ಹರಿಯುತ್ತಿತ್ತು. ಪಿಶಾಚಿಯಂತೆ ಭಯಂಕರನಾಗಿದ್ದನು.

ಪದ್ಭ್ಯಾಂ ತಾಲಪ್ರಮಾಣಾಭ್ಯಾಂ ಕಂಪಯನ್ ಪೃಥಿವೀತಲಂ ।
ಭಯಪ್ರದಶ್ಚ ದೇವಾನಾಂ ಜನಕಾಲೋ ವ್ಯದೃಶ್ಯತ ॥ ೩೩ ॥

ತಮಾಯಾಂತಂ ವಿಲೋಕ್ಯಾಥ ಶಂಕಿತಾಸ್ತತ್ರ ಯಾದವಾಃ ।
ಪ್ರೋಚುಃ ಪರಸ್ಪರಂ ಸರ್ವೇ ಸ್ಮರನ್ ಕೃಷ್ಣಪದಾಂಬುಜಂ ॥ ೩೪ ॥

॥ ಯಾದವಾ ಊಚುಃ ॥

ಕೋಽಯಂ ಮಿತ್ರಾಣಿ ಗದತ ನಿಕಟೇ ಚ ಸಮಾಗತಃ ।
ಮಹಾಬೀಭತ್ಸರೂಪೀ ವೈ ಕೃತಾಂತ ಇವ ನಿರ್ಭಯಃ ॥ ೩೫ ॥

ಇತಿ ಬ್ರುವತ್ಸು ಸರ್ವೇಷು ಆಸೀತ್ಕೋಲಾಹಲೋ ಮಹಾನ್ ।
ಪ್ರಸನ್ನಾಸ್ತಂ ನಿರೀಕ್ಷ್ಯಾಥ ಬಭೂವುಸ್ತೇ ನಿಶಾಚರಾಃ ॥ ೩೬ ॥

---

೩೩. ತಾಳೆಯ ಮರಗಳಂತಿರುವ ಕಾಲನ್ನು ಇಡುವುದರಿಂದ ಭೂಮಿಯು ನಡುಗುತ್ತಿತ್ತು. ಇವನನ್ನು ನೋಡಿದರೆ ದೇವತೆಗಳೂ ಹೆದರುತ್ತಿದ್ದರು. ಮನುಷ್ಯರಿಗಂತೂ ಯಮಸದೃಶನೇ ಆಗಿದ್ದನು.

೩೪. ಈ ರೀತಿ ಭಯಂಕರನಾಗಿ ಬರುತ್ತಿರುವುದನ್ನು ನೋಡಿ ಯಾದವರೆಲ್ಲರೂ ಅನುಮಾನಗೊಂಡರು. ಶ್ರೀಕೃಷ್ಣನ ಪಾದಸ್ಮರಣೆ ಮಾಡುತ್ತಾ ಪರಸ್ಪರವಾಗಿ ಮಾತನಾಡಿಕೊಂಡರು.

೩೫. ಎಲೈ ಮಿತ್ರರೇ, ಇವನಾರು? ನಮ್ಮ ಸಮೀಪಕ್ಕೇ ಬರುತ್ತಿರುವನಲ್ಲ. ಮಹಾಭಯಂಕರರೂಪನಾಗಿ ಯಮನಂತೆ ನಿರ್ಭಯನಾಗಿ ಬರುತ್ತಿರುವನು.

೩೬. ಎಂದು ಎಲ್ಲರೂ ಹೇಳುತ್ತಿದ್ದರು. ಸೈನ್ಯದಲ್ಲೆಲ್ಲಾ ಅತಿಕೋಲಾಹಲವುಂಟಾಯಿತು. ರಾಕ್ಷಸರೆಲ್ಲರೂ ನಿರಾಶೆಯನ್ನು ಬಿಟ್ಟು ಬಕನು ಬಂದುದರಿಂದ ಉತ್ಸಾಹಗೊಂಡರು.

ಭೀಷಣಂ ಮೂರ್ಛಿತಂ ದೃಷ್ಟ್ವಾ ಬಕೋ ರಾಕ್ಷಸಪುಂಗವಃ ।
ಶುಶೋಚ ರಾಜನ್ ಸಂಗ್ರಾಮೇ ಹಾ ದೈವೇತಿ ಮುಹುರ್ವದನ್ ॥ ೩೭ ॥

ತತೋ ಮೂರ್ಛಾಂ ಮುಹೂರ್ತೇನ ವಿಹಾಯ ಭೀಷಣೋ ನೃಪ ।
ಉತ್ಥಿತಸ್ತು ಬ್ರುವನ್ವಾಕ್ಯಂ ಗದಃ ಕುತ್ರ ಗತೋ ಭಯಾತ್ ॥ ೩೮ ॥

ಸ್ವಪುತ್ರಮುತ್ಥಿತಂ ದೃಷ್ಟ್ವಾ ಪುರುಷಾದಸ್ತು ಹರ್ಷಿತಃ ।
ಆಲಿಂಗ್ಯಾಶ್ವಾಸಯಾಮಾಸ ಸುವಾಕ್ಯೈರ್ವಾಕ್ಯಕೋವಿದಃ ॥ ೩೯ ॥

ಭೀಷಣಃ ಪಿತರಂ ದೃಷ್ಟ್ವಾ ಸಹಾಯಾರ್ಥಂ ಸಮಾಗತಂ ।
ನಮಶ್ಚಕ್ರೇ ಮಹಾರಾಜ ಭೂತ್ವಾ ಸ ಚ ಪ್ರಸನ್ನಧೀಃ ॥ ೪೦ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಏಕೋನವಿಂಶೋಽಧ್ಯಾಯಃ

---

೩೭. ಭೀಷಣನು ಮೂರ್ಛಿತನಾದ ಸ್ಥಳಕ್ಕೆ ಬಂದು ಅವನನ್ನು ನೋಡಿದನು. ಆಮೇಲೆ 'ಅಯ್ಯೋ ಅದೃಷ್ಟವೇ' ಎಂದು ಹೇಳುತ್ತಾ ಬಹಳ ದುಃಖಿಸಿದನು.

೩೮–೩೯. ಸ್ವಲ್ಪ ಹೊತ್ತಿನಲ್ಲಿಯೇ ಭೀಷಣನು ಮೂರ್ಛೆಯಿಂದ ಎದ್ದನು. ಆ ಗದನೆಲ್ಲಿ? ಭಯಗೊಂಡು ಎಲ್ಲಡಗಿರುವನು? ಎಂದು ಹೇಳುತ್ತಾ ಮೇಲಕ್ಕೆದ್ದನು. ಎಚ್ಚರಗೊಂಡ ತನ್ನ ಪುತ್ರನನ್ನು ನೋಡಿ ಬಕನು ಅವನನ್ನು ಆಲಂಗಿಸಿದನು. ಒಳ್ಳೆಯ ಮಾತುಗಳಿಂದ ಭೀಷಣನನ್ನು ಸಮಾಧಾನಪಡಿಸಿದನು.

೪೦. ತನಗೆ ಸಹಾಯಮಾಡಲು ತನ್ನ ತಂದೆಯು ಬಂದುದನ್ನು ನೋಡಿ ಭೀಷಣನಿಗೆ ಬಹಳ ಸಂತೋಷವಾಯಿತು. ತಂದೆಗೆ ನಮಸ್ಕರಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಹತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥೋಽಸುರಾಣಾಂ ಮಧ್ಯೇ ವೈ ಸ್ಥಿತ್ವಾ ರಾಜನ್ ರುಷಾನ್ವಿತಃ ।
ಅಭಿಪ್ರಾಯಂ ಭೀಷಣಂ ಚ ಬಕಃ ಪಪ್ರಚ್ಛ ರಾಕ್ಷಸಃ ॥ ೧ ॥

ಕಿಮರ್ಥಂ ಯಾದವೈಸ್ಸಾರ್ಧಂ ಯುದ್ಧಮಾಸೀತ್ತೃಣೋಪಮೈಃ ।
ತ್ವಂ ತು ಯತ್ರ ಗತೋ ಮೂರ್ಛಾಂ ರಾಕ್ಷಸಾ ನಿಹತಾ ಅಹೋ ॥ ೨ ॥

ಇತ್ಯುಕ್ತಸ್ಸ ಬಕೇನಾಪಿ ಭೂತ್ವಾ ರಾಜನ್ನವಾಙ್ಮುಖಃ ।
ಹಯಮೇಧತುರಂಗಸ್ಯ ವಾರ್ತಾಂ ಸರ್ವಾಮವರ್ಣಯತ್ ॥ ೩ ॥

ಇಪ್ಪತ್ತನೆಯ ಅಧ್ಯಾಯವು

೧. ಗರ್ಗನು ಹೇಳಿದನು:—ಎಲೈ ವಜ್ರನಾಭಿಯೇ ಕೇಳು. ಅಸುರರ ಮಧ್ಯದಲ್ಲಿ ಆ ಬಕನು ಅತಿಕೋಪದಿಂದ ನಿಂತಿದ್ದನು. ತನ್ನ ಮಗನನ್ನು ಕುರಿತು ಅವನ ಅಭಿಪ್ರಾಯವೇನೆಂದು ಕೇಳಿದನು.

೨ ತೃಣಸದೃಶರಾದ ಯಾದವರೊಡನೆ ನಿನಗೆ ಯುದ್ಧವೊದಗಲು ಕಾರಣವೇನು? ಯುದ್ಧದಲ್ಲಿ ನೀನು ಮೂರ್ಛೆಹೋಗಿರುವೆ. ರಾಕ್ಷಸರನೇಕರು ಕೊಲ್ಲಲ್ಪಟ್ಟಿರುವರು. ಒಳ್ಳೆಯ ಆಶ್ಚರ್ಯವಾಗಿದೆಯಲ್ಲಾ ಇದೇನಿದು?

೩. ಎಂದು ಕೇಳಲು ಭೀಷಣನು ತಲೆತಗ್ಗಿಸಿದನು. ಮತ್ತು ಯಜ್ಞಾಶ್ವದ ವಿಷಯವನ್ನೆಲ್ಲಾ ಸ್ಪಷ್ಟವಾಗಿ ತಿಳಿಸಿದನು.

ಶ್ರುತ್ವಾ ಪುತ್ರಸ್ಯ ವಚನಂ ಗೃಹೀತ್ವಾ ಸ್ವಗದಾಂ ಬಕಃ ।
ವಿವೇಶ ಯದುಸೈನ್ಯೇ ವೈ ಜ್ವಲನಸ್ತು ಯಥಾ ವನೇ ॥ ೪ ॥

ಪದ್ಭ್ಯಾಂ ಮಮರ್ದ ಪಾಣಿಭ್ಯಾಂ ಯಾದವಾನ್ಸಂಮುಖೇ ಗತಾನ್ ।
ಭುಜಾಭ್ಯಾಂ ಗದಯಾ ಸಿಂಹೋ ಪ್ರಸುಪ್ತಾಂಶ್ಚ ಮೃಗಾನ್ಯಥಾ ॥ ೫ ॥

ಹಯಾಂಶ್ಚಿಕ್ಷೇಪ ಗಗನೇ ಗಜಾಂಶ್ಚೈವ ರಥಾಂಸ್ತಥಾ ।
ನರಾಂಶ್ಚ ಭಕ್ಷಯನ್ಯುದ್ಧೇ ಶಬ್ದಂ ಚಕ್ರೇ ಬಕೋ ಬಲೀ ॥ ೬ ॥

ನನಾದ ತೇನ ಲೋಕೈಶ್ಚ ವಿಶ್ವಂ ಶಬ್ದೇನ ಯಾದವ ।
ಜಾತಾ ಚ ಬಧರೀಭೂತಾ ಪೃಥಿವ್ಯಾಂ ಜನಮಂಡಲೀ ॥ ೭ ॥

ಅಥ ತಸ್ಯಾಪಿ ಯುದ್ಧೇನ ವಿಪರೀತೇನ ಯಾದವಾಃ ।
ಹಾಹೇತಿ ವಾದಿನಸ್ಸರ್ವೇ ಬಭೂವುಃ ಖಿನ್ನಮಾನಸಾಃ ॥ ೮ ॥

೪-೫. ತನ್ನ ಮಗನ ಮಾತನ್ನು ಕೇಳಿದ ತಕ್ಷಣವೇ ಆ ರಾಕ್ಷಸನು ಗದೆಯನ್ನು ತೆಗೆದುಕೊಂಡು ಅಗ್ನಿಯು ಕಾಡನ್ನು ಪ್ರವೇಶಿಸುವಂತೆ ಯದುಸೈನ್ಯದೊಳಕ್ಕೆ ನುಗ್ಗಿದನು. ಕೈಗಳಿಂದ ಅನೇಕ ಜನರನ್ನು ತಿಕ್ಕಿಹಾಕಿದನು. ಕಾಲಿಂದ ಅನೇಕರನ್ನು ತುಳಿದು ಸಾಯಿಸಿದನು. ತನ್ನೆದುರಿಗೆ ಬಂದವರನ್ನು ಗದೆಯಿಂದ ಹೊಡೆದು ಚೂರು ಚೂರು ಮಾಡಿದನು. ಅಕ್ಕಪಕ್ಕದಲ್ಲಿ ಬಂದವರನ್ನು ಭುಜಗಳಿಂದ ತಳ್ಳಿದನು. ಸಿಂಹವು ಮಲಗಿರುವ ಮೃಗಗಳನ್ನು ಕೊಲ್ಲುವಂತೆ ಅನೇಕರನ್ನು ಕೊಂದನು.

೬-೭. ಕುದುರೆಗಳನ್ನು ಹಿಡಿದು ಗಗನಕ್ಕೆ ಎಸೆದನು. ಗಜಗಳನ್ನೂ ರಥಗಳನ್ನೂ ದೂರಕ್ಕೆ ಒಗೆದನು. ಮನುಷ್ಯರನ್ನೆಲ್ಲಾ ತಿಂದು ದೊಡ್ಡದಾಗಿ ಅಬ್ಬರಿಸಿದನು. ಆ ಕೂಗಿನಿಂದ ಪ್ರಪಂಚವೆಲ್ಲಾ ಪ್ರತಿಧ್ವನಿಸಿತು. ಪೃಥಿವಿಯಲ್ಲಿರುವ ಜನರೆಲ್ಲಾ ಕಿವುಡರಾದರು.

೮. ಅವನೊಡನೆ ಯಾದವರು ದೊಡ್ಡ ಯುದ್ಧಮಾಡಿದರು. ಎಲ್ಲರೂ ಹಾಹಾ ಎಂದು ಕೂಗಾಡುತ್ತಾ ದುಃಖಿತರಾದರು.

ಬಾಧ್ಯಮಾನಾಂ ಚ ಸ್ವಾಂ ಸೇನಾಂ ರಾಕ್ಷಸೇನ ದುರಾತ್ಮನಾ ।
ಭೃಶಂ ನಿರೀಕ್ಷ್ಯ ತಪ್ತೋಽಭೂತ್ಸಾಂಬೋ ಜಾಂಬವತೀಸುತಃ ॥ ೯ ॥

ಗೃಹೀತ್ವಾ ಪಂಚ ನಾರಾಚಾನ್ ಕೋದಂಡೇ ಚಂಡವಿಕ್ರಮಃ ।
ನಿಧಾಯಾಶು ಮುಮೋಚಾಥ ಬಕಸ್ಯೋಪರಿ ಮಾನದ ॥ ೧೦ ॥

ತೇ ಬಾಣಾಸ್ತಚ್ಛರೀರಂ ವೈ ಭಿತ್ವಾ ರಾಜನ್ ಮಹೀತಲಂ ।
ವಿವಿಶುಸ್ತೇ ತು ಗತ್ವಾ ವೈ ಪಪುರ್ಭೋಗವತೀಜಲಂ ॥ ೧೧ ॥

ಸ ಹತಸ್ತು ಶರೈ ರಾಜನ್ ಪಪಾತ ಚಾಲಯನ್ ಮಹೀಂ ।
ಪುನರುತ್ಥಾಯ ಚ ಬಕೋ ನನಾದ ಜಲದಸ್ವನಃ ॥ ೧೨ ॥

ಪುನರ್ಜಾಂಬವತೀಪುತ್ರೋ ಜಘ್ನೇ ತಂ ಪಂಚಭಿಃ ಶರೈಃ ।
ತೈರ್ಬಾಣೈರ್ವಿಭ್ರಮನ್ಸೋಽಪಿ ಲಂಕಾಯಾಂ ನಿಪಪಾತ ಹ ॥ ೧೩ ॥

---

೯. ಈ ರೀತಿ ತನ್ನ ಸೇನೆಯು ದುರಾತ್ಮನಾದ ರಾಕ್ಷಸನ ಹಿಂಸೆಗೆ ಒಳಗಾದುದನ್ನು ನೋಡಿ ಸಾಂಬನು ಅತಿದುಃಖಿತನಾದನು.

೧೦. ಅನಂತರ ಸಾಂಬನು ಐದು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಜಾಗ್ರತೆಯಾಗಿ ಆ ಬಕನ ಮೇಲೆ ಪ್ರಯೋಗಿಸಿದನು.

೧೧-೧೨. ಆ ಬಾಣಗಳು ಅವನ ಶರೀರವನ್ನು ಭೇದಿಸಿಕೊಂಡು ಭೂಮಿಗೆ ತಗಲಿ ಅದನ್ನೂ ಭೇದಿಸಿಕೊಂಡು ಪಾತಾಳಲೋಕಕ್ಕೆ ಹೋಗಿ ಅಲ್ಲಿರುವ ನೀರಿನೊಳಕ್ಕೆ ಸೇರಿದವು. ಬಕನು ಅದರಿಂದ ಕೆಳಕ್ಕುರಿಳಿದನು. ಅದರಿಂದ ಭೂಮಿಯು ನಡುಗಿತು. ಸ್ವಲ್ಪ ಹೊತ್ತಿನೊಳಗಾಗಿ ಪುನಃ ಚೇತರಿಸಿಕೊಂಡೆದ್ದು; ಗಟ್ಟಿಯಾಗಿ ಕೂಗಿದನು.

೧೩. ಆಗ ಸಾಂಬನು ಪುನಃ ಐದು ಬಾಣಗಳಿಂದ ಅವನನ್ನು ಹೊಡೆದನು. ಅದರ ವೇಗದಿಂದ ಅವನು ಲಂಕೆಗೆ ಹೋಗಿ ಬಿದ್ದನು.

ಆಗತ್ಯ ತ್ರಿಶಿಖಂ ರಕ್ಷಸ್ತ್ರಿಶೂಲಂ ಜ್ವಲನಪ್ರಭಂ ।
ರಾಜನ್ಸಾಂಬಾಯ ಚಿಕ್ಷೇಪ ಪ್ರಸೂನಮಿವ ಹಸ್ತಿನೇ ॥ ೧೪ ॥

ತ್ರಿಶೂಲಮಾಗತಂ ದೃಷ್ಟ್ವಾ ಸಾಂಬೋ ಬಾಣೇನ ಲೀಲಯಾ ।
ಚಿಚ್ಛೇದ ಪ್ರಧನೇ ಶೀಘ್ರಂ ನಾಗಂ ನಾಗಾಂತಕೋ ಯಥಾ ॥ ೧೫ ॥

ತತೋ ನೀತ್ವಾ ಗದಾಂ ಗುರ್ವೀಂ ಬಕಸ್ತು ರಣದುರ್ಮದಃ ।
ಸಾಂಬಸ್ಯ ತುರಗಾನ್ರಾಜನ್ ಜಘಾನ ಸಾರಥಿಂ ತಥಾ ॥ ೧೬ ॥

ರಥಂ ಚೈವ ಪತಾಕಾಂ ಚ ಹತ್ವಾ ಸಾಂಬಮುವಾಚ ಹ ।
ರಥಮನ್ಯಂ ಸಮಾರುಹ್ಯ ಯುದ್ಧಂ ಕುರು ಮಯಾ ಸಹ ॥ ೧೭ ॥

ವಿರಥಂ ತ್ವಾಮಧರ್ಮೇಣ ನ ಹನಿಷ್ಯಾಮ್ಯಹಂ ರಣೇ ।
ಇತೀರಿತೋಽಸೌ ದೈತ್ಯೇನ ಹಸನ್ಕಿಂಚಿದ್ರುಷಾನ್ವಿತಃ ॥ ೧೮ ॥

ಶೀಘ್ರಂ ಜಘಾನ ಗದಾಯಾ ಹೃತ್ಕಪಾಟೇ ಬಕಸ್ಯ ಚ ।
ಗದಾಹತೋ ಬಕೋ ಯುದ್ಧೇ ಕಿಂಚಿದ್ವ್ಯಾಕುಲಮಾನಸಃ ॥ ೧೯ ॥

೧೪-೧೫. ಪುನಃ ಬಂದು ಉರಿಯುತ್ತಿರುವ ತ್ರಿಶೂಲವನ್ನು ಸಾಂಬನ ಮೇಲೆ ಎಸೆದನು. ಅದು ಆನೆಗೆ ಹೂವೆಸೆದಂತೆ ಆಯಿತು. ಆಗ ಸಾಂಬನು ಆ ತ್ರಿಶೂಲವನ್ನು ಒಂದು ಬಾಣದಿಂದ, ಗರುಡನು ಹಾವನ್ನು ನಾಶಮಾಡುವಂತೆ ಅನಾಯಾಸದಿಂದ ನಾಶಪಡಿಸಿದನು.

೧೬. ಆಗ ರಣಧೀರನಾದ ಬಕನು ಒಂದು ಗದೆಯನ್ನು ತೆಗೆದುಕೊಂಡು ಅದರಿಂದ ಸಾಂಬನ ಕುದುರೆಗಳನ್ನೂ ಸಾರಥಿಯನ್ನೂ ಹೊಡೆದನು.

೧೭. ರಥವನ್ನೂ, ಧ್ವಜವನ್ನೂ ಚೂರುಮಾಡಿದನು. ಅನಂತರ ಸಾಂಬನನ್ನು ಕುರಿತು ಈಗ ನೀನು ಬೇರೊಂದು ರಥವನ್ನೇರಿ ಯುದ್ಧಮಾಡು. ರಥವಿಲ್ಲದ ನಿನ್ನೊಡನೆ ನಾನು ಯುದ್ಧಮಾಡುವುದಿಲ್ಲ. ಅದು ಅಧರ್ಮ ಯುದ್ಧವು. ಹಾಗೆ ಯುದ್ಧಮಾಡಿ ನಿನ್ನನ್ನು ಕೊಲ್ಲಲಾರೆನು.

೧೮-೧೯. ಎಂದು ಹೇಳಲು ಸಾಂಬನು ನಗುತ್ತಾ ಗದೆಯನ್ನು ತೆಗೆದುಕೊಂಡು ಬಕನ ಎದೆಗೆ ಗುರಿ ಇಟ್ಟು ಹೊಡೆದನು. ಆದರ ಏಟಿನಿಂದ ಸ್ವಲ್ಪ ನೋವುಂಟಾಯಿತು. ಆದರೇನು, ಅದನ್ನು ಲೆಕ್ಕಿಸದೆ ಯದುಸೈನ್ಯದೊಳಕ್ಕೆ ನುಗ್ಗಿದನು.

ಅಗಣಯ್ಯ ತತಸ್ಸಾಂಬಂ ಯದುಸೈನ್ಯೇ ವಿವೇಶ ಹ ।
ಸ ಗತ್ವಾ ತತ್ರ ಗದಯಾ ಗಜವಾಜಿರಥಾನ್ನರಾನ್ ॥ ೨೦ ॥

ಕೌಣಪಃ ಪ್ರೋಥಯಾಮಾಸ ಮೃಗೇಂದ್ರಸ್ತು ಯಥಾ ಮೃಗಾನ್ ।
ಹಾಹಾಕಾರಸ್ತದೈವಾಸೀದ್ಯದುಸೈನ್ಯೇ ನೃಪೇಶ್ವರ ॥ ೨೧ ॥

ತತೋ ವಿಲೋಕ್ಯ ರೋಷೇಣ ರಾಜನ್ರುಕ್ಮವತೀಸುತಃ ।
ತತ್ರಾಗತೋಽಭಯಂ ಕುರ್ವನ್ರಥೇನಾಕ್ಷೌಹಿಣೀಯುತಃ ॥ ೨೨ ॥

॥ ಅನಿರುದ್ಧ ಉವಾಚ ॥

ಕಿಂ ಕರಿಷ್ಯಸಿ ಹೇ ಮೂಢ ತ್ಯಕ್ತ್ವಾ ವೀರಸ್ಯ ಸಂಮುಖಂ ।
ಭೀತಾನಾಂ ಮಾರಣೇ ಶ್ಲಾಘಾ ನ ಭವಿಷ್ಯತಿ ತೇಽಸುರ ॥ ೨೩ ॥

ಯದಿ ಶಕ್ತಿಶ್ಚ ತ್ವದ್ದೇಹೇ ವಿದ್ಯತೇ ಶೃಣು ಮದ್ವಚಃ ।
ಮತ್ಸಂಮುಖೇ ಸಮಾಗತ್ಯ ಕುರು ಯುದ್ಧಂ ಪ್ರಯತ್ನತಃ ॥ ೨೪ ॥

೨೦–೨೧. ಗದೆಯಿಂದ ಕುದುರೆ, ರಥ, ಸೈನಿಕರು ಎಲ್ಲರನ್ನೂ ಹೊಡೆದು ಚೂರು ಚೂರು ಮಾಡಿದನು. ಸಿಂಹವು ಮೃಗಗಳನ್ನು ಕೊಲ್ಲುವಂತೆ ಸೈನಿಕರನ್ನು ಕೊಂದನು. ಯದುಸೈನ್ಯದಲ್ಲೆಲ್ಲಾ ಹಾಹಾಕಾರವೆದ್ದಿತು.

೨೨. ಅದನ್ನು ನೋಡಿ ಅನಿರುದ್ಧನಿಗೆ ಕೋಪವುಂಟಾಯಿತು. ಆಗ ಯದುಸೈನಿಕರಿಗೆ ಅಭಯವನ್ನು ನೀಡುತ್ತಾ ರಥದಲ್ಲಿ ಕುಳಿತು ಒಂದು ಅಕ್ಷೌಹಿಣೀ ಸೈನ್ಯದೊಡನೆ ಬಂದನು.

೨೩–೨೪. ಆ ಬಕನನ್ನು ಕುರಿತು, ಎಲೋ ರಾಕ್ಷಸ, ನೀನೊಬ್ಬ ಮೂಢನು. ವೀರೋಚಿತ ಕೆಲಸವನ್ನು ಮಾಡುವುದು ಬಿಟ್ಟು ಹೆದರಿರುವ ಸೈನಿಕರನ್ನು ಕೊಲ್ಲುತ್ತಿರುವೆ. ಇದೂ ಒಂದು ಶೌರ್ಯವೇ? ನಿನಗೆ ನಿಜವಾಗಿಯೂ ಶೌರ್ಯವಿದ್ದಲ್ಲಿ ಬಾ. ನನ್ನನ್ನೆದುರಿಸು. ನನ್ನೊಡನೆ ಯುದ್ಧಮಾಡು ಎಂದನು.

ಇತಿ ಶ್ರುತ್ವಾನಿರುದ್ಧಸ್ಯ ವಾಕ್ಯಂ ರಾಜನ್ ಬಕಾಸುರಃ ।
ರುಷಾ ಸ್ಫುರತ್ಸರ್ಪ ಇವ ಯುದ್ಧಾರ್ಥಂ ಶೀಘ್ರಮಾಯಯೌ ॥ ೨೫ ॥

ಆಗತಂ ತಂ ವಿಲೋಕ್ಯಾಥಾನಿರುದ್ಧೋ ಧನ್ವಿನಾಂ ವರಃ ।
ನಾರಾಚೈರ್ದಶಭೀ ರಾಜನ್ ಜಘಾನ ಪ್ರಧನೇ ರುಷಾ ॥ ೨೬ ॥

ತೇ ಶರಾಸ್ತಚ್ಛರೀರಂ ವೈ ಶೀಘ್ರಂ ಭಿತ್ವಾ ಬಹಿರ್ಗತಾಃ ।
ಪುನಸ್ತೇ ಭೀಷಣಂ ಭಿತ್ವಾ ವಿವಿಶುರ್ವೈ ಮಹೀತಲಂ ॥ ೨೭ ॥

ತತಃ ಪಪಾತ ಸ ಬಕೋ ಭೀಷಣೇನ ಸಮನ್ವಿತಃ ।
ಪೃಥಿವ್ಯಾಂ ಮೂರ್ಛಿತೋ ಭೂತ್ವಾ ಯಥಾ ವಜ್ರಹತೋ ಗಿರಿಃ ॥ ೨೮ ॥

ತದಾ ಜಯಜಯಾರಾವೋ ಯದುಸೈನ್ಯೇ ಬಭೂವ ಹ ।
ನೇದುರ್ದುಂದುಭಯಶ್ಚೈವ ಭೇರ್ಯಃ ಶಂಖಾಶ್ಚ ಗೋಮುಖಾಃ ॥ ೨೯ ॥

---

೨೫. ಹೀಗೆ ಹೇಳಲು ಬಕಾಸುರನು ಅದನ್ನು ಕೇಳಿ ಅತಿಕೋಪಗೊಂಡನು. ಕೋಪದಿಂದ ಕೂಡಿದ ಸರ್ಪದಂತೆ ಭಯಂಕರನಾಗಿ ಯುದ್ಧಮಾಡಲು ಜಾಗ್ರತೆಯಾಗಿ ಅನಿರುದ್ಧನ ಸಮೀಪಕ್ಕೆ ಬಂದನು.

೨೬. ಇಬ್ಬರಿಗೂ ಯುದ್ಧವು ಪ್ರಾರಂಭವಾಯಿತು. ಅನಿರುದ್ಧನು ಹತ್ತು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಬಕನನ್ನು ಹೊಡೆದನು.

೨೭. ಆ ಬಾಣಗಳು ಬಕನ ಶರೀರವನ್ನು ಭೇದಿಸಿಕೊಂಡು ಮುಂದೆ ಹೊರಟವು. ಅಲ್ಲಿಂದ ಭೀಷಣನ ಶರೀರವನ್ನೂ ಭೇದಿಸಿಕೊಂಡು ಹೋಗಿ ಭೂಮಿಯ ಮೇಲೆ ಬಿದ್ದವು.

೨೮. ಅದರ ಏಟಿನಿಂದ ಬಕನೂ, ಭೀಷಣನೂ, ಕೆಳಕ್ಕುರುಳಿ ಮೂರ್ಛಿತರಾಗಿ ವಜ್ರಾಯುಧದ ಏಟಿನಿಂದ ಪರ್ವತಗಳು ಬಿದ್ದಂತೆ ಬಿದ್ದರು.

೨೯. ಆಗ ಯದುಸೈನಿಕರು ಅನಿರುದ್ಧನನ್ನು ಜಯಾಜಯಾಕಾರಗಳನ್ನು ಹೊಗಳಿದರು. ದುಂದುಭಿಗಳು ಮೊಳಗಿದವು. ಭೇರಿಗಳು ಹೊಡೆಯಲ್ಪಟ್ಟವು. ಶಂಖ, ಗೋಮುಖ ಮುಂತಾದ ವಾದ್ಯಗಳನ್ನು ಸಂತೋಷದಿಂದ ಬಾರಿಸಿದರು.

ತತಶ್ಚ ರಾಕ್ಷಸಾಸ್ಸರ್ವೇ ಕ್ರೋಧಪೂರಿತಮಾನಸಾಃ ।
ಸ್ವನಾಥೌ ಪತಿತೌ ದೃಷ್ಟ್ವಾ ಯದೂನ್ ಹಂತುಂ ಸಮಾಯಯುಃ ॥ ೩೦ ॥

ತತಸ್ಸಮಭವದ್ಯುದ್ಧಮುಭಯೋಸ್ಸೇನಯೋರ್ಮೃಧೇ ।
ಬಾಣೈಃ ಖಡ್ಗೈರ್ಗದಾಭಿಶ್ಚ ಶಕ್ತಿಭಿರ್ಭಿಂದಿಪಾಲಕೈಃ ॥ ೩೧ ॥

ರಾಕ್ಷಸಾನಾಂ ಬಲಂ ತೀವ್ರಂ ದೃಷ್ಟ್ವಾ ರಾಜನ್ ಹರೇಸ್ಸುತಾಃ ।
ಅಷ್ಟಾದಶ ಚ ಸಾಂಬಾದ್ಯಾ ನಿಜಘ್ನುರ್ನಿಶಿತೈಃ ಶರೈಃ ॥ ೩೨ ॥

ತತ್ರ ತೇಷಾಂ ಚ ಬ್ಾಣೌಘೈಃ ಕೌಣಪಾಃ ಪತಿತಾ ಮೃಧೇ ।
ಕೇಚಿನ್ಮೃತ್ಯುಂ ಗತಾಃ ಕೇಚಿದ್ದುದ್ರುವುರ್ಜೀವಿತೈಷಿಣಃ ॥ ೩೩ ॥

---

೩೦. ರಾಕ್ಷಸರಿಗೆಲ್ಲಾ ದುಃಖವಾಯಿತು. ತಮ್ಮ ಪ್ರಭುಗಳಾದ ಬಕ, ಭೀಷಣ ಇಬ್ಬರೂ ಬಿದ್ದುದರಿಂದ ಅತಿ ಕುಪಿತರಾಗಿ ಯಾದವರನ್ನು ನಾಶಪಡಿಸಲು ಯದು ಸೈನ್ಯದೊಳಕ್ಕೆ ನುಗ್ಗಿದರು.

೩೧. ಎರಡು ಸೈನ್ಯಗಳಿಗೂ ಯುದ್ಧವಾಯಿತು. ಬಾಣ, ಖಡ್ಗ, ಗದೆ, ಶಕ್ತಿ, ಬಿಂಧಿಪಾಲ ಮುಂತಾದ ಆಯುಧಗಳನ್ನು ಪ್ರಯೋಗಮಾಡುತ್ತಾ ಪರಸ್ಪರ ಘೋರ ಯುದ್ಧವನ್ನು ಮಾಡಿದರು.

೩೨. ಅಧಿಕವಾಗಿ ರಾಕ್ಷಸರು ಯುದ್ಧಕ್ಕೆ ಬರುತ್ತಿರುವುದನ್ನು ನೋಡಿ ಸಾಂಬನೇ ಮೊದಲಾದ ಹದಿನೆಂಟುಜನ ಕೃಷ್ಣನ ಪುತ್ರರು ಬಾಣಗಳನ್ನು ಪ್ರಯೋಗಿಸುತ್ತಾ ಅವರನ್ನು ನೋಯಿಸಿದರು.

೩೩. ಒಂದೇ ಸಮನೆ ಬೀಳುತ್ತಿರುವ ಬಾಣಗಳ ಏಟಿನಿಂದ ಅನೇಕ ಜನ ರಾಕ್ಷಸರು ಸತ್ತುಹೋದರು. ಕೆಲವರು ನೆಲದ ಮೇಲೆ ಉರುಳಾಡಿದರು. ಕೆಲವರು ಜೀವಿತದ ಆಶೆಯಿಂದ ಸ್ಥಳವನ್ನು ಬಿಟ್ಟು ಓಡಿಹೋದರು.

ಅಥೋತ್ಥಿತೋ ಮುಹೂರ್ತೇನ ಬಕೋ ರಾಜನ್ ಭಯಂಕರಃ ।
ತ್ವರಂ ಜಗಾಮ ಶತ್ರೋರ್ಶ್ಚಾನಿರುದ್ಧಸ್ಯ ತು ಸಂಮುಖಃ ॥ ೩೪ ॥

ತತ್ರ ಗತ್ವಾ ಗದಾಂ ಗುರ್ವೀಂ ಚಿಕ್ಷೇಪ ತಚ್ಛಿರೋಪರಿ ।
ಬಾಹುನಾ ಚ ಬಕೋ ರಾಜನ್ ಹತೋಽಸೀತಿ ಬ್ರುವನ್ವಚಃ ॥ ೩೫ ॥

ತಾಮಾಗತಾಂ ವಿಲೋಕ್ಯಾಥ ಯಮದಂಡೇನ ಮಾಧವಃ ।
ಚಿಚ್ಛೇದ ಸಹಸಾ ರಾಜನ್ ಕುವಾಕ್ಯೇನೇವ ಮಿತ್ರತಾಂ ॥ ೩೬ ॥

ತತಃ ಕ್ರುದ್ಧೋ ಬಕೋ ಯುದ್ಧೇ ಪ್ರಸಾರ್ಯ ಮುಖಮಂಡಲಂ ।
ದುದ್ರಾವ ತಂ ಭಕ್ಷಯಿತುಂ ರಾಹುಶ್ಚಂದ್ರಮಿವ ಕ್ವಚಿತ್ ॥ ೩೭ ॥

ಆಗತಂ ತಂ ನಿರೀಕ್ಷ್ಯೈಥಾನಿರುದ್ಧೋ ಧನ್ವಿನಾಂ ವರಃ ।
ಯಮದಂಡಂ ಪುನರ್ನೀತ್ವಾ ತಾಡಯಾಮಾಸ ತೇನ ತಂ ॥ ೩೮ ॥

೩೪-೩೫. ಸ್ವಲ್ಪ ಹೊತ್ತಿನಲ್ಲಿಯೇ ಬಕನು ಎಚ್ಚರಗೊಂಡನು. ಜಾಗ್ರತೆಯಾಗಿ ತನ್ನ ಶತ್ರುವಾದ ಅನಿರುದ್ಧನ ಸಮೀಪಕ್ಕೆ ಬಂದು ಒಂದು ಗದೆಯನ್ನು ತೆಗೆದುಕೊಂಡು 'ಇಗೋ, ಇದರಿಂದ ನೀನು ನಾಶವಾದೆ' ಎಂದು ಹೇಳುತ್ತಾ ಅದನ್ನು ಅನಿರುದ್ಧನ ತಲೆಯ ಮೇಲೆ ಎಸೆದನು.

೩೬. ತನ್ನ ತಲೆಯ ಮೇಲೆ ಬೀಳುತ್ತಿರುವ ಗದೆಯನ್ನು ಅನಿರುದ್ಧನು ಯಮದಂಡದಿಂದ 'ಕುಹಕಮಾತಿನಿಂದ ಸ್ನೇಹವನ್ನು ನಾಶಪಡಿಸುವಂತೆ' ಕತ್ತರಿಸಿದನು.

೩೭. ಆಗ ಬಕನು ಅತಿಕೋಪದಿಂದ ತನ್ನ ಬಾಯನ್ನು ತೆರೆದುಕೊಂಡು ಅನಿರುದ್ಧನನ್ನು ಭಕ್ಷಿಸಲು ಚಂದ್ರನನ್ನು ನುಂಗುವ ರಾಹುವಿನಂತೆ ಓಡಿ ಬಂದನು.

೩೮. ಆಗ ಧನುರ್ಧರರಲ್ಲಿ ಶ್ರೇಷ್ಠನಾದ ಅನಿರುದ್ಧನು ತನ್ನ ಕಡೆಗೆ ಬರುತ್ತಿರುವ ಬಕನನ್ನು ಯಮದಂಡದಿಂದ ಬಲವಾಗಿ ಹೊಡೆದನು.

ತತೋ ಭಗ್ನಶಿರಾ ಭೂತ್ವಾ ಹ್ಯುದ್ವಮನ್ ರುಧಿರಂ ಮುಖಾತ್ ।
ಚಾಲಯನ್ ವಸುಧಾಂ ರಾಜನ್ ಪತಿತೋ ಮೂರ್ಛಿತೋಽಭವತ್ ॥ ೩೯ ॥

ತತಶ್ಚ ಭೀಷಣೋ ರೋಷಾತ್ಪಿತರಂ ವೀಕ್ಷ್ಯ ಮೂರ್ಛಿತಂ ।
ಪರಿಘೇಣ ರಣೇ ರಾಜನ್ನಿಜಘಾನ ತು ಯಾದವಾನ್ ॥ ೪೦ ॥

ತತೋಽನಿರುದ್ಧೋ ಬಲವಾನ್ನಾಗಪಾಶೇನ ರೋಷತಃ ।
ಚಕರ್ಷ ಭೀಷಣಂ ಬದ್ಧ್ವಾ ನಾಗಂ ವಿಷ್ಣುರಥೋ ಯಥಾ ॥ ೪೧ ॥

ತಂ ಬದ್ಧಂ ಪಾಶಿನಃ ಪಾಶೈರ್ಭಗ್ನಮಾನಮಧೋಮುಖಂ ।
ವಿನಿರ್ಜಿತಂ ಹೀನಬಲಂ ಸಾಂಬೋ ವಚನಮಬ್ರವೀತ್ ॥ ೪೨ ॥

ಅಸುರೇಂದ್ರಾನಿರುದ್ಧಸ್ಯ ಹಯಮೇಧತುರಂಗಮಂ ।
ಶೀಘ್ರಂ ಪ್ರಯಚ್ಛ ಭದ್ರಂ ತೇ ಪುರೀಂ ಗತ್ವಾ ವಿಧಾನತಃ ॥ ೪೩ ॥

---

೩೯. ಅವನ ತಲೆಯು ಒಡೆದು ಹೋಯಿತು. ಅವನು ರಕ್ತವನ್ನು ಕಾರಲು ಪ್ರಾರಂಭಿಸಿದನು. ಸಿಲ್ಲಲಾರದೆ ಭೂಮಿಯ ಮೇಲೆ ಬಿದ್ದ ಮೂರ್ಛಿತನಾದನು. ಭೂಮಿಯು ನಡುಗಿತು.

೪೦. ಆಗ ಭೀಷಣನು ತನ್ನ ತಂದೆ ಬಿದ್ದು ಮೂರ್ಛಿತನಾದುದನ್ನು ನೋಡಿ ಪರಿಘಾಯುಧವನ್ನು ತೆಗೆದುಕೊಂಡು ಜಾಗ್ರತೆಯಾಗಿ ಬಂದು ಯಾದವರನ್ನು ಹೊಡೆಯಲು ಪ್ರಾರಂಭಿಸಿದನು.

೪೧. ಅನಂತರ ಅನಿರುದ್ಧನು ನಾಗಪಾಶದಿಂದ ಆ ಭೀಷಣನನ್ನು ಗರುಡನು ಸರ್ಪವನ್ನು ಬಂಧಿಸುವಂತೆ ಬಂಧಿಸಿದನು.

೪೨. ಆಗವನಿಗೆ ನಾಚಿಕೆಯಾಯಿತು. ತಲೆತಗ್ಗಿಸಿ ನಿಂತುಕೊಂಡನು. ಅವನಿಗೆ ಬಲವೇ ಇಲ್ಲದಂತಾಯಿತು. ಆಗ ಅವನನ್ನು ಕುರಿತು ಸಾಂಬನು,

೪೩. ಎಲೈ ಅಸುರೇಂದ್ರನೇ, ನೀನೀಗ ನಿನ್ನ ಪಟ್ಟಣಕ್ಕೆ ಹೋಗಿ ಆ ಯಜ್ಞಾಶ್ವವನ್ನು ಅನಿರುದ್ಧನಿಗೆ ತಂದೊಪ್ಪಿಸು. ನಿನಗೆ ಒಳ್ಳೆಯದಾಗುವುದು.

ಅನಿರುದ್ಧಂ ಹರೇಃ ಪೌತ್ರಂ ಶ್ರೀಕೃಷ್ಣಸ್ಯ ಮಹಾತ್ಮನಃ ।
ನೃಣಾಂ ಪ್ರದರ್ಶಯನ್ರೂಪಂ ವಿಚರಂತಂ ಮಿಷೇಣ ಚ ॥ ೪೪ ॥

ಯಂ ನಮಂತಿ ಸಮಾಗತ್ಯ ದೇವದೈತ್ಯನರಾಸ್ಸುರಾಃ ।
ತಂ ವಿದ್ಧಿ ಕೃಷ್ಣಸದೃಶಂ ನೃಣಾಂ ಪಾಪಪ್ರಣಾಶನಂ ॥ ೪೫ ॥

ತೇನ ತ್ವಂ ನಿರ್ಜಿತೋ ಯುದ್ಧೇ ದುಃಖಂ ಮಾ ಕುರು ರಾಕ್ಷಸ ।
ಅಸ್ಮಾಭಿಸ್ಸಹಿತೋ ಗಚ್ಛ ಕರ್ತುಂ ಕೃಷ್ಣಸ್ಯ ದರ್ಶನಂ ॥ ೪೬ ॥

॥ ಗರ್ಗ ಉವಾಚ ॥

ಬೋಧಿತಸ್ಸೋಽಪಿ ಸಾಂಬೇನ ಮುಕ್ತಃ ಪಾಶೈಶ್ಚ ವಾರುಣೈಃ ।
ಪುರೀಂ ಗತ್ವಾ ದದೌ ತಸ್ಮೈ ದ್ರವ್ಯಯುಕ್ತಂ ತುರಂಗಮಂ ॥ ೪೭ ॥

೪೪–೪೫. ಅನಿರುದ್ಧನು ಶ್ರೀಕೃಷ್ಣನ ಮೊಮ್ಮಗನು. ಶ್ರೀಕೃಷ್ಣನೇ ಈ ರೀತಿ ರೂಪಧರಿಸಿ ತನ್ನ ಸ್ವರೂಪವನ್ನು ತೋರಿಸುತ್ತಾ ಬಂದಿರುವನು. ಆ ಕೃಷ್ಣನನ್ನು ದೇವತೆಗಳು, ದೈತ್ಯರು, ನರರು ಎಲ್ಲರೂ ಅವನಿದ್ದಲ್ಲಿಗೇ ಬಂದು ಅವನಿಗೆ ನಮಸ್ಕಾರ ಮಾಡುತ್ತಿರುವರು. ದರ್ಶನ ಮಾತ್ರದಿಂತಲೇ ಪಾಪವು ನಾಶವಾಗುವುದು. ಅಂತಹ ಕೃಷ್ಣನೇ ಅನಿರುದ್ಧನೆಂದು ತಿಳಿ.

೪೬. ಎಲೈ ರಾಕ್ಷಸನೇ, ಅನಿರುದ್ಧನು ನಿನ್ನನ್ನು ಸೋಲಿಸಿದನೆಂದು ನೀನು ದುಃಖಪಡಬೇಡ. ನಮ್ಮೊಡನೆ ನೀನೂ ದ್ವಾರಕೆಗೆ ನಡೆ. ಅಲ್ಲಿ ಕೃಷ್ಣನ ದರ್ಶನ ಮಾಡುವೆಯಂತೆ.

೪೭. ಎಂದು ಹೇಳಿ ಸಾಂಬನು ಅವನ ಕಟ್ಟನ್ನು ಬಿಚ್ಚಿದನು. ಬಳಿಕ ಅವನು ತನ್ನ ಪಟ್ಟಣಕ್ಕೆ ಹೋಗಿ ದ್ರವ್ಯದೊಡನೆ ಆ ಯಜ್ಞಾಶ್ವವನ್ನು ತಂದೊಪ್ಪಿಸಿದನು.

ತತಸ್ತ್ವೋಽಪ್ಯನಿರುದ್ಧೇನ ತುರಂಗಸ್ಯ ತು ಪಾಲನೇ ।
ಪ್ರಾರ್ಥಿತೋ ಭೀಷಣೋ ರಾಜನ್ ಪ್ರತ್ಯುವಾಚ ವಿಚಾರ್ಯ ತಂ ॥ ೪೮ ॥

ಯದಾ ಭವತಿ ಚೈತನ್ಯೋ ಮತ್ಪಿತಾಸುರಪಾಲಕ ।
ತದಾಹಂ ತಸ್ಯ ವಚನಾದಾಗಮಿಷ್ಯೇ ನ ಸಂಶಯಃ ॥ ೪೯ ॥

ಇತೀರಿತೋಽಸೌ ಕಿಲ ಭೀಷಣೇನ
ಪ್ರದ್ಯುಮ್ನಪುತ್ರಃ ಕ್ರತುವಾಹನಂ ಚ ।
ಕೃತ್ವಾ ವಿಮಾನೇ ಯದುಸೇನಯಾ ವೈ
ಸ್ವಯಂ ಸಮಾರುಹ್ಯ ಜಗಾಮ ಖಂ ಹಿ ॥ ೫೦ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ವಿಂಶತಿತಮೋಽಧ್ಯಾಯಃ

---

೪೮. ಅನಿರುದ್ಧನು ಅದನ್ನು ಸ್ವೀಕರಿಸಿ ಅಶ್ವರಕ್ಷಣೆಗೆ ನೀನೂ ಬರಬೇಕೆಂದು ಪ್ರಾರ್ಥಿಸಲು ಆಗ ಭೀಷಣನು ಅನಿರುದ್ಧನನ್ನು ಕುರಿತು—

೪೯. ನನ್ನ ತಂದೆಯು ಮೂರ್ಛಿತನಾಗಿ ಬಿದ್ದಿರುವನು. ಅವನು ಎಚ್ಚರಗೊಳ್ಳುತ್ತಲೂ ಅವನ ಅಪ್ಪಣೆಯನ್ನು ತೆಗೆದುಕೊಂಡು ಖಂಡಿತವಾಗಿಯೂ ನಾನು ಬರುವೆನು.

೫೦. ಎಂದು ಭೀಷಣನು ಹೇಳಲು, ಅನಿರುದ್ಧನು ಯಜ್ಞಾಶ್ವವನ್ನು ತೆಗೆದುಕೊಂಡು ಯದುಸೇನೆಯೊಡನೆ ವಿಮಾನದಲ್ಲಿ ಕುಳಿತನು. ಅದು ಆಕಾಶದಲ್ಲಿ ಹಾರಿತು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ತತಃ ಪ್ರಾಪ್ತಸ್ವಸೇನಾಯಾಂ ವಿಮಾನಸ್ಥ ಉಷಾಪತಿಃ ।
ಶೀಘ್ರಂ ಚಾಕಾಶಮಾರ್ಗೇಣ ನಾದಯನ್ ಜಯದುಂದುಭೀನ್ ॥ ೧ ॥

ದೃಷ್ಟ್ವಾ ತಾನಗತಾನ್ಸರ್ವೇ ಹ್ಯಕ್ರೂರಾದ್ಯಾಶ್ಚ ಯಾದವಾಃ ।
ಮಿಲಿತ್ವಾ ಕುಶಲಂ ಸರ್ವಂ ಪಪ್ರಚ್ಛುಸ್ತೇ ನಿವೇದಯನ್ ॥ ೨ ॥

ಇಪ್ಪತ್ತೊಂದನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಉಷಾಪತಿಯಾದ ಅನಿರುದ್ಧನು ವಿಮಾನದಲ್ಲಿ ಕುಳಿತು ಜಾಗ್ರತೆಯಾಗಿ ತನ್ನ ಸೇನೆಯಿದ್ದೆಡೆಗೆ ಹೋದನು. ಜಯದುಂದುಭಿಗಳನ್ನು ಯಾದವರು ಬಾರಿಸಿದರು.

೨. ಆಗ ಅಕ್ರೂರಾದಿಗಳೆಲ್ಲರೂ ಬಂದು ಇವರನ್ನು ಎದುರುಗೊಂಡರು. ಎಲ್ಲರನ್ನೂ ಕುಶಲಪ್ರಶ್ನೆಗಳನ್ನು ಕೇಳಿದರು. ಪರಸ್ಪರ ಕುಶಲಪ್ರಶ್ನೆಗಳು ನಡೆದವು.

ತತಸ್ತ್ಯಕ್ತ್ವಾ ವಿಮೂರ್ಛಾಂ ವೈ ಬಕಸ್ತು ಸಹಸೋತ್ಥಿತಃ ।
ಅದೃಷ್ಟ್ವಾ ಯಾದವಾಂಸ್ತತ್ರ ಪುತ್ರಂ ಪ್ರಪಚ್ಛ ರೋಷತಃ ॥ ೩ ॥

ತತಃ ಪತ್ರೇ ಭೀಷಣೋ ವೈ ವಾರ್ತಾಂ ಸರ್ವಾಮವರ್ಣಯತ್ ।
ಶ್ರುತ್ವಾ ವಚಃ ಪ್ರಾಹ ಬಕೋ ರುಷಾ ಪ್ರಸ್ಫುರಿತಾಧರಃ ॥ ೪ ॥

ಅಹಂ ಜಾನಾಮಿ ಯದವೋ ವಿಮಾನೇನ ಕುಶಸ್ಥಲೀಂ ।
ಮಪ್ಪಯಾಚ್ಛ ಗತಾಃ ಪುತ್ರ ಯಥಾ ಸಿಂಹಭಯಾನ್ಮೃಗಾಃ ॥ ೫ ॥

ತಸ್ಮಾದಯಾದವೀಂ ಪೃಥ್ವೀಂ ಕರಿಷ್ಯೇಽಹಂ ನ ಸಂಶಯಃ ।
ಹನಿಷ್ಯಾಮಿ ಯದೂನ್ಸರ್ವಾನ್ ಗತ್ವಾ ಕೃಷ್ಣಸ್ಯ ದ್ವಾರಕಂ ॥ ೬ ॥

॥ ಭೀಷಣ ಉವಾಚ ॥

ಮನ್ಯುಂ ನಿಯಚ್ಛ ಭೋ ರಾಜನ್ನಸ್ಮಾಕಂ ಸಮಯೋ ನ ಹಿ ।
ಪ್ರಸೀದತಿ ಯದಾ ದೇವೋ ತದಾ ಜೇಷ್ಯಾಮ ಯಾದವಾನ್ ॥ ೭ ॥

---

೩. ಸ್ವಲ್ಪ ಸಮಯ ಕಳೆಯಲು ಬಕನು ಮೂರ್ಛೆಯಿಂದ ಎಚ್ಚೆತ್ತನು. ಸುತ್ತಲೂ ನೋಡಿ ಅಲ್ಲಿ ಯಾದವರಿಲ್ಲದಿರಲು ಅತಿಕೋಪದಿಂದ ತನ್ನ ಮಗನಾದ ಭೀಷಣನನ್ನು ಅವರೆಲ್ಲಿ ಹೋದರೆಂದು ಕೇಳಿದನು.

೪. ಆಗ ಭೀಷಣನು ಅಲ್ಲಿ ನಡೆದ ವಿಷಯಗಳನ್ನೆಲ್ಲಾ ತಂದೆಗೆ ವರ್ಣಿಸಿದನು. ಅದನ್ನು ಕೇಳಿ ಬಕನು ಕೋಪದಿಂದ ಇಂತೆಂದನು.

೫-೬. ಅವರು ವಿಮಾನದಲ್ಲಿ ಕುಳಿತು ಏತಕ್ಕೆ ಇಷ್ಟು ಬೇಗ ಹೊರಟು ಹೋದರೆಂದು ನನಗೆ ಗೊತ್ತು. ಸಿಂಹಕ್ಕೆ ಮೃಗಗಳು ಹೆದರಿ ಓಡುವಂತೆ ನನಗೆ ಹೆದರಿ ಯಾದವರು ಓಡಿಹೋಗಿರುವರೇ ವಿನಹ ಮತ್ತೆ ಬೇರೆ ಇಲ್ಲ. ಆದುದರಿಂದ ನಾನೀಗ ದ್ವಾರಕಾವತಿಗೆ ಹೋಗಿ ಯಾದವರನ್ನೆಲ್ಲಾ ಕೊಂದು ಭೂಮಿಯಲ್ಲಿ ಯಾದವರ ಹೆಸರೇ ಇಲ್ಲದಂತೆ ಮಾಡುವೆನು.

೭. ಎಂದು ಹೇಳಿದುದನ್ನು ಕೇಳಿ ಭೀಷಣನು ರಾಜನೇ, ನಿನ್ನ ಕೋಪವನ್ನು ತಡೆ. ಈಗ ನಮಗೆ ಸರಿಯಾದ ಕಾಲವೊದಗಿಲ್ಲ. ಪರಮಾತ್ಮನ ಕೃಪೆಯೊಂದಾಗಲಿ. ಅನಂತರ ನಾವು ಅವರನ್ನು ಗೆಲ್ಲೋಣ' ಎಂದನು.

॥ ಗರ್ಗ ಉವಾಚ ॥

ಬೋಧಿತಸ್ಸೋಽಪಿ ಪುತ್ರೇಣ ತೂಷ್ಣೀಂ ಭೂತ್ವಾ ಬಕಾಸುರಃ ।
ವಿಚಚಾರ ವನೇ ರಾಜನ್ವನಜಂತೂನ್ಪ್ರಭಕ್ಷಯನ್ ॥ ೮ ॥

ತತಸ್ತು ರಂಗಂ ವಿಧಿನಾಭಿಷಿಚ್ಯ
ದಾನಾನಿ ದತ್ವಾ ದ್ವಿಜಪುಂಗವೇಭ್ಯಃ ।
ವಿಮೋಚಯಾಮಾಸ ಪುನರ್ಜಯಾಯ
ಪ್ರದ್ಯುಮ್ನಪುತ್ರೋ ವಿಜಯೀ ನೃಪೇಂದ್ರ ॥ ೯ ॥

ಹಯಸ್ತು ಮುಕ್ತಃ ಕಿಲ ಕಾರ್ಷ್ಣಿರ್ಗಜೇನ
ಸ್ವರಂ ಪ್ರಕುರ್ವನ್ನೃಪ ಧೈವತಂ ಚ ।
ಪಶ್ಯನ್ ಸ ದೇಶಾನ್ ಬಹುವೀರಯುಕ್ತಾನ್
ಭದ್ರಾವತೀಂ ನಾಮ ಪುರೀಂ ಜಗಾಮ ॥ ೧೦ ॥

ತತ್ರ ಭದ್ರಾವತೀಮಶ್ವೋ ನಾನಾಚೋಪವನೈರ್ವೃತಾಂ ।
ಗಿರಿದುರ್ಗೇಣ ರಾಜೇಂದ್ರ ತಥಾ ರಜತಮಂದಿರೈಃ ॥ ೧೧ ॥

---

೮. ಅದನ್ನು ಕೇಳಿ ಬಕಾಸುರನು ಸುಮ್ಮನಾದನು. ಅನಂತರ ಅಲ್ಲಿಂದೆದ್ದು ಕಾಡಿಗೆ ನುಗ್ಗಿ ಸಿಕ್ಕಿದ ಪ್ರಾಣಿಗಳನ್ನು ತಿನ್ನುತ್ತಾ ಸಂಚರಿಸುತ್ತಿದ್ದನು.

೯. ಅನಿರುದ್ಧನು ಭೀಷಣನಿಂದ ಕೊಡಲ್ಪಟ್ಟ ಯಜ್ಞಾಶ್ವಕ್ಕೆ ವಿಧಿಪೂರ್ವಕವಾಗಿ ಅಭಿಷೇಕಮಾಡಿಸಿದನು. ಬ್ರಾಹ್ಮಣರಿಗೆ ದಾನದಕ್ಷಿಣೆಗಳನ್ನು ಕೊಟ್ಟನು. ಪುನಃ ಅದನ್ನು ವಿಜಯಕ್ಕೋಸ್ಕರವಾಗಿ ಅಲ್ಲಿಂದ ಬಿಟ್ಟನು.

೧೦. ಕುದುರೆಯು ಹರ್ಷದಿಂದ ಕೆನೆಯುತ್ತಾ ಅಲ್ಲಿಂದ ಹೊರಟಿತು. ಅನೇಕ ದೇಶಗಳನ್ನು ದಾಟಿತು. ಅನೇಕ ವೀರರನ್ನು ಎದುರಿಸಿತು. ಕೊನೆಗೆ ಭದ್ರಾವತೀ ಎಂಬ ಪಟ್ಟಣಕ್ಕೆ ಬಂದು ನಿಂತಿತು.

೧೧. ಅಲ್ಲಿಗೆ ಬಂದು ಉಪವನಗಳಲ್ಲೆಲ್ಲಾ ಸಂಚರಿಸಿತು. ಆ ಭದ್ರಾವತಿಯಲ್ಲಿ ಅನೇಕ ರಜತ ಭವನಗಳಿದ್ದವು. ಗಿರಿದುರ್ಗಗಳಿಂದ ಆ ಪಟ್ಟಣವು ಶತ್ರುಗಳಿಗಭೇದ್ಯವಾಗಿದ್ದಿತು.

ಮಹಾವೀರಜನೈರ್ಯುಕ್ತಾಂ ಯೌವನಾಶ್ವೇನ ಪಾಲಿತಾಂ ।
ದೃಢಾಂ ಲೋಹಕಪಾಟೈಶ್ಚ ನೃಪಸ್ಯಾಗ್ರೇ ಸ್ಥಿತೋಽಭವತ್ ॥ ೧೨ ॥

ತಂ ಗೃಹೀತ್ವಾ ತು ತಸ್ಯಾಪಿ ವಾರ್ತಾಂ ಜ್ಞಾತ್ವಾ ನೃಪೇಶ್ವರಃ ।
ಯುದ್ಧಂ ಕರ್ತುಂ ಚ ಕುಪಿತೋ ಸಸೈನ್ಯೋ ನಿರ್ಯಯೌ ಪುರಾತ್ ॥ ೧೩ ॥

ಸಸೈನ್ಯಮಾಗತಂ ದೃಷ್ಟ್ವಾ ಯೌವನಾಶ್ವಂ ಮಹಾಬಲಂ ।
ಆಹೂಯ ಮಂತ್ರಿಣಂ ಪ್ರಾಹ ಕೃಷ್ಣಭಕ್ತಂ ಹಿ ಕಾರ್ಷ್ಣಿಜಃ ॥ ೧೪ ॥

॥ ಅನಿರುದ್ಧ ಉವಾಚ ॥

ಕೋಽಯಂ ಸಮಾಗತೋ ಮಂತ್ರಿನ್ ಸಮ್ಮುಖೇ ಸಹ ಸೇನಯಾ ।
ಹಯಹರ್ತಾ ಶತ್ರುಮುಖ್ಯೋ ತತ್ಸರ್ವಂ ಕಥಯಸ್ವ ಚ ॥ ೧೫ ॥

---

೧೨. ಅಲ್ಲಿ ಶೂರರಾದ ಜನರು ವಾಸಿಸುತ್ತಿದ್ದರು. ಆ ಪಟ್ಟಣವನ್ನು ಯೌವನಾಶ್ವನೆಂಬುವನು ಆಳುತ್ತಿದ್ದನು. ದೃಢವಾದ ಕಬ್ಬಿಣದ ಬಾಗಿಲುಗಳಿಂದ ಆ ಊರು ರಕ್ಷಿತವಾಗಿತ್ತು. ಕುದುರೆಯು ಅಂತಹ ಸ್ಥಳಕ್ಕೆ ಹೋಗಿ ರಾಜನ ಸಮೀಪದಲ್ಲಿ ನಿಂತಿತು.

೧೩. ರಾಜನು ಇದರ ವಿಷಯಗಳನ್ನೆಲ್ಲಾ ತಿಳಿದುಕೊಂಡು ಯಜ್ಞಾಶ್ವವನ್ನು ಕಟ್ಟಿಹಾಕಿದನು. ಅನಂತರ ಸೈನ್ಯವನ್ನು ತೆಗೆದುಕೊಂಡು ಅತಿಕೋಪದಿಂದ ಯಾದವರೊಡನೆ ಯುದ್ಧಮಾಡಲು ಹೊರಟನು.

೧೪. ಸೈನ್ಯದೊಡನೆ ಬರುತ್ತಿರುವ ಯೌವನಾಶ್ವನನ್ನು ನೋಡಿ ಅನಿರುದ್ಧನು ಕೃಷ್ಣಭಕ್ತನಾದ ಮಂತ್ರಿ ಉದ್ಧವನನ್ನು ಕರೆದು ಕೇಳಿದನು.

೧೫. ಎಲೈ ಮಂತ್ರಿಯೇ, ನಮ್ಮೆದುರಿಗೆ ಬರುತ್ತಿರುವವನಾರು? ಅವನೇ ನಮ್ಮ ಅಶ್ವವನ್ನು ಅಪಹರಿಸಿರುವವನು. ನಮ್ಮೊಡನೆ ಯುದ್ಧಮಾಡಲು ಸೇನೆಯೊಡನೆ ಬರುತ್ತಿರುವನುಎಂದನು. ಅದಕ್ಕೆ,

|| ಉದ್ಧವ ಉವಾಚ ||

ನೃಪೋಽಯಂ ಯೌವನಾಶ್ವಾಖ್ಯೋ ಮರುಧನ್ವಪತೇಃ ಸುತಃ ।
ಅತ್ರ ರಾಜ್ಯಂ ಚ ಕುರುತೇ ಮೃತೇ ಪಿತರಿ ಸತ್ತಮ || ೧೬ ||

ಅಯಂ ಷೋಡಶವರ್ಷೀಯೋ ಕುಮಂತ್ರಿವಚನಾದ್ರಣಂ ।
ಕರಿಷ್ಯತಿ ಮಹಾರಾಜ ಮಾರಣೀಯಃ ಸ ನ ತ್ವಯಾ || ೧೭ ||

ಇತಿ ಶ್ರುತ್ವಾ ತಥೇತ್ಯುಕ್ತ್ವಾ ಯೌವನಾಶ್ವೇನ ಕಾರ್ಷ್ಣಿಜಃ ।
ಯುದ್ಧಂ ಚಕಾರ ಪ್ರಧನೇ ಯಥಾ ನಾಗೇನ ನಾಗಹಾ || ೧೮ ||

ತಂ ತು ವೈ ವಿರಥಂ ಚಕ್ರೇ ಹತ್ವಾ ಚಾಕ್ಷೌಹಿಣೀತ್ರಯಂ ।
ಪ್ರತ್ಯಾಹ ವಿಮಲಂ ವಾಕ್ಯಂ ಯೌವನಾಶ್ವಮುಷಾಪತಿಃ || ೧೯ ||

---

೧೬. ಉದ್ಧವನು—ಇವನು ಮರುಧನ್ವನೆಂಬ ರಾಜನ ಮಗನು. ಇವನ ಹೆಸರು ಯೌವನಾಶ್ವನೆಂದು. ತಂದೆಯು ಸಾಯಲು ಇವನೇ ರಾಜ್ಯವನ್ನಾಳುತ್ತಿರುವನು.

೧೭. ಇವನಿಗೆ ಈಗ ಹದಿನಾರು ವರ್ಷಗಳು ಮಾತ್ರ. ಇವನು ತನ್ನ ದುರ್ಮಂತ್ರಿಯ ಪ್ರೇರಣೆಯಂತೆ ಯುದ್ಧಮಾಡಲು ಬಂದಿರುವನು. ಆದುದರಿಂದ ಇವನನ್ನು ಕೊಲ್ಲಬೇಡ.

೧೮. ಎಂದು ಹೇಳಲು ಅನಿರುದ್ಧನು ಹಾಗೆಯೇ ಆಗಲೆಂದು ಹೇಳಿ ಆನೆಯೊಡನೆ ಸಿಂಹವು ಯುದ್ಧಮಾಡುವಂತೆ ಯುದ್ಧಮಾಡಿದನು.

೧೯. ಬಾಣವನ್ನು ಪ್ರಯೋಗಿಸಿ ಅವನ ರಥವನ್ನು ಚೂರುಮಾಡಿದನು. ಅವನ ಮೂರು ಅಕ್ಷೌಹಿಣೀ ಸೈನ್ಯವನ್ನೂ ನಾಶಪಡಿಸಿದನು. ಆ ಮೇಲೆ ಯೌವನಾಶ್ವನನ್ನು ಕುರಿತು ಇಂತೆಂದನು.

ರಾಜನ್ ಪ್ರಯಚ್ಛ ತುರಗಂ ಯುದ್ಧಂ ಕುರು ನ ಚೇನ್ಮಯಾ ।
ವಾಕ್ಯಂ ಶ್ರುತ್ವಾ ಹರೇಃ ಪೌತ್ರಂ ಜ್ಞಾತ್ವಾ ರಾಜಾ ಭಯಾನ್ವಿತಃ ॥ ೨೦ ॥

ಅರ್ಪಯಾಮಾಸ ವಿಧಿನಾ ತಸ್ಮೈ ಯಜ್ಞತುರಂಗಮಂ ।
ಭೂತ್ವಾ ಕೃತಾಂಜಲೀ ರಾಜಾ ಪ್ರಾರ್ಥಿತಸ್ತೇನ ಚಾಬ್ರವೀತ್ ॥ ೨೧ ॥

॥ ಯೌವನಾಶ್ವ ಉವಾಚ ॥

ದ್ವಾರಕಾಯಾಂ ಯದಾ ಯಜ್ಞೋ ಭವಿಷ್ಯತಿ ನೃಪೇಶ್ವರ ।
ತದಾಹಂ ಚಾಗಮಿಷ್ಯಾಮಿ ಕೃಷ್ಣಸ್ಯಾಂಘ್ರೀ ವಿಲೋಕಿತುಂ ॥ ೨೨ ॥

ತತಶ್ಚ ಕೃತ್ವಾ ತಂ ರಾಜ್ಯೇ ವಂದಿತಸ್ತೇನ ಕಾರ್ಷ್ಣಿಜಃ ।
ಮುಮೋಚೇ ವಾಜಿನಂ ಶ್ರೇಷ್ಠಂ ವಿಜಯೀ ವಿಜಯಾಯ ಚ ॥ ೨೩ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಏಕವಿಂಶೋಽಧ್ಯಾಯಃ

೨೦-೨೧. ರಾಜನೇ, ಯಜ್ಞಾಶ್ವವನ್ನು ತಂದೊಪ್ಪಿಸು. ಇಲ್ಲದಿದ್ದರೆ ನನ್ನೊಡನೆ ಯುದ್ಧಮಾಡು. ಎಂದು ಹೇಳಲು ಅದನ್ನು ಕೇಳಿ ಯೌವನಾಶ್ವನು ಹೆದರಿದನು. ಆಗ ವಿಧಿಪೂರ್ವಕವಾಗಿ ಯಜ್ಞಾಶ್ವವನ್ನು ತಂದೊಪ್ಪಿಸಿದನು. ಅನಂತರ ಅಂಜಲಿಬದ್ಧನಾಗಿ ಅನಿರುದ್ಧನನ್ನು ಕುರಿತು,

೨೨. ಎಲೈ ನೃಪೇಶ್ವರನೇ, ದ್ವಾರಕೆಯಲ್ಲಿ ಅಶ್ವಮೇಧಯಜ್ಞವು ನಡೆಯುವಾಗ ನಾನು ಬರುವೆನು. ಬಂದು ಶ್ರೀಕೃಷ್ಣನ ಪಾದಗಳ ದರ್ಶನವನ್ನು ತೆಗೆದುಕೊಳ್ಳುವೆನು. ಎಂದು ಪ್ರಾರ್ಥಿಸಲು,

೨೩. ಅನಿರುದ್ಧನು ಯೌವನಾಶ್ವನನ್ನು ಅವನ ರಾಜ್ಯದಲ್ಲೇ ಇರಿಸಿದನು. ಯೌವನಾಶ್ವನು ಯಜ್ಞಾಶ್ವವನ್ನು ತಂದೊಪ್ಪಿಸಲು ವಿಜಯಶಾಲಿಯಾಗಿ ಅನಿರುದ್ಧನು ಅಲ್ಲಿಂದ ಹೊರಟನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಅಶ್ವಮೇದಖಂಡೇ

ದ್ವಾವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಯದಿಪ್ರವೀರಸ್ಯ ತುರಂಗಮೋ ವೈ
ವಿಲೋಕಯನ್ ರಾಜಪುರಂ ಜಗಾಮ ।
ನಿರೀಕ್ಷ್ಯ ಮಾರ್ಗೇ ಸಫರಾಂ ನದೀಂ ಚ
ಹ್ಯವಂತಿಕಾಯಾಂ ವಿಪಿನೇ ಸ್ಥಿತೋಽಭೂತ್ ॥ ೧ ॥

ತದೈವ ತತ್ರಾಗತವಾನ್ಮಹಾತ್ಮಾ
ಸಾಂದೀಪನಿಃ ಕೃಷ್ಣ ಗುರುರ್ದ್ವಿಜೇಂದ್ರಃ ।
ಸ್ನಾತುಂ ಗೃಹಾಚ್ಛ್ರೀತುಲಸೀಸ್ರಜಾಢ್ಯೋ
ಸಧೌತವಸ್ತ್ರಃ ಪ್ರಜಪನ್ಹಿ ಕೃಷ್ಣಂ ॥ ೨ ॥

ಇಪ್ಪತ್ತೆರಡನೆಯ ಅಧ್ಯಾಯವು

೧. ಗರ್ಗನು ಹೇಳಿದನು:—ಎಲೈ ವಜ್ರನಾಭಿಯೇ ಕೇಳು, ಅಲ್ಲಿಂದ ಯಜ್ಞಾಶ್ವವು ಹೊರಟಿತು. ಅನೇಕ ರಾಜರುಗಳ ನಗರಿಗಳನ್ನು ತಲುಪಿ ಅಲ್ಲಿಂದ ಹೊರಟು ದಾರಿಯಲ್ಲಿ ಸಿಕ್ಕಿದ ಸಫರಾ ನದಿಯ ಮೂಲಕವಾಗಿ ಅವಂತಿಕೆಯ ಕಾಡನ್ನು ಪ್ರವೇಶಿಸಿತು.

೨. ಅಲ್ಲಿಗೆ ನದಿಯಲ್ಲಿ ಸ್ನಾನಮಾಡಲು ಕೃಷ್ಣನ ಗುರುವಾದ ಸಾಂದೀಪನೆಂಬುವನು ಬಂದಿದ್ದನು. ಅವನು ಬ್ರಾಹ್ಮಣಶ್ರೇಷ್ಠನು. ಶ್ರೀತುಳಸಿಯ ಹಾರವನ್ನು ಧರಿಸಿದ್ದನು. ಶುಭ್ರವಾದ ಬಟ್ಟೆಗಳನ್ನು ಉಟ್ಟುಕೊಂಡಿದ್ದನು. ಯಾವಾಗಲೂ ಶ್ರೀಕೃಷ್ಣನ ಧ್ಯಾನವನ್ನು ಮಾಡುತ್ತಿದ್ದನು.

ದದರ್ಶ ತತ್ರಾಪಿ ಜಲಂ ಪಿಬಂತಂ
ತುರಂಗಮಂ ವೈ ಧವಲಂ ಸಪತ್ರಂ ।
ವಾಕ್ಯಂ ಬ್ರುವನ್ನೇಷ ಕ್ರತೋಶ್ಚ ವಾಜೀ
ವಿಮೋಚಿತಃ ಕೇನ ನೃಪೇಶ್ವರೇಣ ॥ ೩ ॥

ತತ್ರ ಸ್ನಾನಂ ಪ್ರಕುರ್ವಂತಂ ದೃಷ್ಟ್ವಾ ಬಿಂದುಂ ನೃಪಾತ್ಮಜಂ ।
ಹಯಸ್ಯಾರ್ಥೇ ಮುನಿರ್ಗತ್ವಾ ನೋದಯಾಮಾಸ ತಂ ನೃಪಂ ॥ ೪ ॥

ತತಸ್ಸ ವೀರೈರ್ಬಹುಭಿಶ್ಚ ರಾಜನ್
ರಾಜಾಧಿದೇವೀತನಯಶ್ಚ ಶೂರಃ ।
ಜಗ್ರಾಹ ವಾಹಂ ಸಹಸಾ ನಿರೀಕ್ಷ್ಯ
ನತ್ವಾ ಗುರುಂ ತದ್ವಚಸಾ ಪ್ರಸನ್ನಃ ॥ ೫ ॥

ಹಯಂ ಗೃಹೀತ್ವಾ ಗುರವೇ ದರ್ಶಯಾಮಾಸ ಹರ್ಷಿತಃ ।
ಸಪತ್ರಂ ವಾಚಯಿತ್ವಾಹ ನೃಪಂ ಸಾಂದೀಪನಿರ್ಮುದಾ ॥ ೬ ॥

---

೩. ನದಿಯಲ್ಲಿ ನೀರು ಕುಡಿಯುತ್ತಿರುವ ಅಶ್ವವು ಅವನ ಕಣ್ಣಿಗೆ ಬಿದ್ದಿತು. ಅದರ ಹಣೆಯಲ್ಲಿ ಸುವರ್ಣಪತ್ರವಿರುವುದನ್ನು ದೂರದಿಂದ ನೋಡಿ ಇದು ಯಜ್ಞಾಶ್ವವು. ಯಾವ ರಾಜನು ಇದನ್ನು ಬಿಟ್ಟಿರಬಹುದು ಎಂದು ಯೋಚಿಸಿದನು.

೪. ಹತ್ತಿರದಲ್ಲಿಯೇ ಸ್ನಾನಮಾಡುತ್ತಿದ್ದ ರಾಜಕುಮಾರ ಬಿಂದುವನ್ನು ಕುರಿತು ಯಾವುದೋ ಯಜ್ಞಾಶ್ವವು ಬಂದಿದೆ ಎಂದು ಅದನ್ನು ಹಿಡಿಯಲು ಸೂಚಿಸಿದನು.

೫. ಆಗ ರಾಜಕುಮಾರನು ಈ ವಿಷಯವನ್ನು ತಿಳಿಸಿದುದಕ್ಕೆ ಸಾಂದೀಪನನ್ನು ಅಭಿನಂದಿಸಿ ಶೂರರಾದ ಸೈನಿಕರನ್ನು ಕರೆತಂದು ಅದನ್ನು ಹಿಡಿಸಿದನು.

೬. ಕುದುರೆಯನ್ನು ತಂದು ಗುರು ಸಾಂದೀಪನಿಗೆ ತೋರಿಸಿದನು. ಗುರುವು ಅದರ ಹಣೆಯಲ್ಲಿರುವ ಪತ್ರವನ್ನು ಓದಿ ಅವನನ್ನು ಕುರಿತು ಇಂತೆಂದನು.

|| ಸಾಂದೀಪನಿರುವಾಚ ||

ಉಗ್ರಸೇನಸ್ಯ ತುರಗಂ ವಿದ್ಧಿ ಪ್ರಾದ್ಯುಮ್ನಿಪಾಲಿತಂ ।
ಯದೃಚ್ಛಯೋಗತಂ ರಾಜನ್ ಕಾರ್ಷ್ಣಿರ್ಜೋಽತ್ರಾಗಮಿಷ್ಯತಿ || ೭ ||

ಆಗಮಿಷ್ಯಂತಿ ಬಹವೋ ಯಾದವಾ ಯುದ್ಧಶಾಲಿನಃ ।
ಮಿತ್ರವಿಂದಾತ್ಮಜಾಶ್ಚೈವ ಪಶ್ಯಂತಸ್ತೇ ತುರಂಗಮಂ || ೮ ||

ಪೂಜನೀಯಾಸ್ತ್ವಯಾ ಸರ್ವೇ ಕೃಷ್ಣಚಂದ್ರಸ್ಯ ನಂದನಾಃ ।
ಮದ್ವಾಕ್ಯಾದ್ಯುದ್ಧಬುದ್ಧಿಂ ತ್ವಂ ತ್ಯಕ್ತ್ವಾ ದೇಹಿ ತುರಂಗಮಂ || ೯ ||

ಇತಿ ಶ್ರುತ್ವಾ ಗುರೋರ್ವಾಕ್ಯಂ ಧನ್ವೀ ಶೂರೋ ನೃಪಾತ್ಮಜಃ ।
ಹಯಂ ನೇತುಂ ಮನೋ ಯಸ್ಯ ತತ್ರ ತೂಷ್ಣೀಂ ಬಭೂವ ಹ || ೧೦ ||

ತದೈವ ಯದುಸೇನಾಯಾಃ ಶಬ್ದೋಽಭೂಲ್ಲೋಕಮಾನಹಾ ।
ಮಹಾನಾದಂ ದುಂದುಭೀನಾಂ ಟಂಕಾರಂ ಧನುಷಾಂ ತಥಾ || ೧೧ ||

೭-೮. ರಾಜನೇ, ಇದು ಉಗ್ರಸೇನನ ಯಜ್ಞಾಶ್ವವು. ಇದರ ರಕ್ಷಣೆಗೆ ಅನಿರುದ್ಧನು ಬಂದಿರುವನು. ಅಕಸ್ಮಾತ್ತಾಗಿ ಇದು ಇತ್ತಕಡೆ ಬಂದಿದೆ. ಇನ್ನೇನು ಅನಿರುದ್ಧನು ಅದನ್ನು ಹುಡುಕುತ್ತಾ ಯುದ್ಧಶೂರರಾದ ಯಾದವರೊಡನೆ ಬರುವನು. ಮಿತ್ರವೃಂದನ ಮಕ್ಕಳೆಲ್ಲರೂ ಅವನ ಜೊತೆಯಲ್ಲಿಯೇ ಬರುವರು.

೯. ನೀನೀಗ ನನ್ನ ಮಾತನ್ನು ಕೇಳು. ಅವರು ಬಂದ ಕೂಡಲೇ ಅವರನ್ನು ಪೂಜಿಸು. ಯುದ್ಧಮಾಡಬೇಕೆಂಬ ಆಸೆಯನ್ನು ಕಿತ್ತೊಗೆದು ಯಜ್ಞಾಶ್ವವನ್ನು ಅವರಿಗೆ ಒಪ್ಪಿಸು ಎಂದನು.

೧೦. ಗುರುವಿನ ಮಾತನ್ನು ಕೇಳಿ ಬಿಂದುವು ಕುದುರೆಯು ನಿಂತ ಜಾಗಕ್ಕೆ ಅದನ್ನು ಬಿಟ್ಟುಬರಬೇಕೆಂದು ಮನಸ್ಸುಮಾಡಿ ಸುಮ್ಮನೇ ನಿಂತಿರಲು.

೧೧. ಅಷ್ಟರಲ್ಲಿಯೇ ಯದುಸೈನ್ಯವು ಬರುತ್ತಿರುವ ಶಬ್ದವು ಕೇಳಿಸಿತು. ದುಂದುಭಿಗಳ ಮಹಾನಾದವೂ, ಧನುಸ್ಸುಗಳ ಟಂಕಾರವೂ ಕೇಳತೊಡಗಿತು.

ಚೀತ್ಕಾರಂ ದಂತಿನಾಂ ಚೈವ ಹಯಾನಾಂ ಹೇಷಣಂ ತಥಾ ।
ಝುಣತ್ಕಾರಂ ರಥಾನಾಂ ಚ ವೀರಾಣಾಂ ಗರ್ಜನಂ ತಥಾ ॥ ೧೨ ॥

ಶತಘ್ನೀನಾಂ ಮಹಾಶಬ್ದಂ ಲೋಕಾನಾಂ ಭಯದಾಯಕಂ ।
ಶ್ರುತ್ವಾ ರಾಜಕುಮಾರಸ್ತು ವಿಸ್ಮಯಂ ಪರಮಂ ಗತಃ ॥ ೧೩ ॥

ತತಸ್ಸಮಾಗತಾಸ್ಸರ್ವೇ ರಥಿಭಿಶ್ಚ ಗಜೈರ್ಹಯೈಃ ।
ಭೋಜವೃಷ್ಣಂಧಕಮಧುಶೂರಸೇನದಶಾರ್ಹಕಾಃ ॥ ೧೪ ॥

ರಜೋಭಿಶ್ಚ ನಭೋ ವ್ಯಾಪ್ತಂ ಕುರ್ವಂತಶ್ಚಾಲಯನ್ಮಹೀಂ ।
ಕೇನ ನೀತಃ ಕುತ್ರ ಗತೋ ಹಯಸ್ಸರ್ವೇ ಬ್ರುವನ್ವಚಃ ॥ ೧೫ ॥

ತತಶ್ಚ ದದೃಶುಸ್ಸರ್ವೇ ಘೋಟಕಂ ಬದ್ಧಚಾಮರಂ ।
ಮಹಾದ್ಭುತೇ ಚೋಪವನೇ ಪುಷ್ಪಿತದ್ರುಮಸಂಕುಲೇ ॥ ೧೬ ॥

---

೧೨. ಆನೆಗಳ ಚೀತ್ಕಾರವೂ, ಕುದುರೆಗಳ ಹೇಷಾರವವೂ, ರಥಗಳ ಝುಣತ್ಕಾರವೂ, ವೀರರ ಗರ್ಜನೆಯೂ, ಶತಘ್ನಿಗಳ ಮಹಾಶಬ್ದವೂ ಭಯಂಕರವಾಗಿ ಕೇಳಿಬರುತ್ತಿತ್ತು.

೧೩-೧೪. ಅದನ್ನು ಕೇಳಿ ವಿಸ್ಮಯಗೊಂಡನು. ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ ಮುಂತಾದ ಯಾದವರೆಲ್ಲರೂ ರಥಗಳ ಮೇಲೂ, ಗಜಗಳ ಮೇಲೂ, ಕುದುರೆಗಳ ಮೇಲೂ ಕುಳಿತು ಜಾಗ್ರತೆಯಾಗಿ ಬಂದರು.

೧೫. ವಾಹನಗಳು ಓಡಿಬರುವಾಗ ಎದ್ದ ಧೂಳಿನಿಂದ ಆಕಾಶವೆಲ್ಲವೂ ತುಂಬಿ ಹೋಗಿತ್ತು. ಭೂಮಿಯು ನಡುಗಹತ್ತಿತು. ನಮ್ಮ ಕುದುರೆಯನ್ನು ಯಾರು ತೆಗೆದುಕೊಂಡರು ? ಎಲ್ಲಿಗೆ ಹೋಗಿರುವುದು ? ಎಂದೆನ್ನುತ್ತಾ ಅವರೆಲ್ಲರೂ ಅಲ್ಲಿಗೆ ಬಂದಿಳಿದರು.

೧೬. ಅತ್ತಿತ್ತ ಹುಡುಕಿದ ಮೇಲೆ ಒಂದು ಉದ್ಯಾನದಲ್ಲಿ ಹೂವಿನ ಮರದ ಕೆಳಭಾಗದಲ್ಲಿ ಕಟ್ಟಿಹಾಕಿರುವ ಯಜ್ಞಾಶ್ವವು ಕಂಡಿತು.

ಗೃಹೀತಂ ಲೀಲಯಾ ತತ್ರ ನೃಪಪುತ್ರೇಣ ಬಿಂದುನಾ ।
ದೃಷ್ಟ್ವಾನಿರುದ್ಧಂ ನಿಕಟೇ ಗತ್ವಾ ಸರ್ವೇ ಹ್ಯವರ್ಣಯನ್ ॥ ೧೭ ॥

ಇತಿ ಶ್ರುತ್ವಾನಿರುದ್ಧಸ್ತು ವಿಸ್ಮಿತಃ ಪ್ರಹಸನ್ನೃಪ ।
ಉದ್ಧವಂ ಪ್ರೇಷಯಾಮಾಸ ಬಿಂದೋಃ ಪಾರ್ಶ್ವೇ ಚ ಧರ್ಮವಿತ್ ॥ ೧೮ ॥

ತತಃ ಪುರ್ಯಾಂ ಮಹಾರಾಜ ಚಾಸೀತ್ಕೋಲಾಹಲೋ ಮಹಾನ್ ।
ಭಯಭೀತಾ ಜನಾಸ್ಸರ್ವೇ ಸೇನಾಂ ವೀಕ್ಷ್ಯ ಭಯಂಕರಾಂ ॥ ೧೯ ॥

ಅಥ ವೈ ಭ್ರಾತರಂ ದ್ರಷ್ಟುಂ ಹ್ಯನುಬಿಂದುರ್ಭಯಾನ್ವಿತಃ ।
ಕೋಟಿವೀರಗಣೈಃ ಸಾರ್ಧಂ ಸ್ವಪುರ್ಯಾ ನಿರ್ಯಯೌ ಬಹಿಃ ॥ ೨೦ ॥

ದೃಷ್ಟ್ವಾ ಯಜ್ಞಹಯಂ ತತ್ರ ಸಪತ್ರಂ ಚ ಪಯಃಪ್ರಭಂ ।
ಭ್ರಾತ್ರಾ ಗೃಹೀತಂ ಚ ಭಯಾನ್ನಿಷೇಧಂ ಸ ಚಕಾರ ಹ ॥ ೨೧ ॥

---

೧೭. ಅಲ್ಲಿದ್ದ ಎಲ್ಲರೂ ಅನಿರುದ್ಧನ ಸಮೀಪಕ್ಕೆ ಬಂದು ರಾಜಕುಮಾರ ಬಿಂದುವು ತಮಾಷೆಗಾಗಿ ಇದನ್ನು ಬಂಧಿಸಿರುವನು ಎಂದು ಹೇಳಿದನು.

೧೮. ಅದನ್ನು ಕೇಳಿ ಅನಿರುದ್ಧನು ಆಶ್ಚರ್ಯಪಟ್ಟು ನಕ್ಕನು. ಆಮೇಲೆ ಉದ್ಧವನನ್ನು ಬಿಂದುವಿನ ಹತ್ತಿರಕ್ಕೆ ಕಳುಹಿಸಿಕೊಟ್ಟನು.

೧೯. ಅಷ್ಟು ಹೊತ್ತಿಗೆ ಸೈನ್ಯವು ಊರಹೊರಗೆ ಬಂದು ನಿಂತಿರುವುದನ್ನು ತಿಳಿದು ಪಟ್ಟಣದ ಜನರೆಲ್ಲರೂ ಭಯಭೀತರಾದರು. ಎಲ್ಲೆಲ್ಲೂ ಕೋಲಾಹಲ ವೆದ್ದಿತು.

೨೦. ಆಗ ಬಿಂದುವಿನ ತಮ್ಮನಾದ ಅನುಬಿಂದುವೆಂಬುವನು ಭಯಗೊಂಡು ತನ್ನ ಅಣ್ಣನನ್ನು ಸಮಾಧಾನಪಡಿಸಲು ಒಂದು ಕೋಟಿ ಯೋಧರನ್ನು ತೆಗೆದು ಕೊಂಡು ಪಟ್ಟಣದಿಂದ ಹೊರಕ್ಕೆ ಬಂದನು.

೨೧. ಅಲ್ಲಿ ಬಿಳುಪಾದ ಕುದುರೆಯನ್ನು ತನ್ನ ಅಣ್ಣನು ಹಿಡಿದು ನಿಂತಿರು ವುದನ್ನು ನೋಡಿದನು. ಅದರ ಹಣೆಯಲ್ಲಿರುವ ಪತ್ರವನ್ನು ನೋಡಿ ಇದನ್ನು ಹಿಡಿದುಕೊಳ್ಳಬೇಡವೆಂದು ಬಿಂದುವನ್ನು ತಡೆದನು.

॥ ಅನುಬಿಂದುರುವಾಚ ॥

ಯದೂನಾಂ ಕೃಷ್ಣ ದೇವಾನಾಂ ಭ್ರಾತರ್ನೋಽಚಯ ಘೋಟಕಂ ।
ಸಂಬಂಧಸ್ಯ ವಿಶೇಷಣಾಪಿ ಕುಲಕೌಶಲಹೇತವೇ ॥ ೨೨ ॥

ಯಾದವಾನಾಂ ಬಲಂ ಪಶ್ಯ ದೇವದೈತ್ಯನರಾಸುರಾಃ ।
ಪುರಾ ಯಜ್ಞೇ ರಾಜಸೂಯೇ ಸರ್ವೇ ಭ್ರಾತರ್ವಿನಿರ್ಜಿತಾಃ ॥ ೨೩ ॥

ಇತಿ ತದ್ವಾಕ್ಯಮಾಕರ್ಣ್ಯ ಬಿಂದುರ್ಜ್ಯೇಷ್ಠೋಽವಧರ್ಷಿತಃ ।
ಆಗತಂ ಹ್ಯುದ್ಧವಂ ದೃಷ್ಟ್ವಾ ಹಯಸ್ಥಂ ಪ್ರತ್ಯುವಾಚ ಹ ॥ ೨೪ ॥

॥ ಬಿಂದುರುವಾಚ ॥

ಮಯಾ ಗೃಹೀತಸ್ತುರಗೋ ಮಿತ್ರಾಣಾಂ ಮಿಲನಾಯ ಚ ।
ತಸ್ಮಾನ್ನಿಮಂತ್ರಿತಾಸ್ಸರ್ವೇ ಸ್ಥಿತಿಂ ಕುರುತ ಚಾತ್ರ ವೈ ॥ ೨೫ ॥

೨೨-೨೩. ತಮ್ಮನೇ, ಇದು ಯಾದವರ ಯಜ್ಞಾಶ್ವವು. ಶ್ರೀಕೃಷ್ಣನ ಅಭಿಪ್ರಾಯದಂತೆ ಕುದುರೆಯನ್ನು ಬಿಟ್ಟಿರುವರು. ತಮ್ಮ ಕುಲದ ಉತ್ಕೃಷ್ಟತೆಗೂ ಪರಸ್ಪರ ರಾಜರುಗಳ ಸಂಬಂಧವನ್ನು ಪಡೆಯಲೂ ಇದನ್ನು ಬಿಟ್ಟಿರುವರು. ಇವರೇನು ಸಾಮಾನ್ಯದವರಲ್ಲ. ಹಿಂದೆ ರಾಜಸೂಯಯಾಗ ಮಾಡಿದಾಗ ಬಿಟ್ಟ ಯಜ್ಞಾಶ್ವವನ್ನು ಹಿಡಿದು ದೇವಾಸುರರೂ ಸೋತುಹೋದರು. ಆದುದರಿಂದ ಇದನ್ನು ಅವರಿಗೆ ಒಪ್ಪಿಸಿಬಿಡು.

೨೪. ಎಂದು ಹೇಳಲು ಜ್ಯೇಷ್ಠನಾದ ಬಿಂದುವು ಕುದುರೆಯ ಮೇಲೆ ಕುಳಿತು ತನ್ನ ಹತ್ತಿರಕ್ಕೆ ಬಂದ ಉದ್ಧವನನ್ನು ನೋಡಿ ಅವನನ್ನು ಕುರಿತು,

೨೫. ನಾನು ಮಿತ್ರರಾದ ನಿಮ್ಮೊಡನೆ ಸಹಕರಿಸಲು ಕುದುರೆಯನ್ನು ಹಿಡಿದುಕೊಂಡಿರುವೆನು. ಆದುದರಿಂದ ನೀವೆಲ್ಲರೂ ಇಲ್ಲಿಯೇ ಇದ್ದು ಮುಂದಕ್ಕೆ ಹೊರಡಿರಿ. ಎಂದು ಹೇಳಿದನು.

ಇತಿ ಶ್ರುತ್ವೋದ್ಧವೋ ರಾಜನ್ ಬಿಂದುಂ ಸಂಶ್ಲಾಘ್ಯ ಹರ್ಷಿತಃ ।
ಅನಿರುದ್ಧಸ್ಯ ನಿಕಟೇ ಗತ್ವಾ ಸರ್ವಮುವಾಚ ಹ ॥ ೨೬ ॥

ಶ್ರುತ್ವಾನಿರುದ್ಧಸ್ತದ್ವಾಕ್ಯಂ ಭೂತ್ವಾ ರಾಜನ್ ಪ್ರಸಾದಧೀಃ ।
ಸೇನಯಾಽವಂತಿಕಾಯಾಂ ಚ ನದೀತೀರೇಽವಸತ್ಕಿಲ ॥ ೨೭ ॥

ಅನೇಕಾಃ ಶಿಬಿರಾ ರಾಜನ್ ತತ್ರೈವ ದಶಯೋಜನೇ ।
ನಾನಾವರ್ಣಾಃ ಸಕಲಶಾ ಹ್ಯಭೂವನ್ನದ್ಭುತಾಃ ಶುಭಾಃ ॥ ೨೮ ॥

ಭಕ್ಷ್ಯಂ ಭೋಜ್ಯಂ ಚ ಲೇಹ್ಯಂ ಚ ಚೋಷ್ಯಮೇತೈಶ್ಚ ಭೋಜನೈಃ ।
ಆಗತೇಭ್ಯಶ್ಚ ಸರ್ವೇಭ್ಯೋ ಬಿಂದುರರ್ಹಣಮಾಹರತ್ ॥ ೨೯ ॥

ತಥಾ ಚೈವ ತೃಣಾನ್ನಾದೀನ್ ಪಶುಭ್ಯೋ ದತ್ತವಾನ್ನೃಪಃ ।
ಈದೃಗ್ವಿಧಂ ಚ ಸತ್ಕಾರಂ ವೃಷ್ಣೀನಾಂ ಸ ಚಕಾರ ಹ ॥ ೩೦ ॥

ನೃಪೋ ರಾಜಾಧಿದೇವೀ ಚ ದ್ವೌ ತಥಾ ನೃಪನಂದನೌ ।
ಭೃಶಂ ಮುಮುದಿರೇ ಸರ್ವೇ ವೀಕ್ಷ್ಯ ಸರ್ವಾನ್ ಹರೇಃ ಸುತಾನ್ ॥ ೩೧ ॥

೨೬–೨೭. ಅನಂತರ ಉದ್ಧವನು ಈ ವಿಷಯವನ್ನು ಅನಿರುದ್ಧನಿಗೆ ತಿಳಿಸಿದನು. ಬಿಂದುವನ್ನು ಹೊಗಳಿ ಸಂತೋಷಪಟ್ಟನು. ಅನಿರುದ್ಧನೂ ಸಂತೋಷಪಟ್ಟು ಅವನ ಮಾತನ್ನು ಮಾನಿಸಿ ಅವಂತಿಕೆಯ ನದಿಯ ತೀರದಲ್ಲಿಯೇ ತನ್ನ ಸೇನೆಯೊಡನೆ ಅಂದು ವಾಸಿಸಿದನು.

೨೮. ನದೀತೀರದಲ್ಲಿ ಹತ್ತುಯೋಜನಗಳವರೆಗೂ ಬಣ್ಣಬಣ್ಣವಾಗಿ ಗುಡಾರಗಳನ್ನು ನಿರ್ಮಿಸಿ ವಾಸಿಸಿದರು. ಅವುಗಳ ಮೇಲೆಲ್ಲಾ ಕಲಶಗಳಿದ್ದು ಅದ್ಭುತವಾಗಿ ಕಾಣಿಸುತ್ತಿತ್ತು.

೨೯–೩೦. ಬಿಂದುವು ಅವರಿಗೆಲ್ಲಾ ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ ಮುಂತಾದುವುಗಳಿಂದ ಸತ್ಕರಿಸಿದನು. ಕುದುರೆ, ಆನೆ ಮುಂತಾದ ವಾಹನಗಳಿಗೆ ಹುಲ್ಲು, ಅನ್ನ ಮುಂತಾದುವುಗಳ ವ್ಯವಸ್ಥೆಯನ್ನು ಮಾಡಿದನು. ಅನಿರುದ್ಧಾದಿಗಳಿಗೆ ವಿಶೇಷ ಸತ್ಕಾರವನ್ನು ಮಾಡಿ ಅವರನ್ನು ಸಂತೋಷಪಡಿಸಿದನು.

೩೧. ರಾಜನೂ ಮತ್ತು ರಾಣಿಯೂ, ಬಿಂದು, ಅನುಬಿಂದು ಇವರೂ ಅಲ್ಲಿಗೆ ಬಂದು ಶ್ರೀಕೃಷ್ಣನ ಮಕ್ಕಳನ್ನೆಲ್ಲರನ್ನೂ ನೋಡಿ ಅತಿಸಂತೋಷಗೊಂಡರು.

ತತೋ ನಿಶಾಯಾಂ ಕಿಲ ಕಾರ್ಷ್ಣಿಪುತ್ರೋ
ವಿದ್ಯಾಗುರುಂ ತು ಸ್ವಪಿತಾಮಹಸ್ಯ ।
ಆಹೂಯ ಸತ್ವಾಸನಮೇವ ದತ್ವಾ
ಪ್ರತ್ಯಾಹ ಕೃತ್ವಾ ವರಪೂಜನಂ ಚ ॥ ೩೨ ॥

ಭಗವನ್ ದ್ವಾರಕಾಯಾಂ ಚ ಕೃಷ್ಣವಾಕ್ಯಾತ್ಕ್ರತೂತ್ತಮಂ ।
ಕರೋತಿ ಹಯಮೇಧಾಖ್ಯಂ ಚಕ್ರವರ್ತೀ ಯದೂತ್ತಮಃ ॥ ೩೩ ॥

ತಸ್ಮಿನ್ ಕ್ರತುವರೇ ಬ್ರಹ್ಮನ್ ಕೃಪಾಂ ಕೃತ್ವಾ ಮಮೋಪರಿ ।
ತ್ವಂ ತು ಗಚ್ಛ ಮುನಿಶ್ರೇಷ್ಠ ಪುತ್ರೇಣ ಚ ಸಮನ್ವಿತಃ ॥ ೩೪ ॥

ಅನಿರುದ್ಧಸ್ಯ ವಚನಂ ಶ್ರುತ್ವಾ ಸಾಂದೀಪನಿರ್ಮುನಿಃ ।
ಕೃಷ್ಣದರ್ಶನಕಾಂಕ್ಷೀ ಚ ಚಲಿತುಂ ಸ ಮನೋ ದಧೇ ॥ ೩೫ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ದ್ವಾವಿಂಶೋಽಧ್ಯಾಯಃ

---

೩೨. ಅಂದಿನ ರಾತ್ರಿಯಲ್ಲಿ ಅನಿರುದ್ಧನು ತನ್ನ ತಾತನಾದ ಶ್ರೀಕೃಷ್ಣನ ಗುರು ಸಾಂದೀಪನಿಯನ್ನು ಕರೆಸಿದನು. ಆಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾದಿಗಳಿಂದ ಅವನನ್ನು ಪೂಜಿಸಿ ಇಂತೆಂದನು.

೩೩–೩೪. ಭಗವನ್, ದ್ವಾರಕೆಯಲ್ಲಿ ಉಗ್ರಸೇನಚಕ್ರವರ್ತಿಯು ಶ್ರೀಕೃಷ್ಣನ ಮಾತಿನಂತೆ ಅಶ್ವಮೇಧಯಜ್ಞವನ್ನು ಮಾಡಲಿರುವನು. ಆದುದರಿಂದ ನೀವು ನನ್ನಲ್ಲಿ ಕರುಣೆ ಇಟ್ಟು ನಿಮ್ಮ ಮಗನೊಡನೆ ಆ ಯಜ್ಞಕ್ಕೆ ದಯಮಾಡಿಸಿರಿ.

೩೫. ಎಂದು ಹೇಳಲು ಅದನ್ನು ಕೇಳಿ ಸಾಂದೀಪನಿ ಋಷಿಯು ಶ್ರೀಕೃಷ್ಣನ ದರ್ಶನ ಸಿಗುವುದೆಂಬ ಆಸೆಯಿಂದ ದ್ವಾರಕೆಗೆ ಹೋಗಲು ಒಡಂಬಟ್ಟನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತೆರಡನೆಯ
ಅಧ್ಯಾಯವು ಮುಗಿದುದು.

--॥ ಶ್ರೀ ॥--

--॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥--

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ತ್ರಯೋವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ಸಾಂದೀಪನಿಂ ತತ್ರ ಕೃಷ್ಣಪೌತ್ರೋಽಬ್ರವೀದ್ವಚಃ ।
ಸ್ಮೃತ್ವಾ ತು ಕಿಂಚಿತ್ಸಂದೇಹಂ ಗುರುಂ ವೃದ್ಧಶ್ರವಾ ಇವ ॥ ೧ ॥

॥ ಅನಿರುದ್ಧ ಉವಾಚ ॥

ಭಗವನ್ ಬ್ರೂಹಿ ಮೇ ಸಾರಂ ಯೇನಾನಂದೇ ರಮಾಮ್ಯಹಂ ।
ವಿಹಾಯ ಚಾಸ್ಯ ಜಗತಃ ಸುಖಾನ್ ಸ್ವಪ್ನೋಪಮಾನ್ಮನೇ ॥ ೨ ॥

ಇಪ್ಪತ್ತಮೂರನೆಯ ಅಧ್ಯಾಯವು

೧. ಗರ್ಗನು ಹೇಳಿದನು:—ಎಲೈ ವಜ್ರನಾಭಿಯೇ, ಕೇಳು. ಅನಿರುದ್ಧನು ಯಾವುದೋ ಸಂಶಯಗ್ರಸ್ತನಾಗಿ ಅದನ್ನು ಪರಿಹರಿಸಿಕೊಳ್ಳಲು, ಇಂದ್ರನು ಬೃಹಸ್ಪತಿಯನ್ನು ಕೇಳುವಂತೆ ಸಾಂದೀಪನಿಯನ್ನು ಕೇಳಿದನು.

೨. ಭಗವನ್, ಜಗತ್ತಿನಲ್ಲಿ ಅನುಭವಿಸುತ್ತಿರುವ ಸುಖಗಳೆಲ್ಲವೂ ಸ್ವಪ್ನದಂತೆ ಅನಿತ್ಯವಾದವುಗಳು. ಇವುಗಳಿಂದ ನಿಜವಾದ ಆನಂದವುಂಟಾಗಲಾರದು. ಆದುದರಿಂದ ಈ ಪ್ರಾಪಂಚಿಕ ಸುಖಗಳನ್ನು ಬಿಟ್ಟು ಬೇರೆ ಸುಖಗಳಿದ್ದರೆ ಅದರ ಸಾರವನ್ನು ನನಗುಪದೇಶಿಸು. ಅದರಿಂದ ನಾನು ಆನಂದಪಡುವಂತಾಗಲಿ.

ಇತೀರಿತೋಽನಿರುದ್ಧೇನ ರಾಜನ್ ಸಾಂದೀಪನಿರ್ಮುನಿಃ ।
ಪ್ರತ್ಯಾಹ ಪ್ರಹಸನ್ಪ್ರೀತ್ಯಾ ಕುಮಾರಃ ಪೃಥುನಾ ಯಥಾ ॥ ೩ ॥

॥ ಸಾಂದೀಪನಿರುವಾಚ ॥

ಆದಿದೇವಸ್ತ್ವಮೇವಾಸೀಚ್ಛ್ರೀಹರೇರ್ನಾಭಿಪಂಕಜಾತ್ ।
ತಸ್ಮಾತ್ತವಾಗ್ರೇ ಲೋಕೇಶ ಕಥಯಿಷ್ಯಾಮಿ ಕಿಂ ತ್ವಹಂ ॥ ೪ ॥

ತಥಾಪಿ ವರ್ಣಯಿಷ್ಯಾಮಿ ರಾಜನ್ ತ್ವದ್ವಾಕ್ಯಗೌರವಾತ್ ।
ಕಲ್ಯಾಣಾರ್ಥಂ ನರಾಣಾಂ ಚ ಸರ್ವೇಷಾಂ ದೀನಚೇತಸಾಂ ॥ ೫ ॥

ತ್ವಯಾ ಪೃಷ್ಟಂ ಚ ಯದ್ರಾಜನ್ ತಚ್ಛೃಣುಷ್ವ ಮುಖಾನ್ಮಮ ।
ಕೃಷ್ಣಚಂದ್ರಸ್ಯ ಪದಯೋಃ ಸಾರಮಸ್ತಿ ಹಿ ಸೇವನಂ ॥ ೬ ॥

ಯಯೋಃ ಪೂಜನಮಾತ್ರೇಣ ಧ್ರುವೋ ಧ್ರುವಪದಂ ವ್ರಜೇತ್ ।
ಪ್ರಹ್ಲಾದಶ್ಚಾಂಬರೀಷಶ್ಚ ಗಯಶ್ಚೈವ ಯದುಸ್ತಥಾ ॥ ೭ ॥

---

೩. ಎಂದು ಹೇಳಲು ಸಾಂದೀಪನಿಯು ಸಂತೋಷದಿಂದ ನಗುತ್ತಾ; ಅನಿರುದ್ಧನನ್ನು ಕುರಿತು ಇಂತೆಂದನು.

೪-೫. ನೀನು ಆದಿದೇವನಾದ ಬ್ರಹ್ಮನು. ಪರಮಾತ್ಮನ ನಾಭಿಕಮಲದಿಂದ ಹುಟ್ಟಿರುವವನು. ಲೋಕಾಧಿಪತಿಯು. ಇಂತಹ ನಿನಗೆ ನಾನೇನನ್ನು ತಾನೆ ಹೇಳಲು ಸಮರ್ಥನಾದೇನು. ಆದರೂ ನಿನ್ನ ಮಾತನ್ನು ಮೀರಬಾರದೆಂಬ ದೃಷ್ಟಿಯಿಂದಲೂ, ದೀನಮಾನವರಿಗೆ ಕಲ್ಯಾಣವುಂಟಾಗುವುದಕ್ಕೋಸ್ಕರಲೂ ಹೇಳುವೆನು.

೬-೭. ನೀನು ನನ್ನನ್ನು ಕೇಳಿದ ತತ್ವವು ಯಾವುದೆಂದರೆ ಶ್ರೀಕೃಷ್ಣನ ಪಾದಗಳನ್ನು ಸೇವಿಸುವುದೇ ಆ ಸಾರವು. ಆ ಪರಮಾತ್ಮನ ಪಾವಸೇವೆಯಿಂದಲೇ ಧ್ರುವನು ಶಾಶ್ವತವಾದ ಸ್ಥಾನವನ್ನು ಪಡೆದನು. ಪ್ರಹ್ಲಾದ, ಅಂಬರೀಷ, ಗಯ, ಯದು ಮುಂತಾದವರೂ ಪರಮಾತ್ಮನ ಪಾದವನ್ನು ಭಜಿಸಿ ಉತ್ತಮಗತಿಯನ್ನು ಹೊಂದಿದರು.

ತಸ್ಮಾತ್ತ್ವಮಪಿ ರಾಜೇಂದ್ರ ಶ್ರೀಕೃಷ್ಣಸ್ಯ ಚ ಸೇವನಂ ।
ಸರ್ವೇಷಾಂ ಸಾರರೂಪಂ ಯನ್ಮನಸಾ ಕುರು ಯತ್ನತಃ ॥ ೮ ॥

ಯೂಯಂ ಲೋಕೇ ಭೂರಿಭಾಗಾಃ ಶ್ರೀಕೃಷ್ಣಸ್ಯ ಚ ವಂಶಜಾಃ ।
ಜ್ಞಾತಿಸಂಬಂಧಿನಶ್ಚೈವ ಜೀವನ್ಮುಕ್ತಾ ಹರಿಪ್ರಿಯಾಃ ॥ ೯ ॥

ಕೇಚಿಜ್ಜಾನಂತಿ ಶ್ರೀಕೃಷ್ಣಂ ತನಯಂ ಕೇಽಪಿ ಭ್ರಾತರಂ ।
ಪಿತರಂ ಕೇಽಪಿ ಮಿತ್ರಂ ಚ ಕಿಂ ಕರ್ತವ್ಯಂ ಪರಂ ಚ ತೈಃ ॥ ೧೦ ॥

॥ ಅನಿರುದ್ಧ ಉವಾಚ ॥

ಕಃ ಕರ್ತಾ ಚಾಸ್ಯ ಜಗತ ಆದಿರೂಪಃ ಸನಾತನಃ ।
ಯಸ್ಮಾದಾಸೀತ್ ಪೂರ್ವಮಿದಂ ತನ್ಮೇ ವರ್ಣಯ ವಿಸ್ತರಾತ್ ॥ ೧೧ ॥

---

೮. ಆದುದರಿಂದ ನೀನೂ ಸಹ ಶ್ರೀಕೃಷ್ಣನ ಪಾದಕಮಲಗಳನ್ನು ಭಜಿಸು. ಎಲ್ಲದಕ್ಕೂ ಸಾರರೂಪವಾದುದೇ ಅದು. ಅದನ್ನು ಮನಸ್ಸಿನಿಂದ ಚೆನ್ನಾಗಿ ಸ್ಮರಿಸಿ ಪೂಜಿಸು.

೯. ಶ್ರೀಕೃಷ್ಣನ ವಂಶದಲ್ಲಿ ಹುಟ್ಟಿರುವ ನೀವೆಲ್ಲರೂ ಲೋಕದಲ್ಲಿ ಅತಿ ಶ್ರೇಷ್ಠರು. ಶ್ರೀಕೃಷ್ಣನ ಜ್ಞಾತಿಗಳೂ, ಸಂಬಂಧಿಗಳೂ, ಪ್ರಿಯರೂ ಇವರೆಲ್ಲರೂ ಜೀವನ್ಮುಕ್ತರಲ್ಲವೆ?

೧೦. ಕೆಲವರು ಶ್ರೀಕೃಷ್ಣನನ್ನು ತಿಳಿದಿರುವರು. ಕೆಲವರು ಅವನ ಮಕ್ಕಳನ್ನು ನೋಡಿರುವರು. ಮತ್ತೆ ಕೆಲವರು ಅವನ ಸಹೋದರರನ್ನೂ, ಇನ್ನೂ ಕೆಲವರು ಅವನ ತಂದೆಯನ್ನೂ ಬೇರೆ ಕೆಲವರು ಅವನ ಸ್ನೇಹಿತನನ್ನೂ ತಿಳಿದಿರುವರು. ಆದರೆ ಅವರೆಲ್ಲರೂ ಮಾಡುತ್ತಿರುವುದು ತಾನೇ ಏನು?

೧೧. ಅನಿರುದ್ಧನು ಪುನಃ ಸಾಂದೀಪನಿಯನ್ನು ಪ್ರಶ್ನಿಸಿದನು:—ಈ ಜಗತ್ತಿಗೆ ಕಾರಣನು ಯಾರು? ಆದಿರೂಪನೂ, ಚಿರಂತನನೂ ಎಂದು ಯಾರನ್ನು ಕರೆಯುವರು? ಈ ಜಗತ್ತು ಪ್ರಳಯಕ್ಕೆ ಪೂರ್ವದಲ್ಲಿ ಯಾವ ರೀತಿ ಇದ್ದಿತು? ಇವೆಲ್ಲವನ್ನೂ ನನಗೆ ವಿಸ್ತಾರವಾಗಿ ತಿಳಿಸು.

ಕೇನ ಕೇನಾಪಿ ರೂಪೇಣ ಭಗವಾನ್ ಜಗದೀಶ್ವರಃ ।
ಯುಗೇ ಯುಗೇ ಮುನೇ ಧರ್ಮಂ ಕರೋತೀತಿ ವದಸ್ವ ನಃ ॥ ೧೨ ॥

॥ ಸಾಂದೀಪನಿರುವಾಚ ॥

ಉತ್ಪತ್ತಿಶ್ಚ ನಿರೋಧಶ್ಚ ಯಸ್ಮಾದಾಸೀದ್ಯದೂದ್ವಹ ।
ಸ ಈಶ್ವರಃ ಪರಬ್ರಹ್ಮ ಭಗವಾನೇಕ ಏವ ಚ ॥ ೧೩ ॥

ಯುಗೇ ಯುಗೇ ಭವಂತ್ಯೇತೇ ದಕ್ಷಾದ್ಯಾ ನೃಪಸತ್ತಮ ।
ಪುನಶ್ಚೈವ ನಿರುದ್ಧಂತೇ ವಿದ್ವಾಂಸ್ತತ್ರ ನ ಮುಹ್ಯತಿ ॥ ೧೪ ॥

ರಾಜನ್ ಕೃಷ್ಣಃ ಪರಂ ಬ್ರಹ್ಮ ಯತಃ ಸರ್ವಮಿದಂ ಜಗತ್ ।
ಜಗಚ್ಚ ಯೋ ಯತ್ರ ಚೇದಂ ಯಸ್ಮಿಂಶ್ಚ ಲಯಮೇಷ್ಯತಿ ॥ ೧೫ ॥

---

೧೨. ಜಗದೀಶ್ವರನಾದ ಆ ಪರಮಾತ್ಮನು ಯಾವ ಯಾವ ರೂಪವನ್ನು ಧರಿಸಿ ಪ್ರತಿಯುಗದಲ್ಲಿಯೂ ಧರ್ಮೋದ್ಧಾರವನ್ನು ಮಾಡಲಿರುವನು? ಅದನ್ನು ಹೇಳು.

೧೩. ಎನ್ನಲು ಆಗ ಸಾಂದೀಪನಿಯು ಹೇಳಿದನು :—ಸೃಷ್ಟಿ, ಪ್ರಳಯಗಳು ಯಾವನಿಂದ ನಡೆಯುವುದೋ ಅವನೇ ಈಶ್ವರನು. ಪರಬ್ರಹ್ಮನೆಂಬುವನೂ ಅವನೇ, ಸ್ವತಂತ್ರನಾದ ಭಗವಂತನೂ ಅವನೇ;

೧೪. ಪ್ರತಿಯೊಂದು ಯುಗದಲ್ಲಿಯೂ ದಕ್ಷನೇ ಮೊದಲಾದವರು ಹುಟ್ಟುವರು. ಕಾಲಕ್ರಮವಾಗಿ ಅವರು ಸಾಯುವರು. ಆದರೆ ಪರಮಾತ್ಮನು ಮಾತ್ರ ನಾಶಹೊಂದುವುದಿಲ್ಲವು.

೧೫. ರಾಜನೇ, ಶ್ರೀಕೃಷ್ಣನೇ ಪರಬ್ರಹ್ಮಸ್ವರೂಪನು. ಅವನಿಂದಲೇ ಜಗತ್ತೆಲ್ಲವೂ ಇರುವುದು. ಅದರ ರಕ್ಷಣೆಯೂ ಅವನಿಗೇ ಸೇರಿದೆ. ಅದರ ಲಯವೂ ಅವನಲ್ಲಿಯೇ ಆಗುವುದು.

ತದ್ಬ್ರಹ್ಮ ಪರಮಂ ಧಾಮ ಸದಸತ್ಪರಮಂ ಪದಂ ।
ಯಸ್ಯ ಸರ್ವಮಭೇದೇನ ಜಗದೇತಚ್ಚರಾಚರಂ ॥ ೧೬ ॥

ಸ ಏವ ಮೂಲಪ್ರಕೃತಿರ್ವ್ಯಕ್ತರೂಪೀ ಜಗಚ್ಚ ಸಃ ।
ತಸ್ಮಿನ್ನೇವ ಲಯಂ ಸರ್ವಂ ಯಾತಿ ತತ್ರೈವ ತಿಷ್ಠತಿ ॥ ೧೭ ॥

ಯತಃ ಪ್ರಧಾನಪುರುಷೌ ಯತಶ್ಚೈತಚ್ಚರಾಚರಂ ।
ಕಾರಣಂ ಸಕಲಸ್ಯಾಸ್ಯ ಸ ನೋ ಕೃಷ್ಣಃ ಪ್ರಸೀದತು ॥ ೧೮ ॥

ಚತುರ್ಯುಗೇಽಪ್ಯಸೌ ವಿಷ್ಣುಃ ಸ್ಥಿತಿವ್ಯಾಪಾರಲಕ್ಷಣಃ ।
ಯುಗವ್ಯವಸ್ಥಾಂ ಕುರುತೇ ಯಥಾ ರಾಜೇಂದ್ರ ತಚ್ಛೃಣು ॥ ೧೯ ॥

ಕೃತೇ ಯುಗೇ ಪರಂ ಜ್ಞಾನಂ ಕಪಿಲಾದಿಸ್ವರೂಪಧೃಕ್ ।
ದದಾತಿ ಸರ್ವಭೂತಾತ್ಮಾ ಸರ್ವಭೂತಹಿತೇ ರತಃ ॥ ೨೦ ॥

---

೧೬. ಆ ಬ್ರಹ್ಮಸ್ವರೂಪನಾದ ಶ್ರೀಕೃಷ್ಣನೇ ಉತ್ತಮವಾದ ಸ್ಥಾನವು. ಅವನ ಸನ್ನಿಧಿಯೇ ಸದಸತ್ಸ್ವರೂಪವಾದ ಗತಿಯು. ಚರಾಚರಾತ್ಮಕವಾದ ಈ ಜಗತ್ತು ಅವನ ದೃಷ್ಟಿಯಲ್ಲಿ ಒಂದೇ ಸಮನಾಗಿ ಕಾಣಿಸುವುದು.

೧೭. ಅವನೇ ಮೂಲಪ್ರಕೃತಿಯು. ಮೂಲಪ್ರಕೃತಿಯಿಂದ ನಿರ್ಮಿತವಾದ ಸ್ಪಷ್ಟವಾಗಿ ಕಾಣುತ್ತಿರುವ ಜಗತ್ಸ್ವರೂಪನೂ ಅವನೇ. ಪುರುಷನೂ ಅವನೇ. ಅವನಲ್ಲೇ ಜಗತ್ತು ಇರುವುದು. ಲೀನವಾಗುವುದೂ ಅವನಲ್ಲಿಯೇ.

೧೮. ಪ್ರಕೃತಿ ಮತ್ತು ಪುರುಷಸ್ವರೂಪನು ಆ ಕೃಷ್ಣನು ಚರಾಚರಾತ್ಮಕವಾದ ಜಗತ್ಸ್ವರೂಪನೂ ಅವನೇ. ಸಕಲಕ್ಕೂ ಕಾರಣನು ಕೃಷ್ಣನು. ಅಂತಹ ಶ್ರೀ ಕೃಷ್ಣಪರಮಾತ್ಮನು ನನಗೆ ಪ್ರಸನ್ನನಾಗಲಿ.

೧೯. ಸ್ಥಿತಿ ವ್ಯಾಪಾರಸ್ವರೂಪನಾದ ಆ ವಿಷ್ಣುವು ನಾಲ್ಕು ಯುಗಗಳಲ್ಲಿಯೂ ಯುಗವ್ಯವಸ್ಥೆಯನ್ನು ನಿರ್ಮಿಸುವನು. ಅದನ್ನು ಹೇಳುವೆನು ಕೇಳು.

೨೦. ಕೃತಯುಗದಲ್ಲಿ ಕಪಿಲಮಹರ್ಷಿಯಾಗಿ ಅವತರಿಸಿ ಶ್ರೇಷ್ಠವಾದ ಜ್ಞಾನವನ್ನುಪದೇಶಿಸಿದನು. ಸರ್ವಭೂತಾತ್ಮನಾದ ಅವನು ಸರ್ವಪ್ರಾಣಿಗಳ ರಕ್ಷಣೆಯಲ್ಲಿ ಬದ್ಧಾದರನಾಗಿದ್ದನು.

ಚಕ್ರವರ್ತಿಸ್ವರೂಪೇಣ ತ್ರೇತಾಯಾಮಪಿ ಸ ಪ್ರಭುಃ ।
ದುಷ್ಟಾನಾಂ ನಿಗ್ರಹಂ ಕುರ್ವನ್ ಪರಿಪಾತಿ ಜಗತ್ತ್ರಯಂ ॥ ೨೧ ॥

ವೇದಮೇಕಂ ಚತುರ್ಭೇದಂ ಕೃತ್ವಾ ಸ ಶತಧಾ ವಿಭುಃ ।
ಕರೋತಿ ಬಹುಲಂ ಭೂಯೋ ವೇದವ್ಯಾಸಸ್ವರೂಪಧೃಕ್ ॥ ೨೨ ॥

ವೇದಾಶ್ಚ ದ್ವಾಪರೇ ಯಸ್ಯ ಕಲೇರಂತೇ ಪುನರ್ಹರಿಃ ।
ಕಲ್ಕಿಸ್ವರೂಪೀ ದುರ್ವೃತ್ತಾನ್ ಮಾರ್ಗೇ ಸ್ಥಾಪಯತಿ ಪ್ರಭುಃ ॥ ೨೩ ॥

ಏವಂ ಕೃಷ್ಣೋ ಜಗತ್ಸರ್ವಂ ಜಗತ್ಪಾತಿ ಕರೋತಿ ಚ ।
ಹಂತಿ ಚಾಂತೇಷ್ವನಂತಾತ್ಮಾ ನಾನ್ಯಸ್ಮಾದ್ವ್ಯತಿರೇಕತಃ ॥ ೨೪ ॥

ನಮೋಽಸ್ತು ಹರಯೇ ತಸ್ಮೈ ಯಸ್ಯ ಭಿನ್ನಮಿದಂ ಜಗತ್ ।
ಧ್ಯೇಯಃ ಸ ಜಗತಾದಾದ್ಯಃ ಸ ಪ್ರಸೀದತು ಮೇಽವ್ಯಯಃ ॥ ೨೫ ॥

---

೨೧. ತ್ರೇತಾಯುಗದಲ್ಲಿ ಚಕ್ರವರ್ತಿಯಾಗಿ (ರಾಮನಾಗಿ) ಅವತರಿಸಿ ದುಷ್ಟರನ್ನೆಲ್ಲಾ (ರಾವಣಾದಿಗಳನ್ನು) ನಾಶಮಾಡಿ ಮೂರುಲೋಕವನ್ನೂ ಕಾಪಾಡುವನು.

೨೨. ದ್ವಾಪರದಲ್ಲಿ ವ್ಯಾಪಕನಾದ ಆ ಪರಮಪುರುಷನು ವೇದವ್ಯಾಸನಾಗಿ ಅವತರಿಸಿ ಏಕಾಕಾರವಾಗಿದ್ದ ವೇದವನ್ನು ನಾಲ್ಕು ಭಾಗಗಳನ್ನಾಗಿ ಮಾಡಿದನು. ಮತ್ತು ನೂರಾರು ಶಾಖೆಗಳನ್ನಾಗಿ ವಿಂಗಡಿಸಿದನು.

೨೩. ಕಲಿಯುಗದಲ್ಲಿ ಕಲ್ಕಿಸ್ವರೂಪವನ್ನು ಧರಿಸಿ ದುಷ್ಟರನ್ನೆಲ್ಲಾ ನಾಶಪಡಿಸುವನು. ಪುನಃ ಧರ್ಮವನ್ನು ಸ್ಥಾಪಿಸುವನು.

೨೪. ಈ ರೀತಿಯಾಗಿ ಕೃಷ್ಣನು ಜಗತ್ತೆಲ್ಲವನ್ನೂ ವ್ಯವಸ್ಥೆಯಿಂದ ಕಾಪಾಡುವನು. ಅದನ್ನು ನಿರ್ಮಿಸುವವನೂ ಅವನೇ. ಅವನಿಂದಲೇ ಅದರ ನಾಶವೂ ಆಗುವುದು. ಅನಂತಸ್ವರೂಪಿಯಾದ ಅವನನ್ನು ಮೀರಿಸುವರಾರೂ ಇಲ್ಲವು.

೨೫. ಅಂತಹ ಹರಿಗೆ ನಮಸ್ಕಾರವು. ಅವನಿಂದ ಜಗತ್ತು ವಿಭಾಗಿಸಲ್ಪಟ್ಟಿರುವುದು. ಆದಿಪುರುಷನವನು. ಧ್ಯಾನಗೋಚರನು. ನಾಶರಹಿತನು. ಇಂತಹ ಶ್ರೀಕೃಷ್ಣನು ನನ್ನನ್ನು ಕರುಣಿಸಲಿ.

ತಸ್ಮಾನ್ನೃಪೇಂದ್ರ ಹರಿಪೌತ್ರ ಮನೋಮಯಂ ಚ
ಸರ್ವಂ ವಿಹಾಯ ಜಗತಶ್ಚ ಸುಖಂ ಚ ದುಃಖಂ ।
ಮೋಕ್ಷಪ್ರದಂ ಸುರವರಂ ಕಿಲ ಸರ್ವದಂ ತ್ವಂ
ದ್ವಾರಾವತೀನರಪತಿಂ ಭಜ ಕೃಷ್ಣಚಂದ್ರಂ ॥ ೨೬ ॥

ಇತಿ ಕೃಷ್ಣಸ್ಯ ಹರೇಶ್ಚ ವೃತ್ತಸಾರಂ
ಕಥಯತಿ ಯಶ್ಚ ಶೃಣೋತಿ ಭಕ್ತಿಯುಕ್ತಃ ।
ಸವಿಮಲಮತಿರೇತಿ ನಾತ್ಮಮೋಹಂ
ಭವತಿ ಚ ಸಂಸ್ಮರಣೇಷು ಭಕ್ತಿಯೋಗ್ಯಃ ॥ ೨೭ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ತ್ರಯೋವಿಂಶೋಽಧ್ಯಾಯಃ

---

೨೬. ಎಲೈ ರಾಜನೇ, ನೀನು ಹರಿಯ ಮೊಮ್ಮಗನು. ಆದುದರಿಂದ ನೀನೀಗ ಮನಸ್ಸಿನಲ್ಲಿರುವ ಕಲ್ಮಷಗಳನ್ನೆಲ್ಲಾ ದೂರಮಾಡಿ. ಪ್ರಾಪಂಚಿಕ ಸುಖದುಃಖಗಳನ್ನು ತ್ಯಜಿಸಿ ದ್ವಾರಕಾಧಿಪತಿಯಾದ ಶ್ರೀಕೃಷ್ಣಚಂದ್ರನನ್ನು ಸರ್ವದಾ ಭಜಿಸು. ಅವನು ಮೋಕ್ಷವನ್ನು ಕೊಡುವನು. ಭಕ್ತರ ಅಭೀಷ್ಟಗಳನ್ನೆಲ್ಲಾ ನೆರವೇರಿಸುವನು.

೨೭. ಯಾರು ಕೃಷ್ಣನ ಭಕ್ತಿಸಾರವನ್ನು ಹೇಳುವರೋ ಹಾಗೂ ಭಕ್ತಿಯಿಂದ ಕೇಳುವರೋ ಅವರು ಆತ್ಮಾಭಿಮಾನದಿಂದ ದೂರವಾಗಿ ಶುದ್ಧಚಿತ್ತರಾಗುವರು. ಮತ್ತು ಶ್ರೀಕೃಷ್ಣನನ್ನು ಸ್ಮರಣೆಮಾಡುತ್ತಾ ಭಕ್ತಿಯಿಂದ ತುಂಬಿದವರಾಗುವರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತಮೂರನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಚತುರ್ವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಇತೀದಂ ವಚನಂ ಶ್ರುತ್ವಾನಿರುದ್ಧಸ್ತು ಮುದಾನ್ವಿತಃ ।
ನಿವೇಶ್ಯ ಕೃಷ್ಣಪದಯೋಃ ಸ್ವಮನಃ ಪ್ರಾಹ ತಂ ಮುನಿಂ ॥ ೧ ॥

ಗತಃ ಶತ್ರುಶ್ಚ ಮೇ ಮೋಹಃ ತ್ವದ್ವಾಕ್ಯೇನಾಸಿನಾ ವಿಭೋ ।
ಅದ್ಯ ತ್ವಂ ಗಚ್ಛ ಕೃಷ್ಣಸ್ಯ ಪುರೀಂ ಪುತ್ರೇಣ ಸಂಯುತಃ ॥ ೨ ॥

ತಸ್ಯ ವಾಕ್ಯಂ ಸಮಾಕರ್ಣ್ಯ ಮುದಾ ಸಾಂದೀಪನಿರ್ಮುನಿಃ ।
ಕೃಷ್ಣದತ್ತೇನ ಪುತ್ರೇಣ ರಥಸ್ಥೋ ದ್ವಾರಕಾಂ ಯಯೌ ॥ ೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಸಾಂದೀಪನಿಯ ತತ್ವವನ್ನು ಕೇಳಿ ಅನಿರುದ್ಧನು ಆನಂದಪಟ್ಟನು ಅಂತೆಯೇ ತನ್ನ ಮನಸ್ಸನ್ನು ಶ್ರೀಕೃಷ್ಣನ ಪಾದಕಮಲಗಳಲ್ಲಿ ಲೀನಮಾಡಿ ಆ ಮುನಿಯನ್ನು ಕುರಿತು ಇಂತೆಂದನು.

೨. ಮುನಿಯೇ, ನಿನ್ನ ತತ್ವೋಪದೇಶವೆಂಬ ಕತ್ತಿಯಿಂದ ನನ್ನಲ್ಲಿ ಆಶ್ರಯವಾಗಿದ್ದ ಮೋಹವೆಂಬ ಶತ್ರುವು ನಾಶವಾದನು. ಈಗ ನೀನು ನಿನ್ನ ಪುತ್ರನನ್ನೂ ಕರೆದುಕೊಂಡು ದ್ವಾರಕೆಗೆ ಹೊರಡು.

೩. ಎಂದು ಹೇಳಿದುದನ್ನು ಕೇಳಿ ಸಾಂದೀಪನಿಯು ಸಂತೋಷಗೊಂಡನು. ಅನಂತರ ಕೃಷ್ಣನ ಅನುಗ್ರಹದಿಂದ ದೊರೆತ ತನ್ನ ಪುತ್ರನೊಡನೆ ರಥದಲ್ಲಿ ಕುಳಿತು ದ್ವಾರಕೆಗೆ ಹೊರಟನು.

ಸುಪುರ್ಯಾಂ ರಾಮಕೃಷ್ಣಾಭ್ಯಾಮಾದರೇಣ ನಿವಾಸಿತಃ ।
ಪೂಜಿತೋ ಯಾದವೈಸ್ಸರ್ವೈರ್ಭೋಜೇಂದ್ರೇಣ ವಿಧಾನತಃ ॥ ४ ॥

ಅಥ ಪ್ರದ್ಯುಮ್ನತನಯೋ ಶ್ಯಾಮಕರ್ಣಂ ಮಹೋಜ್ಜ್ವಲಂ ।
ಸ್ವರ್ಣಶೃಂಖಲಯಾ ಬದ್ಧಂ ಮುಮೋಚ ವಿಜಯಾಯ ಚ ॥ ೫ ॥

ಹಯಶ್ಚ ಶೀಘ್ರಂ ಪ್ರವ್ರಜನ್ನೃಪೇಂದ್ರ
ಸುರಂ ಬ್ರುವನ್ರಾಜಪುರೇ ಗತಶ್ಚ ಸಃ ।
ಯಾತ್ರಾನುಶಾಲ್ವೋ ನೃಪತಿಶ್ಚ ರಾಜ್ಯಂ
ಶ್ಯಾಲ್ವಸ್ಯ ಭ್ರಾತಾ ಕುರುತೇ ಚ ನಿತ್ಯಂ ॥ ೬ ॥

ತತ್ರ ವೈ ತುರಗಂ ಪ್ರಾಪ್ತಮನುಶಾಲ್ವೋ ಯದೃಚ್ಛಯಾ ।
ಗೃಹೀತ್ವಾ ವಾಚಯಾಮಾಸ ತತ್ಪತ್ರಂ ಚ ಪ್ರಹರ್ಷಿತಃ ॥ ೭ ॥

ಅಭಿಪ್ರಾಯಂ ನಿರೀಕ್ಷ್ಯೈವ ತಿರಶ್ಚೀನೇನ ಚಕ್ಷುಷಾ ।
ಸ್ವಸೈನಿಕಾನ್ಪ್ರತ್ಯುವಾಚ ರುಷಾ ಪ್ರಸ್ಫುರಿತಾಧರಃ ॥ ೮ ॥

---

೪. ದ್ವಾರಕೆಗೆ ಮುನಿಯು ಹೋದನಂತರ ರಾಮಕೃಷ್ಣರು ಅವನನ್ನು ಸ್ವಾಗತಿಸಿದರು. ಆದರರಿಂದ ಅಲ್ಲಿಯೇ ಇರಿಸಿಕೊಂಡರು. ಭೋಜ, ಇಂದ್ರ ಮುಂತಾದ ಯಾದವರೂ ಅವನನ್ನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದರು.

೫. ಇತ್ತ ಅನಿರುದ್ಧನು ಚಿನ್ನದ ಸರಪಳಿಗಳಿಂದ ಬಂಧಿತವಾಗಿರುವ ಮನೋಹರವಾದ ಆ ಯಜ್ಞಾಶ್ವವನ್ನು ವಿಜಯ ಯಾತ್ರೆಗೋಸ್ಕರವಾಗಿ ಪುನಃ ಅಲ್ಲಿಂದ ಬಿಟ್ಟನು.

೬. ಕುದುರೆಯು ಅಲ್ಲಿಂದ ಹೊರಟು ರಾಜಪುರವೆಂಬ ನಗರಕ್ಕೆ ಹೋಯಿತು. ಆ ರಾಜ್ಯವನ್ನು ಶಾಲ್ವನ ಸಹೋದರನಾದ ಅನುಶಾಲ್ವನೆಂಬುವನು ಆಳುತ್ತಿದ್ದನು.

೭-೮. ಅವನು ಅಲ್ಲಿಗೆ ಬಂದ ಕುದುರೆಯನ್ನು ನೋಡಿ ಅದನ್ನು ಹಿಡಿದುಕೊಂಡನು. ಇದರ ಲಲಾಟದಲ್ಲಿರುವ ಸುವರ್ಣಪತ್ರವನ್ನು ಓದಿ ಸಂತೋಷಗೊಂಡನು. ಅದರ ಅಭಿಪ್ರಾಯವನ್ನು ತಿಳಿದುಕೊಂಡು ಕುದುರೆಯನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಾ ತನ್ನ ಸೈನಿಕರನ್ನು ಕುರಿತು ಅತಿ ಕೋಪದಿಂದ ಹೇಳಿದನು.

ದಿಷ್ಟ್ಯಾ ದಿಷ್ಟ್ಯಾ ಶತ್ರವೋ ಮೇ ಸರ್ವೇ ಚಾತ್ರ ಸಮಾಗತಾಃ ।
ಘಾತಯಿಷ್ಯಾಮಿ ತಾನ್ಸರ್ವಾನ್ ಯೈರ್ಮೇ ಭ್ರಾತಾ ಚ ಮಾರಿತಃ ॥ ೯ ॥

ಇತ್ಯುಕ್ತ್ವಾ ಸೇನಯಾ ಯುಕ್ತೋ ನಿಶ್ಚಕ್ರಾಮ ಪುರಾದ್ಬಹಿಃ ।
ಅಕ್ಷೌಹಿಣೀಭಿರ್ದಶಭಿಸ್ತೃಣೀಕೃತ್ಯ ತು ಯಾದವಾನ್ ॥ ೧೦ ॥

ತದೈವ ವೃಷ್ಣಯಸ್ಸರ್ವೇ ದೃಷ್ಟ್ವಾ ಸೇನಾಂ ಸಮಾಗತಾಂ ।
ಬಾಣವರ್ಷಾಂ ಪ್ರಮುಂಚಂತೀಂ ಮುಮುಚುಸ್ತೇ ಶರಾಶ್ಚ ವೈ ॥ ೧೧ ॥

ಉಭಯೋಸ್ಸೇನಯೋರ್ಯುದ್ಧಂ ತತಃ ಸಮಭವನ್ಮೃಧೇ ।
ಖಡ್ಗೈರ್ಬಾಣೈರ್ಗದಾಭಿಶ್ಚ ಶಕ್ತಿಭಿರ್ಭಿಂದಿಪಾಲಕೈಃ ॥ ೧೨ ॥

ಪಲಾಯಮಾನಾಂ ಸ್ವಾಂ ಸೇನಾಮನುಶಾಲ್ವೋ ಮಹಾಬಲಃ ।
ನಾರಯಿತ್ವಾ ನದನ್ಯುದ್ಧೇ ಚಾಜಗಾಮ ರಥೇನ ವೈ ॥ ೧೩ ॥

---

೯. ಓಹೋ ! ಸಂತೋಷಸುದ್ದಿ ; ನನ್ನ ಶತ್ರುಗಳೆಲ್ಲರೂ ಬರಲಿರುವರೀಗ ಅವರೆಲ್ಲರನ್ನೂ ನಾಶಮಾಡಿಬಿಡುವೆನು. ನನ್ನ ಸಹೋದರನನ್ನೂ ಕೊಂದ ಅವರು ಅದಕ್ಕೆ ಪ್ರತಿಫಲವನ್ನೀಗ ಅನುಭವಿಸುವರು.

೧೦. ಎಂದು ಕೂಗಾಡುತ್ತಾ ಹತ್ತು ಅಕ್ಷೌಹಿಣೀಸೇನೆಯನ್ನು ತೆಗೆದು ಕೊಂಡು ಯಾದವರನ್ನು ತೃಣೀಕರಿಸಿ ನಗರಿಯಿಂದ ಹೊರಹೊರಟನು.

೧೧. ಆ ಸೇನೆಯು ಬಂದುದನ್ನು ನೋಡಿ ಯಾದವರೆಲ್ಲರೂ ಆ ಸೇನೆಯ ಮೇಲೆ ಬಾಣಗಳ ಮಳೆಯನ್ನು ಕರೆಯಲು ಪ್ರಾರಂಭಿಸಿದರು.

೧೨. ಎರಡು ಪಕ್ಷದವರಿಗೂ ಯುದ್ಧವು ಪ್ರಾರಂಭವಾಯಿತು. ಖಡ್ಗ, ಬಾಣ, ಗದೆ, ಶಕ್ತಿ ಭಿಂದಿಪಾಲ ಮುಂತಾದುವುಗಳಿಂದ ಪರಸ್ಪರ ಹೊಡದಾಡಲು ಪ್ರಾರಂಭಿಸಿದರು.

೧೩. ಅನುಶಾಲ್ವನ ಸೈನಿಕರೆಲ್ಲರೂ ರಣರಂಗದಿಂದ ಓಡಲು ಪ್ರಾರಂಭಿಸಿದರು. ಅದನ್ನು ನೋಡಿ ಮಹಾಬಲಶಾಲಿಯಾದ ಅನುಶಾಲ್ವನು ರಣನಿನಾದವನ್ನು ಮಾಡುತ್ತಾ ರಥದಲ್ಲಿ ಕುಳಿತು ರಂಗಕ್ಕೆ ಬಂದನು.

ತಮಾಗತಂ ವಿಲೋಕ್ಯಾಥ ದೀಪ್ತಿಮಾನ್ಕೃಷ್ಣನಂದನಃ ।
ತೇನ ಸಾರ್ಧಂ ರಣಂ ಕರ್ತುಂ ತದೈವ ಸಂಮುಖೋಽಭವತ್ ॥ ೧೪ ॥

ದೀಪ್ತಿಮಂತಂ ರಣೇ ವೀಕ್ಷ್ಯ ಧನುಷಾ ದಶಭಿಃ ಶರೈಃ ।
ತತಾಡಾಮರ್ಷಿತಃ ಸೋಽಪಿ ದ್ವಿಪಂ ದ್ವೀಪೀ ನಖೈರಿವ ॥ ೧೫ ॥

ತಾಡಿತಸ್ತೈಃ ಶರೌಘೈಸ್ತು ರುಧಿರಾಕ್ತಬಾಹುನಾ ।
ನೀತ್ವಾ ಶರಾಸನಂ ಸದ್ಯೋ ಬಾಣಾನ್ ಜಗ್ರಾಹ ರೋಷತಃ ॥ ೧೬ ॥

ನಿಧಾಯ ಕಿಲ ಕೋದಂಡೇ ದಶಬಾಣಾನ್ಮುಮೋಚ ಹ ।
ತೇ ಶರಾಸ್ತಚ್ಛರೀರಂ ವೈ ಭಿತ್ವಾ ರಾಜನ್ ಬಹಿರ್ಗತಾಃ ॥ ೧೭ ॥

ಯಥಾ ತೃಣಗೃಹಂ ರಾಜನ್ ಸಹಸಾ ಪನ್ನಗಾಶನಾಃ ।
ತೈರ್ಬಾಣೈರ್ನಿಹತೋ ಯುದ್ಧೇಽನುಶಾಲ್ವೋ ಮೂರ್ಛಿತೋಽಭವತ್ ॥

---

೧೪. ಅನುಶಾಲ್ವನು ಬಂದುದನ್ನು ಕೃಷ್ಣನ ಮಕ್ಕಳಲ್ಲಿ ಒಬ್ಬನಾದ ದೀಪ್ತಿಮಾನನು ನೋಡಿ ಅತಿ ಕುಪಿತನಾಗಿ ಅವನೊಡನೆ ಯುದ್ಧಮಾಡಲು ಅವನನ್ನು ಎದುರಿಸಿದನು.

೧೫. ಆಗ ಅನುಶಾಲ್ವನು ಹತ್ತು ಬಾಣಗಳನ್ನು ಹೂಡಿ ಸಿಂಹವು ಆನೆಯನ್ನು ತನ್ನ ಉಗುರುಗಳಿಂದ ಹೊಡೆಯುವಂತೆ ಸಿಟ್ಟಿನಿಂದ ದೀಪ್ತಿಮಂತನನ್ನು ಹೊಡೆದನು.

೧೬. ಅವುಗಳ ಏಟಿನಿಂದ ಬಾಹುಗಳೆಲ್ಲವೂ ಗಾಯವಾಗಿ ರಕ್ತಸುರಿಯಲು ಪ್ರಾರಂಭಿಸಿತು. ಆಗ ಧನುಸ್ಸನ್ನು ಕೈಗೆ ತೆಗೆದುಕೊಂಡು ಬಾಣಗಳನ್ನು ಸಿದ್ಧಪಡಿಸಿಕೊಂಡನು.

೧೭. ಹತ್ತು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಅನುಶಾಲ್ವನ ಮೇಲೆ ಪ್ರಯೋಗಿಸಿದನು. ಆ ಬಾಣಗಳು ಅವನ ಶರೀರವನ್ನು ಭೇದಿಸಿಕೊಂಡು ಹೊರಗೆ ಹೊರಟವು.

೧೮. ಗರುಡನು ಹುಲ್ಲಿನ ಗುಡಿಸಲುಗಳನ್ನು ಭೇದಿಸುವಂತೆ ಬಾಣಗಳು ಅವನ ಶರೀರವನ್ನು ಭೇದಿಸಲು ಅನುಶಾಲ್ವನು ಮೂರ್ಛಿತನಾದನು.

ತತಸ್ತತ್ಸೈನಿಕಾಸ್ಸರ್ವೇ ರುಷಾ ಪ್ರಸ್ಫುರಿತಾಧರಾಃ ।
ದೀಪ್ತಿಮಂತಂ ರಣೇ ಜಘ್ನುಶ್ಚಿತ್ರಶಸ್ತ್ರೈಃ ಶರೈರಪಿ ॥ ೧೯ ॥

ತತ್ರಾಗತ್ಯ ಹರೇಃ ಪುತ್ರೋ ಭಾನುಸ್ಸರ್ವಾನ್ರಿಪೂನ್ ಶರೈಃ ।
ನೀಹಾರಾಭ್ರಾನ್ಭಾನುರಿವ ಭಿನ್ನಭಿನ್ನಾನ್ ಚಕಾರ ಹ ॥ ೨೦ ॥

ತತಶ್ಚ ದುದ್ರುವುಸ್ಸರ್ವೇಽನುಶಾಲ್ವಸ್ಯ ತು ಸೈನಿಕಾಃ ।
ತದೈವ ತಸ್ಯ ಮಂತ್ರೀ ವೈ ಪ್ರಚಂಡೋ ನಾಮ ರೋಷತಃ ॥ ೨೧ ॥

ಶಕ್ತ್ಯಾ ಜಘಾನ ಸಮರೇ ಸತ್ಯಭಾಮಾತ್ಮಜಂ ನೃಪ ।
ಭಾನೋಶ್ಚ ಹೃದಯಂ ಭಿತ್ವಾ ಸಾ ವಿವೇಶ ಮಹೀತಲೇ ॥ ೨೨ ॥

---

೧೯. ಅದನ್ನು ನೋಡಿ ಅನುಶಾಲ್ವನ ಸೈನಿಕರೆಲ್ಲರೂ ಕೋಪದಿಂದ ಬಂದ ದೀಪ್ತಿಮಂತನ ಮೇಲೆ ಚಿತ್ರವಿಚಿತ್ರಗಳಾದ ಬಾಣಗಳನ್ನು ಪ್ರಯೋಗಿಸಿದರು.

೨೦. ಆಗ ಹರಿಯ ಮತ್ತೊಬ್ಬ ಮಗನಾದ ಭಾನುವೆಂಬುವನು ರಣರಂಗಕ್ಕೆ ಬಂದು ಬಾಣಗಳನ್ನು ಶತ್ರುಗಳ ಮೇಲೆ ಪ್ರಯೋಗಿಸುತ್ತಾ ಮಂಜಿನಿಂದ ಕೂಡಿರುವ ಮೋಡಗಳನ್ನು ಸೂರ್ಯನು ನಾಶಪಡಿಸುವಂತೆ ಅವರನ್ನು ಚೂರು ಚೂರು ಮಾಡಿದನು.

೨೧–೨೨. ಇದನ್ನು ನೋಡಿ ಅನುಶಾಲ್ವನ ಸೈನಿಕರೆಲ್ಲರೂ ಓಡಲು ಪ್ರಾರಂಭಿಸಿದರು. ಎಲ್ಲೆಲ್ಲೂ ಕೋಲಾಹಲವೆದ್ದಿತು. ಆಗ ಅನುಶಾಲ್ವನ ಮಂತ್ರಿ ಪ್ರಚಂಡನೆಂಬುವನು ರೋಷದಿಂದ ಬಂದು ಶಕ್ತ್ಯಾಯುಧದಿಂದ ಭಾನುವನ್ನು ಹೊಡೆದನು. ಅದು ಅವನ ಹೃದಯವನ್ನು ಭೇದಿಸಿಕೊಂಡು ಹೋಗಿ ನೆಲದ ಮೇಲೆ ಬಿದ್ದಿತು.

ಸ ಚಾಪಿ ಮೂರ್ಛಿತೋ ಭೂತ್ವಾ ನಿಪಪಾತ ರಥಾದ್ರಣೇ ।
ಸ ಏವಂ ಕೌತುಕಂ ವೀಕ್ಷ್ಯ ಸಾಂಬಸ್ತತ್ರ ರುಷಾ ಜ್ವಲನ್ ॥ ೨೩ ॥

ಶೀಘ್ರಂ ಗೃಹೀತ್ವಾ ಕೋದಂಡಮಾಜಗಾಮ ರಥೇನ ವೈ ।
ಪ್ರಚಂಡಸ್ಯ ರಥಂ ಸಾಂಬಃ ಸತುರಂಗಂ ಸಸಾರಥಿಂ ॥ ೨೪ ॥

ಸಧ್ವಜಂ ಶತಬಾಣೈಶ್ಚ ಸರ್ವಂ ಚೂರ್ಣೀಚಕಾರ ಹ ।
ರಥೇ ಭಗ್ನೇ ಗದಾಂ ನೀತ್ವಾ ಪ್ರಚಂಡೋ ರಣದುರ್ಮದಃ ॥ ೨೫ ॥

ಆಜಗಾಮ ರಿಪುಂ ಹಂತುಂ ಪತಂಗ ಇವ ಪಾವಕಂ ।
ಆಗತಂ ತಂ ವಿಲೋಕ್ಯಾಥ ಚಂದ್ರಾರ್ಕಾಕಾರವರ್ಚಸಾ ॥ ೨೬ ॥

---

೨೩. ಭಾನುವೂ ಮೂರ್ಛಿತನಾಗಿ ರಥದಿಂದ ಕೆಳಗುರುಳಿದನು. ಇದನ್ನು ನೋಡಿ ಸಾಂಬನು ಅತಿ ಸಿಟ್ಟಿನಿಂದ ಧನುಸ್ಸನ್ನು ಹಿಡಿದು ರಣಾಂಗಣಕ್ಕೆ ರಥದಲ್ಲಿ ಕುಳಿತು ಬೇಗ ಬಂದನು.

೨೪. ಪ್ರಚಂಡನ ಮೇಲೆ ನೂರು ಬಾಣಗಳನ್ನು ಪ್ರಯೋಗಮಾಡಿದನು. ಅವನ ಕುದುರೆಗಳೂ, ಸಾರಥಿಯೂ ಸತ್ತುಹೋದರು. ಅವನ ರಥವನ್ನು ಚೂರ್ಣ ಮಾಡಿದನು. ಧ್ವಜವು ನುಚ್ಚು ನೂರಾಯಿತು.

೨೫. ರಥವು ನಾಶವಾಗಲು ಪ್ರಚಂಡನು. ಗದೆಯೊಂದನ್ನು ತೆಗೆದುಕೊಂಡು ಸಾಂಬನನ್ನು ಹೊಡೆಯಲು ಅಗ್ನಿಯ ಸಮೀಪಕ್ಕೆ ಹೋದ ಚಿಟ್ಟೆ ಹುಳುವಿನಂತೆ ಸಾಂಬನ ಹತ್ತಿರಕ್ಕೆ ಬಂದನು.

೨೬. ಅದನ್ನು ನೋಡಿ ಸಾಂಬನು ಚಂದ್ರಸೂರ್ಯರ ಆಕಾರದಂತೆ ಇರುವ ಜ್ವಲಿಸುತ್ತಿರುವ ಒಂದು ಬಾಣವನ್ನು ಪ್ರಯೋಗಿಸಿ ಅವನ ತಲೆಯನ್ನು ಕತ್ತರಿಸಿದನು. ಅವನ ಸೇನೆಯಲ್ಲಿ ಹಾಹಾಕಾರವುಂಟಾಯಿತು.

ಶರೇಣೈಕೇನ ಸಾಂಬಸ್ತು ಜಹಾರ ತಚ್ಛಿರೋ ಮೃಧೇ ।
ಹಾಹಾಕಾರಸ್ತದೈವಾಸೀತ್ತತ್ಸೇನಾಯಾಂ ನೃಪೇಶ್ವರ ॥ ೨೭ ॥

ಅಥೋತ್ಥಿತೋಽನುಶಾಲ್ವಸ್ತು ಮೂರ್ಛಾಂ ತ್ಯಕ್ತ್ವಾ ಮುಹೂರ್ತತಃ ।
ದದರ್ಶ ಮಂತ್ರಿಣಂ ತತ್ರ ಸಾಂಬೇನ ನಿಹತಂ ಮೃಧೇ ॥ ೨೮ ॥

ನಿರೀಕ್ಷ್ಯ ರಥಮಾರುಹ್ಯ ಧನ್ವೀ ಖಡ್ಗೀ ಚ ದಂಶಿತಃ ।
ಶಿಲೀಮುಖೈಶ್ಚತುರ್ಭಿಶ್ಚ ಸಾಂಬಸ್ಯ ಚತುರೋ ಹಯಾನ್ ॥ ೨೯ ॥

ದ್ವಾಭ್ಯಾಂ ಕೇತುಂ ತ್ರಿಭಿಸ್ಸೂತಂ ಪಂಚಭಿಶ್ಚ ಶರಾಸನಂ ।
ತ್ರಿಂಶದ್ಭಿಶ್ಚ ಶರೈರ್ಯಾನಂ ಜಘಾನ ಸಮರೇ ನೃಪಃ ॥ ೩೦ ॥

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ರಥಂ ಚಾನ್ಯಂ ಸಮಾರುಹ್ಯ ರೇಜೇ ಜಾಂಬವತೀಸುತಃ ॥ ೩೧ ॥

ತತೋ ಗೃಹೀತ್ವಾ ಕೋದಂಡಂ ಶತಬಾಣೈರಮರ್ಷಿತಃ ।
ತತಾಡ ಸೋ ರಿಪುಂ ಯುದ್ಧೇ ಸರ್ಪಂ ಪಕ್ಷೈರ್ಯಥಾ ವಿರಾಟ್ ॥ ೩೨ ॥

೨೭–೨೮. ಬಂದು ಸ್ವಲ್ಪಹೊತ್ತಾಗಲು ಅನುಶಾಲ್ವನಿಗೆ ಮೂರ್ಛೆಯಿಂದ ಎಚ್ಚರವಾಯಿತು. ತಕ್ಷಣ ಎದ್ದು ನಿಂತು ಸಾಂಬನಿಂದ ಹತನಾಗಿ ಬಿದ್ದಿರುವ ತನ್ನ ಮಂತ್ರಿಯನ್ನು ನೋಡಿದನು.

೨೯-೩೦. ತಕ್ಷಣ ರಥವನ್ನೇರಿ ಧನುಸ್ಸು, ಖಡ್ಗ, ಬಾಣ ಮುಂತಾದುವುಗಳನ್ನು ಸಿದ್ಧಪಡಿಸಿಕೊಂಡು ಸಾಂಬನ ಸಮೀಪಕ್ಕೆ ಬಂದನು. ನಾಲ್ಕುಬಾಣಗಳಿಂದ ಸಾಂಬನ ನಾಲ್ಕು ಕುದುರೆಗಳನ್ನು ನಾಶಪಡಿಸಿದನು. ಎರಡು ಬಾಣಗಳನ್ನು ಪ್ರಯೋಗಿಸಿ ರಥದ ಬಾವುಟವನ್ನು ಹರಿದನು. ಮೂರು ಬಾಣಗಳಿಂದ ಸೂತನನ್ನೂ, ಐದುಬಾಣಗಳಿಂದ ಧನುಸ್ಸನ್ನೂ, ಮೂವತ್ತು ಬಾಣಗಳಿಂದ ರಥವನ್ನೂ ಪುಡಿಪುಡಿ ಮಾಡಿ ಸಾಂಬನನ್ನು ನೋಯಿಸಿದನು.

೩೧–೩೨. ಸಾಂಬನಿಗೆ ಬಹಳ ದುಃಖವಾಯಿತು. ಆದರೂ ಅದನ್ನು ಲೆಕ್ಕಿಸದೆ ಬೇರೆ ರಥವನ್ನು ಹತ್ತಿ ಯುದ್ಧಸನ್ನದ್ಧನಾದನು. ಧನುಸ್ಸಿನಲ್ಲಿ ನೂರು ಬಾಣಗಳನ್ನು ಹೂಡಿ, ಗರುಡನು ತನ್ನ ರೆಕ್ಕೆಗಳಿಂದ ಸರ್ಪಗಳನ್ನು ಹೊಡೆಯುವಂತೆ ಶತ್ರುಗಳನ್ನು ಹೊಡೆದು ತೊಂದರೆಪಡಿಸಿದನು.

ಯಾನಸ್ತಸ್ಯಾಪಿ ಭಗ್ನೋಽಭೂತ್ತುರಗಾಃ ಪಂಚತಾಂ ಗತಾಃ |
ಸೂತೋ ಮೃತ್ಯುಂ ಗತೋ ಯುದ್ಧೇಽನುಶಾಲ್ವೋ ಮೂರ್ಛಿತೋಽಭವತ್ ||

ತತಸ್ತತ್ಸೈನಿಕಾಸ್ಸರ್ವೇ ಗೃಧ್ರಪಕ್ಷೈಃ ಸ್ಫುರತ್ಪ್ರಭೈಃ |
ಆಶೀವಿಷಸಮೈರ್ಬಾಣೈಃ ಸಾಂಬಂ ಜಘ್ನೂ ರುಷಾನ್ವಿತಾಃ || ೩೪ ||

ಸಾಂಬಮೇಕಂ ರಣೇ ವೀಕ್ಷ್ಯ ಮಧುಃ ಕೃಷ್ಣಸುತೋ ರುಷಾ |
ಪಾರಾವತಸಮೇನಾಪಿ ಹಯೇನಾಗತವಾನ್ಮೃಧೇ || ೩೫ ||

ಸಾಕಂ ಸಾಂಬೇನ ತಾನ್ಸರ್ವಾನ್ನಿಸ್ತ್ರಿಂಶೇನ ರಿಪೂನ್ ಖಲಾನ್ |
ಪ್ರಹರಾರ್ಧೇನ ರಾಜೇಂದ್ರ ಮಾರಯನ್ವಿಚಚಾರ ಹ || ೩೬ ||

---

೩೩. ಅನುಶಾಲ್ವನ ರಥವು ಭಗ್ನವಾಯಿತು. ಕುದುರೆಗಳೆಲ್ಲವೂ ಸತ್ತು ಹೋದವು. ಸೂತನು ಮೃತ್ಯುವನ್ನಾಲಂಗಿಸಿದನು. ಅನುಶಾಲ್ವನೂ ಕೆಳಗೆ ಬಿದ್ದು ಮೂರ್ಛಿತನಾದನು.

೩೪. ಅದನ್ನು ನೋಡಿ ಅವನ ಸೈನಿಕರನೇಕರು ಓಡಿ ಬಂದು ಜಾಜ್ವಲ್ಯಮಾನವಾಗಿಯೂ, ಸರ್ಪವಿಷಕ್ಕೆ ಸಮಾನವಾಗಿಯೂ ಇರುವ ಬಾಣಗಳಿಂದ ಸಾಂಬನನ್ನು ಹೊಡೆದರು.

೩೫. ಸಾಂಬನೊಬ್ಬನೇ ನಿಂತು ಅನೇಕ ಶತ್ರುಗಳನ್ನು ಎದುರಿಸುತ್ತಿರುವುದನ್ನು ನೋಡಿ ಕೃಷ್ಣನ ಮತ್ತೊಬ್ಬ ಮಗನಾದ ಮಧುವು ಕುದುರೆಯ ಮೇಲೆ ಕುಳಿತು ಪಾರಿವಾಳದಂತೆ ಬಹುವೇಗವಾಗಿ ರಣರಂಗಕ್ಕೆ ಬಂದನು.

೩೬. ಸಾಂಬನೊಡನೆ ಅವನೂ ಕೂಡಿ ಶಸ್ತ್ರಾಸ್ತ್ರಗಳನ್ನು ಶತ್ರುಗಳ ಮೇಲೆ ಪ್ರಯೋಗಮಾಡುತ್ತಾ ಅರ್ಧಘಂಟೆಯೊಳಗಾಗಿ ಶತ್ರುಗಳನ್ನೆಲ್ಲಾ ಧ್ವಂಸಮಾಡಿ ರಣಾಂಗಣದಲ್ಲೆಲ್ಲಾ ಓಡಾಡಿದನು.

ತತೋಽನುಶಾಲ್ವ ಉತ್ಥಾಯ ದೃಷ್ಟ್ವಾ ಸ್ವಸ್ಯ ಪರಾಜಯಂ ।
ಸಲಿಲೇನ ಶುಚಿರ್ಭೂತ್ವಾ ಹಂತುಂ ಸರ್ವಾನ್ಮನೋ ದಧೇ ॥ ೩೭ ॥

ಬ್ರಹ್ಮಾಸ್ತ್ರಂ ಸಂದಧೇ ರೋಷಾನ್ಮಯದೈತ್ಯೇನ ಶಿಕ್ಷಿತಂ ।
ಅಜಾನಂತಸ್ತು ನಾಶಂ ಚ ಸಂಪ್ರಾಪ್ತೇ ಪ್ರಾಣಸಂಕಟೇ ॥ ೩೮ ॥

ತಸ್ಯಾಪಿ ದಾರುಣಂ ತೇಜಸ್ತ್ರೀಂಲ್ಲೋಕಾನ್ಪ್ರದಹನ್ಮಹತ್ ।
ಚಚಾರ ಹ್ಯಂತರಿಕ್ಷೇ ಚ ದ್ವಾದಶಾದಿತ್ಯಸಂನಿಭಂ ॥ ೩೯ ॥

ತತ್ತೇಜಸಾ ದುರ್ವಿಷಹೇಣ ಸರ್ವೇ
ಸಂದಹ್ಯಮಾನಾ ಯದವಶ್ಚ ಭೀತಾಃ ।

---

೩೭. ಅಷ್ಟು ಹೊತ್ತಿಗೆ ಅನುಶಾಲ್ವನಿಗೆ ಎಚ್ಚರವಾಯಿತು. ಎದ್ದವನೇ ಸುತ್ತಲೂ ನೋಡಿದನು. ತನ್ನ ಸೈನಿಕರೆಲ್ಲಾ ಪರಾಜಿತರಾಗಿರುವರೆಂದು ತಿಳಿಯಿತು. ನೀರಿನ ಹತ್ತಿರಕ್ಕೆ ಹೋಗಿ ಶುಚಿಯಾಗಿ ಬಂದನು. ಶತ್ರುಗಳನ್ನೆಲ್ಲಾ ಕೊಂದು ಹಾಕುವೆನೆಂಬ ಹುಮ್ಮಸ್ಸು ಅವನ ಮುಖದಲ್ಲಿ ಮಿಂಚುತ್ತಿತ್ತು.

೩೮. ಯೋಚಿಸಿ, ಇನ್ನಾವ ವಿಧದಿಂದಲೂ ಶತ್ರುಗಳು ನಾಶವಾಗದಿರಲು ತನ್ನ ಪ್ರಾಣಕ್ಕೆ ಧಕ್ಕೆ ಬರಲು ಆ ಸಮಯದಲ್ಲಿ ಬ್ರಹ್ಮಾಸ್ತ್ರವನ್ನು ಉಪಯೋಗಿಸುವ ಸಮಯವು ಈಗ ಒದಗಿರಲು ಮಯನೆಂಬದೈತ್ಯನಿಂದ ಉಪದೇಶಿಸಲ್ಪಟ್ಟ ಬ್ರಹ್ಮಾಸ್ತ್ರವನ್ನು ಮಂತ್ರಿಸಿ ಬಿಟ್ಟುಬಿಟ್ಟನು.

೩೯. ಆ ಬ್ರಹ್ಮಾಸ್ತ್ರದ ತೇಜಸ್ಸು ಮೂರುಲೋಕಗಳನ್ನೂ ಸುಡುವಂತಹುದು. ಅಂತರಿಕ್ಷದಲ್ಲೆಲ್ಲಾ ಸಂಚರಿಸುತ್ತಾ ಹನ್ನೆರಡು ಜನ ಸೂರ್ಯರು ಒಟ್ಟಿಗೆ ಉದಯಿಸಿದರೆ ಉಂಟಾಗುವ ಪ್ರಕಾಶದಂತೆ ಪ್ರಕಾಶಿಸುತ್ತಾ ನೋಡಲು ಭಯಂಕರವಾಗಿ ಕಾಣುತ್ತಿತ್ತು. ಅದನ್ನು ಕಂಡು

೪೦. ಯದುಸೈನಿಕರೆಲ್ಲರೂ ಹೆದರಿದರು. ಆ ಅಗ್ನಿಯು ತಮ್ಮಕಡೆಗೇ ಬರುತ್ತಿರುವುದನ್ನು ನೋಡಿ ಅಲ್ಲಿ ನಿಲ್ಲಲಾರದವರಾದರು. ಅವರ ಶರೀರವೆಲ್ಲವೂ ಸುಡಲು

ಪ್ರಾದ್ಯುಮ್ನಿಪಾರ್ಶ್ವಂ ಪ್ರಯಯುರ್ಬ್ರುವಂತೋ
ರಕ್ಷಸ್ವ ದುಃಖಾನ್ನೃಹರೇ ಮಹಾತ್ಮನ್ ॥ ೪೦ ॥

ತತಃ ಕೃತ್ವಾಭಯಂ ರಾಜನ್ವೀರೋ ರುಕ್ಮವತೀಸುತಃ ।
ಬ್ರಹ್ಮಾಸ್ತ್ರೇಣ ತು ಬ್ರಹ್ಮಾಸ್ತ್ರಂ ಜಹಾರ ಪ್ರಧನೇ ರುಷಾ ॥ ೪೧ ॥

ವಹ್ನ್ಯಸ್ತ್ರಂ ಸೋಽಪಿ ಚಿಕ್ಷೇಪ ವಹ್ನಿನಾ ಪೂರಿತಂ ನಭಃ ।
ದಹ್ಯಮಾನಾ ಚ ಭೂಸ್ತತ್ರ ಜ್ವಾಲಾಭಿರಿವ ಖಾಂಡವಂ ॥ ೪೨ ॥

ತತೋಽನಿರುದ್ಧೋ ಬಲವಾನ್ವಾರುಣಾಸ್ತ್ರಂ ಪುನರ್ದಧೇ ।
ಪ್ರಚಂಡಮೇಘಧಾರಾಭಿರ್ವಹ್ನಿಃ ಶೀತಲತಾಂ ಗತಃ ॥ ೪೩ ॥

ಪ್ರಾರಂಭವಾಯಿತು. ಎಲ್ಲರೂ ಅಲ್ಲಿಂದ ಓಡಿದರು. ಅನಿರುದ್ಧನಿರುವ ಸ್ಥಳಕ್ಕೆ ಓಡಿ ಬಂದು ಎಲೈ ಮಹಾತ್ಮನೇ ನಮ್ಮ ದುಃಖವನ್ನು ದೂರಮಾಡಿ ನಮ್ಮನ್ನು ರಕ್ಷಿಸು ಎಂದು ಮರೆಹೊಕ್ಕರು.

೪೧. ಆಗ ಅನಿರುದ್ಧನು ಅವರೆಲ್ಲರಿಗೂ ಅಭಯವನ್ನು ಕೊಟ್ಟು ಮತ್ತೊಂದು ಬ್ರಹ್ಮಾಸ್ತ್ರವನ್ನು ಹೂಡಿ ಆ ಬ್ರಹ್ಮಾಸ್ತ್ರಕ್ಕೆ ಎದುರಾಗಿ ಹೊಡೆದು ಅದನ್ನು ನಾಶ ಮಾಡಿದನು.

೪೨. ಆಗ ಅನುಶಾಲ್ವನು ಆಗ್ನೇಯಾಸ್ತ್ರವನ್ನು ಮಂತ್ರಿಸಿ ಬಿಟ್ಟನು. ಅಗ್ನಿಯು ಆಕಾಶವನ್ನೆಲ್ಲಾ ಆವರಿಸಿಕೊಂಡಿತು. ಖಾಂಡವವನವನ್ನು ಸುಡುವಂತೆ ಸೈನಿಕರನ್ನೆಲ್ಲಾ ಸುಡಲು ಪ್ರಾರಂಭಿಸಿತು.

೪೩. ಪರಾಕ್ರಮಿಯಾದ ಅನಿರುದ್ಧನು ಅದನ್ನು ನೋಡಿ ವಾರುಣಾಸ್ತ್ರವನ್ನು ಪ್ರಯೋಗಿಸಿದನು. ಪ್ರಚಂಡವಾದ ಮೇಘಗಳು ಗುಂಪುಕಟ್ಟಿ ಮಳೆ ಸುರಿಸಲು ಪ್ರಾರಂಭಿಸಿದವು. ಅಗ್ನಿ ಎಲ್ಲವೂ ಶಾಂತವಾಯಿತು.

ಮಂಡೂಕಾಃ ಕೋಕಿಲಾಶ್ಚೈವ ಮಯೂರಾಸ್ಸಾರಸಾದಯಃ ।
ಪ್ರತ್ಯನಂದನ್ಮಹಾಮೇಘೈರ್ವರ್ಷಾಂ ಜ್ಞಾತ್ವಾ ಪುನಃ ಪುನಃ　　|| ೪೪ ||

ತತೋಽನುಶಾಲ್ವೋ ಮಾಯಾವೀ ಪವನಾಸ್ತ್ರಂ ಸಮಾದಧೇ ।
ದೃಷ್ಟ್ವಾನಿರುದ್ಧೋ ಯುಯುಧೇ ಪರ್ವತಾಸ್ತ್ರೇಣ ಸರ್ವತಃ　　|| ೪೫ ||

ತತೋ ಭಾರಸಹಸ್ರಾಢ್ಯಾಂ ನೀತ್ವಾ ಸೋಽಪಿ ಗದಾಂ ಮೃಧೇ ।
ಅನಿರುದ್ಧಂ ಶೂರಮಣಿಂ ಕ್ರುದ್ಧೋ ವಚನಮಬ್ರವೀತ್　　|| ೪೬ ||

ತ್ವತ್ಸೈನ್ಯೇ ನಾಸ್ತಿ ರಾಜೇಂದ್ರ ಗದಾಯುದ್ಧವಿಶಾರದಃ ।
ಯದಿ ಚಾಸ್ತಿ ತರ್ಹಿ ಮಹ್ಯಂ ತಂ ತು ಶೀಘ್ರಂ ಪ್ರದರ್ಶಯ　　|| ೪೭ ||

---

೪೪. ಮೇಘಗಳುಂಟಾಗಿ ಮಳೆಗರೆಯುತ್ತಿರುವುದನ್ನು ನೋಡಿ ಕಪ್ಪೆಗಳು, ಕೋಗಿಲೆಗಳು, ನವಿಲುಗಳು, ಸಾರಸ ಮುಂತಾದುವುಗಳು ವರ್ಷಾಕಾಲವು ಬಂದಿತೆಂದು ತಿಳಿದುಕೊಂಡು ಆನಂದಪಟ್ಟವು.

೪೫. ಆಗ ಮಾಯಾವಿಯಾದ ಅನುಶಾಲ್ವನು ವಾಯುವ್ಯಾಸ್ತ್ರವನ್ನು ಪ್ರಯೋಗಿಸಿದನು. ವಾಯುವಿನ ಪ್ರಚಂಡ ಪರಾಕ್ರಮವು ಯಾದವರನ್ನೆಲ್ಲಾ ತಳ್ಳತೊಡಗಿತು. ಅದನ್ನು ನೋಡಿ ಅನಿರುದ್ಧನು, ಅದಕ್ಕೆ ವಿರುದ್ಧವಾಗಿ ಪರ್ವತಾಸ್ತ್ರವನ್ನು ಪ್ರಯೋಗಿಸಿ ಶಾಂತಮಾಡಿದನು.

೪೬. ಅನುಶಾಲ್ವನು ಒಂದು ಸಾವಿರ ಭಾರವುಳ್ಳ ಗದೆಯನ್ನು ತೆಗೆದುಕೊಂಡು ಅನಿರುದ್ಧನನ್ನು ಹೊಡಯಬೇಕೆಂದು ಸಿದ್ಧನಾಗಿ ಅವನನ್ನು ಕುರಿತು ಇಂತೆಂದನು.

೪೭. ಎಲೈ ರಾಜೇಂದ್ರನೇ, ನಿನ್ನ ಸೈನಿಕರಲ್ಲಿ ಗದಾಯುದ್ಧ ವಿಶಾರದರಾಗಿರುವರು ಯಾರೂ ಇಲ್ಲವೆಂದು ಕಾಣಿಸುತ್ತದೆ. ಒಂದು ವೇಳೆ ಇದ್ದಲ್ಲಿ ಅವರನ್ನು ಜಾಗ್ರತೆಯಾಗಿ ತೋರಿಸು.

ಇತಿ ತದ್ವಾಕ್ಯಮಾಕರ್ಣ್ಯ ಗದಾಧಾರೀ ಗದೋ ಮಹಾನ್ ।
ಉವಾಚ ಚಾಗ್ರತೋ ಭೂತ್ವಾನಿರುದ್ಧಸ್ಯ ಪ್ರಪಶ್ಯತಃ ॥ ೪೮ ॥

ಅತ್ರೈವ ಬಹವಸ್ಸಂತಿ ಸರ್ವಶಸ್ತ್ರವಿಶಾರದಾಃ ।
ಮಾನಂ ಮಾ ಕುರು ದೈತ್ಯೇಂದ್ರ ತ್ವಮೇಕಾಕೀ ರಣೇಽಸಿ ಹಿ ॥ ೪೯ ॥

ನ ಮನ್ಯಸೇ ತ್ವಂ ಮದ್ವಾಕ್ಯಂ ಮಯಾ ಸಾಕಂ ರಣೇಽಸುರ ।
ಕುರು ಪೂರ್ವಂ ಗದಾಯುದ್ಧಂ ತತೋಽನ್ಯಾನ್ ದ್ರಷ್ಟುಮರ್ಹಸಿ ॥ ೫೦ ॥

ಇತ್ಯುಕ್ತ್ವಾ ಸ ಗದಾಂ ನೀತ್ವಾ ಲಕ್ಷಭಾರಮಯೀಂ ದೃಢಾಂ ।
ತಥಾಽನುಶಾಲ್ವಂ ಜಘ್ನೇ ತು ಮೂರ್ಧ್ನಿ ವಕ್ಷಃಸ್ಥಲೇ ನೃಪ ॥ ೫೧ ॥

ಅನುಶಾಲ್ವಸ್ತು ಗದಯಾ ಜಘಾನ ಸಮರೇ ಗದಂ ।
ತತೋಽನ್ಯೋಽನ್ಯಂ ಗದಾಭ್ಯಾಂ ಚ ಜಘ್ನತುಃ ಕ್ರೋಧಮೂರ್ಛಿತೌ ॥ ೫೨ ॥

---

೪೮. ಎಂದು ಹೇಳಲು ಅದನ್ನು ಕೇಳಿ ಗದನೆಂಬುವನು ಒಂದು ದೊಡ್ಡ ಗದೆಯನ್ನು ಹಿಡಿದು ಅನುಶಾಲ್ವನ ಎದುರಿಗೆ ಬಂದು ನಿಂತು ಅವನನ್ನು ಕುರಿತು ಎಲೈ ಅನುಶಾಲ್ವನೇ ಕೇಳು.

೪೯-೫೦. ಗದಾಯುದ್ಧವೊಂದರಲ್ಲೇ ಅಲ್ಲ. ಎಲ್ಲಾ ಯುದ್ಧಗಳಲ್ಲಿಯೂ ನಿಪುಣರಾಗಿರುವ ಅನೇಕ ಯೋಧರು ನಮ್ಮ ಸೈನ್ಯದಲ್ಲಿರುವರು. ಆದರೆ ನೀನೊಬ್ಬನೇ ನಿಮ್ಮ ಕಡೆಗೆ ಇರುವೆ. ನನ್ನ ಮಾತನ್ನು ನೀನು ಒಪ್ಪಿಕೊಳ್ಳದಿದ್ದ ಪಕ್ಷಕ್ಕೆ ನನ್ನೊಡನೆ ಮೊದಲು ಯುದ್ಧಮಾಡು. ಅನಂತರ ಉಳಿದಿರುವವರೊಡನೆ ಹೋರಾಡು ಹೇಳಿದನು.

೫೧. ಎಂದು ಹೇಳಿ ಗದನು ಲಕ್ಷಭಾರವುಳ್ಳ ದೃಢವಾದ ಗದೆಯೊಂದನ್ನು ತೆಗೆದುಕೊಂಡು ಆ ಅನುಶಾಲ್ವನ ನೆತ್ತಿಗೂ, ಎದೆಗೂ ಗುರಿಯಿಟ್ಟು ಹೊಡೆದನು.

೫೨. ಅನುಶಾಲ್ವನೂ ಸಹ ಗದೆಯಿಂದ ಗದನನ್ನು ಹೊಡೆದನು. ಈ ರೀತಿಯಾಗಿ ಇಬ್ಬರೂ ಕ್ರೋಧದಿಂದ ಪರಸ್ಪರ ಹೊಡೆದಾಡಿದರು.

ತತೋ ಗದಸ್ಸಮುತ್ಥಾಪ್ಯಾನುಶಾಲ್ವಂ ಗಗನೇಽಕ್ಷಿಪತ್ ।
ಭ್ರಾಮಯಿತ್ವಾ ಶತಗುಣಂ ನಿಪಪಾತ ಮಹೀತಲೇ ॥ ೫೩ ॥

ತತೋಽನುಶಾಲ್ವ ಉತ್ಥಾಯ ಗೃಹೀತ್ವಾ ರೋಹಿಣೀಸುತಂ ।
ಭೂಮೌ ಮಮರ್ದ ರಾಜೇಂದ್ರ ತದದ್ಭುತಮಿವಾಭವತ್ ॥ ೫೪ ॥

ಗದೋ ಗಜಂ ಗೃಹೀತ್ವೈಕಮನುಶಾಲ್ವೋಪರಿ ಕ್ಷಿಪತ್ ।
ತಮಾಯಾಂತಂ ಗಜಂ ನೀತ್ವಾ ಚಿಕ್ಷೇಪ ಸಬಲಾನುಜೇ ॥ ೫೫ ॥

ಜಾನುಭಿರ್ಮುಷ್ಟಿಭಿರ್ಘೋರೈಃ ಪ್ರಹಾರೈಸ್ತೌ ಚ ಜಘ್ನತುಃ ।
ಮರ್ದಿತೌ ತಾವುಭೌ ಮಹ್ಯಾಂ ಪತಿತೌ ಮೂರ್ಛನಾಂ ಗತೌ ॥ ೫೬ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಚತುರ್ವಿಂಶೋಽಧ್ಯಾಯಃ

---

೫೩. ಅನಂತರ ಗದನು ಅನುಶಾಲ್ವನನ್ನು ಬಿಗಿಯಾಗಿ ಹಿಡಿದುಕೊಂಡು ಅಂತರಿಕ್ಷಕ್ಕೆ ಒಗೆದನು. ಅವನು ನೂರಾರು ಸಾರೆ ತಿರುತಿರುಗಿ ಭೂಮಿಯಲ್ಲಿ ಬಿದ್ದು ಬಿಟ್ಟನು.

೫೪. ತಕ್ಷಣ ಅನುಶಾಲ್ವನು ಮೇಲಕ್ಕೆದ್ದು ಆ ಗದನನ್ನು ಹಿಡಿದು ಕೊಂಡನು. ಮೇಲಕ್ಕೆ ಎತ್ತಿ ಭೂಮಿಗೆ ಅಪ್ಪಳಿಸಿದನು. ಅದನ್ನು ನೋಡಲು ಭಯಂಕರವಾಗಿದ್ದಿತು.

೫೫. ಆದರೂ ಗದನು ಹೆದರಲಿಲ್ಲ. ತಕ್ಷಣ ಚೇತರಿಸಿಕೊಂಡು ಒಂದು ಆನೆಯನ್ನು ಹಿಡಿದು ಅದನ್ನು ಅನುಶಾಲ್ವನಮೇಲೆ ಅಪ್ಪಳಿಸಿದನು.

೫೬. ಮುಷ್ಟಿ, ಮೊಳಕೈ, ಇವುಗಳಿಂದ ಪರಸ್ಪರ ಹೊಡದಾಡಿದರು. ಇಬ್ಬರಿಗೂ ಘೋರವಾದ ಏಟುಗಳು ಬಿದ್ದವು. ಒಬ್ಬರನ್ನೊಬ್ಬರು ಅಪ್ಪಳಿಸಿದರು. ಕೊನೆಗೆ ಇಬ್ಬರೂ ಮೂರ್ಛಿತರಾಗಿ ಭೂಮಿಯ ಮೇಲೆ ಬಿದ್ದುಬಿಟ್ಟರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಪಂಚವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಏವಂ ದೃಷ್ಟ್ವಾ ತಯೋರ್ಯುದ್ಧಂ ಯಾದವಾಃ ಪರಸೈನಿಕಾಃ ।
ಊಚುಃ ಪರಸ್ಪರಂ ಧನ್ಯೋಽನುಶಾಲ್ವಸ್ತು ಗದೋ ಮಹಾನ್ ॥ ೧ ॥

ಇತಿ ಬ್ರುವತ್ಸು ಸರ್ವೇಷು ಗದಸ್ತತ್ರೈವ ಚೋತ್ಥಿತಃ ।
ಕ್ವ ಗತಃ ಕ್ವ ಗತಃ ಶತ್ರುರ್ಹತ್ವಾ ಮಾಂ ಚ ಬ್ರುವನ್ ರಣೇ ॥ ೨ ॥

ಇಪ್ಪತ್ತೈದನೆಯ ಅಧ್ಯಾಯವು.

೧. ಗರ್ಗನು ಹೇಳಿದನು:—ಎಲೈ ವಜ್ರನಾಭಿಯೇ, ಕೇಳು. ಈ ರೀತಿ ಅವರು ಯುದ್ಧಮಾಡಿದುದನ್ನು ನೋಡಿ ಯಾದವರೂ ಅನುಶಾಲ್ವನ ಕಡೆಯ ಸೈನಿಕರೂ ಸಹ ಪರಸ್ಪರವಾಗಿ ಇಬ್ಬರನ್ನೂ ಹೊಗಳಿದರು.

೨. ಹೀಗೆ ಮಾತನಾಡುತ್ತಿರುವಲ್ಲಿ ಗದನು ಅಲ್ಲಿಂದ ಎದ್ದು ಆ ನನ್ನ ವೈರಿಯು ಎಲ್ಲಿ ಹೋದನು? ನನ್ನನ್ನು ಹೊಡೆದು ಎಲ್ಲಿ ಅಡಗಿರುವನು? ಎಂದು ಕೂಗಾಡುತ್ತಾ ಅನುಶಾಲ್ವನನ್ನು ಹುಡಕತೊಡಗಿದನು.

ತತೋಽನುಶಾಲ್ವಂ ಹಸ್ತೇನ ಗೃಹೀತ್ವಾಕೃಷ್ಯ ರೋಷತಃ ।
ಅನಿರುದ್ಧಸ್ಯ ನಿಕಟೇ ಪಾತಯಾಮಾಸ ವೇಗತಃ ॥ ೩ ॥

ಪತಿತಂ ಮೂರ್ಛಿತಂ ದೃಷ್ಟ್ವಾ ಹ್ಯನಿರುದ್ಧಸ್ತ್ವಧೋಮುಖಂ ।
ಕಾರಯಾಮಾಸ ಚೈತನ್ಯಂ ನ್ಯಜನ್ಯೈಃ ಸಲಿಲೇನ ಚ ॥ ೪ ॥

ತದೈವ ಸುಪ್ರಬುದ್ಧೋಽಭೂದನುಶಾಲ್ವೋಽಸುರೇಶ್ವರಃ ।
ದೃಷ್ಟ್ವಾಗ್ರೇ ಸುಂದರಂ ಸೋಽಪಿ ಕೃಷ್ಣಪೌತ್ರಂ ಘನಪ್ರಭಂ ॥ ೫ ॥

ನತ್ವಾ ಪ್ರತ್ಯಾಹ ವಚನಂ ತ್ವಂ ತು ನೋ ಪ್ರಾಣರಕ್ಷಕಃ ।
ಅನಿರುದ್ಧ ಹರೇಃ ಪೌತ್ರ ಅಪರಾಧಂ ಕ್ಷಮಸ್ವ ತತ್ ॥ ೬ ॥

ಓಂ ನಮೋ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯ ನಮಸ್ತುಭ್ಯಮನಿರುದ್ಧಾಯ ತೇ ನಮಃ ॥ ೭ ॥

---

೩. ಬಳಿಕ ಅಲ್ಲಿಯೇ ಬಿದ್ದಿದ್ದ ಅನುಶಾಲ್ವನನ್ನು ತನ್ನ ಕೈಯಿಂದ ಎಳೆದು ಅನಿರುದ್ಧನ ಸಮೀಪದಲ್ಲಿ ಬೀಳುವಂತೆ ಜೋರಾಗಿ ಎಸೆದನು.

೪. ಇನ್ನೂ ಅನುಶಾಲ್ವನು ಮೂರ್ಛೆಯಿಂದ ಬಿದ್ದಿರುವುದನ್ನು ನೋಡಿ ಅನಿರುದ್ಧನು ಶೈತ್ಯೋಪಚಾರವನ್ನು ಮಾಡಿಸಿ ಎಚ್ಚರವಾಗುವಂತೆ ಮಾಡಿದನು.

೫–೬. ಅನುಶಾಲ್ವನು ಮೂರ್ಛೆಯಿಂದ ಎಚ್ಚೆತ್ತು ಕತ್ತೆತ್ತಿ ನೋಡಿದನು. ಎದರಿಗೆ ಸುಂದರನೂ ತೇಜಸ್ವಿಯೂ ಆದ ಅನಿರುದ್ಧನನ್ನು ನೋಡಿ ಆಶ್ಚರ್ಯಗೊಂಡನು. ಅವನಿಗೆ ನಮಸ್ಕರಿಸಿ 'ಸ್ವಾಮಿಯೇ, ನೀನೇ ನನ್ನ ಪ್ರಾಣರಕ್ಷಕನು. ನೀನು ನನ್ನ ಅಪರಾಧವನ್ನು ಕ್ಷಮಿಸು.

೭. ಶ್ರೀಕೃಷ್ಣನ ಮೊಮ್ಮಗನಾದ ನಿನಗೆ ನಮಸ್ಕಾರವು, ಶ್ರೀಕೃಷ್ಣ, ಬಲರಾಮ, ಪ್ರದ್ಯುಮ್ನ ಇವರೆಲ್ಲರನ್ನೂ ನಾನು ವಂದಿಸುವೆನು. ನನ್ನ ತಪ್ಪನ್ನು ಮನ್ನಿಸು.

ಗೃಹಾಣ ವೈ ತುರಂಗಂ ತಮಹಂ ಯಾಸ್ಯಾಮಿ ಪಾಲಯನ್ ।
ಇತ್ಯುಕ್ತ್ವಾ ಸ್ವಪುರಂ ಗತ್ವಾ ದದೌ ತಸ್ಮೈ ತುರಂಗಮಂ ॥ ೮ ॥

ಅಯುತಂ ಹಸ್ತಿನಾಂ ಚೈವ ಹಯಾನಾಂ ನಿಯುತಂ ತಥಾ ।
ಅರ್ಧಲಕ್ಷಂ ರಥಾನಾಂ ಚ ಶಿಬಿಕಾನಾಂ ಸಹಸ್ರಕಂ ॥ ೯ ॥

ಉಷ್ಟ್ರಾಣಾಂ ಹಿ ಸಹಸ್ರಂ ಚ ಗವಯಾನಾಂ ಸಹಸ್ರಕಂ ।
ಪಂಜರೇ ಸಂಸ್ಥಿತಾನಾಂ ಚ ಸಿಂಹಾನಾಂ ದ್ವಿಸಹಸ್ರಕಂ ॥ ೧೦ ॥

ಮೃಗಯಾ ಸಾರಮೇಯಾಣಾಂ ಸಹಸ್ರಂ ನೃಪಸತ್ತಮ ।
ಶಿಬಿರಾಣಾಂ ಸಹಸ್ರಂ ಚ ಶಿಂಜಾನಾಂ ನಿಯುತಂ ತಥಾ ॥ ೧೧ ॥

ಜವನಿಕಾನಾಮಯುತಂ ಧೇನೂನಾಂ ಲಕ್ಷಮೇವ ಚ ।
ಸಹಸ್ರಭಾರಂ ಸ್ವರ್ಣಾನಾಂ ರಜತಾನಾಂ ಚತುರ್ಗುಣಂ ॥ ೧೨ ॥

---

೮. ನಿನ್ನ ಕುದುರೆಯನ್ನು ನೀನು ತೆಗೆದುಕೋ. ಅದರ ರಕ್ಷಣೆಗೆ ನಾನು ಬರುವೆನು. ಎಂದು ಹೇಳಿ ತನ್ನ ನಗರಿಗೆ ಹಿಂತಿರುಗಿ ಯಜ್ಞಾಶ್ವವನ್ನು ತಂದು ಒಪ್ಪಿಸಿದನು.

೯. ಮತ್ತು ಹತ್ತುಸಾವಿರ ಆನೆ, ಒಂದು ಲಕ್ಷ ಕುದುರೆಗಳು, ಅರ್ಧ ಲಕ್ಷ ರಥಗಳು ಒಂದುಸಹಸ್ರ ಮೇನಾಗಳು,

೧೦–೧೧. ಒಂದು ಸಾವಿರ ಒಂಟೆಗಳು, ಒಂದುಸಾವಿರ ಗವಯುಗಳು, ಎರಡು ಸಾವಿರ ಪಂಜರ ದಲ್ಲಿರುವ ಸಿಂಹಗಳು, ಒಂದು ಸಾವಿರ ಬೇಟೆನಾಯಿಗಳು, ಸಾವಿರ ಗುಡಾರಗಳು; ನಿಯುತ ಶಿಂಜಾನಗಳು.

೧೨. ಹತ್ತುಸಾವಿರ ಜವನಿಕೆಗಳು ಒಂದು ಲಕ್ಷ ಹಸುಗಳು, ಸಹಸ್ರಭಾರ ಸುವರ್ಣ, ನಾಲ್ಕು ಸಹಸ್ರಭಾರ ಬೆಳ್ಳಿ, ಒಂದುಭಾರ ಮುತ್ತು, ಇವೆಲ್ಲವನ್ನೂ ಅನುಶಾಲ್ವನು ಅನಿರುದ್ಧನಿಗೆ ಕಾಣಿಕೆಯಾಗಿ ಒಪ್ಪಿಸಿದನು.

ಮುಕ್ತಾನಾಂ ಭಾರಮೇಕಂ ಚಾನಿರುದ್ಧಾಯ ದದೌ ನೃಪಃ ।
ಅನಿರುದ್ಧಸ್ತತಸ್ತಸ್ಮೈ ಮಣಿಹಾರಂ ದದೌ ಮುದಾ　　॥ ೧೩ ॥

ಅನುಶಾಲ್ವಃ ಸ್ವರಾಜ್ಯೇ ತು ಕೃತ್ವಾ ವೈ ಸಚಿವಂ ವರಂ ।
ಯಾದವೈಸ್ಸಹಿತಸೋಽಪಿ ದೇಶಾನನ್ಯಾನ್ ಜಗಾಮ ಹ　　॥ ೧೪ ॥

ತತೋ ವಿಮುಕ್ತಸ್ತುರಗೋ ಮಣಿಕಾಂಚನಭೂಷಿತಃ ।
ದೇಶಾನನ್ಯಾನ್ವೀರಯುಕ್ತಾನ್ ಪಶ್ಯನ್ಬಭ್ರಾಮ ಭೂಪತೇ　　॥ ೧೫ ॥

ಅನುಶಾಲ್ವಂ ಜಿತಂ ಶ್ರುತ್ವಾ ಯೌವನಾಶ್ವಂ ಚ ಭೀಷಣಂ ।
ರಾಜಾನೋಽನ್ಯೇ ಮಂಡಲೇಶಾಃ ಪ್ರಾಪ್ತಂ ನ ಜಗ್ರಹುರ್ಹಯರ್ಮ　　॥ ೧೬ ॥

ಇತ್ಯೇವಂ ಭ್ರಮತಸ್ತಸ್ಯ ತುರಂಗಸ್ಯ ವಿಶಾಂ ಪತೇ ।
ಮಾಸಾಶ್ಚ ಪ್ರಗತಾಃ ಷಡ್ವೈ ತಾದೃಶಾಶ್ಚಾವಶೇಷಿತಾಃ　　॥ ೧೭ ॥

೧೩-೧೪. ಅದಕ್ಕೆ ಬದಲಾಗಿ ಅನಿರುದ್ಧನು ಸೌಹಾರ್ದಕ್ಕೋಸ್ಕರ ಒಂದು ರತ್ನಹಾರವನ್ನು ಅನುಶಾಲ್ವನಿಗೆ ಕೊಟ್ಟನು. ಅನುಶಾಲ್ವನು ತನ್ನ ರಾಜ್ಯದಲ್ಲಿ ಒಬ್ಬ ಮಂತ್ರಿಶ್ರೇಷ್ಠನನ್ನು ಇರಿಸಿ ಯಾದವರೊಡನೆ ಯಜ್ಞಾಶ್ವರಕ್ಷಣೆಗೆ ತಾನೂ ಹೊರಟನು.

೧೫. ಅನುಶಾಲ್ವನು ನಗರಿಯಿಂದ ಹೊರಟನು. ಬಳಿಕ ರತ್ನಾಭರಣಗಳಿಂದ ಅಲಂಕೃತವಾದ ಆ ಕುದುರೆಯು ಅಲ್ಲಿಂದ ಹೊರಟು ಅನೇಕದೇಶಗಳನ್ನು ಸುತ್ತಿತು. ಅನೇಕ ವೀರರುಗಳನ್ನು ಎದುರಿಸಿತು.

೧೬. ಅನೇಕ ರಾಜರುಗಳು ಯಜ್ಞಾಶ್ವವು ತಮ್ಮ ಊರಿಗೆ ಪ್ರವೇಶಿಸಿದರೂ ಸಹ, ಅನುಶಾಲ್ವ, ಯೌವನಾಶ್ವ, ಭೀಷಣ, ಮುಂತಾದ ವೀರರೂ ಯದುಸೈನಿಕರಿಗೆ ಸೋತು ಹೋಗಿರುವರೆಂದು ತಿಳಿದು ಹೆದರಿ ಆ ಕುದುರೆಯನ್ನು ಕಟ್ಟಿಹಾಕದೆ ಬಿಟ್ಟು ಬಿಡುತ್ತಿದ್ದರು.

೧೭. ಕುದುರೆಯು ಈ ರೀತಿಯಾಗಿ ತಿರುಗುತ್ತಾ, ತಿರುಗುತ್ತಾ ಆರು ತಿಂಗಳು ಕಳೆದು ಹೋದವು. ಇನ್ನು ಆರು ತಿಂಗಳು ಮಾತ್ರ ಉಳಿದವು.

ಹಯೋ ಮಣಿಪುರೇಶೇನ ಗೃಹೀತಶ್ಚ ವಿಮೋಚಿತಃ ।
ತಥಾ ರತ್ನಪುರೇಶೇನ ಹ್ಯನಿರುದ್ಧಭಯಾನ್ನೃಪಃ ॥ ೧೮ ॥

ರಷ್ಟ್ರಾನ್ ಸರ್ವಾನಶೂರಾಂಶ್ಚ ವಿಹಾಯ ತುರಗೋತ್ತಮಃ ।
ಯಯೌ ಪ್ರಾಚೀಂ ದಿಶಂ ರಾಜನ್ ಬಲ್ವಲೋ ಯತ್ರ ದೈತ್ಯರಾಟ್ ॥ ೧೯ ॥

ಸೋಽಪಿ ದೈತ್ಯೋ ಹಯಸ್ಯಾಪಿ ವಾರ್ತಾಂ ಶ್ರುತ್ವಾ ಚ ನಾರದಾತ್ ।
ಯಜ್ಞಂ ಶೀಘ್ರಂ ನಾಶಯಿತ್ವಾ ನೈಮಿಷಾಚ್ಚಾ ಜಗಾಮ ಹ ॥ ೨೦ ॥

ಸ್ಥಿತಂ ತ್ರಿವೇಣ್ಯಾಂ ಸಲಿಲಂ ಪಿಬಂತಂ
ಪ್ರಯಾಗತೀರ್ಥೇ ಕ್ರತುವಾಹನಂ ಚ ।
ವಿಲೋಕ್ಯ ರಾಜನ್ಕಿಲ ಬಲ್ವಲಾಖ್ಯೋ
ಜಗ್ರಾಹ ಶೀಘ್ರಂ ಹ್ಯಗಣಯ್ಯ ಕೃಷ್ಣಂ ॥ ೨೧ ॥

೧೮–೧೯. ಅಲ್ಲಿಂದ ಯಜ್ಞಾಶ್ವವು ಮಣಿಪುರಕ್ಕೆ ಹೋಯಿತು. ಅಲ್ಲಿಯ ರಾಜನು ಅದನ್ನು ಹಿಡಿದರೂ ಹೆದರಿ ಬಿಟ್ಟುಬಿಟ್ಟನು. ರತ್ನಪುರದ ರಾಜನೂ ಈ ರೀತಿಯೇ ಮಾಡಿದನು. ಹೀಗೆ ಇನ್ನೂ ಅನೇಕ ರಾಷ್ಟ್ರಗಳನ್ನು ಸುತ್ತುತ್ತಾ ಸುತ್ತುತ್ತಾ ಪೂರ್ವದಿಕ್ಕಿಗೆ ಹೊರಟು ಬಲ್ವಲನೆಂಬ ರಾಕ್ಷಸನ ದೇಶಕ್ಕೆ ಹೋಯಿತು.

೨೦. ಆ ದೈತ್ಯನು ನಾರದನಿಂದ ಯಜ್ಞಾಶ್ವದ ವಾರ್ತೆಯನ್ನು ಕೇಳಿದನು. ಅಲ್ಲಿ ಮುನಿಗಳು ಮಾಡುತ್ತಿರುವ ಯಜ್ಞವನ್ನು ನಾಶಮಾಡುತ್ತಿದ್ದ ಅವನು ಜಾಗ್ರತೆಯಾಗಿ ಕುದುರೆಯಿದ್ದ ಸ್ಥಳಕ್ಕೆ ಬಂದನು.

೨೧. ಪ್ರಯಾಗವೆಂಬ ತೀರ್ಥ ಕ್ಷೇತ್ರದಲ್ಲಿ ಗಂಗೆಯಲ್ಲಿ ನೀರು ಕುಡಿಯುತ್ತಿರುವ ಯಜ್ಞಾಶ್ವವನ್ನು ನೋಡಿ ಆ ಬಲ್ವಲನು ಶ್ರೀಕೃಷ್ಣನನ್ನೂ ಲೆಕ್ಕಿಸದೆ ಅದನ್ನು ಹಿಡಿದುಕೊಂಡನು.

ತದ್ವೈವ ವೃಷ್ಣಯಸ್ಸರ್ವೇ ದಂಡಕಂ ಚ ವಿಲೋಕಯನ್ ।
ಚರ್ಮಣ್ವತೀಂ ಸಮುತ್ತೀರ್ಯ ಚಿತ್ರಕೂಟಂ ಸಮಾಯಯುಃ ॥ ೨೨ ॥

ರಾಮಕ್ಷೇತ್ರೇ ಚ ದಾನಾನಿ ಕೃತ್ವಾಶ್ವಂ ಚ ವಿಲೋಕಯನ್ ।
ತಸ್ಯಾಪಿ ಪೃಷ್ಠತೋ ಲಗ್ನಾ ಆಜಗ್ಮುಸ್ತೀರ್ಥವಾಸವಂ ॥ ೨೩ ॥

ದದೃಶುಸ್ತತ್ರ ತುರಗಂ ಸಪತ್ರಂ ಯದುಸತ್ತಮಾಃ ।
ಗೃಹೀತಂ ಸ್ವಬಲಾದ್ರಾಜನ್ನಸುರೇಣ ದುರಾತ್ಮನಾ ॥ ೨೪ ॥

ತತಸ್ತೇ ಬಲ್ವಲಂ ದೃಷ್ಟ್ವಾ ನೀಲಾಂಜನಚಯೋಪಮಂ ।
ಯೋಜನದ್ವಯಮುಚ್ಚಾಂಗಮುಗ್ರಮಂಗಾರಲೋಚನಂ ॥ ೨೫ ॥

ತಪ್ತತಾಮ್ರಶಿಖಾಶ್ಮಶ್ರುದಂಷ್ಟ್ರೋಗ್ರಭ್ರುಕುಟೀಮುಖಂ ।
ಬ್ರಹ್ಮದ್ರುಹಂ ಲಲಜ್ಜಿಹ್ವಂ ಗಜಾಯುತಸಮಂ ಬಲಂ ॥ ೨೬ ॥

---

೨೨. ಯಾದವರೂ ಅದನ್ನು ಹಿಂಬಾಲಿಸುತ್ತಾ ದಂಡಕಾರಣ್ಯಕ್ಕೆ ಬಂದರು. ಅಲ್ಲಿಯವನಗಳನ್ನೆಲ್ಲಾ ನೋಡಿಕೊಂಡು ದಾರಿಯಲ್ಲಿ ಸಿಕ್ಕಿದ ಚರ್ಮಣ್ವತೀ ನದಿಯನ್ನು ದಾಟಿ ಚಿತ್ರಕೂಟ ಪರ್ವತಕ್ಕೆ ಬಂದರು.

೨೩. ಅಲ್ಲಿನ ರಾಮಕ್ಷೇತ್ರದಲ್ಲಿ ಸ್ನಾನಾದಿಗಳನ್ನು ನೆರವೇರಿಸಿದರು. ಅನಂತರ ಕುದುರೆಯನ್ನು ಹುಡುಕುತ್ತಾ ಪ್ರಯಾಗಕ್ಕೆ ಬಂದು ಸೇರಿದರು.

೨೪–೨೫. ಅಲ್ಲಿ ಒಬ್ಬ ದುರಾತ್ಮನಾದ ಅಸುರನು ತಮ್ಮ ಅಶ್ವವನ್ನು ಹಿಡಿದುಕೊಂಡಿರುವುದನ್ನು ನೋಡಿದರು. ಅವನು ಕಾಡಿಗೆಯಂತೆ ಅತಿಕಪ್ಪಾಗಿದ್ದನು. ಎರಡು ಯೋಜನ ಎತ್ತರವಾಗಿದ್ದನು. ಉರಿಯುತ್ತಿರುವ ಕೆಂಡದಂತೆ ಅವನ ಕಣ್ಣುಗಳು ಕೆಂಪಾಗಿಯೂ ಭಯಂಕರವಾಗಿಯೂ ಇದ್ದವು.

೨೬. ಅವನ ತಲೆಯ ಕೂದಲೂ, ಮುಖದಕೂದಲೂ ಸಹ ಕೆಂಚಾಗಿ ಭೀಕರವಾಗಿದ್ದಿತು. ಕೋರೆಯ ಹಲ್ಲುಗಳಿಂದಲೂ, ವಕ್ರವಾದ ಹುಬ್ಬುಗಳಿಂದಲೂ ಮುಖವು ಭಯಂಕವಾಗಿದ್ದಿತು. ಬ್ರಾಹ್ಮಣದ್ವೇಷಿಯಾದ ಅವನು ಹತ್ತುಸಾವಿರ ಆನೆಗಳಷ್ಟು ಬಲಶಾಲಿಯಾಗಿದ್ದನು. ಅವನನ್ನು ನೋಡಿ ಯಾದವರು ಕೋಪದಿಂದ ಈ ರೀತಿ ಹೇಳಿದರು.

ತಮೂಚುರ್ಯಾದವಾ ರೋಷಾತ್ ಸ್ಫುರಿತಾಧರಪಲ್ಲವಾಃ ।
ಕಸ್ತ್ವಂ ಯಜ್ಞಪಶುಂ ನೀತ್ವಾ ಹ್ಯಸ್ಮಾಕಂ ಚ ಕ್ವ ಯಾಸ್ಯಸಿ ॥ ೨೭ ॥

ತಸ್ಮಾನ್ಮೋಚಯ ತಂ ಶೀಘ್ರಂ ನ ಚೇದ್ಧನ್ಮೋ ರಣೇ ಚ ತ್ವಾಂ ।
ಇತಿ ಶ್ರುತ್ವಾಸುರಶ್ಚಾಹ ವಚಃ ಶೃಣುತ ಮೇ ನರಾಃ ॥ ೨೮ ॥

॥ ಬಲ್ವಲ ಉವಾಚ ॥

ಅಹಂ ತು ಬಲ್ವಲೋ ದೈತ್ಯೋ ದೇವಾನಾಂ ದುಃಖದಾಯಕಃ ।
ಯಸ್ಯಾಗ್ರೇ ಮಾನುಷಾಸ್ಸರ್ವೇ ಭವಂತಿ ಭಯವಿಹ್ವಲಾಃ ॥ ೨೯ ॥

ಇತಿ ಶ್ರುತ್ವಾ ಚ ಯದವೋ ಜಘ್ನುರ್ಬಾಣೈಶ್ಚ ಬಲ್ವಲಂ ।
ಸ ಹತಸ್ತೈಶ್ಚ ಸಹಸಾ ಸಹಯೋಂತರ್ದಧೇ ನೃಪ ॥ ೩೦ ॥

ಇತಿಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಪಂಚವಿಂಶೋಽಧ್ಯಾಯಃ

೨೭-೨೮. ಏಲೋ, ನೀನು ಯಾರು? ಈ ಯಜ್ಞಾಶ್ವವು ನಮ್ಮದು. ಅದನ್ನು ಅಪಹರಿಸಿಕೊಂಡು ಎಲ್ಲಿಗೆ ಹೋಗುವೆ? ಇದನ್ನು ಬಿಟ್ಟುಬಿಡು. ಇಲ್ಲದಿದ್ದರೆ ನಾವು ಯುದ್ಧಮಾಡಿ ನಿನ್ನನ್ನು ಕೊಲ್ಲುವೆವು. ಎನ್ನಲು ಅದನ್ನು ಕೇಳಿ ಬಲ್ವಲನು ಅವರನ್ನು ಕುರಿತು ಇಂತೆಂದನು.

೨೯. ನಾನು ಬಲ್ವಲನೆಂಬ ರಾಕ್ಷಸನು. ನನ್ನ ಹಿಂಸೆಯಿಂದ ದೇವತೆಗಳು ದುಃಖಪಡುವರು. ಮನುಷ್ಯರೆಲ್ಲರೂ ನನ್ನನ್ನು ನೋಡಿ ಭಯದಿಂದ ನಡುಗುವರು.

೩೦. ಎಂದು ಹೇಳಿದುದನ್ನು ಕೇಳಿ ಯಾದವರು ಶಸ್ತ್ರಾಸ್ತ್ರಗಳನ್ನು ಅವನ ಮೇಲೆ ಪ್ರಯೋಗಿಸಿ ಜಾಗ್ರತೆಯಾಗಿ ಅವನನ್ನು ನೋಯಿಸಿದರು. ಆದರೆ ಅದೇಕ್ಷಣದಲ್ಲಿಯೇ ಯಜ್ಞಾಶ್ವದೊಡನೆ ಅವನು ಮಾಯವಾದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಅಶ್ವಮೇಧಖಂಡೇ

ಷಡ್ವಿಂಶೋಽಧ್ಯಾಯಃ

ಅಥ ಸರ್ವೇ ಯದುಗಣಾ ಗತೇ ಕ್ರತುಪಶೌ ನೃಪ ।
ಶೋಕಂ ಚಕ್ರುಃ ಕ್ವ ಗಚ್ಛಾಮಃ ಕರಿಷ್ಯಾಮಶ್ಚ ಕಿಂ ಭುವಿ ॥ ೧ ॥

ನ ತತ್ಪ್ರತ್ರಿವಿಧಿಂ ಸರ್ವೇಽನಿರುದ್ಧಾದ್ಯಾ ವಿದುಸ್ತತಃ ।
ತದಾ ನಾರದರೂಪೀ ವೈ ಭಗವಾನಾಗಮನ್ನೃಪ ॥ ೨ ॥

ತಮಾಗತಂ ಮುನಿಂ ದೃಷ್ಟ್ವಾನಿರುದ್ಧೋ ಯಾದವೈರ್ವೃತಃ ।
ಪೂಜಯಿತ್ವಾಸನೇ ಸ್ಥಾಪ್ಯ ಪ್ರೀತಃ ಪ್ರಾಹ ಮುನೀಶ್ವರಂ ॥ ೩ ॥

ಇಪ್ಪತ್ತಾರನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು. ಯಜ್ಞಾಶ್ವವು ಮಾಯವಾದುದನ್ನು ನೋಡಿ ಯಾದವರೆಲ್ಲರೂ ನಾವೀಗ ಏನುಮಾಡಬೇಕು? ಎಲ್ಲಿಗೆ ಹೋಗಬೇಕು? ಎಂದನ್ನುತ್ತಾ ದುಃಖಿಸಿದರು.

೨. ಅನಿರುದ್ಧನೂ ಸಹ ಮುಂದೇನು ಮಾಡಬೇಕೆಂದರಿಯದೆ ದುಃಖಿಸುತ್ತಾ ಕುಳಿತನು. ಆಗ ಭಗವಂತನಾದ ನಾರದನು ಅಲ್ಲಿಗೆ ಬಂದನು.

೩. ಅನಿರುದ್ಧನು ತಕ್ಷಣ ಎದ್ದು ಉಳಿದ ಯಾದವರೊಡನೆ ಆ ಮುನಿಯನ್ನು ಎದುರುಗೊಂಡು ಸ್ವಾಗತಿಸಿದನು. ಅರ್ಘ್ಯಪಾದ್ಯಾದಿಗಳಿಂದ ಅವನನ್ನು ಪೂಜಿಸಿ ಆಸನದಲ್ಲಿ ಕುಳ್ಳಿರಿಸಿ ನಾರದನನ್ನು ಕುರಿತು ಇಂತೆಂದನು.

|| ಅನಿರುದ್ಧ ಉವಾಚ ||

ಭಗವನ್ಯಜ್ಞತುರಗೋ ಬಲ್ವಲೇನ ದುರಾತ್ಮನಾ ।
ನೀತಃ ಕುತ್ರ ಗತಃ ಸರ್ವಂ ವದ ಮೇ ವದತಾಂ ವರ || ೪ ||

ತ್ವಂ ಪರ್ಯಟನ್ನರ್ಕ ಇವ ತ್ರಿಲೋಕೀಂ ದಿವ್ಯದರ್ಶನಃ ।
ಅಂತಶ್ಚರೋ ವಾಯುರಿವ ಹ್ಯಾತ್ಮಸಾಕ್ಷೀ ಚ ಸರ್ವವಿತ್ || ೫ ||

ತಸ್ಮಾತ್ಕಥಯ ಸರ್ವಂ ಮೇ ಶ್ರುತ್ವಾ ಸೋಽಪ್ಯಾಹ ಮಾಧವಂ ।

|| ನಾರದ ಉವಾಚ ||

ರಾಜನ್ ತವ ತುರಂಗೋ ವೈ ಬಲ್ವಲೇನ ನಿವೇಶಿತಃ || ೬ ||

ಉಪದ್ವೀಪೇ ಪಾಂಚಜನ್ಯೇ ಸಿಂಧುಮಧ್ಯೇ ನೃಪೇಶ್ವರ ।
ಮೃತೇ ಮಿತ್ರೇ ಚ ಶಕುನೌ ಯಾದವಾನಾಂ ವಧಾಯ ಚ || ೭ ||

ಸುತಲಾಚ್ಚ ಸಮಾಹೂಯ ದೈತ್ಯವೃಂದಾನ್ಮಹಾಸುರಃ ।
ರಾಜ್ಯಂ ಕರೋತಿ ತತ್ರಾಪಿ ಶಿವಸ್ಯ ವರದರ್ಪಿತಃ || ೮ ||

---

೪. ಭಗವನ್, ಬಲ್ವಲನೆಂಬ ರಾಕ್ಷಸನು ನಮ್ಮ ಯಜ್ಞಾಶ್ವವನ್ನು ಅಪಹರಿಸಿಕೊಂಡು ಮಾಯವಾಗಿರುವನು. ಅವನು ಎಲ್ಲಿಗೆ ಹೋದನೆಂದೇ ಗೊತ್ತಿಲ್ಲವು. ಆದುದರಿಂದ ಆ ವಿಷಯವನ್ನೆಲ್ಲಾ ನನಗೆ ತಿಳಿಸಬೇಕು.

೫. ನೀನು ಸೂರ್ಯನಂತೆ ಮೂರು ಲೋಕವನ್ನೂ ಸಂಚರಿಸಿ ನಿನ್ನ ದರ್ಶನದಿಂದ ಜನಗಳನ್ನು ಪಾವನಮಾಡುವೆ. ವಾಯುವಿನಂತೆ ಅಂತಶ್ಚರನು. ನೀನು ಆತ್ಮಸಾಕ್ಷಿಯಾದ ಸರ್ವಜ್ಞನು. ಆದುದರಿಂದ ಯಜ್ಞಾಶ್ವದ ವಿಷಯವನ್ನು ನಮಗೆ ತಿಳಿಸು.

೬–೮. ಎನ್ನಲು ನಾರದನು ಅನಿರುದ್ಧನನ್ನು ಕುರಿತು. ರಾಜನೇ, ನಿನ್ನ ಯಜ್ಞಾಶ್ವವನ್ನು ಬಲ್ವಲನೇ ಅಪಹರಿಸಿರುವನು. ಅವನೀಗ ಸಮುದ್ರ ಮಧ್ಯದಲ್ಲಿ ಪಾಂಚಜನ್ಯವೆಂಬ ಉಪದ್ವೀಪದಲ್ಲಿ ವಾಸವಾಗಿರುವನು. ತನ್ನ ಮಿತ್ರನಾದ ಶಕುನಿಯು ಸತ್ತುಹೋಗಲು ಸುತಲಲೋಕದಿಂದ ದೈತ್ಯರನ್ನು ಕರೆತಂದು ಅಲ್ಲಿ ರಾಜ್ಯವನ್ನು ಆಳುತ್ತಿರುವನು. ಶಿವನನ್ನು ಒಲಿಸಿ ವರವನ್ನು ಪಡೆದು ಮದಿಸಿರುವನು.

ಇತಿ ಶ್ರುತ್ವಾನಿರುದ್ಧಸ್ತು ವಚಃ ಪ್ರೋವಾಚ ಶಂಕಿತಃ ।
|| ಅನಿರುದ್ಧ ಉವಾಚ ||
ತಸ್ಮೈ ಚಂದ್ರಲಲಾಮೇನ ಕಿಂ ದತ್ತಂ ಪ್ರವರಂ ವರಂ || ೯ ||

ತನ್ಮಮಾಖ್ಯಾಹಿ ದೇವರ್ಷೇ ಕಸ್ಮಾತ್ಸಂತೋಷಿತೋಽಭವತ್ ।
ತತೋ ಬಭಾಷೇ ಸ ಮುನಿಃ ಶೃಣು ರಾಜನ್ವಚೋ ಮಮ || ೧೦ ||

ಕೈಲಾಸೇ ಚೈಕದಾ ದೈತ್ಯೋ ಹ್ಯೇಕಪಾದೇನ ಸಂಸ್ಥಿತಃ ।
ವರ್ಷದ್ವಾದಶಪರ್ಯಂತಂ ತಪಶ್ಚಕ್ರೇ ಸುದಾರುಣಂ || ೧೧ ||

ತತಶ್ಚ ತೋಷಿತೋ ದೇವೋ ವರಂ ಬ್ರೂಹೀತ್ಯುವಾಚ ಹ ।
ತಚ್ಛ್ರುತ್ವಾ ಸ ಉವಾಚಾಥ ಸದಾಶಿವ ನಮೋಽಸ್ತು ತೇ || ೧೨ ||

ಮಹಾಮೃಧೇ ಚ ಮಾಂ ದೇವ ಪಾಲಯಸ್ವ ಕೃಪಾನಿಧೇ ।
ತಥಾಸ್ತು ಚೋಕ್ತ್ವಾ ದೇವಸ್ತು ತತ್ರೈವಾಂತರ್ದಧೇ ನೃಪ || ೧೩ ||

---

೯. ಎಂದು ಹೇಳಲು ಅನಿರುದ್ಧನು ಅನುಮಾನಗೊಂಡು ನಾರದನನ್ನು ಕುರಿತು ಮುನಿಯೇ, ಆ ಶಂಕರನು ಬಲ್ವಲನಿಗೆ ಕರುಣಿಸಿದ ವರವಾವುದು? ಅದನ್ನು ನನಗೆ ತಿಳಿಸು ಎಂದು ಕೇಳಿದನು.

೧೦–೧೧. ಆಗ ನಾರದನು ಹೇಳಲು ಪ್ರಾರಂಭಿಸಿದನು :—ಒಂದುಸಾರಿ ಈ ಬಲ್ವಲನು ಕೈಲಾಸಪರ್ವತಕ್ಕೆ ಹೋಗಿ ಒಂದೇ ಕಾಲಿನಲ್ಲಿ ನಿಂತು ಹನ್ನೆರಡು ವರ್ಷಗಳವರೆಗೂ ಶಂಕರನನ್ನು ಕುರಿತು ಘೋರವಾಗಿ ತಪಸ್ಸುಮಾಡಿದನು.

೧೨–೧೩. ಅದರಿಂದ ಶಂಕರನು ಸಂತುಷ್ಟನಾಗಿ ಪ್ರತ್ಯಕ್ಷನಾದನು. ವರವನ್ನು ಬೇಡು ಎಂದು ಕೇಳಲು ಬಲ್ವಲನು ಸದಾಶಿವನೇ, ನಿನಗೆ ನಮಸ್ಕಾರವು. ಎಂತಹ ಯುದ್ಧದಲ್ಲಿಯೂ ನನ್ನನ್ನು ನೀನು ಕಾಪಾಡಬೇಕು. ಎಂದು ವರವನ್ನು ಕೇಳಿದನು. ಕರುಣಾಶಾಲಿಯಾದ ಶಂಕರನು ತಥಾಸ್ತು ಎಂದು ಹೇಳಿ ಅಂತರ್ಧಾನನಾದನು.

ಸ ದೈತ್ಯೋ ಪಾಂಚಜನ್ಯೇ ವೈ ರಾಜ್ಯಂ ಚಕ್ರೇ ಬಲಾತ್ತತಃ ।
ಸ್ವತಸ್ತುಭ್ಯಂ ನ ತುರಗಂ ವಿನಾ ಯುದ್ಧೇನ ದಾಸ್ಯತಿ ॥ ೧೪ ॥

ಸ ಶಿವಸ್ಯ ವರೇಣಾಪಿ ಯದಿ ಯುದ್ಧಂ ಕರಿಷ್ಯತಿ ।
ನ ಪಾಲಯಿಷ್ಯತಿ ಮೃಧೇ ಶಿವಃ ಕೃಷ್ಣದ್ವಿಷಂ ಖಲಂ ॥ ೧೫ ॥

ಇತ್ಯುಕ್ತ್ವಾsನಿರುದ್ಧೋ ವೈ ಪ್ರಯಾಣಾರ್ಥೇ ಜಯಾಯ ಚ ।
ಯಾದವೇಭ್ಯಶ್ಚ ಸರ್ವೇಭ್ಯೋ ಸಹಸಾಜ್ಞಾಂ ಚಕಾರ ಹ ॥ ೧೬ ॥

ತತೋsನುಜ್ಞಾಪ್ಯ ದೇವರ್ಷಿರ್ಯುದ್ಧಕೌತುಕಸಂಯುತಃ ।
ಯಯೌ ಚಾಕಾಶಮಾರ್ಗೇಣ ತತ್ರ ಸ್ಥಾನಂ ನೃಪೇಶ್ವರ ॥ ೧೭ ॥

---

೧೪. ಅನಂತರ ಬಲ್ವಲನು ಪಾಂಚಜನ್ಯವೆಂಬ ದ್ವೀಪದಲ್ಲಿ ರಾಜ್ಯವಾಳುತ್ತಿರುವನು. ಅವನೊಡನೆ ಯುದ್ಧಮಾಡಿ ಅವನನ್ನು ಜಯಿಸಿದ ಹೊರತು ನಿಮಗೆ ಕುದುರೆ ಸಿಕ್ಕಲಾರದು.

೧೫. ನೀವು ಯುದ್ಧಮಾಡಿದರೆ ಶಿವನ ವರವಿರುವದೆಂಬ ಹೆಮ್ಮೆಯಿಂದ ಅವನು ಯುದ್ಧಮಾಡುವನು. ಆದರೆ ಅವನು ಕೃಷ್ಣನಿಗೆ ಈಗ ಶತ್ರುವಾಗಿ ವಿರುದ್ಧಾಚರಣೆ ಮಾಡಿರುವುದರಿಂದ ಶಿವನು ಅವನನ್ನು ಯುದ್ಧದಲ್ಲಿ ರಕ್ಷಿಸುವುದಿಲ್ಲ.

೧೬. ಎಂದು ಹೇಳಿದುದನ್ನು ಕೇಳಿ ಅನಿರುದ್ಧನು ವಿಜಯಯಾತ್ರೆಗೋಸ್ಕರವಾಗಿ ಯಾದವರಿಗೆಲ್ಲಾ ಸಿದ್ಧರಾಗಿರುವಂತೆ ಅಪ್ಪಣೆಮಾಡಿದನು.

೧೭. ಆಮೇಲೆ ನಾರದನು ಅನಿರುದ್ಧನ ಅನುಜ್ಞೆಯನ್ನು ಪಡೆದು ಯುದ್ಧವನ್ನು ನೋಡಬೇಕೆಂಬ ಕುತೂಹಲವುಳ್ಳವನಾಗಿ ಆಕಾಶಮಾರ್ಗವಾಗಿ ಯುದ್ಧಸ್ಥಳಕ್ಕೆ ಹೋದನು.

ತದೈವ ಯಾದವಾಸ್ಸರ್ವೇ ಸಜ್ಜೀಭೂತಾ ರುಷಾನ್ವಿತಾಃ ।
ಸ್ನಾತ್ವಾ ಕೃತ್ವಾ ಚ ದಾನಾನಿ ತೀರ್ಥರಾಜೇ ವಿಧಾನತಃ　　　　॥ ೧೮ ॥

ಉಪದ್ವೀಪಂ ಯಯುೂ ರಾಜನ್ರಥಿಭಿಶ್ಚ ಗಜೈರ್ಹಯೈಃ ।
ದ್ವಿಲಕ್ಷಾ ಮಾರ್ಗಕಾರಾಶ್ಚ ಮಾರ್ಗಂ ಚಕ್ರುರ್ದಿನೇ ದಿನೇ　　　　॥ ೧೯ ॥

ಭಿಂದಿಪಾಲೈಶ್ಚ ಸರ್ವತ್ರ ಸೇನಾಯಾಃ ಪೂರ್ವಮೇವ ಹಿ ।
ಸುಖೇನ ಯತ್ರ ಗಚ್ಛಂತಿ ಗಜವಾಜಿತುರಂಗಮಾಃ　　　　॥ ೨೦ ॥

ಪದಾತಯಶ್ಚ ರಾಜೇಂದ್ರ ಮಾರ್ಗೇ ನಿಷ್ಕಂಟಕೇ ತ್ವರಂ ।
ಇತ್ಥಂ ತು ಯದುಸೇನಾಯಾಃ ಶೇಷೋ ಭಾರೇಣ ಪೀಡಿತಃ　　　　॥ ೨೧ ॥

ಇತಿ ಹೋವಾಚ ಮನಸಿ ಕಿಂ ಬಭೂವ ಧರಾತಲೇ ।
ಅನಿರುದ್ಧೋಽಗ್ರತೋ ಭೂತ್ವಾಽಲಕ್ಷಿತಃ ಪ್ರಯಯೌ ನೃಪ　　　　॥ ೨೨ ॥

೧೮–೧೯. ಯಾದವರೆಲ್ಲರೂ ಯುದ್ಧಸನ್ನದ್ಧರಾದರು. ಅನಿರುದ್ಧನು ಶ್ರೇಷ್ಠವಾದ ತೀರ್ಥಕ್ಷೇತ್ರದಲ್ಲಿ ಮಿಂದು ದಾನಾದಿಗಳನ್ನು ನೆರವೇರಿಸಿದನು. ಅನಂತರ ಎಲ್ಲರೂ ಕುದುರೆ, ಆನೆ, ಸಾರಥಿ, ಮುಂತಾದ ಯುದ್ಧಸಾಮಗ್ರಿಗಳೊಡನೆ ಉಪದ್ವೀಪದ ಕಡೆಗೆ ಪ್ರಯಾಣಮಾಡಿದರು. ಎರಡುಲಕ್ಷ ಜನರು ಮಾರ್ಗಗಳನ್ನು ಅಚ್ಚುಕಟ್ಟಾಗಿ ಮಾಡಲು ನಿಯುಕ್ತರಾಗಿದ್ದರು.

೨೦–೨೧. ಭಿಂದಿಪಾಲಗಳನ್ನು ಹಿಡಿದುಕೊಂಡು ಅನೇಕ ಯೋಧರು ದಿನವೂ ಮಾರ್ಗಗಳನ್ನು ಸರಿಮಾಡುತ್ತಿದ್ದರು. ಅದರಿಂದ ಯದುಯೋಧರೂ ಆನೆ ಕುದುರೆ ಮುಂತಾದುವುಗಳೂ ಸುಖವಾಗಿ ನಡೆಯುವುದಾಗಿತ್ತು. ಈ ಸೈನಿಕರ ಭಾರದಿಂದ ಆದಿಶೇಷನಿಗೆ ಹಿಂಸೆಯುಂಟಾಗಿ,

೨೨. ಭೂಮಿಯ ಮೇಲೆ ಏನು ನಡೆಯುತ್ತಿರಬಹುದೆಂದು, ಆಲೋಚಿಸಿದನು. ಅನಿರುದ್ಧನು ಎಲ್ಲರಿಗಿಂತಲೂ ಮುಂದೆ ಹೋಗುತ್ತಿದ್ದನು. ರಾಕ್ಷಸನನ್ನು ಲೆಕ್ಕಿಸದೆ ಮುಂದುವರೆಯುತ್ತಿದ್ದನು. ಕುದುರೆಯನ್ನು ಕಾಪಾಡುವ ನೆಪದಿಂದ ಪಾಪಿಗಳನ್ನು ನಾಶಮಾಡಲು ಹೊರಟವನೋ ಎಂಬಂತೆ ಕಾಣುತ್ತಿದ್ದನು.

ಹಯರಕ್ಷಾಪದೇಶಾದ್ವೈ ನಾಶಯನ್ನಿವ ಪಾಪಿನಃ ।
ಯತ್ರ ಯತ್ರ ಗತೋ ರಾಜನ್ ಹಯಸ್ಯಾರ್ಥೇ ಚ ಕಾರ್ಷ್ಣಿಜಃ ॥ ೨೩ ॥

ತತ್ರ ತತ್ರೋಪಶೃಣ್ವಾನಃ ಶ್ರೀಕೃಷ್ಣಸ್ಯ ಯಶೋಽಖಿಲಂ ।
ಶ್ಲಾಘಾಂ ಯೇ ವೈ ಕರಿಷ್ಯಂತಿ ಗೋವಿಂದಬಲದೇವಯೋಃ ॥ ೨೪ ॥

ದದೌ ತೇಭ್ಯಶ್ಚ ರತ್ನಾನಿ ವಸ್ತ್ರಾಣ್ಯಾಭರಣಾನಿ ಚ ।
ಯತ್ಕಿಂಚಿತ್ತಸ್ಯ ಸೈನ್ಯೇಷು ವಸುಮಾತ್ರಮನುತ್ತಮಂ ॥ ೨೫ ॥

ತತ್ಸರ್ವಮದದಾತ್ಪ್ರೀತಃ ಕೃಷ್ಣಗಾಥಾಹೃತಾಶಯಃ ।
ಇತ್ಥಂ ಶೃಣ್ವನ್ ಹರೇರ್ಗಾಥಾಂ ಕಾಶೀಂ ಪಶ್ಯನ್ ಗಯಾಂ ತಥಾ ॥ ೨೬ ॥

ಕುರ್ವನ್ಸ್ನಾನಾನಿ ರಾಜೇಂದ್ರ ಕಾಷ್ಠಾಂ ಪ್ರಾಚೀಂ ಜಗಾಮ ಸಃ ।
ಇತ್ಥಂ ಭಯಂಕರಾಂ ಸೇನಾಂ ಯಾದವಾನಾಂ ವಿಲೋಕ್ಯ ಚ ॥ ೨೭ ॥

---

೨೩. ಅವನು ಹೋಗುವ ಮಾರ್ಗದಲ್ಲಿ ಸಿಕ್ಕಿದ ದೇಶಗಳಲ್ಲೆಲ್ಲಾ ಶ್ರೀಕೃಷ್ಣನ ಕೀರ್ತಿಯು ಹೊಗಳಲ್ಪಡುತ್ತಿರುವುದನ್ನು ಕೇಳುತ್ತಾ ಮುಂದುವರೆದನು.

೨೪. ಶ್ರೀಕೃಷ್ಣಬಲರಾಮರನ್ನು ಸ್ತುತಿಸುವವರಿಗೆಲ್ಲಾ ರತ್ನಗಳನ್ನೂ, ವಸ್ತ್ರಾಭರಣಗಳನ್ನೂ ಅನಿರುದ್ಧನು ಕೊಡುತ್ತಿದ್ದನು.

೨೫. ತನ್ನ ಸೈನ್ಯದಲ್ಲಿ ಅಮೂಲ್ಯವಾದ ಧನವನ್ನೆಲ್ಲಾ ಕೃಷ್ಣನ ಸ್ತುತಿ ಮಾಡುವವರಿಗೆ ಕೊಡುತ್ತಿದ್ದನು. ಈ ರೀತಿ ಶ್ರೀಕೃಷ್ಣನ ಸ್ತುತಿಯಲ್ಲೇ ಅವನ ಮನಸ್ಸು ಲೀನವಾಗಿ ಅವನು ಸಂತೋಷಪಟ್ಟನು.

೨೬. ಹೀಗೆ ಅನಿರುದ್ಧನು ಶ್ರೀಕೃಷ್ಣನ ಸ್ತುತಿಯನ್ನು ಕೇಳುತ್ತಾ ಕಾಶೀ, ಗಯೆ, ಮುಂತಾದ ಕ್ಷೇತ್ರಗಳನ್ನು ನೋಡುತ್ತಾ ಅಲ್ಲಿ ಸ್ನಾನಾದಿಗಳನ್ನು ಮಾಡುತ್ತಾ ಪೂರ್ವದಿಕ್ಕನ್ನು ಹಿಡಿದು ತೆರಳಿದನು.

೨೭–೨೮. ಎಲ್ಲರೂ ಗಿರಿವ್ರಜವೆಂಬ ಪಟ್ಟಣಕ್ಕೆ ಹೋದರು. ಅಲ್ಲಿಯ ರಾಜನಾದ ಸಹದೇವನು ಇಷ್ಟು ಭಯಂಕರವಾದ ಸೇನೆಯು ಬಂದುದನ್ನು ನೋಡಿ ಹೆದರಿದನು. ಅಂಜಲಿಬದ್ಧನಾಗಿ ಅನಿರುದ್ಧನ ಸಮೀಪಕ್ಕೆ ಬಂದು ವಿವಿಧವಾದ ರತ್ನಗಳನ್ನು ಕಾಣಿಕೆಯಾಗಿ ಅರ್ಪಿಸಿದನು.

ಗಿರಿವ್ರಜಪುರಾಧೀಶೋ ಸಹದೇವಸ್ತು ಶಂಕಿತಃ ।
ಭೂತ್ವಾ ಕೃತಾಂಜಲಿರ್ನೀತ್ವಾ ರತ್ನಾನಿ ವಿವಿಧಾನಿ ಚ ॥ ೨೮ ॥

ಅನಿರುದ್ಧಸ್ಯ ಪದಯೋಃ ಪಪಾತ ಭಯವಿಹ್ವಲಃ ।
ಅನಿರುದ್ಧಸ್ತತಸ್ತಸ್ಮೈ ರತ್ನಮಾಲಾಂ ದದೌ ಮುದಾ ॥ ೨೯ ॥

ರಾಜ್ಯೇ ಕೃತ್ವಾ ಚ ತಂ ಶೀಘ್ರಂ ಶರಣಾಗತವತ್ಸಲಃ ।
ಸಮನ್ವಿತೋ ವೃಷ್ಣಿವರ್ಯೈರ್ಜಗಾಮ ಕಪಿಲಾಶ್ರಮಂ ॥ ೩೦ ॥

ಸ್ನಾತ್ವಾ ಚ ತತ್ರೈವ ಯದುಪ್ರವೀರೋ
ಭಾಗೀರಥೀಸಾಗರಸಂಗಮೇ ಚ ।
ವಿಲೋಕ್ಯ ಸಿದ್ಧಂ ಕಪಿಲಂ ಮುನೀಂದ್ರಂ
ಸಸೇನಯಾ ಸೋಽಪಿ ನಮಶ್ಚಕಾರ ॥ ೩೧ ॥

ತತ್ರ ಸ್ಥಾನಾದ್ದಕ್ಷಿಣಸ್ಯಾಂ ಸಿಂಧುತೀರೇ ಚ ತಸ್ಯ ವೈ ।
ಬಭೂವುಃ ಶಿಬಿರಾ ರಾಜನ್ನುಚ್ಚಾಃ ಪ್ರಾಸಾದಸನ್ನಿಭಾಃ ॥ ೩೨ ॥

೨೯–೩೦. ಅನಿರುದ್ಧನೂ ಸಹ ಸಹದೇವನಿಗೆ ರತ್ನಹಾರವನ್ನು ಕೊಟ್ಟು ಗೌರವಿಸಿದನು. ಅನಂತರ ಸಹದೇವನನ್ನು ಶರಣಾಗತವತ್ಸಲನಾದ ಅನಿರುದ್ಧನು ಪುನಃ ಸಿಂಹಾಸನದಲ್ಲಿ ಕುಳ್ಳಿರಿಸಿ ಯದುವೀರರೊಡನೆ ಕಪಿಲಾಶ್ರಮಕ್ಕೆ ಹೋದನು.

೩೧. ಅಲ್ಲಿ ಗಂಗಾಸಾಗರ ಸಂಗಮದಲ್ಲಿ ಸ್ನಾನಮಾಡಿದನು. ಕಪಿಲಮಹರ್ಷಿಯನ್ನು ನೋಡಿ ತನ್ನ ಸೇನೆಯೊಡನೆ ಅವನಿಗೆ ನಮಸ್ಕರಿಸಿದನು.

೩೨. ಅಲ್ಲಿ ಎಲ್ಲರೂ ಗುಡಾರಗಳನ್ನು ನಿರ್ಮಿಸಿ ಬೀಡುಬಿಟ್ಟರು. ಅಲ್ಲಿಂದ ದಕ್ಷಿಣಕ್ಕೆ ಸಿಂಧೂನದಿಯವರೆಗೂ ಅವರು ನಿರ್ಮಿಸಿದ ಗುಡಾರಗಳು ಎತ್ತರವಾಗಿ ಅರಮನೆಯಂತೆ ಪ್ರಕಾಶಿಸುತ್ತಿದ್ದವು.

ಶಿಬಿರೇಷ್ವನಿರುದ್ಧಾದ್ಯಾ ಯಾದವಾಸ್ತತ್ರ ಸಾನುಗಾಃ ।
ಚಕ್ರುರ್ನಿವಾಸಂ ರಾಜೇಂದ್ರ ಶೂರಾಸ್ಸರ್ವೇ ಜಯೈಷಿಣಃ ॥ ೩೩ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಷಡ್ವಿಂಶೋಽಧ್ಯಾಯಃ

---

೩೩. ಅನಿರುದ್ಧನೇ ಮೊದಲಾದವರೂ ಶೂರರಾದ ಯದುಸೈನಿಕರೂ ಆ ಶಿಬಿರಗಳಲ್ಲಿ ಸುಖವಾಗಿ ವಾಸಮಾಡಿದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತಾರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ಸಪ್ತವಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥಾನಿರುದ್ಧೋ ಯದುರಾಟ್ ಪ್ರಾತಃಕಾಲೇ ವಿಶಾಂಪತೇ ।
ಉದ್ಧವಂ ತು ಸಮಾಹೂಯ ಪ್ರಾಹ ಗಂಭೀರಯಾ ಗಿರಾ ॥ ೧ ॥

ಕತಿ ದೂರಂ ಪಾಂಚಜನ್ಯಂ ತನ್ಮಮಾಖ್ಯಾಹಿ ಸತ್ತಮ ।
ಯಸ್ಮಿನ್ಮದೀಯೋ ತುರಗೋ ನೀತೋ ದೈತ್ಯೇನ ವರ್ತತೇ ॥ ೨ ॥

ಇಪ್ಪತ್ತೇಳನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ ಕೇಳು. ರಾತ್ರಿ ಕಳೆದು ಪ್ರಾತಃಕಾಲವಾಯಿತು. ಆಗ ಅನಿರುದ್ಧನು ಮಂತ್ರಿಶ್ರೇಷ್ಠನಾದ ಉದ್ಧವನನ್ನು ಕರೆಸಿ ಗಂಭೀರವಾಗಿ ಹೇಳಿದನು.

೨. ಮಂತ್ರೀ, ಪಾಂಚಜನ್ಯವು ಇನ್ನೂ ಎಷ್ಟು ದೂರವಿರುವುದು ? ನಮ್ಮ ಕುದುರೆಯನ್ನು ಅಪಹರಿಸಿಕೊಂಡು ಹೋಗಿರುವ ದೈತ್ಯನು ಇರುವ ಸ್ಥಳವಲ್ಲವೇ ಅದು ?

ಇತ್ಯುದಾಹೃತಮಾಕರ್ಣ್ಯ ಮಂತ್ರೀ ಕೃಷ್ಣಸುಹೃತ್ಸಖಃ ।
ಮನಸಾ ಕೃಷ್ಣಪಾದಾಬ್ಜಂ ಸ್ಮೃತ್ವಾ ಪ್ರೋವಾಚ ಮಾಧವಂ ॥ ೩ ॥

ಪ್ರಭೋ ಸರ್ವಜ್ಞ ಭಗವನ್ನಹಂ ತ್ವದ್ವಾಕ್ಯಗೌರವಾತ್ ।
ಕಥಯಿಷ್ಯಾಮಿ ಲೋಕೇಶ ಯಥಾ ಮಾರ್ಗೇ ಶ್ರುತಂ ತಥಾ ॥ ೪ ॥

ತ್ರಿಂಶದ್ಯೋಜನವಿಸ್ತೀರ್ಣಾತ್ಸಾಗರಾತ್ಪಾರನೇವ ಚ ।
ಉಪದ್ವೀಪಂ ಪಾಂಚಜನ್ಯಂ ದಕ್ಷಿಣೇಽಸ್ತಿ ನೃಪೇಶ್ವರ ॥ ೫ ॥

ಉದ್ಧವಸ್ಯ ವಚಃ ಶ್ರುತ್ವಾನಿರುದ್ಧೋ ಧನ್ವಿನಾಂ ವರಃ ।
ಬಲೀ ಧೈರ್ಯಧರಃ ಕ್ರುದ್ಧೋ ಪ್ರಾಹೇದಂ ಯದುಪುಂಗವಾನ್ ॥ ೬ ॥

೩-೪. ಎಂದು ಕೇಳಲು ಉದ್ಧವನು ತನ್ನ ಸ್ನೇಹಿತನಾದ ಶ್ರೀಕೃಷ್ಣನ ಪಾದಕಮಲಗಳನ್ನು ಮನಸ್ಸಿನಲ್ಲಿ ಧ್ಯಾನಿಸಿ ಅನಿರುದ್ಧನನ್ನು ಕುರಿತು 'ಪ್ರಭು, ನೀನು ಸರ್ವಜ್ಞನು. ನಿನಗೆ ತಿಳಿಯದಿರುವ ವಿಷಯವು ಯಾವುದು ತಾನೇ ಇರುವುದು ? ಆದರೂ ನಿನ್ನ ಮಾತಿಗೆ ಗೌರವವನ್ನು ಕೊಡಬೇಕೆಂಬ ದೃಷ್ಟಿಯಿಂದ ನಾನೀಗ ಹೇಳಬೇಕಾಗಿದೆ. ಹೆಚ್ಚಿಗೆ ವಿಷಯ ತಿಳಿದಿದ್ದರೂ ಬರುವ ಮಾರ್ಗದಲ್ಲಿ ಕೇಳಿದಷ್ಟನ್ನು ನಿನಗೆ ಅರಿಕೆಮಾಡುವೆನು.

೫. ಮೂವತ್ತು ಯೋಜನದ ದೂರ ವಿಶಾಲವಾಗಿರುವ ಸಾಗರದ ದಡದಲ್ಲಿ ಅದರ ದಕ್ಷಿಣಕ್ಕೆ ಪಾಂಚಜನ್ಯವೆಂಬ ಉಪದ್ವೀಪವಿರುವುದು. ಅಲ್ಲೇ ಆ ರಾಕ್ಷಸನು ಇರುವುದು.

೬. ಎಂದು ಉದ್ಧವನು ಹೇಳಲು ಆಗ ಅನಿರುದ್ಧನು ಧೈರ್ಯವನ್ನವಲಂಬಿಸಿ ತನ್ನ ಸೈನಿಕರೆಲ್ಲರನ್ನೂ ಕರೆದು ಕೋಪದಿಂದ ಈ ರೀತಿ ಅಪ್ಪಣೆಮಾಡಿದನು.

|| ಅನಿರುದ್ಧ ಉವಾಚ ||

ಅಹಂ ಯಾಸ್ಯಾಮಿ ಪಾರಂ ವೈ ತಸ್ಮಾದ್ಯಾದವಸತ್ತಮಾಃ |
ಸೇತುಂ ಕುರುತ ಶೀಘ್ರಂ ತು ಸಾಗರಸ್ಯ ಶರೈರಪಿ || ೭ ||

ಇತಿ ತದ್ವಚನಂ ಶ್ರುತ್ವಾ ಯಾದವಾ ಯುದ್ಧಕೋವಿದಾಃ |
ಸಾಗರೇ ಮುಮುಚುರ್ಬಾಣಾನ್ಪ್ರಹಸಂತಃ ಪರಸ್ಪರಂ || ೮ ||

ತತಸ್ಸರ್ವೇ ಜಲಚರಾಸ್ತೀಕ್ಷ್ಣಬಾಣೈಃ ಪ್ರತಾಡಿತಾಃ |
ಕೋಲಾಹಲಂ ಪ್ರಕುರ್ವಂತೋ ದುದ್ರುವಸ್ತೇ ಚತುರ್ದಿಶಂ || ೯ ||

ನ ಕೇಷಾಂ ಪ್ರಗತಾ ಬಾಣಾಃ ಪಾರಂ ವೈ ಸಾಗರಸ್ಯ ಚ |
ಇತಿ ವೈ ಕಥಿತಂ ವಾಕ್ಯಂ ಖಸ್ಥೇನ ಚ ಸುರರ್ಷಿಣಾ || ೧೦ ||

---

೭. ಯದುವೀರರೇ, ಈಗ ನಾನು ಆ ರಾಕ್ಷಸನನ್ನು ಎದುರಿಸಿಲು ಸಾಗರವನ್ನು ದಾಟಬೇಕಾಗಿದೆ. ಅಪಾರ ಜಲವುಳ್ಳ ಅದನ್ನು ದಾಟಲು ಸೇತುವೆಯು ಅವಶ್ಯಕತೆ ಇರುವುದು. ಆದುದರಿಂದ ನೀವೆಲ್ಲರೂ ಬಾಣಗಳಿಂದ ಸೇತುವೆಯನ್ನು ನಿರ್ಮಿಸಿರಿ.

೮. ಈ ಆಜ್ಞೆಯನ್ನು ಕೇಳಿದ ಕೂಡಲೇ ಯುದ್ಧಶೂರರಾದ ಯಾದವರೆಲ್ಲರೂ ನಗುನಗುತ್ತಾ ಸಾಗರದಲ್ಲಿ ಬಾಣಗಳನ್ನು ಹೊಡೆಯಲು ಪ್ರಾರಂಭಿಸಿದರು.

೯. ಸಾಗರದಲ್ಲಿರುವ ಜಲಚರಗಳು ಆ ಬಾಣಗಳ ಏಟನ್ನು ತಾಳಲಾರದೆ ಕೂಗುತ್ತಾ ದಿಕ್ಕಾಪಾಲಾಗಿ ಓಡಿದವು.

೧೦. ಇದನ್ನು ನೋಡಲು ದೇವರ್ಷಿಯಾದ ನಾರದನು ಆಕಾಶದಲ್ಲಿ ನಿಂತಿದ್ದನು. ಅವನು ಯಾರ ಬಾಣವೂ ಸಾಗರದ ಆಚೆಯ ದಡವನ್ನು ಮುಟ್ಟಲಿಲ್ಲವೆಂದು ಹೇಳಿಬಿಟ್ಟನು.

ತದಾಕ್ರೂರೋ ಹೃದೀಕಶ್ಚ ಸಾತ್ಯಕಿಶ್ಚೋದ್ಧವೋ ಬಲೀ ।
ಕೃತವರ್ಮಾ ಸಾರಣಶ್ಚ ಯುಯುಧಾನಾದಯೋ ನೃಪ ॥ ೧೧ ॥

ಹೇಮಾಂಗದ ಇಂದ್ರನೀಲೋಽನುಶಾಲ್ವಾದ್ಯಾಶ್ಚ ಭೂಪತೇ ।
ಗತಮಾನಾ ಬಭೂವುರ್ವೈ ನಾರದೋಕ್ತಂ ನಿಶಮ್ಯ ಚ ॥ ೧೨ ॥

ತತೋಽನಿರುದ್ಧೋ ಬಲವಾನ್ ಸ್ಮರನ್ಕೃಷ್ಣಪದಾಂಬುಜಂ ।
ಪ್ರತಿಶಾರ್ಙ್ಗಂ ಗೃಹೀತ್ವಾ ವೈ ದಿವ್ಯಾನ್ ಬಾಣಾನ್ಮುಮೋಚ ಹ ॥ ೧೩ ॥

ತತೋ ದೃಷ್ಟ್ವಾ ಋಷಿಃ ಪ್ರಾಹ ಹ್ಯನಿರುದ್ಧ ಶಿಲೀಮುಖಾಃ ।
ಪಾರಂ ಗತ್ವಾ ಸಮುದ್ರಸ್ಯ ವಿವಿಶುಸ್ತೇ ಚ ತತ್ತಟಂ ॥ ೧೪ ॥

ಇತಿ ಶ್ರುತ್ವಾ ಋಷೇರ್ವಾಕ್ಯಂ ಸಾಂಬದೀಪ್ತಿಮತಾದಯಃ ।
ಮುಮುಚುಸ್ತೇ ಶರಾನ್ರಾಜನ್ ತೇಷಾಂ ಪಾರಂ ಗತಾಃ ಶರಾಃ ॥ ೧೫ ॥

೧೧-೧೨. ಅದನ್ನು ಕೇಳಿ ಅಕ್ರೂರ, ಹೃದೀಕ, ಸಾತ್ಯಕಿ, ಉದ್ಧವ ಬಲೀ, ಕೃತವರ್ಮಾ, ಸಾರಣ, ಯುಯುಧಾನ, ಹೇಮಾಂಗದ, ಇಂದ್ರನೀಲ, ಅನುಶಾಲ್ವ ಮೊದಲಾದ ವೀರರೆಲ್ಲರೂ ನಾಚಿಕೆಯಿಂದ ತಲೆತಗ್ಗಿಸಿದರು.

೧೩. ಆಗ ಅನಿರುದ್ಧನು ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತಾ ಧನುಸ್ಸನ್ನು ತೆಗೆದುಕೊಂಡು ಅದರಲ್ಲಿ ದಿವ್ಯವಾದ ಬಾಣಗಳನ್ನು ಹೂಡಿ ಪ್ರಯೋಗಿಸಿದನು.

೧೪. ಆಗ ಪುನಃ ದೇವರ್ಷಿಯಾದ ನಾರದನು ಅನಿರುದ್ಧನ ಬಾಣಗಳೆಲ್ಲವೂ ಸಾಗರವನ್ನು ದಾಟಿ ಆಚೆಯ ದಡಕ್ಕೆ ಹೋದವು ಎಂದು ಹೇಳಿದನು.

೧೫. ಋಷಿಯು ವಾಕ್ಯವನ್ನು ಕೇಳಿದ ಕೂಡಲೇ ಸಾಂಬ, ದೀಪ್ತಮಾನ್ ಮುಂತಾದವರೆಲ್ಲರೂ ಬಾಣಗಳನ್ನು ಪ್ರಯೋಗಿಸಿದರು. ಅವರ ಬಾಣಗಳೆಲ್ಲವೂ ಆಚೆಯ ದಡವನ್ನು ಸೇರಿದವು.

ಶರೇಷು ಚ ಶರಾ ರಾಜನ್ ಕೋಟಿಶಃ ಕೋಟಿಶಃ ಕಿಲ ।
ವಿವಿಶುರ್ವೀಕ್ಷ್ಯ ಸರ್ವೇಽಪಿ ಧನ್ವಿನೋ ವಿಸ್ಮಯಂ ಗತಾಃ ॥ ೧೬ ॥

ಚಕ್ರುಸ್ಸೇತುಂ ಚ ತೇ ಸರ್ವೇ ತ್ರಿಂಶದ್ಯೋಜನಲಂಬಿತಂ ।
ದೃಢಂ ಜಲಾಚ್ಚಾಂತರಿಕ್ಷನ್ಮೇಕಯೋಜನವಿಸ್ತೃತಂ ॥ ೧೭ ॥

ಬದ್ಧ್ವಾ ತತಶ್ಚ ಸೇತುಂ ಚ ಚತುರ್ಭಿಃ ಪ್ರಹರೈರಪಿ ।
ಅನಿರುದ್ಧಾದಯೋ ರಾತ್ರೌ ಸುಷುಪುಃ ಶಿಬಿರೇಷು ವೈ ॥ ೧೮ ॥

ತಸ್ಮಾದ್ವೈ ಪುತ್ರಪೌತ್ರಾಣಾಂ ಕೃಷ್ಣಸ್ಯ ಪರಮಾತ್ಮನಃ ।
ಶೂರಾಣಾಂ ಕೃಷ್ಣಬಿಂಬಾನಾಂ ಬಲಂ ಕಿಂ ಕಥಯಾಮ್ಯಹಂ ॥ ೧೯ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಸಪ್ತವಿಂಶೋಽಧ್ಯಾಯಃ

---

೧೬. ಕೋಟ್ಯಾನುಕೋಟಿ ಬಾಣಗಳು ಒಂದರ ಮೇಲೆ ಒಂದರಂತೆ ಹೋಗಿಬಿದ್ದವು. ಯೋಧರೆಲ್ಲರೂ ಇದನ್ನು ನೋಡಿ ವಿಸ್ಮಿತರಾದರು.

೧೭–೧೮. ಸಾಯಂಕಾಲದ ಹೊತ್ತಿಗೆ ಅತಿಪರಿಶ್ರಮದ ಫಲವಾಗಿ ಶರ ಸೇತುವೆಯು ನಿರ್ಮಿತವಾಯಿತು. ನೀರಿನಿಂದ ಅಂತರಿಕ್ಷದವರೆಗೆ ಉದ್ದವಾಗಿಯೂ ಒಂದು ಯೋಜನದ ದೂರ ಅಗಲವಾಗಿಯೂ ಎರಡು ದಡಗಳಿಗೂ ತಗುಲಿಕೊಂಡ ದಾಗಿಯೂ ಬಿಗಿಯಾಗಿಯೂ ಇದ್ದು ನೋಡಲು ಅತ್ಯಾಶ್ಚರ್ಯಕರವಾಗಿದ್ದಿತು. ಅನಂತರ ಅನಿರುದ್ಧನೇ ಮೊದಲಾದವರು ಶಿಬಿರಗಳಿಗೆ ತೆರಳಿ ರಾತ್ರಿಯೆಲ್ಲಾ ವಿಶ್ರಾಂತಿಯನ್ನು ಪಡೆದರು.

೧೯. ವಜ್ರನಾಭಿಯೇ, ಆ ಅದ್ಭುತವನ್ನು ಹೇಗೆ ವರ್ಣಿಸಲಿ? ಶ್ರೀಕೃಷ್ಣ ಪರಮಾತ್ಮನ ಪುತ್ರರ, ಪೌತ್ರರ ಶೌರ್ಯವು ಅಸಾಧ್ಯವಾದುದು. ಶ್ರೀಕೃಷ್ಣ ನಂತೆಯೇ ಇರುವ ಅವರ ಶಕ್ತಿಯನ್ನು ಹೇಗೆ ತಾನೆ ತಿಳಿಸಲಿ? ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತೇಳನೆಯ
ಅಧ್ಯಾಯುವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ಅಷ್ಟವಿಂಶೋಽಧ್ಯಾಯಃ

॥ ಶ್ರೀಗರ್ಗ ಉವಾಚ ॥

ಕೃತ್ವಾ ತು ಶೌಚಾದಿಕಮೇವ ಕರ್ಮ
ಪ್ರಭಾತಕಾಲೇ ಯದುನಂದನಶ್ಚ ।
ಜಗಾಮ ಪಾರಂ ಯದುಭಿಶ್ಚ ಸಿಂಧೋ
ರಾಮೋ ಯಥಾ ವೈ ಕಪಿಭಿರ್ನೃಪೇಂದ್ರ ॥ ೧ ॥

ದದೃಶುಸ್ತತ್ರ ತೇ ಗತ್ವಾನಿರುದ್ಧಾದ್ಯಾಶ್ಚ ಯಾದವಾಃ ।
ಉಪದ್ವೀಪಂ ಪಾಂಚಜನ್ಯಂ ಶತಯೋಜನವಿಸ್ತೃತಂ ॥ ೨ ॥

ಇಪ್ಪತ್ತೆಂಟನೆಯ ಅಧ್ಯಾಯವು.

೧. ಶ್ರೀಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ, ಕೇಳು ;–ಅನಿರುದ್ಧನು ರಾತ್ರಿಯೆಲ್ಲಾ ಸುಖವಿಶ್ರಾಂತಿಯನ್ನು ಪಡೆದು ಪ್ರಭಾತದಲ್ಲಿ ಶೌಚಾದಿ ನಿತ್ಯಕರ್ಮಗಳನ್ನು ಮುಗಿಸಿದನು. ಅನಂತರ ತನ್ನ ಸೇನೆಯೊಡನೆ ರಾಮನು ಕಪಿಗಳೊಡನೆ ಸಮುದ್ರವನ್ನು ದಾಟಿದಂತೆ ಸಾಗರವನ್ನು ದಾಟಿದನು.

೨. ಆಚೆಯ ದಡವನ್ನು ಸೇರಲು ಎದುರಿಗೆ ಪಾಂಚಜನ್ಯವೆಂಬ ಉಪದ್ವೀಪವು ಕಾಣಿಸಿತು. ಅದು ನೂರುಯೋಜನದ ದೂರ ವಿಸ್ತರಿಸಿತ್ತು.

ರಾಜತೇ ತತ್ರ ರಾಜೇಂದ್ರ ನಾಮ್ನಾ ವೈ ಚಾಸುರೀ ಪುರೀ ।
ವಿಂಶದ್ಯೋಜನವಿಸ್ತೀರ್ಣಾ ದೈತ್ಯವೃಂದಸಮಾಕುಲಾ ॥ ೩ ॥

ಪುನ್ನಾಗೈರ್ನಾಗಚಂಪೈಶ್ಚ ತಿಲಕೈರ್ದೇವದಾರುಭಿಃ ।
ಅಶೋಕೈಃ ಪಾಟಲೈರಾಮ್ರೈರ್ಮಂದಾರೈಃ ಕೋವಿದಾರಕೈಃ ॥ ೪ ॥

ನಿಂಬುಜಂಬೂಕದಂಬೈಶ್ಚ ಪ್ರಿಯಾಲಪನಸೈಸ್ತಥಾ ।
ಸಾಲೈಸ್ತಾಲೈಸ್ತಮಾಲೈಶ್ಚ ಮಲ್ಲಿಕಾಜಾತಿಯೂಥಿಕೈಃ ॥ ೫ ॥

ನೀಪೈಃ ಕದಂಬೈರ್ಬಕುಲೈಶ್ಚಂಪಕೈರ್ಮದನಾಭಿಧೈಃ ।
ಶೋಭಿತಾ ನಗರೀ ರಮ್ಯಾ ರತ್ನಪ್ರಾಸಾದಸಂಯುತಾ ॥ ೬ ॥

ಯದೂನ್ಸಮಾಗತಾನ್ ಶ್ರುತ್ವಾ ಮಯಂ ಮಾಯಾವಿನಂ ಖಲಃ ।
ಪ್ರೇಷಯಾಮಾಸ ಗಣಿತುಂ ಯಾದವಾನಾಂ ಮಹಾತ್ಮನಾಂ ॥ ೭ ॥

೩–೪. ಆ ಬಲ್ವಲನ ರಾಜಧಾನಿಯೇ ಇಪ್ಪತ್ತುಯೋಜನದ ವಿಸ್ತಾರವುಳ್ಳದ್ದಾಗಿತ್ತು. ಅನೇಕ ರಾಕ್ಷಸರು ಅಲ್ಲಿ ವಾಸಿಸುತ್ತಿದ್ದರು. ಪ್ರಸಿದ್ಧಮರಗಳಾದ ಪುನ್ನಾಗ, ನಾಗಸಂಪಿಗೆ, ತಿಲಕ, ದೇವದಾರು, ಅಶೋಕ, ಪಾಟಲ, ಆಮ್ರ, ಮಂದಾರ, ಕೋವಿದಾರ ಮುಂತಾದುವುಗಳು ಬಹಳವಾಗಿದ್ದವು.

೫–೬. ಬೇವು, ನೇರಳೆ, ಈಚಲು ಮುಂತಾದ ಸುಂದರವೃಕ್ಷಗಳೂ, ಪ್ರಿಯಾಲ, ಹಲಸು ಮುಂತಾದ ಫಲಸಮೃದ್ಧವೃಕ್ಷಗಳೂ, ಸಾಲ, ತಾಳೆ, ಹೊಂಗೆ ಮುಂತಾದ ನೆರಳನ್ನು ಕೊಡುವ ಮರಗಳೂ, ಮಲ್ಲಿಗೆ, ಜಾಜಿ, ಶ್ಯಾಮಂತಿಕೆ, ಸಂಪಿಗೆ, ಮದನ ಮುಂತಾದ ಹೂಕೊಡುವ ಗಿಡಗಳೂ, ನೀಪ, ಕದಂಬ ಮುಂತಾದ ವೃಕ್ಷಗಳೂ, ಸಹ ಅಲ್ಲಿ ಹೇರಳವಾಗಿದ್ದು ನಗರಿಯನ್ನು ಅಲಂಕರಿಸಿದ್ದವು. ರತ್ನಗಳಿಂದ ನಿರ್ಮಿಸಿದ ಉಪ್ಪರಿಗೆಗಳು ಸುಂದರವಾಗಿ ಕಾಣುತ್ತಿದ್ದವು.

೭. ಯಾದವರು ಬಂದರೆಂದು ತಿಳಿದ ತಕ್ಷಣವೇ ಬಲ್ವಲನು ಎಷ್ಟುಜನ ಯಾದವರು ಬಂದಿರುವರೆಂದು ತಿಳಿದುಕೊಳ್ಳಲು ಮಾಯಾವಿಯಾದ ಮಯನನ್ನು ಕಳುಹಿಸಿಕೊಟ್ಟನು.

ಸ ಚಾಪಿ ಶುಕರೂಪೇಣ ಗತ್ವಾ ದೃಷ್ಟ್ವಾ ಯದೂತ್ತಮಾನ್ ।
ಆಗತ್ಯ ಸ್ವಪುರೀಮಧ್ಯೇ ಬಲ್ವಲಂ ವಿಸ್ಮಿತೋಽಬ್ರವೀತ್ ॥ ೮ ॥

॥ ಮಯ ಉವಾಚ ॥

ಕಃ ಕರಿಷ್ಯತಿ ಸಂಖ್ಯಾಂ ವೈ ವೃಷ್ಣೀನಾಂ ಬಲಿನಾಂ ನೃಪ ।
ನಿಯುತಾನಾಂ ಚ ನಿಯುತಕೋಟಿನಾಸ್ತೇ ಸ ಕಾರ್ಷ್ಣಿಜಃ ॥ ೯ ॥

ಸೇತುಂ ಕೃತ್ವಾ ಶರೈಃ ಸಿಂಧೋಃ ಪ್ರಾಪ್ತಾಃ ಸರ್ವೇ ತವೋಪರಿ ।
ತೇಷಾಂ ಪಶ್ಯ ಬಲಂ ರಾಜನ್ ದೇವವಿಸ್ಮಯಕಾರಕಂ ॥ ೧೦ ॥

ಸಾಗರಸ್ಯ ಶರೈಃ ಸೇತುಂ ನ ದೃಷ್ಟಂ ನ ಶ್ರುತಂ ಕೃತಂ ।
ವೃದ್ಧೇನ ಚ ಮಯಾ ರಾಜಂಸ್ತ್ವದಗ್ರೇಽದ್ಯ ವಿಲೋಕಿತಂ ॥ ೧೧ ॥

ರಾಘವೇಣ ಪುರಾ ಸೇತುಂ ಪಾಷಾಣೈರ್ದ್ರುಮವೇಷ್ಟಿತಂ ।
ಸ್ವನಾಮಸ್ಯ ಪ್ರತಾಪೇನ ಲಂಕಾಯಾ ನಿಕಟೇ ಕೃತಂ ॥ ೧೨ ॥

---

೮. ಮಯನು ಗಿಣಿಯರೂಪನ್ನು ಧರಿಸಿಕೊಂಡು ಬಂದು ಯಾದವರನ್ನು ನೋಡಿ ಪುನಃ ತನ್ನ ನಗರಿಗೆ ತೆರಳಿ ಬಲ್ವಲನನ್ನು ಕುರಿತು

೯. ಒಡೆಯ, ಆ ಯಾದವರು ಇಷ್ಟಿರುವರೆಂದು ಎಣಿಸಲು ಯಾರಿಗೆ ತಾನೇ ಸಾಧ್ಯವಾದೀತು? ಕೋಟ್ಯಾನುಕೋಟಿ ಅಸಂಖ್ಯಾತ ಶೂರರು ಬಂದಿಳಿದಿರುವರು. ಅದರ ಮಧ್ಯದಲ್ಲಿ ಅನಿರುದ್ಧನು ಇರುವನು.

೧೦. ಅವರು ಮಾಡಿರುವ ಕೆಲಸವು ಅದ್ಭುತವಾದುದು. ಬಾಣಗಳಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿರುವರು. ಅದರ ಮೂಲಕ ಸಮುದ್ರವನ್ನು ದಾಟಿ ನಿನ್ನನ್ನೆದಿರಿಸಲು ಬಂದಿರುವರು. ಅವರ ಶೌರ್ಯವನ್ನಾದರೂ ನೋಡಿ ಬಂದಿರುವ ಸೇನೆಯನ್ನು ನೋಡಿದರೆ ದೇವತೆಗಳೂ ಆಶ್ಚರ್ಯಪಡುತ್ತಿರುವರು.

೧೧-೧೨. ನಾನಾಗಲೇ ಮುದುಕ. ನನ್ನ ಜೀವಮಾನದಲ್ಲಿ ಇದುವರೆವಿಗೂ ಇಂತಹ ಅದ್ಭುತ ಕೆಲಸವನ್ನು ನೋಡಿಯೂ ಇಲ್ಲ; ಕೇಳಿಯೂ ಇಲ್ಲ. ಹಿಂದೆ ರಾಮನು ಲಂಕೆಗೆ ಬರಲು ಸಮುದ್ರಕ್ಕೆ ಕಲ್ಲುಗಳು, ಮರಗಳು ಅವುಗಳ ಸಹಾಯದಿಂದ ಸೇತುವೆಯನ್ನು ಕಟ್ಟಿದ್ದನು. ಆದರೆ ಅಬ್ಬಾ! ಬಾಣಗಳಿಂದ ಸೇತುವೆಯನ್ನು ಇದುವರೆಗೂ ಯಾರೂ ಕಟ್ಟಿಲ್ಲವು.

ತತ್ಸರ್ವಂ ಚ ಮಯಾ ದೃಷ್ಟಮದ್ಯ ದೃಷ್ಟಂ ಹಿ ಚಾದ್ಭುತಂ ।
ಶ್ರೀಕೃಷ್ಣೇನ ಪುರಾ ರಾಜನ್ ಕಂಸಾದ್ಯಾ ಶಕುನಾದಯಃ ॥ ೧೩ ॥

ಮಾರಿತಾಃ ಸಂಗರೇ ದೈತ್ಯಾ ನೃಪಾಸ್ಸರ್ವೇ ವಿನಿರ್ಜಿತಾಃ ।
ಕೃಷ್ಣಸ್ತು ಭಗವಾನ್ಸಾಕ್ಷಾದ್ಬ್ರಹ್ಮಣಾ ಪ್ರಾರ್ಥಿತಾಃ ಪುರಾ ॥ ೧೪ ॥

ಗೋಲೋಕಾದಾಗತೋ ಭೂಮೌ ಭಕ್ತಾನಾಂ ರಕ್ಷಣಾಯ ಚ ।
ಅಭಕ್ತಾನಾಂ ಚ ನಾಶಾಯ ಕುಶಸ್ಥಲ್ಯಾಂ ವಿರಾಜತೇ ॥ ೧೫ ॥

ತಸ್ಮಾದ್ಯದೂತ್ತಮಾಸ್ಸರ್ವೇಽನಿರುದ್ಧಾದ್ಯಾ ಮಹಾಬಲಾಃ ।
ಭೀಷಣಂ ಚ ಬಕಂ ಜಿತ್ವಾ ಹ್ಯನ್ಯಾನ್ ಜಿತ್ವಾಽತ್ರ ಚಾಗತಾಃ ॥
ಪುತ್ರಾಃ ಪೌತ್ರಾಶ್ಚ ಕೃಷ್ಣಸ್ಯ ಜ್ಞಾತಯಶ್ಚ ಯದೂತ್ತಮಾಃ ॥ ೧೬ ॥

ಆಕಾಶಂ ಜೇತುಮಿಚ್ಛಂತಿ ಕಾ ವಾರ್ತಾ ಭೂತಲಸ್ಯ ಚ ॥ ೧೭ ॥

---

೧೩. ಇದು ಬಹಳ ಅದ್ಭುತವಾದ ದೃಶ್ಯವು. ಇಲ್ಲಿಗೆ ಬಂದಿರುವರೆಲ್ಲರೂ ಶ್ರೀಕೃಷ್ಣನ ಅನುಯಾಯಿಗಳು. ಶ್ರೀಕೃಷ್ಣನು ಸಾಮಾನ್ಯನಲ್ಲ. ಹಿಂದೆ ಕಂಸ, ಶಕುನಿ ಮುಂತಾದ ರಾಕ್ಷಸರನ್ನೆಲ್ಲಾ ಕೊಂದುಹಾಕಿರುವನು. ಯುದ್ಧಗಳಲ್ಲಿ ಅನೇಕ ರಾಜರನ್ನು ಗೆದ್ದಿರುವನು.

೧೪-೧೫. ಶ್ರೀಕೃಷ್ಣನು ಸಾಕ್ಷಾತ್ ಪರಮಾತ್ಮನು. ಹಿಂದೆ ಬ್ರಹ್ಮನ ಪ್ರಾರ್ಥನೆಯಂತೆ ಗೋಲೋಕದಿಂದ ಭೂಲೋಕಕ್ಕೆ ಬಂದು ಅವತರಿಸಿರುವನು. ಭಕ್ತರನ್ನು ರಕ್ಷಿಸುವನು. ಭಕ್ತರಲ್ಲದವರನ್ನು ನಾಶಮಾಡುವನು. ಇದಕ್ಕೋಸ್ಕರ ಭೂಮಿಯಲ್ಲಿ ಅವತರಿಸಿ ಕುಶಸ್ಥಲಿಯಲ್ಲಿ ವಿರಾಜಮಾನನಾಗಿರುವನು.

೧೬. ಅವನ ಅಪ್ಪಣೆಯಂತೆ ಅನಿರುದ್ಧನೇ ಮೊದಲಾದ ಮಹಾಬಲಶಾಲಿಗಳಾದ ಯಾದವರು ಇಲ್ಲಿಗೆ ಬಂದಿರುವರು. ಯಜ್ಞಾಶ್ವವನ್ನು ಹಿಡಿದುಕೊಂಡ ಭೀಷಣ, ಬಕ, ಮುಂತಾದ ರಾಕ್ಷಸರನ್ನೆಲ್ಲಾ ಜಯಿಸಿಬಂದಿರುವರು. ಯದು ಸೈನ್ಯದಲ್ಲಿ ಪರಾಕ್ರಮಿಗಳಾದ ಶ್ರೀಕೃಷ್ಣನ ಪುತ್ರರೂ, ಜ್ಞಾತಿಗಳೂ ಸೇರಿರುವರು.

೧೭-೧೮. ಆಕಾಶವನ್ನೇ ಜಯಿಸುವೆವೆಂದೆನ್ನುವ ಅವರಿಗೆ ಭೂಮಿಯನ್ನು ಜಯಿಸುವುದೊಂದು ಲೆಕ್ಕವೆ? ಆದುದರಿಂದ ಯಜ್ಞಾಶ್ವವನ್ನು ಒಪ್ಪಿಸಿಬಿಡು.

ಅನಿರುದ್ಧಾಯ ತಸ್ಮಾದ್ವೈ ತುರಗಂ ದೇಹಿ ಬಲ್ವಲ ।
ದೈತ್ಯಾನಾಂ ಹತಶೇಷಾಣಾಂ ಕುಲಕೌಶಲ್ಯಹೇತವೇ ॥ ೧೮ ॥

ತತೋಽನಿರುದ್ಧಾಯ ಹಯಂ ಚ ದತ್ವಾ
ಸುರದ್ವಿಷಾಂ ವೈ ಸುಖಹೇತವೇ ಚ ।
ಶ್ರೀಕೃಷ್ಣಚಂದ್ರಂ ಪ್ರಭಜಂಶ್ಚ ಭುಂಕ್ಷ್ವ
ರಾಜ್ಯಂ ಸ್ವಕೀಯಂ ತಪಸಾನುಲಬ್ಧಂ ॥ ೧೯ ॥

ಏವಂ ಶುಭೈಶ್ಚ ವಚನೈರ್ಬೋಧ್ಯಮಾನೋಽಪಿ ಬಲ್ವಲಃ ।
ನಿಶ್ವಸ್ಯೋವಾಚ ರೋಷೇಣ ಮಯಂ ಕೃಷ್ಣಪರಾಙ್ಮುಖಃ ॥ ೨೦ ॥

॥ ಬಲ್ವಲ ಉವಾಚ ॥

ವಿನಾ ಯುದ್ಧೇನ ತ್ವಂ ದೈತ್ಯ ಕಥಂ ಭೀತೋ ಭವಿಷ್ಯಸಿ ।
ವದಿಷ್ಯಸಿ ಮಮಾಗ್ರೇ ತ್ವಂ ಶೂರಹಾಸ್ಯಕರಂ ವಚಃ ॥ ೨೧ ॥

ತ್ವಂ ಬುದ್ಧಿಬಲಹೀನಶ್ಚ ವೃದ್ಧತ್ವಾಚ್ಛಥತಾಂ ಗತಃ ।
ತಸ್ಮಾತ್ತ್ವದೀಯಂ ವಚನಂ ನಾಹಂ ಗೃಹ್ಣಾಮಿ ಸಾಂಪ್ರತಂ ॥ ೨೨ ॥

ಸತ್ತುಳಿದ ರಾಕ್ಷಸರ ಕುಲವು ಉಳಿದುಕೊಳ್ಳಲಿ ಎಂಬ ದೃಷ್ಟಿಯಿಂದಲಾದರೂ ಒಪ್ಪಿಸಿಬಿಡು.

೧೯. ರಾಕ್ಷಸರಿಗೆಲ್ಲಾ ಸುಖವನ್ನುಂಟುಮಾಡಲು ಶ್ರೀಕೃಷ್ಣನ ಯಜ್ಞಾಶ್ವವನ್ನು ಅನಿರುದ್ಧನಿಗೆ ಅರ್ಪಿಸಿಬಿಡು. ಶ್ರೀಕೃಷ್ಣಚಂದ್ರನನ್ನು ಭಕ್ತಿಯಿಂದ ಭಜಿಸು. ನಿನ್ನ ತಪೋಬಲದಿಂದ ಸಿಕ್ಕಿದ ರಾಜ್ಯವನ್ನು ಸುಖವಾಗಿ ಅನುಭವಿಸು.

೨೦. ಎಂದು ಒಳ್ಳೆಯಮಾತುಗಳಿಂದ ಮಯನು ಬಲ್ವಲನಿಗೆ ಉಪದೇಶಿಸದರೂ ಸಹ ಬಲ್ವಲನು ಶ್ರೀಕೃಷ್ಣನಿಗೆ ವಿರುದ್ಧವಾಗಿಯೇ ಇರುವಂತೆ ಕೋಪದಿಂದ ಇಂತು ಮಾತನಾಡಿದನು.

೨೧–೨೨. ಎಲೋ ಮಯನೇ, ಇದೇನು ಹೀಗೆ ಹೆದರುತ್ತಿರುವೆ? ಯುದ್ಧ ಮಾಡದೆ ಅವರ ಪರಾಕ್ರಮವನ್ನು ತಿಳಿದು ಭಯಪಡುತ್ತಿರುವೆ. ಇವು ಶೂರರಿಗೆ ಅಪಹಾಸ್ಯಕ್ಕೆಡೆಯಾದ ಮಾತುಗಳು. ನೀನು ಅರಳುಮರಳು ಮುದುಕನಾಗಿರುವುದರಿಂದ ನಿನಗೆ ಹೆದರಿಕೆಯಾಗುವುದು. ನಿನಗೆ ಬುದ್ಧಿ ನೆಟ್ಟಗಿಲ್ಲ. ಆದುದರಿಂದ ಬೆಲೆಯಿಲ್ಲದ ನಿನ್ನ ಮಾತನ್ನು ನಾನು ಎಂದಿಗೂ ಕೇಳಲಾರೆನು.

ಯದಿ ಕೃಷ್ಣೋ ಹರಿಃ ಸಾಕ್ಷಾದೇತೇ ಕೃಷ್ಣಸ್ಯ ವಂಶಜಾಃ।
ಮಮಾಗ್ರೇ ಶಿವಭಕ್ತಸ್ಯ ಕಿಂ ಕರಿಷ್ಯತಿ ಪೌರುಷಂ　　　॥ ೨೩ ॥

ಭಯಂ ಮಾ ಕುರು ತಸ್ಮಾತ್ತ್ವಂ ಮಾಯಾಃ ಕುತ್ರ ಗತಾಸ್ತವ।
ಅಹಂ ತವಾಶ್ರಯೇಣಾಪಿ ಯುದ್ಧಂ ಕರ್ತುಂ ವ್ರಜಾಮಿ ವೈ　　　॥ ೨೪ ॥

ಅನಿರುದ್ಧೋ ಮಹಾಶೂರಃ ಶೂರಃ ಕಿಂ ನ ವಯಂ ಸ್ಮೃತಾಃ।
ಸ್ಥಿತೇ ಮಯಿ ಮಹೀಮಧ್ಯೇ ಕೋಽಯಂ ಗರ್ವೋಽಭವನ್ಮಹತ್　　　॥ ೨೫ ॥

ಫಲಂ ಗರ್ವಸ್ಯ ಪ್ರಾಪ್ನೋತು ಮಮ ನಿರ್ಮುಕ್ತಸಾಯಕೈಃ।
ಅದ್ಯ ಮೇ ನಿಶಿತಾ ಬಾಣಾ ಅನಿರುದ್ಧಂ ಚ ಮಾನಿನಂ　　　॥ ೨೬ ॥

ಪ್ರಕುರ್ವಂತಿ ರಣೇ ದೈತ್ಯ ರಕ್ತಾಂಗಭಿನ್ನಕಂಚುಕಂ।
ಯಥಾ ಕಿಂಶುಕವೃಕ್ಷಂ ವೈ ವಸಂತದಿವಸಾಃ ಕಿಲ　　　॥ ೨೭ ॥

---

೨೩. ಸಾಕ್ಷಾತ್ ಶ್ರೀಕೃಷ್ಣನೇ ಬರಲಿ. ನನಗೇನೂ ಹೆದರಿಕೆಯಿಲ್ಲ. ಇನ್ನು ಶ್ರೀಕೃಷ್ಣನ ವಂಶಜರಾದ ಇವರಿಗೆ ಹೆದರುವೆನೇ. ಶಿವಭಕ್ತನಾದ ನನ್ನ ಮುಂದೆ ಅವರ ಶಕ್ತಿಯು ಎಷ್ಟರದು?

೨೪. ಆದ್ದರಿಂದ ಮಯನೇ, ಹೆದರಿಕೆಯನ್ನು ಬಿಟ್ಟುಬಿಡು. ಹಿಂದೆ ನೀನುಪಯೋಗಿಸಿದ ಮಾಯೆಗಳೆಲ್ಲವೂ ಈಗ ಎಲ್ಲಿ ಹೋದವು? ಅವುಗಳನ್ನೆಲ್ಲಾ ಸ್ಮರಿಸಿಕೋ. ನಿನ್ನೊಡನೆಯೇ ನಾನು ಅವರೊಡನೆ ಯುದ್ಧಮಾಡಲು ಹೊರಡುವೆನು.

೨೫. ಅನಿರುದ್ಧನು ಮಹಾಶೂರನು. ಆದರೆ ನಾವೇನು ಶೂರರಲ್ಲವೇ? ಅವನ ಶೌರ್ಯಗರ್ವವನ್ನು ನಾನಡಗಿಸುವೆನು. ನಾನು ಭೂಮಿಯಲ್ಲಿ ಜೀವಂತನಾಗಿರಲು ಯಾರು ಗರ್ವವನ್ನು ಪಡುವರು?

೨೬–೨೭. ಒಂದು ವೇಳೆ ಗರ್ವವನ್ನು ಪಟ್ಟರೆ ಆ ಗರ್ವಕ್ಕೆ ತಕ್ಕ ಫಲವನ್ನು ನನ್ನ ಬಾಣಗಳು ತೋರಿಸುವುವು. ನನ್ನ ತೀಕ್ಷ್ಣವಾದ ಬಾಣಗಳು ಗರ್ವಿಯಾದ ಅನಿರುದ್ಧನ ಮೇಲೆ ಬಿದ್ದು ಅವನ ಕವಚಗಳನ್ನು ಹರಿದು ಶರೀರವನ್ನೆಲ್ಲಾ ಗಾಯ ಮಾಡಿ ವಸಂತ ದಿವಸಗಳಲ್ಲಿರುವ ಮುತ್ತುಗದ ಹೂವಿನಂತೆ ರಕ್ತದಿಂದ ಕೆಂಪಾಗಿ ಮಾಡುವುವು.

ದಾರಯಂತು ಕಪೋಲಾನಿ ನಾರಾಚಾ ಮಮ ಹಸ್ತಿನಾಂ ।
ಹಯಾನ್ಪಶ್ಯಂತು ಶತಶೋ ರುಧಿರೌಘಪರಿಪ್ಲುತಾನ್ ॥ ೨೮ ॥

ಪಿಬಂತು ಯೋಗಿನೀವೃಂದಾ ರುಧಿರಾಣಿ ನೃಮಸ್ತಕೈಃ ।
ಭವಂತು ಕಾಲೀ ಸಂತುಷ್ಟಾ ಮದ್ವೈರಿಕ್ರವ್ಯಭಕ್ಷಣೈಃ ॥ ೨೯ ॥

ಮಮ ಬಾಹುಬಲಂ ಸರ್ವೇ ಪಶ್ಯಂತು ಸುಭಟಾಃ ಕಿಲ ।
ಮಹಾಕೋದಂಡನಿರ್ಮುಕ್ತಭಲ್ಲಕೋಟೀರ್ವಿಮುಂಚತಃ ॥ ೩೦ ॥

ಇತಿ ತದ್ವಾಕ್ಯಮಾಕರ್ಣ್ಯ ಮಯೋ ಮಾಯಿಮಾ ಮಹಾಮತಿಃ ।
ಜಾನನ್ಕೃಷ್ಣಸ್ಯ ಮಾಹಾತ್ಮ್ಯಂ ಮದಾಂಧಂ ಚೇದಮಬ್ರವೀತ್ ॥ ೩೧ ॥

---

೨೮. ಅಷ್ಟೇ ಅಲ್ಲದೆ ಅವನ ಆನೆಗಳ ಕುಂಭಸ್ಥಳಗಳನ್ನು ಸೀಳಿ ಚೂರು ಮಾಡುವುವು. ನೂರಾರು ಕುದುರೆಗಳು ನನ್ನ ಬಾಣಗಳಿಗೆ ತುತ್ತಾಗಿ ರಕ್ತಪ್ರವಾಹದಲ್ಲಿ ಹರಿಯುವುವು.

೨೯. ಶತ್ರುಯೋಧರ ತಲೆಯಿಂದ ಚಿಮ್ಮುತ್ತಿರುವ ರಕ್ತವನ್ನು ಭೂತ ಪ್ರೇತಾದಿಗಳು ಕುಡಿದು ತೃಪ್ತಿಪಡಲಿ. ಅವರ ಶವಗಳನ್ನು ತಿಂದು ಕಾಳಿಯು ಸಂತೋಷಪಡಲಿ.

೩೦. ನನ್ನ ಮಹಾಧನುಸ್ಸಿನಲ್ಲಿ ಭಲ್ಲೆಗಳನ್ನು ಹೂಡಿ ಶತ್ರುವರ್ಗದವರ ಮೇಲೆ ಪ್ರಯೋಗಿಸುವೆನು. ಆಗ ನನ್ನ ಬಾಹುಬಲವನ್ನು ನೋಡಿ ತಿಳಿದು ಕೊಳ್ಳಲಿ.

೩೧. ಎಂದು ಬಲ್ವಲನು ಆಡಿದುದನ್ನು ಕೇಳಿ ಮಾಯಾವಿಯೂ, ಚತುರನೂ ಆದ ಮಯನು ಶ್ರೀಕೃಷ್ಣನ ಮಾಹಾತ್ಮೆಯನ್ನು ತಿಳಿದಿದ್ದವನಾದಕಾರಣ ಅದರ ವಿಷಯವಾಗಿ ಮದಾಂಧನಾದ ಬಲ್ವಲನನ್ನು ಕುರಿತಿಂತೆಂದನು.

|| ಮಯ ಉವಾಚ ||

ಯದಾ ವಿಜೇಷ್ಯಸಿ ರಣೇ ಕೃಷ್ಣಪುತ್ರಾಂಶ್ಚ ಯಾದವಾನ್ ।
ಆಗಮಿಷ್ಯತಿ ಶ್ರೀಕೃಷ್ಣೋ ಜೇತುಂ ತ್ವಾಂ ವಾ ಬಲಶ್ಚ ವೈ || ೩೨ ||

ಇತಿ ಶ್ರುತ್ವಾ ಮಹಾದೈತ್ಯೋ ಸತ್ಯಂ ಹಿತಕರಂ ವಚಃ ।
ಕಾಲಪಾಶೇನ ಸಂಬದ್ಧೋ ನ ಜಗ್ರಾಹ ರುಷಾ ಜ್ವಲನ್ || ೩೩ ||

|| ಬಲ್ವಲ ಉವಾಚ ||

ಮಮಾರೀ ರಾಮಕೃಷ್ಣೌ ಚ ಶತ್ರವೋ ವೃಷ್ಣಯಶ್ಚ ಮೇ ।
ತಾನ್ಸರ್ವಾನ್ಮಾರಯಿಷ್ಯಾಮಿ ಯೈರ್ಮೇ ಮಿತ್ರಾಶ್ಚ ಮಾರಿತಾಃ || ೩೪ ||

ಹತ್ವಾ ಚ ಯಾದವಾನತ್ರ ಪಶ್ಚಾದ್ಯಜ್ಞಂ ಕರೋಮ್ಯಹಂ ।
ತಸ್ಯ ದಿಗ್ವಿಜಯೇನಾಪಿ ವಿಜೇಷ್ಯಾಮಿ ಹರೇಃ ಪುರೀಂ || ೩೫ ||

---

೩೨. ಒಂದು ವೇಳೆ ನೀನು ಕೃಷ್ಣನ ಮಕ್ಕಳನ್ನು ಯುದ್ಧದಲ್ಲಿ ಜಯಿಸಿದರೆ ಆಗ ಕೃಷ್ಣನು ನಿನ್ನನ್ನು ಜಯಿಸಲು ಬಲರಾಮನೊಡನೆ ಬಂದೇ ಬರುವನು ಎಂದನು.

೩೩. ಹೀಗೆ ಮಯನು ಹೇಳಿದ ಮಾತುಗಳು ಸತ್ಯವಾಗಿಯೂ ಬುದ್ಧಿವಾದ ರೂಪವಾಗಿಯೂ ಇದ್ದರೂ ಸಹ ಬಲ್ವಲನು ಮೃತ್ಯುಪಾಶಕ್ಕೆ ಒಳಗಾಗಿದ್ದುದರಿಂದ ಅವುಗಳಲ್ಲೊಂದನ್ನೂ ಕೇಳದೆ ಅತಿಕೋಪದಿಂದ ಮಯನನ್ನು ಕುರಿತು,

೩೪. ಲೋ ಮಯನೇ, ಆ ರಾಮಕೃಷ್ಣರೆಂಬುವರು ನನಗೆ ಪರಮ ಶತ್ರುಗಳು. ಯಾದವರೂ ಅಂತೆಯೇ, ಆದುದರಿಂದ ಅವರೆಲ್ಲರನ್ನೂ ಯುದ್ಧದಲ್ಲಿ ಸಂಹರಿಸುವೆನು. ಬಕನೇ ಮುಂತಾದ ನನ್ನ ಸ್ನೇಹಿತರನ್ನು ಕೊಂದುದಕ್ಕೆ ಫಲವನ್ನು ತೋರಿಸುವೆನು.

೩೫. ಅವರೆಲ್ಲರನ್ನೂ ಕೊಂದನಂತರ ನಾನೇ ಯಜ್ಞವನ್ನು ಮಾಡುವೆನು. ಅದರಿಂದ ನನಗುಂಟಾದ ದಿಗ್ವಿಜಯದಿಂದ ಹರಿಯ ಪಟ್ಟಣವಾದ ದ್ವಾರಕೆಯನ್ನು ವಶಮಾಡಿಕೊಳ್ಳುವೆನು.

|| ಮಯ ಉವಾಚ ||

ಮಾನಂ ಮಾ ಕುರು ದೈತ್ಯೇಂದ್ರ ಕಾಲರೂಪಸ್ತುರಂಗಮಃ ।
ಪ್ರಾಪ್ತಸ್ತವ ಪುರೇ ಹಂತುಂ ಹತಶೇಷಾನ್ಮಹಾಸುರಾನ್ || ೩೬ ||

ಅನಿರುದ್ಧಶರಾಸ್ಸರ್ವೇ ಸದ್ಯಸ್ತವ ಪುರೀಂ ನೃಪ ।
ಭಿನ್ನಭಿನ್ನಾಂ ಶೂರಹೀನಾಂ ಕರಿಷ್ಯಂತಿ ನ ಸಂಶಯಃ || ೩೭ ||

ಹಿರಣ್ಯಾಕ್ಷಾದಯೋ ದೈತ್ಯಾ ರಾವಣಾದ್ಯಾ ನಿಶಾಚರಾಃ ।
ಮಾರಿತಾ ಯೇನ ಸಃ ಕೃಷ್ಣೋ ಜಾತೋ ಯದುಕುಲೇ ಶ್ರುತಂ || ೩೮ ||

ಕಿಂಚಿದ್ರಾಜ್ಯಸ್ಯ ಮಾನೇನ ತಂ ನ ಜಾನಾಸಿ ಬಲ್ವಲ ।
ಪ್ರಯಚ್ಛ ತುರಗಂ ತಸ್ಮೈ ನ ಯುದ್ಧಸಮಯೋಽಸ್ತಿ ಹಿ || ೩೯ ||

೩೬-೩೭. ಎನ್ನಲು ಆಗ ಮಯನು ಪುನಃ ಒಳ್ಳೆಯ ಮಾತುಗಳನ್ನಾಡಿದನು. ದೈತ್ಯೇಂದ್ರ, ಕೋಪಿಸಿಕೊಳ್ಳಬೇಡ. ನಿನ್ನ ಪಟ್ಟಣಕ್ಕೆ ಬಂದಿರುವ ಯಜ್ಞಾಶ್ವವು ಸಾಮಾನ್ಯವಾದುದಲ್ಲ. ಮೃತ್ಯುಸ್ವರೂಪವು. ಸತ್ತುಳಿದಿರುವ ರಾಕ್ಷಸರನ್ನೆಲ್ಲಾ ನಿಶ್ಶೇಷಮಾಡಲು ಬಂದಿರುವುದು. ಈಗಲಾದರೂ ಎಚ್ಚೆತ್ತುಕೋ. ಅನಿರುದ್ಧನ ಬಾಣಗಳು ಸಾಮಾನ್ಯವಾದುದಲ್ಲ. ನಿನ್ನ ಪುರಿಯನ್ನು ಚೂರುಚೂರಾಗಿ ಮಾಡುವುದಲ್ಲದೆ ರಾಕ್ಷಸವೀರರ ಹೆಸರು ಇಲ್ಲದಂತೆ ಮಾಡಿಬಿಡುವುದು.

೩೮. ನಿನ್ನಂತಯೇ ಅಹಂಕಾರಪಟ್ಟ, ಹಿರಣ್ಯಾಕ್ಷ, ರಾವಣ ಮುಂತಾದ ರಾಕ್ಷಸರನ್ನು ಶ್ರೀಕೃಷ್ಣನು ಕೊಂದನು. ದುಷ್ಟಶಿಕ್ಷಣಕ್ಕೋಸ್ಕರವಾಗಿಯೇ ಅವನೀಗ ಯದುವಂಶದಲ್ಲಿ ಹುಟ್ಟಿರುವುದು.

೩೯. ನಿನಗಿರುವುದು ಈ ಸ್ವಲ್ಪ ರಾಜ್ಯವು. ಇದಕ್ಕೋಸ್ಕರ ನಿನಗೆ ಇಷ್ಟು ಅಹಂಕಾರವೇ. ಅದರಿಂದ ನಿನಗೇನೂ ತಿಳಿಯದಂತಾಗಿರುವುದು. ಇದು ಯುದ್ಧ ಮಾಡುವ ಸಮಯವಲ್ಲ. ರಾಕ್ಷಸ ಕುಲವನ್ನು ಅಭಿವೃದ್ಧಿಪಡಿಸುವ ಸಮಯದಲ್ಲಿ ಅದನ್ನು ನಾಶಪಡಿಸಲು ಪ್ರಯತ್ನಿಸಬಹುದೇ? ಆದ್ದರಿಂದ ಯಜ್ಞಾಶ್ವವನ್ನು ಸುಮ್ಮನೇ ಒಪ್ಪಿಸಿಬಿಡು.

|| ಬಲ್ವಲ ಉವಾಚ ||

ಅಹಂ ಜಾನಾಮಿ ತ್ವದ್ವಾರ್ತಾಂ ಯುದ್ಧಂ ತೈರ್ನ ಕರಿಷ್ಯಸಿ ।
ಅನಿರುದ್ಧಂ ಗಚ್ಛ ತಸ್ಮಾತ್ತ್ವಂ ವಿಭೀಷಣವತ್ಕಿಲ || ೪೦ ||

|| ಗರ್ಗ ಉವಾಚ ||

ಬಲ್ವಲಸ್ಯ ವಚಃ ಶ್ರುತ್ವಾ ಮಯೋ ಮಾಯಾವಿದಾಂ ವರಃ ।
ಪ್ರತಿವ್ಯೋಢುಂ ತತ್ರ ದುಃಖಮಿದಮೇವಾನ್ವಪದ್ಯತ || ೪೧ ||

ವೈರಭಾವೇನ ಪೂರ್ವಂ ವೈ ವೈಕುಂಠಂ ಬಹವೋ ಗತಾಃ ।
ನಿಶಾಚರಾಶ್ಚ ದೈತ್ಯಾಶ್ಚ ತಂ ಭಾವಂ ಯುಃ ಕರೋತಿ ಹಿ || ೪೨ ||

ಇತ್ಥಂ ವಿಚಾರ್ಯ ಸಹಸಾ ಸ ಉವಾಚ ಮಹಾಸುರಂ ।

|| ಮಯ ಉವಾಚ ||

ಅದ್ಯ ತ್ವಾಂ ಚ ಮಹಾವೀರಂ ನ ನಿಷೇಧಂ ಕರೋಮ್ಯಹಂ || ೪೩ ||

---

೪೦. ಎನ್ನಲು ಆಗ ಬಲ್ವಲನು ತಿರಸ್ಕಾರದಿಂದ ಮಯನನ್ನು ಕುರಿತು ಲೋ ಮಯನೇ, ಸಾಕಿನ್ನು ನಿನ್ನುಪದೇಶವು. ನಿನ್ನ ಯೋಗ್ಯತೆಯು ನನಗೆ ಗೊತ್ತು. ನೀನವರೊಡನೆ ಯುದ್ಧಮಾಡುವುದಿಲ್ಲವೆಂಬುದೂ ನನಗೆ ಗೊತ್ತು. ಆದುದರಿಂದ ನೀನು ಶತ್ರುವಾದ ಅನಿರುದ್ಧನ ಪಕ್ಷಕ್ಕೇ ಸೇರಿಬಿಡು. ಹಿಂದೊಬ್ಬ ವಿಭೀಷಣನೆಂಬ ನಮ್ಮವನು ಶತ್ರುಪಕ್ಷಕ್ಕೆ ಸೇರಿದ್ದನು. ನೀನೂ ಅವನಂತೆಯೇ ನೀಚನು.

೪೧. ಎಂದು ಕೋಪದಿಂದ ಬಲ್ವಲನು ನುಡಿಯಲು ಮಯನು ಪ್ರತಿಯಾಗಿ ಹೇಳಲಾರದೆ ಅತಿದುಃಖಿತನಾದನು. ಹಾಗೂ ಈ ರೀತಿ ಯೋಚಿಸಿದನು.

೪೨. ಹಿಂದೆ ಅನೇಕ ದೈತ್ಯರೂ, ರಾಕ್ಷಸರೂ ವಿಷ್ಣುವಿನಲ್ಲಿ ದ್ವೇಷವನ್ನು ಸಾಧಿಸಿ ಅವನಿಂದ ಹತರಾಗಿ ವೈಕುಂಠಕ್ಕೆ ಹೋದರು. ಆದುದರಿಂದ ನಾವೂ ಪರಮಾತ್ಮನಲ್ಲಿ ವೈರವನ್ನು ಬೆಳೆಸಿ ವೈಕುಂಠಕ್ಕೆ ಹೋಗುವುದೇ ಮೇಲು. ಎಂದು ಯೋಚಿಸಿ ಪುನಃ ಬಲ್ವಲನನ್ನು ಕುರಿತು ಎಲೈ ದೈತ್ಯಶ್ರೇಷ್ಠನೇ,

೪೩–೪೪. ನೀನು ಮಹಾವೀರನು. ನಿನ್ನನ್ನು ಯುದ್ಧಮಾಡಬೇಡವೆಂದು ತಡೆಯಲೇ? ರಣರಂಗಕ್ಕೆ ನಡೆ. ಯುದ್ಧಮಾಡು. ನಿನ್ನ ಬಾಣಗಳಿಂದ ಯಾದವ

ಯುದ್ಧಂ ಕುರು ರಣೇ ಗತ್ವಾ ಯದೂನ್ಮಾರಯ ಸಾಯಕೈಃ ।
ಅಹಮೇವ ಕರಿಷ್ಯಾಮಿ ಯುದ್ಧಂ ತ್ವದ್ವಾಕ್ಯತೋ ಮೃಧೇ ॥
ಇತ್ಯುಕ್ತ್ವಾ ವಚನಂ ಸೋಽಪಿ ವಿರರಾಮ ಪ್ರಹರ್ಷಯನ್ ॥ ೪೪ ॥

ಊರ್ಧ್ವಕೇಶನದಃ ಸಿಂಹಃ ಕುಶಾಂಬಾದ್ಯಾಶ್ಚ ಮಂತ್ರಿಣಃ ।
ಊಚುಃ ಪ್ರಕುಪಿತಾಸ್ಸರ್ವೇ ಚತ್ವಾರೋ ಬಲ್ವಲಂ ನೃಪ ॥ ೪೫ ॥

॥ ಮಂತ್ರಿಣ ಊಚುಃ ॥

ಪೂರ್ವಂ ವಯಂ ಗಮಿಷ್ಯಾಮೋ ಹಂತುಂ ಸರ್ವಾನ್ಯದೂತ್ತಮಾನ್ ।
ಬಹುಭಿರ್ದಿವಸೈ ರಾಜಸಂಗ್ರಾಮಂ ನ ಕೃತಂ ಯತಃ ॥ ೪೬ ॥

ಚಿಂತಾಂ ಮಾ ಕುರು ರಾಜೇಂದ್ರ ಮಯದೈತ್ಯೇನ ಸಂಯುತಂ ।
ಕ್ಷಣೇನ ಮಾರಯಿಷ್ಯಾಮೋ ಕೋಟಿಶಃ ಕೋಟಿಶೋ ನರಾನ್ ॥ ೪೭ ॥

ರನ್ನು ಕೊಲ್ಲು. ನಿನ್ನ ಮಾತಿನಂತೆ ನಾನೂ ನಡೆಯುವೆನು. ನಿನಗೆ ಸಹಾಯಕನಾಗಿ ಬಂದು ಯುದ್ಧಮಾಡುವೆನು. ಹೀಗೆಂದು ಹೇಳಿ ಮಯನು ಸುಮ್ಮನಾದನು.

೪೫. ಅನಂತರ ಊರ್ಧ್ವಕೇಶ, ನದ, ಸಿಂಹ, ಕುಶಾಂಬ ಇವರೇ ಮೊದಲಾದ ನಾಲ್ಕು ಜನ ಮಂತ್ರಿಗಳು ಬಲ್ವಲನನ್ನು ಕುರಿತು ಶತ್ರುಗಳಲ್ಲಿ ಕೋಪವನ್ನು ಪ್ರಕಟಿಸುತ್ತಾ,

೪೬–೪೭. ಎಲೈ ರಾಜೇಂದ್ರ, ಯುದ್ಧಮಾಡಲು ಮೊದಲು ನಾವು ಹೋಗುವೆವು. ಯುದ್ಧವನ್ನು ಮಾಡಿ ಬಹುದಿವಸಗಳಾದವು. ಆದುದರಿಂದ ನೀನು ಯೋಚಿಸಬೇಡ. ಮಯಾಸುರನೊಡನೆ ನಾವು ಹೋಗಿ ಯಾದವರೊಡನೆ ಯುದ್ಧಮಾಡಿ ಕೋಟ್ಯಾನುಕೋಟಿ ಯಾದವರನ್ನು ಸದೆಬಡೆದು ಬರುವೆವು.

॥ ಗರ್ಗ ಉವಾಚ ॥

ತೇಷಾಂ ಭಾಷಿತಮಾಕರ್ಣ್ಯ ಬಲ್ವಲಸ್ತು ಮುದಾನ್ವಿತಃ ।
ಚಕಾರಾಜ್ಞಾಂ ನೃಪಶ್ರೇಷ್ಠ ರಣಾರ್ಥೇ ರಣಕೋವಿದಃ ॥ ೪೮ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಅಷ್ಟಾವಿಂಶೋಽಧ್ಯಾಯಃ

---

೪೮. ಎಂದು ಹೇಳಿದುದನ್ನು ಕೇಳಿ ಯುದ್ಧ ವಿಶಾರದನಾದ ಬಲ್ವಲನು ಅತಿಸಂತೋಷಗೊಂಡನು. ಮತ್ತು ಯುದ್ಧಕ್ಕೆ ತೆರಳಲು ಅವರೆಲ್ಲರಿಗೂ ಅನುಜ್ಞೆ ಯನ್ನಿತ್ತನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತೆಂಟನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಏಕೋನತ್ರಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ಯುದ್ಧಾಯ ರಾಜೇಂದ್ರ ಚತ್ವಾರಃ ಕಿಲ ಮಂತ್ರಿಣಃ ।
ದೈತ್ಯಕೋಟಿಸಮಾಯುಕ್ತಾ ನಿರ್ಜಗ್ಮುರ್ದಂಶಿತಾಃ ಪುರಾತ್ ॥ ೧ ॥

ಸರ್ವೇ ಹಿ ಧನ್ವಿನಃ ಶೂರಾ ವಿದ್ಯಾಧರಸಮಾಃ ಕಿಲ ।
ಖಡ್ಗೈಶ್ಶೂಲೈರ್ಗದಾಭಿಶ್ಚ ಪರಿಘೈರ್ಮುದ್ಗರೈರ್ನೃಪ ॥ ೨ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ ಕೇಳು, ಆ ನಾಲ್ಕುಜನ ಮಂತ್ರಿಗಳು ಯುದ್ಧಸನ್ನದ್ಧರಾಗಿ ಕೋಟ್ಯಾನುಕೋಟಿ ದೈತ್ಯಸೈನಿಕರನ್ನು ತೆಗೆದುಕೊಂಡು ಯಾದವರೊಡನೆ ಯುದ್ಧಮಾಡಲು ಪಟ್ಟಣದಿಂದ ಹೊರಬಿದ್ದರು.

೨. ಎಲ್ಲರೂ ವಿದ್ಯಾಧರರಂತೆ ಶೂರರೇ ಆಗಿದ್ದರು. ಎಲ್ಲರೂ ಧನುಸ್ಸನ್ನು ಹಿಡದಿದ್ದರು. ಖಡ್ಗ, ಶೂಲ, ಗದೆ, ಪರಿಘ, ಮುದ್ಗರ, ಮುಂತಾದ ಆಯುಧಗಳನ್ನೂ ಹಿಡಿದು ಮುಂದುವರೆಯುತ್ತಿದ್ದರು.

ಏಕಘ್ನೀಭಿರ್ದಶಘ್ನೀಭಿಃ ಶತಘ್ನೀಭಿರ್ಭೃಶುಂಡಿಭಿಃ ।
ಕುಂತೈಶ್ಚ ಭಿಂದಿಪಾಲೈಶ್ಚ ಚಕ್ರಸಾಯಕಶಕ್ತಿಭಿಃ ॥ ೩ ॥

ಸಂಯುಕ್ತಾ ಸರ್ವಶಸ್ತ್ರೈಶ್ಚ ಲೋಹಕಂಚುಕಮಂಡಿತಾಃ ।
ರಥೈರ್ಗಜೈಸ್ತುರಂಗೈಶ್ಚ ಗವಯೈರ್ಮಹಿಷೈರ್ಮೃಗೈಃ ॥ ೪ ॥

ಉಷ್ಟ್ರೈಃ ಖರೈಃ ಸೂಕರೈಶ್ಚ ವೃಕೈಃ ಸಿಂಹೈಶ್ಚ ಕ್ರೋಷ್ಟುಭಿಃ ।
ಮಹಾಗೃಧ್ರೈಃ ಶಂಖಚಿಲ್ಲೈರ್ಮಕರೈಶ್ಚ ತಿಮಿಂಗಿಲೈಃ ॥ ೫ ॥

ಏತೈಶ್ಚ ವಾಹನೈ ರಾಜನ್ ಸಂಯುಕ್ತಾ ರಣಕರ್ಕಶಾಃ ।
ಶಂಖದುಂದುಭಿನಾದೇನ ವೀರಾಣಾಂ ಗರ್ಜನೇನ ಚ ॥ ೬ ॥

ಶತಘ್ನೀನಾಂ ಚ ಶಬ್ದೇನ ಚಚಾಲ ವಸುಧಾ ಭೃಶಂ ।
ಇತ್ಥಂ ಭಯಂಕರಾಂ ಸೇನಾಮಸುರಾಣಾಂ ವಿಲೋಕ್ಯ ಚ ॥ ೭ ॥

ಭಯಂ ಪ್ರಾಪುಸ್ಸುರಾಸ್ಸರ್ವೇ ಮಹೇಂದ್ರಧನದಾದಯಃ ।

---

೩. ಏಕಘ್ನಿ, ದಶಘ್ನಿ, ಶತಘ್ನಿ, ಭೃಶುಂಡಿ, ಕುಂತ, ಭಿಂದಿಪಾಲ, ಚಕ್ರ, ಬಾಣ, ಶಕ್ತಿ ಮುಂತಾದ ಅನೇಕ ಆಯುಧಗಳನ್ನು ಕೈಯಲ್ಲಿ ಹಿಡಿದುಕೊಂಡಿದ್ದರು. ಮತ್ತು ಎಲ್ಲರೂ ಕಬ್ಬಿಣದ ಕವಚಗಳನ್ನು ಧರಿಸಿದ್ದರು.

೪-೫. ರಥ, ಆನೆ, ಕುದುರೆ, ಕಾಡುಹಸು, ಎಮ್ಮೆ ಮುಂತಾದವುಗಳನ್ನೇರಿ ಅನೇಕ ರಾಕ್ಷಸರು ಹೊರಬಿದ್ದರು. ಕೆಲವರು ಜಿಂಕೆ, ಒಂಟೆ, ಕತ್ತೆ, ಹಂದಿ ಮುಂತಾದುವುಗಳನ್ನೇರಿಯೂ, ಇನ್ನೂ ಕೆಲವರು ತೋಳ, ಸಿಂಹ, ನರಿ, ರಣಹದ್ದು ಇವುಗಳನ್ನೇರಿಯೂ, ಮತ್ತೆ ಕೆಲವರು ಮೊಸಳೆ ತಿಮಿಂಗಲ ಮುಂತಾದುವುಗಳನ್ನೇರಿ ಭಯಂಕರ ಧ್ವನಿಮಾಡುತ್ತಾ ಹೊರಟಿದ್ದರು.

೬. ಅವರೆಲ್ಲರೂ ಶಂಖ, ನಗಾರಿಗಳನ್ನು ಶಬ್ದಮಾಡುತ್ತಿದ್ದರು. ಯುದ್ಧೋತ್ಸಾಹದಿಂದ ಗಟ್ಟಿಯಾಗಿ ಕೂಗುತ್ತಿದ್ದರು. ಶತಘ್ನಿಗಳ ಶಬ್ದವಂತೂ ಅಸಾಧ್ಯವಾಗಿತ್ತು. ಇದರಿಂದ ಭೂಮಿಯು ನಡುಗಿತು.

೭. ಇಷ್ಟು ಭಯಂಕರ ಸ್ವರೂಪವಾಗಿ ಬರುತ್ತಿರುವ ರಾಕ್ಷಸರ ಅಪಾರ ಸೈನ್ಯವನ್ನು ನೋಡಿ ಗಗನದಲ್ಲಿ ನೋಡುತ್ತಾ ನಿಂತಿರುವ ಇಂದ್ರ, ಕುಬೇರ, ಮುಂತಾದ ದೇವತೆಗಳೆಲ್ಲರೂ ಹೆದರಿದರು.

ಯಾದವಾಸ್ತೇಽಪಿ ಬಲಿನೋ ನಿರ್ಜಿತಾ ಯೈಶ್ಚ ಭೂಃ ಪುರಾ ॥ ೮ ॥

ವಿಷಣ್ಣಮನಸೋಽಭೂವನ್ ದೈತ್ಯಸೇನಾಂ ನಿರೀಕ್ಷ್ಯ ಚ ।
ಪ್ರದ್ಯುಮ್ನೇನ ರಾಜಸೂಯೇ ಚಂದ್ರಾವತ್ಯಾಂ ಪುರಾ ನೃಪ ॥ ೯ ॥

ಯಾದವೇಭ್ಯಃ ಪ್ರಕಥಿತಂ ಯನ್ನೀತಿಧೈರ್ಯವರ್ಧನಂ ।
ತತ್ಸರ್ವಂ ಕಥಯಾಮಾಸ ಯದುಭ್ಯಃ ಕಾರ್ಷ್ಣಿಜಃ ಪುನಃ ॥ ೧೦ ॥

॥ ಗರ್ಗ ಉವಾಚ ॥

ಇತಿ ಶ್ರುತ್ವಾ ತು ಯದವಃ ಶಸ್ತ್ರಾಣಿ ಜಗೃಹುಸ್ತ್ವರಂ ।
ಮೃತ್ಯುಂ ವರಂ ಮನ್ಯಮಾನಾ ವಿಜಯಾಚ್ಚ ಪಲಾಯನಾತ್ ॥ ೧೧ ॥

ತತಸ್ಸಮಭವದ್ಯುದ್ಧಂ ದೈತ್ಯಾನಾಂ ಯದುಭಿಸ್ಸಹ ।
ಪಾಂಚಜನ್ಯೇ ಚ ಲಂಕಾಯಾಂ ರಕ್ಷಸಾಂ ಕಪಿಭಿರ್ಯಥಾ ॥ ೧೨ ॥

---

೮. ಇದುವರೆವಿಗೂ ಅನೇಕ ದೇಶಗಳನ್ನು ಗೆದ್ದುಕೊಂಡು ಬಂದ ಶೂರರಾದ ಯಾದವರೂ ಸಹ ಬರುತ್ತಿರುವ ರಾಕ್ಷಸಸೈನ್ಯವನ್ನು ನೋಡಿ ಬಹಳ ದುಃಖಿತರಾದರು.

೯–೧೦. ಯದುಸೈನಿಕರೆಲ್ಲರೂ ಹೆದರಿದುದನ್ನು ನೋಡಿ ಅನಿರುದ್ಧನು, ಹಿಂದೆ ರಾಜಸೂಯಯಾಗವನ್ನು ಮಾಡಿದಾಗ ಯಜ್ಞಾಶ್ವರಕ್ಷಣೆಗೆ ಹೋಗಿದ್ದ ಪ್ರದ್ಯುಮ್ನನು ಚಂದ್ರಾವತಿ ಎಂಬಲ್ಲಿ ಯಾದವರನ್ನು ಕುರಿತು ಹೇಳಿದುದನ್ನೇ ಹೇಳಿದನು.

೧೧. ಅದನ್ನು ಕೇಳಿ ಯಾದವರೆಲ್ಲರೂ ಉತ್ಸಾಹಪೂರಿತರಾದರು. ಯುದ್ಧರಂಗದಿಂದ ಹಿಮ್ಮೆಟ್ಟುವುದಕ್ಕಿಂತಲೂ ಮರಣವೇ ಮೇಲು ಎಂದು ತಿಳಿದು ವಿವಿಧ ಶಸ್ತ್ರಾಸ್ತ್ರಗಳನ್ನು ಹಿಡಿದು ಯುದ್ಧಸನ್ನದ್ಧರಾದರು.

೧೨. ಆ ಪಾಂಚಜನ್ಯದಲ್ಲಿ ದೈತ್ಯರಿಗೂ ಯಾದವರಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು. ಹಿಂದೆ ಲಂಕೆಯಲ್ಲಿ ರಾಕ್ಷಸರಿಗೂ ಕಪಿಗಳಿಗೂ ಆದ ಯುದ್ಧದಂತೆ ಕಾಣಿಸುತ್ತಿತ್ತು.

ರಥಿನೋ ರಥಿಭಿಸ್ತತ್ರ ಪತ್ತಿಭಿಃ ಪತ್ತಯೋ ನೃಧೇ ।
ಹಯಾ ಹಯೈರಿಭಾಶ್ಚೇಭೈರ್ಯುಯುಧುಸ್ತೇ ಪರಸ್ಪರಂ ॥ ೧೩ ॥

ಕೇಚಿದ್ವೈ ದಂತಿನೋ ಮತ್ತಾಃ ಶುಂಡಾದಂಡೈರಿತಸ್ತತಃ ।
ಜಘ್ನೂ ರಥಾಂಸ್ತುರಂಗಾಂಶ್ಚ ವೀರಾನ್ರಾಜನ್ಮಹಾಮೃಧೇ ॥ ೧೪ ॥

ಶುಂಡಾದಂಡೈಸ್ಸಂಗೃಹೀತ್ವಾ ರಥಾನ್ಸಾಶ್ವಾನ್ಸಸಾರಥೀನ್ ।
ನಿಪಾತ್ಯ ಭೂಮಾವುತ್ಥಾಯ ಗಗನೇ ಚಿಕ್ಷಿಪುರ್ಬಲಾತ್ ॥ ೧೫ ॥

ಕಾಂಶ್ಚಿನ್ಮಮರ್ದುಃ ಪಾದಾಭ್ಯಾಂ ಸಂವಿದಾರ್ಯ ಕರೈರ್ದೃಢೈಃ ।
ಸಕ್ಷತಾಶ್ಚ ಗಜಾ ರಾಜನ್ ಪ್ರಧಾವಂತೋ ರಣಾಂಗಣಾತ್ ॥ ೧೬ ॥

ತುರಗಾಸ್ತತ್ರ ಧಾವಂತಃ ಸವೀರಾಸ್ತೇ ನಪೇಶ್ವರ ।
ಉಲ್ಲಂಘಯಂತಶ್ಚ ರಥಾನ್ಪ್ರೋತ್ಪತಂತೋ ಗಜಾನ್ಪ್ರತಿ ॥ ೧೭ ॥

---

೧೩. ಸಾರಥಿಯು ಸಾರಥಿಯನ್ನೂ, ಕಾಲಾಳುಗಳು ಕಾಲಾಳುಗಳನ್ನೂ, ಕುದುರೆಗಳು ಕುದುರೆಗಳನ್ನೂ, ಆನೆಗಳು ಆನೆಗಳನ್ನೂ ಹೊಡೆಯುತ್ತಾ ಪರಸ್ಪರ ಯುದ್ಧಮಾಡಿದರು.

೧೪. ಕೆಲವು ಮದಿಸಿದ ಆನೆಗಳು ತಮ್ಮ ಸೊಂಡಲುಗಳಿಂದ ರಥಗಳನ್ನೂ, ಕುದುರೆಗಳನ್ನೂ, ಯೋಧರನ್ನೂ ಹೊಡೆದು ಕೆಳಕ್ಕೆ ಕೆಡವಿದವು.

೧೫. ಸೊಂಡಲುಗಳಿಂದ ರಥ, ಕುದುರೆ, ಸಾರಥಿ ಮುಂತಾದವರನ್ನು ಹಿಡಿದುಕೊಂಡು ಮೇಲಕ್ಕೆತ್ತಿ ನೆಲಕ್ಕೆ ಅಪ್ಪಳಿಸುತ್ತಿದ್ದವು.

೧೬. ಎಷ್ಟೋ ಜನರು ಆನೆಗಳ ಪಾದದಡಿಯಲ್ಲಿ ಸಿಕ್ಕಿ ನುಚ್ಚುನೂರಾಗುತ್ತಿದ್ದರು. ಅವೆಲ್ಲವೂ ರಣಾಂಗಣದಲ್ಲಿ ಓಡಾಡುತ್ತಾ ಸಿಕ್ಕಿದವರನ್ನೆಲ್ಲಾ ಸೊಂಡಲಿನಿಂದ ಸುತ್ತಿ ಸೀಳಿಹಾಕುತ್ತಾ ಇದ್ದವು.

೧೭. ಸವಾರರನ್ನು ಬೆನ್ನಿನ ಮೇಲೆ ಹೊತ್ತುಕೊಂಡೇ ಕುದುರೆಗಳು ಯುದ್ಧರಂಗದಿಂದ ಹಿಮ್ಮೆಟ್ಟಿ ಓಡಿಹೋದವು. ಅದರ ವೇಗಕ್ಕೆ ಎಷ್ಟೋ ಜನರು ಕೆಳಗೆ ಬೀಳುತ್ತಿದ್ದರು. ರಥಗಳೆಲ್ಲಾ ಉರುಳಿ ಬೀಳುತ್ತಿದ್ದವು. ಆನೆಗಳು ಮುಗ್ಗರಿಸುತ್ತಿದ್ದವು.

ಅಂಬಷ್ಠಂ ಗಜಿನಂ ಯುದ್ಧೇ ಮರ್ದಯಂತಶ್ಚ ಸಿಂಹವತ್ ।
ಉತ್ಪತಂತಶ್ಚ ತುರಗಾ ಗಜವೃಂದಂ ಮಹಾಬಲಾಃ ॥ ೧೮ ॥

ಅಸಿಪ್ರಹಾರಂ ಕುರ್ವಂತೋ ವಿದಾರ್ಯ ಚ ರಿಪೂನ್ಬಹೂನ್ ।
ವಾಜಿಪೃಷ್ಠೇ ನ ದೃಶ್ಯಂತೇ ತೇ ದೃಶ್ಯಂತೇ ನಟಾ ಇವ ॥ ೧೯ ॥

ಕೇಚಿದ್ವೀರಾಸ್ತು ಖಡ್ಗೈಶ್ಚ ದ್ವಿಧಾ ಕುರ್ವನ್ ತುರಂಗಮಾನ್ ।
ಕೇಚಿದ್ದಂತಾನ್ ಸಂಗೃಹೀತ್ವಾ ಕುಂಭೇಷು ಕರಿಣಾಂ ಗತಾಃ ॥ ೨೦ ॥

ತುರಂಗಸ್ಥಾ ಕೇಽಪಿ ಬಲಂ ಸಂವಿದಾರ್ಯ ವಿನಿರ್ಗತಾಃ ।
ಖಡ್ಗವೇಗೈಃ ಕಂಜವನಂ ಲೀಲಾಭಿರ್ವಾಯವೋ ಯಥಾ ॥ ೨೧ ॥

---

೧೮. ಆನೆಗಳ ಗುಂಪಿಗೆ ಗುಂಪುಗುಂಪಾಗಿ ನುಗ್ಗಿ ಆನೆಗಳನ್ನೂ ಮಾವುತರನ್ನೂ ಕೆಳಕ್ಕೆ ಕೆಡುವುತ್ತಿದ್ದವು. ಶೂರರಾದ ಅನೇಕರು ಕುದುರೆಗಳಿಂದ ಬಿದ್ದು ತೊಂದರೆಗೊಳಗಾಗುತ್ತಿದ್ದರು.

೧೯. ವೀರರಾದ ಯೋಧರು ಕತ್ತಿಗಳಿಂದ ಶತ್ರುಗಳನ್ನು ಹೊಡೆಯುತ್ತಾ ಅವರನ್ನು ತುಂಡುತುಂಡು ಮಾಡುತ್ತಾ ನಿಂತಲ್ಲಿ ನಿಲ್ಲದೆ ಕುದುರೆಗಳ ಮೇಲೆ ಕುಳಿತಲ್ಲಿ ಕುಳ್ಳಿರದೆ ಅಭಿನಯ ಮಾಡುವ ನಟರಂತೆ ಓಡಾಡುತ್ತಿದ್ದರು.

೨೦. ಕೆಲವು ವೀರರು ಖಡ್ಗಗಳಿಂದ ಕುದುರೆಗಳನ್ನು ಹೊಡೆದು ತುಂಡು ತುಂಡಾಗಿ ಮಾಡಿಬಿಡುತ್ತಿದ್ದರು. ಕೆಲವರು ಆನೆಯ ದಂತಗಳನ್ನು ಹಿಡಿದು ಅದರ ಕುಂಭಸ್ಥಳಕ್ಕೆ ನೆಗೆದು ಕುಳಿತು ಯುದ್ಧಮಾಡುತ್ತಿದ್ದರು.

೨೧. ಕೆಲವರು ಕುದುರೆಗಳ ಮೇಲೆ ಕುಳಿತು ಕತ್ತಿಗಳಿಂದ ಶತ್ರುಗಳನ್ನು ಹೊಡೆಯುತ್ತಾ, ವಾಯುವಿನ ವೇಗದಿಂದ ಉದ್ಯಾನವನವು ನಾಶವಾಗುವಂತೆ ನಾಶ ಮಾಡುತ್ತಿದ್ದರು.

ಬಭೂವುಸ್ತುಮುಲಂ ಯುದ್ಧಮದ್ಭುತಂ ರೋಮಹರ್ಷಣಂ।
ಬಾಣೈರ್ಗದಾಭಿಃ ಪರಿಘೈಃ ಖಡ್ಗೈಶ್ಶೂಲೈಶ್ಚ ಶಕ್ತಿಭಿಃ　　　॥ ೨೨ ॥

ಯುದ್ಧೇ ಗಜಾಶ್ಚ ಗರ್ಜಂತಿ ಹರ್ಷಂತಿ ತುರಗಾ ಭೃಶಂ।
ಹಾಹಾ ವೀರಾಃ ಪ್ರಕುರ್ವಂತಿ ನಂದಂತಿ ರಥನೇಮಯಃ　　　॥ ೨೩ ॥

ಸೈನ್ಯಪಾದರಜೋವೃಂದೈರಂಧೀಭೂತಂ ನಭೋಽಭವತ್।
ತತ್ರ ಸ್ವೀಯೋ ನ ಪಾರಕ್ಯೋ ದೃಶ್ಯತೇ ಚ ಮೃಧಾಂಗಣೇ　　　॥ ೨೪ ॥

ಪರಸ್ಪರಂ ಚ ಬಾಣೌಘೈಃ ಕೇಚಿದ್ವೀರಾ ದ್ವಿಧಾಕೃತಾಃ।
ತಿರ್ಯಗ್ಭೂತಾ ರಥಾ ಯುದ್ಧೇ ನಿಪೇತುಃ ಪಾದಪಾ ಇವ　　　॥ ೨೫ ॥

---

೨೨. ಈ ರೀತಿಯಾಗಿ ಬಾಣ, ಗದೆ, ಪರಿಘ, ಖಡ್ಗ, ಶೂಲ, ಶಕ್ತಿ ಮುಂತಾದ ಆಯುಧಗಳಿಂದ ಭಯಂಕರವೂ, ರೋಮಾಂಚಕಾರಕವೂ ಆದ ಸಾಮೂಹಿಕ ಯುದ್ಧವು ಬಹಳ ಹೊತ್ತು ನಡೆಯಿತು.

೨೩. ಗಜಗಳ ಗರ್ಜನೆಯೂ, ಕುದುರೆಗಳ ಹೇಷಾರವವೂ, ವೀರರ ಹಾಹಾಕಾರಗಳೂ, ರಥಗಳ ಚಕ್ರದ ಕಿರ್ರೆಂಬ ಶಬ್ದಗಳೂ ಭಯಂಕರವನ್ನುಂಟು ಮಾಡುತ್ತಿದ್ದವು.

೨೪. ಆ ರಣಾಂಗಣದಲ್ಲಿ ಸೈನಿಕರ ಓಡಾಟದಿಂದೆದ್ದ ಧೂಳಿನಿಂದ ಆಕಾಶವೆಲ್ಲಾ ತುಂಬಿಹೋಯಿತು. ಅದರಿಂದ ಇವರು ನಮ್ಮವರು, ಇವರು ಶತ್ರುಪಕ್ಷದವರು ಎಂದು ಕಾಣಲು ಅವಕಾಶವೇ ಆಗುತ್ತಿರಲಿಲ್ಲ.

೨೫. ಬಾಣಗಳ ಹೊಡೆತದಿಂದ ಅನೇಕ ವೀರರು ಕತ್ತರಿಸಲ್ಪಟ್ಟರು. ಅನೇಕ ರಥಗಳು ಮರಗಳಂತೆ ತಲೆಕೆಳಕಾಗಿ ಉರುಳಿಬೀಳುತ್ತಿದ್ದವು.

ವೀರೋಪರಿ ಗತಾ ವೀರಾ ಹಯೋಪರಿ ಹಯಾಶ್ಚ ವೈ ।
ಉತ್ಪೇತುಸ್ತತ್ರ ವೀರಾಣಾಂ ಕಬಂಧಾಶ್ಚ ಭಯಂಕರಾಃ ॥
ಪಾತಯಂತೋ ಖಡ್ಗಹಸ್ತಾ ಹಯಾನ್ವೀರಾನ್ಮಹಾರಣೇ ॥ ೨೬ ॥

ಹಸ್ತಿನಾಂ ಭಿನ್ನಕುಂಭಾನಾಂ ಮೌಕ್ತಿಕಾ ನಿಪತಂತಿ ಖಾತ್ ।
ಶಸ್ತ್ರಾಂಧಕಾರೇ ಪ್ರಧನೇ ರಾತ್ರೌ ತಾರಾಗಣಾ ಇವ ॥ ೨೭ ॥

ತತಶ್ಚ ಸೇನಯೋರ್ಮಧ್ಯೇ ರುಧಿರಾಣಾಂ ನದೀ ಹ್ಯಭೂತ್ ।
ವೇತಾಲಾಃ ಶಿವಮಾಲಾರ್ಥಂ ಜಗೃಹುಸ್ತೇ ಶಿರಾಂಸಿ ಚ ॥ ೨೮ ॥

ಮೃಗೇಂದ್ರಸ್ಥಾ ಮಹಾಕಾಲೀ ಡಾಕಿನೀಭಿಃ ಸಮಾಗತಾ ।
ಕಪಾಲೇನಾಪಿ ರುಧಿರಂ ಪಿಬಂತೀ ದೃಶ್ಯತೇ ಮೃಧೇ ॥ ೨೯ ॥

---

೨೬. ಆ ಗಲಾಟೆಯಲ್ಲಿ ಅನೇಕರು ಸೈನಿಕರ ಮೇಲೆ ಬಿದ್ದು ಬಿಡುತ್ತಿದ್ದರು. ಕುದುರೆಗಳು ಕುದುರೆಗಳ ಮೇಲೆ ಬೀಳುತ್ತಿದ್ದವು. ಮೇಲಿನಿಂದ ಬಿದ್ದುದರಿಂದ ಅನೇಕರ ಕತ್ತುಗಳು ಶರೀರದೊಳಕ್ಕೆ ಹೋಗಿ ಭಯಂಕರವಾಗಿ ಕಾಣಿಸುತ್ತಿದ್ದವು. ಕೆಲವರು ಖಡ್ಗಪ್ರಯೋಗ ಮಾಡಿದುದರಿಂದ ಅನೇಕ ಕುದುರೆಗಳೂ, ವೀರರೂ ಛಿನ್ನಭಿನ್ನರಾಗಿ ನೆಲಕ್ಕುರುಳಿದರು.

೨೭. ಆನೆಗಳ ಕುಂಭಸ್ಥಳಗಳನ್ನು ಕತ್ತರಿಸಿದ್ದರಿಂದ ಆ ಕುಂಭಸ್ಥಳಗಳಿಂದ ಮುತ್ತುಗಳು ಉದುರುತ್ತಿದ್ದವು. ಬಾಣಗಳು ಪರಸ್ಪರ ಹೋಗಿ ಬರುವಿಕೆಯಿಂದ ಆ ಸಮಯವು ಕತ್ತಲಿನಂತಿತ್ತು. ಆ ಸಮಯದಲ್ಲಿ ಉದುರುತ್ತಿರುವ ಮುತ್ತುಗಳನ್ನು ನೋಡಿದರೆ ರಾತ್ರಿಯ ಕಾಲದಲ್ಲಿ ಆಕಾಶದಿಂದ ಉದುರುತ್ತಿರುವ ನಕ್ಷತ್ರಗಳಂತೆ ಕಾಣಿಸುತ್ತಿತ್ತು.

೨೮. ಆಗ ಸೇನೆಗಳೆರಡರ ಮಧ್ಯದಲ್ಲಿ ರಕ್ತದ ನದಿಯು ಹರಿಯಲು ಪ್ರಾರಂಭಿಸಿತು. ಪಿಶಾಚಿಗಳು ಶಿವನ ಮಾಲಿಕೆಗೋಸ್ಕರವಾಗಿ ಅಲ್ಲಿ ಬಿದ್ದುರುಳುತ್ತಿರುವ ತಲೆಬುರುಡೆಗಳನ್ನು ಶೇಖರಿಸುತ್ತಿದ್ದವು.

೨೯. ಮಹಾಕಾಲಿಯು ಸಿಂಹದ ಮೇಲೆ ಕುಳಿತು ಡಾಕಿನಿಯರೊಡನೆ ರಣರಂಗಕ್ಕೆ ಬಂದಳು. ಕಪಾಲದಿಂದ ರಕ್ತವನ್ನು ತುಂಬಿಕೊಂಡು ಕುಡಿಯುತ್ತಾ ಸಂತೋಷಪಡುತ್ತಿದ್ದಳು.

ಡಾಕಿನ್ಯೋ ರುಧಿರಂ ತಪ್ತಂ ಪಾಯಯಂತ್ಯಃ ಸುತಾನ್ಮೃಧೇ ।
ಮಾ ರೋದೀರಿತಿ ವಾದಿನ್ಯೋ ನೇತ್ರಾಣ್ಯಪಿ ದದಾಮ ರುತ್ ॥ ೩೦ ॥

ವಿದ್ಯಾಧರ್ಯಸ್ತ್ವಂಬರಸ್ಥಾ ಗಂಧರ್ವ್ಯೋಽಪ್ಸರಸಸ್ತಥಾ ।
ಕ್ಷತ್ರಧರ್ಮಸ್ಥಿತಾನ್ ಶೂರಾನ್ ವವ್ರಿರೇ ದೇವರೂಪಿಣಃ ॥ ೩೧ ॥

ಪರಸ್ಪರಂ ಕಲಿರಭೂತ್ತಾಸಾಂ ಪತ್ಯರ್ಥಮೇವ ಖೇ ।
ಮಮಾನುರೂಪೋ ನಾಯಂ ವ ಇತಿ ವಿಹ್ವಲಚೇತಸಾಂ ॥ ೩೨ ॥

ಕೇಽಪಿ ಶೂರಾ ಧರ್ಮಪರಾ ರಣಾದ್ರಾಜನ್ನ ಚಾಲಿತಾಃ ।
ಜಗ್ಮುಸ್ತೇ ವೈಷ್ಣವಂ ಲೋಕಂ ಭಿತ್ವಾ ತಪನಮಂಡಲಂ ॥ ೩೩ ॥

---

೩೦. ಡಾಕಿನಿಯರು ಬಿಸಿ ರಕ್ತವನ್ನು ತೃಪ್ತಿಯಾಗಿ ಕುಡಿಯುತ್ತಿದ್ದರು. ಅಳುತ್ತಿರುವ ತಮ್ಮ ಮಕ್ಕಳನ್ನು—ಕಣ್ಣುಗಳನ್ನು ಕಿತ್ತುಕೊಡುವೆವು ಅಳಬೇಡಿ ಎಂದು ಸಮಾಧಾನ ಮಾಡುತ್ತಿದ್ದರು.

೩೧. ಆಕಾಶದಲ್ಲಿ ನಿಂತಿರುವ ವಿದ್ಯಾಧರಿಯರೂ, ಗಂಧರ್ವಸ್ತ್ರೀಯರೂ, ಅಪ್ಸರೆಯರೂ ಕ್ಷತ್ರಧರ್ಮದಿಂದ ಸತ್ತು ದೇವರೂಪದಿಂದ ಸ್ವರ್ಗವನ್ನೇರುತ್ತಿರುವ ವೀರರನ್ನು ಆರಿಸಿಕೊಂಡು ಮದುವೆ ಮಾಡಿಕೊಳ್ಳುತ್ತಿದ್ದರು.

೩೨. ಹೀಗೆ ಮದುವೆ ಮಾಡಿಕೊಳ್ಳುವ ವಿಷಯದಲ್ಲಿ ಇವನು ನನಗೆ ಬೇಕಾದವನು. ಇವನು ನನಗನುರೂಪನಲ್ಲ ಎಂದು ಅವರಲ್ಲಿ ಪರಸ್ಪರ ಜಗಳಕ್ಕೆ ಮೊದಲಾಯಿತು.

೩೩. ರಣಾಂಗಣದಿಂದ ಹಿಮ್ಮೆಟ್ಟದೆ ನಿಶ್ಚಲರಾಗಿ ನಿಂತು ಕ್ಷಾತ್ರಧರ್ಮವನ್ನು ಉಳಿಸಿಕೊಂಡು ಯುದ್ಧದಲ್ಲಿ ಮಡಿದವರೆಲ್ಲರೂ ಸೂರ್ಯಮಂಡಲವನ್ನು ಭೇದಿಸಿ ಕೊಂಡು ವಿಷ್ಣುಲೋಕವನ್ನು ಪಡೆದರು.

ಕೇಚಿದ್ವೀರಾ ಮಹಾಯುದ್ಧಂ ದೃಷ್ಟ್ವಾ ಯುದ್ಧಾತ್ಪಲಾಯಿತಾಃ ।
ತಪ್ತವಾಲುಕಮಾರ್ಗೇಣ ಜಗ್ಮುಸ್ತೇ ನಿರಯಂ ನೃಪ ॥ ೩೪ ॥

ಏವಂ ದೈತ್ಯಾನ್ಮಹಾವೀರಾನ್ ಜಘ್ನುಃ ಸರ್ವೇ ಯದೂತ್ತಮಾಃ ।
ತಥಾ ಯದೂನ್ಮಹಾಯುದ್ಧೇ ನಾನಾಶಸ್ತ್ರೈಶ್ಚ ದಾನವಾಃ ॥ ೩೫ ॥

ರಣೇ ಮೃತ್ಯುಂ ಗತಾಸ್ಸರ್ವೇ ರಾಜನ್ ದೈತ್ಯಾಶ್ಚ ಕೋಟಿಶಃ ।
ತಥಾ ಮೃತ್ಯುಂ ಗತಾ ಯುದ್ಧೇ ಯಾದವಾಶ್ಚ ಸಹಸ್ರಶಃ ॥ ೩೬ ॥

ಬಾಣಾಂಧಕಾರಸಂಜಾತೇಽನಿರುದ್ಧೋ ಧನ್ವಿನಾಂ ವರಃ ।
ಊರ್ಧ್ವಕೇಶೇನ ಯುಯುಧೇ ಯಥಾ ವೃತ್ರೇಣ ವಾಸವಃ ॥ ೩೭ ॥

ನದೇನ ಚ ಗದೋ ರಾಜನ್ಸಿಂಹೇನ ವೃಕ ಏವ ಚ ।
ಕುಶಾಂಬೇನ ಚ ಸಾಂಬೋ ವೈ ಯುಯುಧೇ ರಣಮಂಡಲೇ ॥ ೩೮ ॥

---

೩೪. ಕೆಲವು ಯೋಧರು ಈ ಮಹಾಯುದ್ಧವನ್ನು ನೋಡಿ ಹೆದರಿ ಓಡಿಹೋದರು. ಈ ರೀತಿ ಸತ್ತವರು ಸುಡುತ್ತಿರುವ ಮರಳಿನ ಮಾರ್ಗದ ಮೂಲಕವಾಗಿ ನರಕಕ್ಕೆ ಹೋದರು.

೩೫. ಈ ರೀತಿಯಾಗಿ ದೈತ್ಯವೀರರು ಅನೇಕ ಯಾದವರನ್ನು ಕೊಂದರು. ಯಾದವರೂ ಸಹ ನಾನಾ ವಿಧವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಮಾಡುತ್ತಾ ಅನೇಕ ದಾನವರನ್ನು ಕೊಂದರು.

೩೬. ಇದರಿಂದ ಕೋಟ್ಯಾನುಕೋಟಿ ದೈತ್ಯರೂ ಸಾವಿರಾರು ಮಂದಿ ಯಾದವರೂ ರಣಾಂಗಣದಲ್ಲಿ ಮೃತ್ಯುವನ್ನಾಲಂಗಿಸಿದರು.

೩೭. ಬಾಣಗಳ ಓಡಾಡುವಿಕೆಯಿಂದ ಅಂಧಕಾರವಾದಂತಿರಲು ಆಗ ಅನಿರುದ್ಧನು ಊರ್ಧ್ವಕೇಶನೆಂಬ ಮಂತ್ರಿಯೊಡನೆ, ಇಂದ್ರನು ವೃತ್ರಾಸುರನೊಡನೆ ಯುದ್ಧಮಾಡಿದಂತೆ ಯುದ್ಧಮಾಡಿದನು.

೩೮. ಗದನು ನದನೊಡನೆಯೂ, ವೃಕನು ಸಿಂಹನೊಡನೆಯೂ, ಸಾಂಬನು ಕುಶಾಂಬನೊಡನೆಯೂ ಕಲೆತು ಯುದ್ಧಮಾಡಿದರು.

ಏವಂ ಪರಸ್ಪರಂ ಯುದ್ಧಂ ಬಭೂವ ತುಮುಲಂ ಮಹತ್ ।
ಊರ್ಧ್ವಕೇಶಸ್ತದಾ ರಾಜನ್ ಧನುಷ್ಟಂಕಾರಯನ್ಮುಹುಃ ॥ ೩೯ ॥

ಕಾರ್ಷ್ಣಿಜಂ ತಾಡಯಾಮಾಸ ನಾರಾಚೈರ್ದಶಭಿರ್ಮೃಧೇ ।
ತಾನ್ಪ್ರಚಿಚ್ಛೇದ ಭಗವಾನ್ ಧನ್ವೀ ರುಕ್ಮವತೀಸುತಃ ॥ ೪೦ ॥

ಊರ್ಧ್ವಕೇಶಃ ಪುನಸ್ತಸ್ಯ ಕವಚೇ ಸಾಯಕಾನ್ದಶ ।
ನಿಚಖಾನ ಸ್ವರ್ಣಪುಂಖಾನ್ಭಿತ್ವಾ ವರ್ಮಂ ತನೌ ಗತಾನ್ ॥ ೪೧ ॥

ಚತುರ್ಭಿಶ್ಚ ಶರೈಸ್ತಸ್ಯ ಜಘಾನ ಚತುರೋ ಹಯಾನ್ ।
ಚಿಚ್ಛೇದ ಬಾಣೈರ್ವಿಂಶದ್ಭಿಃ ಕೋದಂಡಂ ಸಗುಣಂ ಪರಂ ॥ ೪೨ ॥

ಅನಿರುದ್ಧಸ್ಯ ರಾಜೇಂದ್ರ ಬಲ್ವಲಸ್ಯಾನುಗೋ ಬಲೀ ।
ಅನಿರುದ್ಧಸ್ತು ತಂ ತ್ಯಕ್ತ್ವಾ ರಥಂ ಚಾನ್ಯಂ ಸಮಾರುಹತ್ ॥ ೪೩ ॥

ಶಕ್ರದತ್ತಂ ನೃಪಶ್ರೇಷ್ಠ ಪ್ರತಿಶಾರ್ಙ್ಗಧರೋ ಮಹಾನ್ ।
ಕೃಷ್ಣದತ್ತೇ ಚ ಕೋದಂಡೇ ಶರಮೇಕಂ ನಿಧಾಯ ಚ ॥ ೪೪ ॥

೩೯-೪೦. ಹೀಗೆ ಪರಸ್ಪರ ತುಮುಲಯುದ್ಧವು ನಡೆಯಿತು. ಊರ್ಧ್ವಕೇಶನು ತನ್ನ ಧನುಸ್ಸನ್ನು ಹಿಡಿದು ಟಂಕಾರಮಾಡಿದನು. ಹತ್ತು ಬಾಣಗಳನ್ನು ಅದರಲ್ಲಿ ಹೂಡಿ ಅನಿರುದ್ಧನನ್ನು ಹೊಡೆದನು. ಆ ಬಾಣಗಳನ್ನು ಅನಿರುದ್ಧನು ಕತ್ತರಿಸಿ ಹಾಕಿಸಿದನು.

೪೧-೪೨. ಆಗ ಪುನಃ ಊರ್ಧ್ವಕೇಶನು ಅನಿರುದ್ಧನ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿದನು. ಅವು ಅನಿರುದ್ಧನ ಕವಚಗಳನ್ನು ಭೇದಿಸಿಕೊಂಡು ಅವನ ಶರೀರಕ್ಕೆ ತಗುಲಿದವು. ಆಮೇಲೆ ನಾಲ್ಕು ಬಾಣಗಳನ್ನು ಪ್ರಯೋಗಿಸಿ ಅನಿರುದ್ಧನ ನಾಲ್ಕು ಕುದುರೆಗಳನ್ನು ನಾಶಮಾಡಿದನು. ಇಪ್ಪತ್ತು ಬಾಣಗಳನ್ನು ಹೂಡಿ ಅವನ ಧನುಸ್ಸನ್ನೂ ಮೌರ್ವಿಯನ್ನೂ ಚೂರುಮಾಡಿದನು.

೪೩-೪೪. ತನ್ನ ರಥವು ಮುರಿದುಹೋಗಲು ಅನಿರುದ್ಧನು ಬೇರೊಂದು ರಥವನ್ನು ಏರಿದನು. ಇಂದ್ರನು ಕೊಟ್ಟ ಮಹತ್ತಾದ ಧನುಸ್ಸನ್ನು ತೆಗೆದುಕೊಂಡನು. ಮತ್ತು ಶ್ರೀಕೃಷ್ಣನು ಕೊಟ್ಟ ಧನುಸ್ಸಿನಲ್ಲಿ ಬಾಣವೊಂದನ್ನು ಹೂಡಿ ಆ ಊರ್ಧ್ವಕೇಶನ ರಥಕ್ಕೆ ಗುರಿಯಿಟ್ಟು ಕೋಪದಿಂದ ಹೊಡೆದನು.

ತದ್ರಥೇ ನಿಜಖಾನಾಥ ರುಷಾಢ್ಯೋ ಹಸ್ತಲಾಘವಾತ್ ।
ಸಾಯಕಸ್ತದ್ರಥಂ ನೀತ್ವಾ ಭ್ರಾಮಯಿತ್ವಾ ಘಟೀದ್ವಯಂ ॥ ೪೫ ॥

ಗಗನಾತ್ಪಾತಯಾಮಾಸ ಕಾಚಪಾತ್ರಂ ಯಥಾರ್ಭಕಃ ।
ಅಂಗಾರವದ್ರಥಸ್ತಸ್ಯ ವಿಶೀರ್ಣೋಽಭೂದ್ಧಯಾಶ್ಚ ವೈ ॥ ೪೬ ॥

ಸಸೂತಾಶ್ಚ ನೃಪಶ್ರೇಷ್ಠ ಪಂಚತಾಂ ಪ್ರಾಪುರಗ್ರತಃ ।
ಊರ್ಧ್ವಕೇಶಸ್ತು ಪತನಾನ್ಮೂರ್ಛಿತೋಽಭೂದ್ರಣಾಂಗಣೇ ॥ ೪೭ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಏಕೋನತ್ರಿಂಶೋಽಧ್ಯಾಯಃ

೪೫-೪೬. ಆ ಬಾಣವು ಊರ್ಧ್ವಕೇಶನ ರಥವನ್ನು ಅಂತರಿಕ್ಷಕ್ಕೆ ತೆಗೆದುಕೊಂಡು ಹೋಗಿ ಎರಡು ಗಳಿಗೆಗಳ ಕಾಲದವರೆಗೂ ಗರಗರನೆ ತಿರುಗಿಸುತ್ತಾ ಮಗುವು ಗಾಜಿನ ಪಾತ್ರೆಯನ್ನು ಕೆಳಕ್ಕೆ ಕೆಡುವುವಂತೆ ಭೂಮಿಯ ಮೇಲಕ್ಕೆ ಕೆಡವಿತು. ರಥವು ಇದ್ದಲಿನಂತೆ ಪುಡಿಪುಡಿಯಾಯಿತು. ಕುದುರೆಗಳೆಲ್ಲವೂ ನುಚ್ಚುನೂರಾದವು.

೪೭. ಸಾರಥಿಯು ಸತ್ತುಹೋದನು. ಊರ್ಧ್ವಕೇಶನು ಕೆಳಗೆ ಬಿದ್ದು ಮೂರ್ಛಿತನಾದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ತ್ರಿಂಶೋಽಧ್ಯಾಯಃ

ತತೋತ್ಥಿತಶ್ಚೋರ್ಧ್ವಕೇಶೋ ರಥಂ ಚಾನ್ಯಂ ಸಮಾಶ್ರಿತಃ ।
ಅನಿರುದ್ಧಸ್ಯ ಸಂಗ್ರಾಮೇ ಯಾವದಾಯಾತಿಸಂಮುಖಂ ॥ ೧ ॥

ತಾವದ್ಬಭಂಜ ನಿಶಿತೈರ್ನಾರಾಚೈಸ್ತದ್ರಥಂ ಪುನಃ ।
ಸ ಭಗ್ನಂ ಸ್ಯಂದನಂ ದೃಷ್ಟ್ವಾ ಪುನರನ್ಯಂ ಸಮಾಶ್ರಿತಃ ॥ ೨ ॥

ಸೋಽಪಿ ಭಗ್ನಃ ಶರೈರಾಶು ಕಾರ್ಷ್ಣಿಜೇನ ರಣೇ ನೃಪ ।
ಏವಂ ನವ ರಥಾ ಭಗ್ನಾ ಊರ್ಧ್ವಕೇಶಸ್ಯ ವೈ ರಣೇ ॥ ೩ ॥

ಮೂವತ್ತನೆಯ ಅಧ್ಯಾಯವು

೧-೨. ಆ ಊರ್ಧ್ವಕೇಶನು ಸ್ವಲ್ಪ ಹೊತ್ತಿನೊಳಗಾಗಿಯೇ ಮೂರ್ಛೆ ತಿಳಿದು ಎದ್ದನು. ಬೇರೆ ರಥವನ್ನು ಹತ್ತಿ ಅನಿರುದ್ಧನೊಡನೆ ಹೋರಾಡಲು ಬಂದನು. ಅನಿರುದ್ಧನು ತೀಕ್ಷ್ಣವಾದ ಬಾಣಗಳಿಂದ ಅವನ ರಥವನ್ನು ಕತ್ತರಿಸಿದನು. ಪುನಃ ಮತ್ತೊಂದು ರಥವನ್ನು ಹತ್ತಿ ಸಿದ್ಧನಾದನು.

೩. ಆ ರಥವನ್ನೂ ಕತ್ತರಿಸಿದನು. ಈ ರೀತಿಯಾಗಿ ಊರ್ಧ್ವಕೇಶನ ಒಂಭತ್ತು ರಥಗಳು ಅನಿರುದ್ಧನ ಬಾಣಗಳಿಂದ ನಾಶವಾದವು. ಅನಂತರ ಅತಿ ಕುಪಿತನಾಗಿ ದೈತ್ಯನು ಶಕ್ತ್ಯಾಯುಧವನ್ನು ಅನಿರುದ್ಧನ ಮೇಲೆ ಪ್ರಯೋಗಿಸಿದನು.

ತತಃ ಕ್ರುದ್ಧೋ ರಣೇ ದೈತ್ಯಃ ಶಕ್ತಿಂ ಚಿಕ್ಷೇಪ ಸತ್ವರಂ।
ದೃಷ್ಟ್ವಾ ತಾಮಾಗತಾಂ ವೀರೋ ನಾರಾಚೈರ್ದಶಧಾಚ್ಛಿನತ್ ॥ ೪ ॥

ಊರ್ಧ್ವಕೇಶಸ್ತದಾ ಸಂಖ್ಯೇ ಸ್ಥಿತ್ವಾ ರುಕ್ಮಮಯೇ ರಥೇ।
ಆಜಗಾಮ ಸ ವೇಗೇನಾನಿರುದ್ಧಂ ಪ್ರತಿ ಯೋಧಿತುಂ ॥ ೫ ॥

ಕಾರ್ಷ್ಣಿಜಂ ಪಂಚಭಿರ್ಬಾಣೈಸ್ತಾಡಯಾಮಾಸ ಹರ್ಷಿತಃ।
ಶರೈಸ್ತೈರ್ನಿಹಿತಃ ಸೋಽಪಿ ಕಶ್ಮಲಂ ಪರಮಂ ಗತಃ ॥ ೬ ॥

ಸಂಕ್ರುದ್ಧೋ ಧನುರುದ್ಯಮ್ಯ ಚಿತ್ರವಾಜಾನ್ಶರಾನ್ದಶ।
ಮುಮೋಚ ಹೃದಯೇ ತಸ್ಯ ಸಹಸಾ ಹಸ್ತಲಾಘವಾತ್ ॥ ೭ ॥

ಶರಾಸ್ತೇ ಪಪುರೇತಸ್ಯ ರುಧಿರಂ ಬಹು ದಾರುಣಾಃ।
ಪೀತ್ವಾ ಪೇತುರ್ಯಥಾ ಭೂಮೌ ಕೂಟಸಾಕ್ಷ್ಯಸ್ಯ ಪೂರ್ವಜಾಃ ॥ ೮ ॥

೪-೫. ಅನಿರುದ್ಧನು ಶಕ್ತಿಯು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಬಾಣಗಳನ್ನು ಪ್ರಯೋಗಿಸಿ ಆ ಶಕ್ತಿಯನ್ನು ಹತ್ತು ತುಂಡುಗಳಾಗಿ ಕತ್ತರಿಸಿನು. ಆಗ ಊರ್ಧ್ವಕೇಶನು ಚಿನ್ನದಿಂದ ಮಾಡಿದ ಒಂದು ರಥವನ್ನೇರಿ ಅನಿರುದ್ಧನನ್ನು ಎದುರಿಸಲು ಬಂದನು.

೬. ಅತಿ ವೇಗವಾಗಿ ಐದು ಬಾಣಗಳನ್ನು ಹೂಡಿ ಅನಿರುದ್ಧನನ್ನು ಹೊಡೆದನು. ತೀಕ್ಷ್ಣವಾದ ಬಾಣಗಳಿಂದ ನೋಯಿಸಲ್ಪಟ್ಟ ಅನಿರುದ್ಧನು ಅತಿ ದುಃಖಿತನಾದನು.

೭. ಆಗ ಅನಿರುದ್ಧನು ಅತಿಕುಪಿತನಾಗಿ ತನ್ನ ಧನುಸ್ಸನ್ನು ತೆಗೆದುಕೊಂಡು ಹತ್ತು ವಿಚಿತ್ರವಾದ ಬಾಣಗಳನ್ನು ಹೂಡಿ ಊರ್ಧ್ವಕೇಶನ ಹೃದಯಕ್ಕೆ ಗುರಿಯಿಟ್ಟು ಹೊಡೆದನು.

೮. ಆ ಬಾಣಗಳು ಊರ್ಧ್ವಕೇಶನ ಹೃದಯದೊಳಕ್ಕೆ ನುಗ್ಗಿ ಅವನ ರಕ್ತವನ್ನು ಕುಡಿದು ಭೂಮಿಯ ಮೇಲೆ ಬಿದ್ದುಬಿಟ್ಟವು.

ಊರ್ಧ್ವಕೇಶಃ ಪುನಃ ಕ್ರುದ್ಧೋ ತಿಷ್ಠ ತಿಷ್ಠೇತಿ ಚಾಬ್ರುವನ್ ।
ಬಾಣೈಸ್ತು ದಶಸಂಖ್ಯೈಶ್ಚ ತತಾಡ ತಸ್ಯ ಮೂರ್ಧನಿ ॥ ೯ ॥

ಸಾಯಕಾಸ್ತೇಽನಿರುದ್ಧಸ್ಯ ಹ್ಯುಷ್ಣೀಷೇ ಪರಿನಿಷ್ಠಿತಾಃ ।
ವಿರಾಜಂತೇ ಸ್ಮ ರಾಜೇಂದ್ರ ದಶಶಾಖಾಸ್ತರೋರಿವ ॥ ೧೦ ॥

ನ ವಿವ್ಯಥೇ ಸ ತೈರ್ಬಾಣೈರ್ಯುದ್ಧೇ ರುಕ್ಮವತೀಸುತಃ ।
ಯಥಾ ಪುಷ್ಪೈಶ್ಚ ಪ್ರಹತೋ ದ್ವಿರದೋ ನೃಪಸತ್ತಮ ॥ ೧೧ ॥

ಬಾಣಾನ್ ಶತಂ ಸ್ವಧನುಷಿ ನಿಧಾಯಾಕೃಷ್ಯ ಮಾಧವಃ ।
ಚಿತ್ರವಾಜಾನ್ ಸ್ವರ್ಣಪುಂಖಾನ್ ಮುಮೋಚ ಬಹುರೋಷತಃ ॥ ೧೨ ॥

ತೇ ಬಾಣಾಸ್ತಸ್ಯ ಸರ್ವಾಂಗಂ ಭಿತ್ವಾ ಶೀಘ್ರಮಧೋ ಗತಾಃ ।
ರುಧಿರಾಕ್ತಾ ಯಥಾ ರಾಜನ್ ಕೃಷ್ಣಭಕ್ತಿಪರಾಙ್ಮುಖಾಃ ॥ ೧೩ ॥

---

೯. ಪುನಃ ಊರ್ಧ್ವಕೇಶನು ಸಿಟ್ಟಿನಿಂದ–ಎಲೋ, ನಿಲ್ಲು ನಿಲ್ಲು ಎಂದು ಹೇಳುತ್ತಾ ಹತ್ತು ಬಾಣಗಳನ್ನು ಹೂಡಿ ಅನಿರುದ್ಧನ ತಲೆಗೆ ಹೊಡೆದನು.

೧೦. ಅವು ಅನಿರುದ್ಧನ ಕಿರೀಟಗಳ ಮೇಲಕ್ಕೆ ನೆಟ್ಟಿಕೊಂಡವು. ಅದನ್ನು ನೋಡಿದರೆ ಹತ್ತು ಕೊಂಬೆಗಳುಳ್ಳ ಮರದೋಪಾದಿಯಲ್ಲಿ ಕಾಣುತ್ತಿತ್ತು.

೧೧. ಆ ಬಾಣಗಳ ಏಟಿನಿಂದ ಅನಿರುದ್ಧನು ಸ್ವಲ್ಪವೂ ದುಃಖಪಡಲಿಲ್ಲ. ಹೂವಿನಿಂದ ಹೊಡೆದ ಆನೆಯಂತೆ ಸುಮ್ಮನೆ ಅಲುಗದೆ ನಿಂತಿದ್ದನು.

೧೨. ಅನಿರುದ್ಧನು ಬಲುಸಿಟ್ಟಿನಿಂದ ನೂರು ಬಾಣಗಳನ್ನು ಬಿಲ್ಲಿನಲ್ಲಿ ಹೂಡಿದನು. ಅವು ಚಿತ್ರವಿಚಿತ್ರವಾಗಿಯೂ ಸುವರ್ಣ ರೆಕ್ಕೆಗಳನ್ನು ಕಟ್ಟಿ ತೀಕ್ಷ್ಣವಾಗಿದ್ದವು. ಅವನ್ನು ಊರ್ಧ್ವಕೇಶನ ಮೇಲೆ ಹೊಡೆದನು.

೧೩. ಆ ಬಾಣಗಳು ಊರ್ಧ್ವಕೇಶನ ಸರ್ವಾಂಗಗಳನ್ನೂ ಕತ್ತರಿಸಿ ಛಿನ್ನಭಿನ್ನ ಮಾಡಿ ರಕ್ತಸಿಕ್ತವಾಗಿ, ಕೃಷ್ಣನಲ್ಲಿ ಭಕ್ತಿಯಿಲ್ಲದವರು ಬೀಳುವಂತೆ ಕೆಳಗೆ ಬಿದ್ದುಬಿಟ್ಟವು.

ಶರಸಂಸ್ಪೃಶ್ಚ ಸ ಹತೋ ಪಂಚತಾಂ ಪ್ರಧನೇ ಗತಃ ।
ಹಾಹಾಕಾರಶ್ಚ ತತ್ಸೈನ್ಯೇ ಬಭೂವ ನೃಪಸತ್ತಮ ॥ ೧೪ ॥

ತದಾ ಜಯಜಯಾರಾವೋ ಯಾದವಾನಾಂ ಬಭೂವ ಹ ।
ಅನಿರುದ್ಧೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೧೫ ॥

ಊರ್ಧ್ವಕೇಶಸ್ತು ಪ್ರಧನಾದ್ದಿವ್ಯದೇಹೇನ ಯಾದವ ।
ಯಯೌ ವಿಮಾನಮಾರುಹ್ಯ ಸ್ವರ್ಗಂ ಸುಕೃತಿನಾಂ ಪದಂ ॥ ೧೬ ॥

ಭ್ರಾತರಂ ನಿಹತಂ ದೃಷ್ಟ್ವಾ ನದಃ ಶೋಕೇನ ಪೂರಿತಃ ।
ಕುಂಜರಸ್ಥೋ ಗದಂ ಬಾಣೈಃ ಕುಂಜರಸ್ಥಂ ಜಘಾನ ಹ ॥ ೧೭ ॥

ಆಗತಾನ್ಸಾಯಕಾನ್ ದೃಷ್ಟ್ವಾ ಧನುರ್ಧಾರೀ ಗದೋ ಮಹಾನ್ ।
ತಾನ್ಪ್ರಚಿಚ್ಛೇದ ಬಾಣೇನಾನಿರುದ್ಧಸ್ಯ ಪ್ರಪಶ್ಯತಃ ॥ ೧೮ ॥

---

೧೪. ಆ ಬಾಣಗಳ ಏಟಿನಿಂದ ಊರ್ಧ್ವಕೇಶನು ಕೆಳಗುರುಳಿ ಸತ್ತುಹೋದನು. ಆಗ ಅವನ ಸೈನ್ಯದಲ್ಲಿ ಕೋಲಾಹಲವು ಎದ್ದಿತು

೧೫. ಯಾದವರ ಸೈನ್ಯದಲ್ಲಿ ಜಯಜಯಾಕಾರವುಂಟಾಯಿತು. ಆಕಾಶದಲ್ಲಿ ನೋಡುತ್ತಿದ್ದ ದೇವತೆಗಳು ಅನಿರುದ್ಧನ ಮೇಲೆ ಪುಷ್ಪವೃಷ್ಟಿಯನ್ನು ಕರೆದರು.

೧೬. ಅನಿರುದ್ಧನಿಂದ ಕೊಲ್ಲಲ್ಪಟ್ಟ ಆ ಊರ್ಧ್ವಕೇಶನು ದಿವ್ಯದೇಹವನ್ನು ಧರಿಸಿ ವಿಮಾನವನ್ನು ಹತ್ತಿ ಉತ್ತಮವಾದ ಸ್ವರ್ಗಲೋಕವನ್ನು ಹೊಂದಿದನು.

೧೭. ತನ್ನ ಸಹೋದರನು ಸತ್ತುಹೋದುದನ್ನು ನೋಡಿ ನದನು ಅತಿ ದುಃಖಗೊಂಡನು. ಒಂದು ಆನೆಯ ಮೇಲೆ ಕುಳಿತು, ಮತ್ತೊಂದು ಆನೆಯ ಮೇಲೆ ಕುಳಿತು ಯುದ್ಧಸನ್ನದ್ಧನಾಗಿರುವ ಗದನನ್ನು ಬಾಣಗಳಿಂದ ಹೊಡೆದನು.

೧೮. ಧನುರ್ಧಾರಿಯಾದ ಗದನು ತನ್ನೆಡೆಗೆ ಬರುತ್ತಿರುವ ಬಾಣಗಳನ್ನು ನೋಡಿ ಅನಿರುದ್ಧನು ನೋಡುತ್ತಿರುವಂತೆಯೇ ಬಾಣಗಳನ್ನು ಪ್ರಯೋಗಿಸಿ ಅವುಗಳನ್ನು ಚೂರುಚೂರುಮಾಡಿದನು.

ನದಸ್ತದೈವ ಸಂಕ್ರುದ್ಧೋ ಭ್ರಾತೃಶೋಕಪರಿಪ್ಲುತಃ ।
ಅಕರೋದ್ವಿಗಜಂ ಬಾಣೈಃ ಸಂಗ್ರಾಮೇ ರೋಹಿಣೀಸುತಂ ॥ ೧೯ ॥

ಗಜಸ್ತು ಶತಬಾಣೈಶ್ಚ ಭಿನ್ನಾಂಗಃ ಪಂಚತಾಂ ಗತಃ ।
ನಿಪಪಾತ ಗದೋ ಭೂಮೌ ತದದ್ಭುತಮಿವಾಭವತ್ ॥ ೨೦ ॥

ತತಃ ಕ್ರುದ್ಧೋ ಗದಾಂ ನೀತ್ವಾ ಹಂತುಂ ಶತ್ರುಂ ರಣೇ ಗದಃ ।
ಆಜಗಾಮ ಜ್ವಲನ್ನೀಘ್ರಂ ಸಿಂಹಃ ಸಿಂಹಂ ವನೇ ಯಥಾ ॥ ೨೧ ॥

ಆಗತಂ ತಂ ಗೃಹೀತ್ವಾ ತು ಶುಂಡಾದಂಡೇನ ತದ್ಗಜಃ ।
ಚಿಕ್ಷೇಪ ಸ ಗದಂ ರಾಜನ್ನಾಕಾಶೇ ಶತಯೋಜನಂ ॥ ೨೨ ॥

ಪತಿತಃ ಖಾತ್ಸಮುತ್ಥಾಯ ಶುಂಡಾದಂಡಂ ಪ್ರಗೃಹ್ಯ ಸಃ ।
ಪಾತಯಾಮಾಸ ಭೂಪೃಷ್ಠೇ ಭ್ರಾಮಯಿತ್ವಾ ಗಜಂ ಗದಃ ॥ ೨೩ ॥

---

೧೯. ನದನಿಗೆ ಕೋಪವು ಜಾಸ್ತಿಯಾಯಿತು. ಜೊತೆಗೆ ಸಹೋದರನು ಸತ್ತ ದುಃಖವೂ ಕಾಡಿಸಿತು. ಆಗ ಸಿಟ್ಟಿನಿಂದ ಬಾಣಗಳನ್ನು ಪ್ರಯೋಗಿಸಿ ಅವನು ಕುಳಿತಿರುವ ಆನೆಯನ್ನು ಕತ್ತರಿಸಿದನು.

೨೦. ಆ ನೂರು ಬಾಣಗಳು ಆನೆಯನ್ನು ಛಿದ್ರಛಿದ್ರವಾಗಿ ಮಾಡಿದವು. ಅದು ಸತ್ತುಹೋಯಿತು. ಆಗ ಗದನು ಆನೆಯ ಮೇಲಿನಿಂದ ಕೆಳಕ್ಕೆ ಉರುಳಿದನು.

೨೧. ಗದನು ಜಾಗ್ರತೆಯಾಗಿ ಎದ್ದನು. ಒಂದು ದೊಡ್ಡ ಗದೆಯನ್ನು ತೆಗೆದುಕೊಂಡು ಅತಿಕೋಪದಿಂದ ಸಿಂಹವು ಮತ್ತೊಂದು ಸಿಂಹವನ್ನು ಕೊಲ್ಲಲು ಹೊರಡುವಂತೆ ನದನ ಸಮೀಪಕ್ಕೆ ಓಡಿಬಂದನು.

೨೨. ನದನು ಕುಳಿತಿದ್ದ ಆನೆಯು ಗದನನ್ನು ನೋಡುತ್ತಲೇ ಜಾಗ್ರತೆಯಾಗಿ ತನ್ನ ಸೊಂಡಲಿನಿಂದ ಮೇಲಕ್ಕೆತ್ತಿ ನೂರುಯೋಜನ ಮೇಲಕ್ಕೆ ಬಿಸಾಟಿತು.

೨೩. ಆಕಾಶದಿಂದ ಗದನು ಕೆಳಕ್ಕೆ ಬಿದ್ದನು. ತಕ್ಷಣ ಮೇಲಕ್ಕೆ ಎದ್ದು ಗದನು ಆ ಆನೆಯ ಸೊಂಡಿಲನ್ನು ಹಿಡಿದುಕೊಂಡು ಗರಗರನೆ ತಿರುಗಿಸಿ ಭೂಮಿಯ ಮೇಲೆ ಅಪ್ಪಳಿಸಿದನು.

ಗಜೋ ಮೃತ್ಯುಂ ಗತೋ ಯುದ್ಧೇ ವಿಸ್ಮಿತೋಽಭೂನ್ಮಹಾಸುರಃ ।
ಜಗ್ರಾಹ ಸ್ವಗದಾಂ ಗುರ್ವೀಂ ಶ್ಲಾಘಾಂ ಕೃತ್ವಾ ಗದಸ್ಯ ಚ ॥ ೨೪ ॥

ಶೀಘ್ರಂ ತಮಾಹ್ವಯಾಮಾಸ ಗದಂ ವೀರಂ ಗದಾಧರಂ ।
ತಥಾ ಸೋಽಪಿ ನದಂ ದೈತ್ಯಂ ಸಂಗ್ರಾಮಾರ್ಥೇ ವಿಶಾಂಪತೇ ॥ ೨೫ ॥

ನದಃ ಪ್ರತ್ಯಾಹ ವಚನಂ ತ್ವಂ ಮನುಷ್ಯೋಽಸಿ ಯಾದವ ।
ತಸ್ಮಾಲ್ಲಜ್ಜಾಂ ಕರಿಷ್ಯಾಮಿ ಕಥಂ ಯುದ್ಧಂ ಕರಿಷ್ಯಸಿ ॥ ೨೬ ॥

ಪೂರ್ವಂ ಪ್ರಹಾರಂ ಕುರು ಮೇ ಪಶ್ಚಾತ್ತ್ವಂ ತು ನ ಜೀವಸಿ ।
ಇತಿ ಶ್ರುತ್ವಾ ಗದಃ ಪ್ರಾಹ ಯಥಾ ವೃತ್ರಂ ಪುರಂದರಃ ॥ ೨೭ ॥

ನ ಕಿಂಚಿತ್ತೇ ಪ್ರಕುರ್ವಂತಿ ಯೇ ವದಂತಿ ಮುಖೇನ ವೈ ।
ನ ವದಂತಿ ರಣೇ ಶೂರಾ ದರ್ಶಯಂತಿ ಪರಾಕ್ರಮಂ ॥ ೨೮ ॥

---

೨೪. ಅದು ಬಿದ್ದು ಸತ್ತುಹೋಯಿತು. ಅದನ್ನು ನೋಡಿ ನದಾಸುರನು ಅತ್ಯಾಶ್ಚರ್ಯಗೊಂಡನು. ಆಗ ಒಂದು ದೊಡ್ಡ ಗದೆಯನ್ನು ತೆಗೆದುಕೊಂಡು ಸನ್ನದ್ಧನಾಗಿ ಮಹಾವೀರನಾದ ಗದನನ್ನು ಯುದ್ಧಕ್ಕೆ ಕರೆದನು.

೨೫–೨೬. ಗದನೂ ಸಹ ಗದೆಯನ್ನು ತೆಗೆದುಕೊಂಡು ನದನೊಡನೆ ಯುದ್ಧ ಮಾಡಲು ಹೊರಟನು. ಆಗ ನದನು, ಎಲೋ ಯಾದವ, ನಿನ್ನೊಡನೆ ಯುದ್ಧ ಮಾಡಲು ನನಗೆ ನಾಚಿಕೆಯಾಗುವುದು. ಏಕೆಂದರೆ ನೀನು ಮನುಷ್ಯನು. ಮನುಜನಿಗೂ ರಾಕ್ಷಸರಿಗೂ ಸ್ಪರ್ಧೆಯೇ? ಹೋಗಲಿ. ನೀನು ಮೊದಲು ನನ್ನನ್ನು ಗದೆಯಿಂದ ಹೊಡೆದುಬಿಡು. ಏಕೆಂದರೆ ನಾನೇ ಮುಂಚೆ ಹೊಡೆದರೆ ನೀನಂತೂ ಖಂಡಿತ ಬದುಕುವುದಿಲ್ಲ ಎಂದನು.

೨೭–೨೮. ಅದನ್ನು ಕೇಳಿ ಗದನು ವೃತ್ರಾಸುರನನ್ನು ಕುರಿತು ಇಂದ್ರನು ಹೇಳಿದಂತೆ ಅವನನ್ನು ಕುರಿತು 'ಲೋ ರಾಕ್ಷಸ, ಯಾರು ಮಾತಿನಲ್ಲಿ ಶೂರರೋ ಅವರು ಕೆಲಸಮಾಡಲಾರರು. ಯಾರು ಮಾತನಾಡದೆ ಇರುವರೋ ಅವರು ತಮ್ಮ ಪರಾಕ್ರಮವನ್ನು ತೋರಿಸುವರು' ಎಂದನು.

ಇತಿ ಶ್ರುತ್ವಾ ನದಃ ಕ್ರುದ್ಧೋ ಗದಸ್ಯ ಹೃದಯೇ ನದನ್ ।
ತಾಡಯಾಮಾಸ ರಾಜೇಂದ್ರ ಗರಿಷ್ಠಾಂ ಮಹತೀಂ ಗದಾಂ　|| ೨೯ ||

ಗದಯಾ ತಾಡಿತೋ ವೀರೋ ನ ಚಚಾಲ ಮೃಧೇ ಗದಃ ।
ಮದೋನ್ಮತ್ತೋ ಯಥಾ ಹಸ್ತೀ ಬಾಲೇನ ಮಾಲಯಾ ಹತಃ　|| ೩೦ ||

ಕಥಯಾಮಾಸ ವೀರಾಗ್ರ್ಯೋ ದಾನವಂ ವೀಕ್ಷ್ಯ ಲಜ್ಜಿತಂ ।
ಸಹಸ್ವೈಕಂ ಪ್ರಹಾರಂ ಮೇ ಯದಿ ವೀರಃ ಪರಂತಪ　|| ೩೧ ||

ಇತ್ಯುಕ್ತ್ವಾ ನಿಜಘಾನಾಥ ಲಲಾಟೇ ಗದಯಾ ಭೃಶಂ ।
ಸ ಚಾಪಿ ತಂ ರುಷಾ ಸ್ಕಂಧೇ ತಾಡಯಾಮಾಸ ಧರ್ಮವಿತ್　|| ೩೨ ||

ಏವಂ ಭೃಶಂ ಪ್ರಕುರ್ವಂತೌ ಗದಾಯುದ್ಧವಿಶಾರದೌ ।
ಗದಾಯುದ್ಧಂ ಪ್ರಕುರ್ವಾಣೌ ಪರಸ್ಪರವಧೈಷಿಣೌ　|| ೩೩ ||

---

೨೯. ಅದನ್ನು ಕೇಳಿ ನದಾಸುರನು ಅತಿಕೋಪದಿಂದ ಆ ದೊಡ್ಡದಾದ ಗದೆಯಿಂದ ಗದನ ಎದೆಗೆ ಗುರಿಯಿಟ್ಟು ಹೊಡೆದನು.

೩೦. ಆದರೆ ಆ ಗದನು ಒಬ್ಬ ಹುಡುಗನು ಹೂಮಾಲಿಕೆಯಿಂದ ಮದಿಸಿದ ಆನೆಯನ್ನು ಹೊಡೆದರೆ ಹೇಗೋ ಹಾಗೇ ಸ್ವಲ್ಪವೂ ಚಲಿಸದೆ ನಿಂತಲ್ಲಿಯೇ ನಿಂತಿದ್ದನು.

೩೧. ಗದನು ನದಾಸುರನನ್ನು ಕುರಿತು, ಎಲೋ ರಾಕ್ಷಸ, ನೀನು ನಿಜವಾಗಿಯೂ ವೀರನಾಗಿದ್ದರೆ ಈಗ ನಾನು ಹೊಡೆಯುವುದನ್ನು ಸಹಿಸಿಕೋ,

೩೨. ಹೀಗೆಂದು ಹೇಳಿ ಗದನು ಆ ರಾಕ್ಷಸನ ಹಣೆಗೆ ಗದೆಯಿಂದ ಬಲವಾಗಿ ಹೊಡೆದನು. ನದನೂ ಸಹ ಅತಿಕೋಪದಿಂದ ಗದನ ಹೆಗಲಿಗೆ ಗದೆಯಿಂದ ಹೊಡೆದನು.

೩೩–೩೪. ಈ ರೀತಿ ಗದಾಯುದ್ಧವಿಶಾರದರಾದ ಇಬ್ಬರೂ ಪರಸ್ಪರ ಗದೆಯಿಂದ ಹೊಡೆದಾಡುತ್ತಾ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಆಕಾಂಕ್ಷೆಯಿಂದ ಯುದ್ಧ

ಅನ್ಯೋಽನ್ಯಘಾತವಿನುತೌ ಕ್ರೋಧಯುಕ್ತೌ ಜಯೋದ್ಯತೌ ।
ನ ಕೋಽ ನ್ಯೈ ತತ್ರ ಜೀಯೇತ ನ ಪ್ರಹೀಯೇತ ಕೋಽಪಿ ತು ॥ ೩೪ ॥

ಭಾಲೇ ಸ್ಕಂಧೇ ತಥಾ ಮೂರ್ಧ್ನಿ ಹೃದಿ ಗಾತ್ರೇಷು ಸರ್ವತಃ ।
ರುಧಿರೌಘಪ್ಲುತೌ ಕ್ಲಿನ್ನೌ ಕಿಂಶುಕಾವಿವ ಪುಷ್ಪಿತೌ ॥ ೩೫ ॥

ತಯೋರಾಸೀನ್ಮಹಾಯುದ್ಧಂ ಗದಾಭ್ಯಾಮೇವ ಸಂಯುಗೇ ।
ವಿಸ್ಫುಲಿಂಗಾನ್ ಕ್ಷರಂತ್ಯೌ ದ್ವೇ ಗದೇ ಚೂರ್ಣೀಬಭೂವತುಃ ॥ ೩೬ ॥

ತತೋ ಯುದ್ಧಮಭೂದ್ಘೋರಂ ಬಾಹುಭ್ಯಾಂ ಗದದೈತ್ಯಯೋಃ ।
ತದಾ ರಾಮಾನುಜಃ ಕ್ರುದ್ಧೋ ಭುಜಾಭ್ಯಾಮುಪಗೃಹ್ಯ ತಂ ॥ ೩೭ ॥

ಪಾತಯಾಮಾಸ ಭೂಪೃಷ್ಠೇ ಮಹಿಷಂ ಹರಿರಾಡ್ಯಥಾ ।
ತದಾ ದೈತ್ಯಸ್ತು ತಸ್ಯಾಪಿ ಹೃದಿ ಜಘ್ನೇ ಪ್ರಮುಷ್ಟಿನಾ ॥ ೩೮ ॥

ಮಾಡುತ್ತಿದ್ದರು. ಒಬ್ಬರನ್ನೊಬ್ಬರು ನೋಯಿಸುತ್ತಾ ಬೀಳಿಸುತ್ತಾ ಹೊಡೆದಾಡಿದರು ಇಂಥವರೇ ಗೆಲ್ಲುವರು, ಇಂಥವರೇ ಸೋಲುವರೆಂದು ಹೇಳಲಾಗುತ್ತಿರಲಿಲ್ಲ.

೩೫-೩೬. ಹಣೆ, ಕತ್ತು, ತಲೆ, ಎದೆ, ಮುಂತಾದ ಅಂಗಗಳ ಮೇಲೆ ಒಬ್ಬರನ್ನೊಬ್ಬರು ಹೊಡೆದರು. ರಕ್ತದಿಂದ ಶರೀರವೆಲ್ಲಾ ನೆನೆದಿತ್ತು. ಹೂವುಬಿಟ್ಟ ಮುತ್ತುಗದ ಮರದಂತೆ ಕಾಣುತ್ತಿದ್ದರು. ಈ ಘೋರಯುದ್ಧದಲ್ಲಿ ಗದೆಗಳು ಪರಸ್ಪರ ಹೊಡೆತದಿಂದ ಅಗ್ನಿಕಣಗಳನ್ನು ಕಾರುತ್ತಾ ಚೂರುಚೂರಾದವು.

೩೭. ಆಗ ಇಬ್ಬರೂ ಬಾಹುಯುದ್ಧವನ್ನು ಮಾಡಲು ಪ್ರಾರಂಭಿಸಿದರು. ಆಗ ಗದನು ಅತಿ ಕೋಪದಿಂದ ನದಾಸುರನನ್ನು ಬಿಗಿಯಾಗಿ ಹಿಡಿದುಕೊಂಡು ಮೇಲಕ್ಕೆ ಎತ್ತಿ ನೆಲದ ಮೇಲೆ ಎಸೆದನು.

೩೮. ದೈತ್ಯನು ತಕ್ಷಣ ಚೇತರಿಸಿಕೊಂಡು ಎದ್ದು ಮುಷ್ಟಿಯಿಂದ ಗದನ ಎದೆಗೆ ಹೊಡೆದನು. ಗದನೂ ಮುಷ್ಟಿಯಿಂದ ನದಾಸುರನ ತಲೆಗೆ ಹೊಡೆದನು.

ತದಾ ಸೋಽಪಿ ಶಿರಸ್ಯೇಕಂ ಮುಷ್ಟಿಂ ಬಧ್ವಾ ಜಘಾನ ಹ ।
ಮುಷ್ಟಿಭಿರ್ಜಾನುಭಿಃ ಪಾದೈಸ್ತಾಲಸ್ಫೋಟೈಶ್ಚ ಬಾಹುಭಿಃ ॥ ೩೯ ॥

ಪರಸ್ಪರಂ ಜಘ್ನತುಸ್ತೌ ಸಂದಷ್ಟಾಧರಪಲ್ಲವೌ ।
ತತಃ ಕ್ರುದ್ಧೋ ರಣೇ ದೈತ್ಯೋ ಗದಸ್ಯ ಚರಣಂ ಬಲಾತ್ ॥ ೪೦ ॥

ಗೃಹೀತ್ವಾ ಭ್ರಾಮಯಿತ್ವಾ ಚ ಪಾತಯಾಮಾಸ ಭೂತಲೇ ।
ತದಾ ಗದಃ ಸಮುತ್ಥಾಯ ಗೃಹೀತ್ವಾ ಚರಣಂ ರಿಪೋಃ ॥ ೪೧ ॥

ಭ್ರಾಮಯಿತ್ವಾ ಗಜೋಪಸ್ಥೇ ನಿಜಘಾನ ರುಷಾ ಜ್ವಲನ್ ।
ಪುನರ್ದೈತ್ಯಸ್ಸಮುತ್ಥಾಯ ಗೃಹೀತ್ವಾ ರೋಹಿಣೀಸುತಂ ॥ ೪೨ ॥

ಚಿಕ್ಷೇಪ ಚೌಜಸಾ ರಾಜನ್ ಗಗನೇ ಶತಯೋಜನಂ ।
ಪತಿತೋಽಪಿ ಸ ವಜ್ರಾಂಗಃ ಕಿಂಚಿದ್ವ್ಯಾಕುಲಮಾನಸಃ ॥ ೪೩ ॥

---

೩೯. ಮುಷ್ಟಿಗಳಿಂದಲೂ, ಮಂಡಿ ಪಾದಗಳಿಂದಲೂ ಅಂಗೈನ ಏಟು, ಗುದ್ದುವಿಕೆ ಮುಂತಾದುವುಗಳಿಂದಲೂ ಪರಸ್ಪರ ಹೊಡೆದಾಡಿದರು. ರೋಷದಿಂದ ತುಟಿಗಳನ್ನು ಕಚ್ಚಿ ಒಬ್ಬೊಬ್ಬರನ್ನು ಹೊಡೆಯುತ್ತಿದ್ದರು.

೪೦–೪೧. ನದಾಸುರನು ರೋಷದಿಂದ ಓಡಿಬಂದು ಗದನ ಕಾಲುಗಳನ್ನು ಬಿಗಿಯಾಗಿ ಹಿಡಿದು ಗರಗರನೆ ತಿರುಗಿಸಿ ಮೇಲಕ್ಕೆ ಎಸೆದನು. ಗದನು ಕೆಳಗೆ ಬಿದ್ದನು. ಕ್ಷಣದಲ್ಲಿ ಮೇಲಕ್ಕೆದ್ದು ನದನ ಕಾಲುಗಳನ್ನು ಬಲವಾಗಿ ಹಿಡಿದುಕೊಂಡು ಗಿರಗಿರನೆ ತಿರುಗಿಸಿ ಆನೆಯ ಮೇಲಕ್ಕೆ ಒಗೆದನು.

೪೨–೪೩. ದೈತ್ಯನು ಬಿದ್ದರೂ ಜಾಗ್ರತೆಯಾಗಿ ಎದ್ದು ಗದನನ್ನು ಬಿಗಿಯಾಗಿ ಹಿಡಿದುಕೊಂಡು ಮೇಲಕ್ಕೆ ಎತ್ತಿ ನೂರು ಯೋಜನದ ದೂರ ಆಕಾಶಕ್ಕೆ ಒಗೆದನು. ಗದನು ನೆಲದ ಮೇಲೆ ಬಿದ್ದನು. ಅವನ ಶರೀರವು ವಜ್ರದಂತೆ ಇದ್ದಿತು. ಆದುದರಿಂದ ಹೆಚ್ಚಿಗೆ ತೊಂದರೆಯಾಗಲಿಲ್ಲ.

ಚಿಕ್ಷೇಪ ಗಗನೇ ದೈತ್ಯಂ ಯೋಜನಾನಾಂ ಸಹಸ್ರಕಂ ।
ಪತಿತೋಽಪಿ ಸಮುತ್ಥಾಯ ಪುನರ್ಯುದ್ಧಂ ಚಕಾರ ಸಃ ॥ ೪೪ ॥

ಗದೋ ನದಂ ನದೋ ಗದಂ ನಿಜಘ್ನತುಃ ಪರಸ್ಪರಂ ।
ಪ್ರಮುಷ್ಟಿಭಿಶ್ಚ ದಾರುಣೈರ್ಮಹದ್ರಣೇ ನೃಪೇಶ್ವರ ॥
ದಂಡಾದಂಡಿ ಮುಷ್ಟಾಮುಷ್ಟಿ ಕೇಶಾಕೇಶಿ ನಖಾನಖಿ ।
ದಂತಾದಂತ್ಯುಭಯೋರ್ಯುದ್ಧಂ ಘೋರಮೇವಂ ಬಭೂವ ಹ ॥ ೪೫ ॥

ಇತ್ಥಂ ನಿಯುದ್ಧಮಾನೌ ತೌ ಪ್ರಕುರ್ವಂತೌ ರಣಂ ಪುನಃ ।
ಪಾದೇ ಪಾದಂ ಹೃದಿ ಹೃದಂ ಕರೇ ಕರಂ ಮುಖೇ ಮುಖಂ ॥ ೪೬ ॥

ಅನ್ಯೋನ್ಯಮಿತ್ಥಂ ಸಂಲಗ್ನೌ ಪರಸ್ಪರವಧೈಷಿಣೌ ।
ಬಲಾಕ್ರಾಂತಾವುಭೌ ತೌ ದ್ವೌ ಪತಿತೌ ಚ ಮುಮೂರ್ಛತುಃ ॥ ೪೭ ॥

ಇತ್ಥಂ ದೃಷ್ಟ್ವಾ ತಯೋರ್ಯುದ್ಧಂ ಯಾದವಾಶ್ಚೈವ ದಾನವಾಃ ।
ಗದೋ ಧನ್ಯೋ ನದೋ ಧನ್ಯಃ ಪ್ರೋಚುರ್ವಾಕ್ಯಮಿದಂ ನೃಪಃ ॥ ೪೮ ॥

---

೪೪. ಆದರೂ ಬೇಗ ಎದ್ದು ಗದನು ಆ ಅಸುರರನ್ನು ಹಿಡಿದು ಒಂದು ಸಾವಿರ ಯೋಜನದ ದೂರಕ್ಕೆ ಆಕಾಶದಲ್ಲಿ ಒಗೆದನು. ಅಸುರನು ಭೂಮಿಯ ಮೇಲೆ ಬಿದ್ದುಬಿಟ್ಟನು. ಆದರೇನು ? ಸ್ವಲ್ಪ ಹೊತ್ತಿನಲ್ಲಿಯೇ ಚೇತರಿಸಿಕೊಂಡು ಗದನೊಡನೆ ಮತ್ತೆ ಯುದ್ಧಕ್ಕೆ ಬಂದನು.

೪೫. ಗದನೂ, ನದನೂ, ಕೋಲು, ಮುಷ್ಟಿ ಇವುಗಳಿಂದ ಹೊಡೆದಾಡಿದರು. ಪರಸ್ಪರ ತಲೆಕೂದಲುಗಳನ್ನು ಹಿಡಿದು ಎಳೆದಾಡುತ್ತಾ ಉಗುರುಗಳಿಂದ ಪರಚಾಡಿದರು. ಹಲ್ಲುಗಳಿಂದ ಕಚ್ಚಾಡಿದರು. ಈ ರೀತಿ ಇಬ್ಬರಿಗೂ ಭಯಂಕರಯುದ್ಧವೊದಗಿತು.

೪೬–೪೭. ಇಬ್ಬರೂ ಕೈಕೈ ಕೊಟ್ಟು ಮುಖದಿಂದ ಮುಖವನ್ನೂ ಕಾಲಿನಿಂದ ಕಾಲನ್ನೂ, ಎದೆಯಿಂದ ಎದೆಯನ್ನೂ ಹೊಡೆಯುತ್ತಾ ಒಬ್ಬರನ್ನೊಬ್ಬರು ಕೊಲ್ಲ ಬೇಕೆಂಬ ಆಕಾಂಕ್ಷೆಯಿಂದ ಘೋರವಾದ ಯುದ್ಧಮಾಡಿ ಕೊನೆಗೆ ಇಬ್ಬರೂ ಕೆಳಗೆ ಬಿದ್ದು ಮೂರ್ಛಿತರಾದರು.

೪೮. ಅವರಿಬ್ಬರ ಯುದ್ಧವನ್ನು ಯಾದವರು ನೋಡಿ 'ಆಹಾ' ಗದನು ಧನ್ಯನೆಂದರು. ದೈತ್ಯರು ನದನೇ ಧನ್ಯನೆಂದರು.

ಗದಂ ನಿಪತಿತಂ ದೃಷ್ಟ್ವಾನಿರುದ್ಧಃ ಶೋಕಪೂರಿತಃ ।
ಚೈತನ್ಯಂ ಕಾರಯಾಮಾಸ ಜಲೇನ ವ್ಯಜನೇನ ಚ　　　　|| ೪೯ ||

ತದೈವ ಸೋಽಪಿ ರಾಜೇಂದ್ರ ಉತ್ಥಿತಃ ಕ್ಷಣಮಾತ್ರತಃ ।
ಕ್ವ ನದಃ ಕ್ವ ನದೋ ಯಾತೋ ತ್ಯಕ್ತ್ವಾ ಯುದ್ಧಂ ಭಯಾನ್ಮಮ || ೫೦ ||

ನಿರೀಕ್ಷ್ಯ ದಾನವಂ ತತ್ರ ಮೂರ್ಛಿತಂ ಪಂಚತಾಂ ಗತಂ ।
ಚಕ್ರುರ್ಜಯಜಯಾರಾವಂ ಯಾದವಾಶ್ಚೈವ ದೇವತಾಃ　　　　|| ೫೧ ||

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ತ್ರಿಂಶೋಽಧ್ಯಾಯಃ

---

೪೯. ಗದನು ಕೆಳಗೆ ಬಿದ್ದು ಮೂರ್ಛಿತನಾದುದನ್ನು ನೋಡಿ ಅನಿರುದ್ಧನು ಅತಿವ್ಯಾಕುಲನಾದನು. ನೀರನ್ನು ಚಿಮುಕಿಸಿ ಬೀಸಣಿಗೆಯಿಂದ ಬೀಸಿ ಶೈತ್ಯೋಪಚಾರ ಮಾಡಿ ಎಚ್ಚರಗೊಳಿಸಿದನು.

೫೦. ಗದನು ಎಚ್ಚೆತ್ತನು. ಮೇಲಕ್ಕೆದ್ದು ಎಲ್ಲಿ ಆ ನದನೆಲ್ಲಿ, ಎತ್ತಹೋದನು? ನನಗೆ ಹೆದರಿಕೊಂಡು ಯುದ್ಧವನ್ನು ಬಿಟ್ಟು ಎಲ್ಲಿಗೆ ಓಡಿಹೋದನು? ಎಂದು ಹೇಳುತ್ತಾ ಹುಡುಕಿದನು.

೫೧. ಅಲ್ಲಿಯೇ ಒಂದು ಕಡೆ ನದನು ಬಿದ್ದು ಸತ್ತುಹೋಗಿದ್ದನು. ಅದನ್ನು ನೋಡಿ ಯಾದವರೆಲ್ಲರೂ ಅನಿರುದ್ಧನನ್ನು ಜಯಜಯಾಕಾರಗಳಿಂದ ಹೊಗಳಿದರು. ದೇವತೆಗಳೆಲ್ಲರೂ ಜಯವಾಗಲೀ ಎಂದು ಹರಸಿದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಮೂವತ್ತನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರಿ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಅಶ್ವಮೇಧಖಂಡೇ

ಏಕತ್ರಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಸ್ವಸ್ಯಾಃ ಪರಾಜಯಂ ದೃಷ್ಟ್ವಾ ಸಿಂಹೋ ದೈತ್ಯೋ ರುಷಾನ್ವಿತಃ ।
ನಿಜಘಾನ ವೃಕಂ ಬಾಣೈ ರಥಸ್ಥಂ ಖರವಾಹನಃ ॥ ೧ ॥

ದೃಷ್ಟ್ವಾ ಸಮಾಗತಾನ್ಬಾಣಾನ್ವೃಕೋ ವೈ ಕೃಷ್ಣನಂದನಃ ।
ಚಿಚ್ಛೇದ ತಾನ್ಸ್ವಬಾಣೈಶ್ಚ ಲೀಲಯಾ ಪ್ರಧನೇ ನೃಪ ॥ ೨ ॥

ಮೂವತ್ತೊಂದನೆಯ ಅಧ್ಯಾಯವು

೧. ತಮ್ಮ ಕಡೆಯವರಿಗೆ ಸೋಲಾಗುತ್ತಿರುವುದನ್ನು ನೋಡಿ ಸಿಂಹನೆಂಬುವನು ಕತ್ತೆಯಮೇಲೇರಿ ರಣರಂಗಕ್ಕೆ ಬಂದನು. ಯಾದವರ ಕಡೆಯವನಾದ ವೃಕನೆಂಬುವನ ಮೇಲೆ ಬಾಣಪ್ರಯೋಗಮಾಡಿದನು. ವೃಕನೂ ರಥದಲ್ಲಿ ಕುಳಿತು ಯುದ್ಧಸನ್ನದ್ಧನಾದನು.

೨. ಸಿಂಹನು ಪ್ರಯೋಗಿಸಿದ ಬಾಣಗಳೆಲ್ಲವನ್ನೂ ಕೃಷ್ಣನ ಮಗನಾದ ವೃಕನು ಬಾಣಪ್ರಯೋಗಮಾಡಿ ಅನಾಯಾಸವಾಗಿ ಕತ್ತರಿಸಿಹಾಕಿದನು.

ಪುನಶ್ಚಿಕ್ಷೇಪ ಬಾಣಾನ್ವೈ ತಾಂಶ್ಚ ಚಿಚ್ಛೇದ ಕೃಷ್ಣಜಃ ।
ತತಃ ಕ್ರುದ್ಧೋ ರಣೇ ರಾಜನ್ಸಿಂಹನಾಮಾಸುರೇಶ್ವರಃ || ೩ ||

ಶರಾಸನೇ ಸಮಾಧತ್ತ ವಸುಸಂಖ್ಯಾನ್ ಶಿಲೀಮುಖಾನ್ ।
ಚತುರ್ಭಿಸ್ತುರಗಾನ್ನೀರೋ ವೃಕಸ್ಯ ಹ್ಯನಯತ್ ಕ್ಷಯಂ || ೪ ||

ಏಕೇನ ಧ್ವಜಮುತ್ಯುಗ್ರಂ ಚಿಚ್ಛೇದ ತರಸಾ ಹಸನ್ ।
ಏಕೇನ ಸಾರಥೇಃ ಕಾಯೊಾಚ್ಛಿರೋ ಭೂಮಾವಪಾತಯತ್ || ೫ ||

ಏಕೇನ ಸಗುಣಂ ಚಾಪಮುಚ್ಛಿನತ್ತ್ರಧನೇ ರುಷಾ ।
ಏಕೇನ ಹೃದಿ ವಿವ್ಯಾಧ ವೃಕಸ್ಯ ವೇಗವಾನ್ನೃಪಃ || ೬ ||

ತಸ್ಯ ಕರ್ಮಾದ್ಭುತಂ ದೃಷ್ಟ್ವಾ ವೀರಾ ವಿಸ್ಮಯಮಾಗತಾಃ ।
ವೃಕಸ್ತದೈವ ಸಹಸಾ ದೈತ್ಯಂ ಶಕ್ತ್ಯಾ ಜಘಾನ ಹ || ೭ ||

೩-೪. ಪುನಃ ಸಿಂಹನು ಬಾಣಗಳನ್ನು ಪ್ರಯೋಗಿಸಿದನು. ವೃಕನು ಅವುಗಳನ್ನೂ ಕತ್ತರಿಸಿದನು. ಆಗ ಸಿಂಹನು ಅತಿ ರೋಷದಿಂದ ಎಂಟು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ವೃಕನಿಗೆ ಹೊಡೆದನು. ನಾಲ್ಕುಬಾಣಗಳಿಂದ ವೃಕನ ಅಶ್ವಗಳನ್ನು ಕತ್ತರಿಸಿದನು.

೫. ಒಂದು ಬಾಣದಿಂದ ರಥದ ಧ್ವಜವನ್ನು ಚೂರುಚೂರುಮಾಡಿದನು. ಮತ್ತೊಂದು ಬಾಣದಿಂದ ಸಾರಥಿಯ ಶರೀರವನ್ನು ಗಾಯಮಾಡಿ ಅವನ ತಲೆಯನ್ನು ಭೂಮಿಯ ಮೇಲೆ ಕೆಡವಿದನು.

೬. ಒಂದು ಬಾಣದಿಂದ ಧನುಸ್ಸನ್ನೂ ಮೌರ್ವಿಯನ್ನೂ ಕತ್ತರಿಸಿದನು. ಇನ್ನೊಂದು ಬಾಣದಿಂದ ವೃಕನ ಎದೆಗೆ ಬಲವಾಗಿ ಹೊಡೆದನು.

೭. ಸಿಂಹನು ಈ ರೀತಿ ಬಾಣಗಳನ್ನು ಪ್ರಯೋಗಿಸಿದುದನ್ನು ನೋಡಿ ವೀರರೆಲ್ಲರೂ, ಆಶ್ಚರ್ಯಪಟ್ಟರು. ಆಗ ವೃಕನು ಶಕ್ತ್ಯಾಯುಧವನ್ನು ತೆಗೆದುಕೊಂಡು ಆ ಸಿಂಹನನ್ನು ಹೊಡೆದನು.

ಸಾ ಶಕ್ತಿಸ್ತತ್ತನುಂ ಭಿತ್ವಾ ಖರಂ ಭಿತ್ವಾ ವಿನಿರ್ಗತಾ ।
ವಿವೇಶ ಭೂತಲೇ ರಾಜನ್ಬಿವರಂ ಪನ್ನಗೋ ಯಥಾ ॥ ೮ ॥

ಖರೋ ಮೃತ್ಯುಂ ಗತಸ್ತತ್ರ ದೈತ್ಯಃ ಶೀಘ್ರಂ ಪಪಾತ ಹ ।
ಜಗರ್ಜ ಪುನರುತ್ಥಾಯ ಸಿಂಹಃ ಸಿಂಹ ಇವ ಸ್ಫುಟಂ ॥ ೯ ॥

ಗೃಹೀತ್ವಾ ವಿಶಿಖಂ ಶೂಲಂ ಚಿಕ್ಷೇಪ ಸ ವೃಕೋಪರಿ ।
ತಮಾಪತಂತಂ ಜಗ್ರಾಹ ವೃಕೋ ವಾಮಕರೇಣ ವೈ ॥ ೧೦ ॥

ತೇನೈವ ಶತ್ರುಂ ನಿಜಘಾನ ರಾಜನ್
ಕೃಷ್ಣಸ್ಯ ಪುತ್ರೋ ಬಹುರೋಷಯುಕ್ತಃ ।
ನಿರ್ಭಿನ್ನದೇಹೋ ನಿಪಪಾತ ಭೂಮೌ
ಹಾಹಾ ಪ್ರಕುರ್ವನ್ ಸ ಜಗಾಮ ಮೃತ್ಯುಂ ॥ ೧೧ ॥

---

೮. ಆ ಶಕ್ತ್ಯಾಯುಧವು ಸಿಂಹನ ಹೃದಯವನ್ನು ಭೇದಿಸಿ ಅವನ ವಾಹನವಾದ ಕತ್ತೆಯನ್ನು ಕತ್ತರಿಸಿ ಸರ್ಪವು ಬಿಲವನ್ನು ಸೇರುವಂತೆ ಹೃದಯದಿಂದ ಹೊರಹೊರಟು ನೆಲಕ್ಕೆ ಬಿದ್ದಿತು.

೯. ಕತ್ತೆಯು ಸತ್ತುಹೋಯಿತು. ಸಿಂಹನೂ ಕೆಳಗುರುಳಿದನು. ಆದರೂ ಜಾಗ್ರತೆಯಾಗಿ ಮೇಲಕ್ಕೆದ್ದು, ಸಿಂಹದಂತೆ ಗರ್ಜಿಸುತ್ತಾ, ಪುನಃ ಯುದ್ಧಮಾಡಲು ಬಂದನು.

೧೦. ಒಂದು ಬಾಣವನ್ನೂ ಶೂಲವನ್ನೂ ಕೈಯಲ್ಲಿ ಹಿಡಿದುಕೊಂಡು, ಸಿಂಹನು ವೃಕನ ಮೇಲೆ ಎಸೆದನು. ಆಗ ವೃಕನು ಎಡಗೈಯಿಂದಲೇ ಅವುಗಳನ್ನು ಹಿಡಿದುಕೊಂಡನು.

೧೧. ಅದನ್ನೇ ಪುನಃ ಸಿಂಹನಿಗೆ ಹೊಡೆದನು. ಅದರಿಂದ ಅವನ ದೇಹವೆಲ್ಲವೂ ಛಿನ್ನಭಿನ್ನವಾಯಿತು. ಅವನು ಹಾ! ಅಯ್ಯೋ! ಎನ್ನುತ್ತಾ ಭೂಮಿಗೆ ಉರುಳಿ ಸತ್ತುಹೋದನು.

ಹಾಹಾಕಾರಸ್ತದೈವಾಸೀದ್ದಾನವಾನಾಂ ರಣಾಂಗಣೇ।
ಪುಷ್ಪವರ್ಷಂ ಸುರಾಶ್ಚಕ್ರುರ್ಜಯೋರಾವಂ ಯದೂತ್ತಮಾಃ　　॥ ೧೨ ॥

ತದಾ ಕುಶಾಂಬಃ ಸಂಕ್ರುದ್ಧೋ ಸಾಂಬಾದೀನ್ಯಾದವಾನ್ಮೃಧೇ।
ರಥಸ್ಥಃ ಶೀಘ್ರಮಾಗತ್ಯ ಸರ್ವಾನ್ವಿವ್ಯಾಧ ಸಾಯಕೈಃ　　॥ ೧೩ ॥

ತಸ್ಯ ಬಾಣೈಶ್ಚ ಬಹವಃ ಪೇತುಶ್ಛಿನ್ನಾ ಮಹಾಗಜಾಃ।
ತಿರ್ಯಗ್ಭೂತಾ ರಥಾ ಯುದ್ಧೇ ತುರಗಾಶ್ಛಿನ್ನಕಂಧರಾಃ　　॥ ೧೪ ॥

ತಥಾ ಪದಾತಯಸ್ತತ್ರ ಶಿರೋಹೀನಾ ವಿಬಾಹವಃ।
ಇತ್ಥಂ ಸ ಮಾರಯನ್ರಾಜನ್ನನೇಕಾನ್ವಿಚಚಾರ ಹ　　॥ ೧೫ ॥

ಏವಂ ಪರಾಕ್ರಮಂ ದೃಷ್ಟ್ವಾ ಸಾಂಬೋ ಜಾಂಬವತೀಸುತಃ।
ಕುಶಾಂಬಂ ಚಾಹ್ವಯಾಮಾಸ ಯುದ್ಧಾರ್ಥೇ ಯುದ್ಧಕೋವಿದಃ　॥ ೧೬ ॥

---

೧೨. ರಾಕ್ಷಸರ ಗುಂಪಿನಲ್ಲಿ ಹಾಹಾಕಾರವೆದ್ದಿತು. ದೇವತೆಗಳೆಲ್ಲರೂ ಜಯ ಜಯಾಕಾರವನ್ನು ಮಾಡುತ್ತಾ ಪುಷ್ಪವೃಷ್ಟಿಯನ್ನು ಕರೆದರು. ಯಾದವರೆಲ್ಲರೂ ಜಯವಾಗಲೀ' ಎಂದೆನ್ನುತ್ತಾ ಆನಂದಪಟ್ಟರು.

೧೩. ಅನಂತರ ಕುಶಾಂಬನೆಂಬ ರಾಕ್ಷಸನು ಅತಿಕುಪಿತನಾಗಿ ರಥದಲ್ಲಿ ಕುಳಿತು ರಣಾಂಗಣಕ್ಕೆ ಬಂದು ಬಾಣಗಳನ್ನು ಪ್ರಯೋಗಿಸುತ್ತಾ ಸಾಂಬಾದಿಗಳನ್ನು ವ್ಯಥೆಗೊಳಿಸಿದನು.

೧೪. ಅವನ ಬಾಣಗಳ ಏಟನ್ನು ತಾಳಲಾರದೆ ಅನೇಕರು ಕೆಳಗೆ ಉರುಳಿ ಹೋದರು. ಆನೆಗಳನೇಕವು ಕತ್ತರಿಸಲ್ಪಟ್ಟವು. ರಥಗಳು ತಳತಳಕಾದವು. ಕುದುರೆಗಳ ಕತ್ತುಗಳು ಛಿನ್ನವಾದುವು. ಕಾಲಾಳುಗಳ ತಲೆಗಳು ಭೂಮಿಯ ಮೇಲೆ ಉರುಳಾಡಿದವು.

೧೫-೧೬. ಈ ರೀತಿ ಕುಶಾಂಬನು ಅನೇಕರನ್ನು ಕೊಲ್ಲುತ್ತಾ ರಣರಂಗದಲ್ಲೆಲ್ಲಾ ಓಡಾಡಿದನು. ಇವನ ಪರಾಕ್ರಮವನ್ನು ನೋಡಿ ಜಾಂಬವತಿಯ ಮಗನಾದ ಸಾಂಬನು ಆಶ್ಚರ್ಯಗೊಂಡನು. ಅವನೊಡನೆ ಯುದ್ಧಮಾಡಬೇಕೆಂಬ ಅಭಿಪ್ರಾಯದಿಂದ ಕುಶಾಂಬನನ್ನು ಕರೆದನು.

|| ಸಾಂಬ ಉವಾಚ ||

ಆಗಚ್ಛ ವೀರ ಸಹಸಾ ಮಯಾ ಸಹ ರಣಂ ಕುರು ।
ಕಿಮನ್ಯೈಸ್ತ್ರಾಸಿತೈರ್ದೀನೈರ್ನಿಹತೈಃ ಕೋಟಿಭಿರ್ನರೈಃ || ೧೭ ||

ಇತ್ಯುಕ್ತವಂತಮಾಲೋಕ್ಯ ಕುಶಾಂಬಃ ಪ್ರಹಸನ್ಬಲೀ ।
ಜಘಾನ ಹೃದಯೇ ತಸ್ಯ ವಸುಸಂಖ್ಯಾನ್ಶಿಲೀಮುಖಾನ್ || ೧೮ ||

ತದವ್ಮೃಷ್ಯನ್ ಹರೇಃ ಪುತ್ರಃ ಸ್ವಕೋದಂಡೇ ದಧನ್ಶರಾನ್ ।
ತತಾಡ ಸಪ್ತಭಿಃ ಶತ್ರುಂ ದಾನವಂ ವಕ್ಷಸೋಂತರೇ || ೧೯ ||

ಉಭೌ ಸಮುರಸಂರಬ್ಧಾವುಭಾವಪಿ ಜಯೈಷಿಣೌ ।
ರೇಜಾತೇ ತೌ ಹಿ ಸಂಗ್ರಾಮೇ ಯಥಾ ಷಣ್ಮುಖತಾರಕೌ || ೨೦ ||

ಸಾಂಬಃ ಕುಶಾಂಬಂ ಪ್ರಧನೇ ಕುಶಾಂಬಃ ಸಾಂಬಮೇವ ಚ ।
ಅನ್ಯೋನ್ಯಂ ಸರ್ಪಸದೃಶೈರ್ಬಾಣೈರಪಿ ವವರ್ಷತುಃ || ೨೧ ||

---

೧೭. ಸಾಂಬನು ಅವನನ್ನು ಕುರಿತು, ಎಲೈ ವೀರನೇ, ಸುಮ್ಮನೇ ಕೋಟ್ಯಾನು ಕೋಟಿ ಜನಗಳನ್ನು ಕೊಲ್ಲುವುದರಿಂದ ಏನು ಪ್ರಯೋಜನ? ನಿನ್ನ ಪರಾಕ್ರಮವನ್ನು ನನ್ನಲ್ಲಿ ತೋರಿಸು. ಬಾ ನನ್ನೊಡನೆ ಯುದ್ಧಮಾಡು ಎಂದನು.

೧೮. ಅದನ್ನು ಕೇಳಿ ಕುಶಾಂಬನು ನಗುತ್ತಾ ಎಂಟು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಸಾಂಬನ ಎದೆಗೆ ಹೊಡೆದನು.

೧೯. ಅದನ್ನು ಲೆಕ್ಕಿಸದೆ ಸಾಂಬನು ತನ್ನ ಧನುಸ್ಸಿನಲ್ಲಿ ಏಳು ಬಾಣಗಳನ್ನು ಹೂಡಿ ರಾಕ್ಷಸನ ಎದೆಗೆ ಗುರಿಯಿಟ್ಟು ಹೊಡೆದನು.

೨೦. ಇಬ್ಬರೂ ಯುದ್ಧೋನ್ಮುಖರಾಗಿದ್ದರು. ಪರಸ್ಪರ ಜಯಿಸಬೇಕೆಂಬ ಆಕಾಂಕ್ಷೆಯಿಂದ ಕೂಡಿ ಕುಮಾರಸ್ವಾಮಿ ತಾರಕಾಸುರರಂತೆ ಘೋರವಾಗಿ ಯುದ್ಧ ಮಾಡುತ್ತಾ ಪ್ರಕಾಶಿಸುತ್ತಿದ್ದರು.

೨೧. ಸಾಂಬನು ಕುಶಾಂಬನನ್ನೂ, ಕುಶಾಂಬನು ಸಾಂಬನನ್ನೂ ಸರ್ಪಕ್ಕೆ ಸಮಾನವಾದ ಬಾಣಗಳಿಂದ ಹೊಡೆದಾಡಿದರು.

ಬಾಣಾನ್ ಧನುಷಿ ಸಂಧಾಯ ಶತಸಂಖ್ಯಾನ್ಸ್ಫುರತ್ಪ್ರಭಾನ್ ।
ಅಕರೋದ್ವಿರಥಂ ತೈಶ್ಚ ಸಾಂಬಂ ಛಿನ್ನಶರಾಸನಂ ॥ ೨೨ ॥

ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಆರುರೋಹ ರಥಂ ಚಾನ್ಯಂ ಕುಪಿತಶ್ಚಾಪಸಂಯುತಃ ॥ ೨೩ ॥

॥ ಸಾಂಬ ಉವಾಚ ॥

ಕುತ್ರ ಯಾಸ್ಯಸಿ ತ್ವಂ ದೈತ್ಯ ಕೃತ್ವಾ ದೀರ್ಘಂ ಪರಾಕ್ರಮಂ ।
ಕ್ಷಣಮಾತ್ರಂ ರಣೇ ಸ್ಥಿತ್ವಾ ಪಶ್ಯ ಮೇ ವಿಕ್ರಮಂ ಪರಂ ॥ ೨೪ ॥

ಇತ್ಯುಕ್ತ್ವಾ ಸಾಯಕಂ ಚೋಗ್ರಂ ಸ್ವಕೋದಂಡೇ ನಿಧಾಯ ಚ ।
ಮಂತ್ರಯಿತ್ವಾ ಚ ಮಂತ್ರೇಣ ತದ್ರಥೇ ನಿಚಖಾನ ಹ ॥ ೨೫ ॥

ಅಲಾತಚಕ್ರವದ್ಭೂಮೌ ತೇನ ಬಾಣೇನ ತದ್ರಥಃ ॥
ಬಭ್ರಾಮ ಯೋಜನೇ ಶೀಘ್ರಂ ಸಸೂತಃ ಸತುರಂಗಮಃ ॥ ೨೬ ॥

---

೨೨. ತೀಕ್ಷ್ಣವಾದ ನೂರು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಕುಶಾಂಬನು ಸಾಂಬನ ರಥವನ್ನೂ, ಧನುಸ್ಸನ್ನೂ ಛಿನ್ನ ಭಿನ್ನ ಮಾಡಿದನು.

೨೩. ಅವನ ಕುದುರೆಗಳು ಸತ್ತುಹೋದವು. ಸಾರಥಿಯು ಮೃತಿಹೊಂದಿದನು. ಆಗ ಸಾಂಬನು ಅತಿರೋಷದಿಂದ ಬೇರೆ ಧನುಸ್ಸನ್ನು ಹಿಡಿದು ಬೇರೊಂದು ರಥವನ್ನು ಹತ್ತಿ ಯುದ್ಧಸನ್ನದ್ಧನಾದನು.

೨೪. ಮತ್ತು ಕುಶಾಂಬನನ್ನು ಕುರಿತು, ಎಲೋ ದೈತ್ಯ, ಏನೋ ಮಹಾ ಪರಾಕ್ರಮವೆಂದು ತಿಳಿದು ಎಲ್ಲಿ ಹೊರಟಿರುವೆ? ನಿಲ್ಲು ಒಂದು ಕ್ಷಣಕಾಲ. ನಿಂತು ನನ್ನ ಪರಾಕ್ರಮವನ್ನು ನೋಡು.

೨೫. ಹೀಗೆಂದು ಹೇಳಿ ಸಾಂಬನು ಧನುಸ್ಸಿನಲ್ಲಿ ಒಂದು ಭಯಂಕರವಾದ ಬಾಣವನ್ನು ಹೂಡಿ ಮಂತ್ರಿಸಿ ಕುಶಾಂಬನ ರಥಕ್ಕೆ ಹೊಡೆದನು.

೨೬. ಆ ಬಾಣವು ಕುಶಾಂಬನ ರಥವನ್ನು ಸೂತ, ಕುದುರೆಗಳು ಇವುಗಳ ಸಹಿತವಾಗಿ ಒಂದು ಯೋಜನ ಮೇಲಕ್ಕೆ ಹಾರಿಸಿ ಕುಂಬಾರನ ಚಕ್ರವು ತಿರುಗುವಂತೆ ಗರಗರನೆ ತಿರುಗಿಸಿತು.

ಭ್ರಮಂತಂ ಸರಥಂ ದೈತ್ಯಂ ದೃಷ್ಟ್ವಾ ಪ್ರಾಹ ಹಸನ್ಮುಖಃ ।
ಸಾಂಬೋ ಜಾಂಬವತೀಪುತ್ರೋ ಬಾಣಂ ಕೃತ್ವಾ ಶರಾಸನೇ ॥ ೨೭ ॥

॥ ಸಾಂಬ ಉವಾಚ ॥

ತ್ವಾದೃಶಾಶ್ಚ ಮಹಾವೀರಾಃ ಸ್ವರ್ಗಯೋಗ್ಯಾ ಭವಂತಿ ಹಿ ।
ನ ರಾಜಂತೇ ಮಹೀಮಧ್ಯೇ ಶಕ್ರತುಲ್ಯಪರಾಕ್ರಮಾಃ ॥ ೨೮ ॥

ತಸ್ಮಾಚ್ಚ ಮಮ ಬಾಣೇನ ದ್ವಿತೀಯೇನ ದಿವಂ ವ್ರಜ ।
ಸರಥಸ್ತ್ವಂ ಸದೇಹಶ್ಚ ಮತ್ಕೃಪಾತೋಽಸುರೇಶ್ವರ ॥ ೨೯ ॥

ಗಗನಪ್ರಾಪಕಂ ಚಾಸ್ತ್ರಮಿತ್ಯುಕ್ತ್ವಾ ವಿಮುಮೋಚ ಸಃ ।
ಶರೇಣ ತೇನ ಸರಥೋ ವಿಭ್ರಮನ್ಭೂತಲಾನ್ನೃಪ ॥ ೩೦ ॥

ಲೋಕಾನ್ಬಹೂನತಿಕ್ರಮ್ಯ ಜಗಾಮ ರವಿಮಂಡಲಂ ।
ಸಹಯಃ ಸೂತಸಹಿತೋ ತತ್ರ ಸೂರ್ಯಸ್ಯ ಜ್ವಾಲಯಾ ॥ ೩೧ ॥

---

೨೭. ಅದರಲ್ಲಿ ಕುಳಿತಿರುವ ಕುಶಾಂಬನೂ ಅದರೊಡನೆ ತಿರುಗಲು ಪ್ರಾರಂಭಿಸಿದನು. ಆಗ ಸಾಂಬನು ಧನುಸ್ಸಿನಲ್ಲಿ ಬಾಣವೊಂದನ್ನು ಹೂಡಿ ಅವನನ್ನು ನೋಡಿ ನಗುತ್ತಾ ಇಂತೆಂದನು.

೨೮-೨೯. ಎಲೈ ವೀರನೇ, ನಿನ್ನಂತಹ ಪರಾಕ್ರಮಿಗಳು ಭೂಮಿಯಲ್ಲಿ ವಾಸಿಸಲು ಯೋಗ್ಯರಲ್ಲ. ಸ್ವರ್ಗದಲ್ಲಿ ಪ್ರಕಾಶಿಸಲು ಯೋಗ್ಯರು. ಆದುದರಿಂದ ಈಗ ನಾನು ಪ್ರಯೋಗಿಸುವ ಬಾಣದಿಂದ ಇಂದ್ರನಂತೆ ಪರಾಕ್ರಮಿಯಾದ ನೀನು ಸಶರೀರನಾಗಿ ರಥದೊಡನೆ ಸ್ವರ್ಗಕ್ಕೆ ಹೋಗು.

೩೦-೩೧. ಎಂದು ಹೇಳಿ ಗಗನಪ್ರಾಪಕವೆಂದು ಹೆಸರುಳ್ಳ ಆ ಬಾಣವನ್ನು ಬಿಟ್ಟುಬಿಟ್ಟನು. ಅದು ಕುಶಾಂಬನನ್ನು ರಥದೊಡನೆ ಭೂಮಂಡಲವನ್ನೆಲ್ಲಾ ಸುತ್ತಿಸಿ ಸೂರ್ಯಮಂಡಲದ ಸಮೀಪಕ್ಕೆ ತೆಗೆದುಕೊಂಡು ಹೋಯಿತು.

ದಗ್ಧೋಽಭೂತ್ತದ್ರಥಃ ಸದ್ಯೋ ದೈತ್ಯೋ ದಗ್ಧ ಕಲೇವರಃ ।
ಪಪಾತ ಭೂತಲೇ ಪುರ್ಯಾಂ ಬಲ್ವಲಸ್ಯ ಚ ಸನ್ನಿಧೌ ॥ ೩೨ ॥

ತಸ್ಮಿನ್ನಿಪತಿತೇ ಪಾಪೇ ಗತೇ ಮೃತ್ಯುಂ ಚ ದಾನವೇ ।
ಹಾಹಾಕಾರಂ ತತಶ್ಚಕ್ರುರ್ದೈತ್ಯಾಸ್ಸರ್ವೇ ಭಯಾನ್ವಿತಾಃ ॥ ೩೩ ॥

ಯಾದವಾನಾಂ ತತಸ್ಸೈನ್ಯೇ ನೇದುರ್ದುಂದುಭಯೋ ಮುಹುಃ ।
ಪುಷ್ಪವರ್ಷಂ ಮುದಾ ಚಕ್ರುಃ ಸಾಂಬಸ್ಯೋಽಪರಿ ನಿರ್ಜರಾಃ ॥ ೩೪ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ
ಏಕತ್ರಿಂಶೋಽಧ್ಯಾಯಃ

---

೩೨. ಅಲ್ಲಿ ಸೂರ್ಯನ ಜ್ವಾಲೆಯಿಂದ ರಥವು ಉರಿಯಲು ಪ್ರಾರಂಭಿಸಿತು. ಕುಶಾಂಬನ ಶರೀರವು ಸುಟ್ಟುಹೋಯಿತು. ಅಲ್ಲಿಂದ ಕುಶಾಂಬನ ಸುಟ್ಟ ಶರೀರವು ಬಲ್ವಲನ ಪಟ್ಟಣದಲ್ಲಿ ಬಿದ್ದುಬಿಟ್ಟಿತು.

೩೩. ಕುಶಾಂಬನು ಸತ್ತುಹೋಗಲು ದೈತ್ಯರೆಲ್ಲರೂ ಭಯಗೊಂಡರು. ಎಲ್ಲರೂ ಹಾಹಾಕಾರಮಾಡುತ್ತಾ ದುಃಖಿಸಿದರು.

೩೪. ಯಾದವರೆಲ್ಲಾ ಸಂತೋಷಗೊಂಡರು. ದುಂದುಭಿಗಳು ಮೊಳಗಿದವು. ದೇವತೆಗಳೆಲ್ಲರೂ ಸಾಂಬನ ಮೇಲೆ ಪುಷ್ಪವೃಷ್ಟಿಯನ್ನು ಕರೆದರು.

ಇಲ್ಲಿಗೆ ಶ್ರೀ ಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಮೂವತ್ತೊಂದನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ದ್ವಾತ್ರಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ವೈ ಬಲ್ವಲಂ ದೈತ್ಯಂ ಶೋಚಂತಂ ಕಾಂಚನಾಸನೇ ।
ಮಯಃ ಪ್ರತ್ಯಾಹ ವಚನಂ ಜ್ಯೇಷ್ಠಂ ಕುಂಭಶ್ರುತಿರ್ಯಥಾ ॥ ೧ ॥

ಅದ್ಯ ದೃಷ್ಟಂ ತ್ವಯಾ ರಾಜನ್ಯದೂನಾಂ ಬಲಮೇವ ಹಿ ।
ದೈತ್ಯವೃಂದಾಶ್ಚ ನಿಹತಾಶ್ಚತ್ವಾರೋ ಮಂತ್ರಿಣಸ್ತವ ॥ ೨ ॥

ಅವಶೇಷಸ್ತ್ವಮೇವಾಸಿ ಹ್ಯಥವಾಹಂ ಚ ತ್ವತ್ಪುರೇ ।
ತಸ್ಮಾತ್ತವೇಚ್ಛಾ ದೈತ್ಯೇಂದ್ರ ಯಥಾ ಭೂಯಾತ್ತಥಾ ಕುರು ॥ ೩ ॥

ಮೂವತ್ತೆರಡನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ ಕೇಳು. ಕುಶಾಂಬನು ಯುದ್ಧದಲ್ಲಿ ಮಡಿಯಲು ಬಲ್ವಲನು ದುಃಖಿಸಿದನು. ಆಗ ಅವನ ತಮ್ಮನಾದ ಮಯನು ಕುಂಭಶ್ರುತಿಯು ಅಣ್ಣನಿಗೆ ಹೇಳಿದಂತೆ ಬಲ್ವಲನನ್ನು ಕುರಿತು ಇಂತೆಂದನು.

೨-೩. ಎಲೈ ದೈತ್ಯರಾಜನೇ, ನೋಡಿದಿಯಾ ಯಾದವರ ಬಲವನ್ನು ? ಅವರು ದೈತ್ಯರನ್ನೆಲ್ಲಾ ಕೊಂದಿರುವರು. ನಿನ್ನ ನಾಲ್ಕು ಜನ ಮಂತ್ರಿಗಳೂ ಯುದ್ಧದಲ್ಲಿ ಮಡಿದರು. ಇನ್ನು ನಿನ್ನ ಪಟ್ಟಣದಲ್ಲಿ ಯುದ್ಧಮಾಡಲು ಸಮರ್ಥರಾದವರೆಂದರೆ ನೀನೊಬ್ಬ ಅಥವಾ ನಾನೊಬ್ಬ ನಾವಿಬ್ಬರೇ ಉಳಿದಿರುವೆವು. ಈಗಲಾದರೂ ನೋಡು. ನಿನಗನುಕೂಲವಾಗುವುದನ್ನು ಯೋಚಿಸು. ಇಷ್ಟರ ಮೇಲೆ ನಿನ್ನ ಇಷ್ಟ.

ಬಲ್ವಲಃ ಪ್ರಾಹ ವಚನಮುದ್ಯ ಯಾಸ್ಯಾಮ್ಯಹಂ ರಣೇ ।
ಶೀಘ್ರಂ ಹಂತುಂ ಯದೂನ್ಸರ್ವಾನ್ ತ್ವಂ ಗುಪ್ತೋ ಭವ ಮಂದಿರೇ ॥ ೪ ॥

ಹರಿಃ ಕೃಷ್ಣಸ್ತು ನಂದಸ್ಯ ಪುರಾ ಪುತ್ರಃ ಪ್ರಕೀರ್ತಿತಃ ।
ವಸುದೇವೋ ಮನ್ಯತೇ ತಂ ಮತ್ಪುತ್ರೋಽಯಂ ಗತತ್ರಪಃ ॥ ೫ ॥

ಹೈಯಂಗವೀನದುಗ್ಧಾಜ್ಯದಧಿತಕ್ರಾದಿಕಂ ತು ಸಃ ।
ಚೋರಯಾಮಾಸ ಗೋಪೀನಾಂ ರಸಿಕೋ ರಾಸಮಂಡಲೇ ॥ ೬ ॥

ಜರಾಸುತಭಯಾತ್ಸೋಽಪಿ ಸಮುದ್ರಂ ಶರಣಂ ಗತಃ ।
ಮಾರಿತೋ ಮಾತುಲೋ ಯೇನ ಕಿಂ ಕರಿಷ್ಯತಿ ಪೌರುಷಂ ॥ ೭ ॥

ಇತಿ ತದ್ವಾಕ್ಯಮಾಕರ್ಣ್ಯ ಮಯಃ ಪ್ರಕುಪಿತೋಽಬ್ರವೀತ್ ।
ಯಸ್ಮಾದ್ಬಿಭೇತಿ ಬ್ರಹ್ಮಾ ಚ ಶಿವೋ ಮಾಯಾ ಪುರಂದರಃ ॥ ೮ ॥

---

೪. ಎನ್ನಲು, ಅದನ್ನು ಕೇಳಿ ಬಲ್ವಲನು ನಾನಿಂದೇ ಯುದ್ಧಕ್ಕೆ ಹೊರಡುವೆನು. ಆ ಯಾದವರನ್ನೆಲ್ಲಾ ಕೊಂದು ಶೀಘ್ರವಾಗಿ ಹಿಂತಿರುಗುವೆನು. ನೀನು ಪುರದಲ್ಲಿ ಅಡಗಿಕೊಂಡಿರು.

೫-೬. ಕೃಷ್ಣನನ್ನೇನು ನಾನು ಕಾಣದವನಲ್ಲ. ಅವನ ವಿಷಯವೆಲ್ಲಾ ನನಗೆ ಗೊತ್ತು. ಅವನು ನಂದನ ಮಗನು. ವಸುದೇವನು ಅವನನ್ನು ತನ್ನ ಮಗನೆಂದು ತಿಳಿದಿದ್ದನು. ಇಂತಹ ನಾಚಿಕೆಗೇಡಿ ಅವನು. ಬೆಣ್ಣೆ, ಮೊಸರು, ತುಪ್ಪ, ಹಾಲು ಮುಂತಾದುವುಗಳನ್ನು ಕದ್ದು ತಿನ್ನುತ್ತಿದ್ದನು. ಇಂತಹ ಕಳ್ಳನವನು. ಅನೇಕ ಗೋಪಿಯರಿಗೆ ಪ್ರೀತಿಪಾತ್ರನಾಗಿದ್ದನು. ಇಂತಹ ರಸಿಕನವನು.

೭. ಅವನ ಶೌರ್ಯವೂ ನನಗೆ ಗೊತ್ತು. ಹಿಂದೆ ಜರಾಸಂಧನಿಗೆ ಹೆದರಿ ಸಮುದ್ರವನ್ನು ಮರೆ ಹೊಕ್ಕಿದ್ದ. ಅವನು ತನ್ನ ಮಾವನಾದ ಕಂಸನನ್ನೇ ಕೊಂದನು. ಅದೊಂದು ಪೌರುಷವೋ? ಎಂದನು.

೮. ಮಯನಿಗೆ ಇದನ್ನು ಕೇಳಿ ತುಂಬಾ ಕೋಪಬಂದಿತು. ಆಗವನು ಬಲ್ವಲನನ್ನು ಕುರಿತು ಬ್ರಹ್ಮ, ವಿಷ್ಣು, ಮಹೇಶ್ವರರೂ ಸಹ ಆ ಕೃಷ್ಣನಿಗೆ ಹೆದರುವರು. ಎಲೋ ನಿಂದಕನೇ, ಭಯವನ್ನುಂಟುಮಾಡಿದರೂ ನಿರ್ಭಯನಾದ ಅಂತಹ ಕೃಷ್ಣನನ್ನು ನೀನು ನಿಂದಿಸುವೆಯಾ?

ಭಯದಂ ನಿರ್ಭಯಂ ಕೃಷ್ಣಂ ತಂ ವಿನಂದಸಿ ನಿಂದಕ ।
ಕೃಷ್ಣಂ ನಿಂದತಿ ಯೋ ಮೂಢೋ ಹ್ಯಜ್ಞಾನಾಚ್ಚ ಕುಸಂಗತಃ ॥ ೯ ॥

ಕುಂಭೀಪಾಕೇ ಸ ಪತತಿ ಯಾವದ್ವೈ ಬ್ರಹ್ಮಣೋ ವಯಃ ॥ ೧೦ ॥

ಚಂಡಪಾಲಶಿಶುಪಾಲಮಂಡಲೀ-
ಭಂಜನಂ ದನುಜದರ್ಪಖಂಡನಂ ।
ಮಾಧವಂ ಮದನಮೋಹನಂ ಪರಂ
ತ್ವಂ ಭಜಸ್ವ ಕುಲಕೌಶಲಾಯ ಚ ॥ ೧೧ ॥

ಮಯಸ್ಯ ವಚನಂ ಶ್ರುತ್ವಾ ಜ್ಞಾನಂ ಪ್ರಾಪ್ತೋಽಪಿ ಬಲ್ವಲಃ ।
ಕ್ಷಣಂ ವಿಚಾರ್ಯ ರಾಜೇಂದ್ರ ಪ್ರೋವಾಚ ಪ್ರಹಸನ್ನಿವ ॥ ೧೨ ॥

೯–೧೦. ಅಜ್ಞಾನಕ್ಕೊಳಗಾಗಿ, ಕೆಟ್ಟಚಾಳಿಯಿಂದ ಕೂಡಿ ಯಾವನು ಶ್ರೀಕೃಷ್ಣನನ್ನು ನಿಂದಿಸುವನೋ ಅವನು ಮೂಢನಲ್ಲದೆ ಬೇರೆಯಲ್ಲ. ಅವನಿಗೆ ಬ್ರಹ್ಮನ ಆಯುಸ್ಸು ಮುಗಿಯುವ ಪರ್ಯಂತ ಕುಂಭೀಪಾಕನರಕವು ಪ್ರಾಪ್ತವಾಗುವುದು.

೧೧. ನೀನಾರೀತಿ ನಿಂದಿಸಬೇಡ. ಶ್ರೀಕೃಷ್ಣನು ಸಾಮಾನ್ಯದವನಲ್ಲ. ಚಂಡಪಾಲ, ಶಿಶುಪಾಲ ಮುಂತಾದ ದನುಜರ ದರ್ಪವನ್ನು ಮುರಿದ ಮಹನೀಯನು ಅವನು. ಮನ್ಮಥನಂತೆ ಸುಂದರನು. ಮನೋಹರನು. ಇಂತಹ ಮಾಧವನನ್ನು ನೀನು ಭಜಿಸು. ನಿನ್ನ ಕುಲದ ಅಭಿವೃದ್ಧಿಗಾದರೂ ಪೂಜಿಸು. ಎಂದನು.

೧೨. ಮಯನ ಉಪದೇಶ ಬಲ್ವಲನ ಮನಸ್ಸಿನ ಮೇಲೆ ಪರಿಣಾಮಕಾರಿಯಾಯಿತು. ಕ್ಷಣಕಾಲ ಯೋಚಿಸಿದನು. ಅನಂತರ ನಗುತ್ತಾ ಮಯನನ್ನು ಕುರಿತಿಂತೆಂದನು.

॥ ಬಲ್ವಲ ಉವಾಚ ॥

ಜಾನಾಮ್ಯಹಂ ವಿಶ್ವಪತಿಂ ಚ ಕೃಷ್ಣಂ
ಶೇಷಂ ಬಲಂ ವೈ ಮದನಂ ಚ ಕಾರ್ಷ್ಣಿಂ ।
ಅತ್ರಾಗತಂ ಪದ್ಮಭವಂ ಹಿ ಚೈಷಾಂ
ವಧ್ಯಾ ವಯಂ ತೇನ ಹಯೋ ಹೃತೋಽಯಂ ॥ ೧೩ ॥

ಏಷಾಂ ಬಾಣೈಶ್ಚ ನಿಹತೋ ಯದಾಹಂ ನಿಧನಂ ಗತಃ ।
ತದಾ ಸುಖೇನ ಯಾಸ್ಯಾಮಿ ಶೀಘ್ರಂ ವಿಷ್ಣೋಃ ಪರಂ ಪದಂ ॥ ೧೪ ॥

ಪುರಾ ಚ ವೈರಭಾವೇನ ವೈಕುಂಠಂ ಬಹವೋ ಗತಾಃ ।
ದಾನವಾ ರಾಕ್ಷಸಾಶ್ಚೈವ ತಂ ಚ ಭಾವಂ ಕರೋಮ್ಯಹಂ ॥ ೧೫ ॥

ಇತ್ಯುಕ್ತ್ವಾ ದಂಶಿತೋ ಭೂತ್ವಾ ದಾನವಾನಾಂ ಶಿರೋಮಣಿಃ ।
ಸ್ವಸೈನ್ಯಪಾಲಕಂ ತೂರ್ಣಂ ಸಮಾಹೂಯೇದಮಬ್ರವೀತ್ ॥ ೧೬ ॥

---

೧೩. ಎಲೈ ಮಯನೇ, ನೀನು ಹೇಳಿದುದು ದಿಟವಾದುದು. ಶ್ರೀಕೃಷ್ಣನು ಜಗತ್ಸ್ವಾಮಿ ಎಂದು ನಾನು ಬಲ್ಲೆನು. ಬಲರಾಮನು ಆದಿಶೇಷನ ಅವತಾರನು. ಪ್ರದ್ಯುಮ್ನನು ಮನ್ಮಥನ ಅವತಾರನು. ಇಲ್ಲಿಗೆ ಬಂದಿರುವ, ಅನಿರುದ್ಧನು ಬ್ರಹ್ಮನ ಅವತಾರನು. ಇದೆಲ್ಲವೂ ನನಗೆ ಗೊತ್ತು. ಅಲ್ಲದೆ ಇವನಿಂದ ರಾಕ್ಷಸರಾದ ನಾವೆಲ್ಲರೂ ಮಡಿಯುವೆವು. ಮತ್ತು ಕುದುರೆಯು ಅವರ ವಶವಾಗುವುದು. ಇದೂ ನನಗೆ ಗೊತ್ತು.

೧೪. ಆದರೆ ನಾನೇಕೆ ಹೀಗಾಡುತ್ತಿರುವೆನೆಂದು ನೀನು ಕೇಳಬಹುದು. ಅದಕ್ಕೆ ಕಾರಣವುಂಟು. ಇವರ ಬಾಣಗಳಿಂದ ನಾನು ಯುದ್ಧದಲ್ಲಿ ಸತ್ತರೆ ನನಗೆ ಜಾಗ್ರತೆಯಾಗಿ ಶಾಶ್ವತವಾದ ಪರಮಾತ್ಮನ ಪಾದಾರವಿಂದೆಡೆಯಲ್ಲಿ ಸ್ಥಾನವು ಲಭಿಸುವುದು.

೧೫. ಅಲ್ಲದೆ ಹಿಂದೆ ನಮ್ಮವರಾದ ದಾನವರೂ, ರಾಕ್ಷಸರೂ ಪರಮಾತ್ಮನಲ್ಲಿ ವೈರಸಾಧಿಸಿ ವೈಕುಂಠಲೋಕವನ್ನು ಪಡೆದರು. ಅಂತಹದನ್ನೇ ನಾನೀಗ ಅವಲಂಬಿಸಿರುವೆನು.

೧೬. ಹೀಗೆಂದು ಹೇಳಿ ಆ ಬಲ್ವಲನು ತನ್ನ ಸೇನಾರಕ್ಷಕರನ್ನು ಜಾಗ್ರತೆಯಾಗಿ ಕರೆಸಿ ಅವನನ್ನು ಕುರಿತು ಹೀಗೆಂದು ಹೇಳಿದನು.

ಪಟಹೇನ ಮಮಾಜ್ಞಾಂ ತ್ವಂ ಪುರ್ಯಾಂ ದೇಹಿ ಪ್ರಯತ್ನತಃ ।
ಅನಿರುದ್ಧೇನ ಯುದ್ಧಾಯ ವೀರೇಷು ಸೈನ್ಯಪಾಲಕ ॥ ೧೭ ॥

ಯೇ ಮಮಾಜ್ಞಾಂ ನ ಮನ್ಯಂತೇ ತೇ ವಧಾರ್ಹಾ ರಣಂ ವಿನಾ ।
ಆತ್ಮಜಾ ವಾ ಭ್ರಾತರೋ ವಾ ಹ್ಯನ್ಯೇಷಾಂ ಚೈವ ಕಾ ಕಥಾ ॥ ೧೮ ॥

ಇತಿ ಶ್ರುತ್ವಾ ಸ ತದ್ವಾಕ್ಯಂ ರಥ್ಯಾಂ ರಥ್ಯಾಂ ಗೃಹೇ ಗೃಹೇ ।
ಪಟಹೇನಾಪಿ ತಸ್ಯಾಜ್ಞಾಂ ಘೋಷಯಾಮಾಸ ವೇಗತಃ ॥ ೧೯ ॥

ಶ್ರುತ್ವಾ ಪಟಹನಿರ್ಘೋಷಂ ದೈತ್ಯಾ ಶೀಘ್ರಂ ಭಯಾತುರಾಃ ।
ಗೃಹೀತ್ವಾ ಸರ್ವಶಸ್ತ್ರಾಣಿ ಹ್ಯಾಜಗ್ಮುಸ್ತೇ ಸಭಾತಲಂ ॥ ೨೦ ॥

ಸೈನ್ಯಪಾಲಸ್ತತಃ ಪೂರ್ವಂ ಲಕ್ಷದೈತ್ಯೈಃ ಪರಿವೃತಃ ।
ರಥೇನ ಕವಚೀ ಧನ್ವೀ ನಿರ್ಜಗಾಮ ಪುರಾದ್ಬಹಿಃ ॥ ೨೧ ॥

---

೧೭. ಎಲೈ ದ್ವಾರಪಾಲಕನೇ, ಅನಿರುದ್ಧನೊಡನೆ ಯುದ್ಧಮಾಡಲು ಎಲ್ಲರೂ ಬರಬೇಕೆಂದು ನನ್ನಾಜ್ಞೆಯನ್ನು ಊರಿನಲ್ಲಿ ಡಂಗೂರ ಹೊಡಿಸು.

೧೮. ಯಾರು ನನ್ನಾಜ್ಞೆಯನ್ನು ಮೀರಿ ನಡೆಯುವರೋ ಅವರು ಮಕ್ಕಳೇ ಆಗಲೀ, ಸಹೋದರರೇ ಆಗಲೀ ಯಾರಾದರೇನು ಅವರೆಲ್ಲರೂ ವಧಾರ್ಹರೆಂದು ತಿಳಿಸಿಬಿಡು.

೧೯. ಎನ್ನಲು ಆ ಸೈನ್ಯರಕ್ಷಕನು ಡಂಗೂರದ ಮೂಲಕ ಬಲ್ವಲನ ಆಜ್ಞೆಯನ್ನು ಬೀದಿಬೀದಿಗಳಲ್ಲೂ, ಮನೆಮನೆಗಳಲ್ಲೂ ಸಾರಿಸಿದನು.

೨೦. ಡಂಗೂರದ ಧ್ವನಿಯನ್ನು ಕೇಳಿ ದೈತ್ಯರೆಲ್ಲರೂ ಭಯಗೊಂಡು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಬಲ್ವಲನ ಆಸ್ಥಾನದೆಡೆಗೆ ಬಂದು ಸೇರಿದರು.

೨೧. ಮೊದಲು ಸೈನ್ಯಪಾಲನು ರಥದಲ್ಲಿ ಕುಳಿತು ಕವಚವನ್ನು ಧರಿಸಿ ಧನುರ್ಬಾಣಗಳನ್ನು ಹಿಡಿದು ಲಕ್ಷದೈತ್ಯರೊಡಗೂಡಿ ಊರಿನಿಂದ ಆಚೆ ಸಿದ್ಧನಾಗಿದ್ದನು.

ದುರ್ನೇತ್ರೋ ದುರ್ಮುಖಶ್ಚೈವ ದುಃಖಭಾವಶ್ಚ ದುರ್ಮದಃ ।
ಏತೇ ವೈ ಮಂತ್ರಿಣಾಂ ಪುತ್ರಾಶ್ಚತ್ವಾರಸ್ತೇ ವಿನಿರ್ಯಯುಃ ॥ ೨೨ ॥

ಮತಂಗಜೈರ್ಮಹಾಮತ್ತೈಶ್ಚಂಚಲಾಂಗೈಸ್ತುರಂಗಮೈಃ ।
ರಥೈಶ್ಚ ದೇವಧಿಷ್ಣ್ಯಾಭೈರ್ವಿದ್ಯಾಧರಸಮೈರ್ನರೈಃ ॥ ೨೩ ॥

ಸದ್ಯಃ ಕಾಮಗಯಾನೇನ ಮಯದತ್ತೇನ ಬಲ್ವಲಃ ।
ಸ್ವಯಂ ಜಗಾಮ ಯುದ್ಧಾರ್ಥೇ ಚತುರ್ಲಕ್ಷೈರ್ಮಹಾಸುರೈಃ ॥ ೨೪ ॥

ಸೈನ್ಯಪಾಲಸ್ಯ ಪುತ್ರಸ್ತು ಭೋಜನಂ ಕುರುತೇ ಗೃಹೇ ।
ಬುಭುಕ್ಷಿತಶ್ಚ ಯುದ್ಧಾಯ ಶೀಘ್ರಂ ಸೋಽಪಿ ನ ನಿರ್ಗತಃ ॥ ೨೫ ॥

ನಾಗತಂ ತಂ ವಿಲೋಕ್ಯಾಥ ಸೈನ್ಯೇ ಬಲ್ವಲಸೈನಿಕಾಃ ।
ನೃಪಾಯ ಕಥಯಾಮಾಸುಸ್ತಸ್ಯ ವಾರ್ತಾಂ ಚ ಶಂಕಿತಾಃ ॥ ೨೬ ॥

---

೨೨. ದುರ್ನೇತ್ರ, ದುರ್ಮುಖ, ದುಃಖಭಾವ, ದುರ್ಮದ ಈ ನಾಲ್ಕು ಜನ ಮಂತ್ರಿಯ ಮಕ್ಕಳೂ ಯುದ್ಧಸನ್ನದ್ಧರಾಗಿ ಪಟ್ಟಣದಿಂದ ಹೊರಹೊರಟರು.

೨೩. ಅತ್ಯಂತವಾಗಿ ಮದಿಸಿದ ಆನೆಗಳನ್ನೂ, ನಿಂತಲ್ಲಿ ನಿಲ್ಲದೆ ಚಂಚಲ ವಾಗಿರುವ ಕುದುರೆಗಳನ್ನೂ ದೇವತೆಗಳ ರಥಗಳಂತೆ ಪ್ರಕಾಶಿಸುತ್ತಿರುವ ರಥಗಳನ್ನೂ ಏರಿ ವಿದ್ಯಾಧರರಿಗೆ ಸಮಾನರಾದ ಅನೇಕ ಜನರು ಯುದ್ಧಮಾಡಲು ಹೊರಟರು.

೨೪. ಬಲ್ವಲನೂ ಸಹ ಮಯನು ಕೊಟ್ಟ ಮಾಯಾರಥವೊಂದನ್ನು ಏರಿ ನಾಲ್ಕು ಲಕ್ಷ ರಾಕ್ಷಸ ಧೀರರೊಡನೆ ಕೂಡಿ ಯುದ್ಧರಂಗಕ್ಕೆ ತೆರಳಿದನು.

೨೫. ಸೈನ್ಯಪಾಲನ ಮಗನು ಮನೆಯಲ್ಲಿ ಊಟಕ್ಕೆ ಕುಳಿತನು. ಯುದ್ಧದ ಕರೆಯು ಬಂದರೂ. ಹಸಿವು ಜಾಸ್ತಿಯಾಗಿದ್ದುದರಿಂದ ಊಟಮಾಡುತ್ತಲೇ ಕುಳಿತನು. ಜಾಗ್ರತೆ ಯುದ್ಧಕ್ಕೆ ಹೊರಡಲಿಲ್ಲ.

೨೬. ಅವನು ಎಷ್ಟು ಹೊತ್ತಾದರೂ ಬರದಿರಲು ಬರುವನೋ ಇಲ್ಲವೋ? ಎಂಬ ಸಂಶಯದಿಂದ ಬಲ್ವಲನ ಸೈನಿಕರು ಅವನು ಬರದಿರುವ ವಿಷಯವನ್ನು ರಾಜನಿಗೆ ಹೇಳಿದರು.

ತತಸ್ತದ್ವಚನಾದ್ವೀರಾ ಬದ್ಧ್ವಾ ತಂ ದಾಮಭೀ ರುಷಾ ।
ನೃಪಾಗ್ರೇ ಚಾನಯಾಮಾಸುಃ ಪ್ರಫುಲ್ಲವದನೇಕ್ಷಣಾಃ ॥ ೨೭ ॥

ತಂ ದೃಷ್ಟ್ವಾ ಭರ್ತ್ಸಯಿತ್ವಾ ಚ ಬಲ್ವಲಶ್ಚಂಡಶಾಸನಃ ।
ಭುಶುಂಡೀವದನೇನಾಪಿ ಮಾರಯಾಮಾಸ ವೇಗತಃ ॥ ೨೮ ॥

ದೈತ್ಯಾಃ ಸರ್ವೇ ಭಯಂ ಪ್ರಾಪುರ್ವಧಂ ತಸ್ಯ ನಿರೀಕ್ಷ್ಯ ಚ ।
ಸೈನ್ಯಪಾಲಸ್ತು ಸಂಗ್ರಾಮೇ ಮೃತಂ ಪುತ್ರಂ ನಿಶಮ್ಯ ಚ ॥ ೨೯ ॥

ರಥಾತ್ಪಪಾತ ದುಃಖಾರ್ತಸ್ತಾಡಯನ್ಮಸ್ತಕಂ ಕರೈಃ ।
ವಿಲಲಾಪ ಭೃಶಂ ಸೋಽಪಿ ಪುತ್ರದುಃಖೇನ ದುಃಖಿತಃ ॥ ೩೦ ॥

ಹಾ ಪುತ್ರ ವೀರ ಪಿತರಂ ತ್ಯಕ್ತ್ವಾ ಮಾಂ ಜರಠಂ ರಣೇ ।
ಗತಃ ಶತಘ್ನೀಮಾರ್ಗೇಣ ಸ್ವರ್ಗೇ ಮಾಮವಿಲೋಕ್ಯ ಚ ॥ ೩೧ ॥

---

೨೭. ಆಗ ಬಲ್ವಲನ ಅಪ್ಪಣೆಯಂತೆ ಸೈನಿಕರು ಊಟಮಾಡುತ್ತಿರುವ ಅವನನ್ನು ಹಗ್ಗಗಳಿಂದ ಬಲವಾಗಿ ಕಟ್ಟಿ ಎಳೆದುಕೊಂಡು ಬಂದು ಬಲ್ವಲನ ಎದುರಿಗೆ ನಿಲ್ಲಿಸಿದರು.

೨೮. ಬಲ್ವಲನ ಕ್ರೂರ ಆಳ್ವಿಕೆಗೆ ಸಿಕ್ಕಿದ ಮೇಲೆ ಕೇಳಬೇಕೇ? ಬಲ್ವಲನು ಅವನನ್ನು ಚೆನ್ನಾಗಿ ಬೈದು ಭುಶುಂಡೀವದನ ಎಂಬ ಆಯುಧದಿಂದ ಅವನನ್ನು ವೇಗವಾಗಿ ಹೊಡೆದನು.

೨೯. ಆ ಏಟಿನಿಂದ ಅವನು ಸತ್ತುಹೋದನು. ದೈತ್ಯರೆಲ್ಲೂ ನಡುಗುತ್ತಾ ನಿಂತುಕೊಂಡರು. ಸೈನ್ಯಪಾಲನಿಗೆ ಈ ವಿಷಯ ಮುಟ್ಟಿತು.

೩೦. ತಕ್ಷಣ ರಥದಿಂದ ಕೆಳಗುರುಳಿದನು. ತಲೆಯನ್ನು ಬಡಿದುಕೊಂಡು ಗಟ್ಟಿಯಾಗಿ ಅಳಲು ಪ್ರಾರಂಭಿಸಿದನು. ಮಗನ ದುಃಖವು ಅವನನ್ನು ಅತಿಯಾಗಿ ಪೀಡಿಸಿತು.

೩೧. ಎಲೈ ಪುತ್ರನೇ ವೀರನೇ, ಮುದುಕನಾದ ನನ್ನನ್ನು ಬಿಟ್ಟು ಶತಘ್ನಿಯ ಏಟಿನಿಂದ ರಣಾಂಗಣದಲ್ಲಿ ಪ್ರಾಣಬಿಟ್ಟೆಯಾ? ನನ್ನನ್ನೊಂದು ಸಾರಿಯಾದರೂ ನೋಡದೆ ಸ್ವರ್ಗಕ್ಕೆ ತೆರಳಿದೆಯಾ? ಯುದ್ಧವಿಲ್ಲದೆ ರಾಜನ ಅಪ್ಪಣೆಗೆ ತಲೆಬಾಗಿ ಪ್ರಾಣವನ್ನು ನೀಗಿಕೊಂಡೆಯಾ?

ವಿನಾ ಯುದ್ಧೇನ ಹಾ ಪುತ್ರ ಕ್ವ ಗತೋ ನೃಪಶಾಸನಾತ್ ।
ಇತ್ಯೇವಂ ವಿಲಪನ್ ತತ್ರ ರುರೋದ ರಣಮಂಡಲೇ ॥ ೩೨ ॥

ತತಶ್ಚ ಮಂತ್ರಿಣಾಂ ಪುತ್ರಾಃ ಶೋಚಂತಂ ಪ್ರೋಚುರಗ್ರತಃ ।

॥ ಮಂತ್ರಿಪುತ್ರಾ ಊಚುಃ ॥

ರೋದನಂ ಮಾ ಕುರು ರಣೇ ಶೂರೋಽಸಿ ತ್ವಂ ತು ಪಾಲಕ ॥ ೩೩ ॥

ದುಃಖೇ ಕೃತೇ ಚ ತ್ವತ್ಪಾರ್ಶ್ವೇ ನಾಗಮಿಷ್ಯತಿ ವೈ ಮೃತಃ ।
ಆಜನ್ಮತಶ್ಚ ಜಂತೂನಾಂ ಮೃತ್ಯುರ್ಭವತಿ ಸಾಂಪ್ರತಂ ॥ ೩೪ ॥

ಧೀರಾಸ್ತತ್ರ ನ ಶೋಚಂತಿ ಮೂರ್ಖಾಃ ಶೋಚಂತಿ ನಿತ್ಯಶಃ ।
ಗರ್ಭೇಽಪಿ ಚ ಮೃತಾಃ ಕೇಚಿತ್ ಕೇಚಿದ್ವೈ ಜನ್ಮಮಾತ್ರತಃ ॥ ೩೫ ॥

---

೩೨. ಈ ರೀತಿಯಾಗಿ ಸೈನ್ಯಪಾಲನು ಮಗನ ದುಃಖದಿಂದ ತಪ್ತನಾಗಿ ಅಳುತ್ತಾ ಅಲ್ಲಿಯೇ ಕುಳಿತನು. ಆಗ ಮಂತ್ರಿಗಳ ಮಕ್ಕಳು ಅಲ್ಲಿಗೆ ಬಂದು ದುಃಖಿಸುತ್ತಿರುವ ಸೈನ್ಯಪಾಲನನ್ನು ಕುರಿತು ಇಂತೆಂದರು.

೩೩. ಎಲೈ ರಕ್ಷಕನೇ, ದುಃಖಿಸಬೇಡ. ಇದೇನಿದು, ಶೂರನಾಗಿಯೂ ಹೀಗೆ ರಣರಂಗದಲ್ಲಿ ಕುಳಿತು ದುಃಖಿಸುತ್ತಿರುವೆ? ಅಥವಾ ದುಃಖಮಾಡುವುದರಿಂದ ಸತ್ತವನೇನಾದರೂ ಹಿಂತಿರುಗಿ ಬರುವನೋ?

೩೪. ಹುಟ್ಟಿದ ಪ್ರತಿಯೊಂದು ಪ್ರಾಣಿಗೂ ಸಾವೆಂಬುದು ನಿಶ್ಚಯವು. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಅದನ್ನು ತಿಳಿದ ಧೀರರು ಅದಕ್ಕೋಸ್ಕರ ದುಃಖಪಡುವುದಿಲ್ಲ. ತಿಳಿಯದಿರುವ ಮೂರ್ಖರು ನಿತ್ಯವೂ ದುಃಖಿಸುವರು.

೩೫. ಕೆಲವರು ಗರ್ಭದಲ್ಲೇ ಸಾಯುವರು. ಕೆಲವರು ಹುಟ್ಟಿದಾಕ್ಷಣ ಸಾಯುವರು. ಅಲ್ಲಿಂದಲೂ ಮುನ್ನುಗ್ಗಿ ತಾರುಣ್ಯವನ್ನನುಭವಿಸುವಾಗ ಅನೇಕರು ಸಾಯುವರು. ಯೌವನವನ್ನೂ ಅನುಭವಿಸಿ ಮುದುಕರಾಗಲು ಸಾಯುವುದಂತೂ ನಿಶ್ಚಯ. ಒಬ್ಬರೂ ಉಳಿಯಲಾರರು.

ಬಾಲತ್ವೇ ಯೌವನತ್ವೇ ಚ ವೃದ್ಧತ್ವೇ ಕೇಚಿದೇವ ಹಿ ।
ಕೇಚಿಚ್ಛಸ್ತ್ರೇಣ ರೋಗೇಣ ದುಃಖೇನ ಪತನೇನ ಚ ॥ ೩೬ ॥

ಸರ್ವೇ ಮೃತ್ಯುಂ ಗಮಿಷ್ಯಂತಿ ದೈವಾತ್ಕರ್ಮವಶಾ ನರಾಃ ।
ಕೋ ವಾ ಕಸ್ಯ ಪಿತಾ ಪುತ್ರಃ ಕೋ ವಾ ಕಸ್ಯ ಪ್ರಿಯಾ ಪ್ರಸೂಃ ॥ ೩೭ ॥

ಸಂಯುನಕ್ತಿ ವಿಧಾತಾ ವೈ ವಿಯುನಕ್ತಿ ಚ ಕರ್ಮಣಾ ।
ಸಂಯೋಗೇ ಪರಮಾನಂದಂ ವಿಯೋಗೇ ಪ್ರಾಣಸಂಕಟಂ ॥ ೩೮ ॥

ಶಶ್ವದ್ಭವತಿ ಮೂಢಸ್ಯ ನಾತ್ಮಾರಾಮಸ್ಯ ನಿಶ್ಚಿತಂ ।
ಆತ್ಮಘಾತೀ ಯದಾ ಭೂತ್ವಾ ಪ್ರಾಣಾನ್ ತ್ಯಜತಿ ದುಃಖಿತಃ ॥ ೩೯ ॥

ಪುನರ್ಜನ್ಮ ಚ ನಿರಯಂ ವ್ರಜಿಷ್ಯಸಿ ನ ಸಂಶಯಃ ।
ತಸ್ಮಾದ್ಯದೂತ್ತಮೈಸ್ಸಾರ್ಧಂ ಯುದ್ಧಂ ಕುರು ಮಹಾರಣೇ ॥ ೪೦ ॥

---

೩೬. ಕೆಲವರು ಶಸ್ತ್ರಾದಿಗಳ ಘಾತದಿಂದಲೂ, ಕೆಲವರು ರೋಗದಿಂದಲೂ, ಕೆಲವರು ಬೀಳುವಿಕೆಯಿಂದಲೂ, ಅವರವರ ಕರ್ಮಕ್ಕೆ ಅನುಸಾರವಾಗಿ ಸಾಯುವರು.

೩೭–೩೮. ತಂದೆ ಯಾರು? ಮಕ್ಕಳಾರು? ಪತ್ನಿಯಾರು? ಯಾರು ಯಾರಿಗೂ ಇಲ್ಲವು. ಆದರೆ ಬ್ರಹ್ಮನು ಅವರವರ ಕರ್ಮಗಳಿಗೆ ಅನುಸಾರವಾಗಿ ತಂದೆ, ಮಕ್ಕಳು, ಪತ್ನಿ, ತಾಯಿ, ಎಂಬ ಭ್ರಮೆಯನ್ನು ಹುಟ್ಟಿಸಿ ಒಂದು ಕಡೆ ಕೂಡಿಸುವನು. ಆಗ ಪರಮಾನಂದವಾಗುವುದು. ಕರ್ಮದ ಫಲವನ್ನನುಭವಿಸಿದ ಮೇಲೆ ಪರಸ್ಪರ ಅಗಲಿಸುವನು. ಆಗ ಅತಿಸಂಕಟವಾಗುವುದು.

೩೯. ಇಷ್ಟಾದರೂ ಮೂಢನಾದವನು ಆತ್ಮಜ್ಞಾನದ ಕಡೆಗೆ ಗಮನ ಕೊಡುವುದಿಲ್ಲ. ಆತ್ಮಘಾತಿಯಾದಾಗ ಅತಿದುಃಖದಿಂದ ಪ್ರಾಣಗಳನ್ನು ತೊರೆಯುತ್ತಾನೆ.

೪೦. ಅದರಿಂದ ಪುನರ್ಜನ್ಮವನ್ನೋ ಅಥವಾ ನರಕವನ್ನೋ ಹೊಂದುವನು. ಇದರಲ್ಲಿ ಸಂಶಯವಿಲ್ಲ. ಆದುದರಿಂದ ವೀರನೇ, ಏಳು. ದುಃಖಿಸಬೇಡ. ಯದುವೀರರೊಡನೆ ಯುದ್ಧಮಾಡು.

ಕ್ಷತ್ರಿಯಸ್ಯ ಪರಂ ಶ್ರೇಯೋ ಧರ್ಮಯುದ್ಧಾನ್ನ ವಿದ್ಯತೇ ।
ಧರ್ಮಯುದ್ಧೇನ ಸಂಗ್ರಾಮೇ ಯೇ ಹತಾಃ ಶತ್ರುಸಮ್ಮುಖೇ ॥ ೪೧ ॥

ವ್ರಜಂತಿ ತೇ ವಿಷ್ಣುಪದಂ ಲೋಕಾನ್ಸರ್ವಾನ್ವಿಹಾಯ ಚ ।

॥ ಗರ್ಗ ಉವಾಚ ॥

ಏವಂ ಸಂಬೋಧಿತೋ ದೈತ್ಯೈಃ ಶೋಕಂ ಸರ್ವಂ ವಿಹಾಯ ಚ ॥ ೪೨ ॥

ಸರ್ವಾನ್ವೀರಾನಾಗತಾಂಶ್ಚ ದದರ್ಶ ರೋಷಪೂರಿತಃ ।
ದೃಷ್ಟ್ವಾ ಸರ್ವಾನ್ಸ ಸಂಗ್ರಾಮೇ ಶೀಘ್ರಂ ಪ್ರಾಹ ರುಷಾ ಜ್ವಲನ್ ॥ ೪೩ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ಸೈನ್ಯಪಾಲಸುತವಧೋ
ನಾಮ ದ್ವಾತ್ರಿಂಶೋಽಧ್ಯಾಯಃ

---

೪೧. ಧರ್ಮವನ್ನನುಸರಿಸಿ ಯುದ್ಧಮಾಡಬೇಕು. ಕ್ಷತ್ರಿಯನಿಗೆ ಅದಕ್ಕಿಂತ ಶ್ರೇಯಸ್ಕರವಾದುದು ಮತ್ತೊಂದಿಲ್ಲ. ಈ ಧರ್ಮಯುದ್ಧದಲ್ಲಿ ಒಂದು ವೇಳೆ ಪ್ರಾಣವೇ ಹೋದರೆ ಆ ವೀರನು ಈ ಎಲ್ಲಾ ಲೋಕಗಳನ್ನೂ ಬಿಟ್ಟು ವಿಷ್ಣು ಲೋಕವನ್ನು ಪಡೆಯುವನು.

೪೨–೪೩. ಎಂದು ಹೇಳಲು ಆಗ ಸೈನ್ಯಪಾಲಕನು ಶೋಕವನ್ನು ಬಿಟ್ಟನು. ಎಲ್ಲಾ ವೀರರೂ ಯುದ್ಧಕ್ಕೆ ಸಿದ್ಧರಾಗಿರುವುದನ್ನು ನೋಡಿದನು. ಯುವರಾಜನು ಬರದಿರುವುದನ್ನು ನೋಡಿ ಅತಿಕೋಪಗೊಂಡು ಅವರನ್ನು ಕುರಿತು ಈ ರೀತಿ ಹೇಳಿದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಸೈನ್ಯಪಾಲಕನ ಮಗನ ವಧೆ
ಎಂಬ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ತ್ರಯಸ್ತ್ರಿಂಶೋಽಧ್ಯಾಯಃ

॥ ಸೈನ್ಯಪಾಲ ಉವಾಚ ॥

ಅತ್ರಾಗತಾಶ್ಚ ಸರ್ವೇಽಪಿ ಧನ್ವಿನೋ ಯುದ್ಧದುರ್ಮದಾಃ ।
ಯುವರಾಜೋ ನೃಪಸುತೋ ರಣೇ ಚಾತ್ರ ನ ದೃಶ್ಯತೇ ॥ ೧ ॥

ಸ ಕಿಂ ಕರಿಷ್ಯತಿ ಗೃಹೇ ಮಾರಯಿತ್ವಾ ಚ ಮತ್ಸುತಂ ।
ಸ ಭುಶುಂಡೀಮುಖೇನಾಪಿ ತನ್ಮಾರ್ಗಂ ಕಿಂ ನ ಯಾಸ್ಯತಿ ॥ ೨ ॥

ಇತ್ಯುಕ್ತ್ವಾ ರೋಷತಾಮ್ರಾಕ್ಷೋ ಗೃಹೀತುಂ ನೃಪನಂದನಂ ।
ಜಗಾಮ ನಗರೀಂ ಶೀಘ್ರಂ ಸೈನ್ಯಪಾಲಃ ಪ್ರಹರ್ಷಿತಃ ॥ ೩ ॥

ಮೂವತ್ತಮೂರನೆಯ ಅಧ್ಯಾಯವು

೧–೨. ಸೈನ್ಯಪಾಲನು ಹೇಳಿದನು :—ಯುದ್ಧೋತ್ಸಾಹಿಗಳಾದ ವೀರರೆಲ್ಲರೂ ಬಂದಿರುವುದೇನೋ ಸರಿ. ಆದರೆ ರಾಜನ ಮಗನಾದ ಯುವರಾಜನೇಕೆ ಬಂದಿಲ್ಲ? ಇಲ್ಲೆಲ್ಲೂ ಕಾಣಿಸುತ್ತಿಲ್ಲ. ಮನೆಯಲ್ಲಿ ಕುಳಿತೇನುಮಾಡುತ್ತಿರುವನು? ಸ್ವಲ್ಪ ತಡವಾದ ನನ್ನ ಮಗನನ್ನು ಭುಶುಂಡೀಮುಖದಿಂದ ಹೊಡೆದು ಸಾಯಿಸಬಹುದು. ಇಷ್ಟು ಹೊತ್ತಾದರೂ ಬರದಿರುವ ಆ ರಾಜಕುಮಾರನ್ನೇಕೆ ಸಾಯಿಸಬಾರದು ?

೩. ಹೀಗೆಂದು ಹೇಳುತ್ತಾ ಅತಿ ಕೋಪದಿಂದ ಕಣ್ಣುಗಳನ್ನು ಕೆರಳಿಸುತ್ತಾ ಅಲ್ಲಿಂದ ಹೊರಟನು. ಅವನ ಕಣ್ಣುಗಳು ಕೆಂಪಾಗಿದ್ದವು. ರಾಜಪುತ್ರನನ್ನು ಹಿಡಿದು ತರಬೇಕೆಂಬ ಆಕಾಂಕ್ಷೆ ಬಲವಾಗಿತ್ತು. ಅದಕ್ಕೋಸ್ಕರ ಜಾಗ್ರತೆಯಾಗಿ ಪಟ್ಟಣದೊಳಕ್ಕೆ ನುಗ್ಗಿದನು.

ಸ ರಾಜಪುತ್ರೋ ಮದಿರಂ ಪೀತ್ವಾ ವೈ ಭೋಜನಾಂತರೇ |
ಚಕಾರ ಶಯನಂ ರಾತ್ರೌ ವಿಸ್ಮೃತೋ ಮದವಿಹ್ವಲಃ || ೪ ||

ತತ್ಪತ್ನೀ ಬೋಧಯಾಮಾಸ ಭರ್ತಾರಂ ನೃಪನಂದನಂ |
ಶ್ರುತ್ವಾ ಪಟಹನಿರ್ಘೋಷಂ ರುದತೀ ಭಯವಿಹ್ವಲಾ || ೫ ||

ಉತ್ತಿಷ್ಠೋತ್ತಿಷ್ಠ ಹೇ ವೀರ ಪ್ರಾತಃಕಾಲೋ ಬಭೂವ ಹ |
ತ್ವತ್ಪಿತುಃ ಶಾಸನಂ ಪುರ್ಯಾಂ ಭೇರೀಘೋಷೇಣ ಶ್ರೂಯತೇ || ೬ ||

ಯೇ ನ ಯಾಸ್ಯಂತಿ ಯುದ್ಧಾರ್ಥಂ ತೇ ವಧಾರ್ಹಾಃ ಸುತಾದಯಃ |
ತಸ್ಮಾತ್ಪ್ರಯಾಹಿ ಶೀಘ್ರಂ ತ್ವಂ ಗತ್ವಾ ತಾತಂ ವಿಲೋಕಯ || ೭ ||

ಪ್ರಿಯಯಾ ಬೋಧಿತಸ್ಸೋಽಪಿ ಚೈತನ್ಯೋ ನ ಬಭೂವ ಹ |
ಪುನಸ್ಸಾ ಬೋಧಯಾಮಾಸ ಸಸೈನ್ಯೇ ಬಲ್ವಲೇ ಗತೇ || ೮ ||

---

೪. ಹಿಂದಿನ ರಾತ್ರೆ ಆ ರಾಜಕುಮಾರನು ಊಟಮಾಡುವಾಗ ಚನ್ನಾಗಿ ಮದ್ಯವನ್ನು ಕುಡಿದು ಮತ್ತನಾಗಿ ಮಲಗಿಬಿಟ್ಟಿದ್ದನು. ಬಾಹ್ಯದ ಜ್ಞಾನವಿಲ್ಲದಷ್ಟು ಅಮಲು ಏರಿದ್ದಿತು.

೫. ಬೆಳಗಾಯಿತು. ಯುದ್ಧಘೋಷಣೆಯನ್ನು ಸಾರುತ್ತಿರುವುದು ರಾಜಕುಮಾರನ ಹೆಂಡತಿಯ ಕಿವಿಗೆ ಬಿದ್ದಿತು. ಅವಳು ಹೆದರಿದಳು. ಗಂಡನನ್ನು ಬಿಟ್ಟಿರಬೇಕೆಂಬ ದುಃಖದಿಂದ ಅಳುತ್ತಾ ರಾಜಪುತ್ರನನ್ನು ಎಬ್ಬಿಸಿದಳು.

೬-೭. ಎಲೈ ವೀರನೇ, ಏಳೇಳು. ಪ್ರಾತಃಕಾಲವಾಯಿತು. ನಿನ್ನ ತಂದೆಯ ಕ್ರೂರಾಜ್ಞೆಯನ್ನು ಸಾರುತ್ತಿರುವರು. 'ಯಾರು ಯುದ್ಧಕ್ಕೆ ಹೋಗುವುದಿಲ್ಲವೋ ಅವರು ವಧಾರ್ಹರೆಂದು' ಹೇಳುತ್ತಿರುವರು. ಆದ್ದರಿಂದ ನಡೆ. ಯುದ್ಧಮಾಡು. ಜಾಗ್ರತೆಯಾಗಿ ಹೊರಡು. ತಂದೆಯನ್ನೊಮ್ಮೆ ದರ್ಶನಮಾಡು.

೮. ಎಂದು ಎಷ್ಟು ಹೇಳಿದರೂ ಅವನಿಗೆ ಎಚ್ಚರವೇ ಆಗಲಿಲ್ಲ. ಸೈನ್ಯದೊಡನೆ ಬಲ್ವಲನು ಯುದ್ಧಕ್ಕೆ ಹೋಗುತ್ತಿರುವುದನ್ನು ನೋಡಿದಳು. ಪುನಃ ಪತಿಯನ್ನು ಎಚ್ಚರಗೊಳಿಸಿದಳು.

ತತಸ್ಸ ನಿದ್ರಾಂ ಚ ವಿಹಾಯ ಚೋತ್ಥಿತಃ
ಸದ್ಯೋ ಗೃಹೀತ್ವಾ ಸಶರಂ ಧನುಃ ಕಿಲ।
ಶಿವಂ ಗಣೇಶಂ ಮನಸಾ ಚ ಸಂಸ್ಮರನ್
ಜಗಾಮ ಯುದ್ಧಾಯ ರಥೇನ ಭೂಪಜಃ ॥ ೯ ॥

ತಮಾಗತಂ ವೀಕ್ಷ್ಯ ನೃಪಸ್ಯ ನಂದನಂ
ಉವಾಚ ರೋಷೇಣ ತು ಸೈನ್ಯಪಾಲಕಃ।
ಕಥಂ ತ್ವಯಾ ದೈತ್ಯವರಸ್ಯ ಶಾಸನಂ
ವಿಲೋಪಿತಂ ಕೇನ ಬಲೇನ ಮಾಂ ವದ ॥ ೧೦ ॥

ಮತ್ಸುತಸ್ತ್ವಾದೃಶೋ ಭೂತ್ವಾ ಶೀಘ್ರಂ ನಾಗತವಾನ್ ಮೃಧೇ।
ಸ ಮಾರಿತೋ ಬಲ್ವಲೇನ ಶತಘ್ನೀಪ್ರಮುಖೇನ ಚ ॥ ೧೧ ॥

ತಸ್ಮಾದ್ಗಚ್ಛ ಪಿತುಃ ಪಾರ್ಶ್ವಂ ಸತ್ಯವಾದೀ ಪಿತಾ ತವ।
ಮಾರಯಿಷ್ಯತಿ ಶೀಘ್ರಂ ವೈ ನೇತುಂ ತ್ವಾಂ ಪ್ರೇಷಿತೋಽಸ್ಮ್ಯಹಂ ॥ ೧೨ ॥

---

೯. ಆಗ ಅವನಿಗೆ ಎಚ್ಚರವಾಯಿತು. ಮೇಲಕ್ಕೆದ್ದನು. ಧನುರ್ಬಾಣಗಳನ್ನು ಧರಿಸಿ ಶಿವ, ಗಣೇಶ ಮುಂತಾದ ದೇವತೆಗಳಿಗೆ ಮನಸ್ಸಿನಿಂದ ನಮಸ್ಕರಿಸಿ ರಥದಲ್ಲಿ ಕುಳಿತು ಹೊರಟನು.

೧೦. ಆ ಸಮಯಕ್ಕೆ ಸರಿಯಾಗಿ ಸೈನ್ಯಪಾಲನು ನಗರಿಯೊಳಕ್ಕೆ ಬಂದಿದ್ದನು. ರಥದಲ್ಲಿ ಕುಳಿತು ಬರುತ್ತಿರುವ ಯುವರಾಜನನ್ನು ನೋಡಿ ಅತಿ ಕೋಪಗೊಂಡು ಅವನನ್ನು ಕುರಿತು. ಎಲೈ, ಬಲ್ವಲರಾಜನ ಆಜ್ಞೆಯನ್ನು ಯಾವ ಧೈರ್ಯದ ಮೇಲೆ ಇದುವರೆವಿಗೂ ನಡೆಸಲಿಲ್ಲ?

೧೧-೧೨. ನಿನ್ನಂತೆಯೇ ನನ್ನ ಮಗನೂ ಯುದ್ಧಕ್ಕೆ ಬರಲು ತಡಮಾಡಿದನು. ಅದಕ್ಕೆ ಸಿಟ್ಟಿನಿಂದ ರಾಜನು ಶತಘ್ನಿ ಎಂಬ ಆಯುಧದಿಂದ ಅವನನ್ನು ಕೊಂದನು. ನೀನೂ ನಿನ್ನ ತಂದೆಯ ಹತ್ತಿರಕ್ಕೆ ನಡೆ. ನಿನ್ನನ್ನು ಕರೆದುಕೊಂಡು ಹೋಗಲು ನಾನು ಬಂದಿರುವೆನು. ನಿಮ್ಮ ತಂದೆ ಸತ್ಯವಾದಿಯು. ನನ್ನ ಮಗನಂತೆಯೇ ನಿನ್ನನ್ನೂ ಕೊಲ್ಲುವನು.

ವಚಸ್ತೀಕ್ಷ್ಣಂ ಸಮಾಕರ್ಣ್ಯ ಭಯಾಚ್ಛುಷ್ಕಮುಖಸ್ತು ಸಃ।
ಪಿತುಃ ಪಾರ್ಶ್ವಂ ಯಯೌ ತೇನ ಸುಧನ್ವಾ ದುಃಖಿತೋ ಯಥಾ ॥ ೧೩ ॥

ದದರ್ಶ ಪಿತರಂ ಗತ್ವಾ ದೈತ್ಯವೃಂದೈಃ ಪರೀವೃತಂ।
ರಥಸ್ಥಂ ಕುಪಿತಂ ತತ್ರ ಹ್ಯನಿರುದ್ಧಜಯೋತ್ಸುಕಂ ॥ ೧೪ ॥

ದೃಷ್ಟ್ವಾ ತಾತಂ ನಮಸ್ಕೃತ್ಯ ವ್ರೀಡಿತೋ ಭಯವಿಹ್ವಲಃ।
ಅಧೋಮುಖಸ್ತತೋ ಭೂಮೌ ದಾನವೇಂದ್ರಸ್ಯ ಪಶ್ಯತಃ ॥ ೧೫ ॥

ಬಲ್ವಲಃ ಕುಪಿತಃ ಪ್ರಾಹ ದಂತಾನ್ದಂತೈರ್ವಿನಿಷ್ಪಿಷನ್।
ಆಜ್ಞಾಭಂಗಸ್ತ್ವಯಾ ಕೇನ ಕೃತಸ್ತ್ವಾತ್ಮವಿಘಾತಿನೇ ॥ ೧೬ ॥

---

೧೩. ಈ ರೀತಿ ತೀಕ್ಷ್ಣವಾದ ಮಾತುಗಳನ್ನು ಕೇಳಿ ರಾಜಕುಮಾರನು ಭಯಗೊಂಡನು. ಮುಖವೆಲ್ಲವೂ ಒಣಗಿತು. ಸುಧನ್ವನು ದುಃಖದಿಂದ ತನ್ನ ತಂದೆಯ ಹತ್ತಿರಕ್ಕೆ ಹೋದಂತೆ ರಾಜಕುಮಾರನು ಬಲ್ವಲನ ಸಮೀಪಕ್ಕೆ ಹೋದನು.

೧೪. ಮುಂದೆ ತೆರಳಿದನು. ಯುದ್ಧರಂಗವು ಸಮೀಪಿಸಿತು. ಅಲ್ಲಿ ಬಲ್ವಲನು ದೈತ್ಯರೊಡಗೂಡಿ ಅನಿರುದ್ಧನನ್ನು ಜಯಿಸಬೇಕೆಂಬ ಆಕಾಂಕ್ಷೆಯಿಂದ ಸಿದ್ಧನಾಗಿ ರಥದಲ್ಲಿ ಕುಳಿತಿರುವುದನ್ನು ನೋಡಿದನು.

೧೫. ತಂದೆಯ ಹತ್ತಿರಕ್ಕೆ ಹೋಗಿ ಅವನಿಗೆ ನಮಸ್ಕರಿಸಿದನು. ಕೋಪಗೊಂಡಿರುವ ಅವನನ್ನು ನೋಡಿ ಹೆದರಿದನು. ತಾನು ಹೊತ್ತಾಗಿ ಬಂದುದರಿಂದ ನಾಚಿಕೆಯೂ ಆಯಿತು. ಕತ್ತನ್ನು ತಗ್ಗಿಸಿಕೊಂಡು ನಿಂತನು.

೧೬. ಬಲ್ವಲನು ಸಿಟ್ಟುಗೊಂಡು ಹಲ್ಲನ್ನು ಕಡಿಯುತ್ತಾ ಎಲೈ ಆತ್ಮವಿಘಾತಿ, ನೀನು ಯಾವ ಧೈರ್ಯದ ಮೇಲೆ? ನನ್ನಾಜ್ಞೆಯನ್ನುಲ್ಲಂಘಿಸಿರುವೆ.

ತಸ್ಮಾದ್ವಿಭೀತಂ ಕಿಲ ಯುದ್ಧಮಂಡಲಾತ್
ಗೃಹೇ ಗತಂ ಪ್ರಾಣಪರೀಪ್ಸಯಾ ಸುತಂ ।
ಕುನಂದನಂ ಶತ್ರುಸಮಂ ಮಲೀಮಸಂ
ಹಿತ್ವಾ ಶತಘ್ನೀವದನೇನ ಹನ್ಮ್ಯಹಂ ॥ ೧೭ ॥

ಇತ್ಯುಕ್ತ್ವಾ ಸ್ವಸುತಂ ವೀರೋ ದುಃಖಾದಶ್ರುಪರಿಪ್ಲುತಃ ।
ಖಿನ್ನಃ ಪ್ರತ್ಯಾಹ ಮನಸಿ ಪ್ರತಿಜ್ಞಾ ಕಿಂ ಕೃತಾ ಮಯಾ ॥ ೧೮ ॥

ಅಹೋ ವಿನಾಪರಾಧೇನ ಸೈನ್ಯಪಾಲಸುತೋ ಹತಃ ।
ತೇನ ಪಾಪೇನ ಮತ್ಪುತ್ರೋ ಮರಿಷ್ಯತಿ ನ ಸಂಶಯಃ ॥ ೧೯ ॥

ಮೋಚಯಿಷ್ಯೇ ಯದಿ ಸುತಂ ವೀರಂ ಮೃತ್ಯುಮುಖಾದ್ಬಲಾತ್ ।
ತದಾ ಮತ್ಸೈನಿಕಾಸ್ಸರ್ವೇ ಮಾಂ ಶಪಂತಿ ಹಸಂತಿ ಚ ॥ ೨೦ ॥

---

೧೭. ನೀನು ಹೆದರಿಕೆಯಿಂದ ಯುದ್ಧರಂಗಕ್ಕೆ ಬಾರದೆ ಪ್ರಾಣವುಳಿಸಿ ಕೊಳ್ಳಲು ಮನೆಯಲ್ಲಿಯೇ ನಿಂತೆ. ಇಂತಹ ಪುತ್ರನು ಪುತ್ರನೇ ಅಲ್ಲವು. ಅವನು ದುಷ್ಪುತ್ರನು. ಪಾಪಿಯು. ಆದುದರಿಂದ ನಿನ್ನನ್ನು ಶತಘ್ನಿಯಿಂದ ಕೊಂದು ಹಾಕುವೆನು. ನೀನು ನನಗೆ ಶತ್ರುಸಮನು. ನಿನ್ನನ್ನುಳಿಸಬಾರದು.

೧೮. ಹೀಗೆಂದು ಹೇಳಿದನು. ಆದರೆ ಮಗನನ್ನು ಕೊಂದುಹಾಕಬೇಕೆಂಬ ದುಃಖವು ಅವನನ್ನು ಅತಿಯಾಗಿ ಪೀಡಿಸಿತು. ಕಣ್ಣುಗಳಲ್ಲಿ ನೀರೂರಿತು. ಖಿನ್ನನಾಗಿ ಮನಸ್ಸಿನಲ್ಲಿ ಈ ರೀತಿ ಅಂದುಕೊಂಡನು.

೧೯. ಇದೇನೀರೀತಿ ನಾನು ಅಪ್ಪಣೆಮಾಡಿರುವೆನು. ಬಹಳ ಅನ್ಯಾಯವು. ಸೈನ್ಯಪಾಲನ ಮಗನನ್ನು ಇದಕ್ಕೋಸ್ಕರ ಅಪರಾಧವಿಲ್ಲದಿದ್ದರೂ ಕೊಂದಿರುವೆನು. ಅದಕ್ಕೀಗ ಪ್ರಾಯಶ್ಚಿತ್ತವಾಗಿ ನನ್ನ ಮಗನೂ ಸಾಯಲೇ ಬೇಕಾಗಿದೆ. ಇದರಲ್ಲೇನು ಸಂಶಯ ?

೨೦. ಒಂದು ವೇಳೆ ಈಗ ನನ್ನ ಮಗನನ್ನು ಅಭಿಮಾನದಿಂದ, ಕೊಲ್ಲದೆ ಬಿಟ್ಟುಬಿಟ್ಟರೆ ಆಗ ನನ್ನ ಸೈನಿಕರು ಸುಮ್ಮನಿರುವರೇ? ಅವರೆಲ್ಲರೂ ನನ್ನನ್ನು ಬೈಯುವರು. ಇದೇನೀ ಕಾರುಬಾರು ಎಂದು ಅಪಹಾಸ್ಯಮಾಡುವರು.

ಶೋಚಂತಮಿತ್ಥಂ ನೃಪತಿಂ ಚ ದುಃಖಿತಂ
ಸ್ವಪುತ್ರಶೋಕೇನ ತು ಖಿನ್ನಮಾನಸಂ।
ವಿಲೋಕ್ಯ ರೋಷೇಣ ಹಸನ್ನಮರ್ಷಿತೋ
ಹ್ಯುವಾಚ ವಾಕ್ಯಂ ಕಿಲ ಸೈನ್ಯಪಾಲಕಃ　　|| ೨೧ ||

|| ಸೈನ್ಯಪಾಲ ಉವಾಚ ||

ಏನಂ ಮಾರಯ ಶೀಘ್ರಂ ತ್ವಂ ಸ್ವಪುತ್ರಂ ಚ ಕುನಂದನಂ।
ಪಶ್ಚಾದ್ಭವತಿ ಸಂಗ್ರಾಮೋ ಯಾದವಾನಾಂ ಚ ದಾನವೈಃ　　|| ೨೨ ||

ತ್ವಂ ಸತ್ಯವಾದೀ ದೈತ್ಯೇಂದ್ರ ಇದಂ ಕರ್ಮ ಚ ದಾರುಣಂ।
ನ ಕರಿಷ್ಯಸಿ ದುಃಖೇನ ನಿರಯಸ್ತೇ ಭವಿಷ್ಯತಿ　　|| ೨೩ ||

---

೨೧. ಈ ರೀತಿಯಾಗಿ ಬಲ್ವಲನು ದುಃಖಪಡುತ್ತಿದ್ದನು. ಮಗನ ವಿಷಯದಲ್ಲಿ ಯಾವುದನ್ನು ಮಾಡಲು ಮನಸ್ಸಿಲ್ಲದವನಾಗಿ ಒದ್ದಾಡುತ್ತಿದ್ದನು. ಇದನ್ನು ನೋಡಿ ಸೈನ್ಯಪಾಲಕನು ವಿಕಟವಾಗಿ ನಕ್ಕನು. ಅತಿ ಕೋಪದಿಂದ ಬಲ್ವಲನನ್ನು ಕುರಿತಿಂತೆಂದನು.

೨೨. ರಾಜನೇ, ಮೊದಲು ನಿನ್ನ ಪುತ್ರನನ್ನು ಕೊಲ್ಲು. ನಿನ್ನಾಜ್ಞೆಯನ್ನವನು ಉಲ್ಲಂಘಿಸಿರುವನು. ದುಷ್ಪುತ್ರನು. ಅನಂತರ ಯಾದವರೊಡನೆ ಯುದ್ಧ ಮಾಡೋಣ.

೨೩. ನೀನು ಸತ್ಯವಾದಿ. ದಾನವರಿಗೆ ರಾಜನು. ನಿನ್ನಾಜ್ಞೆಯು ಎಲ್ಲರಿಗೂ ಒಂದೇ ರೀತಿಯಾದುದು. ಇವನು ನಿನ್ನ ಮಗನಾಗಿರಬಹುದು. ಅವನನ್ನು ಕೊಲ್ಲುವುದರಿಂದ ನಿನಗೆ ದುಃಖ ಉಂಟಾಗಬಹುದು. ಆದರೆ ನಿನ್ನಾಜ್ಞೆ ನೀನು ಮಾಡಿದುದು ತಾನೇ ನೀನು ದಾರುಣ ಕೆಲಸವೆಂದು ಬಿಟ್ಟುಬಿಟ್ಟರೆ ನಿನಗೆ ನರಕವಂತೂ ತಪ್ಪಿದ್ದಲ್ಲ.

ಸತ್ಯಾದ್ರಾಮಸಮಂ ಪುತ್ರಂ ತತ್ಯಾಜ ಕೋಸಲೇಶ್ವರಃ ।
ಹರಿಶ್ಚಂದ್ರಃ ಪ್ರಿಯಾಂ ಪುತ್ರಂ ಸ್ವಾತ್ಮಾನಂ ಚೈವ ಭೂಪತೇ ॥ ೨೪ ॥

ಬಲಿಶ್ಚೈವ ಮಹೀಂ ಸರ್ವಾಂ ಜೀವನಂ ಚ ವಿರೋಚನಃ ।
ಅಕೀರ್ತಿಂ ಚ ಶಿಬೀ ಚೈವ ದಧೀಚಃ ಸ್ವತನುಂ ಯಥಾ ॥ ೨೫ ॥

ಪೃಷಧ್ರಂ ತು ಗುರುಶ್ಚೈವ ರಂತಿದೇವಶ್ಚ ಭೋಜನಂ ।
ಆಜ್ಞಾಭಂಗಕರಂ ಪುತ್ರಂ ತಥಾ ಮಾರಯ ತ್ವಂ ನೃಪ ॥ ೨೬ ॥

ತ್ವಯಾ ಪೂರ್ವಂ ಚ ಯತ್ಪ್ರೋಕ್ತಂ ಸ್ವಪುತ್ರಮಪಿ ಭ್ರಾತರಂ ।
ಆಜ್ಞಾಭಂಗಕರಂ ಹನ್ಮಿ ಶೀಘ್ರಮನ್ಯಸ್ಯ ಕಾ ಕಥಾ ॥ ೨೭ ॥

---

೨೪. ಸತ್ಯವನ್ನು ತಪ್ಪಲಾರದೆ ಕೋಸಲೇಶ್ವರನಾದ ದಶರಥನು ರಾಮನಂತಹ ಮಗನನ್ನೂ ಕಾಡಿಗಟ್ಟಿದನು. ಸತ್ಯಸಂಧ ಹರಿಶ್ಚಂದ್ರನು ಸತ್ಯಕ್ಕೋಸ್ಕರವಾಗಿ ಹೆಂಡತಿಯನ್ನೂ, ಮಗನನ್ನೂ ಬೇರೆಯವರಿಗೆ ಕೊಟ್ಟನು. ಅಷ್ಟೇಕೆ ತನ್ನನ್ನು ತಾನೇ ಮಾರಿಕೊಂಡುಬಿಟ್ಟನು.

೨೫-೨೬. ಬಲಿಚಕ್ರವರ್ತಿಯು ಕೊಟ್ಟ ಮಾತಿನಂತೆ ಪೃಥ್ವಿಯನ್ನೆಲ್ಲಾ ದಾನ ಮಾಡಿದನು. ವಿರೋಚನನು ಜೀವವನ್ನೇ ಕೊಟ್ಟನು. ಶಿಬಿಯು ಅಪಯಶಸ್ಸನ್ನು ಹೊಂದಿದನು. ದಧೀಚ ಋಷಿಯು ತನ್ನ ಶರೀರವನ್ನೇ ಅರ್ಪಿಸಿದನು. ಗುರುವು ಪೃಷಧ್ರನನ್ನೂ, ರಂತಿದೇವನು ತನ್ನ ಪಾಲಿನ ಭೋಜನವನ್ನೂ ಕೊಟ್ಟ ಮಹನೀಯರು. ಆದುದರಿಂದ ನೀನು ಹೆದರದೆ ಆಜ್ಞೆಯನ್ನು ಪರಿಪಾಲಿಸು. ನಿನ್ನ ಮಗನನ್ನು ಕೊಲ್ಲು. ನಿನ್ನಾಜ್ಞೆಯನ್ನವನು ಉಲ್ಲಂಘಿಸಿದ್ದಾನೆ.

೨೭. ಅಲ್ಲದೆ ನಿನ್ನಾಜ್ಞೆಯೇ ಹೀಗಿದೆ. ಮಗನಾಗಲೀ, ಸಹೋದರರಾಗಲೀ ಯುದ್ಧಕ್ಕೆ ಬಾರದಿದ್ದರೆ ಕೊಲ್ಲುವೆನು. ಇನ್ನುಳಿದವರ ಪಾಡೇನು ಎಂದು. ಆದ್ದರಿಂದ ನಿನ್ನ ಮಾತನ್ನುಳಿಸಿಕೋ.

ತಸ್ಮಿನ್ದೇಶೇ ಚ ವಸ್ತವ್ಯಂ ಯಸ್ಮಿನ್ಭೂಪಶ್ಚ ಸತ್ಯವಾಕ್ ।
ತಸ್ಮಿನ್ದೇಶೇ ನ ವಸ್ತವ್ಯಂ ಯಸ್ಮಿನ್ಭೂಪೋಽಪ್ಯಸತ್ಯವಾಕ್ ॥ ೨೮ ॥

॥ ಗರ್ಗ ಉವಾಚ ॥

ಇತಿ ತದ್ವಾಕ್ಯಮಾಕರ್ಣ್ಯ ಬಲ್ವಲಃ ಖಿನ್ನಮಾನಸಃ ।
ಮರಣಾರ್ಥಂ ತು ತಸ್ಯಾಪಿ ತಸ್ಮೈ ಚಾಜ್ಞಾಂ ಚಕಾರ ಹ ॥ ೨೯ ॥

ತತೋ ಜಗಾಮ ದುಃಖಾಢ್ಯೋ ಯದೂನಾಂ ಸಮ್ಮುಖೇ ತು ಸಃ ।
ಸೈನ್ಯಪಾಲಸ್ತು ತಸ್ಯಾಜ್ಞಾಂ ತತ್ಪುತ್ರಾಗ್ರೇ ನಿವೇದಯತ್ ॥ ೩೦ ॥

ಶ್ರುತ್ವಾ ಪ್ರತ್ಯಾಹ ವಚನಂ ಶೀಘ್ರಂ ತಸ್ಮೈ ಕುನಂದನಃ ।
ಕರ್ತವ್ಯಾ ಚ ನೃಪಸ್ಯಾಜ್ಞಾ ತ್ವಯಾ ಪರವಶೇನ ವೈ ॥ ೩೧ ॥

---

೨೮. ಸತ್ಯಸಂಧನಾದ ರಾಜನು ವಾಸಿಸುವ ದೇಶದಲ್ಲಿಯೇ ವಾಸಿಸುವುದರಿಂದ ಒಳ್ಳೆಯದಾಗುವುದು. ಸತ್ಯವಾಕ್ಯವನ್ನು ತಪ್ಪಿ ನಡೆಯುವ ರಾಜನ ದೇಶದಲ್ಲಿ ವಾಸಮಾಡಬಾರದು.

೨೯. ಎಂದು ಹೇಳಿದುದನ್ನು ಕೇಳಿ ಬಲ್ವಲನ ಮನಸ್ಸಿಗೆ ತುಂಬಾ ದುಃಖವಾಯಿತು. ನಿರುಪಾಯನಾಗಿ ಮಗನ ವಧೆಮಾಡಲು ಅಪ್ಪಣೆ ಕೊಟ್ಟನು.

೩೦. ಅತಿದುಃಖಗೊಂಡು ಅಲ್ಲಿ ನಿಲ್ಲಲಾರದೆ ಬಲ್ವಲನು ಯದುಸೈನ್ಯಕ್ಕೆದುರಾಗಿ ಹೋದನು. ಸೈನ್ಯಪಾಲನು ಬಲ್ವಲನ ಆಜ್ಞೆಯನ್ನು ರಾಜಕುಮಾರನಿಗೆ ತಿಳಿಸಿದನು.

೩೧. ಅದನ್ನು ಕೇಳಿ ರಾಜಕುಮಾರನು ಸೈನ್ಯಪಾಲನನ್ನು ಕುರಿತು "ಎಲೈ ರಾಜಾಜ್ಞೆಯನ್ನು ನೆರವೇರಿಸು ! ಅದರಂತೆ ನಡೆಯುವುದು ನಿನ್ನ ಕರ್ತವ್ಯವು. ಹಿಂದೆ ಪರಶುರಾಮನು ತಂದೆಯ ಆಜ್ಞೆಯಂತೆ ತಾಯಿಯ ಶಿರಸ್ಸನ್ನು ಕತ್ತರಿಸಲಿಲ್ಲವೇ ?

ರಾಮೇಣ ತು ಹೃತಂ ಶೀರ್ಷಂ ಸ್ವಮಾತುಃ ಪಿತುರಾಜ್ಞಯಾ ।
ಸೈನ್ಯಪಾಲಪ್ರತೀತೋಽಹಂ ಕೃತಾ ಧರ್ಮಕ್ರಿಯಾ ಮಯಾ ॥ ೩೨ ॥

ಮರಣಾನ್ನ ಭಯಂ ಮಹ್ಯಂ ಶತಘ್ನ್ಯಾಂ ಚ ನಿವೇಶಯ ।
ಇತ್ಯುಕ್ತ್ವಾ ರಾಜಪುತ್ರಸ್ತು ಸ್ವಕಿರೀಟಂ ತಥಾ ಗದಾಂ ॥ ೩೩ ॥

ಮುಕ್ತಾಹಾರಂ ಸ್ವರ್ಣಹಾರಂ ಕುಂಡಲೇ ಕಟಕಾನಿ ಚ ।
ಬ್ರಾಹ್ಮಣೇಭ್ಯೋ ದದೌ ಸರ್ವಂ ತೇ ದುಃಖಾದಾಶಿಷಂ ದದುಃ ॥ ೩೪ ॥

ತತಃ ಸ್ನಾತ್ವಾ ಸ ತೀರ್ಥಸ್ಯ ಲೇಪಯಿತ್ವಾ ಚ ಮೃತ್ತಿಕಾಂ ।
ತುಳಸೀಪಲ್ಲವಂ ಮಾಲಾಂ ಮುಖೇ ಕಂಠೇ ನಿಧಾಯ ಚ ॥ ೩೫ ॥

ಬ್ರುವಂಛ್ರೀಕೃಷ್ಣ ರಾಮೇತಿ ಚಕಾರ ಸ್ಮರಣಂ ಹರೇಃ ।
ಸೈನ್ಯಪಾಲಸ್ತು ತಂ ಶೀಘ್ರಂ ಗೃಹೀತ್ವಾ ಭುಜಯೋರ್ಬಲಾತ್ ॥ ೩೬ ॥

ಕಾರಯಾಮಾಸ ರಾಜೇಂದ್ರ ಶತಘ್ನೀವೇದನೇ ರುಷಾ ।
ಹಾಹಾಕಾರಸ್ತದೈವಾಸೀತ್ಸೈನಿಕಾ ರುರುದುರ್ಭೃಶಂ ॥ ೩೭ ॥

೩೨-೩೩. ನಾನು ನನ್ನ ಧರ್ಮವನ್ನನುಸರಿಸಿ ಕೆಲಸಮಾಡಿರುವೆನು. ಇಷ್ಟರ ಮೇಲೂ ಆಜ್ಞಾಭಂಗವೆಂದು ನನಗೆ ಮರಣವೊದಗಿದರೆ ನನಗೇನೂ ಹೆದರಿಕೆಯಿಲ್ಲ. ಶತಘ್ನಿಯಿಂದ (ಫಿರಂಗಿ) ನನ್ನನ್ನು ಹೊಡೆದುಬಿಡು. ಎಂದು ಹೇಳಿದನು.

೩೪. ಅನಂತರ ತನ್ನ ಕಿರೀಟ, ಗದೆ, ಮುತ್ತಿನ, ಚಿನ್ನದ ಹಾರಗಳು, ಕರ್ಣಕುಂಡಲಗಳು, ಕೈಬಳೆಗಳು ಇವುಗಳನ್ನೆಲ್ಲಾ ತೆಗೆದು ಬ್ರಾಹ್ಮಣರಿಗೆ ದಾನ ಮಾಡಿದನು. ಅವರೆಲ್ಲರೂ ದುಃಖದಿಂದಲೇ ಆಶೀರ್ವಾದಮಾಡಿದರು.

೩೫. ಬಳಿಕ ಸ್ನಾನಮಾಡಿ ತುಲಸಿಯ ಮೃತ್ತಿಗೆಯನ್ನು ಮೈಗೆಲ್ಲಾ ಲೇಪಿಸಿ ಕೊಂಡನು. ತುಲಸಿಯ ಮಾಲೆಯನ್ನು ಕತ್ತಿನಲ್ಲಿ ಧರಿಸಿ 'ರಾಮ-ಕೃಷ್ಣ' ಎಂದು ಹರಿನಾಮವನ್ನು ಕ್ಷಣಕಾಲ ಜಪಿಸಿದನು.

೩೬-೩೭. ಸೈನ್ಯಪಾಲನು ಬಂದು ಅವನೆರಡು ಭುಜಗಳನ್ನೂ ಹಿಡಿದು ಜಾಗ್ರತೆಯಾಗಿ ಕರತಂದು ಶತಘ್ನಿಯ ಎದುರಿಗೆ ನಿಲ್ಲಿಸಿದನು. ಸೈನಿಕರೆಲ್ಲರೂ ಹಾಹಾಕಾರಮಾಡುತ್ತಾ ಗಟ್ಟಿಯಾಗಿ ಅತ್ತರು. ಬಲ್ವಲನೂ ಅತ್ತನು. ಬ್ರಾಹ್ಮಣ ರೆಲ್ಲರೂ ಅತ್ತರು.

ಪುರೋದ ಬಲ್ವಲಸ್ತತ್ರ ರುರುದುಸ್ತೇ ದ್ವಿಜಾತಯಃ ।
ದೃಷ್ಟ್ವಾ ಶತಘ್ನೀಂ ತತ್ರಾಪಿ ಪ್ರತಪ್ತಾಂ ಮದಪೂರಿತಾಂ ॥ ೩೮ ॥

ತಾಮ್ರಗೋಲಕಸಂಯುಕ್ತಾಮಗ್ನಿಯುಕ್ತಾಂ ಭಯಂಕರಾಂ ।
ಸ ರಾಜಪುತ್ರಃ ಶ್ರೀಕೃಷ್ಣಂ ಸರ್ವವ್ಯಾಪಿನಮೀಶ್ವರಂ ॥ ೩೯ ॥

ಅಶ್ರುಪೂರ್ಣಮುಖೋ ಭೂತ್ವಾ ಪ್ರತ್ಯಾಹ ವಿಮಲಂ ವಚಃ ॥ ೪೦ ॥

ಕೃಷ್ಣಂ ಮುಕುಂದಮರವಿಂದದಲಾಯತಾಕ್ಷಂ
ಶಂಖೇಂದುಕುಂದದಶನಂ ನರನಾಥವೇಷಂ ।
ಇಂದ್ರಾದಿದೇವಗಣವಂದಿತಪಾದಪದ್ಮಂ
ಪ್ರಾಣಪ್ರಯಾಣಸಮಯೇ ಚ ಹರಿಂ ಸ್ಮರಾಮಿ ॥ ೪೧ ॥

---

೩೮. ಎದುರಿಗೆ ದೊಡ್ಡದಾದ ಶತಘ್ನಿಯು (ತೋಪು) ಸಿದ್ಧವಾಗಿ ನಿಂತಿತ್ತು. ಅದರೊಳಕ್ಕೆ ಮದ್ದು ತುಂಬಿದ್ದರು. ತಾಮ್ರದ ಗುಂಡುಗಳನ್ನು ಮದ್ದಿನೊಳಕ್ಕೆ ಸೇರಿಸಿದ್ದರು. ಅದು ಕಾದು ಪ್ರಜ್ವಲಿಸುತ್ತಿತ್ತು.

೩೯–೪೦. ರಾಜಕುಮಾರನು ಆ ಶತಘ್ನಿಯನ್ನು ನೋಡಿದನು. ಆಗ ಕಣ್ಣಲ್ಲಿ ನೀರನ್ನು ಸುರಿಸುತ್ತಾ ಸರ್ವವ್ಯಾಪಿಯಾದ ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸಿದನು—

೪೧. ಆ ಪರಮಾತ್ಮನನ್ನು ಭಕ್ತಿಯಿಂದ ನಮಸ್ಕರಿಸುವೆನು. ಕಮಲದ ದಳದಂತೆ ವಿಶಾಲವಾಗಿಯೂ, ಕೆಂಪಗೂ ಅವನ ಕಣ್ಣುಗಳಿರುವುವು. ಅವನ ಹಲ್ಲುಗಳು ಶಂಖ, ಚಂದ್ರರಂತೆ ಬಿಳುಪಾಗಿಯೂ, ಮಲ್ಲಿಗೆಯ ಮುಗ್ಗಿನಂತೆ ಸಣ್ಣದಾಗಿಯೂ, ಸಾಲಾಗಿಯೂ ಇರುವುವು. ಇಂತಹ, ನರರೂಪಧಾರಿಯಾದ ನಿನಗೆ ನಮಸ್ಕರಿಸುವೆನು. ಇಂದ್ರನೇ ಮೊದಲಾದ ದೇವತೆಗಳೂ ನಿನ್ನ ಪಾದಕಮಲವನ್ನು ಸತತ ಧ್ಯಾನಿಸುವರು. ಇಂತಹ ನಿನ್ನನ್ನು ಪ್ರಾಣಹೋಗುವ ಮುನ್ನ ಒಮ್ಮೆ ಧ್ಯಾನಿಸುವೆನು.

ಶ್ರೀಕೃಷ್ಣ ಗೋವಿಂದ ಹರೇ ಮುರಾರೇ
ಶ್ರೀಕೃಷ್ಣ ಗೋವಿಂದ ಕುಶಸ್ಥಲೀಶ ।
ಶ್ರೀಕೃಷ್ಣ ಗೋವಿಂದ ವ್ರಜೇಶ ಭೂಪ
ಶ್ರೀಕೃಷ್ಣ ಗೋವಿಂದ ಭಯಾತ್ತ್ರಯಾಹಿ ॥ ೪೨ ॥

ಸ್ಮರಣಾತ್ತವ ಗೋವಿಂದ ಗ್ರಾಹಾನ್ಮುಕ್ತೋ ಮತಂಗಜಃ ।
ಸ್ವಾಯಂಭುವಶ್ಚ ಪ್ರಹ್ಲಾದೋ ಹ್ಯಂಬರೀಷೋ ಧ್ರುವಸ್ತಥಾ ॥ ೪೩ ॥

ಆನರ್ತಶ್ಚೈವ ಕಕ್ಷೀವಾನ್ ಮೃಗೇಂದ್ರಾದ್ಬಹುಲಾ ತಥಾ ।
ರೈವತಶ್ಚಂದ್ರಹಾಸಶ್ಚ ತಥಾಹಂ ಶರಣಂ ಗತಃ ॥ ೪೪ ॥

ಪೂರ್ವಂ ಭವತಿ ಮೇ ಮೃತ್ಯುಃ ಸಂಗ್ರಾಮಂ ಚ ವಿನಾ ಹ್ಯಹೋ ।
ನ ತೋಷಿತಶ್ಚ ಪ್ರಧನೇಽನಿರುದ್ಧೋ ವಿಶಿಖೈರ್ಮಮ ॥ ೪೫ ॥

---

೪೨. ಮುರನೆಂಬ ರಾಕ್ಷಸನನ್ನು ನಾಶಮಾಡಿದ ಎಲೈ ಶ್ರೀಕೃಷ್ಣಗೋವಿಂದನೇ, ದ್ವಾರಕೆಗೆ ಪ್ರಭುವಾದ ಪರಮಾತ್ಮನೇ, ಗೋಕುಲಕ್ಕೆ ಸ್ವಾಮಿಯಾದ ಶ್ರೀಕೃಷ್ಣನೇ ನೀನು ಈ ಸಮಯದಲ್ಲಿ ನನ್ನನ್ನು ಒದಗಿರುವ ಕಷ್ಟದಿಂದ ರಕ್ಷಿಸು.

೪೩. ಎಲೈ ಗೋವಿಂದನೇ, ನಿನ್ನ ಧ್ಯಾನವನ್ನು ಮಾಡಿ ಗಜೇಂದ್ರನು ಮೊಸಳೆಯ ತೊಂದರೆಯಿಂದ ಪಾರಾಯಿತು. ಸ್ವಾಯಂಭುವ, ಪ್ರಹ್ಲಾದ, ಅಂಬರೀಷ, ಧ್ರುವ ಮುಂತಾದವರು ನಿನ್ನ ನಾಮಸ್ಮರಣೆ ಮಾಡಿ ಉತ್ತಮವಾದ ಗತಿಯನ್ನು ಪಡೆದರು.

೪೪. ಆನರ್ತ, ಕಕ್ಷೀವಾನ್, ಮೃಗೇಂದ್ರ, ಬಹುಲಾ, ರೈವತ, ಚಂದ್ರಹಾಸ ಮುಂತಾದವರೆಲ್ಲರೂ ನಿನ್ನನ್ನು ಶರಣುಹೊಂದಿದರು. ಹಾಗೆಯೇ ನಾನೂ ನಿನ್ನನ್ನು ಮರೆಹೊಕ್ಕಿರುವನು.

೪೫–೪೬. ಯುದ್ಧಮಾಡದೆ ನನಗೆ ಸಾವುಂಟಾಗುವುದು. ಏನುಮಾಡಲಿ? ನನ್ನ ಬಾಣಗಳಿಂದ ಅನಿರುದ್ಧನನ್ನು ಸಂತೋಷಗೊಳಿಸಬೇಕೆಂದಿದ್ದೆ. ಅದೂ ಆಗಲಿಲ್ಲ. ಯಾದವರೂ, ಕೃಷ್ಣನ ಮಕ್ಕಳೂ ನನ್ನ ಬಾಣಬಿಡುವಿಕೆಯಿಂದ ಆನಂದ

ನ ತೋಷಿತಾ ಯಾದವಾಶ್ಚ ನ ದೃಷ್ಟ್ವಾ ಕೃಷ್ಣನಂದನಾಃ ।
ಶಾರ್ಙ್ಗಮುಕ್ತೈಶ್ಚ ವಿಶಿಖೈರ್ನದೇಹಃ ಶಕಲೀಕೃತಃ ॥ ೪೬ ॥

ಕುನಂದನಸ್ಯ ಶೂರಸ್ಯ ಸ್ತೇನಸ್ಯೇವಾಭವದ್ಗತಿಃ ।
ತ್ವದ್ಭಕ್ತಂ ಮಾಂ ಚ ಪಾಪಿಷ್ಠಾಸ್ತಸ್ಮಾತ್ಸರ್ವೇ ಹಸಂತಿ ಹಿ ॥ ೪೭ ॥

ಯಂ ವೀಕ್ಷ್ಯ ಭೂಮೌ ಚ ಪಲಾಯತೇ ವೈ
ಯಮೋ ಮರಿಷ್ಯಂತಿ ವಿನಾಯಕಾಶ್ಚ ।
ನಿರಂಕುಶಂ ಕೃಷ್ಣಜನಂ ಚ ಪೂಜ್ಯಂ
ಕಥಂ ಶತಘ್ನೀ ಕಿಲ ಮಾಂ ಹನಿಷ್ಯತಿ ॥ ೪೮ ॥

॥ ಗರ್ಗ ಉವಾಚ ॥

ಇತ್ಥಂ ವದತಿ ಶೂರೇ ವೈ ಸೈನ್ಯಪಾಲಸ್ಯ ಚಾಜ್ಞಯಾ ।
ಶತಘ್ನೀಂ ಮುಮುಚೇ ಕಶ್ಚಿದ್ಧಾಹಾಶಬ್ದಸ್ತದಾಽಭವತ್ ॥ ೪೯ ॥

ಗೊಳಿಸಬೇಕೆಂದಿದ್ದೆ. ಅದೂ ಇಲ್ಲವು. ಅಥವಾ ಬಾಣಗಳ ಏಟಿನಿಂದ ನನ್ನ ದೇಹವಾದರೂ ಚೂರುಚೂರಾಗಿದ್ದಿದ್ದರೆ ಅದೊಂದು ರೀತಿಯಾಗಿತ್ತು. ಅದೂ ಆಗಲಿಲ್ಲ.

೪೭. ನನಗೀಗ ದುಷ್ಪುತ್ರನಿಗೂ, ಶೂರನಲ್ಲದವನಿಗೂ, ಕಳ್ಳನಿಗೂ ಆದ ಗತಿಯುಂಟಾಗಿರುವುದು. ಇಂತಹ ಅವಸ್ಥೆಯಲ್ಲಿರುವ ನಿನ್ನ ಭಕ್ತನಾದ ನನ್ನನ್ನು ನೋಡಿ ಎಲ್ಲರೂ ನಗುತ್ತಿರುವರು. ಅವರು ಪಾಪಿಗಳು.

೪೮. ನಾನು ರಣರಂಗಕ್ಕೆ ಬಂದೆನೆಂದರೆ ಯಮನೂ ಹೆದರಬೇಕಾಗಿತ್ತು. ಯೋಧರೆಲ್ಲರೂ ರಕ್ಷಕರಹಿತರಾಗಿ ಸತ್ತುಹೋಗುತ್ತಿದ್ದರು. ಇಂತಹ ಸ್ವತಂತ್ರನೂ, ಶ್ರೀಕೃಷ್ಣನ ಸ್ತೋತ್ರಮಾಡುವುದರಿಂದ ಪೂಜ್ಯನೂ ಆದ ನನ್ನನ್ನು ಶತಘ್ನಿಯು ಹೇಗೆ ತಾನೆ ಕೊಂದೀತು?

೪೯. ಹೀಗೆ ಹೇಳುತ್ತಿರಲು ಸೈನ್ಯಪಾಲನ ಅಪ್ಪಣೆಯಂತೆ ಸೈನಿಕರು ಶತಘ್ನಿಯನ್ನು ಹಾರಿಸಿದರು. ಎಲ್ಲರೂ ಹಾಹಾಕಾರಮಾಡಿದರು.

ಸ್ಮರಣಾತ್ಕೃಷ್ಣಚಂದ್ರಸ್ಯ ಚಿತ್ರಮೇಕಂ ಬಭೂವ ಹ ।
ಶತಘ್ನೀ ಶಿಥಿಲಾ ಜಾತಾ ಜ್ವಾಲಾ ಶಾಂತಿಂ ಗತಾ ನೃಪ ॥ ೫೦ ॥

ದೃಷ್ಟ್ವಾಶ್ಚರ್ಯಂ ಚ ತತ್ರಾಪಿ ಜನಾಸ್ಸರ್ವೇ ನೃಪಾದಯಃ ।
ವಿಸ್ಸಿಮೂ ರಾಜಶಾರ್ದೂಲ ಸೈನ್ಯಪಾಲಸ್ತದಾಬ್ರವೀತ್ ॥ ೫೧ ॥

ಶತಘ್ನ್ಯಾಂ ಶುಷ್ಕಮುದಿರಾ ಗೋಲಕೇನ ಸಮನ್ವಿತಾ ।
ನ ವಿದ್ಯತೇ ತ್ವಸೌ ತಸ್ಮಾನ್ನ ಮೃತೋ ರಣಮಂಡಲೇ ॥ ೫೨ ॥

ಇತಿ ತಸ್ಯ ವಚಃ ಶ್ರುತ್ವಾ ಪ್ರೋಚುರ್ವೀರಾ ರುಷಾನ್ವಿತಾಃ ।
ಅಯಂ ನಿಷ್ಕಿಲ್ಬಿಷಃ ಶೂರಃ ಕೃಷ್ಣಭಕ್ತೋ ಮಹಾಮತಿಃ ॥ ೫೩ ॥

---

೫೦. ಆದರೆ ರಾಜಕುಮಾರನು ಶ್ರೀಕೃಷ್ಣನ ಸ್ಮರಣೆಮಾಡಿದುದರಿಂದ ಅವನ ಅನುಗ್ರಹದಿಂದ ಶತಘ್ನಿಯು ಮುರಿದುಹೋಯಿತು. ಜ್ವಾಲೆಯು ಕಡಿಮೆಯಾಯಿತು.

೫೧. ಎಲೈ ವಜ್ರನಾಭಿಯೇ, ಆ ಆಶ್ಚರ್ಯವನ್ನೇನೆಂದು ಹೇಳಲಿ? ಸೈನಿಕರೂ, ಅಲ್ಲಿ ನೆರೆದಿರುವ ರಾಜರೂ, ಎಲ್ಲ ಜನರೂ ಅತ್ಯಾಶ್ಚರ್ಯಪಟ್ಟರು. ಸೈನ್ಯಪಾಲನು ಆಗ ಹೇಳಿದನು.

೫೨. ಈ ಹಾಳು ಶತಘ್ನಿಯಲ್ಲಿ ಕೆಟ್ಟಮದ್ದನ್ನು ತುಂಬಿರುವರು. ಅದರೊಡನೆ ಗುಂಡುಗಳೂ ಸೇರಿರುವುದರಿಂದ ಕೆಲಸಮಾಡಲಿಲ್ಲವು. ಅದಕ್ಕೋಸ್ಕರ ರಾಜಪುತ್ರನು ಸಾಯಲಿಲ್ಲ.

೫೩. ಎಂದು ಹೇಳಲು ಅಲ್ಲಿರುವವರೆಲ್ಲರಿಗೂ ಸಿಟ್ಟುಬಂದಿತು. ಆಗ ಅವರು ‘ರಾಜಕುಮಾರನು ಕೃಷ್ಣಭಕ್ತನು.’ ಅವನು ನಿರಪರಾಧಿಯು, ಪವಿತ್ರನು. ಕೃಷ್ಣನೇ ಅವನನ್ನು ಉಳಿಸಿರುವನು. ಪುನಃ ಈಗ ಅವನನ್ನು ನೀನು ಕೊಲ್ಲಕೂಡದು. ಎಂದರು.

ರಕ್ಷಿತಸ್ತೇನ ದುಃಖಾದ್ವೈ ಪುನರ್ಹಂತುಂ ಚ ನ ಚಾರ್ಹಸಿ ।
ತೇಷಾಂ ವಾಕ್ಯಂ ಸಮಾಕರ್ಣ್ಯ ಸೈನ್ಯಪಾಲೋ ರುಷಾನ್ವಿತಃ ॥ ೫೪ ॥

ದದರ್ಶ ರಾಜಪುತ್ರಂ ವೈ ಶತಘ್ನೀವದನೇ ಸ್ಥಿತಂ ।
ಜಪಂತಂ ಕೃಷ್ಣ ಕೃಷ್ಣೇತಿ ಸ್ರಜಾ ಮೀಲಿತಲೋಚನಂ ॥ ೫೫ ॥

ದೃಷ್ಟ್ವಾ ತಂ ಹಿ ಪುನರ್ಹಂತುಂ ಶತಘ್ನೀಂ ಮುಮುಚೇ ಖಲಃ ।
ಸಾ ಶತಘ್ನೀ ತದಾ ಭಿನ್ನಾ ಶಬ್ದೋ ವಜ್ರನಿಪಾತವತ್ ॥ ೫೬ ॥

ಬಭೂವ ಸೈನ್ಯಪಾಲಸ್ತು ಗೋಲಕೇನ ಮೃತೋಽಭವತ್ ।
ತಥಾ ತದನುಗಾಸ್ತಸ್ಯಾ ಜ್ವಾಲಯಾ ಜ್ವಲಿತಾಃ ಕಿಲ ॥ ೫೭ ॥

ಹಾಹಾಶಬ್ದಂ ಪ್ರಕುರ್ವಂತೋ ದುದ್ರುವುಃ ಕೇಚಿದೇವ ಹಿ ।
ಕೇಚಿದ್ವೈ ಬಧಿರೀಭೂತಾಃ ಕೇಚಿದ್ಧೂಮೇನ ವಿಹ್ವಲಾಃ ॥ ೫೮ ॥

೫೪–೫೫. ಆಗ ಸೈನ್ಯಪಾಲನು ಅತಿಕೋಪದಿಂದ ರಾಜಕುಮಾರನನ್ನು ಒಂದು ಸಾರೆ ನೋಡಿದನು. ರಾಜಪುತ್ರನು ಶತಘ್ನಿಯ ಎದುರಿಗೆ ನಿಶ್ಚಲನಾಗಿ ನಿಂತು ಜಪಸರವನ್ನು ಎಣಿಸುತ್ತಾ 'ಕೃಷ್ಣ, ಕೃಷ್ಣ' ಎಂದು ಜಪಿಸುತ್ತಿದ್ದನು. ಕಣ್ಣುಗಳನ್ನು ಅರ್ಧಮುಚ್ಚಿ ಧ್ಯಾನಿಸುತ್ತಿದ್ದನು.

೫೬. ಆಗ ಸೈನ್ಯಪಾಲನು ಪುನಃ ಶತಘ್ನಿಯನ್ನು ಸಿದ್ಧಗೊಳಿಸಿ ಹಾರಿಸಿದನು. ಆದರೆ ಶತಘ್ನಿಯು ಚೂರುಚೂರಾಯಿತು. ಸಿಡಿಲಿನ ಶಬ್ದದಂತೆ ಶಬ್ದವಾಯಿತು.

೫೭. ಅದರೊಳಗಿನ ಗುಂಡು ಹಾರಿ ಸೈನ್ಯಪಾಲಕನಿಗೆ ತಗುಲಿತು. ಅವನದರಿಂದ ಸತ್ತುಹೋದನು. ಅದರಿಂದ ಹೊರಟ ಜ್ವಾಲೆಯಿಂದ ಅವನ ಕಡೆಯುವರೆಲ್ಲಾ ಸುಟ್ಟುಹೋದರು.

೫೮. ಅದರಿಂದ ಕೆಲವರು ಹಾಹಾಕಾರ ಮಾಡುತ್ತಾ ಯುದ್ಧರಂಗದಿಂದ ಓಡಿದರು. ಕೆಲವರ ಕಿವಿಗಳು ಅದರ ಶಬ್ದದಿಂದ ಕಿವುಡಾದವು. ಕೆಲವರು ಅದರಿಂದ ಹೊರಟ ಹೊಗೆಯಿಂದ ವಿಹ್ವಲರಾದರು.

ತತಶ್ಚ ದದೃಶುಸ್ಸರ್ವೇ ನೃಪಪುತ್ರಂ ಚ ನಿರ್ಭಯಂ ।
ಚಕ್ರುರ್ಜಯಜಯಾರಾವಂ ಬಲ್ವಲಾದ್ಯಾ ನೃಪೇಶ್ವರ ॥ ೫೯ ॥

॥ ದೈತ್ಯಾ ಊಚುಃ ॥

ಯಂ ಚ ರಕ್ಷತಿ ಶ್ರೀಕೃಷ್ಣಸ್ತಂ ಕೋ ಭಕ್ಷತಿ ಮಾನವಃ ।
ಭಕ್ತಂ ಹಂತುಂ ಚಾಗತೋ ಯಃ ಸ ವಿನಶ್ಯತಿ ದೈವತಃ ॥ ೬೦ ॥

ತಸ್ಮಾತ್ಕೃಷ್ಣಸಮೋ ನಾಸ್ತಿ ಯೇನಾಯಂ ರಕ್ಷಿತೋ ಭಯಾತ್ ।
ಸರ್ವೇ ವಯಂ ನಮಸ್ಯಾಮಸ್ತಂ ಕೃಷ್ಣಂ ಭಕ್ತವತ್ಸಲಂ ॥ ೬೧ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ರಾಜಪುತ್ರಜೀವನಂ ನಾಮ ತ್ರಯಸ್ತ್ರಿಂಶೋಽಧ್ಯಾಯಃ

---

೫೯. ರಾಜಕುಮಾರನು ನಿರ್ಭಯನಾಗಿ ನಿಂತಿರುವುದನ್ನು ಎಲ್ಲರೂ ನೋಡಿದರು. ಎಲ್ಲರೂ ಜಯಜಯಾಕಾರವನ್ನು ಮಾಡಿದರು. ಬಲ್ವಲನೂ ಮಂಗಳವನ್ನು ಕೋರಿದನು.

೬೦. ಆಗ ಅಲ್ಲಿರುವ ದೈತ್ಯರೆಲ್ಲರೂ ಶ್ರೀಕೃಷ್ಣನು ಯಾವ ಮಾನವನನ್ನು ರಕ್ಷಿಸುವನೋ ಅವನನ್ನು ಯಾವ ಮನುಷ್ಯನು ತಾನೇ ಕೊಲ್ಲಲು ಸಮರ್ಥನಾಗುವನು? ಭಕ್ತನನ್ನು ಕೊಲ್ಲಲು ಬಂದವನು ಅವನೆ ಸಾಯುವನು.

೬೧. ಆದುದರಿಂದ ಶ್ರೀಕೃಷ್ಣನಿಗೆ ಸಮನಾದವನು ಯಾರೂ ಇಲ್ಲ. ಆ ಪರಮಾತ್ಮನಿಂದ ನಮ್ಮ ರಾಜಕುಮಾರನು ರಕ್ಷಿತನಾದನು. ಆದುದರಿಂದ ಅಂತಹ ಭಕ್ತವತ್ಸಲನಾದ ಶ್ರೀಕೃಷ್ಣನನ್ನು ನಮಸ್ಕರಿಸೋಣ ಎಂದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ರಾಜಪುತ್ರನ ಪ್ರಾಣರಕ್ಷಣೆ ಎಂಬ ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

--॥ ಶ್ರೀಃ ॥—

--॥ ಶ್ರೀಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಚತುಸ್ತ್ರಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ವೈ ಬಲ್ವಲಃ ಪುತ್ರಂ ರೋಪಯಿತ್ವಾ ರಥೇ ಮುದಾ।
ತೇನ ಸಾರ್ಧಂ ಸಸೈನ್ಯಸ್ತು ಯುದ್ಧಾರ್ಥಂ ಪ್ರಯಯೌ ತ್ವರಂ ॥ ೧ ॥

ನಾನಾಶಸ್ತ್ರಧರಾಸ್ಸರ್ವೇ ನಾನಾವಾಹನಸಂಸ್ಥಿತಾಃ।
ನಾನಾಕಂಚುಕಸಂಯುಕ್ತಾ ನಾನಾರೂಪಾ ಭಯಂಕರಾಃ ॥ ೨ ॥

ಗಜೇಂದ್ರಸದೃಶಾಃ ಪುಷ್ಟಾ ಮೃಗೇಂದ್ರಸಮವಿಕ್ರಮಾಃ।
ಕಂಪಯಂತಶ್ಚ ಪೃಥಿವೀಂ ವೃಷ್ಣೀನಾಂ ಸಮ್ಮುಖೇ ಯಯುಃ ॥ ೩ ॥

ಮೂವತ್ತನಾಲ್ಕನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ ಕೇಳು. ಬಲ್ವಲನು ತನ್ನ ಪುತ್ರನನ್ನು ರಥದ ಮೇಲೆ ಕುಳ್ಳಿರಿಸಿಕೊಂಡು ಆನಂದಪಡುತ್ತಾ ಸಾವಿರಾರು ಜನ ಸೈನಿಕರೊಡಗೂಡಿ ಯುದ್ಧಮಾಡಲು ಹೊರಟನು.

೨. ಎಲ್ಲರೂ ನಾನಾ ವಿಧವಾದ ಶಸ್ತ್ರಾಸ್ತ್ರಗಳನ್ನು ಧರಿಸಿ ಹೊರಟಿದ್ದರು. ಅನೇಕ ವಿಧವಾದ ವಾಹನಗಳನ್ನೇರಿ ವಿವಿಧವಾದ ಯುದ್ಧಕವಚಗಳನ್ನು ಧರಿಸಿ ಭಯಂಕರ ಸ್ವರೂಪರಾಗಿ ಯುದ್ಧರಂಗಕ್ಕೆ ಹೋಗುತ್ತಿದ್ದರು.

೩. ಆನೆಯಂತೆ ದೊಡ್ಡ ಶರೀರವುಳ್ಳವರಾಗಿದ್ದರು. ದಷ್ಟಪುಷ್ಟರಾಗಿಯೂ ಸಿಂಹದಂತೆ ವಿಕ್ರಮವುಳ್ಳವರಾಗಿಯೂ ಇದ್ದರು ನಡೆಯುತ್ತಿರುವಾಗ ಭೂಮಿಯೇ ನಡುಗುತ್ತಿತ್ತು. ಇವರೆಲ್ಲರೂ ಯಾದವರ ಎದುರಿಗೆ ಹೋಗಿ ಯುದ್ಧಸನ್ನದ್ಧರಾದರು.

ತಾನಾಗತಾನ್ಸಹೂನ್ ದೈತ್ಯಾನನಿರುದ್ಧಸ್ತು ಶಂಕಿತಃ ।
ರಕ್ಷಣಾರ್ಥಂ ಚ ಸರ್ವೇಷಾಂ ಚಕ್ರವ್ಯೂಹಮಕಲ್ಪಯತ್ ॥ ೪ ॥

ಸರ್ವತೋ ಯಾದವಾಃ ಶೂರಾಃ ಸರ್ವಶಸ್ತ್ರಧರಾಃ ಕಿಲ ।
ಗಜೈ ರಥೈಸ್ತುರಂಗೈಶ್ಚ ಬಭೂವುಃ ಪರಿಮಂಡಿತಾಃ ॥ ೫ ॥

ತೇಷಾಂ ಮಧ್ಯೇ ಸ್ಥಿತಾ ರಾಜನ್ನಿಂದ್ರನೀಲಾದಯೋ ನೃಪಾಃ ।
ಅಕ್ರೂರಕೃತವರ್ಮಾದ್ಯಾಸ್ತೇಷಾಂ ಮಧ್ಯೇ ಸ್ಥಿತಾಃ ಶುಭಾಃ ॥ ೬ ॥

ತೇಷಾಂ ಮಧ್ಯೇ ಚ ರಾಜೇಂದ್ರ ಗದಾದ್ಯಾಃ ಕೃಷ್ಣಭ್ರಾತರಃ ।
ತೇಷಾಂ ಮಧ್ಯೇ ಮಹಾವೀರಾಃ ಸಾಂಬದೀಪ್ತಿಮತಾದಯಃ ॥ ೭ ॥

ಚಕ್ರವ್ಯೂಹಂ ವಿನಿರ್ಮಾಯ ಚೇದೃಶಂ ತತ್ರ ಭೂಪತೇ ।
ತನ್ಮಧ್ಯೇ ಕಾರ್ಷ್ಣಿಪುತ್ರಸ್ತು ದಂಶಿತಃ ಸಂಸ್ಥಿತೋಽಭವತ್ ॥ ೮ ॥

---

೪. ಎದುರಾಗಿ ಬರುತ್ತಿರುವ ದಾನವರನ್ನು ನೋಡಿ ಅನಿರುದ್ಧನು ತನ್ನ ಸೈನಿಕರ ರಕ್ಷಣೆಗೋಸ್ಕರವಾಗಿ ಚಕ್ರವ್ಯೂಹವನ್ನು ನಿರ್ಮಿಸಿದನು.

೫. ಯಾದವರೆಲ್ಲರೂ ಎಲ್ಲಾ ವಿಧವಾದ ಆಯುಧಗಳನ್ನೂ ಧರಿಸಿ ಆನೆಗಳ ಮೇಲೂ, ರಥಗಳ ಮೇಲೂ ಕುಳಿತು ರಾಕ್ಷಸರನ್ನು ಎದುರಿಸಲು ಸಿದ್ಧರಾದರು.

೬–೭. ಈ ರೀತಿ ಆಯುಧಗಳನ್ನು ಧರಿಸಿ ಸೈನಿಕರು ಮೊದಲು ಗುಂಡಾಗಿ ನಿಂತರು. ಅವರ ಮಧ್ಯದಲ್ಲಿ ಒಂದು ಸಾಲು ಇಂದ್ರನೀಲನೇ ಮೊದಲಾದ ರಾಜರೂ ಅವರುಗಳ ಮಧ್ಯದಲ್ಲಿ ಅಕ್ರೂರ, ಕೃತವರ್ಮಾ ಮೊದಲಾದವರೂ, ಅವರ ಮಧ್ಯದಲ್ಲಿ ಗದನೇ ಮುಂತಾದ ಕೃಷ್ಣನ ಸಹೋದರರೂ, ಅವರ ಮಧ್ಯದಲ್ಲಿ ಮಹಾವೀರರಾದ ಸಾಂಬ, ದೀಪ್ತಿಮಾನ್ ಮುಂತಾದವರೂ ಚಕ್ರಾಕಾರವಾಗಿ ನಿಂತುಕೊಂಡರು.

೮. ಈ ರೀತಿಯಾಗಿ ಚಕ್ರವ್ಯೂಹವನ್ನು ನಿರ್ಮಿಸಿ ಅದರ ಮಧ್ಯದಲ್ಲಿ ಅನಿರುದ್ಧನು ನಿಂತುಕೊಂಡು ಯುದ್ಧಸನ್ನದ್ಧನಾದನು.

ಬಭೂವ ತುಮುಲಂ ಯುದ್ಧಂ ತತ್ರ ಸಿಂಧೂತಟೇ ನೃಪೇ ।
ಯದುಭಿರ್ದಾನವಾನಾಂ ಚ ಹ್ಯಬ್ಧೀನಾಮಬ್ಧಿಭಿರ್ಯಥಾ ॥ ೯ ॥

ರಥಿನೋ ರಥಿಭಿಸ್ತತ್ರ ಗಜವಾಹಾ ಗಜೈಸ್ಸಹ ।
ಅಶ್ವವಾಹೈರಶ್ವವಾಹಾ ವೀರಾ ವಿರೈಃ ಪರಸ್ಪರಂ ॥ ೧೦ ॥

ಯುಯುಧುಸ್ತೀಕ್ಷ್ಣಬಾಣೈಶ್ಚ ಖಡ್ಗಚರ್ಮಗದರ್ಷ್ಟಿಭಿಃ ।
ಪಾಶೈಃ ಪರಶ್ವಧೈ ರಾಜನ್ ಶತಘ್ನೀಭಿರ್ಭುಶುಂಡಿಭಿಃ ॥ ೧೧ ॥

ಹನ್ಯಮಾನಾಶ್ಚ ಯದುಭಿರ್ಬಲ್ವಲಸ್ಯ ಚ ಸೈನಿಕಾಃ ।
ಸರ್ವೇ ಸ್ವಂ ಸ್ವಂ ರಣಂ ತ್ಯಕ್ತ್ವಾ ದುದ್ರುವಸ್ತೇ ಭಯಾನ್ವಿತಾಃ ॥ ೧೨ ॥

ರುರೋಧ ಗಗನಂ ಸೂರ್ಯಂ ಸೈನ್ಯಪಾದರಜೋ ಭೃಶಂ ।
ಅಂಧಕಾರೇ ಮಹಾದೈತ್ಯಾ ರಣಾಸ್ಸರ್ವೇ ಪರಾಙ್ಮುಖಾಃ ॥ ೧೩ ॥

---

೯. ಸಮುದ್ರದ ದಡದಲ್ಲಿ ರಾಕ್ಷಸರಿಗೂ ಯಾದವರಿಗೂ, ಸಮುದ್ರವು ಮತ್ತೊಂದು ಸಮುದ್ರದೊಡನೆ ಹೋರಾಡುವಂತೆ ಭಯಂಕರವಾದ ತುಮುಲ ಯುದ್ಧವು ಪ್ರಾರಂಭವಾಯಿತು.

೧೦. ಸಾರಥಿಗಳು ಸಾರಥಿಗಳೊಡನೆಯೂ, ಮಾವುತರು ಶತ್ರುಮಾವುತ ರೊಡನೆಯೂ, ಅಶ್ವಾರೋಹಿಗಳು ಶತ್ರು ಅಶ್ವಾರೋಹಿಗಳೊಡನೆಯೂ ಯುದ್ಧ ಮಾಡಿದರು. ಯೋಧರು ತೀಕ್ಷ್ಣವಾದ ಬಾಣಗಳಿಂದಲೂ ಖಡ್ಗ, ಚರ್ಮ, ಗದ, ರುಷ್ಟಿ ಮುಂತಾದುವುಗಳಿಂದಲೂ ಹೊಡದಾಡಿದರು.

೧೧–೧೨. ಪಾಶಾಯುಧ, ಕೊಡಲಿ, ಶತಘ್ನಿ, ಭುಶುಂಡಿ ಮುಂತಾದ ಆಯುಧ ಗಳಿಂದ ಅನಿರುದ್ಧನ ಯೋಧರು ಬಲ್ವಲನ ಸೈನಿಕರನ್ನು ಹೊಡೆದರು. ಆಗ ಅವರೆಲ್ಲರೂ ಯುದ್ಧರಂಗವನ್ನು ಬಿಟ್ಟು ಹೆದರಿಕೆಯಿಂದ ಓಡಲು ಪ್ರಾರಂಭಿಸಿದರು.

೧೩–೧೪. ಸೈನಿಕರು ಓಡುವಾಗ ಎದ್ದ ಧೂಳು ಅಂತರಿಕ್ಷವನ್ನು ವ್ಯಾಪಿಸಿ ಸೂರ್ಯನನ್ನು ಮುಚ್ಚಿತು. ಅದರಿಂದ ಕತ್ತಲಾಯಿತು. ಆಗ ದೈತ್ಯರೆಲ್ಲರೂ ಹೆದರಿ

ಕೇಚಿನ್ನಿಪತಿಕಾಃ ಕೂಪೇ ಕೇಚಿದ್ಗರ್ತೇ ಹ್ಯಧೋಮುಖಾಃ।
ಕೇಚಿತ್ತಡಾಗೇ ವಾಪ್ಯಾಂ ವೈ ಯದೂನಾಂ ಸಾಯಕೈರ್ಹತಾಃ ॥ ೧೪ ॥

ತತೋ ದೃಷ್ಟ್ವಾ ಬಲಂ ಭಗ್ನಂ ಬಲ್ವಲೋ ರೋಷಪೂರಿತಃ।
ಚತುರ್ಭಿರ್ಮಂತ್ರಿಣಾಂ ಪುತ್ರೈಃ ಸ್ವಪುತ್ರೇಣಾಜಗಾಮ ಹ ॥ ೧೫ ॥

ಅನಿರುದ್ಧೋ ಬಲ್ವಲೇನ ತತ್ರಾಯುಧ್ಯನ್ಮಹಾನ್ಮೃಧೇ।
ದುರ್ನೇತ್ರೇಣ ಬೃಹದ್ಬಾಹುರ್ದುರ್ಮುಖೇಣಾರುಣೋ ಬಲೀ ॥ ೧೬ ॥

ನ್ಯಗ್ರೋಧೋ ದುಃಸ್ವಾಭಾವೇನ ದುಃರ್ಮದೇನ ಕವಿಸ್ತಥಾ।
ಕುನಂದನೇನ ಸಂಗ್ರಾಮೇ ಕೃಷ್ಣಪುತ್ರಃ ಸುನಂದನಃ ॥ ೧೭ ॥

ಓಡಿಹೋದರು. ಕತ್ತಲೆಯಾದ್ದರಿಂದ ಕೆಲವರು ಭಾವಿಯಲ್ಲೂ, ಕೆಲವರು ಹಳ್ಳದಲ್ಲಿಯೂ, ಕೆಲವರು ಕೆರೆಯಲ್ಲಿಯೂ ಬಿದ್ದುಬಿಟ್ಟರು. ಎಷ್ಟೋ ಜನ ಯಾದವರ ಬಾಣಕ್ಕೆ ತುತ್ತಾದರು.

೧೫. ತನ್ನ ಸೈನಿಕರೆಲ್ಲರೂ ಹೆದರಿ ಓಡುತ್ತಿರುವುದನ್ನು ನೋಡಿ ಬಲ್ವಲನು ಕೋಪಗೊಂಡನು. ಆಗ ನಾಲ್ಕುಜನ ಮಂತ್ರಿಗಳ ಮಕ್ಕಳನ್ನೂ ಕರೆದುಕೊಂಡು ತನ್ನ ಮಗನೊಡನೆ ಕೂಡಿ ಯುದ್ಧಕ್ಕೆ ಬಂದನು.

೧೬. ಎರಡು ಕಡೆಯವರಿಗೂ ಯುದ್ಧನಡೆಯಿತು. ಅನಿರುದ್ಧನು ಬಲ್ವಲನೊಡನೆಯೂ, ಬೃಹದ್ಬಾಹುವು ದುರ್ನೇತ್ರನೆಂಬುವನೊಡನೆಯೂ, ಅರುಣನು ದುರ್ಮುಖನೆಂಬುವನೊಡನೆಯೂ ಯುದ್ಧಮಾಡಿದರು.

೧೭. ನ್ಯಗ್ರೋಧನು ದುಸ್ವಾಭಾವನೆಂಬುವನೊಡನೆಯೂ, ಕವಿಯು ದುರ್ಮದನೆಂಬುವನೊಡನೆಯೂ, ಕೃಷ್ಣಪುತ್ರನಾದ ಸುನಂದನನು ಬಲ್ವಲನ ಮಗನಾದ ಕುನಂದನನೊಡನೆಯೂ ಯುದ್ಧಮಾಡಿದರು.

ಏವಂ ಬಭೂವ ಸಂಗ್ರಾಮೋ ದೇವವಿಸ್ಮಯಕಾರಕಃ ।
ಪ್ರಗತಾಸ್ತತ್ರ ರಾಜೇಂದ್ರ ಸರ್ವೇ ಕಾರ್ತಿಕವಾಸರಾಃ ॥ ೧೮ ॥

ಬಲ್ವಲಃ ಕುಪಿತೋ ರಾಜನ್ ಧನುಷ್ಟಂಕಾರಯನ್ಮುಹುಃ ।
ಇಂದ್ರನೀಲಂ ತ್ರಿಭಿರ್ಬಾಣೈಃ ಷಡ್ಭಿರ್ಹೇಮಾಂಗದಂ ಮೃಧೇ ॥ ೧೯ ॥

ಅನುಶಾಲ್ವಂ ಚ ದಶಭಿರಕ್ರೂರಂ ದಶಭಿಸ್ತಥಾ ।
ಗದಂ ದ್ವಾದಶಭಿರ್ಬಾಣೈರ್ಯುಯುಧಾನಂ ಚ ಪಂಚಭಿಃ ॥ ೨೦ ॥

ಪಂಚಭಿಃ ಕೃತವರ್ಮಾಣಮುದ್ಧವಂ ದಶಭಿಃ ಶರೈಃ ।
ಕಾರ್ಷ್ಣಿಜಂ ಶತಬಾಣೈಶ್ಚ ವಿವ್ಯಾಧ ಸಮರೇಽಸುರಃ ॥ ೨೧ ॥

ತಚ್ಛರೈಃ ಸರಥಾಸ್ಸರ್ವೇ ಬಭ್ರಮುರ್ಘಟಿಕಾದ್ವಯಂ ।
ತುರಗಾಃ ಪಂಚತಾಂ ಪ್ರಾಪ್ತಾಶ್ಚೂರ್ಣೀಭೂತಾ ರಥಾ ರಣೇ ॥ ೨೨ ॥

---

೧೮. ಈ ರೀತಿಯಾಗಿ ದೇವತೆಗಳಿಗೂ ಆಶ್ಚರ್ಯವನ್ನುಂಟುಮಾಡುವ ಯುದ್ಧವು ಅಲ್ಲಿ ನಡೆಯಿತು.

೧೯. ಬಲ್ವಲನು ಅತಿಕೋಪಗೊಂಡು ಧನುಷ್ಟಂಕಾರಮಾಡಿದನು. ಮೂರು ಬಾಣಗಳಿಂದ ಇಂದ್ರನೀಲರಾಜನನ್ನೂ ಆರು ಬಾಣಗಳಿಂದ ಹೇಮಾಂಗದರಾಜನನ್ನೂ ಹೊಡೆದು ನೋಯಿಸಿದನು.

೨೦. ಹತ್ತು ಬಾಣಗಳಿಂದ ಅನುಶಾಲ್ವನನ್ನು ಹೊಡೆದನು. ಹನ್ನೆರಡು ಬಾಣಗಳಿಂದ ಗದನನ್ನೂ ಐದು ಬಾಣಗಳಿಂದ ಯುಯುಧಾನನನ್ನೂ ಹೊಡೆದನು.

೨೧. ಐದು ಬಾಣಗಳನ್ನು ತೊಟ್ಟು ಕೃತವರ್ಮನನ್ನೂ ಹತ್ತು ಬಾಣಗಳಿಂದ ಉದ್ಧವನನ್ನೂ ನೂರು ಬಾಣಗಳಿಂದ ಅನಿರುದ್ಧನನ್ನೂ ಹೊಡೆದನು.

೨೨. ಅವನ ಬಾಣಗಳ ಏಟಿನಿಂದ ಯದುಯೋಧರ ಅನೇಕ ರಥಗಳು ಎರಡು ಘಳಿಗೆಗಳ ಕಾಲ ಗಿರಗಿರನೆ ಸುತ್ತತಿರುಗಿದವು. ಕುದುರೆಗಳು ಕೆಳಗೆ ಬಿದ್ದು ಸತ್ತುಹೋದವು. ರಥಗಳು ಚೂರ್ಣವಾದವು. ಇವನ ಕೈಚಳಕವನ್ನು ನೋಡಿ ಯಾದವರೆಲ್ಲರೂ ಆಶ್ಚರ್ಯಪಟ್ಟರು.

ತದ್ಧಸ್ತಲಾಘವಂ ದೃಷ್ಟ್ವಾ ಯಾದವಾ ವಿಸ್ಮಯಂ ಗತಾಃ ।
ರಥಾನಾರುರುಹುಸ್ಸರ್ವೇಽನಿರುದ್ಧಾದ್ಯಾಶ್ಚ ಮಾನದ ॥ ೨೩ ॥

ಬಲ್ವಲೋಽಪಿ ಯಯೌ ರಾಜನ್ನನ್ಯಾನ್ವೀರಾನ್ವಿಲೋಕಿತುಂ ।
ಅನಿರುದ್ಧಸ್ತತಃ ಪ್ರಾಹ ಕ್ರೋಧಾದರುಣಲೋಚನಃ ॥ ೨೪ ॥

ತಿಷ್ಠ ತಿಷ್ಠ ಮಮಾಗ್ರೇಽದ್ಯ ದರ್ಶಯಿತ್ವಾ ಪರಾಕ್ರಮಂ ।
ಕುತ್ರ ಯಾಸ್ಯಸಿ ಹೇ ದೈತ್ಯ ಪಶ್ಯ ಮನ್ನಿಶಿತಾನ್ ಶರಾನ್ ॥ ೨೫ ॥

ಇತಿ ತಸ್ಯ ವಚಃ ಶ್ರುತ್ವಾ ಯುವರಾಜಃ ಕುನಂದನಃ ।
ಉವಾಚ ವಚನಂ ಶೀಘ್ರಂ ಬಲ್ವಲಸ್ಯ ಚ ಪಶ್ಯತಃ ॥ ೨೬ ॥

॥ ರಾಜಪುತ್ರ ಉವಾಚ ॥

ದೈತ್ಯೇಂದ್ರಚರಣೇ ದ್ರಷ್ಟುಂ ತ್ವಂ ತು ನಾರ್ಹಸಿ ಕಾರ್ಷ್ಣಿಜ ।
ತಸ್ಮಾನ್ಮದೀಯಂ ಚ ಬಲಂ ಪೂರ್ವಂ ಪಶ್ಯ ಮೃಧಾಂಗಣೇ ॥ ೨೭ ॥

೨೩-೨೪. ಆಗ ಅನಿರುದ್ಧನೇ ಮೊದಲಾದ ಪ್ರಧಾನರು ಬೇರೆ ಬೇರೆ ರಥಗಳನ್ನೇರಿ ಬಲ್ವಲನ ಸಮೀಪಕ್ಕೆ ಬಂದರು. ಬಲ್ವಲನು ರಥದಲ್ಲಿ ಕುಳಿತು ತನ್ನ ಕಡೆಯ ಬೇರೆ ವೀರರನ್ನು ನೋಡಿಕೊಂಡು ಬರಲು ಹಿಂತಿರುಗಿ ಹೋದನು. ಆಗ ಅನಿರುದ್ಧನು ಕೋಪದಿಂದ ಬಲ್ವಲನನ್ನು ಕುರಿತು,

೨೫. ಲೋ ದೈತ್ಯ, ನಿಲ್ಲುನಿಲ್ಲು. ಎಲ್ಲಿಗೆ ಹೊರಟಿರುವೆ? ನಿನ್ನ ಪರಾಕ್ರಮವನ್ನು ನನ್ನೆದುರಿಗೆ ಪ್ರಕಟಿಸು ಬಾ. ನನ್ನ ತೀಕ್ಷ್ಣವಾದ ಬಾಣಗಳನ್ನಾದರೂ ನೋಡುವೆ ಬಾ.

೨೬. ಎಂದು ಹೇಳಿದುದನ್ನು ಕೇಳಿ ಯುವರಾಜನಾದ ಕುನಂದನನು ಬಲ್ವಲನ ಎದುರಿಗೇನೇ, ಅನಿರುದ್ಧನನ್ನು ಕುರಿತು ಕೋಪದಿಂದ ಇಂತೆಂದನು.

೨೭. ಎಲೈ ಅನಿರುದ್ಧನೇ, ನೀನು ನಮ್ಮ ತಂದೆಯನ್ನೇಕೆ? ಅವನ ಕಾಲುಗಳನ್ನು ನೋಡಲೂ ಯೋಗ್ಯನಾಗಿಲ್ಲ. ಆದುದರಿಂದ ಅವನನ್ನೆದುರಿಸುವುದಂತಿರಲಿ ಮೊದಲು ನನ್ನ ಪರಾಕ್ರಮವನ್ನು ನೋಡು.

॥ ಅನಿರುದ್ಧ ಉವಾಚ ॥

ತ್ವಂ ಬಾಲೋಽಸಿ ದೈತ್ರಪುತ್ರ ಯುದ್ಧಂ ಕರ್ತುಂ ಚ ನಾರ್ಹಸಿ ।
ತಸ್ಮಾಚ್ಛ ಸ್ವಗೃಹಂ ಗತ್ವಾ ಕ್ರೀಡನಂ ಕುರು ಕೃತ್ರಿಮೈಃ ॥ ೨೮ ॥

॥ ರಾಜಪುತ್ರ ಉವಾಚ ॥

ಅತ್ರ ಪಶ್ಯ ಮಹಾವೀರೈರ್ಬಾಲಸ್ಯ ಮಮ ಕ್ರೀಡನಂ ।
ಗೃಹೇ ಯದಿ ಕರಿಷ್ಯಾಮಿ ತತ್ರ ಕೋಽಪಿ ನ ಪಶ್ಯತಿ ॥ ೨೯ ॥

ಇತ್ಯುಕ್ತ್ವಾ ಚಂಡಕೋದಂಡೇ ದಧಾರ ಶತಸಾಯಕಾನ್ ।
ತತಾಡ ಕಾರ್ಷ್ಣಿಜಂ ತೈಶ್ಚ ರಥಸ್ಥಂ ದರ್ಶಯನ್ಬಲಂ ॥ ೩೦ ॥

ತೈರ್ಬಾಣೈಃ ಸರಥಃ ಸೋಽಪಿ ಸಸೂತಃ ಸತುರಂಗಮಃ ।
ವಿಭ್ರಮನ್ನಭ್ರಮಾರ್ಗೇಣ ಪಪಾತ ಕಪಿಲಾಶ್ರಮೇ ॥ ೩೧ ॥

---

೨೮. ಎನ್ನಲು ಅನಿರುದ್ಧನು ಅವನನ್ನು ಕುರಿತು, ಎಲೈ ದೈತ್ಯಪುತ್ರನೇ, ನೀನಿನ್ನೂ ಹುಡುಗನು. ಪಾಪ, ನಿನ್ನೊಡನೆ ಯುದ್ಧವೆಂದರೇನು? ಆದ್ದರಿಂದ ಮನೆಗೆ ಹೋಗಿ ಆಟವನ್ನು ಆಡಿಕೊಂಡು ಕಾಲಕಳೆ. ಇಲ್ಲೇನು ಕೆಲಸ? ಎಂದನು.

೨೯. ಅದಕ್ಕೆ ರಾಜಪುತ್ರನು ಹೌದು ನಾನು ಬಾಲಕ. ಆದರೆ ನಾನಾಟ ವಾಡುವುದು ಮಹಾವೀರರಾದವರೊಡನೆ. ಮನೆಯಲ್ಲಿ ಆಡವಾಡಬಲ್ಲೆ. ಆದರೆ ಅಲ್ಲಿ ಅದನ್ನು ನೋಡುವರಾರು? ಆದುದರಿಂದ ಈಗ ನನ್ನ ಕ್ರೀಡೆಯನ್ನು ಇಲ್ಲಿ ನೋಡು.

೩೦. ಹೀಗೆಂದು ಹೇಳಿ ಆ ಕುನಂದನನು ನೂರು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ರಥದಲ್ಲಿ ಕುಳಿತಿರುವ ಅನಿರುದ್ಧನನ್ನು ಬಲವಾಗಿ ಹೊಡೆದನು.

೩೧. ಆ ಬಾಣಗಳ ಏಟಿನಿಂದ ಅನಿರುದ್ಧನು ಕುಳಿತಿದ್ದ ರಥವು, ಸಾರಥಿ, ಕುದುರೆ ಇವುಗಳ ಸಹಿತವಾಗಿ ಅಂತರಿಕ್ಷಕ್ಕೆ ಹಾರಿತು. ಅಲ್ಲಿ ಗರಗರನೆ ತಿರುಗುತ್ತಾ ಕೊನೆಗೆ ಕಪಿಲಾಶ್ರಮದಲ್ಲಿ ಹೋಗಿ ಬಿದ್ದಿತು.

ಹಾಹಾಕಾರಸ್ತದೈವಾಸೀದನಿರುದ್ಧೇ ಗತೇ ಸತಿ ।
ತತಃ ಕ್ರುದ್ಧಾಶ್ಚ ತಂ ಹಂತುಂ ಸಾಂಬಾದ್ಯಾ ಆಯಯುರ್ನೃಥೇ ॥ ೩೨ ॥

ಆಗತಾಂಸ್ತಾನ್ಬಹೂನ್ ದೃಷ್ಟ್ವಾ ಯುವರಾಜಃ ಪ್ರಹರ್ಷಿತಃ ।
ಸಾಂಬಂ ಚ ದಶಭಿರ್ಬಾಣೈಃ ಪಂಚಭಿಶ್ಚ ಮಧುಂ ತಥಾ ॥ ೩೩ ॥

ಬೃಹದ್ಬಾಹುಂ ತ್ರಿಭಿರ್ಬಾಣೈಶ್ಚಿತ್ರಭಾನುಂ ಚ ಪಂಚಭಿಃ ।
ವೃಕಂ ಚ ದಶಭಿರ್ಯುದ್ಧೇ ಸಪ್ತಭಿಶ್ಚಾರುಣಂ ಶರೈಃ ॥ ೩೪ ॥

ಪಂಚಭಿಃ ಸಂಗ್ರಾಮಜಿತಂ ಸುಮಿತ್ರಂ ಚ ತ್ರಿಭಿಶ್ಶರೈಃ ।
ದೀಪ್ತಿಮಂತಂ ತ್ರಿಭಿರ್ಬಾಣೈರ್ಭಾನುಂ ಚ ದಶಭಿರ್ಮೃಧೇ ॥ ೩೫ ॥

---

೩೨. ಅನಿರುದ್ಧನು ರಥದೊಡನೆ ಹೊರಟುಹೋಗಲು ಯಾದವ ಯೋಧರೆಲ್ಲರೂ ಹಾಹಾಕಾರಮಾಡಿದರು. ಅನಂತರ ಸಾಂಬನೇ ಮೊದಲಾದವರು ಕೋಪಗೊಂಡು ಆ ಕುನಂದನನ್ನು ಕೊಲ್ಲಲು ಮುಂದುವರೆದರು.

೩೩. ಹೀಗೆ ತನ್ನನ್ನು ಕೊಲ್ಲಲು ಯಾದವ ಪ್ರಮುಖರೆಲ್ಲರೂ ಬರುತ್ತಿರಲು ರಾಜಕುವರನು ಹತ್ತು ಬಾಣಗಳಿಂದ ಸಾಂಬನನ್ನೂ ಐದು ಬಾಣಗಳಿಂದ ಮಧುವನ್ನೂ ಹೊಡೆದನು.

೩೪–೩೫. ಮೂರು ಬಾಣಗಳಿಂದ ಬೃಹದ್ಬಾಹುವನ್ನೂ, ಐದು ಬಾಣಗಳಿಂದ ಚಿತ್ರಭಾನುವನ್ನೂ, ಹತ್ತು ಬಾಣಗಳಿಂದ ವೃಕನನ್ನೂ, ಏಳು ಬಾಣಗಳಿಂದ ಅರುಣನನ್ನೂ, ಐದು ಬಾಣಗಳಿಂದ ಸಂಗ್ರಾಮಜಿತನೆಂಬುವನನ್ನೂ, ಮೂರು ಬಾಣಗಳಿಂದ ಸುಮಿತ್ರನನ್ನೂ, ಮೂರು ಬಾಣಗಳಿಂದ ದೀಪ್ತಿಮಂತನನ್ನೂ ಐದು ಬಾಣಗಳಿಂದ ಭಾನುವನ್ನೂ ಹೊಡೆದನು.

ವೇದಬಾಹುಂ ಷಂಚಭಿಶ್ಚ ಪುಷ್ಕರಂ ಸಪ್ತಭಿಃ ಶರೈಃ ।
ಅಷ್ಟಭಿಃ ಶ್ರುತದೇವಂ ಚ ಸಮ್ಮುಖಸ್ಥಂ ಸುನಂದನಂ ॥ ೩೬ ॥

ವಿಂಶಭಿಸ್ಸಾಯಕೈಸ್ತೀಕ್ಷ್ಣೈರ್ವಿರೂಪಂ ದಶಭಿಸ್ತಥಾ ।
ಚಿತ್ರಬಾಹುಂ ಚ ನವಭಿರ್ನ್ಯಗ್ರೋಧಂ ದಶಭಿಃ ಶರೈಃ ॥ ೩೭ ॥

ಕವಿಂ ಚ ನವಭಿರ್ಬಾಣೈಸ್ತತಾಡ ಪ್ರಧನೇ ಬಲೀ ।
ಶಂಖಂ ದಧ್ಮೌ ಮುದಾ ಯುಕ್ತೋ ನದನ್ಮಾನೀ ಕುನಂದನಃ ॥ ೩೮ ॥

ತದ್ಬಾಣೈರ್ನಿರ್ಭ್ರಮಂತಶ್ಚ ಸರಥಾಃ ಸತುರಂಗಮಾಃ ।
ಪೇತುಃ ಕೇಚಿದ್ಯೋಜನೇ ಚ ಪಂಚಕ್ರೋಶೇ ದ್ವಿಯೋಜನೇ ॥ ೩೯ ॥

ಹಾಹಾಕಾರೇ ತದಾ ಜಾತೇ ಸೇನಾಯಾಂ ನೃಪಸತ್ತಮ ।
ರುರುದುರ್ಯಾದವಾಸ್ಸರ್ವೇ ರಾಮಕೃಷ್ಣೇತಿ ವಾದಿನಃ ॥ ೪೦ ॥

೩೬–೩೭. ಐದು ಬಾಣಗಳಿಂದ ವೇದಬಾಹುವನ್ನೂ, ಏಳು ಬಾಣಗಳಿಂದ ಪುಷ್ಕರನನ್ನೂ, ಎಂಟು ಬಾಣಗಳಿಂದ ಶ್ರುತದೇವನನ್ನೂ, ಎದುರಿಗಿರುವ ಸುನಂದನನ್ನೂ ಇಪ್ಪತ್ತು ಬಾಣಗಳಿಂದಲೂ, ವಿರೂಪನನ್ನು ಹತ್ತು ಬಾಣಗಳಿಂದಲೂ ಚಿತ್ರಬಾಹುವನ್ನು ಒಂಭತ್ತು ಬಾಣಗಳಿಂದಲೂ, ಹತ್ತು ಬಾಣಗಳಿಂದ ನ್ಯಗ್ರೋಧನನ್ನೂ ಹೊಡೆದನು.

೩೮. ಕವಿಯನ್ನು ಒಂಭತ್ತು ಬಾಣಗಳಿಂದ ಹೊಡೆದು ಶಂಖವನ್ನು ಊದುತ್ತಾ ಆನಂದದಿಂದ ಕೂಡಿ ಕೂಗುತ್ತಾ ಓಡಾಡಿದನು.

೩೯. ಅವನ ಬಾಣಗಳ ಏಟಿನಿಂದ ರಥಗಳು ಗರಗರನೆ ತಿರುಗುತ್ತಾ ಮುರಿದುಬಿದ್ದವು. ಕುದುರೆಗಳು ಸತ್ತುಹೋದವು. ಅನೇಕ ಯೋಧರು ಒಂದು ಯೋಜನದ ದೂರದಲ್ಲಿ ಹೋಗಿ ಬಿದ್ದರು. ಮತ್ತೆ ಕೆಲವರು ಐದು ಕ್ರೋಶ ದೂರದಲ್ಲೂ, ಇನ್ನೂ ಕೆಲವರು ಎರಡು ಯೋಜನದ ದೂರದಲ್ಲೂ ಹೋಗಿ ಬಿದ್ದರು.

೪೦. ಸೈನ್ಯದಲ್ಲೆಲ್ಲಾ ಹಾಹಾಕಾರವೆದ್ದಿತು. ಯಾದವರು ಗೋಳಾಡಿದರು. ರಾಮ, ಕೃಷ್ಣ ಎಂದು ಹೇಳುತ್ತಾ ಓಡಲು ಪ್ರಾರಂಭಿಸಿದರು.

ತದಾ ಗದಾದಯಸ್ಸರ್ವೇ ಮುಂಚಂತೋ ನಿಶಿತಾನ್ ಶರಾನ್ ।
ಇಂದ್ರನೀಲಾದಯಶ್ಚೈವ ಹ್ಯಾಜಗ್ಮುಃ ಕ್ರೋಧಪೂರಿತಾಃ ॥ ೪೧ ॥

ದೃಷ್ಟ್ವಾ ಸಮಾಗತಾನ್ವೀರಾನ್ರಾಜಪುತ್ರೋ ಮಹಾಬಲಃ ।
ವಿವ್ಯಾಧ ಸಾಯಕೈಃ ಸರ್ವೇ ಹ್ಯಭೂವನ್ಮೂರ್ಛಿತಾ ರಣೇ ॥ ೪೨ ॥

ತತ್ಪಶ್ಚಾದ್ಯಾದವಾನ್ಶೂರಾನ್ ಬಾಣೌಘೈರ್ಬಲ್ವಲಾತ್ಮಜಃ ।
ತತಾಡ ತಚ್ಛರೈ ರಾಜನ್ಬಹವಃ ಪಂಚತಾಂ ಗತಾಃ ॥ ೪೩ ॥

ಸಂಗ್ರಾಮೇ ತಸ್ಯ ಬಾಣೌಘೈ ರುಧಿರಾಣಾಂ ನದೀ ಹ್ಯಭೂತ್ ।
ಹಸ್ತಿನೋ ಯತ್ರ ಮಗ್ನಾಶ್ಚ ಸಜೀವಾಸ್ತೇ ಮ್ರಿಯಂತಿ ಚ ॥ ೪೪ ॥

---

೪೧. ಆಗ ಗದನೇ ಮುಂತಾದ ವೀರರು ಜಾಗ್ರತೆಯಾಗಿ ಬಂದು ತೀಕ್ಷ್ಣವಾದ ಬಾಣಗಳನ್ನು ರಾಜಕುಮಾರನ ಮೇಲೆ ಪ್ರಯೋಗಿಸಿದರು. ಅವರಿಗೆ ಸಹಾಯಕರಾಗಿ ಇಂದ್ರನೀಲನೇ ಮೊದಲಾದವರು ಅತಿ ಕೋಪದಿಂದ ಅಲ್ಲಿಗೆ ಬಂದರು.

೪೨. ಅದನ್ನು ನೋಡಿ ಮಹಾಬಲಶಾಲಿಯಾದ ರಾಜಕುಮಾರನು ನಿಶಿತವಾದ ಬಾಣಗಳಿಂದ ಅವರನ್ನು ಹೊಡೆದನು. ಆಗ ಅವರೆಲ್ಲರೂ ಏಟನ್ನು ತಾಳಲಾರದೆ ಕೆಳಗುರುಳಿ ಮೂರ್ಛಿತರಾದರು.

೪೩. ಪುನಃ ರಾಜಕುಮಾರನನ್ನು ಹೊಡೆಯಲು ಬಂದ ಅನೇಕ ಯಾದವ ವೀರರನ್ನು ರಾಜಕುಮಾರನು ಬಾಣಗಳಿಂದ ಹೊಡೆದನು. ಅವರಲ್ಲಿ ಅನೇಕರು ಸತ್ತುಹೋದರು.

೪೪. ಅವನ ಬಾಣಗಳಿಗೆ ಅನೇಕರು ತುತ್ತಾದರು. ಆ ಸಮಯದಲ್ಲಿ ರಣರಂಗದಲ್ಲಿ ರಕ್ತದ ನದಿಯೇ ಹರಿಯಿತು. ಆ ನದಿಯಲ್ಲಿ ದೊಡ್ಡ ದೊಡ್ಡ ಆನೆಗಳೂ ಸಹ ಜೀವಸಹಿತವಾಗಿ ತೇಲಿಹೋದುವು.

ಹಾಹಾಕಾರಸ್ತದೈವಾಸೀತ್ಸೇನಾಯೊಂ ಚ ನಭಃಸ್ಥಲೇ ।
ಮಹೇಂದ್ರವರುಣಾದ್ಯಾಶ್ಚ ಭಯಂ ಪ್ರಾಪುಶ್ಚ ವಿಸ್ಮಿತಾಃ ॥ ೪೫ ॥

ಜಯಂ ದೃಷ್ಟ್ವಾಸುರಾಃ ಸರ್ವೇ ಬಭೂವುರ್ಮುದಿತಾನನಾಃ ।

॥ ಗರ್ಗ ಉವಾಚ ॥

ಅಥ ವೈ ಮೂರ್ಛಿತಂ ದೃಷ್ಟ್ವಾನಿರುದ್ಧಂ ಕಪಿಲೋ ಮುನಿಃ ॥ ೪೬ ॥

ಹತಯಾನಂ ನಿಪತಿತಂ ಶರನಿರ್ಭಿನ್ನವಕ್ಷಸಂ ।
ಚಕಾರ ತಂ ತು ಚೈತನ್ಯಂ ಹಸ್ತೇನ ತಪಸಾ ನೃಪ ॥ ೪೭ ॥

ತತಸ್ಸೋಽಪಿ ಸಮುತ್ಥಾಯ ಸಿದ್ಧಂ ಸತ್ವಾ ಯದೂತ್ತಮಃ ।
ಸೇತುಮಾರ್ಗೇಣಾಜಗಾಮ ಯದೂನ್ಸರ್ವಾನ್ಪ್ರಹರ್ಷಯನ್ ॥ ೪೮ ॥

ಅಥಾನ್ಯಂ ರಥಮಾರುಹ್ಯ ಪ್ರತಿಶಾರ್ಙ್ಗಧರೋ ಬಲೀ ।
ನಿಚಖಾನ ಶರಂ ಚೈಕಂ ರಾಜಪುತ್ರರಥೇ ರುಷಾ ॥ ೪೯ ॥

---

೪೫. ಸೈನಿಕರೆಲ್ಲರೂ ಹಾಹಾಕಾರ ಮಾಡಿದರು. ಅಂತರಿಕ್ಷದಲ್ಲಿ ಯುದ್ಧವನ್ನು ನೋಡಲು ನೆರದಿದ್ದ ದೇವತೆಗಳೂ ಹಾಹಾಕಾರಮಾಡಿದರು. ಇಂದ್ರ, ವರುಣ ಮುಂತಾದವರು ಹೆದರಿದರು. ಹಾಗೂ ಆಶ್ಚರ್ಯಗೊಂಡರು. ತಮಗೆ ಜಯವಾದುದಕ್ಕೆ ರಾಕ್ಷಸರೆಲ್ಲರೂ ಆನಂದಪಟ್ಟರು.

೪೬–೪೭. ಎಲೈ ವಜ್ರನಾಭಿಯೇ, ಅನಿರುದ್ಧನ ವಿಷಯವನ್ನು ಕೇಳು. ಕಪಿಲಾಶ್ರಮದಲ್ಲಿ ಬಿದ್ದ ಅನಿರುದ್ಧನು ಮೂರ್ಛಿತನಾದನು. ಅವನ ರಥವು ಚೂರುಚೂರಾಗಿತ್ತು. ಅವನ ಎದೆಯು ಬಾಣದ ಏಟಿನಿಂದ ಬಹಳ ಗಾಯವಾಗಿತ್ತು. ಅದನ್ನು ನೋಡಿ ಕಪಿಲಮುನಿಯು ಶೈತ್ಯೋಪಚಾರಮಾಡಿದನು.

೪೮. ಆಗವನಿಗೆ ಎಚ್ಚರವಾಯಿತು. ಎದುರಿಗೆ ನಿಂತಿರುವ ಕಪಿಲಮಹರ್ಷಿಯನ್ನು ನಮಸ್ಕರಿಸಿ ಅವನನುಗ್ರಹವನ್ನು ಪಡೆದು ಸೇತುವೆಯ ಮಾರ್ಗವಾಗಿ ಪುನಃ ಬಂದನು. ಯಾದವರೆಲ್ಲರೂ ಅವನನ್ನು ನೋಡಿ ಸಂತೋಷಗೊಂಡರು.

೪೯. ಅನಿರುದ್ಧನು ಜಾಗ್ರತೆಯಾಗಿ ಬೇರೊಂದು ರಥವನ್ನೇರಿದನು. ಪ್ರತಿಶಾರ್ಙ್ಗವೆಂಬ ಧನುಸ್ಸನ್ನು ತೆಗೆದುಕೊಂಡು ಅದರಲ್ಲಿ ಬಾಣವನ್ನನುಸಂಧಾನ ಮಾಡಿ ರಾಜಪುತ್ರನ ರಥಕ್ಕೆ ಹೊಡೆದನು.

ಸ ಶರಸ್ತದ್ರಥಂ ನೀತ್ವಾ ಸಸೂತಂ ಸತುರಂಗಮಂ ।
ಚತುರ್ಮುಹೂರ್ತಪರ್ಯಂತಂ ಭ್ರಾಮಯಾಮಾಸ ಹ್ಯಂಬರೇ ॥ ೩೦ ॥

ತತಶ್ಚ ದದೃಶುಸ್ಸರ್ವೇ ದಾನವಾಶ್ಚೈವ ವೃಷ್ಣಯಃ ।
ಗಗನೇ ವಿಭ್ರಮಂತಂ ವೈ ಸರಥಂ ಚ ಕುಸಂದನಂ ॥ ೩೧ ॥

ಅಥ ಸಾಂಬಾದಯೋ ವೀರಾ ರಥಾನಾರುಹ್ಯ ವೇಗತಃ ।
ಅನುಶಾಲ್ವಾದಯಶ್ಚೈವಾಽಽಜಗ್ಮುಃ ಸರ್ವೇ ಧನುರ್ಧರಾಃ ॥ ೩೨ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ದೈತ್ಯಯಾದವಯುದ್ಧ
ವರ್ಣನಂ ನಾಮ ಚತುಸ್ತ್ರಿಂಶೋಽಧ್ಯಾಯಃ

---

೩೦. ಆ ಬಾಣವು ರಾಜಕುಮಾರನನ್ನು, ರಥ, ಸಾರಥಿ, ಕುದುರೆಗಳ ಸಮೇತವಾಗಿ ಆಕಾಶಕ್ಕೆ ಹಾರಿಸಿ ಅಲ್ಲಿ ನಾಲ್ಕು ಮುಹೂರ್ತಗಳವರೆಗೂ ಸುತ್ತಾಡಿಸಿತು.

೩೧. ದಾನವರೂ, ಯಾದವರೂ ಸಹ ಗಗನದಲ್ಲಿ ಸುತ್ತಾಡುತ್ತಿರುವ ರಾಜಕುಮಾರನಾದ ಕುನಂದನನ್ನು ನೋಡಿದರು.

೩೨. ಆಗ ಸಾಂಬನೇ ಮೊದಲಾದ ಶ್ರೀಕೃಷ್ಣನ ಪುತ್ರರೂ, ಅನುಶಾಲ್ವನೇ ಮೊದಲಾದ ವೀರರೂ ಬೇರೆ ಬೇರೆ ರಥಗಳನ್ನು ಏರಿ ಧನುರ್ಧರರಾಗಿ ಕೋಪದಿಂದ ಆ ರಣಾಂಗಣಕ್ಕೆ ಬಂದು ಸೇರಿದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲ ದೈತ್ಯ ಯಾದವ
ಯುದ್ಧವರ್ಣನೆ ಎಂಬ ಮೂವತ್ತನಾಲ್ಕನೆಯ ಅಧ್ಯಾಯವು
ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯ ಸಂಹಿತಾಯಾಂ

ಅಶ್ವಮೇಧಖಂಡೇ

ಪಂಚತ್ರಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಅಥ ವೈ ತತ್ರ ಸಂಗ್ರಾಮೇಽನುಶಾಲ್ವೋ ದುರ್ಮುಖೇನ ಚ ।
ಯುಯುಧೇ ಚೇಂದ್ರನೀಲಸ್ತು ದುರ್ನೇತ್ರೇಣ ದುರಾತ್ಮನಾ ॥ ೧ ॥

ಹೇಮಾಂಗದೋ ದುರ್ಮದೇನ ದುಸ್ಸ್ವಭಾವೇನ ಸಾರಣಃ ।
ಏವಂ ಪರಸ್ಪರಂ ಯುದ್ಧಂ ಬಭೂವ ರಣಮಂಡಲೇ ॥ ೨ ॥

ಸಾರಣೋ ಗದಯಾ ದೈತ್ಯಂ ಮಾರಯಾಮಾಸ ವೇಗತಃ ।
ಹೇಮಾಂಗದಸ್ತ್ರಿಭಿರ್ಬಾಣೈಸ್ತತಾಡ ದುರ್ಮದಂ ಮೃಧೇ ॥ ೩ ॥

ಮೂವತ್ತೈದನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ ಕೇಳು. ಪುನಃ ಯುದ್ಧವು ಪ್ರಾರಂಭವಾಯಿತು. ಅನುಶಾಲ್ವನು ದುರ್ಮುಖನೆಂಬುವನೊಡನೆಯೂ ಇಂದ್ರನೀಲನು ದುರ್ನೇತ್ರನೊಡನೆಯೂ ಹೋರಾಡಿದರು.

೨. ಹೇಮಾಂಗದನು ದುರ್ಮದನೆಂಬುವನೊಡನೆಯೂ ಸಾರಣನು ದುಸ್ವಭಾವನೊಡನೆಯೂ ಘೋರಯುದ್ಧಮಾಡಿದರು.

೩. ಸಾರಣನು ಗದೆಯಿಂದ ದುಸ್ವಭಾವನನ್ನು ಹೊಡೆದನು. ಹೇಮಾಂಗದನು ಮೂರು ಬಾಣಗಳಿಂದ ದುರ್ಮದನನ್ನು ಹೊಡೆದು ನೋಯಿಸಿದನು.

ಸ ಸ್ವಬಾಣೈರ್ವ್ಯರ್ಥೇ ತಂ ತು ಸೋಽಪಿ ಶಕ್ತ್ಯಾ ಜಘಾನ ತಂ ।
ಇಂದ್ರನೀಲಶ್ಚ ದುರ್ನೇತ್ರಂ ಜಘಾನ ಲೀಲಯಾ ಶರೈಃ ॥ ೪ ॥

ದುರ್ಮುಖಂ ಚಾನುಶಾಲ್ವೋ ವೈ ಚಕಾರ ವಿರಥಂ ಶರೈಃ ।
ಸ ಚಾನ್ಯಂ ರಥಮಾರುಹ್ಯ ಚಕ್ರೇ ತಂ ವಿರಥಂ ಶರೈಃ ॥ ೫ ॥

ಪರಿಘೇಣಾನುಶಾಲ್ವಸ್ತು ಜಘಾನ ದುರ್ಮುಖಂ ಮೃಧೇ ।
ದುರ್ನೇತ್ರೇ ದುಃಸ್ವಭಾವೇ ಚ ದುರ್ಮುಖೇ ದುರ್ಮದೇ ಹತೇ ॥ ೬ ॥

ಅವಶೇಷಾ ದುದ್ರುವುರ್ವೈ ದೈತ್ಯಾಃ ಪ್ರಾಣಪರೀಪ್ಸಯಾ ।
ತತಃ ಪಪಾತ ಚಾಕಾಶಾದ್ರಾಜಪುತ್ರಶ್ಚ ವಿಭ್ರಮನ್ ॥ ೭ ॥

ಮೂರ್ಛಿತೋಽಭೂದ್ರಣೇ ರಾಜನ್ನುದ್ವಮನ್ರುಧಿರಂ ಮುಖಾತ್ ।
ರಥಶ್ಚಾಂಗಾರವತ್ತಸ್ಯ ಭಗ್ನೋಽಭೂತ್ತುರಗಾ ಹತಾಃ ॥ ೮ ॥

---

೪. ದುರ್ಮದನು ಬಾಣಗಳಿಂದ ಹೇಮಾಂಗದನನ್ನು ಹೊಡೆದನು. ಇಂದ್ರನೀಲನು ದುರ್ನೇತ್ರನೆಂಬ ಅಸುರನನ್ನು ಬಾಣಗಳಿಂದ ಅನಾಯಾಸವಾಗಿ ಹೊಡೆದನು.

೫. ಅನುಶಾಲ್ವನು ದುರ್ಮುಖನನ್ನು ಬಾಣದಿಂದ ಹೊಡೆದು ಅವನ ರಥವನ್ನು ಪುಡಿಪುಡಿಮಾಡಿದನು. ದುರ್ಮುಖನು ಮತ್ತೊಂದು ರಥವನ್ನೇರಿ ಅನುಶಾಲ್ವನನ್ನು ಹೊಡೆದನು. ಮತ್ತು ಅವನ ರಥವನ್ನು ಚೂರುಮಾಡಿದನು.

೬-೭. ಅನುಶಾಲ್ವನು ಪರಿಘಾಯುಧದಿಂದ ದುರ್ಮುಖನನ್ನು ಹೊಡೆದನು. ಆ ಯುದ್ಧದಲ್ಲಿ ದುರ್ನೇತ್ರ, ದುಃಸ್ವಭಾವ, ದುರ್ಮುಖ, ದುರ್ಮದ ಮುಂತಾದುವರೆಲ್ಲರೂ ಸತ್ತುಹೋದರು. ಉಳಿದವರೆಲ್ಲರೂ ಪ್ರಾಣದ ಮೇಲಿನ ಆಸೆಯಿಂದ ಓಡಿಹೋದರು. ಅಷ್ಟು ಹೊತ್ತಿಗೆ ಆಕಾಶದಲ್ಲಿ ತಿರುಗುತ್ತಿದ್ದ ರಾಜಕುಮಾರನು ಕೆಳಕ್ಕೆ ಬಿದ್ದನು.

೮. ಬಾಯಿಂದ ರಕ್ತವನ್ನು ಕಾರುತ್ತಾ ಮೂರ್ಛಿತನಾಗಿ ಬಿದ್ದನು. ಅವನ ರಥವು ಸುಟ್ಟು ಬೂದಿಯಾಯಿತು. ಕುದುರೆಗಳೆಲ್ಲಾ ಸತ್ತವು.

ತತಶ್ಚ ಬಲ್ವಲಃ ಕ್ರುದ್ಧೋ ಪುತ್ರಂ ದೃಷ್ಟ್ವಾ ಚ ಮೂರ್ಛಿತಂ ।
ಮುಮೋಚ ಧನುಷಾ ಬಾಣಾನನಿರುದ್ಧಾಯ ವೇಗತಃ ॥ ೯ ॥

ತಾನಾಗತಾನ್ ದಶಶರಾನ್ ದೃಷ್ಟ್ವಾ ರುಕ್ಮವತೀಸುತಃ ।
ಸ್ವಬಾಣೈಸ್ತೀಕ್ಷ್ಣಧಾರೈಶ್ಚ ಚಿಚ್ಛೇದ ಸ್ವರ್ಣಭೂಷಿತೈಃ ॥ ೧೦ ॥

ತತೋ ದೈತ್ಯೋ ರುಷಾವಿಷ್ಟಶ್ಚಾಪೇ ಧೃತ್ವಾ ಪುನಃ ಶರಂ ।
ಉವಾಚ ಮಾಧವಂ ಯುದ್ಧೇ ಪ್ರದ್ಯುಮ್ನಂ ಶಕುನಿರ್ಯಥಾ ॥ ೧೧ ॥

॥ ಬಲ್ವಲ ಉವಾಚ ॥

ಅನೇನ ಬಾಣೇನ ಯದುಪ್ರವೀರ
ಧನುರ್ಧರಂ ತ್ವಾಂ ರಣಮಾನಿನಂ ಚ ।
ಮೃಧೇ ಹನಿಷ್ಯೇ ನ ವದಾಮ್ಯಸತ್ಯಂ
ರಕ್ಷಸ್ವ ಪ್ರಾಣಾನ್ಯದಿ ಜೀವಿತೇಚ್ಛಾ ॥ ೧೨ ॥

---

೯. ತನ್ನ ಮಗನು ಮೂರ್ಛೆ ಬಿದ್ದಿರುವುದನ್ನು ನೋಡಿ ಬಲ್ವಲನು ಅತಿ ದುಃಖಗೊಂಡನು. ಕೋಪವು ಜಾಸ್ತಿಯಾಯಿತು. ಆಗ ಧನುಸ್ಸಿನಲ್ಲಿ ಬಾಣಗಳನ್ನು ಹೂಡಿ ಅನಿರುದ್ಧನಿಗೆ ಹೊಡೆದನು.

೧೦. ಆಗ ಅನಿರುದ್ಧನು ಚಿನ್ನದ ಕಟ್ಟನ್ನು ಹಾಕಿ ಮನೋಹರವಾಗಿರುವ ನಿಶಿತವಾದ ಬಾಣಗಳಿಂದ ಆ ಹತ್ತುಬಾಣಗಳನ್ನು ಚೂರು ಮಾಡಿದನು.

೧೧. ಪುನಃ ಬಲ್ವಲನು ಮತ್ತೊಂದು ಬಾಣವನ್ನು ಧನುಸ್ಸಿನಲ್ಲಿ ಹೂಡಿ ಸಿದ್ಧನಾಗಿ ಅನಿರುದ್ಧನನ್ನು ಕುರಿತು ಶಕುನಿಯು ಹಿಂದೆ ಪ್ರದ್ಯುಮ್ನನನ್ನು ಕುರಿತು ಹೇಳಿದಂತೆ ಹೇಳಿದನು.

೧೨. ಎಲೈ ಯದುಶ್ರೇಷ್ಠನೇ, ನೀನು ಒಳ್ಳೆಯ ಬಿಲ್ಗಾರನು. ಯುದ್ಧ ವೀರನು. ಆದರೇನು? ಈಗ ನಾನು ಈ ಬಾಣದಿಂದ ನಿನ್ನನ್ನು ಖಂಡಿತ ಕೊಲ್ಲುವೆನು. ಸುಳ್ಳನ್ನಾಡುವುದಿಲ್ಲ. ಪ್ರಾಣದ ಮೇಲೆ ಆಸೆ ಇದ್ದರೆ ನಿನ್ನನ್ನು ರಕ್ಷಿಸಿಕೋ.

ಸೋಽಪಿ ಶ್ರುತ್ವಾ ಸ್ವಕೋದಂಡೇ ಶರಮೇಕಂ ನಿಧಾಯ ಚ ।
ಪ್ರತ್ಯಾಹ ಪ್ರಹಸನ್ವಾಕ್ಯಂ ಪ್ರದ್ಯುಮ್ನಃ ಶಕುನಿಂ ಯಥಾ ॥ ೧೩ ॥

॥ ಅನಿರುದ್ಧ ಉವಾಚ ॥

ಕಃ ಕೇನ ಹನ್ಯತೇ ಜಂತುಸ್ತಥಾ ಕಃ ಕೇನ ರಕ್ಷ್ಯತೇ ।
ಹನಿಷ್ಯತಿ ಸದಾ ಕಾಲಸ್ತಥಾ ರಕ್ಷತಿ ದುಃಖತಃ ॥ ೧೪ ॥

ಅಹಂ ಕರೋಮಿ ಕರ್ತಾಹಂ ಹರ್ತಾಹಂ ಪಾಲಕೋಽಪ್ಯಹಂ ।
ಯೋ ವದೇಚ್ಚೇದೃಶಂ ವಾಕ್ಯಂ ಸ ವಿನಶ್ಯತಿ ಕಾಲತಃ ॥ ೧೫ ॥

ನಾಹಂ ತ್ವಾಂ ತು ವಿಜೇಷ್ಯಾಮಿ ನ ವಿಜೇಷ್ಯಸಿ ತ್ವಂ ತು ಮಾಂ ।
ತ್ವಾಂ ಮಾಂ ಜೇಷ್ಯತಿ ವಿಶ್ವಾತ್ಮಾ ಕಾಲರೂಪೀ ಜಗತ್ಪತಿಃ ॥ ೧೬ ॥

---

೧೩. ಎಂದು ಹೇಳಲು ಅನಿರುದ್ಧನೂ ತನ್ನ ಧನುಸ್ಸಿನಲ್ಲಿ ಒಂದು ಬಾಣವನ್ನು ಹೂಡಿ ಸಿದ್ಧನಾಗಿ ನಗುತ್ತಾ ಆ ಬಲ್ವಲನನ್ನು ಕುರಿತು ಹಿಂದೆ ಪ್ರದ್ಯುಮ್ನನು ಶಕುನಿಯನ್ನು ಕುರಿತು ಹೇಳಿದಂತೆ ಹೇಳಿದನು.

೧೪. ಬಲ್ವಲನೇ, ಯಾರು ಯಾರನ್ನು ಕೊಲ್ಲುವರು ? ಯಾರು ರಕ್ಷಿಸುವರು ? ರಕ್ಷಿಸುವುದೂ, ಕೊಲ್ಲುವುದೂ ಎಲ್ಲವೂ ಸಹ ಆ ಕಾಲಕ್ಕೆ ಸೇರಿದುದು. ದುಃಖವನ್ನುಂಟುಮಾಡುವುದೂ, ಅದನ್ನು ಹೋಗಲಾಡಿಸುವುದೂ ಕಾಲವೇನೆ.

೧೫. ಯಾವನು ನಾನು ಮಾಡುವೆನು. ನಾನೇ ಸ್ವಾಮಿಯು. ನಾನು ಕೊಲ್ಲುವೆನು. ನಾನೇ ಕಾಪಾಡುವವನು. ಎಂದು ತಿಳಿದು ಮೋಹಪಡುವನೋ ಅವನು ಕಾಲದ ಮಹಿಮೆಯಿಂದ ನಾಶವಾಗುವನು.

೧೬. ನಾನು ನಿನ್ನನ್ನು ಜಯಿಸಲಾರೆನು. ನೀನಾಗಲೀ ನನ್ನನ್ನು ಜಯಿಸಲಾರೆ. ನಮ್ಮಿಬ್ಬರನ್ನು ಜಯಿಸುವವನು ಮತ್ತೊಬ್ಬನಿರುವನು. ಅವನೇ ಜಗತ್ಸ್ವಾಮಿಯೂ, ಕಾಲಸ್ವರೂಪನೂ ಆದ ಪರಮಾತ್ಮನು.

ನ ಜಾನೇ ಕಸ್ಯ ಕುರುತೇ ಜಯಂ ವಾ ಚ ಪರಾಜಯಂ ।
ಕಾಲಸ್ತಂ ಮನಸಾ ವಂದೇ ವಿಜಯಾರ್ಥೇ ಚ ದಾನವ ॥ ೧೭ ॥

ತಸ್ಮಾದವೇಹಿ ಮನಸಾ ಕಾಲಂ ಹಿ ಬಲಿನಾಂ ವರಂ ।
ಮದ್ವಾಕ್ಯಾಚ್ಚ ಮಹಾಜ್ಞಾನಂ ವಿಹಾಯ ತ್ವಂ ರಣಂ ಕುರು ॥ ೧೮ ॥

ಇತಿ ತಸ್ಯ ವಚಃ ಶ್ರುತ್ವಾ ಬಲ್ವಲೋ ವಿಸ್ಮಯಾನ್ವಿತಃ ।
ತಮಾಹ ತೋಷಿತಃ ಪ್ರೀತೋ ಯಥಾ ತ್ವಾಷ್ಟ್ರೋ ಮರುತ್ಪತಿಂ ॥ ೧೯ ॥

॥ ಬಲ್ವಲ ಉವಾಚ ॥

ಕರ್ಮ ಪ್ರಧಾನಂ ಭೂಮಧ್ಯೇ ಕರ್ಮೈವ ಗುರುರೀಶ್ವರಃ ।
ಉಚ್ಚಾವಚತ್ವಂ ಭವತಿ ಕರ್ಮಣಾ ವೈ ಯದೂತ್ತಮ ॥ ೨೦ ॥

---

೧೭. ಯಾರು ಜಯಶಾಲಿಗಳಾಗುವರೋ, ಯಾರಿಗೆ ಪರಾಜಯವಾಗುತ್ತದೆಯೋ ಕಂಡವರಾರು? ಆದುದರಿಂದ ಜಯಾಪರಾಜಯಗಳಿಗೆ ಕಾರಣವಾದ ಕಾಲವನ್ನು ಜಯವುಂಟಾಗುವುದಕ್ಕೋಸ್ಕರವಾಗಿ ನಮಸ್ಕರಿಸುವೆನು.

೧೮. ಎಲೈ ರಾಕ್ಷಸನೇ, ಬಲಶಾಲಿಗಳಲ್ಲಿ ಶ್ರೇಷ್ಠವಾದುದು ಕಾಲವೆಂದು ತಿಳಿ. ನನ್ನ ಮಾತನ್ನು ಚೆನ್ನಾಗಿ ತಿಳಿದುಕೊಂಡು ಅಜ್ಞಾನವನ್ನು ತೊರೆದು ಮೋಹವನ್ನು ದೂರಮಾಡಿ ಯುದ್ಧಕ್ಕೆ ಇಳಿ.

೧೯. ಎಂದು ಹೇಳಲು, ಅದನ್ನು ಕೇಳಿ ಬಲ್ವಲನು ಆಶ್ಚರ್ಯಪಟ್ಟನು. ಅನಂತರ ಸಂತೋಷಗೊಂಡು ಅನಿರುದ್ಧನನ್ನು ಕುರಿತು ತ್ವಾಷ್ಟ್ರವು ಇಂದ್ರನನ್ನು ಕುರಿತು ಹೇಳಿದಂತೆ ಹೇಳಿದನು.

೨೦. ಅನಿರುದ್ಧ, ಭೂಮಿಯಲ್ಲಿ ಕರ್ಮವೇ ಪ್ರಧಾನವಾದುದು. ಕರ್ಮವೇ ಗುರುವು. ಅದೇ ಈಶ್ವರನು. ಅದರಿಂದಲೇ ಅನೇಕ ಭೇದಗಳಾಗಿರುವುದು.

ಸಹಸ್ರೇಷು ಗವಾಂ ವತ್ಸೋ ಯಥಾ ವಿಂದತಿ ಮಾತರಂ ।
ತಥಾ ಶುಭಾಶುಭಂ ಯೇನ ಕೃತಂ ತಿಷ್ಠತ್ಸು ಪಶ್ಯತಿ ॥ ೨೧ ॥

ತತೋ ಜೇಷ್ಯಾಮಿ ಸಂಗ್ರಾಮೇ ಭವಂತಂ ದೃಢಕರ್ಮಣಾ ।
ಮಯಾ ಕೃತಶ್ಚ ಶಪಥಃ ಪ್ರತೀಕಾರಂ ಕುರು ತ್ವರಂ ॥ ೨೨ ॥

॥ ಅನಿರುದ್ಧ ಉವಾಚ ॥

ಪ್ರಧಾನಂ ಮನ್ಯಸೇ ಕರ್ಮ ವಿನಾ ಕಾಲೇನ ತತ್ಫಲಂ ।
ನ ವಿದ್ಯತೇ ಯಥಾ ಪಾಕೇ ಕೃತೇ ಸ್ವಾದ್ವಿಷ್ನುತಾ ಕ್ವಚಿತ್ ॥ ೨೩ ॥

ಪಾಕಪ್ರಕಾರೇ ಪಾಕಶ್ಚ ವಿನಾ ಕರ್ತ್ರಾ ನ ಜಾಯತೇ ।
ತಸ್ಮಾದ್ವದಂತಿ ಕರ್ತಾರಂ ಕರ್ಮ ಕಾಲಾತ್ಪರಂ ವರಂ ॥ ೨೪ ॥

---

೨೧. ಒಂದು ಕರುವು ತನ್ನ ತಾಯಿಯು ಸಾವಿರಾರು ಹಸುಗಳ ಮಧ್ಯದಲ್ಲಿದ್ದರೂ ಅದನ್ನೇ ಹೇಗೆ ತಿಳಿದುಕೊಂಡು ಹೋಗುವುದೋ ಹಾಗೆ ಪ್ರತಿಯೊಬ್ಬ ಮನುಷ್ಯನೂ ತಾನು ಮಾಡಿರುವುದು ಶುಭವೇ ಆಗಲೀ ಅಶುಭವೇ ಆಗಲಿ ಅದನ್ನು ಅನುಭವಿಸಿಯೇ ತೀರಬೇಕು.

೨೨. ಆದುದರಿಂದ ನಾನೀಗ ಕರ್ಮವನ್ನನುಸರಿಸಿ ಯುದ್ಧಮಾಡಿ ನಿನ್ನನ್ನು ಕೊಲ್ಲುವೆನು. ನಾನೀರೀತಿ ಪ್ರತಿಜ್ಞೆಮಾಡಿರುವೆನು, ಇದಕ್ಕೆ ಪ್ರತೀಕಾರವನ್ನು ಮಾಡುವದಿದ್ದರೆ ಮಾಡು.

೨೩. ಎನ್ನಲು ಆಗ ಅನಿರುದ್ಧನು ಅವನನ್ನು ಕುರಿತು ಹೇಳಿದನು—ನೀನು ಕರ್ಮವೇ ಪ್ರಧಾನವು ಎಂದು ತಿಳಿದಿರುವೆ. ಆದರೆ ಆ ಕರ್ಮದಿಂದ ಫಲವು ಬರಬೇಕಾದರೆ ಕಾಲವಿಲ್ಲದೆ ಆಗುವುದಿಲ್ಲ. ಕರ್ಮವು ಪಾಕಾವಸ್ಥೆಗೆ ಎಂದರೆ ಫಲವನ್ನು ಕೊಡುವ ಅವಸ್ಥೆಗೆ ಬಂದರೂ ಕಾಲವಿಲ್ಲದಿದ್ದರೆ ಅದಕ್ಕೆ ವಿಘ್ನವು ಬರುತ್ತದೆ.

೨೪. ಪಾಕವಾಗಬೇಕಾದರೆ ಪಾಕವನ್ನು ಮಾಡಲು ಒಬ್ಬನಿರಬೇಕು. ಅವನಿಲ್ಲದೆ ಪಾಕವಾಗುವಂತಿಲ್ಲ. ಆ ಕರ್ತನು ಕರ್ಮಕ್ಕಿಂತಲೂ ಕಾಲಕ್ಕಿಂತಲೂ ಶ್ರೇಷ್ಠನಾದವನು.

ಸ ಕರ್ತಾ ಕೃಷ್ಣಚಂದ್ರಸ್ತು ಗೋಲೋಕೇಶಃ ಪರಾತ್ಪರಃ ।
ಯೇನ ವೈ ನಿರ್ಮಿತಾಸ್ಸರ್ವೇ ಬ್ರಹ್ಮವಿಷ್ಣುಶಿವಾದಯಃ ॥ ೨೫ ॥

॥ ಬಲ್ವಲ ಉವಾಚ ॥

ಶ್ರೀಕೃಷ್ಣಪೌತ್ರ ಧನ್ಯಸ್ತ್ವಮೃಷೀನ್ವಾಕ್ಯೈರ್ವಿಡಂಬಯನ್ ।
ತ್ರಿಭಿರ್ಗುಣೈಃ ಪೃಥಗ್ಭೂತಃ ಸ್ವಭಾವೋ ದುಸ್ತ್ಯಜೋ ನೃಣಾಂ ॥ ೨೬ ॥

ಸಾವಧಾನತಯಾ ಚಾದ್ಯ ಪಶ್ಯ ಪ್ರಾಣಹರಂ ಶರಂ ।
ಸಂಪ್ರಾಪ್ತಂ ಯಾದವಶ್ರೇಷ್ಠ ಕೃತ್ವಾ ಯುದ್ಧೇ ಮನಃ ಸ್ವಕಂ ॥ ೨೭ ॥

ಇತ್ಯುಕ್ತ್ವಾ ವ್ಯಸೃಜನ್ಮಾಯಾಂ ಸ್ವಬಾಣೇನ ಮಯಸ್ಯ ಚ ।
ತದಾಭವತ್ತಮಸ್ತೀವ್ರಂ ತತ್ರ ಕೋಽಪಿ ನ ಲಕ್ಷ್ಯತೇ ॥ ೨೮ ॥

---

೨೫. ಅವನಾರೆಂದರೆ ಗೋಕುಲಕ್ಕೆ ಪ್ರಭುವಾದ ಶ್ರೀಕೃಷ್ಣನು. ಪರಾತ್ಪರ ಸ್ವರೂಪನು. ಅವನು ಬ್ರಹ್ಮ, ವಿಷ್ಣು, ಶಿವ ಮುಂತಾದವರನ್ನೆಲ್ಲಾ ಸೃಷ್ಟಿ ಮಾಡಿರುವನು.

೨೬. ಎಂದು ಹೇಳಲು ಬಲ್ವಲನು ಅದನ್ನು ಕೇಳಿ ಈ ರೀತಿ ಅಂದನು. ಎಲೈ ಶ್ರೀಕೃಷ್ಣನ ಮೊಮ್ಮಗನೇ, ನೀನು ಧನ್ಯನು. ನೀನು ನಿನ್ನ ಮಾತುಗಳಿಂದ ಋಷಿಗಳಂತೆ ನಟಿಸುತ್ತಿರುವೆ. ಮನುಷ್ಯನ ಸ್ವಭಾವವು ಸತ್ವರಜಸ್ತಮೋಗುಣಗಳಿಗಿಂತ ಬೇರೆಯಾದುದು. ಅದನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ.

೨೭. ನಾನೀಗ ಬಾಣವನ್ನು ಪ್ರಯೋಗಮಾಡಲಿರುವೆನು. ಅದು ನಿನ್ನ ಪ್ರಾಣಗಳನ್ನಪಹರಿಸುವುದು. ಯುದ್ಧದಲ್ಲಿ ಮನಸ್ಸಿಟ್ಟು ಸಾವಧಾನವಾಗಿ ನಿರೀಕ್ಷಿಸು.

೨೮. ಹೀಗೆಂದು ಹೇಳಿ ಬಲ್ವಲನು ಮಯನಸಂಬಂಧವಾದ ಮಾಯಾಸ್ತ್ರವನ್ನು ಅಭಿಮಂತ್ರಿಸಿ ತನ್ನ ಬಾಣದ ಮೂಲಕ ಬಿಟ್ಟನು. ಆಗ ಯುದ್ಧರಂಗವೆಲ್ಲವೂ ಕತ್ತಲಾಯಿತು. ಯೋಧರೆಲ್ಲರೂ ಕಾಣದಂತಾದರು.

ನ ಚ ಸ್ವೀಯೋ ನ ಪಾರಕ್ಯೋ ವಿದಾಮಾಸ ಜನಾನ್ಬಹೂನ್ ।
ಶಿಲಾಃ ಪರ್ವತತುಂಗಾಭಾಃ ಪತಂತಿ ಸುಭಟೋಽಪರಿ ॥ ೨೯ ॥

ನಾರ್ಭಿರ್ಹತಾಶ್ಚ ಸರ್ವೇಽಪಿ ವ್ಯಾಕುಲಾಶ್ಚ ಸಮಂತತಃ ।
ವಿದ್ಯುತೋ ವಿಲಸಂತ್ಯತ್ರ ಗರ್ಜಂತಿ ವಾರಿದಾ ಭೃಶಂ ॥ ೩೦ ॥

ವರ್ಷಂತಿ ರುಧಿರಂ ಚೋಷ್ಣಂ ಮುಂಚಂತಿ ಶಶಕೃಜ್ಜಲಂ ।
ಗಗನಾತ್ಪತಮಾನಾನಿ ಕಬಂಧಾನಿ ಶಿರಾಂಸಿ ಚ ॥ ೩೧ ॥

ತದಾ ವ್ಯಾಕುಲಿತಾಸ್ಸರ್ವೇ ಪರಸ್ಪರಭಯಾನ್ವಿತಾಃ ।
ಪಲಾಯನಪರಾ ಜಾತಾಃ ಸಂಗ್ರಾಮೇ ಚ ಯದೂತ್ತಮಾಃ ॥ ೩೨ ॥

ತದಾನಿರುದ್ಧಃ ಪ್ರಧನೇ ಸ್ಮೃತ್ವಾ ಕೃಷ್ಣಪದಾಂಬುಜಂ ।
ಮಾಯಾಂ ತಾಂ ಸ ವಿಧೂಯಾಥ ಮೋಹನಾಸ್ತ್ರೇಣ ಲೀಲಯಾ ॥ ೩೩ ॥

---

೨೯. ಇವರು ನಮ್ಮ ಪಕ್ಷದವರು; ಇವರು ಇತರರು ಎಂದು ಹೇಳಲಾರದಷ್ಟು ಕತ್ತಲೆ ಕವಿದಿತ್ತು. ಯೋಧರ ಮೇಲೆ ಪರ್ವತದಂತೆ ಎತ್ತರವಾದ ಬಂಡೆಗಳು ಉದುರುತ್ತಿದ್ದವು.

೩೦. ಎಷ್ಟೋ ಜನರು ಸತ್ತುಹೋದರು. ಎಲ್ಲೆಲ್ಲೂ ವ್ಯಾಕುಲರಾದ ಜನಗಳು ತುಂಬಿಹೋಗಿದ್ದರು. ಆಕಾಶದಲ್ಲಿ ಮೇಘವು ಏರಿತು. ಮಿಂಚುಗಳು ಮಿಂಚಿದವು. ಸಿಡಲು ಗುಡುಗುಗಳ ಆರ್ಭಟವು ಪ್ರಾರಂಭವಾಯಿತು.

೩೧. ಆ ಮಾಯಾಸ್ತ್ರದಿಂದ ಬಿಸಿಯಾದ ರಕ್ತವು ಸುರಿಯಲು ಪ್ರಾರಂಭಿಸಿತು. ಅಪವಿತ್ರವಾದ ಪದಾರ್ಥಗಳಿಂದ ಕೂಡಿದ ನೀರು ಬೀಳಲು ಪ್ರಾರಂಭಿಸಿತು. ಆಕಾಶದಿಂದ ರುಂಡಗಳೂ, ಮುಂಡಗಳೂ ಕೆಳಗೆ ಬಿದ್ದವು.

೩೨. ಇವುಗಳನ್ನೆಲ್ಲಾ ನೋಡಿ ಯಾದವವೀರರು ಹೆದರಿದರು. ದುಃಖಗೊಂಡರು. ರಣರಂಗದಲ್ಲಿ ನಿಲ್ಲಲಾರದೆ ಓಡಿಹೋಗಲು ಪ್ರಾರಂಭಿಸಿದರು.

೩೩. ಆಗ ಅನಿರುದ್ಧನು ಶ್ರೀಕೃಷ್ಣನ ಚರಣಕಮಲಗಳನ್ನು ಧ್ಯಾನಿಸಿ ಸಮ್ಮೋಹನಾಸ್ತ್ರವನ್ನು ಹೂಡಿ ಹೊಡೆದು ಆ ಮಾಯಾಸ್ತ್ರವನ್ನು ತಡೆದನು.

ತದಾ ದಿಶಃ ಪ್ರಸೇದುಸ್ತಾಃ ಸೂರ್ಯಸ್ತ್ವಪರಿವೇಷವಾನ್ ।
ಮೇಘಾ ಯಥಾಗತಂ ಯಾತಾಶ್ಚ ಪಲಾಃ ಶಾಂತಿಮಾಗತಾಃ ॥ ೩೪ ॥

ತದಾ ದೈತ್ಯಶ್ಚ ಪುರತೋ ದೃಶ್ಯತೇ ದಾನವೈರ್ಯುತಃ ।
ನಾನಾಯುಧಧರೋ ರಾಜನ್ಮಾಯಾವೀ ಚಂಡವಿಕ್ರಮಃ ॥ ೩೫ ॥

ಬ್ರಹ್ಮಾಸ್ತ್ರಂ ಸಂದಧೇ ಕ್ರುದ್ಧೋ ಯಾದವಾನಾಂ ವಧಾಯ ಚ ।
ಬ್ರಹ್ಮಾಸ್ತ್ರೇಣ ತು ಬ್ರಹ್ಮಾಸ್ತ್ರಂ ಜಹಾರ ಮಾಧವಃ ಪುನಃ ॥ ೩೬ ॥

ತತಶ್ಚ ಬಲ್ವಲಃ ಕ್ರುದ್ಧೋ ಗಾಂಧರ್ವೀಂ ಮೋಹಿನೀಂ ಪರಾಂ ।
ವಿಜಯಾರ್ಥೇ ಚ ಸಂಗ್ರಾಮೇ ಮಾಯಾಂ ಸೋಽಪಿ ಚಕಾರ ಹ ॥ ೩೭ ॥

---

೩೪. ಸೂರ್ಯನ ಮರೆಯು ಹೋಯಿತು. ದಿಕ್ಕುಗಳೆಲ್ಲವೂ ನಿರ್ಮಲವಾದವು. ಇದ್ದ ಮೇಘಗಳು ಹಾಗೆಯೇ ಹೊರಟುಹೋದವು. ಗಾಳಿಯ ಜೋರು ಶಾಂತವಾಯಿತು.

೩೫. ಯಾದವರ ಮುಂದೆ ನಿಂತಿರುವ ಬಲ್ವಲನು ಕಾಣಿಸಿದನು. ಅವನ ಸುತ್ತಮುತ್ತಲೂ ಅನೇಕ ದಾನವರು ನಿಂತಿದ್ದರು. ಬಲ್ವಲನು ಅನೇಕ ಆಯುಧಗಳನ್ನು ಧರಿಸಿ ಯುದ್ಧಸನ್ನದ್ಧನಾಗಿದ್ದನು. ಮಾಯಾವಿಯಾದ ಅವನು ತನ್ನ ಪ್ರಚಂಡಪರಾಕ್ರಮವನ್ನು ತೋರಿಸಲು ಸಿದ್ಧನಾಗಿದ್ದನು.

೩೬. ಬ್ರಹ್ಮಾಸ್ತ್ರವನ್ನು ಧನುಸ್ಸಿನಲ್ಲಿ ಹೂಡಿ ಯಾದವರ ಕಡೆಗೆ ಹೊಡೆದನು. ಆಗ ಅನಿರುದ್ಧನು ಮತ್ತೊಂದು ಬ್ರಹ್ಮಾಸ್ತ್ರದಿಂದ ಬಲ್ವಲನ ಬ್ರಹ್ಮಾಸ್ತ್ರವನ್ನು ನಾಶಮಾಡಿದನು.

೩೭. ಆಗ ಬಲ್ವಲನು ಗಾಂಧರ್ವಾಸ್ತ್ರವನ್ನು ಹೂಡಿ ಹೊಡೆದನು. ಅದು ಮಾಯಾಸ್ತ್ರವು. ಮೋಹವನ್ನುಂಟುಮಾಡುವಂತಹುದು. ಅದರಿಂದ ಜಯವಾಗುವುದೆಂದು ತಿಳಿದು ಪ್ರಯೋಗಿಸಿದನು.

ಗಂಧರ್ವನಗರಂ ಯತ್ರ ದೃಶ್ಯತೇ ನೃಪಸತ್ತಮ ।
ನ ದೃಶ್ಯತೇ ಚ ಸಂಗ್ರಾಮಃ ಸ್ವರ್ಣಸೌಧಾನಿ ಕೋಟಿಶಃ ॥ ೩೮ ॥

ಬಭೂವುಸ್ತತ್ರ ಗಂಧರ್ವ್ಯೋ ನೃತ್ಯಂತ್ಯೋ ಗಾನತತ್ಪರಾಃ ।
ವೀಣಾತಾಲಮೃದಂಗೈಶ್ಚ ಕಲಕಂಠೈಶ್ಚ ಕಂದುಕೈಃ ॥ ೩೯ ॥

ಹಾವಭಾವಕಟಾಕ್ಷೈಶ್ಚ ಕಟಿವೇಣೀನಿದರ್ಶನೈಃ ।
ತೋಷಯಂತ್ಯೋ ಜನಾನ್ಸರ್ವಾನ್ ಸುಂದರ್ಯಃ ಕಂಜಲೋಚನಾಃ ॥

ತಾಸಾಂ ದೃಷ್ಟ್ವಾ ಚ ಸೌಂದರ್ಯಂ ಯಾದವಾಃ ಸ್ಮರವಿಹ್ವಲಾಃ ।
ಊಚುಃ ಪರಸ್ಪರಂ ಸರ್ವೇ ಧೃತ್ವಾ ಶಸ್ತ್ರಾಣಿ ಭೂತಲೇ ॥ ೪೧ ॥

---

೩೮. ಅದರಿಂದ ಯಾದವರಿಗೆ ಗಂಧರ್ವನಗರವು ಕಾಣಲು ಪ್ರಾರಂಭವಾಯಿತು. ಯುದ್ಧವು ಕಾಣದಂತಾಗಿ ಸುವರ್ಣನಿರ್ಮಿತವಾದ ಅನೇಕ ಉಪ್ಪರಿಗೆಗಳು ಕಾಣಿಸಿದವು.

೩೯. ವೀಣಾನಿನಾದ, ತಾಳಗಳ ಧ್ವನಿ, ಮೃದಂಗಗಳ ಶಬ್ದ ಇವುಗಳು ಮನೋಹರವಾದ ಹಾಡುಗಾರಿಕೆಯು ಕೇಳಿಸುತ್ತಿತ್ತು. ಇದರ ಮಧ್ಯೆ ನರ್ತಿಸುತ್ತಾ ಗಂಧರ್ವಸ್ತ್ರೀಯರು ಹಾಡುತ್ತಿದ್ದರು. ಕೆಲವರು ಚಂಡುಗಳನ್ನು ಆಡುತ್ತಿದ್ದರು.

೪೦. ಹಾವಭಾವಗಳನ್ನು ತೋರಿಸುತ್ತಾ ಕಟಾಕ್ಷಗಳನ್ನು ಬೀರುತ್ತಾ ತಮ್ಮ ಸೊಂಟ, ಜಡೆ ಮುಂತಾದುವುಗಳಿಂದ ಬೆಡಗನ್ನು ತೋರುತ್ತಾ ನಗುನಗುತ್ತಿದ್ದರು. ಅವರ ಸೌಂದರ್ಯಕ್ಕೆ ಅವರ ಕಪ್ಪಾದ ಕಣ್ಣಿಗೆ ಎಲ್ಲರೂ ಮೋಹಹೋಗುತ್ತಿದ್ದರು. ಜನರೆಲ್ಲರೂ ತೃಪ್ತರಾಗುತ್ತಿದ್ದರು.

೪೧. ಯಾದವರೆಲ್ಲರೂ ಅವರ ಸೌಂದರ್ಯವನ್ನು ನೋಡಿ ಕಾಮಾತುರರಾದರು. ಹಿಡಿದಿದ್ದ ಶಸ್ತ್ರಾಸ್ತ್ರಗಳನ್ನೆಲ್ಲಾ ನೆಲದ ಮೇಲೆ ಬಿಸುಟು ಪರಸ್ಪರವಾಗಿ ಈ ರೀತಿ ಮಾತನಾಡಿಕೊಂಡರು.

ವಯಂ ಕುತ್ರಾಗತಾಸ್ಸರ್ವೇ ಸ್ವರ್ಲೋಕೇ ಕಿಂ ತು ದೈವತಃ ।
ಯತ್ರ ನೃತ್ಯಂತಿ ಸುಂದರ್ಯಃ ಕಲಕಂಠ್ಯೋ ಮನೋಹರಾಃ ॥ ೪೨ ॥

ಆಸಾಂ ಲಾವಣ್ಯಜಲಧೌ ವಯಂ ಮಗ್ನಾಃ ಸ್ಮರಾತುರಾಃ ।
ಕಥಂ ಭವಿಷ್ಯತಿ ಜಯೋ ರಣಂ ಚಾತ್ರ ನ ದೃಶ್ಯತೇ ॥ ೪೩ ॥

ಇತಿ ಬ್ರುವತ್ಸು ಸರ್ವೇಷು ಬಲ್ವಲಃ ಕ್ರೋಧಪೂರಿತಃ ।
ಶೀಘ್ರಂ ನಿಸ್ತ್ರಿಂಶಮಾದಾಯ ಹಂತುಂ ಸರ್ವಾನ್ಸಮಾಯಯೌ ॥ ೪೪ ॥

ಆಗತ್ಯ ಖಡ್ಗೇನ ಯದುಪ್ರವೀರಾನ್
ವಿಮೋಹಿತಾನ್ಸೋಽಪಿ ಸಹಸ್ರಶಶ್ಚ ।
ಜಘಾನ ಯುದ್ಧೇ ಯದಿ ತೇ ನಿಪೇತು-
ರ್ದೃಷ್ಟ್ವಾನಿರುದ್ಧಸ್ತು ರುಷಾ ತಮೂಚೇ ॥ ೪೫ ॥

೪೨–೪೩. ಇದೇನು ? ನಾವೆಲ್ಲಿಗೆ ಬಂದಿರುವೆವು ? ಏನಾದರೂ ಸ್ವರ್ಗಲೋಕಕ್ಕೆ ಬಂದಿರುವೆವೋ ? ಸುಂದರಿಯರೆಲ್ಲರೂ ಮನೋಹರವಾಗಿ ನರ್ತಿಸುತ್ತಿರುವರು. ಸುಮಧುರವಾಗಿ ಗಾನಮಾಡುತ್ತಿರುವರು. ಇವರ ಲಾವಣ್ಯವೆಂಬ ಸಮುದ್ರದಲ್ಲಿ ನಾವು ಮುಳುಗಿ ಕಾಮಾತುರರಾಗಿರುವೆವು. ಇಂತಹ ಸಮಯದಲ್ಲಿ ನಾವು ಯುದ್ಧ ಮಾಡುವುದೆಂತು ? ಜಯವು ತಾನೇ ಹೇಗೆ ಲಭಿಸುವುದು ? ರಣಾಂಗಣವೇ ಕಾಣಿಸುತ್ತಿಲ್ಲವಲ್ಲ?

೪೪. ಹೀಗೆಂದು ಹೇಳುತ್ತಾ ಯಾದವರೆಲ್ಲರೂ ಮೋಹಪೂರಿತರಾಗಿರಲು ಬಲ್ವಲನು ಕೋಪದಿಂದ ಖಡ್ಗವನ್ನು ಹಿಡಿದುಕೊಂಡು ಬಂದು ಅವರೆಲ್ಲರನ್ನೂ ಕೊಲ್ಲಲು ಸಿದ್ಧನಾದನು.

೪೫. ಆ ಖಡ್ಗದಿಂದ ಬಲ್ವಲನು ಸಾವಿರಾರು ಜನ ಯದುವೀರರನ್ನು ಕತ್ತರಿಸಿ ಹಾಕಿದನು. ಅವರೆಲ್ಲರೂ ವಿಮೋಹಿತರಾದ್ದರಿಂದ ಅವನಿಗೆ ಸದವಕಾಶ ಸಿಕ್ಕಿತ್ತು. ಅದನ್ನು ನೋಡಿ ಅನಿರುದ್ಧನು ಕೋಪಗೊಂಡು ಅವನನ್ನು ಕುರಿತು,

ಕಿಂ ಕರಿಷ್ಯಸಿ ಸಂಗ್ರಾಮೇಽಧರ್ಮಂ ಸದ್ಭಿರ್ವಿಗರ್ಹಿತಂ ।
ಮೋಹಿತಾನಾಂ ಮಾರಣೇ ಚ ನ ಶ್ಲಾಘಾ ತೇ ಭವಿಷ್ಯತಿ ॥ ೪೬ ॥

ಯದಿ ಶಕ್ತಿಃ ಶರೀರೇಽಸ್ತಿ ಮಯಾ ಸಾರ್ಧಂ ರಣಂ ಕುರು ।
ಇತಿ ತದ್ವಾಕ್ಯಮಾಕರ್ಣ್ಯ ಬಲ್ವಲೋ ಬಲದರ್ಪಿತಃ ॥
ಆಜಗಾಮ ಪದಾತಿರ್ನೃ ಖಡ್ಗಚರ್ಮಧರೋ ನದನ್ ॥ ೪೭ ॥

ತಮಾಪತಂತಂ ಸ ನಿರೀಕ್ಷ್ಯ ರೋಷಾ-
ದ್ರಥಾದವಪ್ಲುತ್ಯ ಮನೋಜಪುತ್ರಃ ।
ಕೃತಾಂತದಂಡೇನ ಜಘಾನ ದೈತ್ಯಂ
ಯಥಾ ಮಹೇಂದ್ರೋ ಭಿದುರೇಣ ಶೈಲಂ ॥ ೪೮ ॥

ನಿರ್ಭಿನ್ನಹೃದಯೋ ದೈತ್ಯಃ ಪಪಾತ ಚಾಲಯನ್ಮಹೀಂ ।
ಚತುರ್ವಾಸರಪರ್ಯಂತಂ ಮೂರ್ಛಿತೋಽಭೂದ್ರಣಾಂಗಣೇ ॥ ೪೯ ॥

---

೪೬. ಇದೇನಿದು, ಅಧರ್ಮಯುದ್ಧವನ್ನು ಮಾಡುತ್ತಿರುವೆ? ಸತ್ಪುರುಷರಿಂದ ನಿಂದಿತವಾದ ಕೆಲಸವಿದು. ಮೋಹಗೊಂಡಿರುವ ಸೈನಿಕರನ್ನು ಕೊಲ್ಲುವುದೊಂದು ಮಹಾ ಸಾಹಸವೋ? ಅದರಿಂದ ಎಂದಿಗೂ ನಿನಗೆ ಕೀರ್ತಿಯು ದೊರಕಲಾರದು.

೪೭. ದಿಟವಾಗಿಯೂ ನೀನು ಪರಾಕ್ರಮಿಯಾಗಿದ್ದಲ್ಲಿ ನನ್ನೊಡನೆ ಯುದ್ಧ ಮಾಡು ಬಾ. ಎನ್ನಲು ಆಗ ಬಲ್ವಲನು ಮದಿಸಿದವನಾಗಿ ಖಡ್ಗ, ಚರ್ಮ ಮುಂತಾದ ಆಯುಧಗಳನ್ನು ಧರಿಸಿ ಗಟ್ಟಿಯಾಗಿ ಧ್ವನಿಮಾಡುತ್ತಾ ಕಾಲ್ನಡಿಗೆಯಲ್ಲಿಯೇ ಬಂದನು.

೪೮. ತನ್ನ ಕಡೆಗೆ ಬರುತ್ತಿರುವ ಬಲ್ವಲನನ್ನು ನೋಡಿ ಅನಿರುದ್ಧನು ಅತಿ ಕುಪಿತನಾಗಿ ರಥದಿಂದ ಕೆಳಗಿಳಿದು ಯಮದಂಡವನ್ನು ತೆಗೆದುಕೊಂಡು ಮಹೇಂದ್ರನು ವಜ್ರಾಯುಧದಿಂದ ಪರ್ವತವನ್ನು ಹೊಡೆದಂತೆ ಹೊಡೆದನು.

೪೯. ಅದರ ಏಟಿನಿಂದ ಆ ರಾಕ್ಷಸನ ಹೃದಯವು ಒಡೆದುಹೋಯಿತು. ಅವನು ಕೆಳಗುರುಳಿದನು. ಭೂಮಿಯು ನಡುಗಿತು. ಮೂರ್ಛೆಹೊಂದಿದನು. ಹಾಗೆಯೇ ನಾಲ್ಕು ದಿನಗಳವರೆಗೂ ಆ ರಣರಂಗದಲ್ಲಿ ಬಿದ್ದಿದ್ದನು

ತದಾ ನಿಪತಿತೇ ದೈತ್ಯೇ ಮಾಯಾ ಶಾಂತಿಂ ಗತಾ ಸ್ವತಃ ।
ಯುದ್ಧಂ ಪ್ರದೃಶ್ಯತೇ ತತ್ರ ಯಾದವಾ ವಿಸ್ಮಯಂ ಗತಾಃ ॥ ೫೦ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ಅನಿರುದ್ಧಜಯೋ ನಾಮ
ಪಂಚತ್ರಿಂಶೋಽಧ್ಯಾಯಃ

---

೫೦. ಬಲ್ವಲನು ಬಿದ್ದನಂತರ ಅವನಿಂದುಂಟಾದ ಮಾಯೆಯೂ ತಾನೇ ತಾನಾಗಿ ಮರೆಯಾಯಿತು. ಆಗ ಎಲ್ಲರಿಗೂ ಯುದ್ಧರಂಗವು ಕಾಣಬಂದಿತು. ಅದನ್ನು ನೋಡಿ ಯಾದವರೆಲ್ಲರೂ ಆಶ್ಚರ್ಯಪಟ್ಟರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಅನಿರುದ್ಧನ ಜಯವೆಂಬ
ಮೂವತ್ತೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಷಟ್ತ್ರಿಂಶೋಽಧ್ಯಾಯಃ

॥ ಗರ್ಗ ಉವಾಚ ॥

ಕುನಂದನೋಽಪಿ ಸಂಮೂರ್ಛಾಂ ತ್ಯಕ್ತ್ವಾಗಾದ್ರಣಮಂಡಲೇ ।
ರಥಸ್ಥಃ ಕ್ರೋಧಸಂಯುಕ್ತಃ ಪ್ರಹರ್ಷನ್ ಧನುಷಾ ಶರಾನ್ ॥ ೧ ॥

ದೃಷ್ಟ್ವಾ ಸಮಾಗತಂ ವೀರೋಽನಿರುದ್ಧಃ ಪರವೀರಹಾ ।
ಪಪ್ರಚ್ಛ ಸೇವಕಾನ್ ತಸ್ಯ ವಾರ್ತಾಂ ರೋಷೇಣ ದೀಪಿತಃ ॥ ೨ ॥

ಸೇವಕಾಸ್ತೇ ತತಃ ಪ್ರೋಚುರೇಷ ಬಲ್ವಲನಂದನಃ ।
ತ್ವಯಾ ಸಾರ್ಧಂ ಮಹಾರಾಜ ಯುದ್ಧಂ ಕರ್ತುಂ ಸಮಾಗತಃ ॥ ೩ ॥

ಮೂವತ್ತಾರನೆಯ ಅಧ್ಯಾಯವು

೧. ಗರ್ಗನು ಹೇಳಿದನು :—ಎಲೈ ವಜ್ರನಾಭಿಯೇ ಕೇಳು. ಆ ರಣರಂಗದಲ್ಲಿ ಮೂರ್ಛಿತನಾದ ಕುನಂದನನು ಸ್ವಲ್ಪಹೊತ್ತಿನಲ್ಲಿಯೇ ಎಚ್ಚರಗೊಂಡನು. ರಥದಲ್ಲಿ ಕುಳಿತು ಕೋಪದಿಂದ ಧನುಸ್ಸಿಗೆ ಬಾಣವನ್ನು ಏರಿಸಿದನು.

೨. ಶತ್ರುಪ್ರಾಣನಾಶಕನಾದ ಅನಿರುದ್ಧನು ಬರುತ್ತಿರುವ ಕುನಂದನನನ್ನು ನೋಡಿ ರೋಷಗೊಂಡು ತನ್ನ ಸೇವಕರನ್ನು ಇವನ ವಿಷಯವಾಗಿ ಕೇಳಿದನು.

೩. ಆಗ ಸೇವಕರು ಮಹಾರಾಜನೇ, ಇವನು ಬಲ್ವಲನ ಮಗನು. ನಿನ್ನೊಡನೆ ಯುದ್ಧಮಾಡಲು ಬಂದಿರುವನು. ಎಂದು ಹೇಳಿದರು.

ಶ್ರುತ್ವಾನಿರುದ್ಧಃ ಪ್ರೋವಾಚ ಹನಿಷ್ಯೇಽಹಂ ಕುನಂದನಂ ।
ತದೈವ ತಮುವಾಚಾಥ ಕೃಷ್ಣಪುತ್ರಃ ಸುನಂದನಃ　　॥ ೪ ॥

॥ ಸುನಂದನ ಉವಾಚ ॥

ರಾಜನ್ಕ್ವೋಽಯಂ ದೈತ್ಯಪುತ್ರಃ ಕ್ವೇದಂ ಪರಿಮಿತಂ ಬಲಂ ।
ಜೇಷ್ಯೇಽಹಂ ತ್ವತ್ಪ್ರತಾಪೇನ ತಸ್ಮಾದ್ಗಚ್ಛಾಮ್ಯಹಂ ಪ್ರಭೋ　　॥ ೫ ॥

ರಾಜಂಚ್ಛೃಣು ಪ್ರತಿಜ್ಞಾಂ ಮೇ ತವಾನಂದಪ್ರದಾಯಿನೀಂ ।
ನ ಚೇತ್ಕುನಂದನಂ ಜೇಷ್ಯೇ ಬಹುಸಂಗ್ರಾಮಕೋವಿದಂ　　॥ ೬ ॥

ಕೃಷ್ಣಸ್ಯ ಚರಣಾಂಭೋಜಮಧ್ವಾಸ್ವಾದವಿಯೋಗಿನಾಂ ।
ಯತ್ಪಾಪಂ ಚ ಭವೇತ್ತನ್ಮೇ ನ ಜಯೇ ಯದಿ ದಾನವಂ　　॥ ೭ ॥

---

೪. ಅನಿರುದ್ಧನು ಇದನ್ನು ಕೇಳಿ ನಾನು ಕುನಂದನನ್ನು ವಧೆಮಾಡುವೆನು ಎಂದು ಹೇಳಿದನು. ಆಗ ಶ್ರೀಕೃಷ್ಣನ ಮಗನಾದ ಸುನಂದನನು ಅನಿರುದ್ಧನನ್ನು ಕುರಿತು ಈ ರೀತಿ,

೫. ರಾಜನೇ, ಆ ದೈತ್ಯಪುತ್ರನೆಲ್ಲಿ? ಈ ಅಪರಿಮಿತ ಯಾದವರ ಸೈನ್ಯವೆಲ್ಲಿ? ಈ ಸೈನ್ಯದ ಮುಂದೆ ಅವನೇನೂ ಮಾಡಲಾರನು, ನಿನ್ನ ಪ್ರತಾಪದಿಂದ ನಾನು ಅವನನ್ನು ಜಯಿಸುವೆನು. ನಾನು ಹೊರಡಲು ಅನುಜ್ಞೆಯನ್ನು ನೀಡು.

೬–೭. ಇಗೋ ನಾನು ಪ್ರತಿಜ್ಞೆಮಾಡುವೆನು. ಅದನ್ನು ಕೇಳಿ ನೀನು ಸಂತೋಷಪಡಬಹುದು. ನಾನೊಂದು ವೇಳೆ ಯುದ್ಧನಿಪುಣನಾದ ಆ ಕುನಂದನನ್ನು ಜಯಿಸದ ಪಕ್ಷದಲ್ಲಿ ಶ್ರೀಕೃಷ್ಣನ ಚರಣಕಮಲಗಳ ಸೇವೆಯನ್ನು ದೂರಮಾಡಿರುವವರಿಗೆ ಯಾವ ಪಾಪವು ಬರುವುದೋ ಆ ಪಾಪವು ನನಗೆ ಬರಲಿ.

ಯೋ ಗುರುಂ ಭವಹರ್ತಾರಂ ಪಿತರಂ ಚ ನ ಸೇವತೇ ।
ಯದಘಂ ತು ಭವೇತ್ತಸ್ಯ ತನ್ಮೇ ಭೂಯಾಜ್ಜಯೇನ ವೈ ॥ ೮ ॥

ಇತಿ ಪ್ರತಿಜ್ಞಾಮಾಕರ್ಣ್ಯಾನಿರುದ್ಧಸ್ತಸ್ಯ ಭೂಪತೇ ।
ಜಹರ್ಷ ಚಿತ್ತೇ ತಂ ವೀರಂ ನಿರ್ದಿದೇಶ ರಣಂ ಪ್ರತಿ ॥ ೯ ॥

ಇತ್ಯಾಜ್ಞಪ್ತೋಽನಿರುದ್ಧೇನ ಚೈಕಾಕೀ ಕೃಷ್ಣನಂದನಃ ।
ಜಗಾಮ ದಂಶಿತಸ್ತತ್ರ ಯತ್ರಾಸ್ತೇ ಬಲ್ವಲಾತ್ಮಜಃ ॥ ೧೦ ॥

ಕುನಂದನಸ್ತಮಾಜ್ಞಾಯ ತ್ವಾಗತಂ ಪ್ರಧನೇ ರುಷಾ ।
ಪ್ರತ್ಯುಜ್ಜಗಾಮ ವೀರಾಗ್ರ್ಯೋ ರಥೀ ಶೂರಶಿರೋಮಣಿಃ ॥ ೧೧ ॥

ಅನ್ಯೋನ್ಯಂ ತೌ ಸಂಮಿಲಿತೌ ರಥಸ್ಥೌ ಚಾಪಧಾರಿಣೌ ।
ರೇಜಾತೇ ರಾಜಶಾರ್ದೂಲ ಯಥಾ ದಮನಪುಷ್ಕಲೌ ॥ ೧೨ ॥

---

೮. ಸಂಸಾರದ ಭೀತಿಯನ್ನು ತಪ್ಪಿಸಿ ಕಾಪಾಡುವ ಗುರುವನ್ನೂ, ತಂದೆಯನ್ನೂ ಯಾರು ಸೇವಿಸುವುದಿಲ್ಲವೋ ಅವರಿಗೆ ಉಂಟಾಗುವ ಪಾತಕವು ನನಗೆ ಉಂಟಾಗಲಿ ಎಂದನು.

೯. ಸುನಂದನನು ಮಾಡಿದ ಪ್ರತಿಜ್ಞೆಯನ್ನು ಕೇಳಿ ಅನಿರುದ್ಧನು ಆನಂದಪಟ್ಟು ಮನಸ್ಸಿನಲ್ಲಿ ಅವನನ್ನು ಶ್ಲಾಘಿಸುತ್ತಾ ಯುದ್ಧಕ್ಕೆ ತೆರಳಲು ಅಪ್ಪಣೆಯಿತ್ತನು.

೧೦. ಆಗ ಸುನಂದನನು ಒಬ್ಬನೇ ರಣರಂಗಕ್ಕೆ ತೆರಳಿದನು. ಅತಿ ಕೋಪದಿಂದ ಬಲ್ವಲಸುತನಾದ ಕುನಂದನನು ಇರುವ ಸ್ಥಳವನ್ನು ತಲುಪಿದನು.

೧೧. ಅವನು ಬರುತ್ತಿರುವುದನ್ನು ನೋಡಿ ಕುನಂದನನು ಅತಿಕೋಪದಿಂದ ಕೂಡಿ ರಥದಲ್ಲಿ ಕುಳಿತು ಅತಿಶೌರ್ಯದಿಂದ ಅವನನ್ನು ಎದುರಿಸಿದನು.

೧೨. ಇಬ್ಬರೂ ವೀರಾಗ್ರೇಸರರು. ಇಬ್ಬರೂ ರಥದಲ್ಲಿ ಕುಳಿತು ಧನುರ್ಬಾಣಗಳನ್ನು ಧರಿಸಿ ಯುದ್ಧಸನ್ನದ್ಧರಾಗುತ್ತಿದ್ದರು. ಈ ರೀತಿ ಪ್ರಕಾಶಿಸುತ್ತಿರುವ ಇವರನ್ನು ನೋಡಿದರೆ ದಮನ, ಪುಷ್ಕಲರಂತೆ ಕಾಣುತ್ತಿದ್ದರು.

ಉಭೌ ಸಾಯಕಭಿನ್ನಾಂಗಾವುಭೌ ರುಧಿರವಿಪ್ಲುತೌ ।
ಮುಂಚಂತೌ ಶರಕೋಟೀಶ್ಚ ಸಂಧಂತೌ ತರಸಾ ಶರಾನ್ ॥ ೧೩ ॥

ಆದಾನಂ ನೈವ ಸಂಧಾನಂ ಮೋಚನಂ ಚ ನ ಭೂಪತೇ ।
ದೃಶ್ಯೇತೇ ತೌ ಮಹಾಶೂರೌ ಕುಂಡಲೀಕೃತಕಾರ್ಮುಕೌ ॥ ೧೪ ॥

ತದ್ರಥಂ ರಾಜಪುತ್ರಸ್ತು ಭ್ರಾಮುಕಾಸ್ತ್ರೇಣ ಶೋಭಿನಾ ।
ಭೂತಲೇ ಭ್ರಾಮಯಾಮಾಸ ಕುಂಭಕಾರಸ್ಯ ಚಕ್ರವತ್ ॥ ೧೫ ॥

ಭ್ರಾಂತ್ವಾ ಮುಹೂರ್ತಮಾತ್ರಂ ತು ತದ್ರಥೋ ವಾಜಿಸಂಯುತಃ ।
ಸ್ಥಿತಿಂ ಲೇಭೇ ತತಃ ಕಾರ್ಷ್ಣಿರ್ಜಘಾನ ತದ್ರಥೇ ಶರಂ ॥ ೧೬ ॥

---

೧೩. ಪರಸ್ಪರ ಬಾಣಪ್ರಯೋಗದಿಂದ ಅಂಗಾಂಗಗಳೆಲ್ಲವೂ ಗಾಯವಾಗಿದ್ದವು. ಶರೀರವೆಲ್ಲವೂ ರಕ್ತಮಯವಾಗಿದ್ದಿತು. ಇಬ್ಬರೂ ಕೋಟ್ಯಾನುಕೋಟಿ ಬಾಣಗಳನ್ನು ಪ್ರಯೋಗಿಸುತ್ತಿದ್ದರು. ಹಾಗೂ ಅವುಗಳನ್ನು ಚೂರುಚೂರುಮಾಡುತ್ತಿದ್ದರು.

೧೪. ಮಹಾಶೂರರಾದ ಅವರು ಧನುಸ್ಸನ್ನು ಬಗ್ಗಿಸಿ ಅತಿಜಾಗ್ರತೆಯಾಗಿ ಬಾಣಗಳನ್ನು ಪ್ರಯೋಗಮಾಡುತ್ತಿದ್ದರು. ಇದರ ವೇಗದಲ್ಲಿ ಬಾಣಗಳ ಸಂಧಾನ, ಅನುಸಂಧಾನ ಮತ್ತು ಅವುಗಳನ್ನು ಪ್ರಯೋಗಿಸುವಿಕೆ ಇವುಗಳಾವುವೂ ಕಾಣಿಸುತ್ತಿರಲಿಲ್ಲ.

೧೫. ಆಗ ರಾಜಕುಮಾರನು ಭ್ರಾಮುಕಾಸ್ತ್ರವನ್ನು ಪ್ರಯೋಗಮಾಡಿ ಸುನಂದನನ ರಥವನ್ನು ಗರಗರನೆ ಕುಂಬಾರನ ಚಕ್ರವು ತಿರುಗುವಂತೆ ತಿರುಗಿಸಿದನು.

೧೬. ಹಾಗೆಯೇ ರಥವು ಕುದುರೆಗಳ ಸಹಿತವಾಗಿ ತಿರುಗುತ್ತಾ ಸ್ವಲ್ಪ ಹೊತ್ತಾದನಂತರ ಭೂಮಿಯ ಮೇಲೆ ನಿಂತಿತು. ಆಗ ಸುನಂದನನು ಕುನಂದನನ ರಥಕ್ಕೆ ಒಂದು ಬಾಣದಿಂದ ಹೊಡೆದನು.

ಸ ಯಾನಸ್ತೇನ ಬಾಣೇನ ಖೇ ಬಭ್ರಾಮ ಪತಂಗವತ್ ।
ಪಪಾತ ಕೌ ವಿಶೀರ್ಣೋಽಭೂದ್ಯಥಾ ವೈ ಕಾಚಭಾಜನಂ ॥ ೧೭ ॥

ಉತ್ಥಿತಸ್ಸೋಽಪಿ ವಿರಥೋ ಹತಾಶ್ವೋ ಹತಸಾರಥಿಃ ।
ಅನ್ಯಂ ರಥಂ ಸಮಾರುಹ್ಯ ಯಾವದಾಯಾತಿ ಸಂಮುಖಂ ॥ ೧೮ ॥

ಬಭಂಜ ತಾವದ್ಬಾಣೈಶ್ಚ ತದ್ರಥಂ ಕೃಷ್ಣನಂದನಃ ।
ಏವಂ ಸಪ್ತ ರಥಾ ಭಗ್ನಾ ದೈತ್ಯಪುತ್ರಸ್ಯ ವೈ ರಣೇ ॥ ೧೯ ॥

ತದಾ ಕುನಂದನಸ್ಸಂಖ್ಯೇ ಸ್ಥಿತ್ವಾ ಯಾನೇ ವಿಚಿತ್ರಿತೇ ।
ಆಯಯೌ ನೃಪ ವೇಗೇನ ಕೃಷ್ಣಪುತ್ರಂ ನಿಯೋಧಿತುಂ ॥ ೨೦ ॥

ಆಗತ್ಯ ದಶಭಿರ್ಬಾಣೈಸ್ತಾಡಯಾಮಾಸ ತಂ ಮೃಧೇ ।
ಶರೈಸ್ತೈಸ್ಸೋಽಪಿ ನಿಹತಃ ಪರಂ ಕಶ್ಮಲತಾಂ ಗತಃ ॥ ೨೧ ॥

---

೧೭. ಆ ರಥವು ಆಕಾಶಕ್ಕೆ ಹಾರಿತು, ಪಕ್ಷಿಯಂತೆ ಕೆಲಸಮಯ ಅಲ್ಲಿ ತಿರುಗುತ್ತಾ ಕೆಳಕ್ಕೆ ಬಿದ್ದು ಗಾಜಿನ ಪಾತ್ರೆಯಂತೆ ಚೂರುಚೂರಾಯಿತು.

೧೮-೧೯. ಕುದುರೆಗಳು ಸತ್ತುಹೋದವು. ಸಾರಥಿಯು ಮೃತಪಟ್ಟನು. ಆಗ ಕುನಂದನನು ಮತ್ತೊಂದು ರಥವನ್ನೇರಿದನು. ಇನ್ನೇನು ಸುನಂದನನಿಗೆದುರಾಗಿ ಬರಬೇಕು ಅಷ್ಟರಲ್ಲಿಯೇ ಸುನಂದನನು ಬಾಣಗಳಿಂದ ಆ ರಥವನ್ನು ಚೂರು ಮಾಡಿದನು. ಈ ರೀತಿಯಾಗಿ ಸುನಂದನನ ಏಳು ರಥಗಳು ಭಗ್ನವಾದವು.

೨೦. ಪುನಃ ಕುನಂದನನು ಮತ್ತೊಂದು ಚಿತ್ರವಿಚಿತ್ರವಾದ ರಥದಲ್ಲಿ ಕುಳಿತುಕೊಂಡು ಕೃಷ್ಣಸುತನೊಡನೆ ಯುದ್ಧಮಾಡಲು ಜಾಗ್ರತೆಯಾಗಿ ಬಂದನು.

೨೧. ಹತ್ತು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಸುನಂದನನ್ನು ಹೊಡೆದನು. ಬಲವಾಗಿ ಏಟುಬಿದ್ದಿತು. ದುಃಖಪಟ್ಟನು.

ತತಸ್ಸ ಧನುರುದ್ಯಮ್ಯ ಗೃಹೀತ್ವಾ ದಶ ಸಾಯಕಾನ್ ।
ಮುಮೋಚ ತಸ್ಯ ಹೃದಯೇ ಕ್ರುದ್ಧಃ ಕೃಷ್ಣಾತ್ಮಜೋ ಬಲೀ ॥ ೨೨ ॥

ತೇ ಶರಾ ರುಧಿರಂ ಪೀತ್ವಾ ನಿಪೇತುಸ್ತೇ ಮಹೀತಲೇ ।
ಯಥಾ ಹಿ ಪಿತರೋ ರಾಜನ್ನರಕೇ ಕೂಟಸಾಕ್ಷಿಣಃ ॥ ೨೩ ॥

ಕುನಂದನಸ್ಸುನಂದನಂ ಸುನಂದನಃ ಕುನಂದನಂ ।
ಮಹದ್ರಣೇ ಮಹಚ್ಛರೈರ್ನಿಜಘ್ನತುಃ ಪರಸ್ಪರಂ ॥ ೨೪ ॥

ಏವಂ ಹಿ ತೌ ದ್ವೌ ಶರಭಿನ್ನಗಾತ್ರೌ
ರಕ್ತಾಪ್ಲುತೌ ಚಾಪಧರೌ ರುಷಾಢ್ಯೌ ।
ಪ್ರಚಕ್ರತುರ್ಯುದ್ಧವರಂ ಶರೈಶ್ಚ
ಕುಶಾಂಬಸಾಂಬಾವಿವ ಸಂಯುಗೇ ನೃ ॥ ೨೫ ॥

---

೨೨. ಅತಿ ಕುಪಿತನಾಗಿ ಹತ್ತು ಬಾಣಗಳನ್ನು ಧನುಸ್ಸಿನಲ್ಲಿ ಸಂಧಾನಮಾಡಿ ಕುನಂದನನ ಹೃದಯಕ್ಕೆ ಬಲವಾಗಿ ಹೊಡೆದನು.

೨೩. ಆ ಬಾಣಗಳು ಅವನ ಹೃದಯವನ್ನು ಭೇದಿಸಿಕೊಂಡು ಒಳಕ್ಕೆ ನುಗ್ಗಿ ರಕ್ತವನ್ನು ಕುಡಿದು ಭೂಮಿಯ ಮೇಲೆ ಬಿದ್ದವು.

೨೪. ಇಬ್ಬರಿಗೂ ಭಯಂಕರವಾದ ಯುದ್ಧವು ನಡೆಯಿತು. ಕುನಂದನನು ಸುನಂದನನ್ನೂ ಸುನಂದನನು ಕುನಂದನನ್ನೂ ನಿಶಿತವಾದ ಬಾಣಗಳಿಂದ ಹೊಡೆದಾಡಿದರು.

೨೫. ಅದರಿಂದ ಅವರಿಬ್ಬರ ಅಂಗಾಂಗಗಳೆಲ್ಲಾ ಕಿತ್ತುಹೋಗಿದ್ದವು. ಅದರಿಂದ ರಕ್ತವು ಸುರಿಯುತ್ತಿತ್ತು. ಆದರೂ ಕೋಪದಿಂದ ಬಾಣಗಳನ್ನು ಪ್ರಯೋಗಿಸುತ್ತಲೇ ಇದ್ದರು. ಕುಶಾಂಬನೂ ಸಾಂಬನೂ ಯುದ್ಧಮಾಡಿದಂತೆ ಘೋರವಾಗಿ ಯುದ್ಧವನ್ನು ಮಾಡುತ್ತಲೇ ಇದ್ದರು.

ತತಃ ಕೃಷ್ಣಾತ್ಮಜೋ ವೀರೋ ಕೋದಂಡೇ ಸ್ವರ್ಣನಿರ್ಮಿತೇ ।
ಮೃಗಾಂಕಾರ್ಧಮುಖಂ ಬಾಣಂ ಧೃತ್ವಾ ಶೀಘ್ರಂ ತಮಬ್ರವೀತ್ ॥ ೨೬ ॥

॥ ಸುನಂದನ ಉವಾಚ ॥

ಶೃಣು ಮದ್ವಚನಂ ವೀರ ಬಾಣೇನಾನೇನ ತ್ವಚ್ಛಿರಃ ।
ಸದ್ಯಶ್ಛಿನ್ನಂ ಕರಿಷ್ಯೇಽಹಂ ಶಿರೋ ರಕ್ಷ ಬಲೀ ಯದಿ ॥ ೨೭ ॥

ಯದಿ ಮದ್ವಚನಂ ಸತ್ಯಂ ಪ್ರಧನೇ ತ್ವಂ ನ ಮನ್ಯಸೇ ।
ತದಾ ಶೃಣು ಪ್ರತಿಜ್ಞಾಂ ಮೇ ತವ ಮೃತ್ಯುವಿಸೂಚಿಕಾಂ ॥ ೨೮ ॥

ಸತೀಂ ಚ ಗುರುಪತ್ನೀಂ ಚ ಯೋ ದೂಷಯತಿ ಕಾಮತಃ ।
ಸ ಯಾತಿ ಯಾತನಾಂ ಯಾಂ ವೈ ಯಮರಾಜಸ್ಯ ಸನ್ನಿಧೌ ॥ ೨೯ ॥

---

೨೬. ಆಗ ವೀರನಾದ ಸುನಂದನನು ಸುವರ್ಣನಿರ್ಮಿತವಾದ ಧನುಸ್ಸೊಂದನ್ನು ಕೈಗೆ ತೆಗೆದುಕೊಂಡು ಅದರಲ್ಲಿ ಅರ್ಧಚಂದ್ರಾಕಾರವಾದ ಬಾಣವೊಂದನ್ನು ಹೂಡಿ ಕುನಂದನನನ್ನು ಕುರಿತು,

೨೭. ಎಲೈ ವೀರನೇ, ನನ್ನ ಮಾತನ್ನು ಕೇಳು. ನಾನೀಗ ಈ ಬಾಣದಿಂದ ನಿನ್ನ ತಲೆಯನ್ನು ಕತ್ತರಿಸಲಿರುವೆನು. ನೀನು ಶೂರನಾದ ಪಕ್ಷದಲ್ಲಿ ನಿನ್ನ ತಲೆಯನ್ನು ಕಾಪಾಡಿಕೋ.

೨೮. ನನ್ನ ಈ ಮಾತನ್ನೂ ಕೂಡ ನೀನು ಸುಳ್ಳೆಂದು ಭಾವಿಸುತ್ತಿಯಾದರೆ ನಿನ್ನ ಮೃತ್ಯುಸೂಚಕವಾದ, ನಾನು ಮಾಡುವ ಪ್ರತಿಜ್ಞೆಯನ್ನು ಕೇಳು,

೨೯. ನಿನ್ನನ್ನು ನಾನು ಕೊಲ್ಲದಿದ್ದ ಪಕ್ಷದಲ್ಲಿ, ಯಾರು ಪತಿವ್ರತೆಯನ್ನೂ, ಗುರುಪತ್ನಿಯನ್ನೂ ಕಾಮುಕದೃಷ್ಟಿಯಿಂದ ನೋಡುವನೋ ಮತ್ತು ದೂಷಿಸುವನೋ ಅಂಥವನಿಗೆ ಯಮನ ಸಮೀಪದಲ್ಲಿ ಯಾವ ಯಾತನೆಯುಂಟಾಗುವುದೋ ಆ ಯಾತನೆಯು ನನಗೆ ಉಂಟಾಗಲಿ.

ಸಾ ಯಾತನಾ ಚ ಮೇ ಭೂಯಾತ್ಸತ್ಯಂ ಮಮ ಪ್ರತಿಶ್ರುತಂ ।
ಯಃ ಸಮರ್ಥಶ್ಚ ಸ್ವಗುರುಂ ಪಿತರಂ ಚ ನ ಪಾಲಯೇತ್ ॥ ೩೦ ॥

ತಸ್ಯ ಪಾಪಂ ಮಮೈವಾಸ್ತು ನ ಹನಿಷ್ಯೇ ಚ ತ್ವಾಂ ರಣೇ ।
ಇತಿ ಶ್ರುತ್ವಾ ಚ ತದ್ವಾಕ್ಯಂ ದೈತ್ಯ ಆಹ ರುಷಾ ಜ್ವಲನ್ ॥ ೩೧ ॥

॥ ರಾಜಪುತ್ರ ಉವಾಚ ॥

ಬಿಭೇಮಿ ನಾಹಂ ಮರಣಾತ್ಸಂಗ್ರಾಮೇ ಶತ್ರುಸಮ್ಮುಖೇ ।
ಪ್ರಾಣಿನಾಂ ಚೈವ ಸರ್ವೇಷಾಂ ಮೃತ್ಯುರ್ಭವತಿ ಸಾಂಪ್ರತಂ ॥ ೩೨ ॥

ಯದಿ ಮುಂಚಸಿ ಸಂಗ್ರಾಮೇ ಮದ್ವಧಾರ್ಥೇ ಮಹಾಶರಂ ।
ತದಾಹಂ ಸ್ವಶರೇಣಾಪಿ ಶೀಘ್ರಂ ಛೇದ್ಮಿ ನ ಸಂಶಯಃ ॥ ೩೩ ॥

ಏಕಾದಶ್ಯಾಂ ಚ ಯೇ ಮಾನಾದನ್ನಂ ಭುಂಜಂತಿ ಭೂತಲೇ ।
ಮಾತರಂ ಭ್ರಾತೃಪತ್ನೀಂ ಚ ಭಗಿನೀಂ ಚ ಸುತಾಂ ತಥಾ ॥
ಪಾಪಂ ತೇಷಾಂ ಮಮೈವಾಸ್ತು ನ ಛೇದ್ಮಿ ಯದಿ ತ್ವಚ್ಛರಂ ॥ ೩೪ ॥

೩೦-೩೧. ಯಾರು ಶಕ್ತನಾಗಿದ್ದರೂ ತನ್ನ ಗುರುವನ್ನೂ, ತಂದೆಯನ್ನೂ ಪಾಲಿಸುವುದಿಲ್ಲವೋ ಅದರಿಂದ ಅವನಿಗೆ ಎಂತಹ ಪಾಪವು ಬರುವುದೋ ಆ ಪಾಪವು ನನಗೆ ಬರಲಿ. ಎಂದು ಹೇಳಲು ಕುನಂದನನು ಕೋಪದಿಂದ ನುಡಿದನು.

೩೨. ಮರಣಕ್ಕೆ ನಾನೆಂದಿಗೂ ಅಂಜುವುದಿಲ್ಲ. ಅವರಲ್ಲಿಯೂ ಯುದ್ಧಮಾಡಿ ಶತ್ರುಸಮ್ಮುಖದಲ್ಲಿ ಮಡಿಯುವುದಕ್ಕೆ ಅಂಜುವೆನೇ? ಪ್ರತಿಯೊಂದು ಪ್ರಾಣಿಗೂ ಮೃತ್ಯುವೆಂಬುದು ನಿಶ್ಚಯವೇ ಆದುದಲ್ಲವೇ?

೩೩. ನೀನೀಗ ನನ್ನನ್ನು ಕೊಲ್ಲಲು ಮಹಾಶರವನ್ನು ಪ್ರಯೋಗಿಸುವೆಯಾದರೆ ಅದನ್ನು ಖಂಡಿತ ನನ್ನ ಬಾಣದಿಂದ ಚೂರುಚೂರುಮಾಡಿ ಬಿಡುವೆನು.

೩೪. ಏಕಾದಶಿಯ ದಿನ ಯಾರು ಅನ್ನವನ್ನು ಊಟಮಾಡುವರೋ, ಮತ್ತು ತಾಯಿ, ಅತ್ತಿಗೆ, ತಂಗಿ, ಮಗಳು ಮುಂತಾದವರನ್ನು ಕಾಮಿಸಿದ ಪಾಪಕ್ಕೆ ಭಾಗಿಯಾಗಿರುವನೋ ಅವನಿಗುಂಟಾಗುವ ಪಾಪವು ನಿನ್ನ ಬಾಣವನ್ನು ಕತ್ತರಿಸದಿದ್ದಲ್ಲಿ ನನಗುಂಟಾಗಲಿ.

ಇತಿ ತಸ್ಯ ವಚಃ ಸ್ಪಷ್ಟಂ ಶ್ರುತ್ವಾ ಶಂಕಿತಮಾನಸಃ ।
ಪ್ರತ್ಯುವಾಚ ಪುನರ್ವಾಕ್ಯಂ ಶ್ರೀಕೃಷ್ಣಂ ಸೋಽಪಿ ಸಂಸ್ಮರನ್ ॥ ೩೫ ॥

॥ ಸುನಂದನ ಉವಾಚ ॥

ಮಯಾ ಕೃಷ್ಣಾಂಘ್ರಿಯುಗಳಂ ಸೇವಿತಂ ಮಾನಸಾ ಯದಿ ।
ಕಪಟೇನ ವಿನಾ ತರ್ಹಿ ಸತ್ಯಂ ಭೂಯಾದ್ವಚೋ ಮಮ ॥ ೩೬ ॥

ಸ್ವಪತ್ನೀಂ ಚ ವಿನಾ ವೀರ ನಾನ್ಯಾಂ ಪಶ್ಯಾಮಿ ಕಾಮತಃ ।
ತೇನ ಸತ್ಯೇನ ಸಂಗ್ರಾಮೇ ವಾಕ್ಯಂ ಭೂಯಾದೃತಂ ಮಮ ॥ ೩೭ ॥

ಇತ್ಯುಕ್ತ್ವಾ ಸಾಯಕಂ ತೀಕ್ಷ್ಣಂ ವಿಮುಮೋಚ ಸುನಂದನಃ ।
ಮಂತ್ರಯಿತ್ವಾ ಚ ಮಂತ್ರೇಣ ಮಹಾಕಾಲಾನಲೋಪಮಂ ॥ ೩೮ ॥

ಪ್ರಮುಕ್ತಂ ವೀಕ್ಷ್ಯ ವಿಶಿಖಂ ಸ್ವಬಾಣೇನ ನೃಪಾತ್ಮಜಃ ।
ಸದ್ಯಶ್ಚಿಚ್ಛೇದ ಹಿ ಯಥಾ ಸರ್ಪಂ ಪಕ್ಷೇಣ ಪಕ್ಷಿರಾಟ್ ॥ ೩೯ ॥

---

೩೫. ಎಂದು ಹೇಳಲು ಸ್ಪಷ್ಟವಾದ ಈ ಮಾತನ್ನು ಕೇಳಿ ಅನುಮಾನಗೊಂಡು ಶ್ರೀಕೃಷ್ಣನನ್ನು ಸ್ಮರಿಸುಕೊಳ್ಳುತ್ತಾ ಸುನಂದನನ್ನು ಕುರಿತು ಹೇಳಿದನು.

೩೬. ನಾನು ಶ್ರೀಕೃಷ್ಣಪರಮಾತ್ಮನ ಪಾದಗಳನ್ನು ಕಪಟವಿಲ್ಲದೆ ಭಜಿಸುವೆನಾದರೆ ನನ್ನ ಮಾತು ಸತ್ಯವಾಗಲಿ.

೩೭. ನನ್ನ ಪತ್ನಿಯನ್ನು ವಿನಹ ಯಾವ ನಾರಿಯರನ್ನೂ ಕಾಮುಕದೃಷ್ಟಿಯಿಂದ ನೋಡಿಲ್ಲ. ಆ ಸತ್ಯದಿಂದಲಾದರೂ ನನ್ನ ವಾಕ್ಯವು ದಿಟವಾಗಲಿ.

೩೮. ಹೀಗೆ ಹೇಳಿ ಸುನಂದನನು ತೀಕ್ಷ್ಣವಾದ ಮಹಾಕಾಲಾನಲೋಪಮವಾದ ಬಾಣವನ್ನು ಮಂತ್ರಿಸಿ ಪ್ರಯೋಗಿಸಿದನು.

೩೯. ಸುನಂದನನು ಆ ಬಾಣವನ್ನು ನೋಡಿ ಮತ್ತೊಂದು ಬಾಣವನ್ನು ಪ್ರಯೋಗಿಸಿ ಗರುಡನು ಸರ್ಪವನ್ನು ತನ್ನ ರೆಕ್ಕೆಯಿಂದ ಹೊಡೆಯುವಂತೆ ಹೊಡೆದು ಛಿನ್ನಮಾಡಿದನು.

ಛಿನ್ನೇ ತಸ್ಮಿನ್ ಶರೇ ರಾಜನ್ ಹಾಹಾಕಾರಸ್ತದಾಭವತ್ ।
ಚಚಾಲ ಪೃಥಿವೀ ಲೋಕೈರ್ದೇವಾಸ್ತೇ ವಿಸ್ಮಯಂ ಗತಾಃ ॥ ೪೦ ॥

ಪರಾರ್ಧಃ ಪತಿತೋ ಬಾಣಃ ಪೂರ್ವಾರ್ಧಃ ಫಲಸಂಯುತಃ ।
ಶಿರಶ್ಚಿಚ್ಛೇದ ದೈತ್ಯಸ್ಯ ತರೋಃ ಸ್ಕಂಧಂ ಯಥಾ ಗಜಃ ॥ ೪೧ ॥

ಕಿರೀಟಕುಂಡಲೈರ್ಯುಕ್ತಂ ಪತಿತಂ ತಸ್ಯ ಮಸ್ತಕಂ ।
ನಿರೀಕ್ಷ್ಯ ಹಾಹಾಶಬ್ದಂ ವೈ ಚಕ್ರುರ್ದೈತ್ಯಾಶ್ಚ ದುಃಖಿತಾಃ ॥ ೪೨ ॥

ಕುನಂದನಕಬಂಧಸ್ತು ಶೀಘ್ರಮುತ್ಥಾಯ ಸಂಯುಗೇ ।
ಖಡ್ಗೇನ ಮುಷ್ಟಿಭಿಃ ಪಾದೈರ್ಬಹೂನ್ ಶತ್ರೂನ್ ಜಘಾನ ಹ ॥ ೪೩ ॥

---

೪೦. ಆ ಬಾಣವು ಚೂರಾಗಲು ಯುದ್ಧರಂಗದಲ್ಲೆಲ್ಲಾ ಹಾಹಾಕಾರವುಂಟಾಯಿತು. ಭೂಮಿಯು ನಡುಗಿತು. ಲೋಕವೆಲ್ಲಾ ಗಾಬರಿಗೊಂಡಿತು. ದೇವತೆಗಳೆಲ್ಲರೂ ವಿಸ್ಮಿತರಾದರು.

೪೧. ಆಗ ಅದರ ಉತ್ತರಾರ್ಧವು ಕೆಳಗೆ ಬಿದ್ದಿತು. ಪೂರ್ವಾರ್ಧವು ವೇಗವಾಗಿ ಹೊರಟು ಆನೆಯು ಮರವನ್ನು ಮುರಿಯುವಂತೆ ರಾಕ್ಷಸನ ಕತ್ತನ್ನು ಕತ್ತರಿಸಿತು.

೪೨. ಕಿರೀಟ ಕರ್ಣಕುಂಡಲಗಳಿಂದ ಅಲಂಕೃತವಾಗಿದ್ದ ಅವನ ತಲೆಯು ಕೆಳಗುರುಳಿತು. ರಾಕ್ಷಸರೆಲ್ಲರೂ ಹಾಹಾಕಾರಮಾಡುತ್ತಾ ದುಃಖಿಗಳಾಗಿ ಕುಳಿತರು.

೪೩. ಮತ್ತೊಂದಾಶ್ಚರ್ಯಕರವಾದ ಸಂಗತಿ ನಡೆಯಿತು. ಆ ಕುನಂದನನ ದೇಹವು ಮಾತ್ರ ಮುನ್ನಡೆಯಿತು. ಕೈಯಲ್ಲಿ ಹಿಡಿದಿದ್ದ ಖಡ್ಗದಿಂದ ಅನೇಕ ಶತ್ರುಗಳನ್ನು ಕತ್ತರಿಸಿತು.

ತತಶ್ಚ ಯದುಸೇನಾಯಾಂ ನೇದುರ್ದುಂದಭಯೋ ಮುಹುಃ ।
ಸುನಂದನೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೪೪ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ದೈತ್ಯಪುತ್ರವಧವರ್ಣನಂ ನಾಮ ಷಟ್ತ್ರಿಂಶೋಽಧ್ಯಾಯಃ

---

೪೪. ಆಗ ಯದುಸೇನೆಯಲ್ಲಿ ವಿಜಯಧ್ವನಿಗಳು ಮೊಳಗಿದವು. ಬಾರಿ ಬಾರಿಗೂ ದುಂದುಭಿಗಳನ್ನು ಬಾರಿಸಿದರು. ದೇವತೆಗಳು ಆನಂದದಿಂದ ಸುನಂದನನ ಮೇಲೆ ಪುಷ್ಪವೃಷ್ಟಿಯನ್ನು ಕರೆದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ದೈತ್ಯಪುತ್ರವಧವರ್ಣನವೆಂಬ ಮೂವತ್ತಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ್ಯಸಂಹಿತಾಯಾಂ

ಅಶ್ವಮೇಧಖಂಡೇ

ಸಪ್ತತ್ರಿಂಶೋಽಧ್ಯಾಯಃ

॥ ವಜ್ರನಾಭಿರುವಾಚ ॥

ಕುನಂದನೇ ಹತೇ ಬ್ರಹ್ಮನ್ಬಲ್ವಲೇ ಮೂರ್ಛಿತೇ ರಣೇ ।
ನ ಕೃತಂ ತು ಸಹಾಯಂ ವೈ ರುದ್ರೇಣ ಕರುಣಾತ್ಮನಾ ॥ ೧ ॥

ಕಸ್ಮಾನ್ನ ಚಾಗತೋ ರುದ್ರೋ ಯಜ್ಞಃ ಪೂರ್ಣಂ ಕಥಂ ಭವೇತ್ ।
ಕಥಂ ವಿಮುಕ್ತಸ್ತುರಗಸ್ತನ್ಮೇ ವ್ಯಾಖ್ಯಾತುಮರ್ಹಸಿ ॥ ೨ ॥

ಮೂವತ್ತೇಳನೆಯ ಅಧ್ಯಾಯವು

೧. ವಜ್ರನಾಭಿಯು ಗರ್ಗಾಚಾರ್ಯನನ್ನು ಕುರಿತು ಅನುಮಾನದಿಂದ ಪ್ರಶ್ನಿಸಿದನು:—ಪೂಜ್ಯನೇ, ಕುನಂದನನು ಸತ್ತನು. ಬಲ್ವಲನು ರಣರಂಗದಲ್ಲಿ ಮೂರ್ಛಿತನಾದನು. ಆದರೂ ಕರುಣಾಕರನಾದ, ಬಲ್ವಲನ ಆರಾಧ್ಯದೇವನಾದ ಈಶ್ವರನು ಸಹಾಯವನ್ನು ಮಾಡಲಿಲ್ಲ. ಕಾರಣವೇನು?

೨. ಏತಕ್ಕೋಸ್ಕರವಾಗಿ ರುದ್ರನು ಪ್ರತ್ಯಕ್ಷನಾಗಿ ಬರಲಿಲ್ಲ? ಉಗ್ರಸೇನ ಮಹಾರಾಜನ ಯಜ್ಞವು ಪೂರ್ಣವಾದ ಬಗೆ ಎಂತು? ಯಜ್ಞಾಶ್ವವು ಬಲ್ವಲನಿಂದ ಬಿಡಲ್ಪಟ್ಟುದು ಹೇಗೆ? ಇವೆಲ್ಲವನ್ನೂ ನನಗೆ ತಿಳಿಸಬೇಕೆಂದು ಪ್ರಾರ್ಥಿಸಿದನು.

॥ ಸೌತಿರುವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಗರ್ಗೋ ಜ್ಞಾನವತಾಂ ವರಃ ।
ಸ್ಮೃತ್ವಾ ಸರ್ವಾಂ ಕಥಾಂ ಬ್ರಹ್ಮನ್ನುವಾಚ ಯದುಸತ್ತಮಂ ॥ ೩ ॥

॥ ಗರ್ಗ ಉವಾಚ ॥

ಬಲ್ವಲೇ ಮೂರ್ಛಿತೇ ರಾಜನ್ ಹತೇ ಶೂರೇ ಕುನಂದನೇ ।
ಮುಹರ್ತೋಕ್ಷೇಪಂ ಶಿವಶ್ಚಕ್ರೇ ಪ್ರೇರಿತಸ್ತು ಸುರರ್ಷಿಣಾ ॥ ೪ ॥

ಆರುಹ್ಯ ನಂದಿನಂ ಕ್ರುದ್ಧೋ ಭಕ್ತರಕ್ಷಾಕರಃ ಶಿವಃ ।
ಚಂದ್ರಲೇಖಾಂ ವಹನ್ಮೂರ್ಧ್ನಾ ಜಟಾಜೂಟಾಂತರೇ ನೃಪ ॥ ೫ ॥

ಸರ್ಪಹಾರೈರ್ಮುಂಡಹಾರೈರ್ಭಸ್ಮಲಿಪ್ತೋ ಭಯಂಕರಃ ।
ದಶಬಾಹುಃ ಪಂಚಮುಖೋ ನೇತ್ರೈಃ ಪಂಚದಶೈರ್ವೃತಃ ॥ ೬ ॥

ಸಿಂಹಚರ್ಮಾಂಬರಧರೋ ಮದಮತ್ತೋ ಲಯಂಕರಃ ।
ತ್ರಿಶೂಲಪಟ್ಟಿಶಧರೋ ಧನುರ್ಬಾಣಧರಃ ಪರಃ ॥ ೭ ॥

---

೩. ಸೌತಿಯು ಹೇಳಿದನು:—ಆಗ ಪರಮಜ್ಞಾನಿಯಾದ ಗರ್ಗಾಚಾರ್ಯನು ಮುಂದೆ ನಡೆದುದೆಲ್ಲವನ್ನೂ ಸ್ಮರಿಸಿಕೊಂಡು ವಜ್ರನಾಭಿಗೆ ಹೇಳಲು ಪ್ರಾರಂಭಿಸಿದನು.

೪. ಬಲ್ವಲನು ಮೂರ್ಛಿತನಾಗಿ ಬಿದ್ದುಬಿಟ್ಟನು. ಇತ್ತ ಶೂರನಾದ ಕುನಂದನು ಸತ್ತುಹೋದನು. ಆಗ ಋಷಿಗಳು ಈ ವಿಷಯವನ್ನು ಶಿವನಿಗೆ ತಿಳಿಸಿದರು. ಶಿವನು ಅತಿಸಿಟ್ಟಿನಿಂದ ಹೊರಟನು.

೫. ನಂದಿಯನ್ನು ಏರಿ ಭಕ್ತರಕ್ಷಾತತ್ಪರನಾಗಿ ಹೊರಟನು. ಜಟಾಜೂಟದಲ್ಲಿ ಚಂದ್ರನನ್ನು ಧರಿಸಿದ್ದನು.

೬-೭. ಸರ್ಪಗಳನ್ನೂ, ತಲೆಯ ಬುರುಡೆಗಳನ್ನೂ ಹಾರಮಾಡಿಕೊಂಡಿದ್ದನು. ಮೈಗೆಲ್ಲಾ ಭಸ್ಮವನ್ನು ಲೇಪಿಸಿಕೊಂಡಿದ್ದನು. ಹತ್ತು ಕೈಗಳೂ, ಐದು ಮುಖಗಳೂ ಇದ್ದವು. ಹದಿನೈದು ಕಣ್ಣುಗಳಿದ್ದವು. ಸಿಂಹದ ಚರ್ಮವನ್ನು ಉಟ್ಟಿದ್ದನು. ಪ್ರಳಯಕಾಲದ ರುದ್ರನಂತೆ ಭಯಂಕರನಾಗಿದ್ದನು. ತ್ರಿಶೂಲ, ಪಟ್ಟಿಶ, ಧನುಸ್ಸು, ಬಾಣಗಳನ್ನು ಕೈಗಳಲ್ಲಿ ಹಿಡಿದಿದ್ದನು.

ಕುಠಾರಪಾಶಪರಿಘಭಿಂದಿಪಾಲೈರ್ವಿಭೂಷಿತಃ ।
ಸಹಸ್ರರವಿಸಂಕಾಶಃ ಸರ್ವಭೂತಗಣಾವೃತಃ　　　　॥ ೮ ॥

ಹಂತುಂ ಸರ್ವಾನ್ವೃಷ್ಣಿವರಾನ್ಕಾರ್ಷ್ಣಿರ್ಗಜಃ ಪ್ರಮುಖಾನ್ಮೃಧೇ ।
ಕೈಲಾಸಾದಾಯಯೌ ಶೀಘ್ರಂ ಚಾಲಯನ್ಪೃಥಿವೀತಲಂ　　　　॥ ೯ ॥

ಕೋಲಾಹಲೋ ಮಹಾನಾಸೀದಾಕಾಶೇ ಭೂತಲೇ ನೃಪ ।
ದೇವದೈತ್ಯನರಾಃ ಸರ್ವೇ ಭಯಂ ಪ್ರಾಪುಶ್ಚ ವಿಸ್ಮಿತಾಃ　　　　॥ ೧೦ ॥

ಸಗಣಂ ಸಪರೀವಾರಮಾಗತಂ ವೀಕ್ಷ್ಯ ಶಂಕರಂ ।
ಕ್ರುದ್ಧಂ ಪ್ರಲಯಕರ್ತಾರಂ ಭಯಂ ಪ್ರಾಪುರ್ಯದೂತ್ತಮಾಃ　　　　॥ ೧೧ ॥

ಅನಿರುದ್ಧಸ್ಯ ಚ ಮುಖಂ ನಿಸ್ತೇಜಸ್ಕಮಭೂದ್ಭಯಾತ್ ।
ಚಕಂಪೇ ಹೃದಯಂ ತಸ್ಯ ದುಃಖಿತಸ್ಯ ರಣಾಂಗಣೇ　　　　॥ ೧೨ ॥

---

೮. ಕೊಡಲಿ, ಪಾಶ, ಪರಿಘ, ಭಿಂದಿಪಾಲ ಮುಂತಾದ ಆಯುಧಗಳಿಂದ ಕೂಡಿದ್ದನು. ಸಾವಿರ ಸೂರ್ಯರಂತೆ ಪ್ರಕಾಶಿಸುತ್ತಿದ್ದನು. ಸರ್ವಭೂತಗಣಗಳಿಂದಲೂ ಪರಿವೃತನಾಗಿದ್ದನು.

೯. ಕೈಲಾಸದಿಂದ ಬರುತ್ತಿರಲು ಪೃಥ್ವಿಯು ನಡುಗುತ್ತಿತ್ತು. ಯಾದವರನ್ನೆಲ್ಲಾ ಕೊಲ್ಲಲು ಶಿವನು ಅತಿ ಕೋಪದಿಂದ ಬರುತ್ತಿದ್ದನು.

೧೦. ಆಗ ಭೂವ್ಯೋಂತರಿಕ್ಷಗಳಲ್ಲಿ ಮಹಾಕೋಲಾಹಲವುಂಟಾಯಿತು. ದೇವತೆಗಳೂ, ದೈತ್ಯರೂ, ಮನುಷ್ಯರೂ ಎಲ್ಲರೂ ಹೆದರಿ ಅನಿರೀಕ್ಷಿತವಾಗಿ ಈಶ್ವರನು ಬಂದುದಕ್ಕೆ ವಿಸ್ಮಿತರಾದರು.

೧೧. ಪ್ರಮಥಗಣಗಳೊಡನೆಯೂ, ಪರಿವಾರದೊಡನೆಯೂ ಬಂದಿರುವ ಪ್ರಳಯಕಾರಕನಾದ ಶಂಕರನನ್ನು ನೋಡಿ ಯಾದವರೆಲ್ಲರೂ ಬಹಳ ಭಯಪಟ್ಟರು.

೧೨. ಅನಿರುದ್ಧನ ಮುಖವು ತೇಜೋಹೀನವಾಯಿತು. ಭಯದಿಂದ ಕಂಗೆಟ್ಟನು. ಸಾಕ್ಷಾದೀಶ್ವರನೇ ಯುದ್ಧಕ್ಕೆ ಬಂದುದನ್ನು ನೋಡಿ ಹೃದಯವು ನಡುಗಿತು. ರಣಾಂಗಣದಲ್ಲಿ ದುಃಖಮಾಡುತ್ತಾ ನಿಂತನು.

ತತಃ ಪ್ರತ್ಯಾಹ ವಚನಂ ನಿಷ್ಠುರಂ ಸರ್ವಯಾದವಾನ್ ।
ಶೂಲಂ ಗೃಹೀತ್ವಾ ಹಸ್ತೇನ ಗಿರೀಶಃ ಕ್ರೋಧಪೂರಿತಃ ॥ ೧೩ ॥

॥ ಶಂಕರ ಉವಾಚ ॥

ಅನಿರುದ್ಧಃ ಕುತ್ರ ಗತೋ ಗತಃ ಕುತ್ರ ಸುನಂದನಃ ।
ಸಾಂಬಾದಯಃ ಕುತ್ರ ಗತಾ ಭಕ್ತಂ ಹತ್ವಾ ಕುನಂದನಂ ॥ ೧೪ ॥

ಬಲ್ವಲಂ ಮೂರ್ಛಿತಂ ಕೃತ್ವಾ ಮದ್ಭಕ್ತಂ ದೈತ್ಯಸತ್ತಮಂ ।
ತಸ್ಯಾನುಗಾನ್ಮೃಧೇ ಹತ್ವಾ ಕುತ್ರ ಯಾಸ್ಯಂತಿ ವೃಷ್ಣಯಃ ॥ ೧೫ ॥

ತಸ್ಮಾತ್ಸರ್ವಾನ್ ಹನಿಷ್ಯಾಮಿ ಮದ್ಭಕ್ತಾನಾಂ ರಿಪೂನ್ಮೃಧೇ ।
ಅಹಂ ವಿಷ್ಣುರ್ವಿಧಿಶ್ಚೈತೇ ಭಕ್ತಂ ರಕ್ಷಂತಿ ದುಃಖತಃ ॥ ೧೬ ॥

---

೧೩. ಶಂಕರನು ಕೈಯಲ್ಲಿ ಶೂಲವನ್ನು ಹಿಡಿದು ಯುದ್ಧಸನ್ನದ್ಧನಾಗಿ ಅತಿ ಕೋಪಗೊಂಡು ಯಾದವರನ್ನು ಕುರಿತು ನಿಷ್ಠುರವಾಗಿ ಮಾತನಾಡಿದನು.

೧೪. ಆ ಅನಿರುದ್ಧನು ಎಲ್ಲಿ ಹೋದನು ? ನನ್ನ ಭಕ್ತನಾದ ಕುನಂದನನ್ನು ಕೊಂದ ಸುನಂದನು ಎಲ್ಲಿಗೆ ತೆರಳಿರುವನು? ಸಾಂಬಾದಿಗಳೆಲ್ಲರೂ ಎಲ್ಲಿಗೆ ಹೋಗಿರುವರು ?

೧೫. ನನ್ನ ಭಕ್ತನೂ, ದೈತ್ಯಕುಲಶಿರೋಮಣಿಯೂ ಆದ ಬಲ್ವಲನನ್ನು ಮೂರ್ಛೆಗೊಳಿಸಿರುವಿರಿ. ಅಲ್ಲದೆ ಅವನ ಅನುಯಾಯಿಗಳನ್ನನೇಕರನ್ನು ಕೊಂದಿರುವಿರಿ.

೧೬. ಆದುದರಿಂದ ನನ್ನ ಭಕ್ತರ ವೈರಿಗಳಾದ ನಿಮ್ಮೆಲ್ಲರನ್ನೂ ಕೊಲ್ಲುವೆನು. ನಾನು, ಬ್ರಹ್ಮ, ವಿಷ್ಣು ಎಲ್ಲರೂ ನಮ್ಮ ನಮ್ಮ ಭಕ್ತರನ್ನು ದುಃಖದಿಂದ ಕಾಪಾಡುವೆವು.

॥ ಗರ್ಗ ಉವಾಚ ॥

ಇತ್ಯುದೀರ್ಯಾನಿರುದ್ಧಂ ಸ ಪ್ರೇಷಯಾಮಾಸ ಭೈರವಂ ।
ತ್ವಂ ಹಿ ಯೋದ್ಧುಂ ಗಚ್ಛ ಶೂರ ಕಾರ್ಷ್ಣಿಜಂ ಜಯಿನಂ ಮೃಧೇ ॥ ೧೭ ॥

ಸುನಂದನಂ ನಂದಿನಂ ಚ ಪ್ರೇಷಯಾಮಾಸ ರೋಷತಃ ।
ಗದಂ ಚ ವೀರಭದ್ರಂ ವೈ ಸಾಂಬಂ ಚ ಶಿಖಿವಾಹನಂ ॥ ೧೮ ॥

ಭಾನುಂ ಚ ಭೃಂಗಿಣಂ ಯುದ್ಧೇ ವಿರೂಪಾಕ್ಷಃ ಸಮಾದಿಶತ್ ।
ಯದೂಂಶ್ಚ ಪ್ರೇಷಯಾಮಾಸ ಭೂತಪ್ರೇತಾಂಸ್ತತಃ ಶಿವಃ ॥ ೧೯ ॥

ತತಸ್ತೇ ರುದ್ರವಚನಾದ್ಭೂತಪ್ರೇತವಿನಾಯಕಾಃ ।
ಭೈರವಾ ಪ್ರಮಥಾಶ್ಚೈವ ವೇತಲಾ ಬ್ರಹ್ಮರಾಕ್ಷಸಾಃ ॥ ೨೦ ॥

೧೭-೧೮. ಎಂದು ಹೇಳಿ ಶಂಕರನು ಭೈರವನನ್ನು ಅನಿರುದ್ಧನೊಡನೆ ಯುದ್ಧಮಾಡಲು, 'ಎಲೈ ವೀರನೇ ನೀನು ಅನಿರುದ್ಧನನ್ನು ಜಯಿಸಿಕೊಂಡು ಬಾ' ಎಂದು ಕಳುಹಿಸಿದನು. ಅನಂತರ ನಂದಿಯನ್ನು ಸುನಂದನನೊಡನೆ ಯುದ್ಧಮಾಡಲೂ, ವೀರಭದ್ರನನ್ನು ಗದನೊಡನೆ ಯುದ್ಧಮಾಡಲೂ, ಸ್ಕಂದನನ್ನು ಸಾಂಬನೊಡನೆ ಯುದ್ಧಮಾಡಲೂ ಕಳುಹಿಸಿದನು.

೧೯. ಭೃಂಗಿಯನ್ನು ಭಾನುವಿನೊಡನೆ ಯುದ್ಧಮಾಡಲೂ, ಭೂತಪ್ರೇತ ಗಣಗಳನ್ನು ಯದುಯೋಧರ ಮೇಲೆ ಯುದ್ಧಮಾಡಲೂ ಕಳುಹಿಸಿದನು.

೨೦. ಆಗ ಭೂತ, ಪ್ರೇತ, ವಿನಾಯಕ, ಭೈರವ, ಪ್ರಮಥಗಣಗಳು, ಬೇತಾಳಗಳು, ಬ್ರಹ್ಮರಾಕ್ಷಸರು, ಉನ್ಮಾದರು, ಕೂಷ್ಮಾಂಡರೆಂಬುವರು, ಇವರೆಲ್ಲರೂ ಕೋಟ್ಯಾನುಕೋಟಿ ಜನರು ರುದ್ರನ ಅಪ್ಪಣೆಯನ್ನು ಅಂಗೀಕರಿಸಿ ಯಾದವರ ಮೇಲೆ ನುಗ್ಗಿದರು.

ಉನ್ಮಾದಾಶ್ಚೈವ ಕೂಷ್ಮಾಂಡಾ ಆಜಗ್ಮುಃ ಕೊಟಿಶೋ ಮೃಧೇ ।
ಭೂತಾ ನಿಜಘ್ನುಶ್ಚಾಂಗಾರ್ಯೈರ್ಯಾದವಾಂಶ್ಚ ವಿನಾಯಕಾಃ ॥ ೨೧ ॥

ಪಟ್ಟಿಶೈರ್ಭೈರವಾಶ್ಶೂಲೈಃ ಖಟ್ವಾಂಗೈಃ ಪ್ರಮಥಾಃ ಕಿಲ ।
ಜನಾನಶ್ವಾನ್ಗೃಹೀತ್ವಾ ತು ಭಕ್ಷ್ಯಂತಿ ಬ್ರಹ್ಮರಾಕ್ಷಸಾಃ ॥ ೨೨ ॥

ಯಾತುಧಾನಾಶ್ಚ ವರ್ಯಂತೋ ಮನುಷ್ಯಾಣಾಂ ಶಿರಾಂಸಿ ಚ ।
ಕಪಾಲೈಸ್ತತ್ರ ವೇತಾಲಾ ಪಿಬಂತೋ ರುಧಿರಂ ರಣೇ ॥ ೨೩ ॥

ಪಿಶಾಚಾಸ್ತತ್ರ ನೃತ್ಯಂತಃ ಪ್ರೇತಾ ಗಾಯಂತ ಏವ ಹಿ ।
ಶಿರಾಂಸಿ ಕಂದುಕಾನೀವ ಕ್ಷೇಪಯಂತೋ ಮುಹುರ್ಮುಹುಃ ॥ ೨೪ ॥

ಅಟ್ಟಹಾಸಂ ಪ್ರಕುರ್ವಂತಃ ಪ್ರಧಾವಂತ ಇತಸ್ತತಃ ।
ಗಜಾನ್ರಥಾಂಶ್ಚ ವರ್ಯಂತೋ ದೃಶ್ಯಂತೇ ರಣಮಂಡಲೇ ॥ ೨೫ ॥

೨೧–೨೨. ಭೂತಗಳು ಬೆಂಕಿಯನ್ನು ಯಾದವರ ಮೇಲೆ ಸುರಿಸಹತ್ತಿದವು. ವಿನಾಯಕಪಂಗಡದವರು ಯಾದವರನ್ನು ಪಟ್ಟಿಶಗಳಿಂದ ಹೊಡೆಯುತ್ತಿದ್ದರು. ಭೈರವರು ಶೂಲಗಳಿಂದಲೂ, ಪ್ರಮಥಗಣಗಳು ಖಟ್ವಾಂಗಗಳಿಂದಲೂ ಹೊಡೆಯುತ್ತಿದ್ದರು. ಬ್ರಹ್ಮರಾಕ್ಷಸರು ಜನರನ್ನೂ ಕುದುರೆ ಮುಂತಾದವುಗಳನ್ನೂ ಹಿಡಿದು ಕೊಂಡು ತಿನ್ನುತ್ತಿದ್ದವು.

೨೩. ರಾಕ್ಷಸರು ಯಾದವರ ತಲೆಯನ್ನು ಕತ್ತರಿಸುತ್ತಿದ್ದರು. ಆಗ ಭೇತಾಳಗಳು ಕಪಾಲಗಳಿಂದ ಸತ್ತವರ ರಕ್ತವನ್ನು ಹಿಡಿದುಕೊಂಡು ಕುಡಿಯುತ್ತಿದ್ದವು.

೨೪–೨೫. ಪಿಶಾಚಿಗಳು ಆನಂದದಿಂದ ನರ್ತಿಸುತ್ತಿದ್ದವು. ತಲೆಗಳನ್ನು ಚಂಡಿನಂತೆ ಎಸೆಯುತ್ತಿದ್ದವು. ಅತ್ತಿತ್ತ ತಿರುಗುತ್ತಾ ವಿಕಟವಾಗಿ ನಗುತ್ತಾ ಅಟ್ಟಹಾಸಮಾಡುತ್ತಿದ್ದವು. ಆನೆಗಳನ್ನೂ, ರಥಗಳನ್ನೂ ರಣರಂಗದಲ್ಲೆಲ್ಲಾ ಅಗಿಯುತ್ತಾ ಸಂಚರಿಸುತ್ತಿದ್ದವು.

ರಕ್ತಂ ಪಿಶಾಚ್ಯೋ ಡಾಕಿನ್ಯೋ ಪಾಯಯಂತ್ಯಃ ಸುತಾನ್ಮೃಧೇ ।
ಮಾ ರೋದೀರೀತಿ ವಾದಿನ್ಯ ಅಕ್ಷೀಣಿ ಚ ದದಾಮು ರುತ್ ॥ ೨೬ ॥

ಉನ್ಮಾದಾಶ್ಚೈವ ಕೂಷ್ಮಾಂಡಾ ನಿರ್ಮಾಯ ಮುಂಡಭಿಃ ಸ್ರಜಃ ।
ಸಂಯಚ್ಛಂತಿ ಮಹೇಶಾಯ ಶೂರಾಣಾಂ ಸ್ವರ್ಗಗಾಮಿನಾಂ ॥ ೨೭ ॥

ಹಾಹಾಕಾರಸ್ತದೈವಾಸೀದ್ಯದುಸೈನ್ಯೇ ನೃಪೇಶ್ವರ ।
ದುದ್ರುವಂತೋ ಭಯಾದಶ್ವಾ ಧಾವಂತಸ್ತತ್ರ ದಂತಿನಃ ॥ ೨೮ ॥

ವೀರಾಃ ಪ್ರಪತಿತಾ ಯುದ್ಧೇ ಗತಾ ಮೃತ್ಯುಂ ಸಹಸ್ರಶಃ ।
ದೃಷ್ಟ್ವಾ ಚೇತ್ಥಂ ಗಣಬಲಂ ದೀಪ್ತಿಮಾನ್ಮಾಧವಾತ್ಮಜಃ ॥ ೨೯ ॥

---

೨೬. ಪಿಶಾಚಿಗಳೂ, ಡಾಕಿನಿಗಳೂ ಆ ರಣರಂಗದಲ್ಲಿ ರಕ್ತವನ್ನು ಕುಡಿಯುತ್ತಾ, ಅಳುತ್ತಿರುವ ತಮ್ಮ ಮಕ್ಕಳನ್ನು ಅಳಬೇಡಿರೆಂದು ಸಮಾಧಾನ ಮಾಡತ್ತಾ, ಆ ಮಕ್ಕಳಿಗೆ ಸತ್ತವರ ಕಣ್ಣುಗಳನ್ನು ಕಿತ್ತುಕೊಡುತ್ತಿದ್ದವು.

೨೭. ಉನ್ಮಾದಗಳೂ, ಕೂಷ್ಮಾಂಡಗಳೂ ಸತ್ತು ಸ್ವರ್ಗವನ್ನೇರಿದ ಶೂರರಾದವರ ತಲೆಗಳನ್ನು ಮಾಲೆಯಾಗಿ ಕಟ್ಟಿ ರುದ್ರನಿಗೆ ಅರ್ಪಿಸುತ್ತಿದ್ದವು.

೨೮. ಯದುಸೈನ್ಯದಲ್ಲಿ ಗಾಬರಿಯಿಂದ ಕೋಲಾಹಲವೆದ್ದಿತು. ಎಲ್ಲರೂ ಭಯಪಟ್ಟು ಓಡಲು ಪ್ರಾರಂಭಿಸಿದರು. ಕುದುರೆಗಳೂ, ಆನೆಗಳೂ ಕಿರುಚುತ್ತಾ ಭಯದಿಂದ ಅತ್ತಿತ್ತ ಓಡಾಡಿದವು.

೨೯. ವೀರರೆಲ್ಲಾ ಬಿದ್ದುರುಳಿದರು. ಸಾವಿರಾರು ಜನರು ಮೃತ್ಯುವನ್ನು ಹೊಂದಿದರು. ಅತಿಕಷ್ಟಕ್ಕೆ ಸಿಕ್ಕಿ ನರಳಿದರು. ಇದನ್ನು ನೋಡಿ ವೀರನಾದ ಅನಿರುದ್ಧನು ತೀಕ್ಷ್ಣವಾದ ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಭೂತಗಳ ಮೇಲೆ ಪ್ರಯೋಗಿಸಿದನು.

ಚಾಪೇ ನಿಧಾಯ ವಿಶಿಖಾನ್ಮುಮೋಚ ಪರಮಾದ್ಭುತಾನ್ ।
ತೇ ಶರಾ ವಿವಿಶುಸ್ತಿಗ್ಮಾ ಭೂತಪ್ರೇತವಿನಾಯಕಾನ್ ॥ ೩೦ ॥

ಕೋಟಿಶಃ ಕೋಟಿಶೋ ರಾಜನ್ಯಥಾರಣ್ಯಂ ಶಿಖಂಡಿನಃ ।
ತತಶ್ಚ ದುದ್ರುವುರ್ಭಿನ್ನಾಃ ಸರ್ವೇ ಭೂತಗಣಾಃ ಶರೈಃ ॥ ೩೧ ॥

ಕೇಚಿನ್ನಿಪತಿತಾ ಯುದ್ಧೇ ಕೇಚಿದ್ವೈ ನಿಧನಂ ಗತಾಃ ।
ನ ಹತಾಶ್ಚ ಶರೈಃ ಕೇಽಪಿ ಪತಿತಾಃ ಪೂರ್ವಮೇವ ಚ ॥ ೩೨ ॥

ಪಲಾಯಿತೇ ಪ್ರೇತಗಣೇ ಭೈರವಃ ಕ್ರೋಧಪೂರಿತಃ ।
ತ್ರಿಶೂಲೀ ಸಾರಮೇಯಸ್ಥ ಆಜಗಾಮ ಕೃತಾಂತವತ್ ॥ ೩೩ ॥

ತಂ ದೃಷ್ಟ್ವಾ ಕಾಲರೂಪಂ ಚ ಭೈರವಂ ತು ಭಯಂಕರಂ ।
ನ ಕೋಽಪಿ ಯುಯುಧೇ ತೇನಾನಿರುದ್ಧೋ ಯುಯುಧೇ ನೃಪ ॥ ೩೪ ॥

೩೦–೩೧. ಆ ತೀಕ್ಷ್ಣವಾದ ಬಾಣಗಳು ಭೂತ, ಪ್ರೇತ, ವಿನಾಯಕ ಮುಂತಾದ ಗಣಗಳನ್ನು ಸೇರಿ ತೊಂದರೆಪಡಿಸಿದವು. ಆಗ ಆ ಭೂತಪ್ರೇತಗಳು ನವಿಲುಗಳು ಹೆದರಿ ಅರಣ್ಯವನ್ನು ಸೇರುವಂತೆ ಹೆದರಿ ಓಡಲು ಪ್ರಾರಂಭಿಸಿದವು.

೩೨. ಕೆಲವರು ಓಡುವ ಭರದಲ್ಲಿ ನೆಲದಮೇಲುರುಳಿದರು. ಕೆಲವರು ಸತ್ತುಹೋದರು. ಮತ್ತೆ ಕೆಲವರು ಬಾಣಗಳ ಏಟು ಬೀಳುವುದಕ್ಕಿಂತ ಮುಂಚಿತವಾಗಿ ಬಿದ್ದುಬಿಡುತ್ತಿದ್ದರು.

೩೩. ಈ ರೀತಿಯಾಗಿ ಪ್ರೇತಗಣಗಳು ಓಡಿಹೋಗುತ್ತಿರಲಾಗಿ ಭೈರವನು ತನ್ನ ವಾಹನವಾದ ನಾಯಿಯ ಮೇಲೆ ಕುಳಿತುಕೊಂಡು ಯಮನೋಪಾದಿಯಲ್ಲಿ ಯುದ್ಧರಂಗಕ್ಕೆ ಬಂದನು.

೩೪. ಕಾಲನಂತೆ ಭಯಂಕರನಾಗಿ ಬರುತ್ತಿರುವ ಭೈರವನನ್ನು ನೋಡಿ ಎಲ್ಲರೂ ಹೆದರಿದರು. ಅವನನ್ನು ಎದುರಿಸಲು ಯಾರೂ ಸಮರ್ಥರಾಗಲಿಲ್ಲ. ಆಗ ಅನಿರುದ್ಧನು ಅವನೊಡನೆ ಯುದ್ಧಮಾಡಲು ಎದುರಾದನು.

ಅನಿರುದ್ಧಃ ಪಂಚಶರೈಸ್ತತಾಡ ಭೈರವಂ ಮೃಧೇ ।
ಸ ಚಾಪಿ ಪರಿಘೇಣಾಪಿ ಬಭಂಜ ತದ್ರಥಂ ವರಂ ॥ ೩೫ ॥

ಸೋಽಪ್ಯನ್ಯಂ ರಥಮಾರುಹ್ಯ ಸಜ್ಜಂ ಕೃತ್ವಾ ಧನುರ್ದೃಢಂ ।
ತತಾಡ ದಶಭಿರ್ಬಾಣೈ ರೌದ್ರಂ ಮಾಯಾವಿನಂ ಮೃಧೇ ॥ ೩೬ ॥

ತೈರ್ಬಾಣೈರ್ನಿಹತಸ್ಸೋಽಪಿ ಕಿಂಚಿತ್ಕಶ್ಮಲತಾಂ ಗತಃ ।
ತ್ರಿಶೂಲಂ ತ್ರಿಶಿಖಂ ತಸ್ಮೈ ಚಿಕ್ಷೇಪ ಜ್ವಲನಪ್ರಭಂ ॥ ೩೭ ॥

ಶೂಲಂ ಸಮಾಗತಂ ದೃಷ್ಟ್ವಾ ಬಾಣೈಶ್ಚಿಚ್ಛೇದ ಕಾರ್ಷ್ಣಿಜಃ ।
ಛಿನ್ನಂ ಸ್ವೀಯಂ ತ್ರಿಶೂಲಂ ವೈ ದೃಷ್ಟ್ವಾ ರುದ್ರಸುತೋ ಬಲೀ ॥ ೩೮ ॥

---

೩೫. ಐದು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಅನಿರುದ್ಧನು ಭೈರವನನ್ನು ಹೊಡದನು. ಆಗ ಭೈರವನು ಪರಿಘಾಯುಧದಿಂದ ಅನಿರುದ್ಧನ ರಥವನ್ನು ಹೊಡದನು. ಅದು ಚೂರಾಯಿತು.

೩೬. ಆಗ ಅನಿರುದ್ಧನು ಬೇರೊಂದು ರಥವನ್ನೇರಿ ಧನುಸ್ಸಿಗೆ ಹೆದೆಯನ್ನೇರಿಸಿ ಹತ್ತು ಬಾಣಗಳನ್ನು ಅದರಲ್ಲಿ ಹೂಡಿ ರೌದ್ರಸ್ವರೂಪನೂ, ಮಾಯಾವಿಯೂ ಆದ ಆ ಭೈರವನನ್ನು ಹೊಡೆದನು.

೩೭. ಅದರಿಂದ ಭೈರವನಿಗೆ ನೋವಾಯಿತು. ಸ್ವಲ್ಪ ದುಃಖಪಟ್ಟನು. ಅನಂತರ ಅತಿರೋಷದಿಂದ ಉರಿಯುತ್ತಿರುವ ಒಂದು ತ್ರಿಶೂಲವನ್ನು ತೆಗೆದುಕೊಂಡು ಅನಿರುದ್ಧನಮೇಲೆ ಪ್ರಯೋಗಿಸಿದನು.

೩೮. ಶೂಲವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಅನಿರುದ್ಧನು ಬಾಣವನ್ನು ಪ್ರಯೋಗಿಸಿ ಅದನ್ನು ತುಂಡುಮಾಡಿದನು. ತನ್ನ ಶೂಲವು ತುಂಡಾದುದನ್ನು ನೋಡಿ ರುದ್ರನ ಮಗನಾದ ಭೈರವನು ಮಾಯೆಯಿಂದ ತನ್ನ ಬಾಯಿಯಲ್ಲಿ ಉರಿಯನ್ನು ಸೃಷ್ಟಿಸಿ ಅದನ್ನು ಪ್ರಯೋಗಿಸಿದನು.

ಸಸೃಜೇ ಮಾಯಯಾ ತತ್ರ ಮುಖಾದನಲಮೇವ ಚ ।
ತೇನಾಗ್ನಿನಾ ಜಜ್ವಲುಶ್ಚ ಮಹೀವೃಕ್ಷಾ ದಿಶೋ ದಶ ॥ ೩೯ ॥

ಪದಾತೀನಾಂ ರಥಾನಾಂ ಚ ಹಯಾನಾಂ ದಂತಿನಾಂ ತಥಾ ।
ಜಜ್ವಲುಶ್ಚ ಶರೀರಾಣಿ ಮಂಜುಪುಷ್ಪಪ್ರತೂಲವತ್ ॥ ೪೦ ॥

ಕೇಚಿತ್ಪ್ರಜ್ವಲಿತಾ ವೀರಾಃ ಕೇಚಿದ್ವೈ ಭಸ್ಮತಾಂ ಗತಾಃ ।
ಅಗ್ನಿನಾ ಪೂರಿತಂ ಸೈನ್ಯಂ ಕೃಷ್ಣಂ ಕೇಚಿತ್ಸ್ಮರಂತಿ ಹಿ ॥ ೪೧ ॥

ಸೇನಾಂ ಭಯಾತುರಾಂ ದೃಷ್ಟ್ವಾನಿರುದ್ಧೋ ಧನ್ವಿನಾಂ ವರಃ ।
ದಧಾರ ವಿಶಿಖಂ ಚಾಪೇ ಜ್ಞಾತ್ವಾ ಮಾಯಾಂ ವಿನಿರ್ಮಿತಾಂ ॥ ೪೨ ॥

ಮಂತ್ರಯಿತ್ವಾ ಚ ಮಂತ್ರೇಣ ಪರ್ಜನ್ಯಾಸ್ತ್ರೇಣ ಸಾಯಕಂ ।
ಮುಮೋಚ ಗಗನೇ ಶೀಘ್ರಂ ಸ್ಮರನ್ಕೃಷ್ಣಪದಾಂಬುಜಂ ॥ ೪೩ ॥

೩೯–೪೦. ಅವನ ಬಾಯಿಂದ ಹೊರಟ ಉರಿಯು ದಿಕ್ಕುದಿಕ್ಕುಗಳಲ್ಲಿಯೂ ಹಬ್ಬಿತು. ಗಿಡಮರಗಳೆಲ್ಲವೂ ಉರಿಯತೊಡಗಿದವು. ಕಾಲಾಳುಗಳು, ರಥಗಳು, ಕುದುರೆಗಳು, ಆನೆಗಳು ಇವುಗಳೆಲ್ಲಾ ಉರಿಯಲ್ಲಿ ಸಿಕ್ಕಿಕೊಂಡವು. ಅವುಗಳ ಶರೀರದಲ್ಲಿ ಅಲ್ಲಲ್ಲೇ ಉರಿಯುತ್ತಿರುವ ಉರಿಯನ್ನು ನೋಡಿದರೆ ಮನೋಹರವಾದ ಪುಷ್ಪಗಳ ಗೊಂಚಲನ್ನಿಟ್ಟಿರುವಂತೆ ಕಾಣುತ್ತಿತ್ತು.

೪೧. ಕೆಲವರಿಗೆ ಉರಿಯು ಹತ್ತಿಕೊಂಡಿದ್ದುದರಿಂದ ಉರಿಯತೊಡಗಿದರು. ಕೆಲವರು ಸುಟ್ಟು ಬೂದಿಯಾದರು. ಕೆಲವರು ಕೃಷ್ಣನಿಗೆ ಮೊರೆಯಿಟ್ಟರು.

೪೨. ಈ ರೀತಿ ತನ್ನ ಸೈನ್ಯವು ಭಯಗೊಂಡಿರುವುದನ್ನು ನೋಡಿ ಅನಿರುದ್ಧನು ಇದು ಭೈರವನ ಮಾಯೆಯಿಂದ ಆದುದೆಂದು ತಿಳಿದು ಒಂದು ಅಸ್ತ್ರವನ್ನು ಧನುಸ್ಸಿಗೆ ಹೂಡಿದನು.

೪೩. ಅದು ಪರ್ಜನ್ಯಾಸ್ತ್ರವು. ಅದನ್ನು ಮಂತ್ರಿಸಿ ಶ್ರೀಕೃಷ್ಣಪರಮಾತ್ಮನ ಪಾದಾರವಿಂದಗಳನ್ನು ನೆನೆಸಿಕೊಂಡು ಆಕಾಶದಲ್ಲಿ ಬಿಟ್ಟನು.

ಶರೇ ಮುಕ್ತೇ ಸಮಾಗತ್ಯ ಮೇಘಾಃ ಪ್ರವವೃಷುರ್ಜಲಂ ।
ಅಗ್ನಿಃ ಶಾಂತಿಂ ಗತೋ ರಾಜನ್ಯಥಾ ಪ್ರಾವೃಟ್ ತಥಾ ಬಭೌ ॥ ೪೪ ॥

ಶಿಖಂಡಿನಃ ಕೋಕಿಲಾಶ್ಚ ಚಾತಕಾಃ ಸಾರಸಾದಯಃ ।
ಮಂಡೂಕಾದ್ಯಾಶ್ಚ ಪ್ರಜಗುರಿಂದ್ರಗೋಪಾ ವಿರೇಜಿರೇ ॥ ೪೫ ॥

ಪುರಂದರಸ್ಯ ಚಾಪೇನ ಸೌದಾಮಿನ್ಯಾ ಬಭೌ ನಭಃ ।
ಪ್ರಯಾಸಂ ನಿಷ್ಫಲಂ ದೃಷ್ಟ್ವಾ ಭೈರವೋ ಭೈರವಂ ರವಂ ॥ ೪೬ ॥

ಚಕಾರ ಸ್ವಮುಖೇನಾಪಿ ಸರ್ವೇಷಾಂ ತ್ರಾಸಯನ್ಮನಃ ।
ನನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಿಲೈಸ್ಸಹ ॥ ೪೭ ॥

---

೪೪. ಬಾಣವನ್ನು ಬಿಡಲು ಅದರಿಂದ ಆಕಾಶದಲ್ಲೆಲ್ಲಾ ಮೇಘಗಳು ತುಂಬಿಕೊಂಡವು. ಮಳೆಯು ಸುರಿಯಿತು. ಅಗ್ನಿಯೆಲ್ಲಾ ಶಾಂತವಾಯಿತು. ಮಳೆಗಾಲದಂತೆ ಶೈತ್ಯವು ಎಲ್ಲೆಲ್ಲೂ ತುಂಬಿತು.

೪೫. ನವಿಲುಗಳು ಆನಂದದ ಕೇಕಾಧ್ವನಿಮಾಡಿದವು. ಕೋಗಿಲೆಗಳು ಹಾಡಿದವು. ಚಾತಕಗಳು ಹರ್ಷಗೊಂಡವು. ನೀರುಹಕ್ಕಿಗಳು ಕಲಕಲಧ್ವನಿ ಮಾಡಿದವು. ಕಪ್ಪೆಗಳೂ, ಇಂದ್ರಗೋಪಹುಳುಗಳೂ, ಎಲ್ಲೆಲ್ಲಿಯೂ ತುಂಬಿದವು.

೪೬. ಕಾಮನಬಿಲ್ಲು ದಿಗಂತದಲ್ಲಿ ಪ್ರಕಾಶಿಸಿತು. ಆಕಾಶದಲ್ಲೆಲ್ಲಾ ಮಿಂಚುಗಳು ಹೊಳೆದವು. ಇದನ್ನೆಲ್ಲಾ ನೋಡಿ ಭೈರವನು ತನ್ನ ಪ್ರಯತ್ನವು ನಿಷ್ಫಲವಾಯಿತೆಂದು ತಿಳಿದು ಭಯಂಕರವಾಗಿ ಒಂದು ಸಾರಿ ಕೂಗಿದನು. ಎಲ್ಲರ ಹೃದಯವೂ ನಡುಗಿತು.

೪೭-೪೮. ಆ ಧ್ವನಿಯಿಂದ ಬ್ರಹ್ಮಾಂಡವೆಲ್ಲವೂ ನಡುಗಿತು. ಸಪ್ತ ಲೋಕಗಳೂ, ಪಾತಾಳವೂ ಸಹ ಚಲಿಸಿದವು. ದಿಗ್ಗಜಗಳೆಲ್ಲವೂ ಸ್ಥಾನದಿಂದ

ವಿಚೇಲುರ್ದಿಗ್ಗಜಾಸ್ತ್ರಾ ವಿಜದ್ಭೂಖಂಡಮಂಡಲಂ ।
ತದೈವ ಬಧಿರೀಭೂತಾ ಬಭೂವುಃ ಪತಿತಾ ನರಾಃ ॥ ೪೮ ॥

ಪುನಶ್ಚ ಭೈರವಃ ಕ್ರುದ್ಧೋ ಹಸ್ತಂ ಹಸ್ತೇನ ಪೀಡಯನ್ ।
ನಿಷ್ಪಿಷನ್ನಧರಂ ದಂತೈರ್ಲೇಲಿಹಾನಸ್ಸ್ವಜಿಹ್ವಯಾ ॥ ೪೯ ॥

ನೇತ್ರಾಭ್ಯಾಂ ರಕ್ತವರ್ಣಾಭ್ಯಾಂ ಪಶ್ಯನ್ಸರ್ಪೈರ್ವಿಭೂಷಿತಃ ।
ಜಗ್ರಾಹ ಪರಶುಂ ತೀಕ್ಷ್ಣಂ ತೃಣೀಕೃತ್ಯ ಯದೂತ್ತಮಂ ॥ ೫೦ ॥

ತದೇವ ಜೃಂಭಣಾಸ್ತ್ರೇಣಾನಿರುದ್ಧೋ ರಣಕೋವಿದಃ ।
ಭೈರವಂ ಮೋಹಯಾಮಾಸ ಶ್ರೀಕೃಷ್ಣ ಇವ ಶಂಕರಂ ॥ ೫೧ ॥

ಚಲಿಸಿದವು. ಭೂಮಂಡಲವು ಅಸ್ತವ್ಯಸ್ತವಾಯಿತು. ಜನರೆಲ್ಲರೂ ಕಿವುಡರಾಗಿ ನೆಲದ ಮೇಲೆ ಉರುಳಿದರು.

೪೯. ಆಗ ಭೈರವನಿಗೆ ಬಹಳ ಕೋಪಬಂದಿತು. ಕೈಕೈಯನ್ನು ಹಿಸುಕಿಕೊಂಡನು. ಹಲ್ಲುಗಳಿಂದ ತುಟಿಗಳನ್ನು ಕಡಿದುಕೊಂಡನು. ನಾಲಿಗೆಯಿಂದ ಸವರಿಕೊಂಡನು.

೫೦. ಕೆಂಪಾದ ಕಣ್ಣುಗಳಿಂದ ಭಯಂಕರನಾಗಿ ನೋಡುತ್ತಿದ್ದನು. ಸರ್ಪ ಮಾಲಿಕೆಯಿಂದ ಭೂಷಿತನಾಗಿದ್ದನು. ತಿರಸ್ಕಾರ ದೃಷ್ಟಿಯಿಂದ ಅನಿರುದ್ಧನನ್ನು ನೋಡುತ್ತಾ ಪರಶು ಆಯುಧವನ್ನು ಕೈಗೆ ತೆಗೆದುಕೊಂಡನು.

೫೧. ಅನಿರುದ್ಧನೂ ಸಹ ಜೃಂಭಕಾಸ್ತ್ರವನ್ನು ಮಂತ್ರಿಸಿ ಪ್ರಯೋಗಿಸಿದನು. ಅದರಿಂದ ಶ್ರೀಕೃಷ್ಣನು ಶಂಕರನನ್ನು ಮೋಹಗೊಳಿಸಿದಂತೆ ಭೈರವನನ್ನು ರಣಾಗ್ರಣಿಯಾದ ಅನಿರುದ್ಧನು ಮೋಹಗೊಳಿಸಿದನು.

ತೇನಾಸ್ತ್ರೇಣ ರಣೇ ರಾಜನ್ನನಿರುದ್ಧಸ್ಯ ಪಶ್ಯತಃ ।
ಪಪಾತ ಭೂತಲೇ ರೌದ್ರೋ ಜೃಂಭಿತೋ ನಿದ್ರಿತೋಽಭವತ್ ॥ ೫೨ ॥

ಇತಿ ಶ್ರೀಗರ್ಗಸಂಹಿತಾಯಾಮಶ್ವಮೇಧಖಂಡೇ ಭೈರವಮೋಹನಂ ನಾಮ ಸಪ್ತತ್ರಿಂಶೋಽಧ್ಯಾಯಃ

---

೫೨. ಆ ಅಸ್ತ್ರಪ್ರಭಾವದಿಂದ ಭೈರವನು ಅನಿರುದ್ಧನು ನೋಡುತ್ತಿರುವಂತೆಯೇ ಭೂಮಿಯ ಮೇಲೆ ಬಿದ್ದು ಆಕಳಿಸುತ್ತಾ ನಿದ್ರೆಮಾಡಲು ಪ್ರಾರಂಭಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಅಶ್ವಮೇಧಖಂಡದಲ್ಲಿ ಭೈರವಮೋಹನವೆಂಬ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

॥ ಮಂಗಳಮಸ್ತು ॥